[illegible]

[illegible]

[illegible]	[illegible]	[illegible]	[illegible]	[illegible]	[illegible]
[illegible]		[illegible]	"	"	"
[illegible]		[illegible]	"	"	[illegible]
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	[illegible]
[illegible]		[illegible]	"	"	[illegible]
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	[illegible]
[illegible]		[illegible]	"	"	[illegible] [illegible]
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	[illegible]
[illegible]		[illegible]	"	"	[illegible]
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	"
[illegible]		[illegible]	"	"	[illegible]
[illegible]		[illegible]	"	"	[illegible]

B 1443

ಬೆಲೆ ಅರ್ಧ ಆಣೆ

ಬಾಳಾಚಾರ್ಯ ಹೊಸಕೇರಿ.

೨೬ ನೇ ಮಾರ್ಚ ೧೯೩೭ (ಸಂಚಿಕೆ ೪೯

ನ್ವಯಾ ವಿನಯಪೂರ್ವಕ

ಸಂಸ್ಥೆಯ ಕರ್ತನು,
ವರ್ಗಕ್ಕೆ ಒಳಗಾಗಿ ಆದೇ
ದ ಆಪದೆಗೂ ಕಾಳೆಯ

ಕಾರಣದಿಂದ ಮತ್ತು
ಪ್ರಿಗ್ರಹದಿಂದ, ಅವರು ಆ ನಿ
ಅವರಿಗೆ ನಾನು ನೆಲೆ
ಗದ ಒಗ್ಗೆ ಮೇಲಿಂದ
ವರಿಗೆ ಅಸಹ್ಯವಾಗಿ ನನ್ನ
ಕ್ಕು ಉಕಸಾನಕ್ಕೆ ಗುರಿ
ಕಡೆದು ಬಿಸಾಟಬೇಕೆಂಬ
ಯಿತಿ ನಾನು ಇರುವರೆಗೆ
ಯೋಗ್ಯವಾದ ಹೋಸದ
ಇಸ್ತಿ ದಿವಸ ಮೊದ ಆ
ಬೋರ್ಡಗಳಿಗೆ ನನ್ನನ್ನೇ
ನು ನನ್ನ ಕರ್ತವ್ಯ ಆ
ನನ್ನ ಮೇಲೆ ಇಲ್ಲದಿದ್ದಂ
ಸಂಚಿಕೆಯಲ್ಲಿ ನನ್ನ ಕೂಡ
ಕನ್ನೆ ಜೋಡಿಸಿದ ಸಂಬಂ
ನವಾಗುವಂತೆಯೂ ಆಗು
ಗುವಂತೆಯೂ ಒಂದು ನೋ
ಕಾಯದೆಯ ಇಲಾಜ
ಮುಕಲದ ನೋಟೀಸಿನಿಂದ
ಂಬ ಉದ್ದೇಶದಿಂದ ಆ

ದ ಮತ್ತು ಆ ಎರಡೂ
ತ್ತು ಆ ಆ ಬೋರ್ಡಗಳ
ಧಿಕಾರ ಇದ್ದು ಈಗ ವಗಾ

ಸಿ. ಸೆಕ್ರೆಟರಿ,
ಸೆನ್ಗರ ಬಂಕ ಧಾರವಾಡ.

ಜಾಹೀರ ನೋಟೀಸು

ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿ ಕಡೇಯಿಂದಾ—

ಯಾವತ್ತು ಜನರಿಗೆ ತಿಳಿಸುವದೇನಂದ್ರೆ:—

ಸವದತ್ತಿ ಶ್ರೀಯಲ್ಲಮ್ಮನ ಗುಡ್ಡದ ಯಾತ್ರಿಕರ ಮೇಲಿನ ತಲೆಪಟ್ಟಿ, ಗಾಡಿ, ಮೋಟಾರ ಜಾನವರ ಪಟ್ಟಿಗಳ ಮೇಲಿನ ವಸೂಲ ಕೆಲ್ಸದ ಮಕ್ತೆ ತಾರೀಖು ೧೫-೪-೧೯೩೭ ರಾತ್ರಿ ೧೨ ಘಂಟೆಯಿಂದಾ ತಾರೀಖು ೭-೯-೧೯೩೭ ನೇ ದಿವಸ ರಾತ್ರಿ ೧೨ ಘಂಟೆಯ ವರೆಗೆ ಆರು ತಿಂಗಳ ಪೂರ್ತಿ ಮಕ್ತೆ ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿ ಆಫೀಸಿನ ತಾರೀಖು ೮-೪-೧೯೩೭ ನೇ ದಿವಸ ಮಧ್ಯಾನ್ಹ ೩ ಘಂಟೆಗೆ ಜನರಲ್ಲ ಕಮೀಟಿಯ ಮುಂದೆ ಹರಾಜ ಪಾಲಿನಿಂದ ಕೊಡುವದರಲ್ಲಿ ಬರುವದು. ಅಗ್ರ ಮಕ್ತೆ ಬೇಡುವವರು ತಮ್ಮ ಲಾಯಕೀ ಸರ್ಟಿಫಿಕೇಟ ತಾಲ್ಲೂಕ ಅಮಲದಾರರ ಕಡೆಯಿಂದಾ ತೆಗೆಕೊಂಡು ಹಾಜರ ಇರಬೇಕು. ಮತ್ತು ಮಕ್ತೆ ಸರುವು ಆಗುವ ಮೊದಲು ಕಮೀಟಿಯ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲು ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿದೆ. ಅದರಂತೆ ಅಖೈರ ಸವಾಲು ಮಂಜೂರು ಸಹ ಕಮೀಟಿಯ ಮೇಲೆ ಅವಲಂಬಿಸಿದೆ. ಅಖೈರ ಸವಾಲು ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಅನಾಮತ ಕೊಡಬೇಕಾಗುತ್ತದೆ. ಹೊರತಾಗಿ ಮಂಜೂರಾದ ರಕಮಿಗೆ ತಾಲ್ಲೂಕ ಅಮಲದಾರರ ಕಡೆಯಿಂದಾ ಸರ್ಟಿಫಿಕೇಟ ಪಡಕೊಂಡು ಲಾಯಕೀ ಇದ್ದ ಇಬ್ಬರ ಜಾಮೀನ ಕೊಟ್ಟು ನಿಯಮಗಳಿಗೆ ಅನುಸರಿಸಿ ಜಾಮೀನ ಕಬೂಲಾಯತಿ ಬರೆಕೊಡಬೇಕು. ಶರ್ತಗಳ ಯಾದಿ ದಿವಾನಿ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವವು. ತಿಳಿಸುವದು ತಾರೀಖು ೨೩-೩-೩೭

G. M. Kaladagi,
President,
S. Y. Municipality.

ಸರಕಾರದಿಂದ ಪೇಟಂಟ ದೊರೆತ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯ ಮುಚ್ಚಳವು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩.೫ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫.೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಜಾಹೀರ ನೋಟೀಸ.

ಈ ನಮ್ಮ ಯಜಮಾನರಾದ ಜ ೩೨ ವರ್ಷಗಳ ನವಲಗುಂದ ತಾಲೂಕದ ಶೀರೂರ ಗ್ರಾಮದವರು. ನ. ಕ್ಷ್ಮ ದಿನಗಳ ಹ ನೆಕ್ಕಲಿಕರ [illegible] ಶಿವನ ಬರುವ ಮಾರ್ಚ ತಿಂಗಳ್ಲ [illegible] ೪-೫-೬ ಈ ಮೂರು ದಿವಸ ಆಗುತ್ತದೆ. ನಾಕ್ತು ನವರ ಜಾತ್ರೆಯಲ್ಲಿ ದನಗಳ ನೋಡಲಿಕ್ಕೆ ಬಗೆಕ್ಕದ್ದದೆ ಮತ್ತು ಉತ್ತಮ ತರದ ಜಾನುವಾರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಸಾಧಿಸಿಕೊಳ್ಳಬಾರದು. ಹನಿಯು [illegible] ನೀರಿನ ಸ್ವತನಡೆ ಮು [illegible] ಇರುತ್ತದೆ.

ನವಲಗುಂದ ತಾ. ೧೫-೨-೨೬

[illegible]	ಪತ್ತೆ ಶಗದಾ [illegible]
ನವಲಗುಂದ	ಹುಬ್ಬಳ್ಳಿ [illegible]
[illegible] ಪ್ರೆಸಿಡೆಂಟ	[illegible] ಚೇರಮನ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟೀಸ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಅರು ಲಕ್ಷದ ಮೇಲಿರುವದು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಸುವದು. ಠೇವಿಗಳು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚೆನ್ನಾಗಿ ಬಡ್ಡಿ ದೊರೆಯುವದು.

ಈ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮನ್ನವರ ಬಿ. ಜಿ. ೩,
ಮ್ಯಾನೇಜಿಂಗ ಡಾಯರೆಕ್ಟರ.

ಮಾತಾಡುವ ಔಷಧವು.

ಅಣ್ಣಾ! ಏನಾಗಿರುವದಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲೆಯೋ? ಮತ್ತಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಣ್ಣನು— ಕಂದಾ— ಹೌದು ಮತ್ತಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಹೋಗುವದು. ಮತ್ತು ಕಳದ್ರವ ತಿನ್ನುತ್ತು ತೀರ ಹುಡು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ನ್ಯಾಶನಲ ಮೆಡಿಕಲ ಸ್ಟೋರ್ಸ, ಕೆಮಿಸ್ಟ್ಸ ಅಂಡ ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಪಿಟಿಯುದ ಮಾಗಣೀ ದರ

ನಿತ್ಯಪತ್ರಕ್ಕೆ		
೧೨ ತಿಂಗಳಿಗೆ		೧೨—೦—೦ ರೂ.
೬	,,	೭—೦—೦ ರೂ.
೩	,,	೪—೦—೦ ರೂ.
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ.

[illegible] ಕಳಿಸಬೇಕು

ಮ್ಯಾನೇಜರ [illegible], [illegible]

ಈ ಪತ್ರವನ್ನು [illegible] ಕನ್ನಡ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗುತ್ತದೆ. ಹುಣ್ಣು ಮತ್ತು ಬಾವು, ಗಾಯ, ಸುಟ್ಟ, ಕಚ್ಚಿದ್ದು ಮುಂತಾದವುಗಳ ಮೇಲೆ ರಾಮಬಾಣ ಆಗಿದೆ. ಪ್ರತಿಯೊಬ್ಬರೂ ಸಂಗ್ರಹಿಸಿಡಬೇಕಾದ ಔಷಧ. [illegible] ಒಂದು ಡಬ್ಬಿಗೆ ಆರೇ ಆಣೆ. [illegible] ಬೇರೆ

[illegible] ಮುಂತಾದ ಸ್ಥಳಗಳಲ್ಲಿ ಸಿಗುವದು. ಮತ್ತು ಕೆಳಗಿನ ವಿಳಾಸದಿಂದ ದೊರೆಯುವದು. | ಎಸ್. ಎಸ್. [illegible] [illegible] ಬೆಳಗಾವಿ

R. N. B 1443

ವಿಜಯ

ಸಿತ್ಯ ಪತ್ರ | ಬೆಲೆ ಅರ್ಧಾಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಬುಧವಾರ ತಾರೀಖು ೩ ನೇ ಮಾರ್ಚ ೧೯೨೭ | (ಸಂಚಿಕೆ ೪೪

ನೋಟೀಸು.

ಯಾವತ್ತು ಧಾರವಾಡದ ಸಜ್ಜನರ ಸಮೂಹಕ್ಕೆ ನೋಟೀಸಿನ ದ್ವಾರಾ ವಿನಯಪೂರ್ವಕ ತಿಳಿಸುವದರಲ್ಲಿ ಬರುತ್ತದೆಂದರೆ—

ನಾನು ಧಾರವಾಡದಲ್ಲಿ ಇರುವ ಕರ್ನಾಟಕ ಹಾಯಸ್ಕೂಲ ಎಂಬ ಸಂಸ್ಥೆಯ ಕರ್ತನು, ಚಾಲಕನು, ಪಾಲಕನು, ಆಜೀವ ಸಭಾಸದನು ಮತ್ತು ಜೊತೆಗೆ ಇದ್ದು ದುಷ್ಟವರ್ಗಕ್ಕೆ ಒಳಗಾಗಿ ಅದೇ ಶಾಲೆಯಲ್ಲಿ ಮಾಸ್ತರನ ಕೆಲಸವನ್ನು ಕೈಕೊಂಡು ಶಾಲೆಯ ಸ್ಥಾಪನಾ ಕಾಲದಿಂದ ಇಲ್ಲಿವರೆಗೂ ಶಾಲೆಯ ಹಿತವನ್ನು ಬಯಸಿಕೊಂಡು ಬಂದೆನು.

ಇತ್ತೀಚೆಗಾಗಿ ಆ ಶಾಲೆಯ ಬೋರ್ಡಿನ ಮೆಂಬರ ಜನರು ಶಾಲೆಗೆ ಕಾಯದೆಯಿಂದ ಮತ್ತು ಶಾಲೆಯ ರೊಕ್ಕದಿಂದ ಕೊಡತಕ್ಕದ್ದಾದ ವರ್ಗಣಿಯ ಹಣವನ್ನು ಕೊಡಲಿಕ್ಕೆ ತಪ್ಪಿದ್ದರಿಂದ, ಅವರು ಆ ನಿಮಿತ್ಯವಾಗಿ ಬೋರ್ಡಿನಲ್ಲಿ ಇರಲಿಕ್ಕೆ ನಾಲಾಯಕರಾದ್ದರಿಂದ, ಈ ಸಂಗತಿಯನ್ನು ಅವರಿಗೆ ನಾನು ಸೆಕ್ರೆಟರಿ ನಾತೆಯಿಂದ ವೇಳೆ ವೇಳೆಗೆ ಸ್ಪಷ್ಟಿಗೆ ತಂದುಕೊಟ್ಟು ಅವರು ಕೊಡತಕ್ಕ ಹಣದ ಬಗ್ಗೆ ನೋಟೀಸಿಂದ ಮೇಲಿಂದ ಮೇಲೆ ತಗಾದಿ ಮಾಡಲಿಕ್ಕೆ ಹತ್ತಿದೆನು. ಈ ನನ್ನ ಕರ್ತವ್ಯ ದಕ್ಷತೆಯು ಅವರಿಗೆ ಅಸಹ್ಯವಾಗಿ ನನ್ನ ಮೇಲೆ ಅವರೆಲ್ಲರೂ ಏನಾದರೊಂದು ಹೇಟು ತಂದು ನನ್ನನ್ನು ಅಪಮಾನಕ್ಕೆ ಮತ್ತು ಲುಕಸಾನಕ್ಕೆ ಗುರಿ ಮಾಡಬೇಕೆಂಬ ಆಲೋಚನೆಯನ್ನು ಮಾಡಿ ನನ್ನ ಶಾಲೆಯ ಸಂಬಂಧದ ಕಾಗದಪತ್ರಗಳನ್ನೆಲ್ಲಾ ಕಡೆದು ಬಿಸಾಟಬೇಕೆಂಬ ದುಷ್ಟ ಬುದ್ಧಿಯಿಂದ ಯುಕ್ತಿ ಪ್ರಯುಕ್ತಿಗಳನ್ನು ಮಾಡಲಾರಂಭಿಸಿದ್ದನ್ನು ನೋಡಿ ನಾನು ಇದುವರೆಗೆ ಬಹಳ ಶ್ರಮದಿಂದ ಮಾಡಿದ ಕೆಲಸವನ್ನು ಕೈಯಿಂದ ಲೋಪಿಸುವ ಮಾತು ತಪ್ಪಿಸಿ ಯೋಗ್ಯವಾದ ಡೋನರ ಜನರನ್ನು ಕರೆದು ಸಭೆಗೂಡಿಸಿ ತಾರೀಖು ೧೪ ನೇ ಫೆಬ್ರುವರಿ ೧೯೨೭ನೇ ಇಸ್ವಿ ದಿವಸ ಹೊಸ ಕರ್ನಾಟಕ ಎಜ್ಯುಕೇಶನ್ನ ಬೋರ್ಡ ಮತ್ತು ಗವ್ಹರ್ನಿಂಗ ಬಾಡಿ ಸ್ಥಾಪಿಸಿ ಆ ಬೋರ್ಡುಗಳಿಗೆ ನಾನೇ ಸೆಕ್ರೆಟರಿಯಾಗಿ ನೇಮಿಸಿದ್ದರಿಂದ ಆ ಆ ಬೋರ್ಡುಗಳ ಆಜ್ಞಾನುಸಾರವಾಗಿ ನಾನು ನನ್ನ ಕರ್ತವ್ಯ ಕರ್ಮಗಳನ್ನು ಮಾಡುತ್ತಾ ಇರಲು, ಹಳೇ ಬೋರ್ಡಿನ ಜನರು ಸಂತಾಪಗೊಂಡು ನನ್ನ ಮೇಲೆ ಇಲ್ಲದ್ದೊಂದು ದೋಷ ಹೊರಿಸಿ ನನಗೆ ನಷ್ಟ ತಿಳಿಸದಲೆ ವಿಜಯ ಪತ್ರದ ಹಿನ್ನಿನ ವಾರದ ಸಂಚಿಕೆಯಲ್ಲಿ ನನ್ನ ಹೊಸ ಕರ್ನಾಟಕ ಹಾಯಸ್ಕೂಲಿನ ಸಂಬಂಧವಾಗಿ ಹಾಗು ಹಳೇ ಕರ್ನಾಟಕ ಎಜ್ಯುಕೇಶನ್ನ ಬೋರ್ಡಿನ ಸಂಬಂಧವಾಗಿ ಸಹಾ ಯಾವ ವ್ಯವಹಾರವನ್ನೂ ಮಾಡಕೂಡದೆಂದು ನನಗೆ ಅಪಮಾನವಾಗುವಂತೆಯೂ ತನು ಮನ ಧನದಿಂದ ಹಾನಿಯಾಗುವಂತೆಯೂ ಜನರಲ್ಲಿ ನನಗಿದ್ದ ಪತ್ತು ಹಾರಿಹೋಗುವಂತೆಯೂ ಒಂದು ನೋಟೀಸು ಪ್ರಸಿದ್ಧ ಮಾಡಿರುತ್ತಾರೆ. ಈ ಬಗ್ಗೆ ನಾನು ಅವರ ಮೇಲೆ ಮಾಡತಕ್ಕ ಕಾಯದೇಶೀರ ಇಲಾಜುಗಳನ್ನು ಬೇರೇ ಮಾಡುತ್ತೇನೆ. ಆದರೆ ಅವರು ಕೊಟ್ಟ ಅನಧಿಕಾರದ ಹಾಗೂ ಮತಲಬಿ ನೋಟೀಸಿನಿಂದ ತಪ್ಪು ತಿಳುವಳಿಕೆ ಮನಸ್ಸಿನ ನನ್ನ ಬಗ್ಗೆ ಯಾವ ಪ್ರಕಾರದಿಂದಲೂ ಕಲುಷಿತವಾಗಬಾರದೆಂಬ ಉದ್ದೇಶದಿಂದ ಈ ನೋಟೀಸು ನಾನು ಪ್ರಕಟಿಸಿದ್ದೇನೆ.

ನಾನು ಮೇಲೆ ಹೇಳಿದಂತೆ ಹೊಸ ಬೋರ್ಡುಗಳ ಸೆಕ್ರೆಟರಿ ಇದ್ದದರಿಂದ ಮತ್ತು ಆ ಎರಡೂ ಬೋರ್ಡುಗಳ ಮೆಂಬರನಿದ್ದದರಿಂದ ಕರ್ನಾಟಕ ಹಾಯಸ್ಕೂಲಿನ ಸಂಬಂಧಿ ಮತ್ತು ಆ ಆ ಬೋರ್ಡುಗಳ ಸಂಬಂಧಿ ಯಾವತ್ತು ವ್ಯವಹಾರ ಮತ್ತು ಕಾರಭಾರ ಮಾಡಲಿಕ್ಕೆ ಸಂಪೂರ್ಣ ಅಧಿಕಾರ ಇದ್ದು ಈಗ ವರಾತಕ್ಕೆ ಹೊಸ ಬೋರ್ಡುಗಳಿಂದ ಅಧಿಕಾರ ಪಡೆದಿರುವೆನು ತಿಳಿಯುವದು.

ಕೆ. ಎಲ್. ದೇಶಪಾಂಡೆ ಎಸ್. ಟಿ. ಸಿ. ಸೆಕ್ರೆಟರಿ,

ಹೊಸ ಕರ್ನಾಟಕ ಎಜ್ಯುಕೇಶನ್ನ ಬೋರ್ಡ ಮತ್ತು ಗವ್ಹರ್ನಿಂಗ ಬಾಡಿ ಧಾರವಾಡ.

ಜಾಹೀರ ನೋಟೀಸು

ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿ ಯೇರಿಯಿಂದಾ—

ಯಾವತ್ತೂ ಜನರಿಗೆ ತಿಳಿಸುವದೇನಂದರೆ:—

ಸವದತ್ತಿ ಶ್ರೀಯಲ್ಲಮ್ಮನ ಗುಡ್ಡದ ಯಾತ್ರೆ ಕರ ನೋಟನ ತಲೆಪಟ್ಟಿ, ಗಾಡಿ, ಮೋಟಾರ ಜಕಾತ ಪಟ್ಟಿಗಳ ಮೇಲಿನ ವಸೂಲ ಕೆಲ್ಸದ ಮಕ್ತಾ ತಾರೀಖು ೧೫-೩-೧೯೨೭ ರಾತ್ರಿ ೧೨ ಘಂಟೆಯಿಂದ ತಾರೀಖು ೭-೪-೧೯೨೭ ನೇ ದಿವಸ ರಾತ್ರಿ ೧೨ ಘಂಟೆಯ ವರೆಗೆ ಅರು ತಿಂಗಳ ಪೂರ್ತ ಮಕ್ತಾ ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿ ಆಫೀಸಿನಲ್ಲಿ ತಾರೀಖು ೮-೩-೧೯೨೭ ನೇ ದಿವಸ ಮಧ್ಯಾನ್ಹ ೭ ಘಂಟೆಗೆ ಜನರಲ್ಲ ಕಮೀಟಿಯ ಮುಂದೆ ಪ್ರಘಟ ಸವಾಲಿನಿಂಗ ಕೊಡುವದರಲ್ಲಿ ಬರುವದು. ಆಗ ಮಕ್ತೆ ಬೇಡುವವರು ತಮ್ಮ ಲಾಯಖೀ ಸರಟಿಫಿಕೇಟ ತಾಲ್ಲೂಕು ಅಮಲದಾರರ ಕಡೆಯಿಂದಾ ತೆಗೆದುಕೊಂಡು ಹಾಜರ ಇರಬೇಕು. ಮತ್ತು ಮಕ್ತಾ ಸುರುವು ಆಗುವ ಮೊದಲು ಕಮೀಟಿಯ ಮುಂದೆ ಹಾಜರ ಮಾಡಬೇಕು. ಇಲ್ಲದಿದ್ದರೆ ಅವರ ಸವಾಲು ತೆಗೆದುಕೊಳ್ಳುವದು ಕಮೀಟಿಯ ಮರ್ಜಿಯ ಮೇಲೆ ಅವಲಂಬಿಸಿದೆ. ಅವರಂತೆ ಆಖೈರ ಸವಾಲು ಮಂಜೂರ ಮಾಡುವದು ಸಹ ಕಮೀಟಿಯ ಮೇಲೆ ಅವಲಂಬಿಸಿದೆ. ಆಖೈರ ಸವಾಲ ಮಂಜೂರಾದ ಕೂಡಲೆ ಮಂಜೂರಾದ ರಕಮಿನ ೧/೪ ರಕಮು ಅಗಾವೂ ಕೊಡಬೇಕಾಗುತ್ತದೆ. ಹೊರತಾಗಿ ಮಂಜೂರಾದ ರಕಮಿಗೆ ತಾಲ್ಲೂಕು ಅಮಲದಾರರ ಕಡೆಯಿಂದಾ ಸರಟಿಫಿಕೇಟ ಪಡಕೊಂಡು ಲಾಯಖೀ ಇದ್ದ ಇಬ್ಬರ ಜಾಮೀನ ಕೊಟ್ಟು ನಿಯಮಗಳಿಗೆ ಅನುಸರಿಸಿ ಜಾಮೀನ ಕಬೂಲಾಯತಿ ಬರೆಕೊಡಬೇಕು. ಶರ್ತ ಯಾವ ದಿವಸದ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವವು. ತಿಳಿಯುವದು ತಾರೀಖು ೨೩-೩-೨೭

G M. Kaladagi,
President,
S Y. Municipality.

ವಿಜಯ.

ಧಾರವಾಡ ತಾ- ೩-೩-೨೬ ನೇ ಇಸ್ವಿ

ಶ್ರೀ. ಹೋಳಕರ ಮಹಾರಾಜರ ರಾಜ್ಯತ್ಯಾಗ.

ಬಾವಲಾ ಖೂನವು ಕೊನೆಯಲ್ಲಿ ಮಹಾರಾಜಾಧಿರಾಜ ರಾಜ-ರಾಜೇಶ್ವರ ಸವಾಯಿ ಸರ ತುಕೋಜಿರಾಯರನ್ನು ಕೊನೆಯಲ್ಲಿ ಪೂರಾ ಬಾಧಿಸಿತು. ಹೆಣ್ಣಿನಾಶೆ ಮಾಡುವವರು ಮಣ್ಣುಗೂಡುವರೆಂಬುದೂ ಇದೇ ಸಮಯದಲ್ಲಿ ಲೋಕ ನಿದರ್ಶನಕ್ಕೆ ಬಂತು.

ಶ್ರೀ. ತುಕೋಜಿರಾಯರು ಬ್ರಿಟಿಶ ಸರಕಾರದಿಂದ ನೇಮಿಸಲ್ಪಡುವ ಕಮಿಶನದ ಮುಂದೆ ಆರೋಪಿಯಾಗಿ ನಿಲ್ಲಬೇಕು; ಅಥವಾ ರಾಜ್ಯತ್ಯಾಗ ಮಾಡಿ, ಎಲ್ಲಾದರು ಸಾಮಾನ್ಯ ಮನುಷ್ಯನಂತಿರಬೇಕೆಂದು ಲಾರ್ಡ ರೀಡಿಂಗಸಾಹೇಬರು ಜಾಹೀರ ಮಾಡಿದ ಬಳಿಕ ಇಂದಿನ ತನಕ ಅನೇಕ ಸುದ್ದಿಗಳು ಹುಟ್ಟಿದವು. ಕೊನೆಯಲ್ಲಿ ಇವರು ರಾಜ್ಯತ್ಯಾಗ ಮಾಡುವರೆಂದೂ, ಆ ಪ್ರಕಾರ ಕಳೆದ ತಿಂಗಳ ೨೬ ನೆಯ ತಾರೀಖಿನ ದಿವಸ ಸಾಯಂಕಾಲದಲ್ಲಿ ಯುವರಾಜ ಶ್ರೀ. ಬಾಳಾಸಾಹೇಬರ ಹೆಸರಿನಿಂದ ಸಿಂಹಾಸನದಿಂದ ಕೆಳಗಿಳಿದರೆಂದೂ ವರ್ತಮಾನ ಬಂದಿರುತ್ತದೆ.

ಮಹಾರಾಜರು ರಾಜ್ಯತ್ಯಾಗ ಮಾಡುವ ಮೊದಲು ಆಪ್ತ ಬಾಂಧವರ ಮೇಲೆ ತಂದಿದ್ದ ಸಂಕಟಗಳನ್ನು ದೂರ ಮಾಡಿದರು. ಅನೇಕ ವರ್ಷಗಳಿಂದ ಮುಖಾವಲೋಕನ ಮಾಡದಿದ್ದ ಪಟ್ಟದರಾಣಿಯನ್ನು ಹತ್ತರ ಕರೆ ಕೊಂಡರು. ಶಿಕ್ಷಣ ಮುಂತಾದ ಕೆಲ ಲೋಕೋಪಯೋಗಿ ಕೃತ್ಯಗಳನ್ನು ಮುಂದೆ ಚಾಚಿಸಿದರು. ದಿವಾನ ನರಸಿಂಗರಾಯರ ರಾಜೀನಾಮೆಯನ್ನು ತಕ್ಕೊಂಡು ತಿಂಗಳಿಗೆ ೧೫೦೦ ರೂಪಾಯಿಗಳ ಪೆನಶನ ಮಂಜೂರ ಮಾಡಿದರು.

ಉಪ ದಿವಾನರಾಗಿದ್ದ ಮಿ. ಸರಯುಮಲ ಬಾಪ್ನಾ ಎಂಬವರು ಸಧ್ಯದಲ್ಲಿ [illegible] ದಿವಾನರಾಗಿದ್ದಾರೆ. ಇವರು [illegible] ಕಾರಣದಿಂದ [illegible] ದಿವಾನ ಮನೆತನದವರು [illegible] ಹಿಂದುಸ್ಥಾನ [illegible] ಇವರು [illegible] ಟಿರ ಅಭಿಪ್ರಾಯದ ಪ್ರಕಾರ [illegible] ಸಗಳನ್ನು ಸಾಗಿಸುವರು.

ಮಹಾರಾಜರು ಪೂರ್ಣ ತಾರುಣ್ಯದಲ್ಲಿದ್ದಾರೆ ವಯಸ್ಸು ೩೬ ವರ್ಷ. ಇವರ ತಂದೆಯವರಾದ ಶ್ರೀ. ಶಿವಾಜಿರಾಯರು ರಾಜ್ಯದ ತುಂಬ ಭಯಂಕರವಾದ ಅನ್ಯಾಯದ ಕೃತ್ಯಗಳನ್ನು ನಡೆಸಿ ಕೊನೆಯಲ್ಲಿ ಬೇನೆಯ ನಿಮಿತ್ಯದಿಂದ ಪದತ್ಯಾಗ ಮಾಡಿದರು. ಒಂದಿಲ್ಲೊಂದು ಬಗೆಯಿಂದ ತಂದೆಯಂತೆ ಮಗನೆಂಬ ನುಡಿಯು ಇವರಿಗೂ ಒಡಕೊಂಡಿತು. ಇವರು ಪಟ್ಟಕ್ಕೆ ಕೂತಾಗ ೧೧ ವರ್ಷದವರಾಗಿದ್ದರು. ಪ್ರಬುದ್ಧರಾದ ಬಳಿಕ ಸರಾಸರಿ ಎರಡು ವರ್ಷಗಳ ತನಕ ವಿಲಾಯತಿಯಲ್ಲಿ ಸಂಚಾರ ಮಾಡಿ, ಹಿಂದುಸ್ಥಾನಕ್ಕೆ ಬಂದು ೧೯೧೧ನೇ ಇಸ್ವಿಯ ನವ್ಹಂಬರ ತಿಂಗಳಲ್ಲಿ ಸಿಂಹಾಸನಾರೋಹಣ ಮಾಡಿದರು.

ಬಾವಲಾದ ಸೊಗಡು ತಮಗೆ ಅಂಟಿಕೊಳ್ಳುವ ಗಾಳಿ ಬೀಸುತ್ತಿದ್ದಾಗ ಮಹಾರಾಜರು ಯುವರಾಜನನ್ನು ಶಿಕ್ಷಣಕ್ಕಾಗಿ ವಿಲಾಯತಿಗೆ ಕಳಿಸಬೇಕೆಂದು ಸಂಪೂರ್ಣ ಸಿದ್ಧತೆ ಮಾಡಿದ್ದರು. ಅಷ್ಟರಲ್ಲಿ ಈ ಗೊಂದಲವು ಅರಮನೆಯ ಬಾಗಿಲಕ್ಕೆ ಬರಲು ಪ್ರಯಾಣವನ್ನು ರಹಿತ ಮಾಡಿದರು. ಯುವರಾಜರ ಶಿಕ್ಷಣ ಮತ್ತು ರಾಜ್ಯ ಕಾರಭಾರದ ಪೂರ್ಣ ಜವಾಬದಾರಿಯು ಇನ್ನು ಮೇಲೆ ಬ್ರಿಟಿಶ ಸರಕಾರದ ಅಧೀನದ ವಿಷಯವಾಯಿತು.

ಇಲ್ಲಿಗೆ ಬಾವಲಾ ಕೊಲೆಯ [illegible] ಆಖ್ಯಾನದ ಕೊನೆಯ ಭಾಗದ ಪರದೆ ಬಿತ್ತು.

ಮೊಗಲಾಯಿ ನ್ಯಾಯದ ಅಪೂರ್ವ ಮಾದರಿಯು.

ಬಿಕಾನೇರ ಮಹಾರಾಜರ ಖಾಸಗಿ ಕಾರಭಾರಿಯಾದ ಶೇಟ ಚಂದುಮಲ ಢಡ್ಡಾ ಎಂಬವನು ಪ್ರಸಿದ್ಧನು. ಈತನು ಇಂಗ್ಲಿಷ ಸರಕಾರದವರು [illegible] ಸಿ. ಆಯ್. ಇ. ಪದವಿ [illegible] ಹೈದರಾಬಾದಿನ ಸಾಹುಕಾರರಾದ ಶ್ರೀ. ಪುರುಷೋತ್ತಮದಾಸರಿಂದ ಇವರಿಗೆ ಎರಡು ಲಕ್ಷ ರೂಪಾಯಿ ಬರತಕ್ಕದ್ದಿತ್ತು. ಈ ಹಣದ ಬಾಬತಿನಿಂದ ೧೮೮೧ ನೆಯ ಇಸವಿಯಲ್ಲಿ ನಿಜಾಮ ಕೋರ್ಟಿನಲ್ಲಿ ಶೇಟ ಚಂದುಮಲ್ಲನು ದಾವೆ ತಂದನು. ಆದರೆ ಕೋರ್ಟುಫೀ ಸ್ಟ್ಯಾಂಪಿಗೆ ಬೇಕಾಗುವ ಹಣವನ್ನು ತುಂಬದ್ದರಿಂದ, ದಾವೆಯು ಕಿತ್ತಿ ಹಾಕಲ್ಪಟ್ಟಿತು.

ಈ ಸಂಗತಿಯು ಸಂಭವಿಸಿ ೨೨ ವರ್ಷಗಳ ನಂತರ ಶೇಟನು ಹೇಗೋ ವಶೀಲೆ ಹಚ್ಚಿ, ನಿಜಾಮರ ಭೆಟ್ಟಿ ತಕ್ಕೊಂಡು ಅವರ ಮುಂದೆ ತನ್ನ ಬೇಡಿಕೆಯನ್ನು ಮಂಡಿಸಿಕೊಂಡನು. ವಾಸ್ತವಿಕವಾಗಿ ನಿಜಾಮಸಾಹೇಬರು ಕೋರ್ಟಿನ ಕಡೆಗೆ ಒಪ್ಪಿಸಿ ಕೊಡಬೇಕಾಗಿತ್ತು. ಆದರೆ ಅವರು ಒಬ್ಬ ಸಂಸ್ಥಾನಿಕರ ಕಾರಭಾರಿಯಾದವನ ಮನದಾಶೆಯನ್ನು ಪೂರ್ಣ ಮಾಡುವದಕ್ಕಾಗಿ ಮೂವರದೊಂದು ಕಮೀಟಿ ನೇಮಿಸಿದರು. ಇಬ್ಬರು ಇಂಗ್ರಜರು, ಮತ್ತು ಒಬ್ಬರು ವ್ಯವಹಾರಖಾತೆಯ ಮಂತ್ರಿಯಾದರು. ಈ ಮೂರ್ತಿಗಳು ಶೇಟ ಚಂದುಮಲ್ಲರಿಗೆ ಅನುಕೂಲವಾಗಿ ರಿಪೋರ್ಟ ಬರೆದು ಹುಜೂರದ ಸನ್ನಿಧಾನಕ್ಕೆ ಕಳಿಸಿದರು. ಹುಜೂರಸಾಹೇಬರು ಡಿಕ್ರಿಯ ಹುಕುಮು ಮಾಡಿ, ಶೇಟ ಪುರುಷೋತ್ತಮದಾಸರಿಗೆ ಹಣ ಕೊಡುವಂತೆ ನೋಟೀಸು ತೆಗೆದರು.

ತಮ್ಮ ಮೈಮೇಲೆ ಗುಡ್ಡ ಕಡಕೊಂಡು ಬಿದ್ದದ್ದನ್ನು ಕಂಡು, ಪ್ರತಿವಾದಿಯು ಮದ್ರಾಸಕ್ಕೆ ಓಡಿದನು. ಇಲ್ಲಿಗೆ ಶೇಟ ಚಂದುಮಲ್ಲನು ಒಂದು ಅವರ ಮೇಲೆ ದಿವಾಣಿ ತುರಂಗವಾರಂಟ ತೆಗೆಸಿದನು. ಪ್ರತಿವಾದಿಯ ವಕೀಲರು ಆಕ್ಷೇಪ ತಕ್ಕೊಳ್ಳಲು ನ್ಯಾಯಮೂರ್ತಿ ಶ್ರೀನಿವಾಸ ಅಯ್ಯಂಗಾರರು ಶೇಟ ಪುರುಷೋತ್ತಮದಾಸರನ್ನು ೨೫ ಸಾವಿರದ ಜಾಮೀನದ ಮೇಲೆ ಬಿಟ್ಟರು.

ತುರಂಗ ವಾರಂಟಿನ ಪೂರ್ಣ ವಿಚಾರಣೆಯು ಮುಖ್ಯ ನ್ಯಾಯಾಧೀಶರಾದ ಸರ ಕಾವ್ಹಲ್ಸ ಟ್ರಾಟರಸಾಹೇಬರ ಮುಂದೆ ನಡೆಯಿತು. ೧೮೮೧ ದಾವೆ, ಸ್ಟ್ಯಾಂಪಿನ ಹಣ ಕೊಡದ್ದಕ್ಕಾಗಿ ದಾವೆಯು ಕಿತ್ತಿ ಹೋದದ್ದು. ಒಂದು ತಲೆಮಾರು ವರ್ಷಗಳಾದ ನಂತರ, ಕೋರ್ಟಿನ ನ್ಯಾಯದಾನದ ಪದ್ಧತಿಯನ್ನು ಬಿಟ್ಟು, ನಿಜಾಮಸಾಹೇಬರ ಮನಸ್ಸಿನ ತೆರನಿಂದ ಡಿಕ್ರಿಯಾದದ್ದು, ಇವೆಲ್ಲ ಅಕ್ರಮ ಅನ್ಯಾಯಗಳನ್ನು ಕಂಡು ನ್ಯಾಯಾಧೀಶರು ಸಖೇದಾಶ್ಚರ್ಯಪಟ್ಟು ಬಿಟ್ಟು ಕೊಟ್ಟರು. ನಿಜಾಮರ ರಾಜ್ಯದಲ್ಲಿ ತಾವಿರಲಿಲ್ಲೆಂಬದೊಂದು ದೇವರ ಕೃಪೆಯೇ ಎಂದು ತುಂಬಿದ ಕೋರ್ಟಿನಲ್ಲಿ ಉದ್ಗಾರ ತೆಗೆದರು. ಯಾವನಾದರು ತನ್ನ ಮೇಲೆ ನಿಜಾಮರ ಮನಬಂದಂತೆ ಡಿಕ್ರಿ ಪಡಕೊಂಡು ಬಿಟ್ಟು ತುರಂಗವಾರಂಟು ತಂದಿದ್ದರೆ ತನ್ನ ಗತಿಯೇನು [illegible] ತಾಂಬುತ್ತಿತ್ತೆಂದು ಮೇಲಿನ ಉದ್ಗಾರದ ಭಾವವಾಗಿರುತ್ತದೆ.

ಮೈಸೂರಲ್ಲಿ ಪೂರ್ಣಯ್ಯನವರ ಮನೆತನದ ನ್ಯಾಯವು ಕೋರ್ಟಿಗೆ ಬಂದನಂತರ ಶ್ರೀಮನ್ಮಹಾರಾಜರು ಅದನ್ನು ಉಭಯ ಪಕ್ಷಗಳಿಗೂ ಸಮ್ಮತವಾಗುವಂತೆ [illegible] ಪಡಿಸಿ ಕೊಟ್ಟರು. ಆ ಕ್ರಮವಾಗಿ ನಿಜಾಮ ಸಾಹೇಬರ ವರ್ತನೆಗಳಿಲ್ಲ. ಎಲ್ಲಕ್ಕೂ ಮುಖ್ಯ [illegible] ನ್ಯಾಯವು ಮೀರಿ ಅನೇಕ ವರ್ಷಗಳಾದನಂತರ

ಜಗಳ ಬಗೆಯಿತು. ಇದಕ್ಕೆ ನ್ಯಾಯವೆಂದು ಯಾರು ಅನ್ನುವರು? ಇದರ ತಿರುವಾಯಾ ಕ ಏಳಿಗೆ ಪ್ರತಿವಾದಿಯು ಸಮ್ಮತಿಯು ಇರಲಿಲ್ಲ. ಕೇವಲ ಸುಲ್ತಾನಶಾಹಿಯು. ಸುಲ್ತಾನಶಾಹಿ ಸ್ಥಿರದ ರಾಜ್ಯವಾಳುವದಾದರೆ- ಇನ್ನೂ ಹುಟ್ಟದ ಎಷ್ಟು ಮೇಲೆ ಸಹ ಮುಂದಾಗಿ ಕಿತ್ತಿ ಸಹ ಕೊಳ್ಳಬಹುದೆಂದು ಸರ ನ್ಯಾಯಾಧೀಶರು ನಿಜಾಮುಸಾಹೇಬರ ಮರ್ಮಕ್ಕೆ ತಕ್ಕಂಥ ಇನ್ನೊಂದು ಬಿರುನುಡಿಯನ್ನು ಆಡಿದ್ದಾರೆ. ನಿಜಾಮುಸಾಹೇಬರ ಫರ್ಮಾನುಗಳಿಂದ ಪ್ರಜರು ವಿವಿಧ ರೀತಿಯಿಂದ ಅಸಂತೋಷದಲ್ಲಿದ್ದಾರೆಂಬುದನ್ನು ಈ ಮೊದಲು ಬರೆದಿದ್ದೇವೆ. ತಮ್ಮ ಬಹಳಕೆಯು ನೋಡಿ ನ್ಯಾಯಾಧೀಶರು ಮಾಡಿದ ತೀವ್ರವಾದ ಟೀಕೆಯನ್ನು ನೋಡಿ, ನಿಜಾಮುಸಾಹೇಬರು ಧರ್ಮದ ತಗೆಯುವ ಮುಚಿತವಾಗಿ ಕಾಯುವ ಶಾಸನಗಳ ನಿಷ್ಪಕ್ಷಪಾತ ಅಭಿಪ್ರಾಯ ತಿಳಿಯಬೇಕಾದು ಅವಶ್ಯವಾಗುತ್ತದೆ. ಇಲ್ಲವಾದರೆ- ನಿಜಾಮ ಮಿ ದರಬಾರ; ಹೊಗಲಾಯಿ ನ್ಯಾಯವೆಂಬ ಕುಂದು ಸ್ಥಿರವಾಗಿ ಉಳಿಯುವದು.

ಮೂರು ಮಿನಿಟುಗಳ ನರಿಗೆ

ಶೇಮ! ಶೇಮ!! ಕಿಲ್ಲಾಗಳ ಸೂರಿಯು.

—೦—

ಅಸೆಂಬ್ಲಿಯಲ್ಲಿ ರಾಷ್ಟ್ರೀಯ ಮತ್ತು ಸ್ವತಂತ್ರ ಪಕ್ಷದ ಅನೇಕ ಮೆಂಬರರು ಇಲ್ಲದ ಸಮಯದಲ್ಲಿ ಮಬ್ಬಾಳಿಕೆಯ ಠರಾವನ್ನು ಸರಕಾರಕ್ಕೆ ಅನುಕೂಲವಾಗಿ ಪಾಸಾಯಿತು. ಆದರೆ ಇದರ ಮುಂದೆ ಕ್ಷೀ ಸದಸ್ಯರ ಪುನ್ಯಾಗಮನದಿಂದ, ಸರಕಾರಕ್ಕಾದ ಆನಂದವು ಕ್ಷಣಿಕವಾಯಿತು. ಮುಂಡಾಲೆಯ ತುರಂಗದಲ್ಲಿ ರಾಜಕೀಯ ಕೈದಿಗಳು ನಿರಾಹಾರ ವ್ರತ ಪ್ರಾರಂಭಿಸಿದ್ದನ್ನು ಬರೆದಿದ್ದೇವೆ. ಈ ಸುದ್ದಿಯನ್ನು ಸರಕಾರವು ಹೇಳಲೇ ಇಲ್ಲ. ತುರಂಗದಲ್ಲಿ ಕೈದಿಗಳನ್ನು ನಡಿಸಿಕೊಳ್ಳುವ ಹೀನತನ, ಮದಾಂಧತೆ ತಪ್ಪುಗಳ ನಿಷೇಧ ಮಾಡಿ, ಸರಕಾರದ ರಾಜ್ಯ ಪದ್ಧತಿಯನ್ನು ನಿಷೇಧಿಸಬೇಕೆನ್ನುವ ಶ್ರೀ. ಗೋಸ್ವಾಮಿಯವರು ಅಸೆಂಬ್ಲಿಯಲ್ಲಿ ಸಭಾ ತಹಕೂಬಿಯ ಠರಾವು ತಂದರು. ನಮಗಿನ್ನೂ ಸರಕಾರದ ಪತ್ರಿಲ್ಲ. ತಾವು ಮಾಡಿದ್ದೇವೆ. ಉತ್ತರ ಬರಲಿ; ಎಂಬದಾಗಿ ಸರ ಮುಡಿಮನ್ನರು ಪಟರಂಗ ಬಡಿದರು. ನಿಮಗೆ ಸುದ್ದಿ ಗೊತ್ತಿಲ್ಲೆಂಬ ಕಾರಣವು ಸಮರ್ಪಕವಲ್ಲ; ವಿಷಯ ಪ್ರಾರಂಭವಾಗಲೆಂದು ಅಧ್ಯಕ್ಷರಾದ ಶ್ರೀ. ಪಟೇಲರು ಸರಕಾರಕ್ಕೆ ವಿರುದ್ಧವಾಗಿ ಮತ ಕೊಡಲು ವಾದವಿವಾದ ನಡೆಯಿತು ದೇಶ ಕಾರ್ಮಿಕರು ಒಬ್ಬ ಸಾಹೇಬರೇ ಜೇಲಿನಲ್ಲಿ ರಾಜಕೀಯ ಕೈದಿ ತನ್ನ ನಡಿಸಿಕೊಳ್ಳುವ ಅಸತ್ಯ ಮತ್ತು ನಿಂದ್ಯ ಪ್ರಕಾರವನ್ನು ಬರೆದಿರುವರು. ಇದನ್ನು ಬಳಗಿಂದೊಳಗೆ ಮುಚ್ಚಬೇಕೆಂದು ಪರಿಶ್ರಾಧಿಕಾರಿಗಳು ಮುಸಲತ್ತು ಮಾಡಿದ್ದರು. ಆದರೆ ಇದನ್ನು ತಿದ್ದಲು ಸಾಹೇಬರು ಒಪ್ಪಲಿಲ್ಲ. ಈ ಪುರಾವೆಯ ಪುಸ್ತಕವನ್ನು ನೋಡಿರಿ, ಇದನ್ನು ಸುಟ್ಟರಾಯಿತು. ಬ್ರಿಟಿಶ ಸಂಸ್ಥಾನವು ಒಂದು ಅರಿಷ್ಟ ಸರಕಾರವಾಗಿ ನಮ್ಮ ಪಾಲಿಗೆ ಬಿದ್ದದೆ. ಎಂಬದಾಗಿ ಶ್ರೀ. ಗೋಸ್ವಾಮಿಯವರು ಅತ್ಯಂತ ಆವೇಶ ಮತ್ತು ಸಂತಾಪದ ಭಾಷಣ ಮಾಡಿದರು. ಇವರಿಗೆ ಅನುಕೂಲವಾಗಿ " ರಾಜಕೀಯ ಕೈದಿಗಳನ್ನು ದನಗಳಂತೆ ನಡಿಸಿಕೊಳ್ಳುತ್ತಾರೆಂದು " ಬಾಬೂ ಬಿಪಿನ ಚಂದ್ರಪಾಲರು ಸರಕಾರ ಪಕ್ಷದವರಿಗೆ ತಕ್ಕುದಂಥ ಭಾಷಣ ಮಾಡಿದ ಕೂಡಲೆ, ಸರ ಶಿವಸ್ವಾಮಿಯವರಂಥ ರಾಜನಿಷ್ಠ ಸರಕಾರ ಪಕ್ಷದ ಮೆಂಬರರು ಸಹ ಶ್ರೀ. ಗೋಸ್ವಾಮಿಯವರ ಠರಾವಿಗೆ ಅನುಕೂಲರಾದರು. ಓಟುಗಳನ್ನು ಎಣಿಸಲು ಪ್ರಾರಂಭ ಬಹುಮತದಿಂದ ಸ್ವರಾಜ್ಯ ಪಕ್ಷಕ್ಕೆ ಜಯಬಂದು, ಸರಕಾರ ಪಕ್ಷವು ಸೋತಂತೆ ಕಂಡು ಬಂತು. ಕೂಡಲೆ ರಾಷ್ಟ್ರೀಯ ಪಕ್ಷದವರೆಲ್ಲರೂ, ಒಂದೇ ಸವನೆ ಮೂರು ಮಿನಿಟುಗಳ ತನಕ ಸರಕಾರವನ್ನು ತುಚ್ಛೀಕರಿಸಿದ ಬಗ್ಗೆ ಶೇಮ! ಶೇಮ!! ಎಂಬ ಘನಗರ್ಜನೆ ಮಾಡಿದರು. ಆಡಿಕೆಗೆ ಹೋದ ಮಾನ ಆನೇ ಕೊಟ್ಟರೂ ಬಾರದು.

ಮುಂಬಯಿ ಕೌನ್ಸಿಲದಲ್ಲಿ ಕಂಡು ಬಂದ ಒಂದು ಚಮತ್ಕಾರ.

—೦—

ಪ್ರಜಾಹಿತದ ವಿರುದ್ಧವಾಗಿ ಒಂದು ಕಾಯದೆಯನ್ನು ಅಸೆಂಬ್ಲಿ ಅಥವಾ ಕೌನ್ಸಿಲದಲ್ಲಿ ತರುವಾಗ ಸರಕಾರಕ್ಕೆ ಎಷ್ಟು ಧೈರ್ಯವಿರುವದಿಲ್ಲ. ಇದರ ಮೊದಲನೇ ವಾಚನವಾಗಿ, ತನಗೆ ಅನುಕೂಲವಾಗಿ ಓಟು ದೊರೆತರೆ- ಅಶ್ವಮೇಧ ಯಜ್ಞದ ಫಲ ಬಂತೆಂದು ಆಳರಸರು ತಿಳಿಕೊಳ್ಳುತ್ತಾರೆ. ಇಂಥದೊಂದು ಜನರ ಸ್ವತ್ವಗಳ ದರವನ್ನು ಕಾಪಿಡುವ ವಿಷಯವಾಗಿ ಮುಂಬಯಿ ಕೌನ್ಸಿಲದಲ್ಲಾದ ಮೊದಲನೆಯ ವಾಚನದಿಂದ ಸರಕಾರಕ್ಕೆ ದೊರೆಯಿತು. ಆಗ ಬ್ರಾಹ್ಮಣೇತರರೆಂಬ ಪ್ರಬಲ ಮೆಂಬರರು ಕೌನ್ಸಿಲದಲ್ಲಿರಲೇ ಇಲ್ಲ. ಮುಸಲಮಾನರು ಬಹುತೇಕವಾಗಿ ಸರಕಾರದಂತೆ ಕುಳಿತಿದ್ದರು. ಧಾರವಾಡದ ಮಿ. ಪಠಾಣ ಸಾಹೇಬರು ಅನುಕೂಲ ಮತ ಕೊಟ್ಟಿದ್ದಾರೆ. ಪೋರ್ಟ ಕಂಟ್ರೋಲ ದಳವಿ, ಅಂಗಡಿ ಮೊದಲಾದ 'ಬ್ರಾಹ್ಮಣೇತರರು ಕೌನ್ಸಿಲದಲ್ಲಿರಲೇ ಇಲ್ಲ. ಪ್ರತ್ಯಕ್ಷವಿಲ್ಲದಿದ್ದರೂ ಅಪ್ರತ್ಯಕ್ಷವಾಗಿ ಸರಕಾರಕ್ಕೆ ಸಹಾಯ ಮಾಡುವ ಪ್ರಕಾರವೇ ಸೈ. ಧಾರವಾಡದ ಶ್ರೀ. ಬೋಗ, ಕಾರವಾರದ ಶ್ರೀ. ಕರ್ಕಿ, ವಿಜಾಪೂರದ ಶ್ರೀ. ಸರದೇಸಾಯಿಯವರು ಪ್ರತಿಕೂಲ ಮತ ಕೊಟ್ಟರು. ಶ್ರೀಮಂತ ಸರ ದೇಸಾಯಿಯವರನ್ನು ನಿರಾಶ್ರಿತ್ಯದಿಂದ ಮತಕೊಡುವ ಗಟ್ಟಿಗತನವು ಬೇರೆ ಬ್ರಾಹ್ಮಣೇತರರಲ್ಲಿರುವರೆಂಬುದು ದುಃಖದ ಸಂಗತಿಯು.

ಜರ್ಮನಿ ತುಂಬ ಸೂತಕ.

ಮಹಾಯುದ್ಧದಲ್ಲಿ ಮಡಿದಂಥ ಸೈನಿಕರ ಸ್ಮರಣೆಗಾಗಿ ಕಳೆದ ಆದಿತ್ಯವಾರ ದಿವಸ ಜರ್ಮನ ರಾಜ್ಯದ ತುಂಬ ಸೂತಕ ನಡೆಸಲ್ಪಟ್ಟಿತು. ಹರತಾಳ ಮಾಡಿ, ಎಲ್ಲ ವ್ಯವಹಾರ ಬಂದು ಮಾಡಿದರು. ರಾಷ್ಟ್ರೀಯ ನಿಶಾನೆಗಳನ್ನು ಇಳಿಗಿಸಿದರು. ದೇವಾಲಯದಲ್ಲಿ ಗಂಟೆ ಬಾರಿಸಿ, ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ಜನರಲ ಹಿಂಡನಬರ್ಗರೇ ಮೊದಲಾಗಿ ಪ್ರತಿಷ್ಠಿತರು ಜಾಹೀರಸಭೆಯನ್ನು ಪ್ರಸಿದ್ಧ ಮಾಡಿ, ಜರ್ಮನರು ಮುಕ್ತರಾದವಳಿದು, ಐಕ್ಯದಿಂದ ನಡೆದರೆ- ಯಾರೂ ಜರ್ಮನರ ನಾಶ ಮಾಡಲಾರರೆಂದು ನಿರ್ವೀರ್ಯರಾದವರಲ್ಲಿ ವೀರಶ್ರೀಯು ಹುಟ್ಟುವಂಥ ಭಾವನನ್ನು ವ್ಯಕ್ತಪಡಿಸಿದ್ದಾರೆ.

ಅಲ್ಲಾಹಾಬಾದ ಇಲಾಖೆಯ ಕೌನ್ಸಿಲದಲ್ಲಿ ಪ್ರಾಥಮಿಕ ಶಿಕ್ಷಣದ ಕೂಡ ಧಾರ್ಮಿಕ ಶಿಕ್ಷಣ ಕೊಡಬೇಕೆಂದು ಮುಸಲಮಾನ ಮೆಂಬರರು ವಾದಿಸಿದರು. ಈ ವಿಚಾರವನ್ನು ಸರಕಾರ ಮತ್ತು ಹಿಂದೂ ಮೆಂಬರರು ವಿರೋಧಿಸಲು- ಮುಸಲಮಾನ ಮೆಂಬರರೆಲ್ಲರು ಒಟ್ಟಿನಿಂದ ಕೌನ್ಸಿಲ ಬಿಟ್ಟು ಹೊರಬಿದ್ದು ಬಂದರು.

ಬ್ರಿಸ್ಬೇನದ ಹತ್ತಿರ ಒಂದು ಸಾಗರದ ಸಮುದ್ರದಲ್ಲಿ ಮುಣುಗಿ ೧೪ ಜನರು ಜಲಸಮಾಧಿ ಹೊಂದಿದರು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡುಗಂಟು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದರಂತೆ ಆಗಿಯುಂತಿರುತ್ತದೆ

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ಸರಕಾರದಿಂದ ಪೇಟೆಂಟ ದೊರೆತ

ಮಲ್ಹಾರ ಕಪ್ಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಲಿಯು ನೀರನ್ನು ಮುಟ್ಟಿದ ಕೂಡಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯೊಳಗಿಂದ ನೀರು ಒಳ ಸೇರುವದು. ಕಪ್ಲಿಯು ಏಳಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲಗೊಡುವದಿಲ್ಲ.

ಎರಡು ಪ್ರಕಾರಗಳದ್ದಿರುತ್ತವೆ.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೦ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯಾಯರ ತಕೊಳ್ಳು. ಒಂದೇ ಕ್ಷಣದಲ್ಲಿ ನಿನ್ನ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೊಡ್ರುವಿ [illegible] ತುಸು. ಎಂಥೇ ಅದೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಪಚ್ಚೆ, ಗರ್ಮಿಯ ಬಚ್ಚೆ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕಾದ ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ

ಹುಬ್ಬಳ್ಳಿಯ ಏಜೆಂಟರು— ದಿ ಕನಕಾದಿತ್ಯ ಮೆಡಿಕಲ ಸ್ಟೋರ [illegible] ಮತ್ತು ಹುಬ್ಬಳ್ಳಿ [illegible] ದೊರೆಯುವದು. | ಎನ. ಎಸ. ಪೆಂಟರ [illegible] ಬೆಳಗಾವಿ

ಜಾಹೀರ ನೋಟೀಸು

ಈ ವರ್ಷ ಯಮನೂರ ಜಾತ್ರೆಯಲ್ಲಿ ನವಲಗುಂದ ತಾಲೂಕಿನ ಲೋಕಲ ಬೋರ್ಡಿನವರಿಂದ ಮತ್ತು ದನಗಳ ವ [illegible] ಸಾಮಾನ್ಯದ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಆಗಲಿಕ್ಕಿದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಆಗತಕ್ಕದ್ದಿದೆ ಮತ್ತು ಉತ್ತಮ ತರದ ಜಾನುವಾರುಗಳಿಗೆ ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡಕೊಳ್ಳಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳಕೊಳ್ಳಬಾರದು. ದನಗಳು [illegible] ನೀರಿನ ಪುರವಠೆಯು ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨[illegible]

ರಾಮಭಾವು ಜೋಶಿ	ಪರ್ವತಗವಡಾ ಪಾಟೀಲ
ನವಲಗುಂದ	ತುಪ್ಪದಕುರಹಟ್ಟಿ
ವ್ಹಾಯಿಸ ಚೇರಮನ್	ಸ್ವಾಗತ ಕ. ಚೇರಮನ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಆರುಲಕ್ಷದ ಮೇಲಿಂದೆ. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು [illegible] ಡುವವು, [illegible], ಬೇರೆ [illegible] ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಡಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦
೬ ,,	೬—೦—೦
೩ ,,	೪—೦—೦
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ಎಲ್ಲ ವ್ಯವಹಾರ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು [illegible] ಧಾರವಾಡ [illegible]

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಗುರುವಾರ ತಾರೀಖು ೪ನೇ ಮಾರ್ಚ ೧೯೨೬ (ಸಂಚಿಕೆ ೫೦

ಟಿ. ಎಸ್. ಮೋಟಾರ ಸರ್ವ್ಹೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೩—೨೬ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

—: ಕಾಲಕ್ರಮಗಳು :—

೧.	ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ,	ಸಾಯಂಕಾಲ ೫ ಘಂಟೆ
	ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨	ಸಾಗರ ಬಿಡುವದು	ಗೋಕರ್ಣ ಸೇರುವದು
	ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿಮೋಗಾ
೨೨-೧-೧೯೨೬

ಎಮ್. ಮಂಜಪ್ಪಾ,
ಪ್ರೊಪ್ರಾಯಿಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಪ್ರಕಟಣೆ.

ಬಿ. ಎಸ್. ಎಸ್ ವೈದ್ಯ ಇವರು.

ಉತ್ತಮ ಗಾಯನ, ಪೇಟಿ, ವ ನಾಟಕ ಸಹಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿ ಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿವಿಧ ವರ್ತಮಾನಗಳು.

ನೇಪಾಳದ ಮಹಾರಾಜರು ಹಿಂದೂ ಮಹಾ ಸಭೆಯ ಅಧ್ಯಕ್ಷರಾಗಲೊಪ್ಪದ್ದರಿಂದ, ಬ್ಯಾರಿಸ್ಟರ ಜಯಕರರನ್ನು ಅಧ್ಯಕ್ಷರಾಗಿ ನೇಮಿಸಿದ್ದಾರೆ.

ಮಂಡಾಲೆಯ ತುರಂಗದಲ್ಲಿರುವ ಬಂಗಾಲದ ರಾಜಕೀಯ ಕೈದಿಗಳು ನಿರಾಹಾರದ ಸತ್ಯಾಗ್ರಹ ಮಾಡಿದ್ದಕ್ಕಾಗಿ ಕಲಕತ್ತೆಯಲ್ಲಿ ಹೋದ ಆದಿತ್ಯವಾರದ ದಿವಸ ಹರತಾಳ ಮಾಡಲ್ಪಟ್ಟಿತು.

ಪಂಡಿತ ಮೋತಿಲಾಲರು ಅಹಮದಾಬಾದಿನಲ್ಲಿ ಒಂದು, ಎರಡು ದಿವಸ ಸ್ವರಾಜ್ಯ ಪಕ್ಷದ ಮುಂದಿನ ಕಾರ್ಯಕ್ರಮದ ಬಗ್ಗೆ ಮಹಾತ್ಮಾರ ಕೂಡ ಆಲೋಚನೆ ಮಾಡಿಕೊಂಡು ದಿಲ್ಲಿಗೆ ಪ್ರಯಾಣ ಮಾಡಿದರು.

ನಿಜಾಮರು ಹೈದರಾಬಾದಿನಲ್ಲಿ ಪ್ಲೇಗಿನಿಂದ ದಿನಾಲು ನೂರರ ತನಕ ಮರಣವಾಗುತ್ತಿರುವವು. ಆಬಕಾರಿ ತಾಲೂಕದಾರರಾದ ಮಿ. ನರಸಿಂಗರಾಯರು ಅದೇ ರೋಗಕ್ಕೆ ತುತ್ತಾದರು.

ಅಬೂ ಪರ್ವತದ ಯಾತ್ರೆಗೆ ಹೋಗುತ್ತಿದ್ದ ಜೈನರನ್ನು ಕರೋಡೆಗಾರರು ಹಿಡಿದು, ಹತ್ತು ಸಾವಿರದ ಆಸ್ತಿಯನ್ನು ಸುಲಿದರು. ಸ್ತ್ರೀಯರ ಒಡಿವೆಗಳನ್ನು ಕಸಕೊಳ್ಳುವಾಗ ನಿಷ್ಕರುಣೆಯಿಂದ ಅವರ ಬೆರಳುಗಳನ್ನು ಸಹ ಕೂಡಿಸಿದ್ದಾರೆ.

ಮದ್ರಾಸ ಹಾಯಕೋರ್ಟಿನ ಜಡ್ಜರೂ ಹಿಂದೆ ಅಸೆಂಬ್ಲಿಯ ಮೆಂಬರರೂ ಆಗಿದ್ದ ಶ್ರೀ. ಟಿ. ವ್ಹಿ. ಶೇಷಗಿರಿ ಅಯ್ಯರರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಜರ್ಮನಿಯೊಳಗೆ ಅಸ್ಟ್ರಿಯಾದಲ್ಲಿಯೂ ಇಟಲಿಯ ಸರಕುಗಳಿಗೆ ಬಹಿಷ್ಕಾರ ಹಾಕುವ ಕೆಲಸ ಚಾಲನೆದ್ದಿದೆ.

ವಿಜಯ.

ಧಾರವಾಡ ತಾ|| ೪-೩-೨೭ ನೇ ಇಸ್ವಿ

ಹಿಂದುಸ್ಥಾನ ಸರಕಾರದ ಆದಾಯ ವೆಚ್ಚವು.

—:o:—

೧ ನೆಯ ತಾರೀಖಿನ ದಿವಸ ಹಿಂದುಸ್ಥಾನ ಸರಕಾರದ ಕೋಶಾಧ್ಯಕ್ಷರಾದ ಸರ ಬ್ಲೆಕೆಟಸಾಹೇಬರು ೧೯೨೭-೨೮ ವರ್ಷದ ಬಗೆಯಿಂದ ಆದಾಯ ವೆಚ್ಚದ ಪತ್ರಿಕೆಯನ್ನು ಪ್ರಸಿದ್ಧ ಮಾಡಿ, ಅಸೆಂಬ್ಲಿಯಲ್ಲಿ ಓದಿದರು. ನಡಿಯುವ ವರ್ಷದಲ್ಲಿ ಸರಕಾರಕ್ಕೆ ೧ ಅಬ್ಜ, ೩೧ ಕೋಟಿ ೭೮ ಲಕ್ಷ ರೂಪಾಯಿಗಳ ಪ್ರಾಪ್ತಿಯಾಗಿ, ೧ ಅಬ್ಜ, ೩೦ ಕೋಟಿ, ೩೨ ಲಕ್ಷದ ವೆಚ್ಚ ಬಂದು, ೧ ಕೋಟಿ ೩೦ ಲಕ್ಷದ ಉಳಿತಾಯವಾಗುವದು. ವೆಚ್ಚ ಬಾಯಿಗೂಡಿ, ಮೇಲೆ ಒಂದೂವರೆ ಕೋಟಿಯ ಉಳಿತಾಯವಾಗುವದರಿಂದ ಪ್ರಜರ ಮೇಲೆ ಹೊಸ ಕರದ ಭಾರ ಬರುವ ಭಯ ತಪ್ಪಿತು. ಲಾರ್ಡ ರೀಡಿಂಗಸಾಹೇಬರು ಸಾಮ್ರಾಜ್ಯದ ಅಂತ್ಯದ ತನಕ ಗಿರಣಿಗಳ ಮೇಲಿನ ಸುಂಕವನ್ನು ರಹಿತಪಡಿಸಿದ್ದರಷ್ಟೇ; ಅದನ್ನು ಪೂರಾ ರದ್ದು ಮಾಡಿದರು. ಹೋದ ವರ್ಷ ದಂಡಿನ ಖಾತೆಯ ವೆಚ್ಚವು ೫೫ ಕೋಟಿ ಇತ್ತು. ಅದು ಈ ಸಾರೆ ಒಂದು ಕೋಟಿ ಕಡಿಮೆಯಾಗುವದು. ಇವೆಲ್ಲ ಸರಕಾರದ ಪಕ್ಷಿಯಿಂದ ಆನಂದವನ್ನು ವ್ಯಕ್ತಪಡಿಸುವಂಥ ಸಂಗತಿಗಳು. ಇನ್ನು ಪ್ರಜಾ ಪಕ್ಷದ ದೃಷ್ಟಿಯಿಂದ ನೋಡುವಾ—

ಹತ್ತು ವರ್ಷಗಳ ಕೆಳಗೆ ಒಟ್ಟು ಉತ್ಪನ್ನವು ೮೦ ಕೋಟಿ ಇತ್ತು. ಅದು ಇಂದಿಗೆ ೧೩೧ ಕೋಟಿಗೆ ಬಂದಿದೆ. ಸರಕಾರದ ಗಳಿಕೆಯು ಹನುಮಂತನು ಲಂಕೆಗೆ ಹಾರಿದಂತೆಯೂ, ದೇಶದ ಸಾಂಪತ್ತಿಕ ಸ್ಥಿತಿಯು ಭರದಿಂದ ಅಭಿವೃದ್ಧಿ ಹೊಂದುತ್ತಾ ಇರುವದೆಂದೂ [illegible]ರುವದು. ಆದರೆ ಇದು ಕೂಡಿನ ಗುಜ್ಜ ಕಣ್ಣಿಗೆ ಸುಣ್ಣಾಗಿ ಎಂಬಂತಿರುತ್ತದೆ. ೪೯ ಕೋಟಿಯ ವರೆಗೆ ಏರಿದ ಆದಾಯವು ಪ್ರಜರ ತಲೆಯ ಮೇಲೆ ವಿವಿಧ ರೂಪದಿಂದ ಹೇರಿದ ಕರಗಳಿಂದ ಬಂದಿರುತ್ತದಲ್ಲದೆ, ಸ್ವಾಭಾವಿಕವಾಗಿ ಬಂದದ್ದು [illegible] ಇಲ್ಲ. ಇದಕ್ಕೆ ಸಂಪತ್ತೆಂದೂ, ಗಳಿಕೆ ಎಂದೂ, ಯಾರೂ ಅನ್ನಲಾರರು. ಸರಕಾರಕ್ಕೆ ಇಂದಿಗೆ ಹತ್ತು ಅಬ್ಜ ೧೩ ಕೋಟಿಯ ಸಾಲವುಂಟು. ಇದಕ್ಕೆ ರಾಷ್ಟ್ರೀಯ ಸಾಲವೆನ್ನುವರು. ವರ್ಷಕ್ಕೆ ಉಳಿಯುವ ಕೋಟಿಯ ದ್ರವ್ಯದಿಂದ ಈ ಸಾಲ ತೀರುವದು ಶಕ್ಯವೇ ಇಲ್ಲ. ಸಾಲಿಗನ ಮೋರೆ ನೋಡಬಾರದೆಂದು ಲೋಕೋಕ್ತಿಯಾದ ಮಾತು. ಆದರೆ ಸರ ಬ್ಲೆಕೆಟಸಾಹೇಬರು ನಿಶ್ಚಿಂತ ಪುರುಷರಂತೆ ಅಂಕಿಗಳ ಚಮತ್ಕಾರ ತೋರಿಸಿ, ಉಳಿತಾಯವನ್ನು ತೋರಿಸುತ್ತಿರುವರು. ಸರಕಾರದ ವೆಚ್ಚವು ಮಿತಿಮೀರಿ ಬೆಳೆಯಲು- ವೆಚ್ಚ ಕಡಿಮೆ ಮಾಡುವ ಹಂಚಿಕೆ ಹೇಳುವದಕ್ಕಾಗಿ ಒಂದು ಕಮೀಟಿ ನೇಮಿಸಿದರು. ಈ ಕಮೀಟಿಯವರು ದಂಡಿನ ವೆಚ್ಚವು ೫೦ ಕೋಟಿಗಿಂತ ಹೆಚ್ಚಿರಬಾರದೆಂದು ಸೂಚಿಸಿದರು. ಇದನ್ನು ಇನ್ನೂ ನಾಲ್ಕು ಕೋಟಿ ಕಡಿಮೆ ಮಾಡಬೇಕೆಂಬ ಮಾತನ್ನು ಬದಿಗಿಟ್ಟು, ಒಂದು ಕೋಟಿಯಷ್ಟು ಕಡಿಮೆ ಮಾಡಿ, ಅತ್ತವರ ಕಣ್ಣೊರಸಿದಂತೆ ಮಾಡಿದ್ದಾರೆ. ಇದೇ ಪ್ರಕಾರ ಪ್ರಾಂತಿಕ ಸರಕಾರಗಳಿಗೆ ಹಂಚಿಕೊಡುವ ರಕಮುಗಳಿಗೆ ಕತ್ತರಿ ಹಾಕಿ ಉಳಿತಾಯ ತೋರಿಸಿದ್ದಾರೆ. ಹೋದ ವರ್ಷ ೩|| ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಈ ಸಾರೆ ಅದು ೧೨೫ ಲಕ್ಷಕ್ಕೆ ಬಂದಿದೆ. ಮುಂಬಯಿ ಇಲಾಖೆಯಲ್ಲಿ ಡೇಗರು ಬಿದ್ದಿದೆಂದು ಗೊತ್ತಿದ್ದರೂ, ಅದಕ್ಕೆ ಒಂದು ಕಾಸಿನ ಸಹಾಯ ಮಾಡಿಲ್ಲ!! ಒಕ್ಕಟ್ಟಿಗೆ ಕಡಿಮೆ ಮಾಡಿ, ಒಕ್ಕಟ್ಟಿಗೆ ಏರಿಸುವದಕ್ಕೆ ಎಂಥ ಪುಷ್ಣಾಣರೂ ಗಳಗೆ ಎನ್ನಲಾರರು.

ಉಪ್ಪಿನ ಮೇಲಿನ ಕರವು ಹಾಗೇ ಕಾಯಿತು. ಬಿಟ್ಟು ಬೇಗ ಬೆಳಗು ಕಾಣಲಿ; ಪೋಸ್ಟಿನ ದರವನ್ನು ಕಡಿಮೆ ಮಾಡಿರುವಾ ಎಂಬದಾಗಿ ಕೆಲ ಲೋಕವಾದಿಗಳು ಹಾಗೇ ಅದರ ಕಾರ್ಯಗಳಂತೆ ಅಸೆಂಬ್ಲಿಯಲ್ಲಿ ಭಾಷಣ ಮಾಡಿದ್ದರು. ಮೇಲಿನ ಒಂದೂವರೆ ಕೋಟಿಯಂಥ ತೀರ ದರಿದ್ರ ಉಳಿತಾಯವನ್ನು ನೋಡಿ, ಅವರ ನಿರಾಶೆಯಾಗುವದು ಖಂಡಿತ. ಮೇಲಿನ ಉಳಿತಾಯಿಯಲ್ಲಿ ೫೦ ಲಕ್ಷ ರೂಪಾಯಿಗಳನ್ನು ಪುರಾತನ ವಸ್ತು ಸಂಶೋಧನಕ್ಕಾಗಿ ವೆಚ್ಚ ಮಾಡುವಂತೆ ಒಂದು ಬಿಲ್ಲನ್ನು ಕೂಡ ಬರೆದು ಸಿದ್ಧ ಮಾಡಿದ್ದಾರೆ. ಇದರಿಂದಂತೂ ಯಾವದೊಂದು ಸಣ್ಣ ಕರ ಕಡಿಮೆ ಮಾಡುವಂತೆ ಸರಕಾರವನ್ನು ಒತ್ತಾಯಪಡಿಸಲಿಕ್ಕೆ ಸಹ, ಸರ ಬ್ಲೆಕೆಟಸಾಹೇಬರು ಸಂದು ಬಿಟ್ಟಿರುವದಿಲ್ಲ.

ಪಂಜಾಬದಲ್ಲಿ ಪ್ಲೇಗಿನ ಸಂಚಲವು ೧೮ ಡಿಸೆಂಬರದಿಂದ ಪ್ರಾರಂಭವಾಗಿ, ವರ್ಷಕ್ಕೆ ನಾಲ್ಕಾರಂತೆ ಬಹಳ ಹೆಚ್ಚುತ್ತ ಹೋಗುವದು. ಬಹಳ ದೊಡ್ಡ ಆಪತ್ತು.

ಪದಚ್ಯುತ ಹೋಳಕರ ಮಹಾರಾಜರ ಕೆಲವು ಅವಿವೇಕ ಕೃತ್ಯಗಳು.

— ೦ —

ಮಹಾರಾಜರು ವಿಲಾಯತಿಗೆ ಹೋಗಿ ವಿದ್ಯಾಭ್ಯಾಸ ಮಾಡಿದ್ದರೂ, ಅವರ ಸ್ವಭಾವದ ಮೇಲೆ ಶಿಕ್ಷಣದ ಪರಿಣಾಮವೇನೂ ಆಗಲಿಲ್ಲ. ಇವರು ಬಹಳ ಸ್ವಚ್ಛಂದ ವೃತ್ತಿಯವರಾದರು. ಮೊದಲನೆಯ ಹೆಂಡತಿಯು ಇವರಿಗಿಂತ [illegible] ವರ್ಷ ದೊಡ್ಡವಳು. ಇವಳ ಕೂಡ ಸುಖವಾಗಿ ಪ್ರಪಂಚ ಮಾಡಲಿಲ್ಲ. ಬಹಳ ಹಿಂಸೆ ಕೊಟ್ಟರು. ಅಷ್ಟರಿಂದ ಸರದಾರ ಕಿಬೆ ಎಂಬವರ ಗುಪ್ತರಿಂದ ಇಂದೂರ ರಾಜ್ಯದಿಂದ [illegible] ಪ್ರಯತ್ನ ಮಾಡಿದರು. ಆದರೆ ಉಸ್ತೇತ ಕೊಡಿಗಾಣಲಿಲ್ಲ. ಮಹಾರಾಜರು ಇವಳನ್ನು [illegible] ಸ್ತ್ರೀ [illegible] ತನಕ ಬಂದುಕಟ್ಟಿನಲ್ಲಿಟ್ಟಿದ್ದರು. ಇವಳ ಹೊಟ್ಟೆಯಿಂದ ಹುಟ್ಟಿದವನೇ ಯುವರಾಜನಾಗಿ ಪಟ್ಟಾಭಿಷೇಕ ಮಾಡಲ್ಪಡುವನು.

ಇವರ ಎರಡನೇ ಹೆಂಡತಿಯು ಸಾಧಾರಣ ಮನೆತನದವಳು. ರೂಪಕ್ಕೆ ಮೋಹಿಸಿ, ಮದಿವೆ ಮಾಡಿದರು. ಆಗ ಸರ [illegible]ರು [illegible]ರಾಗಿದ್ದರು. ಇವರು ಹೆಸರಾದ ಸಾರ್ವಜನಿಕ ಸುಧಾರಕರೂ, ಬಹುಪತ್ನಿತ್ವದ ವಿರೋಧಿಗಳೂ ಆದುದರಿಂದ ಈ ಲಗ್ನಕಾಲದಲ್ಲಿ [illegible] ರಡೆಂಡು ತಿಂಗಳೆರಡು ತಿಂಗಳು [illegible] ರಜಾ ಪಡೆದು ಮುಂಬಯಿಗೆ ಬಂದಿದ್ದರು.

ಶ್ರೀ. ಹೋಳಕರರು ಸುನ [illegible] ಕೆನಾಲ ಬಾಯಿ ಎಂಬ ಹೆಸರಿಟ್ಟು, ವಿಲಾಯತಿ [illegible] ಅವಳ ಸೋದರನನ್ನು ಮುಟ್ಟ[illegible] ಎಷ್ಟು ಬಾರಿ ವಿಲಾಯತಿಗೆ ಹೋ[illegible] ಗನ ಮಹಾರಾಜರು ಹೋದರೆಂದು [illegible] ಇಂಗ್ಲಿಷ ಸರಕಾರವು ಅಜ್ಞಾನಿ[illegible] ಮಹಾರಾಜರು ಸೂಳೆಯನ್ನು ಕರೆ[illegible] ದ್ದರ ನಿಷೇಧದ ಬಗೆಯಿಂದಲೇ [illegible] ವರಿಗೆ ದರ್ಶನ ಲಾಭ ಕೊಡಲಿಲ್ಲ.

ಮಮುತಾಜಳನ್ನು ಬಂದಂತೆ [illegible] ಲಾಯತಿಗೆ ಪ್ಯೆದರು. ಮುಂಬಯಿ [illegible] ಇಂದೂರಿಗೆ ಬರಬೆ ತಪ್ಪಿಸಬೇಕೆಂದು [illegible] ಬೋಧಿಸಲ್ಲಳಿಸಿ, ಅಲಕತ್ತೆಯ ಮಾರ್ಗವಾಗಿ [illegible] ದೂರಿಗೆ ತರಿಸಿದರು.

ಮಹಾರಾಜರು ೧೯೧೫ ರಲ್ಲಿ ಮಹಾಬಳೇಶ್ವರಕ್ಕೆ ಬಂದಿದ್ದರು. ಫಾರೆನ್ ಸ್ತ್ರೀಯರ ಪ್ರೇಮಕ್ಕೂ ಅವರಕ್ಕಾ ಪಾತ್ರರಾದರು. ಪ್ರತಿಷ್ಠಿತ ಮನೆತನಕ್ಕೆ ಸೇರಿದ ಒಬ್ಬ ಫಾರಸೀ ತರುಣಿಯು ಇಂದೂರಿಗೆ ಹೋಗಿ ಮಹಾರಾಜರ ಸಹ್ಯಸ್ಥಾನದಲ್ಲಿದ್ದಳು. ಅಲ್ಲಿಯೇ ಮಹಾರಾಜರ ಖಾಸಗೀ ಕಾ

ವಿಧವೆಯು ಲಗ್ನ ಮಾಡಿಕೊಂಡಳು. ಇದಂತೂ ವ್ಯಕ್ತಿತ್ವ ಲೋಕನಿಂದ್ಯೆಗೆ ಕಾರಣವಾಯಿತು. ಇವಳು ಕುದುರೆಯ ಮೇಲಿಂದ ಬಿದ್ದು ಸತ್ತ ಬಳಿಕ ಈ ಕತೆಯು ಹತ್ತಿ ಮುಗಿಯಿತು.

ಮಹಾರಾಷ್ಟ್ರ ವಿಶ್ವ ವಿದ್ಯಾಲಯ—

ಮಹಾರಾಷ್ಟ್ರ ಪ್ರಾಂತಕ್ಕಾಗಿ ಸ್ವತಂತ್ರ ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಮುಂಬಯಿ ಯುನಿವ್ಹರ್ಸಿಟಿಯಲ್ಲಿ ನಿರ್ಣಯವಾದ ಮೇರೆಗೆ ಪುಣೆಯಲ್ಲಿ ಸಭೆಸೇರಿ, ಈ ಬಗ್ಗೆ ಮಾಡತಕ್ಕ ಮುಂದಿನ ವಿಚಾರ ನಡೆದಿದೆ. ಪುಣೆಯಲ್ಲಾಗುವ ವಿಶ್ವವಿದ್ಯಾಲಯದಲ್ಲಿ ಮರಾಠಿ ನಾಡಿನಲ್ಲಿರುವ ಎಲ್ಲ ಕಾಲೇಜಗಳು ಸೇರುವದು ಆವಶ್ಯಕವಾದದ್ದೆಂದು ಸಹಜವೆನಿಸುತ್ತದೆ. ಆದರೆ ಇದಕ್ಕೆ ನಾಶಿಕ ಮತ್ತು ಕೊಲ್ಹಾಪೂರದ ಕಾಲೇಜಗಳು ಸಮ್ಮತಿಸುವದಿಲ್ಲ. ಪುಣೆಯ ಬದಲಾಗಿ ಮುಂಬಯಿ ಯುನಿವ್ಹರ್ಸಿಟಿಗೇ ಅಂಕಿತವಾಗಿರಬೇಕೆಂದು ಅವುಗಳ ಮತವು ಇದು ಸ್ವತಂತ್ರ ಕಾಲೇಜಗಳ ಮತವಾಯಿತು. ಸಾಂಗಲಿಯು ಕ್ಷಿಪ್ತ ಅರ್ಧ ಕನ್ನಡ ಮತ್ತು ಅರ್ಧ ಮರಾಠಿಯಾಗಿರುವ ವಿಲಿಂಗಡನ ಕಾಲೇಜವು ಫರ್ಗ್ಯುಸನ ಕಾಲೇಜದ ಒಂದು ಭಾಗವಾಗಿರುವದರಿಂದ, ಅದು ಪುಣೆಯ ಕಾಲೇಜವನ್ನೇ ಸೇರಿಕೊಳ್ಳುವದು. ಬಳ್ಳಾರಿಯ ಐದು ತಾಲೂಕುಗಳು ಆಂಧ್ರ ಯುನಿವ್ಹರ್ಸಿಟಿಗೆ ಸೇರಬಾರದೆಂದು ಕನ್ನಡಿಗರು ಪ್ರತ್ಯೇಕವಾಗಿ ಚಳವಳಿ ಮಾಡಿದರು ಅದೇ ಪ್ರಕಾರದ ಚಳವಳಿಯನ್ನು ವಿಲಿಂಗಡನ ಕಾಲೇಜದ ಬಗೆಯಿಂದಲೂ ನಡೆಸಬೇಕಾಗಿರತ್ತದಲ್ಲವೇ!

ತಮಿಳರಿಗೆ ಸ್ವರಾಜ್ಯ—

ತಮಿಳ ದೇಶಕ್ಕೆ ಸ್ವರಾಜ್ಯ ಕೊಡಬೇಕೆಂಬ ಠರಾವನ್ನು ಸರ ಶಂಕರ ನಾಯರರು ಕೌನ್ಸಿಲ ಆಫ ಸ್ಟೇಟದಲ್ಲಿ ತರತಕ್ಕವರಿದ್ದಾರೆ. ಇವರ ಹೆಸರಿನಂತೆ ಈ ಪ್ರಕಾರ ಠರಾವು ತರುವ ನೋಟೀಸೂ ಹೊರಟಿದೆ. ಇವರು ಠರಾವಿನಲ್ಲಿ ಚಿತ್ತೂರ ಜಿಲ್ಹೆಯನ್ನು ತಮಿಳ ನಾಡಿನಲ್ಲಿ ಸೇರಿಸಿದ್ದಾರೆ. ಚಿತ್ತೂರ ಅಂದರೆ ಉತ್ತರ ಆರ್ಕಾಟ ಜಿಲ್ಹೆಯು ತೆಲಗು ನಾಡೆಂದು ಈ ಪರ್ಯಂತರ ಗೊತ್ತು. ಮತ್ತು ಅಲ್ಲಿಯ ಬಹುತೇಕ ತಾಲೂಕಗಳ ಮತ್ತು ಮುಖ್ಯ ಪಟ್ಟಣವಾದ ಚಿತ್ತೂರಿನ ಭಾಷೆಯು ತೆಲಗೇ ಆಗಿರುತ್ತದೆ. ಸರ ಶಂಕರ ನಾಯರರು ತಮ್ಮ ಠರಾವಿನಿಂದ ಸಹಜವಾಗಿ ಇದೇ ಜಿಲ್ಹೆಯನ್ನು ತಮಿಳ ದೇಶದಲ್ಲಿ ಸೇರಿಸುವರು. ಇದನ್ನು ಆಂಧ್ರರು ಇಂದಿಲ್ಲ ನಾಳೆ ವಿರೋಧಿಸುವರು. ತತ್ಪೂರ್ವದಲ್ಲಿ ಸರ ಶಂಕರನಾಯರರ ಸ್ವರಾಜ್ಯದ ಠರಾವು ಪಾಸಾಗಿ, ಸರಕಾರವು ಎಲ್ಲರ ಮನ್ನಣೆಗೆ ಪಾತ್ರವಾಗುವದೆಂಬದನ್ನು ನಿರೀಕ್ಷಿಸುತ್ತಿದ್ದಾರೆ. ತಮಿಳರಿಗೆ ಸ್ವರಾಜ್ಯ ಸಿಕ್ಕರೆ ಆಂಧ್ರರಿಗೂ ಆಂಧ್ರರಂತೆ ಬೇರೆ ದೇಶಗಳಿಗೂ ದೊರೆಯುವದು. ಇದೆಲ್ಲ ಮೃಗಜಲದ ಬೆನ್ನು ಹತ್ತುವಂಥ ಆಶೆಯೇ ಸರಿ.

ಸ್ವಾಮಿ ಶ್ರದ್ಧಾನಂದರ ರಾಜೀನಾಮೆ—

ದಿಲ್ಲಿಯಲ್ಲಿ ಕೂಡತಕ್ಕ ಹಿಂದೂ ಮಹಾಸಭೆಯಲ್ಲಿ ಬಾಲವಿವಾಹ ನಿಷೇಧ ಮತ್ತು ವಿಧವಾ ವಿವಾಹಕ್ಕೆ ಉತ್ತೇಜನ ಕೊಡುವಂಥ ಠರಾವುಗಳನ್ನು ತರಬೇಕೆಂದು ಪಂಜಾಬದಲ್ಲಿ ಕೂಡಿದ್ದ ಹಿಂದೂ ಪ್ರಾಂತಿಕ ಮಹಾ ಸಭೆಯಲ್ಲಿ ಸ್ವಾಮೀ ಶ್ರದ್ಧಾನಂದರು ಸೂಚನೆ ಮಾಡಿದರು. ಅಲ್ಲಿ ನೆರೆದ ಬಹುತೇಕ ಜನ ಡೆಲಿಗೇಟರು ಠರಾವುಗಳಿಗೆ ಪೂರ್ಣ ಅನುಕೂಲರಾದರು. ಆದರೆ ಅತ್ಯಂತ ಕರ್ಮನಿಷ್ಠರಾದ ಮತ್ತು ಪುರಾಣ ಮತವಾದಿಗಳಾದ ಪಂಡಿತ ಮಾಲವೀಯರಿಗೆ ಇವೆರಡೂ ಠರಾವುಗಳು ಒಪ್ಪಿಗೆಯಾಗಲಿಲ್ಲ. ಈ ಬಗ್ಗೆ ಉಭಯತರ ನಡುವೆ ಒಡಂಬಡಿಕೆಯಾಗದಂಥ ಮತಭೇದವಾಯಿತು. ಒಬ್ಬರ ಲೊಬ್ಬರು ರಾಜೀನಾಮೆ ಕೊಟ್ಟು ಮಹಾ ಸಭೆಯಿಂದ ದೂರಿರುವದೇ ಅಗತ್ಯವೆನಿಸಿತು. ಸುಧಾರಣಾವಾದಿಯಾದ ಸ್ವಾಮಿ ಶ್ರದ್ಧಾನಂದರು ಪಂಡಿತ ಮಾಲವಿಯಾರವರ ಕೂಡ ಪತ್ರವ್ಯವಹಾರ ಮಾಡಿ, ಕೊನೆಯಲ್ಲಿ ತಾವೇ ರಾಜೀನಾಮೆ ಕೊಟ್ಟರು. ಹಿಂದೂ ಮಹಾಸಭೆಯು ಅತಿರಥರ ಸಹಾಯ ಕಳಕೊಂಡಿತೆಂಬದು ಅಸಮಾಧಾನದ ಸಂಗತಿಯು.

ಶುದ್ಧೀಕರಣ—

ಗುಜರಾಥ ಪ್ರಾಂತದಲ್ಲಿ ಮುಸಲಮಾನ ಮತ್ತು ಕ್ರಿಶ್ಚನ್ನರಾದಂಥ ಹಿಂದಿನ ಜನರನ್ನು ಪಾವನ ಮಾಡಿಕೊಂಡು, ಪುನಃ ಹಿಂದೂ ಧರ್ಮದಲ್ಲಿ ತಕ್ಕೊಳ್ಳುವ ಕೆಲಸವು ಪೂರ್ಣ ಶ್ರದ್ಧೆಯಿಂದ ನಡೆದಿದೆ. ನಾಮಧಾರಿ ಆಗಾಖಾನರು ಕಲಿಯ ಅವತಾರವೆಂದು ಒಮ್ಮೆ ಆ ನಾಡಿನಲ್ಲಿ ಭ್ರಮೆ ಹುಟ್ಟಿಸಲ್ಪಟ್ಟಿತ್ತು. ಎಷ್ಟೋ ಜನ ಅಜ್ಞರು ಖೋಜಾ ಮುಸಲಮಾನರಾದರು. ಇಂಥವರಲ್ಲಿ ಮೂರು ಸಾವಿರ ಜನರನ್ನು ಶುದ್ಧ ಮಾಡಿಕೊಂಡರು. ಇದೇ ಪ್ರಕಾರ ೧೫೦೦ ಕ್ರಿಶ್ಚನ್ನರನ್ನು ಹಿಂದೂ ಧರ್ಮದಲ್ಲಿ ತಕ್ಕೊಂಡರು. ಹಿಂದೂ ದೇಶದ ಹಿಂದುತ್ವ ಉಳಿಯಬೇಕಾದರೆ ಮತಭ್ರಷ್ಟರಾದವರು ಆತ್ಮ ಸಂತೋಷದಿಂದ ಮರಳಿ ಮೂಲ ಧರ್ಮದಲ್ಲಿ ಸೇರುವದೇ ಮುಖ್ಯ ಮಾರ್ಗವು. ಇಂಗ್ಲಂಡದ ಮೂರು ಕೋಟಿ ಜನಸಂಖ್ಯೆಯಲ್ಲಿ ಅರ್ಧ ಜನರು ಮುಸಲಮಾನರಾದರೆ ಅದು ಕ್ರಿಶ್ಚನ್ನ ರಾಜ್ಯವೆಂದು ಎಂದೂ ಅನಿಸಲಾರದು. ಮತ್ತು ಈಗಿನಂತೆ ಧಾರ್ಮಿಕ ಶಾಂತತೆಯೂ ಉಳಿಯಲಾರದು. ಇಲ್ಲಿ ಹಿಂದೂ ಮುಸಲಮಾನ ಕಲಹವಾಗುವಂತೆ ಅಲ್ಲಿ ಕ್ರಿಶ್ಚನ್ನ ಮುಸಲಮಾನ ಕಲಹವೇಳುವದು.

ಸ್ವಾತಂತ್ರ್ಯ ದಿನೋತ್ಸವ—

ಕಾಬೂಲ ರಾಜ್ಯವು ರಶಿಯಾ ಅಥವಾ ಇಂಗ್ಲಂಡದ ಹಂಗಿನೊಳಗಿಂದ ಪಾರಾಗಿ, ಸ್ವತಂತ್ರವಾಗಿ, ಅಮೀರರಿಗೆ ಸಮ್ರಾಟ ಎಂಬ ಪದವಿ ದೊರೆತು, ಬೇರೆ ಬೇರೆ ರಾಜ್ಯಗಳಲ್ಲಿ ತನ್ನ ವಕೀಲ-ರಾಯಭಾರಿಗಳನ್ನಿಡುವ ಅಧಿಕಾರ ದೊರೆತ ದಿನಕ್ಕೆ ಕಾಬೂಲಿಗಳು ಸ್ವಾತಂತ್ರ್ಯ ದಿನವೆಂಬ ಹೆಸರಿಟ್ಟಿದ್ದಾರೆ. ಅದು ಕಳೆದ ಸೋಮವಾರ ಗನೆಯ ತಾರೀಖು ಆಗಿರುತ್ತದೆ. ಈ ಆನಂದೋತ್ಸವವನ್ನು ಕಾಬೂಲ ರಾಜ್ಯದ ತುಂಬ ಮಾಡುವದಂತೂ ಸಹಜವು. ಕಾಬೂಲದ ವಕೀಲ- ರಾಯಭಾರಿಗಳಿರುವಂಥ ಪ್ರತಿಯೊಂದು ದೇಶದಲ್ಲಿಯೂ ಉತ್ಸವ ಮಾಡಿದರು. ಕಾಬೂಲವು ಮುಸಲಮಾನ ರಾಜ್ಯವಾದರೂ, ಅದರ ವಿಷಯವಾಗಿ ಹಿಂದೂ ಜನರಿಗೆ ಬಹಳ ಅಭಿಮಾನವಿರುವದು. ಕಾಬೂಲದ ವರ್ತಮಾನಗಳನ್ನು ಪ್ರೀತಿಯಿಂದ ಓದುವರು; ಕೇಳುವರು. ಪ್ರಸ್ತುತದ ಅಮೀರರಂತೂ ಪ್ರಜಾಹಿತ ಕರ್ತವ್ಯ ದಕ್ಷರಾಗಿ, ಖಾದಿಗೆ ಮಹತ್ವ ಕೊಟ್ಟದ್ದರಿಂದಂತೂ ಹಿಂದೂ ಜನರ ಅಭಿಮಾನಕ್ಕೆ ಪೂರ್ಣ ಪಾತ್ರರಾಗಿದ್ದಾರೆ. ಹಿಂದುಸ್ಥಾನದ ಮೇರೆಯಲ್ಲಿರುವ ನೇಪಾಳವು ಸ್ವತಂತ್ರ ಸಂಸ್ಥಾನವೆನಿಸಿಕೊಂಡರೂ, ಹಿಂದೂ ಜನರು ಅದಕ್ಕಿಂತ ಕಾಬೂಲದ ಬಗ್ಗೆ ಹೆಚ್ಚು ಗೌರವ ತೋರಿಸುವರು. ಚಿಕ್ಕದಾದರೂ ರಶಿಯಾ ಮತ್ತು ಇಂಗ್ಲಂಡದಂಥ ಬಲಾಢ್ಯ ದೇಶಗಳನ್ನು ನಾಲ್ಕು ಅಂತರದ ಮೇಲಿಟ್ಟು ತನ್ನ ಸ್ವಾತಂತ್ರ್ಯ ಕಾಯ್ದುಕೊಳ್ಳುತ್ತಿರುವದೇ ಅಭಿಮಾನಪೂರ್ವಕವಾದ ಪ್ರಶಂಸೆಗೆ ಮುಖ್ಯ ಕಾರಣವು.

ಸಾಂಗಲಿ ಮತ್ತು ಗುಡಗೇರಿಯ
ನಡುವೆ
ರೇಲ್ವೆಯ ಅಪಘಾತ.

—೦—

ಪ್ರಯಾಣಿಕರು ಉಳಿದು ಬಂದರು.

ಸೋಮವಾರ ದಿವಸ ಬೆಂಗಳೂರಿನಿಂದ ಎಕ್ಸಪ್ರೆಸ್ಸ ಮೇಲ ಬಂಡಿಯು ಗುಡಗೇರಿ ದಾಟಿ, ಸಾಂಗಲಿಗೆ ಬರುತ್ತಿರುವಾಗ ದಾರಿಯಲ್ಲಿ ಒಮ್ಮೆಲೆ ಒಂದು ಧಕ್ಕೆ ಹೊಡೆಯಿತು. ಡ್ರಾಯವ್ಹರನು ಅಲ್ಲಿಯೇ ಬಂಡಿಯನ್ನು ನಿಲ್ಲಿಸಿ, ವಿಚಾರಿಸಲಾಗಿ ಪೆಟ್ರೋಲಮನ ಬಂಡಿಗೆ ಕೇಡು ಬಗೆಯಬೇಕೆಂದು ದುಷ್ಟಬುದ್ಧಿಯಿಂದ ಎರಡು ಮಗ್ಗುಲಿನ ಎರಡು ನಟ್ಟಗಳನ್ನು ತೆಗೆದು ಗಡುತರವಾದ ಮೊಳೆ ಬಡಿದಿದ್ದದ್ದು ಕಂಡುಬಂತು. ಇದೇ ಪ್ರಕಾರ ಒಂದು ಘರ್ಷಣೆಯ ತನಕ ಬಡೆದಿದ್ದರು. ಮೊಳೆಗಳು ಬಹಳ ಗಡುತರವಾಗಿ ತುಸು ಎತ್ತರವಾಗಿದ್ದರೆ ಭಯಂಕರ ಅಪಘಾತವಾಗುತ್ತಿತ್ತು. ದೇವರ ದಯೆಯಿಂದ ನೂರಾರು ಪ್ರಯಾಣಿಕರು ದೊಡ್ಡ ಸಂಕಟ ತಪ್ಪಿದರೆಂಬದು ಸಂತೋಷದ ಸಂಗತಿಯು.

ಟಿ. ಎಸ್. ಮೋಟಾರ ಸರ್ವ್ಹೀಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ॥ ೧—೨—೨೬ ರಿಂದ ರೆಗ್ಯುಲರ ಸರ್ವ್ಹೀಸ ಇಟ್ಟಿದೆ.

— ಕಾಲಕ್ರಮಗಳು —

೧.	ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
	ಬೆಳಿಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
	ಸಾಯಂಕಾಲ ೫ ಘಂಟೆ	ಬೆಳಿಗ್ಗೆ ೫ ಘಂಟೆ
೨	ಸಾಗರ ಬಿಡುವದು	ಗೋಕರ್ಣ ಸೇರುವದು
	ಬೆಳಿಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿರಸಿ
೩೦-೧-೧೯೨೬

ಎಮ್. ಮಂಜಪ್ಪಾ,
ಪ್ರೊಪ್ರಾಯಿಟರ.

ಜಾಹೀರ ನೋಟೀಸು.

ಈ ವರ್ಷ ಧಾರವಾಡ ಜಿಲ್ಲೆಯಲ್ಲಿ ನವಲಗುಂದ ತಾಲೂಕಿನ ಶಿರಕೋಳದ ಶಿವಶರಣ್ಣ ಮತ್ತು ದನಗಳ ಮತ್ತು ಕಿಲ್ಲಾರಿ ಸಾಮಾನ್ಯರ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಜರಗಲಿದ್ದದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ಮಾರಾಟವು ಆಗತಕ್ಕದ್ದದೆ ಮತ್ತು ಉತ್ತಮ ತರದ ದನಗಳನ್ನು ಪ್ರದರ್ಶನ ಕಮಿಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ಮಾರಾಟ ಮಾಡುವವರೂ ಪ್ರದರ್ಶನದಲ್ಲಿ ಇನಾಮು ಪಡೆಯಲಿಕ್ಕೆ ಇಚ್ಛಿಸುವವರೂ ಈ ಸಂಧಿಯನ್ನು ಕಳೆದುಕೊಳ್ಳಬಾರದು. ಹವಿಷು ಜಾತ್ರೆಯ ಸಿದ್ಧತೆ ಪ್ರಯತ್ನ ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨೬

ರಾಮಭಾವು ಜೋಶಿ	ಪರ್ವತಗೌಡಾ ಪಾಟೀಲ
ನವಲಗುಂದ	ತುಪ್ಪದಕುರಹಟ್ಟಿ
ವ್ಹಾಯಿಸ ಚೇರಮನ್	ಸ್ವಾಗತ ಕ. ಚೇರಮನ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕರು	೪ „
ಲೋ. ಟಿಳಕರ ಚರಿತ್ರ	೮ „
ದೇಶಬಂಧು ದಾಸರ ಚರಿತ್ರ	೩ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧। ರೂಪಾಯಿಗೆ ಕೊಡುವೆವು. ವ್ಹಿ. ಪಿ. ಖರ್ಚು ಟಪಾಲು ಖರ್ಚು ಬೇರೆ.

ವ್ಯವಸ್ಥಾಪಕರ ವಿಜಯ ಪುಸ್ತಕಾಲಯ
ಧಾರವಾಡ.

ವಿಜಯದ ವರ್ಗಣೀ ದರ

ವಿಶ್ವಪತ್ರಕ್ಕೆ

೩	ತಿಂಗಳಿಗೆ	೧೪—೧—೨ ರೂ
೬	„	೭—೦—೨ ರೂ
೩	„	೪—೦—೨ ರೂ
ಒಂದಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ಎಕೇಶ ವಾಟುತಿ ಕೆಳಗಿನ ವಿಳಾಸಕ್ಕೆ

ವ್ಯವಸ್ಥಾಪಕರ ವಿಜಯ, ಧಾರವಾಡ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಬೇನೆಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ತಂದಾ— ಹೌದು ಮೈಯಲ್ಲಾ ನೋಯುತ್ತದೆ.

ತಂದೆ— ಹಾಗಾದರೆ ಮೋಹಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೊಡ್ರಾವ ಕಿಮ್ಮತ್ತು ತೀರ ಕಡಿಮೆ. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಗಣಪತಿ ಪೆಂಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ, ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಕಜ್ಜಿ, ಗಜಕರ್ಣ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಎರಡೇ ಆಣೆ. ಪರಸ್ಥಳದವರಿಗೆ ಅಂಚೆಯವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು [illegible] ಗಣಪತಿ ಮೆಡಿಕಲ ಸ್ಟೋರ್ಸ [illegible] [illegible] ಮತ್ತು [illegible] ದೊರೆಯುವದು.

ಎಸ. ಎಮ. ಪೆಂಟರ
ಸಾಮ್ರಾಜ್ಯ [illegible] ಬೆಳಗಾವಿ

ಈ ಪತ್ರವನ್ನು [illegible] [illegible] ಇವರು [illegible] [illegible] ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಪಡಿಸಿದರು.

R. N. B 1448

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭] ಧಾರವಾಡ ಶುಕ್ರವಾರ ತಾರೀಖು ೫ನೇ ಮಾರ್ಚ ೧೯೨೬ [ಸಂಚಿಕೆ ೫೧

ಸರಕಾರದಿಂದ ಪೇಟಂಟ ದೊರೆಕಿದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಎತ್ತಿನ ಶಕ್ತಿಯಿಂದ ನಡೆಯಲ್ಪಡುತ್ತದೆ. [illegible] ನೀರನ್ನು ಎತ್ತುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ [illegible] ತನ್ನಷ್ಟಕ್ಕೆ [illegible] ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಪ್ರಕಟನೆ.

—o—

ಮಿ. ಎಸ್. ಎಸ್ ವೈದ್ಯ ಇವರು.

ಉತ್ತಮ ಗಾಯನ, ಪೇಟಿ, ವ ನಾಟಕ ಪದಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ನೋಟೀಸಿನ ದರಗಳು.

—o—

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ. ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ. ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಪಂಜಾಬ ಪ್ರಾಂತದಲ್ಲಿ ರಾಮರಾವ ದೇಶಪಾಂಡೆಯೆಂಬ ಜಮೀನದಾರರನ್ನು ಕೊಂದ ಅಪರಾಧಕ್ಕಾಗಿ ೨೦ ಜನ ಮುಸಲಮಾನರಿಗೆ ಆಜನ್ಮ ಕರೀನೀರಿನ ಶಿಕ್ಷೆಯಾಯಿತು.

ಅಧಿಕ ಚೈತ್ರ ಪ್ರಾರಂಭದ ಯುಗ ಪ್ರತಿಪದೆಯ ಹಬ್ಬವನ್ನು ರವಿವಾರವೇ ಮಾಡಬೇಕೆಂದು ಟಿಳಕ ಪಂಚಾಂಗದವರು ಗಣಿತ ಮಾಡಿ ಪ್ರಸಿದ್ಧ ಮಾಡಿದ್ದಾರೆ.

ಅಹಮದಾಬಾದಿನಲ್ಲಿ ಮಹಾತ್ಮರ ಆಶ್ರಮದ ಶ್ರೀ ಶೇಟ ಜಮನಾಲಾಲ ಬಜಾಜರ ಚಿರಂಜೀವಿಯ ವಿವಾಹವಾಯಿತು. ಪಂಡಿತ ಮೋತಿಲಾಲ, ಬಿಹಾರದ ಬಾಬು ರಾಜೇಂದ್ರಪ್ರಸಾದ ಮೊದಲಾದ ಪ್ರತಿಷ್ಠಿತರು ಸಮಾರಂಭವನ್ನು ಸುಶೋಭಿತಗೊಳಿಸಿದ್ದರು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಜಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯಲ್ಪಡುವವು. ಕಾಯಂ ಮತ್ತು ಚಾಲು ಕರಂಟ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಜಿ. ಪಡಕಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯ.

ಕಾರವಾರ ತಾ- ೫ ೩-೨೬ ನೇ ಇಸ್ವಿ

ಖೋಟಾ ಚನ್ನಬಸವೇಶ್ವರ
ಖರಾ ಚನ್ನಬಸವೇಶ್ವರ.

ಹೋದವರ್ಷ ಸಿದ್ಧಿಕ ಚನ್ನಬಸವೇಶ್ವರನೆಂಬವನು ಕರ್ನಾಟಕ ನಾಡಿನಲ್ಲಿ ಸಂಚಾರ ಮಾಡಿ, ಲಿಂಗಾಯತ ಸಮಾಜದಲ್ಲಿ ದೊಡ್ಡ ಗೊಂದಲವೆಬ್ಬಿಸಿದನು. ಇದು ದೇವರ ಚಮತ್ಕಾರವೆಂದು ಕೆಲ ಮುಸಲಮಾನ ಗೃಹಸ್ಥರು ಈತನನ್ನು ಹಿಂಬಾಲಿಸಿದರು. ಸಿದ್ದಿಕನ ಆನಿಕೆಯೋ ಮೂರ್ಖತನದ್ದಾಗಿತ್ತು. ತಾನು ಚನ್ನಬಸವೇಶ್ವರನು. ಆತನಲ್ಲಿದ್ದ ಗುರುತುಗಳು ತನ್ನಲ್ಲಿ ಉಂಟೆಂದು ಸಾರುವನು. ನಿಜವಾಗಿ ಚನ್ನಬಸವೇಶ್ವರನಾಗಿದ್ದರೆ- ಮುಸಲಮಾನ ಧರ್ಮವನ್ನು ಬಿಟ್ಟು, ಹಿಂದೂ ಆಗಬೇಕಾಗಿತ್ತಲ್ಲವೇ? ಚನ್ನಬಸವೇಶ್ವರನಾದವನು ತನ್ನ ಧರ್ಮ ಪ್ರಕಾರ ನಡೆಯಬೇಕಲ್ಲವೆ, ಪರಧರ್ಮಗಳಲ್ಲಿ ಸೇರಿರೆಂದು ಹೇಳುವದು ಅಶಕ್ಯವಾದ ಮಾತು. ಅದ್ದರಿಂದಲೇ ಈ ಸಾಕಿ ಈತನ ಆಟ ನಡೆಯದೆ, ಎಲ್ಲಲ್ಲಿಯೂ ಸ್ಥಳವಿಲ್ಲದೆ ಊರೂರು ತಿರುಗುತ್ತಿರುವನು.

ಇದು ಖೋಟಾ ಚನ್ನಬಸವೇಶ್ವರನ ಕಥೆಯಾಯಿತು. ಖರಾ ಚನ್ನಬಸವೇಶ್ವರರ ಇತಿಹಾಸವು ಬೇರೆಯಾಗಿದೆ. ಅವರು ಶ್ರೀಮಂತರು, ವಿಜಾಪುರದಲ್ಲಿ ಕರಕ ಪ್ರಖ್ಯಾತರು. ಸಾಹೇಬ ವರ್ಗದಲ್ಲಿ ಸದ್ಗೃಹಸ್ಥರು. ಆದರೆ ಖೋಜಾ ಮುಸಲಮಾನರಲ್ಲಿ ಸದ್ಗುರುಗಳು. ಇವರಿಗೆ ದೇವತ್ವ ಕೊಡಬೇಕೆಂದು ಶಿಷ್ಯರ ಹಂಬಲವು. ಹಿಂದೂ ಧರ್ಮದ ಪತ್ನಿಯು ಅವತಾರವಾಗಿದ್ದಾರೆಂದು ಶಿಷ್ಯರು ಸ್ಪಷ್ಟವಾಗಿ ಹೇಳುವರು. ಕಾಶ್ಮೀರ ಹಿಂದೂ ದೇವಾಂಶ ಸಂಭೂತರಾಗಿದ್ದಾರೆಂದು ಸಾರುವದು ನಾಸಿಕದ ಆಗಾಖಾನರಿಗೆ ಎಷ್ಟರ ಮಟ್ಟಿಗೆ ಸಮ್ಮತಿಸುವದೆಂಬುದನ್ನು ಹೇಳಲೇ ಬಲ್ಲ.

ಇಸ್ಲಾಮಿನ ಮೊಹಮ್ಮದರೆಂಬವರು ಸ್ವೈರಿಕ ಇಸ್ಲಾಮಿ ಪಂಥದ ಧರ್ಮಕ್ಕೆ ಒಳೆದಿದ್ದಾರೆ. ಪಾರ್ಸಿಗಳು ಬಾಂಧವರೂ ಸತ್ಯವೇದವೆಂದು ಹೇಳಿಕೊಟ್ಟು ಕೊಂಡ ಪ್ರಕಾರವೇ. ಸ್ವೈರಿಕ ಇಸ್ಲಾಮದಲ್ಲಿ ಸಾವಿರಾರು ಜನರು ಒಂದು ಧರ್ಮಕ್ಕೆ ಸಾಕಿದ್ದಾರೆ. ಅದರ ಮೋಕ್ಷಗಳಲ್ಲಿ " ಕಲಿಯುಗದಲ್ಲಿ ಯ ಶ್ರೀ ಕೃಷ್ಣಾವತಾರ ಮತ್ತು ಹಿಂದೂ ನಾಸ್ತಿಕ ಮಾನ ಕಾವ್ಯದ ಪ್ರಖ್ಯಾತರು- ಎಂದೂ ಕೇಳಿಕೊಳ್ಳುವ ಶ್ರೀ ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಎಂಬ ಭಗವದುಕ್ತಿಯನ್ನು ಆಡುಬಲ ಮತ್ತು ಖೋಜಾದವರಿಗೂ ಕೆಲವು ಸುಳಿಗಳನ್ನು ಕೊಟ್ಟಿದ್ದಾರೆ. ಸಿದ್ದಿಕ ಚನ್ನಬಸವೇಶ್ವರನು ಹಿಂದು ಪ್ರಾಂತದ ಧರ್ಮೋದ್ಧಾರಕನಾದರೆ- ನಾಮದಾರ ಆಗಾಖಾನರು ಭರತಖಂಡದ ಉದ್ಧಾರಕರೆಂದು ಮೇಲಿನ ಬರಹದಿಂದ ತೋರಿಸಿದ್ದಾರೆ. ಪಾಂಡರೀಕ ವಾಸುದೇವನೆಂಬವನು ಎರಡು ಕೃತ್ರಿಮ ಕೈಗಳನ್ನು ಹಚ್ಚಿಕೊಂಡು, ತಾನೂ ಪರಮಾತ್ಮನೇ ಎಂದು ಸಾರಿ ಕೊಳ್ಳುತ್ತಿದ್ದನು ಅದೇ ಪ್ರಕಾರ ನಾಮದಾರ ಆಗಾಖಾನರ ಕೃಷ್ಣಾವತಾರವಾಗುತ್ತದೆ.

ಇಷ್ಟೇ ಅಲ್ಲದೆ, ಇನ್ನೂ ಅನೇಕ ಅಪ್ರಯೋಜಕ ಮತ್ತು ಉಪಹಾಸಕ್ಕೆ ಕಾರಣವಾದಂಥ ಪುಸ್ತಕಗಳನ್ನು ಬರೆದಿರುತ್ತಾರೆ. ನಿಷ್ಕಲಂಕ ಗೀತಾ, ಕೃಷ್ಣವಾಣಿ, ಸತ್ಪಂಥ ಶಾಸ್ತ್ರ ಮುಂತಾದವುಗಳಲ್ಲಿ ನಾಮದಾರ ಆಗಾಖಾನರೆಂದರೆ- ಪ್ರತ್ಯಕ್ಷ ದೇವರೆಂದು ತೋರಿಸಿದ್ದಾರೆ. ಇದಕ್ಕೆ ಬಲಾಢ್ಯವಾಗಿ ಇವರು ಪೈಗಂಬರರ ಕಲಿಯುಗದ ಅವತಾರ ಪುರುಷರೆಂದಿದ್ದಾರೆ. ದಶಾವತಾರಗಳಲ್ಲಿ ಅಲ್ಲಾನು ಹತ್ತನೇ ಅವತಾರವೆಂದು ಪುನಃ ಪುನಃ ಹೇಳಿದ್ದಾರೆ. ತಮ್ಮ ಶಿಷ್ಯರು ಈ ತರಹವಾಗಿ ಮಾಡುವ ಹುಡುಗಾಟಿಕೆಯನ್ನು ನಿಷೇಧಿಸಿ, ಉಚ್ಛ್ರುಂಖಲರಾಗದಂತೆ ಅವರನ್ನು ಬಂದು ಕಟ್ಟಿ ಹಾಕುವದು ನಾಮದಾರರ ಅವಶ್ಯವಾದ ಕರ್ತವ್ಯ ಕರ್ಮವಾಗಿರುತ್ತದೆಂದು ತಿಳಿಯುತ್ತೇವೆ.

ರೊಟ್ಟಿ ಬೇಡಿದವರಿಗೆ ಕಪಾಳಕ ದೊರೆಯಿತು.

ಬರೋಡೆ ರಾಜ್ಯಕ್ಕೆ ಸೇರಿದ ನವಸಾರಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಇಂಗ್ಲಿಷ ಶಾಲೆಗಳ ಫೀಯನ್ನು ಇಮ್ಮಡಿಸಿದ್ದಾರೆ. ಅಮರೇಲಿಯ ವಿದ್ಯಾರ್ಥಿಗಳು, ದರಬಾರದ ಕೃತ್ಯವನ್ನು ನಿಷೇಧಿಸಿ, ಸತ್ಯಾಗ್ರಹ ಮಾಡಿ ಶಾಲೆ ಬಿಟ್ಟರು. ಉಳಿದ ಊರುಗಳ ಒಡೆಯರು ಇವರನ್ನು ಅನುಸರಿಸಿದರು. ಆದರೆ ಅವರ ಸಂಪು ಅತ್ಯ ವಾರ ಚಿಕಿತ್ಸಾಕಾರರು ಒಂದು ವಾರ ಕೂಡ ಕಡೆಯಲಿಲ್ಲ ನಡೆಯಲಿಲ್ಲ. ಮುಖ್ಯತಃ ಪಾಂಡ್ಯಾ ಹುಡುಗರು ಅಮರೇಲಿಯ ಮುಸಲ್ಮಾನ ವಿದ್ಯಾರ್ಥಿಗಳು ಹಿಡಿದ ಹಟವನ್ನು ಬಿಟ್ಟಿರಲಿಲ್ಲ.

ಶ್ರೀ ಗಾಯಕವಾಡ ಮಹಾರಾಜರು ಶಮತ್ಕಾರ ಸ್ಟೇಶನದ ಮಾರ್ಗವಾಗಿ ಹೋಗುತ್ತಿದ್ದಾಗ ವರ್ತಮಾನ ಕೇಳಿ, ಅಲ್ಲಿಗೆ ಹೋದರು. ಸಾಯಂಕಾಲದ ಸಮಯ; ಬಂದಿಯ ಇಸ್ಥ ದರ್ಬಾರ ವಾಗಿಲೇ ಕೆಲವು ಸೈನಿಕ ನಿಂತರು. ಧಡ ಸೂಚಿಕ ಊರಿಯನ್ನೆಬ್ಬಿಸಿ, ಬಂದಿಯನ್ನು ತಿರಿ. ಮಹಾರಾಜರ ಸನ್ನಿಧಿಗೆ ಹೋದರು. ಆದರೆ ಅವರು ವಿದ್ಯಾರ್ಥಿಗಳ ಕೂಡ ಏನೂ ಸಮಾಧಾನದ ಮಾತುಗಳನ್ನಾಡಲಿಕ್ಕೆ ಕೂಡ ಇಷ್ಟಪಡಲಿಲ್ಲ. ಡ್ರಾಯವ್ಹರನು ಕೂಡಲೇ ತೀಸದಬಿಟ್ಟು, ಬಂಡಿ ಬಿಟ್ಟನು. ರೈಲುಗಳ ಮೇಲೆ ಹಿಂತ ಹುಡುಗರ ಮೇಲೆ ಓಡಿ ಬರುವ ಭಯ ತೋರಿತು. ಇವರು ಕಾಸು ಕರಿದ ಕೂಡಲೆ, ಘಂಟೆಯಿಂದ ಬಿಟ್ಟನು.

ಆದರೂ ವಿದ್ಯಾರ್ಥಿಗಳು ಮೂರು ಮೈಲಿನ ತನಕ ಬಂಡಿಯ ಬೆನ್ನು ಬಿಡದೆ, ಅದರಷ್ಟೇ ವೇಗದಿಂದ ಓಡಿದರು. ಸ್ಟೇಶನಕ್ಕೆ ಬಂದ ಕೂಡಲೆ ಪೋಲೀಸರು ಇವರನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದರು. ಮಹಾರಾಜರು ಮುಂದೆ ಸಾಗಿದರೂ ಮೂರು ತಾಸುಗಳ ವರೆಗೆ ಇವರನ್ನು ಬಿಡದೆ ರಾತ್ರಿ ಹತ್ತರ ಸುಮಾರಕ್ಕೆ ಹೋಗಗೊಟ್ಟರು. ತಮ್ಮ ಫೀ ಕಡಿಮೆಯಾಗಬೇಕೆಂದು ಬೇಡಿಕೊಳ್ಳಲು ಹೋದವರಿಗೆ ಲಾಕಪ್ಪಿನ ಪ್ರಸಾದ ದೊರೆಯಿತು!!

ಕುಡುಕರ ಕಯ್ಯೇ ಮೇಲು —

ಪಂಜಾಬದ ಕೌನ್ಸಿಲದಲ್ಲಿ ಮದ್ಯಪಾನವನ್ನು ಪೂರಾ ನಿಲ್ಲಿಸಬೇಕೆಂಬ ಠರಾವು ಬಂತು. ಆದರೆ ಅದಕ್ಕೆ ಸರಕಾರದಿಂದ ದೊರೆತ ಉತ್ತರವು ಪ್ರಜಾಹಿತೈಷಿಗಳ ಕರ್ತವ್ಯ ಪರಂಪರೆಗೆ ಎಷ್ಟು ಕೇಡುಗೇಡಿಯವಾಗಿರುತ್ತದೆಂಬದನ್ನು ತೋರಿಸಿತು. ಆ ಠರಾವಿಯಲ್ಲಿ ಇನ್ನೂ ದು ಮನ್ನಿಸಿ ಪಾಠಶಾಲೆಗಳ ಲೋಕಲ ಅಪ್ಷನ ಬೇಡಿದ್ದರ ರೀ; ಇವುಗಳಲ್ಲಿ ಅಂಗಡಿಗಳನ್ನು ಬಂದು ಮಾಡಬೇಕೆಂದು ಸರಕಾರದ ನ್ನು ಕೇಳಿ ಕೊಂಡದ್ದು ಏಕೇ ಏನು!!

ದಿವಾನಗಿರಿಯ ತಕ್ಕ —

ಇಂದೂರಿನಲ್ಲಿ ಸರದಾರ ಬಾಪಣ್ಣಾ ಸಾಹೇಬ ಮನೇಕಾರಿದವರು ಎಂಕ ಪರಂಪರೆಯಿಂದ ದಿವಾನ ಮನೆತನದವರು. ರಾಜ್ಯಕಾರಭಾರ ನಡೆಸಲಿಕ್ಕೆ ಬೇಕಾದ ಗುಣಗಳನ್ನು ಪಡೆದವರಾಗಿ ಇಂದಿಗೆ, ಮಹಾರಾಜರು ಪರಭಾರೆ ಇವರಿಗೆ ದಿವಾನಗಿರಿಯ ವಸ್ತ್ರಕೊಡಲಿಲ್ಲ. ಬಾಪಣ್ಣಾ ಸಾಹೇಬರ ಮನಸ್ಕಾರ ಕಷ್ಟ ಮೋಟಾರ ವಸ್ತ್ರಗಳನ್ನು ಕೊಡಬೇಕು. ಒಳ್ಳೆ ಅನ್ಯಾಯ ದಿವಾನರಿಗೆ ಒಪ್ಪಿಸುವಂತೆ ಪತ್ರ ಹಿಂಡಿತು. ಇದಿವು ದಿವಾನರೇ ಸೈ.

ಸಾಹೇಬರಿಗೆ ಶಿಕ್ಷೆ—

ಸಿಮುಲಾದಲ್ಲಿ ಒಬ್ಬ ಬೀಗಾ ಕೊಲೆಯನ್ನು ಕೊಂಡ ಬಗ್ಗೆ ನ್ಯಾಯಾಧೀಶರು ಕೈದೆಂಟು ಶಿಕ್ಷೆ ಹಾಗು ನಾಲ್ಕು ಸಾವಿರ ರೂಪಾಯಿ ದಂಡವಾಯಿತು. ನಾಲ್ಕು ಸಾವಿರದಲ್ಲಿ ಎರಡು ಸಾವಿರವನ್ನು ಬ್ಯಾಂಕಿನಲ್ಲಿಟ್ಟು, ಅದರ ಬಡ್ಡಿಯನ್ನು [illegible] ಪೋಷಣೆಗೆ ಕೊಡಬೇಕೆಂದು [illegible] ಶಿಕ್ಷೆ ವಿಧಿಸಿದ್ದಾರೆ. ಯುರೋಪಿಯನ್ ಅಧಿಕಾರಿಗಳು ಸೊಟ್ಟ ನೆವಗಳಿಂದ ಪಾರಾಗುತ್ತಿದ್ದರು. [illegible] ವಿಧಿಸಿದ ಶಿಕ್ಷೆ, ಆ ನರ ಹತ್ಯೆಗೆ ತಕ್ಕಂಥ ಭಾರೀ ದಂಡ, ಆ ದಂಡದಲ್ಲಿ ಅರ್ಧ ಭಾಗವು ವ್ಯಕ್ತಿಯ ಮನೆತನದವರ ಪೋಷಣೆಗಾಗಿ [illegible] ಹೊಸ ಪದ್ಧತಿಯ [illegible] ಕೇಳಿ, ಯುರೋಪಿಯನ್ನರು ಮದಾಂಧತೆಯಿಂದ [illegible] ಎಂದು ಅನ್ನಬೇಕಾಗುತ್ತದೆ.

ನಿರಾಹಾರಕ್ಕೆ ಹೆದರುವದಿಲ್ಲ !!

ವಂಗಾಲೆಯ ತುರಂಗದಲ್ಲಿ ನಿರಾಹಾರದ ಸತ್ಯಾಗ್ರಹ [illegible] ಶ್ರೀ ಬೋಸ ಮೊದಲಾದವರು ನಡೆಸಿದ [illegible] ಅವರು ಸತ್ತರೂ ಚಿಂತಿಲ್ಲ; ಸರಕಾರಕ್ಕೆ [illegible] ಸರ ಮುದಿಮನ್ನರು ಅಸೆಂಬ್ಲಿಯಲ್ಲಿ ಭಾಷಣ ಮಾಡಿದ್ದಾರೆ. ಐರ್ಲಂಡದಲ್ಲಿ [illegible] ಸ್ವಿನಿಸಾಹೇಬನು ೭೦ ದಿವಸ ನಿರಾಹಾರ ಮಾಡಿ ಪರಲೋಕವಾಸಿಯಾದನು. ಸ್ವೀನೀ ಸಾಹೆಬನು ಸತ್ತರೂ ಐರ್ಲಂಡದ ಸ್ವರಾಜ್ಯದ ದಾ [illegible] ಯಿತು. ಸರಕಾರವು [illegible] ಹೆದರಿದ್ದರೆ, ಮುಂದಾಗುವ ಪರಿಣಾಮಕ್ಕಾದರೂ ಹೆದರಬೇಕಾಗುತ್ತದೆ. ಹೆದರುವದಿಲ್ಲೆಂಬ ಮಾತು ಎದ್ದಲಿ ಹುರುಳಿಲ್ಲೆಂಬದು ಸ್ಪಷ್ಟ.

ಶ್ರೀ ಸತ್ಯಮೂರ್ತಿಯ ಉಮೇದವಾರಿಯು—

ಶ್ರೀ. ಸತ್ಯಮೂರ್ತಿಯವರು ಮದ್ರಾಸದ ವಿಶ್ವವಿದ್ಯಾಲಯದ ಪರಿಯಿಂದ ಕೌನ್ಸಿಲ ಮೆಂಬರರಾಗಿದ್ದಾರೆ; ಶ್ರೀ ಶ್ರೀನಿವಾಸ ಸ್ವಾಮಿನಾಥನರೆಂಬವರು ಕಾಂಗ್ರೆಸದ ಧ್ಯೇಯದ ಪ್ರಕಾರ ನಡಿಯುವೆವೆಂದು ಸ್ವರಾಜ್ಯ ಪಕ್ಷದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರರ ಮುಂದೆ ಶಪಥ ಮಾಡಿದ್ದರಿಂದ, ಇವರ ಪರಿಯಿಂದ ಶ್ರೀ. ಸತ್ಯಮೂರ್ತಿಯವರು ಕೌನ್ಸಿಲ ಚುನಾವಣೆಗೆ ನಿಲ್ಲುವದನ್ನು ರಹಿತ ಪಡಿಸಿದ್ದಾರೆ. ಅಸೆಂಬ್ಲಿಯ ಚುನಾವಣೆಯಲ್ಲಿ ಉಮೇದವಾರರಾಗಿರುವರು. [illegible] ಸ್ಥಾನ [illegible] ಗಳನ್ನು ನೋಡಿದರೆ ಆ ಚುನಾವಣೆಯಲ್ಲಿ ಇವರ

ಪಕ್ಷದ ಜಯವಾಗುವದೆಂದು ಸ್ಪಷ್ಟವಾದ ಚಿಹ್ನೆಗಳು ತೋರುತ್ತಿರುವವು.

ನಾಯಿಯೆಂತೆ ಬೊಗಳುವರು.

ಹಿರಿಯರನು ಕಿರಿಯನನ್ನು ಕಂಡರೆ ನಾಯಿಯಂದೆ ಬೊಗಳುವದೆಂದು ಸುದ್ದಿಯುಂಟು. ಅದೇ ಪ್ರಕಾರ ಒಂದು ಬ್ಯಾಂಕಿನ ಉತ್ಕರ್ಷವಾದರೆ ಅದನ್ನು ಮುರಿಯಬೇಕೆಂದು ಕೆಲ ಬ್ಯಾಂಕುಗಳೂ, ಜನರೂ ಇಲ್ಲದ ಸಲ್ಲದ ಕೃತ್ಯಗಳನ್ನು ಮಾಡುವದು ಮುಂಬಯಿಯಲ್ಲಿ ನಡೆದಿದೆ. ಸದ್ಯದಲ್ಲಿ ಸೆಂಟ್ರಲ ಬ್ಯಾಂಕಿನ ಮೇಲೆ ಸಂಕ್ರಾಂತಿ ತರುವ ಹೀನ ಪ್ರಯತ್ನವು ಹಿಂದೆ ಒಮ್ಮೆಯಾಗಿ ಅದೇ ಪ್ರಕಾರ ಮತ್ತೆ ನಡೆದಿದೆ. ನಾಮದಾರ ಗವ್ಹರ್ನರ ಸಾಹೇಬರು ಇಂಥ ಕೃತ್ಯವನ್ನು ಧಿಕ್ಕರಿಸಿ, ಬ್ಯಾಂಕಿನ ಬೆಳವಣಿಗೆಗೆ ಅವಶ್ಯವಾದ ಸಹಾಯ ಮಾಡುವಂತೆ ಆಶ್ವಾಸನ ಕೊಟ್ಟಿದ್ದಾರೆ. ಸ್ಪೇಶೀ ಬ್ಯಾಂಕು ದಿವಾಳಿ ತೆಗೆದು ಮುನಿಸಿಪಲ ಸರಯ್ಯಾಯನರು ಪರಲೋಕವಾಸಿಯಾದದ್ದು ಜನರ ಸ್ಮರಣೆಯಿಂದ ಹೋಗುವಂತಿರುವದಿಲ್ಲ.

ಲೋಕಪ್ರಿಯರಾರು!

ಹಿಂದುಸ್ಥಾನದಲ್ಲಿ ಹೆಸರಾದ ಲೋಕಪ್ರಿಯರಾರೆಂಬದನ್ನು ಪರೀಕ್ಷಿಸುವದಕ್ಕಾಗಿ ಕಲಕತ್ತೆಯ ಇಂಗ್ಲಿಷಮನ್ನ ಪತ್ರಿಕೆಯು ಪಂದ್ಯದ ಜಾಹೀರಾತನ್ನು ಮುದ್ರಿಸಿದೆ. ಈ ಪಂದ್ಯದಲ್ಲಿ ಸೇರತಕ್ಕವರು ಬರೆದು ಕಳಿಸಿದ ಹೋಟುಗಳ ಗಣತಿಯ ನಂತರ ಮೊದಲನೇ ನಂಬರು ಬಂದವರಿಗೆ ಹತ್ತುಸಾವಿರದ ತನಕ ಇನಾಮು ದೊರೆಯುವದು. ಇನಾಮುಗಳ ರಕಮು ೪೦ ಸಾವಿರ ರೂಪಾಯಿ ಇರುವದು. ಆದರೆ ಎಲ್ಲವೂ ನಗದು ಇರುವದಿಲ್ಲ. ಏಳು ಮೋಟಾರುಗಳೂ, ಕೆಲವು ಮೋಟಾರ ಸಾಯಿಕಲಗಳೂ ಉಂಗುರ ಮುಂತಾದ ಬೇರೆ ಇನಾಮುಗಳೂ ಇರುವವು. ಪಂದ್ಯದಲ್ಲಿ ಸೇರತಕ್ಕವರು ಬಂಗಾಲ ಇಲಾಖೆಯವರೇ ಆಗಿರಬೇಕು.

ಸ್ಮರಣಶಕ್ತಿಯು.

ಸರ ಮುದಿಮನ್ನರು ಅಸೆಂಬ್ಲಿಯಲ್ಲಿ ಹಿಂದುಸ್ಥಾನದ ಆದಾಯವೆಚ್ಚದ ಪತ್ರಿಕೆಯನ್ನು ಓದುತ್ತಿರುವಾಗ, ಕೌನ್ಸಿಲ ಆಫ ಸ್ಟೇಟದಲ್ಲಿ ಮಿ ಮ್ಯಾಕವಾಟರ ಸಾಹೇಬರು ಅದನ್ನೇ ಬಾಯಿಪಾಠ ಹೇಳುತ್ತಿದ್ದರು. ಇವರ ಭಾಷಣವು ೪೫ ಮಿನಿಟುಗಳ ಪರ್ಯಂತವು ನಡೆಯಿತು. ಈ ಅವಧಿಯಲ್ಲಿ ಕೋಟಿ, ಲಕ್ಷ, ಎಂಬ ಅಂಕಿಗಳು ಬೇರೆ ಬೇರೆಯಾಗಿ ಬರುತ್ತಿದ್ದರೂ, ಅವೆಲ್ಲ ಸ್ಮರಣಶಕ್ತಿಯಿಂದ ತಪ್ಪದೆ ಉಚ್ಚರಿಸುತ್ತಿದ್ದರು.

ಚೀಣದಲ್ಲಿಯ ಸಂಕಟ.

ಚೀನದಲ್ಲಿ ಕಾರ್ಮಿಕರ ಸಂಪಿನ ಧೂಮಧಾಮಾಗ್ನಿ ನಡೆಯುತ್ತಿದೆ. ಶ್ಯಾಂಘಾಯದಲ್ಲಿ ಬಟ್ಟೆಯ ಗಿರಣಿಯಲ್ಲಿ ಕೆಲಸ ಮಾಡುತ್ತಿರುವ ೪೫೦೦೦ ಕೂಲಿಕಾರರು ಸಂಪು ಮಾಡಿ, ಗಿರಣಿಯ ಕಾರಖಾನೆಗಳನ್ನು ಕೆಡಿಸಿ, ಯಂತ್ರಗಳನ್ನು ನಾಶ ಮಾಡಿದರು. ಇದರ ಸಂಕಟವು ಪರದೇಶಿಯರ ಬೇರೆ ಗಿರಣಿಗಳಿಗೂ ಮುಟ್ಟುವ ಭಯವಾಗಿದೆ. ಚೀನ ಮತ್ತು ಪರದೇಶದ ಪೋಲೀಸರು ಶಾಂತತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಲಿದ್ದಾರೆ.

ಸ್ಪೇನದ ಸ್ವಾಭಿಮಾನ.

ರಾಷ್ಟ್ರಸಂಘದಲ್ಲಿ ಜರ್ಮನಿಯನ್ನು ಸೇರಿಸಿಕೊಂಡು, ಆದಕ್ಕೊಂದು ಸ್ಥಳವನ್ನು ಧ್ರುವ ಪದದಾಯಿಂತೆ ಕೊಡುವದನ್ನು ಕಂಡು, ಪೋಲಂಡ, ಬೆಲ್ಜಿಯಮ, ಸ್ಪೇನ ಮೊದಲಾದ ಪಿಲಾಯಿತಿಯ ಬೇರೆಗಳು, ಚೀನ ಇವರಾಗಳೂ ತಮಗೂ ಒಂದೊಂದು ಶಾಶ್ವತ ಸ್ಥಳಬೇಕೆನ್ನಲಾರಂಭಿಸಿವೆ. ಸ್ಪೇನಕ್ಕೆ ಶಾಶ್ವತ ಸ್ಥಳ ದೊರೆಯದಿದ್ದರೆ ಅದರಲ್ಲಿ ಸ್ವದೇಶಾಭಿಮಾನವೇ ಇಲ್ಲೆಂದು ತೋರಿಸಿದಂತಾಗುತ್ತದೆಂದೂ ಇದು ಮಾನದ ಪ್ರಶ್ನವಾಗಿದೆಂದೂ ಆ ದೇಶದ ಲೋಕಸಭೆಯವರು ಜಾಹೀರ ಮಾಡಿದ್ದಾರೆ.

ದಂಡಿನ ಕಮಿಟಿಯು ಈ ದೇಶದಲ್ಲಿ ಸಾಕ್ಷಿಗಳನ್ನು ತಕ್ಕೊಳ್ಳುವ ಕೆಲಸ ಮುಗಿಸಿತು. ವಿಲಾಯತಿಗೆ ಹೋಗಿ, ಅಲ್ಲಿ ಈ ಸಂಬಂಧವಾದ ಕಾಗದಪತ್ರಗಳನ್ನು ನೋಡಿಕೊಂಡು ಕೆಲವು ಸಾಕ್ಷಿಗಳನ್ನು ತಕ್ಕೊಳ್ಳುವರು. ಪಂಡಿತ ಮೋತೀಲಾಲರು ಈ ಕಮಿಟಿಯ ಕೂಡ ವಿಲಾಯತಿಗೆ ಹೋಗುವರು.

ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀ ಜನರ ಕಷ್ಟ ಸಂಕಟಗಳ ನಿವಾರಣೆಯಾಗಬೇಕಾದರೆ ದೇವರೇ ದಯಮಾಡಬೇಕು. ಮನುಷ್ಯರ ಆ ಪ್ರಯತ್ನ ಹೋಗುವದೆಂದು ಮಿ ಆಂಡ್ರೂ ಜನಾಬರು ಶ್ರೀ. ಬನಾರಸಿದಾಸ ಚತುರ್ವೇದಿಯವರಿಗೆ ಪತ್ರದಿಂದ ತಿಳಿಸಿದ್ದಾರೆ.

ಕರ್ನಾಟಕ ಹೊಸಬರಾದವರು ನಿವಾಸದ [illegible] ಪದವಿಂದ ೧ ನೆ ಕೌನ್ಸಿಲರರಾದ ಶ್ರೀ ಕೆ. ಬಿ. [illegible] ನಿವಾಸ ಅಯ್ಯಂಗಾರರು ಕೆಲಸದಿಂದ ನಿವೃತ್ತರಾದರು. ಸರ [illegible] ಸಾಹೇಬರು [illegible] ಕಾರ್ಯಭಾರಿಯಾಗುವರು. [illegible] ನೇಮಕವಾದ ವ್ಯಕ್ತಿಯು ಸ್ವರೂಪವು.

ಟಿ. ಎಸ್. ಮೋಟಾರ ಸರ್ವ್ಹಿಸ ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೨—೨೬ ರಿಂದ ರೆಗ್ಯುಲರ ಸರ್ವ್ಹಿಸ ಇಟ್ಟಿದೆ.

—: ಕಾಲಕ್ರಮಗಳು :—

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨ ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಶಿಮೋಗಾ
೩೦-೧-೧೯೨೬

ಎಮ್. ಮಂಜಪ್ಪಾ,
ಪ್ರೊಪ್ರಾಯಟರ.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಬೇನೆಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಪ್ಪನು— ತಂದೆ— ಹೌದು ಮೈಯೆಲ್ಲಾ ನೋಯುತ್ತದೆ.

ತಂದೆ— ಹಾಗಾದರೆ ಮೊಮೆಂಟ ಕ್ಯೂರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ತಿನ್ನುತ್ತ ತೀರ ಕುಡಿ. ಎರಡೇ ಆಣೆ.

ನಮ್ಮಲ್ಲಿ ಲೋಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಶ್ರೀ ಸರಸ್ವತಿ ಮೆಡಿಕಲ ಸ್ಟೋರ್ಸ, ಕೆಮಿಸ್ಟ್ಸ ಎಂಡ ಡ್ರಗಿಸ್ಟ್ಸ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ
ಅಥವಾ
ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗರ್ಮಿ ಯಹಜ್ಜಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪತ್ರ ಬರೆದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು— ಶ್ರೀ ಸರಸ್ವತಿ ಮೆಡಿಕಲಸ್ಟೋರ್ಸ, ಸ್ಟೇಶನ ರೋಡ ಹುಬ್ಬಳ್ಳಿ. ಕೋಟಿ ಮತ್ತು ಕಿರಾಣಿ ದುಕಾನ ದೊರೆಯುವದು.

ಎಸ್. ಎಮ್. ಸೊಟರ
ಮಹೇಂದ್ರಪುರ ಬೆಳಗಾವಿ

ಜಾಹೀರ ನೋಟೀಸು

ಈ ವರ್ಷ ಯಮನೂರ ಜಾತ್ರೆಯಲ್ಲಿ ನವಲಗುಂದ ತಾಲೂಕಿನ ಲೋಕಲ ಬೋರ್ಡಿನವರಿಂದ ಮತ್ತು ದನಗಳ ವ ಕೃಷಿಕರ ಸಾಹಿತ್ಯದ ಪ್ರದರ್ಶನವು ಬರುವ ಮಾರ್ಚ ತಿಂಗಳಲ್ಲಿ ತಾರೀಖು ೪-೫-೬ ಈ ಮೂರು ದಿವಸ ಆಗತಕ್ಕದ್ದಿದೆ. ಮತ್ತು ಸದರ ಜಾತ್ರೆಯಲ್ಲಿ ದನಗಳ ವ್ಯಾಪಾರವು ಆಗತಕ್ಕದ್ದಿದೆ. ಮತ್ತು ಉತ್ತಮ ತರದ ಜಾನವರುಗಳಿಗೆ ಪ್ರದರ್ಶನ ಕಮೀಟಿಯಿಂದ ಯೋಗ್ಯವಾದ ಇನಾಮು ಸಹ ಕೊಡಲ್ಪಡುತ್ತದೆ. ದನಗಳ ವ್ಯಾಪಾರಿಗಳು ಮಾಲಕರು ಪ್ರದರ್ಶನದಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ವಿನಂತಿಸುವದಲ್ಲದೆ ಈ ಸಂಧಿಯನ್ನು ಕಳಕೊಳ್ಳಬಾರದು. ಹವೆಯು ಉತ್ಕೃಷ್ಟವಿದ್ದು ನೀರಿನ ವ್ಯವಸ್ಥೆಯು ಬೇಕಾದಷ್ಟು ಇರುತ್ತದೆ.

ನವಲಗುಂದ ತಾ. ೧೫-೨-೨೬

ರಾಮಭಾವು ಜೋಶಿ	ಪರ್ವತಗವಡ ಪಾಟೀಲ
ನವಲಗುಂದ	ಹುಬ್ಬದರಕಟ್ಟಿ
ವ್ಹಾಯಿಸ ಚೇರಮನ್	ಸ್ವಾಗತ ಕ. ಚೇರಮನ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕಟ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ೧೦ ಆಣೆಗಳಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ವ್ಯವಸ್ಥಾಪಕರ ವಿಜಯ ಪುಸ್ತಕಾಲಯ
ಧಾರವಾಡ.

ವಿಜಯದ ವರ್ಗಣೀ ದರ

ವಿಜಯಪತ್ರಿಕೆ

೧೨ ತಿಂಗಳಿಗೆ		೧೨—೮—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ವಾರಪತ್ರಿಕೆ	೧ ವರ್ಷಕ್ಕೆ	೩—೧೨—೦ ರೂ

ಎರಡೂ ಪತ್ರಿಕೆ ಕೂಡಿ ಎರಡುಪತ್ರಿಕೆ

ವ್ಯವಸ್ಥಾಪಕರು ವಿಜಯ, ಧಾರವಾಡ

ಈ ಪತ್ರವನ್ನು ಧಾರವಾಡ ಬೀಡಕ ಯರ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಪಡಿಸಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಶನಿವಾರ ತಾರೀಖು ೭ನೇ ಮಾರ್ಚ ೧೯[illegible] | ಸಂಚಿಕೆ [illegible]

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಲಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

[illegible]

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಪ್ರಕಟನೆ.

—೦—

ಬಿ. ಎಸ್. ಎಸ್ ವೈದ್ಯ ಇವರು.

ಉತ್ತಮ ಗಾಯನ, ಪೇಟಿ, ವ ನಾಟಕ ಸಹಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ ಧಾರವಾಡ

ಹೊಸ ಚಂದಾದಾರರಿಗೆ ರಿಯಾಯತಿ (?)

—೦—

[illegible]

ವ್ಯವಸ್ಥಾಪಕ ವಿಜಯ ಧಾರವಾಡ

ಬಂಗಾಲದ ಪಬ್ಲಿಕ ಸೇಫ್ಟಿ ಕಾಯದೆಯನ್ನು ರದ್ದು ಮಾಡುವ ಠರಾವು ಬಂದಾಗ ನೀವೇಕೆ ಅಸೆಂಬ್ಲಿಯಲ್ಲಿರಲಿಲ್ಲ ಕಾರಣ ಹೇಳಿರೆಂದು ನಾಗಪೂರದ ಸ್ವರಾಜ್ಯ ಸಂಘದವರು ಬ್ಯಾ. ಅಭ್ಯಂಕರರಿಗೆ ಜವಾಬು ಕೇಳಿದ್ದಾರೆ.

ಮುಂಬಯಿಯ ಯುನಿವರ್ಸಿಟಿಯಲ್ಲಿ ಸ್ತ್ರೀಯರಿಗಾಗಿ ಸ್ವತಂತ್ರವಾದ ಇಂಗ್ಲಿಷ ಕಾಲೇಜವಿರಬೇಕೆಂಬ ಠರಾವು ಬಂದಿತ್ತು. ಆದರೆ ಅದಕ್ಕೆ ಬಹುಮತ ದೊರೆಯಲಿಲ್ಲ.

ಇಂಗ್ಲಂಡದಲ್ಲಿ ಮಜೂರರು ಪ್ರಬಲರಾಗುತ್ತಿದ್ದು, ಅವರು ಆದಷ್ಟು ಬೇಗ, ಪಾರ್ಲಮೆಂಟ ಸಭೆಗೆ [illegible] ರುತ್ತಿರುವರು. ಇಲ್ಲಿಯ ರಾಜನೀತಿ [illegible] ಹೊಸ ಕಲಹ [illegible] ನಡೆದಿದೆ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಉಳಿಯುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೆಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುವದು. ಕ್ಯಾಶೀವ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯ.

ಧಾರವಾಡ ತಾ- ೬-೩-೩೭ ನೇ ಇಸ್ವಿ

ಕಾರ್ಡ ಪಾಕೀಟುಗಳ ದರ ಹಾಗೇ ಉಳಿಯಿತು.

ಅಸೆಂಬ್ಲಿಯಲ್ಲಿ ಆದಾಯ ವೆಚ್ಚದ ಪತ್ರಿಕೆಯು ಪ್ರಸಿದ್ಧವಾಗುವ ಪೂರ್ವದಲ್ಲಿಯೇ ಕೆಲ ಮೆಂಬರರು ಕಾರ್ಡ- ಪಾಕೀಟುಗಳ ದರವನ್ನು ಮೊದಲಿನಂತೆ ಮೂರು ಕಾಸು, ಆರು ಕಾಸು ಮಾಡಬೇಕೆಂಬ ಠರಾವನ್ನು ತರಬೇಕೆಂದಿದ್ದರು. ಬಜೆಟ್ಟ ಬಂಲಿ; ಉಳಿತಾಯ ನೋಡಿ, ಈ ಬಗ್ಗೆ ಠರಾವು ತರಬೇಕೆಂದು ಕೆಲವರು ಸೂಚಿಸಿದರು. ಬಜೆಟ್ಟು ಬಂತು. ಅದರಲ್ಲಿ ಸರ ಬ್ಲೆಕೆಟಸಾಹೇಬರು ಪೋಸ್ಟ ಖಾತೆಯ ಭಾಗದಲ್ಲಿ ಹೇಳಿದ ವಿಚಾರವು ಮೆಂಬರರ ಪೂರಾ ನಿರಾಶೆ ಮಾಡಿತು. ದರವನ್ನು ಮೊದಲಿನ ಸ್ಥಿತಿಗೆ ತರುವದು ಮುಂದೆರಡು ವರ್ಷಗಳಲ್ಲಿ ಮಾತ್ರವಲ್ಲ; ಎಷ್ಟೋ ವರ್ಷಗಳ ಪರ್ಯಂತರ ಶಕ್ಯವಲ್ಲೆಂದು ಸಾಹೇಬರು ನಿರ್ಧರದಿಂದ ಹೇಳಿದ್ದಾರೆ. ದರವನ್ನು ಏರಿಸುವಾಗ ಇದು ಲೆಕ್ಕ ಬಾಯುಗೂಡುವ ತನಕ ಎಂದು ಭಾಷೆ ಕೊಟ್ಟಿದ್ದರು. ಆ ಭಾಷೆಯು ಕೋರ್ಟಿನಲ್ಲಿ ಅಗೆ ಮಾಡಿ, ಸಾಕ್ಷೀ ನುಡಿಯುವಂತಾಯಿತು. ದರ ಕಡಿಮೆ ಮಾಡಬೇಕಾದರೆ- ಕೈಕರ ಮೇಲೆ ಬೇರೆ ಕರ ಕೂಡಿಸಬೇಕಾದೀತೆಂಬ ಬೆದರಿಕೆಯನ್ನು ಹಾಕಿದ್ದಾರೆ. ಅಸೆಂಬ್ಲಿಯಲ್ಲಿ ಈ ಬಗ್ಗೆ ಠರಾವು ತರಬಾರದೆಂದು ಮುಂದಾಗಿ ಎಚ್ಚರಿಕೆಯ ಮಾತನ್ನು ಹೇಳುವ ಮುತ್ಸದ್ದಿತನವು.

ದರ ಹೆಚ್ಚು ಮಾಡಿದ್ದರಿಂದ, ಕಾರ್ಡಪಾಕೀಟುಗಳ ಮಾರಾಟವು ಕಡಿಮೆಯಾಗಿದೆ. ಕಾರ್ಡಿನ ವಿಕ್ರಿಯು ನೂರಕ್ಕೆ ೨೫ ರಷ್ಟು ಮತ್ತು ಕವ್ವರಗಳ ವಿಕ್ರಿಯು ನೂರಕ್ಕೆ ೨೦ ರಷ್ಟು ಕಡಿಮೆಯಾಗಿದೆ. ಇವನ್ನು ವಿಶೇಷವಾಗಿ ಉಪಯೋಗ ಮಾಡತಕ್ಕವರು ಹಳ್ಳಿಯ ಜನರು. ದುಡ್ಡಿಗೆ ಎರಡು ದುಡ್ಡು ಕೊಡುವದು ಅವರಿಗೆ ಕಿಟಿಕಿಟಿಯಾಗುತ್ತಿರುವದರಿಂದ, ಇವುಗಳ ವ್ಯಾಪಾರವು ಕಡಿಮೆಯಾಗಿರುತ್ತದೆ. ಆದರೂ ಕಾಸಿಲು ಇಮ್ಮಡಿಸಿದ್ದರಿಂದ, ಪೋಸ್ಟ ಖಾತೆಗೆ ಲಾಭವೇ ಆಗಿರುತ್ತದೆ.

ಕಾರ್ಡ- ಪಾಕೀಟು ಮತ್ತು ಮನಿಯಾರ್ಡರ, ರಜಿಸ್ಟರಗಳೊಳಗೆ ಇಮ್ಮಡಿಸಿ ಬರುವ ದುಡ್ಡಿನ ವಿನಿಯೋಗವು ಬರೇ ಪೋಸ್ಟಖಾತೆಯ ಮಟ್ಟಿಗೆ ಆಗುವದಿಲ್ಲ. ಇದನ್ನು ತಾರು ಮತ್ತು ಅದಕ್ಕೆ ಹೆಚ್ಚಿನದಾದ ರೇಡಿಯೋ ಎಂಬ ತಾರಿನ ಖಾತೆಗೆ ಬಳಸುತ್ತಾರೆ. ಇವೆರಡೂ ಖಾತೆಗಳು ಬುಳಕಾಸದಲ್ಲಿಯೇ ಇರುತ್ತವೆ. ತಾರಿನ ಉಪಯೋಗವನ್ನು ಪಟ್ಟಣಗಳಲ್ಲಿರುವ ಶ್ರೀಮಂತರೂ, ಹರ್ತಕರೂ ಮಾಡಿಕೊಳ್ಳುವರು. ರೇಡಿಯೋದ ಅವಶ್ಯಕತೆಯು ಮುಖ್ಯವಾಗಿ ದಂಡಿನ ಖಾತೆಗೆ ಇರುತ್ತದೆ. ಇವೆರಡೂ ಖಾತೆಗಳು ಶ್ರೀಮಂತರಿಂದ ಜೀವಿಸುತ್ತಲಿವೆ. ಇವರಲ್ಲಿ ಪುನಃ ದಂಡಿನ ಖಾತೆಗಂತೂ ದುಡ್ಡಿನ ಕೊರತೆ ಇರುವದೇ ಇಲ್ಲ. ಅದ್ದರಿಂದ ದಂಡಿನಿಂದಲೇ ಕಡಿಮೆ ಬಿದ್ದ ಹಣವನ್ನು ತುಂಬಿಕೊಳ್ಳುವದು ವಿಹಿತ ಮಾರ್ಗವು ಹೀಗೆ ಮಾಡದೆ, ಬಡರೈತರ ಮೇಲೆ ಅನವಶ್ಯಕವಾಗಿ ಅಪ್ರತ್ಯಕ್ಷ ಬಲಾತ್ಕಾರದ ಕರ ಹೇರುವದು ಎಲ್ಲಿಯ ನ್ಯಾಯ?

ಮದ್ರಾಸದ ಕೌನ್ಸಿಲದಲ್ಲಿ ಜುರುಸಿನ ವಾದವಿವಾದ

— ೦ —

ಹೋದ ತಿಂಗಳಲ್ಲಿ ಮದ್ರಾಸದ ಲಾ ಕಾಲೇಜದಲ್ಲಿ ಓದುತ್ತಿದ್ದ ಒಬ್ಬ ಬ್ರಾಹ್ಮಣ ವಿದ್ಯಾರ್ಥಿಗೆ ಅತಿಸಾರದ ಬೇನೆ ಬಂತು. ಡಾಕ್ಟರ ಡಿ. ಕೃಷ್ಣರಾಯರು ಪ್ರಾರಂಭದಲ್ಲಿ ಮದ್ದು ಕೊಡುತ್ತಿದ್ದರು. ವಿದ್ಯಾರ್ಥಿಯು ಒಬ್ಬನೇ. ಆರೈಕೆ ಮಾಡುವಂಥವರಿಲ್ಲ. ಬೇನೆಯಾಗದೂ ಕಟ್ಟದಾದುದರಿಂದ, ಡಾಕ್ಟರ ಕೃಷ್ಣರಾಯರು ತಮ್ಮ ಮೋಟಾರಿನಲ್ಲಿ ಆತನನ್ನು ಮಲಗಿಸಿ, ಇಬ್ಬರು ವಿದ್ಯಾರ್ಥಿಗಳನ್ನು ಸಂಗಡ ಕೊಟ್ಟು, ಜನರಲ ಅಸ್ಪತ್ರಿಗೆ ಕಳಿಸಿದರು. ಅಲ್ಲಿ ನಾಲ್ಕು ತಾಸು ಕಾದರೂ ಈತನನ್ನು ಅಸ್ಪತ್ರಿಯಲ್ಲಿ ತಕ್ಕೊಳ್ಳುವಂಥವರು ಬರಲೇ ಇಲ್ಲ. ಇಷ್ಟರಲ್ಲಿ ಈತನಿಗೆ ಹದಿನಾರು ಸಾರೆ ಪ್ರವೃತ್ತಿಯಾಯಿತು. ಬಹಳ ಹೊತ್ತಿನ ನಂತರ ಅಲ್ಲಿಯ ಸರ್ಜನರಾದ ಜಾನಸಾಹೇಬರು ಬಂದು, ಸ್ಥಳವಿಲ್ಲೆಂದು ಹೇಳಿದರು. ನಂತರ ಈತನನ್ನು ರಾಯಾಪುರದ ಅಸ್ಪತ್ರಿಗೆ ಕರೆದೊಯ್ದರು. ಅಲ್ಲಿಯೂ ಒಂದು ತಾಸು ಕಾದುಕೊಂಡು ಕೂತನಂತರ ಒಳಗೆ ಕರೆಕೊಂಡರು. ಮುಂದೆ ಒಂದೇ ತಾಸಿನಲ್ಲಿ ವಿದ್ಯಾರ್ಥಿಯು ಪರಲೋಕವಾಸಿಯಾದನು. ಡಾಕ್ಟರರ ಉದಾಸೀನತೆ ಮತ್ತು ಕಠಿಣ ಹೃದಯದ ಕಥೆಯು ಮರು ದಿವಸ ವರ್ತಮಾನ ಪತ್ರಗಳಲ್ಲಿ ಸಾದ್ಯಂತವಾಗಿ ಬಂದ ಕೂಡಲೆ ಪಟ್ಟಣದ ತುಂಬ ಹಾಹಾಕಾರವಾಯಿತು.

ಈ ಖೇದಜನ್ಯ ಸಂಗತಿಯು ಸಂಭವಿಸಿದಾಗ ಕೌನ್ಸಿಲ ಇದ್ದಿಲ್ಲ. ಕೌನ್ಸಿಲ ಪ್ರಾರಂಭವಾದ ಕೂಡಲೆ ದಿವಸ ಶ್ರೀ ಸತ್ಯಮೂರ್ತಿಯವರು ಮೇಲಿನ ಸಂಗತಿಯ ವಿಚಾರ ಮಾಡುವ ಕುರಿತು ಅನ್ಯ ಕೆಲಸಗಳನ್ನು ತಹಕೂಬ ಮಾಡಬೇಕೆಂಬ ಠರಾವು ತಂದರು. ಪದ್ಧತಿ ಪ್ರಕಾರ ಮಂತ್ರಿಗಳು ಠರಾವನ್ನು ವಿರೋಧಿಸಿದರು. ಶ್ರೀ ಸತ್ಯಮೂರ್ತಿಯವರು ಕಾಯದೆಯ ಆಧಾರ ತೋರಿಸಲು ಅಧ್ಯಕ್ಷರು ವಿಚಾರಣೆಗೆ ಅವಕಾಶ ಕೊಟ್ಟರು.

ಆಫ್ಘಾನದ ಇರಾಕಿಯ ಕೌನ್ಸಿಲದಲ್ಲಿ ಪಶ್ಚಿಮಿಕ ಶಿಕ್ಷಣದ ಕೂಡ ಧಾರ್ಮಿಕ ಶಿಕ್ಷಣ ಕೊಡಬೇಕೆಂದು ಮುಸಲಮಾನ ಮೆಂಬರರು ವಾದಿಸಿದರು. ಈ ವಿಚಾರವನ್ನು ಸರಕಾರ ಮತ್ತು ಹಿಂದೂ ಮೆಂಬರರು ವಿರೋಧಿಸಲು, ಮುಸಲಮಾನ ಮೆಂಬರರೆಲ್ಲರು ಒಟ್ಟಿನಿಂದ ಕೌನ್ಸಿಲು ಬಿಟ್ಟು ಹೊರಬಿದ್ದು ಹೋದರು.

ಬ್ರಹ್ಮದೇಶದ ಹತ್ತರ ಒಂದು ನಾವೆಯು ಸಮುದ್ರದಲ್ಲಿ ಮುಣುಗಿ ೪೫ ಜನರು ಜಲಸಮಾಧಿ ಹೊಂದಿದರು.

ಪಶ್ಚಿಮ ಪ್ರಾಂತದಲ್ಲಿ ರಾಮುರಾವ ನೇಮವು ... ಕೊಂದ ... ೩೦ ದಿನ ... ಶಿಕ್ಷೆಯಾಯಿತು.

... ಪ್ರಾರಂಭದ ಯುಗ ... ಟಿಳಕ ... ಗಣಿತ ... ಪ್ರಸಿದ್ಧ ಮಾಡಿದ್ದಾರೆ.

ಬಂಗಾಲದ ದಬ್ಬಾಳಿಕೆಯ ಕಾಯದೆಯನ್ನು ರದ್ದು ಮಾಡುವ ... ಕಾರಣ ಹೇಳಿರುವ ... ಗೆ ಒದಗಿದೆ ಕೇಳಿದ್ದಾರೆ

... ಆಗಲಿಲ್ಲ.

ಇಂಗ್ಲಂಡದಲ್ಲಿ ಜೆಕ್ಸನಿಕರು ... ತ್ತಿದ್ದು, ಅವರು ... ಗೆ ... ಕರುತ್ತಿರುವದರಿಂದ, ಅಲ್ಲಿಯ ... ಆಂದೋಲನ ನಡೆದಿದೆ.

ಗಂಜಾಂಜಿಲ್ಲೆಯಲ್ಲಿ ಪೋಸ್ಟ ... ರದ ... ಯಿಂದ ... ವಾಗಿ, ... ಹೋಗುವವರು ... ಒಬ್ಬ ...

ಕರ್ನಾಟಕ ಹೊಸಬರಿಂದವರು ... ಶ್ರೀ. ಕೆ. ಪಿ. ಶ್ರೀನಿವಾಸ ... ರವರು ... ನಿರ್ಣಯ ... ರಾಗಿ ... ಮಾಡಿ ... ನೇರ ... ದು.

ಅಹಮದಾಬಾದಿನಲ್ಲಿ ಮಹಾತ್ಮರ ಆಶ್ರಮದಲ್ಲಿ ... ಪಂಡಿತ ಮೋತಿಲಾಲ, ... ಹಕೀಮ ... ಪ್ರಸಾದ ... ಸಮಾಲೋಚನೆಯನ್ನು ... ದಿದೆ.

ಪಂಡಿತ ಮಾಲವೀಯರು ಈ ದೇಶದಲ್ಲಿ ... ಗಳನ್ನು ... ಶೇ ... ಕೆಲವು ಸಾಕ್ಷಿಗಳನ್ನು ... ಪಂಡಿತ ಮೋತಿಲಾಲರ ... ಕೂಡ ವಿಚಾರ ...

ದಕ್ಷಿಣ ಆಫ್ರಿಕೆಯಲ್ಲಿ ... ಹಿಂದೀ ... ಸಂಬಂಧ ... ಮಾಡಿದ ... ಬಹಿಷ್ಕಾರ ... ರು ಶ್ರೀ ... ರಿಂದ ತಿಳಿಸಿದ್ದಾರೆ.

ರಾಷ್ಟ್ರಸಂಘದಲ್ಲಿ ಜರ್ಮನಿಯನ್ನು ಸೇರಿಸಿಕೊಂಡು, ಅದಕ್ಕೊಂದು ಸ್ಥಳವನ್ನು ಕೊಡಬೇಕೆಂದು, ಪೋಲಂಡ, ಬೆಲ್ಜಿಯಮ್, ಸ್ಪೇನ ಮೊದಲಾದ ... ದೇಶಗಳು ... ಒಂದೊಂದು ಸ್ಥಾನ ... ಬೇಕೆನ್ನಲಾರಂಭಿಸಿವೆ ... ಅದರಲ್ಲಿ ... ಇಲ್ಲಿಂದ ... ದೇಶದ ಲೀಗ ಸಭೆಯವರು ಬಾಹೇರ ಮಾಡಿದ್ದಾರೆ.

ಟಿ. ಎಸ್. ಮೋಟಾರ ಸರ್ವ್ಹಿಸ

ಹುಬ್ಬಳ್ಳಿ.

ಶಿವರಾತ್ರಿ ಸಮಯದಲ್ಲಿ ಗೋಕರ್ಣಕ್ಕೆ ಹೋಗುವ ಪ್ರಯಾಣಿಕರ ಸೌಕರ್ಯಕ್ಕಾಗಿ.

ತಾ|| ೧—೩—೨೬ ರಿಂದ ರೆಗ್ಯುಲರ ಸರ್ವ್ಹಿಸ ಇಟ್ಟಿದೆ.

—: ಕಾಲಕ್ರಮಗಳು :—

೧. ಹುಬ್ಬಳ್ಳಿ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ.	ಸಾಯಂಕಾಲ ೫ ಘಂಟೆ
ಸಾಯಂಕಾಲ ೫ ಘಂಟೆ	ಬೆಳಗ್ಗೆ ೫ ಘಂಟೆ
೨. ಸಾಗರ ಬಿಡುವದು	ಗೋಕರ್ಣ ಸೇರುವದು
ಬೆಳಗ್ಗೆ ೭ ಘಂಟೆ	ಸಾಯಂಕಾಲ ೫ ಘಂಟೆ

ಕ್ಯಾಂಪ್ ಹುಬ್ಬಳ್ಳಿ
೩೦-೧-೧೯೨೬

ಎಮ್. ಮಂಜಪ್ಪಾ,
ಪ್ರೊಪ್ರೈಟರ.

ಮಾತಾಡುವ ಔಷಧವು.

ಅಕ್ಕಾ! ಮಾತಾಡುವದಿಲ್ಲೇ? ... ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ ಕಲಿಸೋಣೇ? ... ಮನ್ನೆಯಲ್ಲಿ ಸೂಯ ಕ್ರಮವೇನು? ಆಗಿರುವದಾದರೂ ಏನು?

— ಕಿವಿ — ಶೂಲೆ ... ಮಕ್ಕಳಿಗೆ ... ಸೊಸೆಯಿದೆ.

... ಈ ಗಾದರ ಮೆಡಿಸಿನ ಕ್ಯಾಬಿನ ... ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ... ಪರಿಹಾರವಾಗಿ ... ಮಾಡುವದು ಮತ್ತು ... ತಿಮ್ಮಣ್ಣ ... ಶುಚಿ, ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿಕೊಡುವೆವು.

ವಿಳಾಸ—ನನಕಾಲದಿಕ್ಷ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.



ವ್ರಣಸಂಹಾರ

ಅಥವಾ

ಘಾಯದ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗುತ್ತದೆ. ಹಸಿ ಮತ್ತು ಒಣಗಿದ್ದ, ಗಜ್ಜಿ ... ಯಿಟ್ಟಿ, ಭಗಂದರ ಮುಂತಾದವುಗಳ ಮೇಲೂ ರಾಮಬಾಣ ... ಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಲೇಬೇಕು ... ಬೆಲೆ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಸದಸ್ಯರವರಿಗೆ ... ಬೇರೆ

ಹುಬ್ಬಳ್ಳಿಯ ನಿಕಾಂಟೆ ... ಕನಕಾಲದಿಕ್ಷ ಮೆಡಿಕಲಸ್ಟೋರ್ಸ ನೇಕಾರ ರೋಡ ಹುಬ್ಬಳ್ಳಿ ಕೇಳಿ ಮತ್ತು ತಿಮಕೇರಿದಿಂದ ದೊರೆಯುವದು.

ಎಸ. ಎಫ. ... ಬೆಳಗಾವಿ

... ಜೇನುರಲ್ಲಿ ಅಧಿಕಾರಿಗಳಾದ ಸಂಶಿನ ... ಆಗಾಗ್ಗೆ ಎಬ್ಬಿಸುತ್ತಿರುವ ... ಈ ವಾರದಲ್ಲಿ ... ಗಿರಣೆಯಲ್ಲಿ ಕೆಲಸ ಮಾಡುತ್ತಿರುವ ... ಕಾರರು ... ನನ್ನು ಕೂಡಿ, ಯಂತ್ರಗಳನ್ನು ನಾಶ ಮಾಡಿದರು. ಇದರ ಸಂಬಂಧ ... ಗಳನ್ನು ... ಪೋಲೀಸರು ... ಸ್ಥಿರವಡಿಸಲು ... ಪ್ರಯತ್ನಿಸುತ್ತಿದ್ದಾರೆ

ಸರ ... ನ್ನು ... ಆರಂಭ ಪಟ್ಟಣ ... ಬಾಂಬೆ ... ತ್ರಿಸ್ತರು ... ವರ ... ಮಂಡಲ ... ಟಿ, ಲಕ್ಷ, ... ಬೇರೆ ಬೇರೆ ... ಕಾಗಿದ್ದರೂ ... ಸ್ಮರಣಶಕ್ತಿ ... ವಿಕೆ ಉಳಿಸಿಕೊಳ್ಳುತ್ತಿದ್ದರು.

ಆಕ್ಸಫರ್ಡ ಸಮಿತಿಯಲ್ಲಿರುವ ಉತ್ತರ ಕರ್ನಾಟಕ ... ಕಾರರನ್ನು ... ಕೂರಿಸಲು ...

ಕಲಕತ್ತೆಯ ಮ್ಯುನಸಿಪಾಲಿಟಿಯು ಸ್ವರಾಜ್ಯ ಮಂಡಳದ ... ಪ್ರಿಯವರಿಗೆ ಮಾನಪತ್ರ ಕೊಟ್ಟಿತು.

ಊದುಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ನೇರು ... ಬೇಗಾಯಿ ... ಅಲ್ಲದೆ ... ಮಲ್ಲಿಗೆ ... ರು, ... ಸುಗಂಧ ದ್ರವ್ಯಗಳು ... ಶ್ರಯಕ್ಕೆ ... ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ...

ಕಾಲಕರ್ಣಿ ... ಕಂಪನಿ ...

ವತನದಾರ ರೆಂಟೆಗಳು



... ಕಾಲಕರ್ಣಿ ... ಕಂಪನಿ ... ಧಾರವಾಡ

ಅತ್ಯದ್ಭುತ! ಅಮೋರಿಕಾಖಂಡದ **ಅತ್ಯದ್ಭುತ!!**

ಪ್ರಸಿದ್ಧ ಡಾಕ್ಟರರೊಬ್ಬರು ಕಂಡು ಹಿಡಿದ ಸಿದ್ಧೌಷಧ

ಸರ್ವರೋಗ ನಿವಾರಕವಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವ ಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರರೊಬ್ಬರು ಅನೇಕ ವರ್ಷಗಳಿಂದ ಬಹು ಧನ ಸ್ವಾಹಾ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ, ಕೊನೆಯಲ್ಲಿ

ಎಲಿಕ್ಷಿರ್ ಆಫ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿದ್ದಾರೆ. ಅನುಭವದ ಬಲದಿಂದ ಅನೇಕ ರೋಗಗಳಿಗೆ ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಧ[illegible], ಅತಿಸಾರ, [illegible] ಅಥವಾ [illegible], ಕೆಮ್ಮು, ಮಲಬದ್ಧತೆ, [illegible] ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮೂಲವ್ಯಾಧಿ ಮೊದಲಾದ ರೋಗಗಳು, ಸ್ತ್ರೀವ್ಯಾಧಿ ಮೊದಲಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ [illegible] ಪ್ಲೇಗ, ಹಾವು ಚೇಳು ಮುಂತಾದ ವಿಷ ಜಂತುಗಳ ಕಡಿತಕ್ಕೆ ಬಹಳ ಉಪಯುಕ್ತವಾದದ್ದು. ಈ ಜೀವನಾಧಾರವು [illegible] ಗುಣಪಡಿಸುತ್ತದೆ [illegible] ರೋಗವಿದ್ದಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ "ಜೀವನಾಧಾರ" ವೆಂಬ ಡಾಕ್ಟರರಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ೧-೪-೦ ಟಪಾಲು ಹಾಂಚು ಮಸೂಲ ಬೇರೆ [illegible].

ಜೀವನಾಧಾರ ಡಿಪೋ,
ಮೈಸೂರ
ಬ್ರಾಂಚ— **ಜೀವನಾಧಾರ ಡಿಪೋ,**
ಹುಬ್ಬಳ್ಳಿ

SIROMANI NARAYANACHARYA & CO
CHAUKAMBA, BENARES CITY [U P]

ನಮ್ಮಲ್ಲಿ ಉತ್ತಮ ತರಹದ ಎಲ್ಲಾ ವಿಧವಾದ ಮಾಲುಗಳು ಬೇಕಾದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವದು.

ಶುದ್ಧವಾದ ಉಣ್ಣೆಯ [illegible] ಗಳು [illegible] ಗಳ ರೂ ೧॥ ಯಿಂದ ರೂ [illegible], [illegible] ರೂ [illegible] ಯಿಂದ ರೂ [illegible], ಮೊಳ [illegible] ರೂ [illegible] ರಿಂದ ರೂ ೬ ಮೊಳ ೧೦ [illegible] ರೂ ೬ರಿಂದ ೧೦, ಮೊಳ ೧೩-೧೪ರ ದಾವಳಿ ಗಳ್ಗೆ ರೂ ೮ರಿಂದ ರೂ ೧೫ [illegible] ರೂ ೨೫ರಿಂದ ರೂ ೧೦೦ರ ವರೆಗೆ ೬-೭ [illegible]-೧೦-೧೭-೧೮ ಇದ್ದು ಮೊ. ಗಳ [illegible] ಎಲ್ಲಾ ರಂಗಿನಲ್ಲಿಯೂ ದೊರೆಯುವದು. ಬನಾರಿಸ [illegible] ೧೬-೧೮ ಮೊಳದ ಶೀರೆ ಗಳ್ಗೆ ರೂ ೩೦ ರಿಂದ ರೂ ೨೦೦ರ ವರೆಗೆ ರುದ್ರಾಕ್ಷಿ ಸರ ೧೦೮ರದು ಗಳ್ಗೆ ಆಣೆ ೬ರಿಂದ ರೂ ೧೦ರ ವರೆಗೆ, ಗೌರಿಶಂಕರ [illegible] ಗಳ್ಗೆ ರೂ ೩॥ ಯಿಂದ ರೂ [illegible] ವರೆಗೆ, [illegible] ಗಳ [illegible] ಸರ ಗಳ್ಗೆ ೮ರಿಂದ ರೂ ೧೫ರ ವರೆಗೆ [illegible] ಮುಖಗಳ [illegible] ರುದ್ರಾಕ್ಷಿ ಗಳ್ಗೆ ರೂ ೧ ರಿಂದ ೧೦ ರೂ ವರೆಗೆ ೧೦-೧೩ [illegible] ರುದ್ರಾಕ್ಷಿ [illegible] ಗಳ್ಗೆ ರೂ [illegible] ರಿಂದ [illegible] ರೂ ವರೆಗೆ, ೧೪ ಮುಖದ [illegible] ೧ [illegible] ರೂ [illegible] ವರೆಗೆ, ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗ [illegible]

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪನಿ
ಚವಕಂಬಾ, ಬನಾರಸ (ಕಾಶಿ)

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ವರೆಗೆ ಶನಿವಾರ ೧೦ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು

ಚಾಲೂ ಖಾತೆಗಳು— ಪುಕ್ಕಟೆಯಾಗಿ ತೆಗೆಯಲಡುವವು
ಮುದ್ದತೀ ಠೇವುಗಳು— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು
[illegible] ಬ್ಯಾಂಕ— ಠೇವುಗಳ್ಳು ತೆಗೆದುಕೊಳ್ಳಲ್ಪಡುವವು ಬಡ್ಡೀದರ ೪ ರೂ.

ಸರಕಾರೀ ಹಾಗೂ ಇತರ ಕಾಗದಗಳು

ಸುರಕ್ಷಿತವಾಗಿ [illegible] ತೆಗೆದುಕೊಳ್ಳಲ್ಪಡುವವು ಕೊಡಲ್ಪಡುವವನ್ನು [illegible] ಬರುವದು. ಬಡ್ಡಿ ಹಾಗೂ [illegible] ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ [illegible] ಬರುವದು. [illegible] ಹಾಗೂ [illegible] ಉದರಿ ಕೊಡಲ್ಪಡುವದು. ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ [illegible] ಕೊಡುವದರಲ್ಲಿ ಬರುವವು. [illegible] ಫಾರ್ಮಗಳೂ, ಮೊಬಲಕ್ಕಾರ ಪತ್ರಗಳೂ ಸಹ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಆರ್. ಎ. ಬಸ್ರೂರ
ತಾ॥ ೨೨ [illegible] — ಬ್ಯಾಂಕ ಏಜಂಟ

ಆಯುರ್ವೇದ ಔಷಧಿ ಕಾರಖಾನಾ ಕಿತ್ತೂರ

ಪುಷ್ಪಧನ್ವಾ— ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಹಾಸವೂ ಶಕ್ತಿ ಬರುತ್ತದೆ. ೩೨ ಗುಳಿಗೆಗಳಿಗೆ ೧ ರೂ. ೧೦ ಕ್ಕೆ ೪ ರೂ.

ಹುರುಕಿನ ಔಷಧ— ಚೀಟು ೧ ಕ್ಕೆ ೧ ಆಣೆ ೧೦೦ ಕ್ಕೆ ೩ ರೂ ೮ ಆಣೆ.
ಕಣ್ಣಿನ ಔಷಧ— ಚೀಟು ೧ ಕ್ಕೆ ೩ ಪೈ ೧-೦ ೧ ರೂ.
ಜೇನಿನ ಔಷಧ— ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೩ ರೂ.

ಜ್ವರದ ಗುಳಿಗೆ— ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ, ಇನ್‌ಫ್ಲ್ಯುಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುತ ಮತ್ತು ಪ್ರವಾಸಕರಿಗೆ ಉಪಯುಕ್ತವಾದಂಥವುಗಳಿವೆ. ೩೦ ಕ್ಕೆ ೧ ರೂ ೧೦೦ಕ್ಕೆ ೩ ರೂ

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಪಶುಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯುರ್ವೇದ ಔಷಧಿ ಕಾರಖಾನಾ, ಪೋ. ಕಿತ್ತೂರ ಜಿಲ್ಹಾ ಬೆಳಗಾವ

ಮನುಷ್ಯನ ಪ್ರಾಣರಕ್ಷಣವು ಪಶುಗಳಿಂದಾಗುತ್ತದೆ. ಅಂದಮೇಲೆ ಪಶುಗಳ ಪ್ರಾಣರಕ್ಷಣೆಯ ಭಾರವು ಮನುಷ್ಯನ ಮೇಲೆ ಇರುತ್ತದೆ. ಈ ಸಂಗತಿಯನ್ನು ವಿಚಾರ ಮಾಡಿ ಪಶು ಪಾಲನೆಗೆ ಸಹಾಯಕವಾಗುವದಕ್ಕಾಗಿ ಸರ್ಟಿಫಿಕೇಟು ಪಡೆದ ಮತ್ತು ರಾಜ್ಯ ದಿವಾನರ ಪ್ರದರ್ಶನದಲ್ಲಿ ಹಾಗು ಸರಕಾರಿ ದನಗಳ ಆಸ್ಪತ್ರೆಗಳ ಡಾಕ್ಟರರಿಂದಲೂ ಅನೇಕ ಸದ್ಗೃಹಸ್ಥರಿಂದಲೂ ಸದಭಿಪ್ರಾಯಗಳನ್ನೂ ಅನೇಕ ಬೆಳ್ಳಿ ಭಂಗಾರದ ಪದಕಗಳನ್ನೂ ಸಂಪಾದಿಸಿದ

ಡಾ. ಎಸ. ಆರ. ಕಿತ್ತೂರ ಇವರ

ಪಶುಸಂಜೀವಿನಿ.

[illegible] ಇರುವದು ಪ್ರತಿಯೊಬ್ಬನ ಧರ್ಮವಾಗಿದೆ. [illegible] Rinderpest [illegible], [illegible] ಮುಂತಾದ ರೋಗಗಳ ನೋಡಲಾದ ಎಲ್ಲ ಪ್ರಕಾರದ ಪಶು ರೋಗಗಳ ಮೇಲೆ ಇದು ರಾಮಬಾಣ ಉಪಾಯವಾಗಿರುವದೆಂದು ಅನೇಕ ವರ್ಷ ಅನುಭವದಿಂದ ಸಿದ್ಧವಾಗಿರುತ್ತದೆ. ಕಾರಣ ಇದಕ್ಕೆ ಹೆಚ್ಚು ಬರೆಯುವ ಕಾರಣವೇ ಇಲ್ಲ. ಅರ್ಧಾಣೆಯ ಟಿಕೀಟು [illegible], ನಮ್ಮ ಪಶು ಸಂಜೀವಿನೀ ಪತ್ರಿಕೆಯನ್ನು ಪುಕ್ಕಟೆಯಾಗಿ ತರಿಸಿಕೊಂಡಲ್ಲಿ ಸವಿಸ್ತರ ಮಾಹಿತಿ ದೊರೆಯುವದು. ಬೆಲೆ ೧ ದಬ್ಬಿಗೆ ೧ ರೂಪಾಯಿ ಟಪಾಲು ಖರ್ಚು ಬೇರೆ

ತಂತೀ ವಿಳಾಸ — "ಶಾಂತವೀರ" ಧಾರವಾಡ

[ಶಾಂತವೀರಸ್ವಾಮಿ ಚಿಕ್ಕೀಮಠ ಕಿತ್ತೂರ.] "ಪಶುಸಂಜೀವಿನೀ" ಔಷಧಾಲಯ ಧಾರವಾಡ

ಸರಕಾರದಲ್ಲಿ ರಜಿಸ್ಟರ್ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ರಕ್ತಶುದ್ಧಿ! **ದ್ರಾಕ್ಷಾರ್ಕಮಧು** ಧಾತುಪುಷ್ಟಿ ವರ್ಧಕ!

ಈ ಮಧುವು ಮಹೌಷಧಿಯಾಗಿದ್ದು ಬಹಳ [illegible] ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ [illegible] ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರವು [illegible] ತರುಣರಂತೆ [illegible] [illegible] [illegible] ಹಾಗೂ [illegible] ಅಥವಾ [illegible] ಬಂದಾಗ — [illegible] ಕ್ಷೀಣವಾದ [illegible] ದು. [illegible] ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ರೋಗ, ಉಷ್ಣರೋಗ [illegible] ನಾಶವಾಗುವವು. [illegible] ಹಸಿವು ಚನ್ನಾಗಿ ಆಗುತ್ತದೆ. [illegible] ಬರುವದು. [illegible] ದಿವಸದ [illegible] ಕಾರಣವಿಲ್ಲ. [illegible] ದಿವಸ ಸಾಲುವ ಒಂದು ಬಾಟಲಿಯಿಂದ [illegible] ಬರುವದು. ಒಂದು ಬಾಟಲಿಯ ಕಿಮ್ಮತ್ತು ೧—೪—೦, ವಾರದ [illegible] ಕಿಮ್ಮತ್ತು ೩—೪—೦, ಮೂರು ಬಾಟಲಿ [illegible] ಒಂದೇ [illegible] ಕಳಿಸುವೆವು. [illegible] ಟಪಾಲ ಖರ್ಚು [illegible] ಬಾಟಲಿಗಳ ಕಿಮ್ಮತ್ತು [illegible] ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು, ಟಪಾಲ ಖರ್ಚು ಬೇರೆ [illegible], [illegible] ಒಂದು ಬಾಟ್ಲಿಗೆ ೧—೪—೦, [illegible] ೩—೦—೦, [illegible] ೩—೦—೦,

ಮ್ಯಾನೇಜರ - ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ ಜಿ. ಬೆಳಗಾವ

ಅಪೂರ್ವ ಗ್ರಂಥವು!!! ಶ್ರೀ ವಿದ್ಯಾರಣ್ಯ ಪುಸ್ತಕಮಾಲೆ ೪ ಚಂದಾದಾರರಾಗಿರಿ!!!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ೭೭೮ ರ ವರೆಗೆ]

ಆಕಾರ [illegible] ಪುಟ [illegible] ಪುಟಗಳು.

ಮಹತ್ವದ [illegible] ೧೭ ಅಪೂರ್ವವಾದ ಚಿತ್ರಗಳು.

ಬರೆದವರು:— ರಾಮಚಂದ್ರ [illegible] ದೇಶಪಾಂಡೆ ಎಮ್. ಎ.

ಈ ಐತಿಹಾಸಿಕ ಮಹತ್ವದ ಗ್ರಂಥವನ್ನು ಇತಿಹಾಸದ ವಿಮರ್ಶಕ ವಿಚಕ್ಷಣ ರಾ. [illegible] [illegible] ಇದು [illegible] ಮುಂದಿನ [illegible] ಬೆಲೆಯು ವಿವರ:—

	ರೂ. ಆ ಪೈ
೧ ಶ್ರೀ ವಿದ್ಯಾರಣ್ಯ ಪುಸ್ತಕ [illegible] ಚಂದಾದಾರರಿಗೆ	೧—೪—೦
೨ [illegible] ಚಂದಾದಾರರಿಗೆ	೧—೬—೦
೩ [illegible]	೧—೭—೦

ಚಂದಾ [illegible] ೬ ಆಣೆ ಪ್ರವೇಶ [illegible] ಗ್ರಾಹಕರು ತ್ವರೆ ಮಾಡಬೇಕು. [illegible] ಚಂದಾದಾರರಾಗಲಿಚ್ಛಿಸುವವರು ೮ ಆಣೆ ಪ್ರವೇಶ ಫೀಯನ್ನು [illegible] ಟಿಕೀಟು [illegible] ಕಳಿಸತಕ್ಕದ್ದು.

ಶ್ರೀ [illegible] ಕರ್ನಾಟಕ ಪುಸ್ತಕ [illegible] ಪುಸ್ತಕ [illegible] ಚಿತ್ರಗಳೂ [illegible] ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ — ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ
ಮಾಳಮಡ್ಡಿ ಧಾರವಾಡ. — ಚಾಲಕರು

ದಿ ಅಂಗಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ

೧೯೧೩ ನೆಯ ಕಂಪನಿ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ [illegible] ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ್, ಸಾಲ, ಪತಿ, ಹುಂಡಿ, ಮುಂತಾದ ಎಲ್ಲಾ ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ತಿಳಿದುಕೊಳ್ಳಬೇಕಾದರೆ [illegible] ನಮ್ಮನ್ನು ಕಂಡುಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ಆರರಿಂದ ೧೦-೩೦ ಸಂಜೆ [illegible] ವರೆಗೆ ನಡೆಯುವದು.

K. B. ANKALIGI.
ಮ್ಯಾನೇಜಿಂಗ ಡಾಯರೆಕ್ಟರ.

ವಿವಿಧ ವಿಷಯಗಳು.

ಮಹಾರಾಜರ ಸ್ವಾಭಿಮಾನ.

ಇಂದೂರಿನ ಪದಚ್ಯುತ ಹೋಳಕರ ಮಹಾರಾಜರು ಲಾರ್ಡ ರೀಡಿಂಗಸಾಹೇಬರಿಗೆ ಬರೆದ ಪತ್ರವು ಪ್ರಸಿದ್ಧವಾಗಿದೆ. ಮಾಂಟೆಗು ಚೆಮ್ಸ್‌ಫೋರ್ಡ ಸಾಹೇಬರು ಬ್ರಿಟಿಶ ಸರಕಾರ ಮತ್ತು ಸಂಸ್ಥಾನಿಕರ ಸಂಬಂಧಗಳನ್ನು ಕುರಿತು ವಿಚಾರ ಮಾಡುತ್ತಿದ್ದಾಗ ಸಂಸ್ಥಾನಿಕರ ಕೂಡ ಆಗಿರುವ ಒಪ್ಪಂದಗಳ ಮೇರೆಗೆ ಅವರ ತಪ್ಪಿನ ವಿಚಾರಣೆಗಾಗಿ ಕಮೀಶನ ಕೂಡಿಸಲಿಕ್ಕೆ ಒಪ್ಪಲಾರದೆಂದು ಉತ್ತರ ಬರೆದಿದ್ದರು. ಆ ಪತ್ರವನ್ನು ಮುಖ್ಯ ಮಾರ್ಗದರ್ಶಕ ಬಿಟ್ಟುಕೊಂಡು ತಮ್ಮ ಸ್ವಾತಂತ್ರ್ಯಕ್ಕೆ ಭಂಗ ಬರಬಾರದೆಂದು ವ್ಯಕ್ತಿಯ ಹಿತವನ್ನು ಉಪೇಕ್ಷೆ ಮಾಡಿ, ರಾಜ್ಯತ್ಯಾಗ ಮಾಡಿದ್ದೇವೆಂದು ಇವರು ಲಾರ್ಡ ರೀಡಿಂಗಸಾಹೇಬರಿಗೆ ಕಳಿಸಿದ ಪತ್ರದ ಸಾರಾಂಶವಾಗಿರುತ್ತದೆ.

ಕೈದಿಗಳನ್ನು ಬಿಡಿರಿ.

ಬಂಗಾಲದ ರಾಜಕೀಯ ಕೈದಿಗಳು ತಿರಾ ಹೀನ ಸ್ಥಿತಿಯಲ್ಲಿದ್ದಾರೆ. ಪ್ರಾಂತಿಕ ಅಸೆಂಬ್ಲಿಯಲ್ಲಿ ಆದ ಕರುಣಾಜನಕ ವಾದವಿವಾದವನ್ನೂ ವರ್ತಮಾನಪತ್ರಗಳಲ್ಲಿ ಓದಿದ ಕೂಡಲೆ, ಲಂಡನದಲ್ಲಿರುವ ಸ್ವತಂತ್ರ ಕೂಲಿಕಾರ ಪಕ್ಷದ ಪ್ರಮುಖರಾದ ಮೆಸರ್ಸ ಲ್ಯಾನ್ಸಬರಿ, ಬ್ರಿಜ್‌ಮನ್, ಕ್ರಿಪ್ಸಲಿನ, ಬೇಕರ, ಜಾಕಸನ್ ಮೊದಲಾದವರು ಲೇಬರ ಪಕ್ಷದ ಮುಂದಾಳುಗಳನ್ನು ಕಾಣಲಿಕ್ಕೆ ಹೋಗಿ, ಇವರನ್ನು ಬಂಧಮುಕ್ತ ಮಾಡಬೇಕೆಂದರು. ಬಂಧಮುಕ್ತ ಮಾಡಿದ ವಿನಹ ಹಿಂದೀ ಜನರ ಕೂಡ ಲೇಬರ ಪಕ್ಷದ ವರ್ತನವು ಶಕ್ಯವಿಲ್ಲೆಂದೂ ಸ್ಪಷ್ಟವಾಗಿ ಹೇಳಿದರು. ಇವರಿಗೆ ಲಾರ್ಡಸಾಹೇಬರು ಉತ್ತರವಾಗಿ ಏನು ಹೇಳಿದರೆಂಬದು ಪ್ರಸಿದ್ಧವಾಗಿರುವದಿಲ್ಲ.

ಲೋಕಪ್ರಿಯರಾರು?

ಹಿಂದುಸ್ಥಾನದಲ್ಲಿ ಹೆಸರಾದ ಲೋಕಪ್ರಿಯರಾರೆಂಬುದನ್ನು ಪರೀಕ್ಷಿಸುವದಕ್ಕಾಗಿ ಕಲಕತ್ತೆಯ ಇಂಗ್ಲಿಶಮನ್ ಪತ್ರಿಕೆಯು ಸಂದ್ಯದ ಜಾಹೀರಾತನ್ನು ಮುದ್ರಿಸಿದೆ. ಈ ಸಂದ್ಯದಲ್ಲಿ ಸೇರಬೇಕಾದವರು ಒಡೆಯರು ಕಳಿಸಿದ ಪ್ರಶ್ನೆಗಳ ಉತ್ತರ ಬರೆದು ಮೊದಲನೇ ಸಂಖ್ಯೆಯ ಒಂದವರಿಗೆ ವಸ್ತುರೂಪದಿಂದ ಇನಾಮು ದೊರೆಯುವದು. ಇನಾಮುಗಳ ರಕಮು ೮೦ ಸಾವಿರ ರೂಪಾಯಿ ಇರುವದು. ಆದರೆ ಯಾವುದೂ ನಗದು ಇರುವದಿಲ್ಲ. ಏಳು ಮೋಟಾರುಗಳು, ಕೆಲವು ಮೋಟಾರ ಸಾಯಿಕಲಗಳು ಉಂಗುರ ಮುಂತಾದ ಬೇರೆ ಇನಾಮುಗಳು ಇರುವವು. ಸಂದ್ಯದಲ್ಲಿ ಸೇರತಕ್ಕವರು ಬಂಗಾಲ ಪ್ರಾಂತದವರೇ ಆಗಿರಬೇಕು.

ನಾಯಿಯಂತೆ ಬೊಗಳುವದು.

ತಿಲಕನ, ತಿರುಕನನ್ನು ಕಂಡರೆ ನಾಯಿಯಂತೆ ಬೊಗಳುವವರೊಬ್ಬರು ನಮಗುಂಟು. ಇದೇ ಪ್ರಕಾರ ಒಂದು ಬ್ಯಾಂಕಿನ ಉತ್ಕರ್ಷವಾದರೆ ಅದನ್ನು ಮುರಿಯಬೇಕೆಂದು ಕೆಲ ಬ್ಯಾಂಕುಗಳು, ಜನರೂ ಇಲ್ಲದ ಸಲ್ಲದ ಕೃತ್ಯಗಳನ್ನು ಮಾಡುವರು ಮುಂಬಯಿಯಲ್ಲಿ ನಡೆದಿದೆ. ಸದ್ಯದಲ್ಲಿ ಸೆಂಟ್ರಲ ಬ್ಯಾಂಕಿನ ಮೇಲೆ ಸಂಕ್ರಾಂತಿ ತಿರುವ ಹೀನ ಪ್ರಯತ್ನವು ಹಿಂದೆ ಒಮ್ಮೆಲೆಯಾಗಿ ಆದ ಪ್ರಕಾರ ಮತ್ತೆ ನಡೆದಿದೆ. ನಾಮದಾರ ಗವ್ಹರ್ನರಸಾಹೇಬರು ಸ್ಥಿತಿಯನ್ನು ಲಕ್ಷಿಸಿ, ಬ್ಯಾಂಕಿನ ಬೆಳವಣಿಗೆಗೆ ಅವಶ್ಯವಾದ ಸಹಾಯ ಮಾಡುವಂತೆ ಆಶ್ವಾಸನ ಕೊಟ್ಟಿದ್ದಾರೆ. ಸ್ವದೇಶೀ ಬ್ಯಾಂಕು ದಿವಾಳಿ ತೆಗೆದು ಜನರು ಸರಕಾರ್ಯ ಮಾಡುವರು ಪರದೇಶೀ ಬ್ಯಾಂಕಿನಿಂದ ಹೋಗುವಂತೆ ಮಾಡುವದು ತರವಲ್ಲ.

ಮಹಾರಾಜರ ಬೆಸೆಯಿಂದ ಆದದ್ದು

ತಮ್ಮ ಮೇಲೆ ಗುಡ್ಡ ಒಡೆದುಕೊಂಡು ಬಿದ್ದರೂ ಮಹಾರಾಜರು ಬ್ರಿಟಿಶ ರೆಸಿಡೆಂಟರ ವಿಷಯವಾಗಿ ಯಾವ ಪ್ರಕಾರದ ದ್ವಿಭಾವವನ್ನು ಎಣಿಸಲಿಲ್ಲ. ಈ ಪ್ರೇಮದ ಉಪಯೋಗ ಸದ್ಯದಲ್ಲಿ ಪತ್ತೆಯಿಲ್ಲ ಸಿದರ್ಶಕ್ಕೆ ಬಂದಿದೆ. ಗೌರವಾರ್ಥವಾಗಿ ಹಾರಿಸುವ ಗುಂಡಿನ ಸಲಾಮುಗಳನ್ನು ಕಡಿಮೆ ಮಾಡಿದ್ದಾರೆ. ರಾಜ್ಯಕಾರಭಾರದಲ್ಲಿ ಇದ ರ ಪರಿಣಾಮಕ್ಕೆ ನೋಡಬೇಕು. ಹೀಗೆ ಬಡ ಜನರ ವಸ್ತ್ರ ತಪ್ಪನ್ನು ವಿಚಾರಿಸಬೇಕೆಂದು ಪೊಲಿಟಿಕಲ ಏಜಂಟರು ದಿವಾನರಿಗೆ ತಿಳಿಸಿದ್ದಾರೆ. ರೀಜನ್ಸಿ ನೇಮಿಸುವ ತನಕ ಈ ವ್ಯವಸ್ಥೆ ನಡೆಯುದೆ ಮಹಾರಾಜರು ಇಂದೂರದಲ್ಲಿಯೇ ಇರುವದರಿಂದ, ಅವರೊಡನೆ ನಡೆಯುವದಾಗಿ ತೋರುತ್ತದೆ. ಯುವರಾಜರಿಗೆ ೧೧ ನೇ ತಾರೀಖಿನ ದಿವಸ ಪಟ್ಟಗಟ್ಟುವರು.

ಮಹಾರಾಷ್ಟ್ರ ವಿಶ್ವವಿದ್ಯಾಲಯ.

ಮಹಾರಾಷ್ಟ್ರ ಪ್ರಾಂತಕ್ಕಾಗಿ ಸ್ವತಂತ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಮುಂಬಯಿ ಯುನಿವ್ಹರ್ಸಿಟಿಯಲ್ಲಿ ನಿರ್ಣಯವಾದ ಮೇಲೆ ಪುಣೆಯಲ್ಲಿ ಸಭೆಯಾಗಿ, ಈ ಬಗ್ಗೆ ವ್ಯಾಪಕ ಮುಂದಿನ ವಿಚಾರ ನಡೆದಿದೆ. ಪ್ರತಿಯೊಂದು ಭಾಗಕ್ಕೆ ವಿಶ್ವವಿದ್ಯಾಲಯದಲ್ಲಿ ಮರಾಠಿ ನುಡಿಯಲ್ಲಿರುವ ಎಲ್ಲ ಕಾಲೇಜುಗಳು ಸೇರುವದು ಅವಶ್ಯಕವಾದದ್ದೆಂದು ಸಹಜವೇ ಸುತ್ತದೆ. ಆದರೆ ಇದಕ್ಕೆ ನಾಶಿಕ ಮತ್ತು ಕರ್ನಾಟಕ ಪ್ರಾಂತದ ಕಾಲೇಜುಗಳು ಸಮ್ಮತಿಸುವದಿಲ್ಲ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಯುನಿವ್ಹರ್ಸಿಟಿ ಬೇಕಾಗಿರಬೇಕೆಂದು, ಇವುಗಳ ಪತನವು ಇದು ಸ್ವತಂತ್ರ ಕಾಲೇಜುಗಳ ಮಹಾಮಾಯೆ. ಸಾಂಗಲಿಯಲ್ಲಿದ್ದ ಅರ್ಧ ಕನ್ನಡ ಮತ್ತು ಅರ್ಧ ಮರಾಠಿಯಾಗಿರುವ ವಿಲಿಂಗ್ಡನ ಕಾಲೇಜವು ಫರ್ಗ್ಯುಸನ ಕಾಲೇಜದ ಒಂದು ಭಾಗವಾಗಿರುವದರಿಂದ, ಅದು ಪುಣೆಯ ಕಾಲೇಜದಲ್ಲಿ ಸೇರಿಕೊಳ್ಳುವದು. ಬೆಳ್ಗಾಂವಿಯ ಲಿಂಗರಾಜ ಕಾಲೇಜು ಕರ್ನಾಟಕದ ಯುನಿವ್ಹರ್ಸಿಟಿಗೆ ಸೇರಬಾರದೆಂದು ಕನ್ನಡಿಗರು ಪ್ರಯತ್ನವಾಗಿ ಚಳವಳಿ ಮಾಡಿದರು. ಅದೇ ಪ್ರಕಾರ ಇಲ್ಲಿಯವರೆಲ್ಲ ಬೆಳಗಾಂವಿ ನಗರದ ಕಾಲೇಜದ ದೆಸೆಯಿಂದಲೂ ಮಾಡಬೇಕಾಗಿರುತ್ತದಲ್ಲವೇ?

ಶಮಿಗರಿಗೆ ಸ್ವರಾಜ್ಯ—

ಶಮಿಗರ ದೇಶಕ್ಕೆ ಸ್ವರಾಜ್ಯ ಕೊಡಬೇಕೆಂಬ ಠರಾವನ್ನು ಸರ ಶಂಕರ ನಾಯರರು ಕೌನ್ಸಿಲ ಆಫ ಸ್ಟೇಟದಲ್ಲಿ ತರತಕ್ಕವರಿದ್ದಾರೆ. ಇವರ ಹೆಸರಿನಿಂದ ಈ ಪ್ರಕಾರ ಠರಾವು ತರುವ ಚೀಟಿಯೂ ಹೊರಟಿದೆ. ಇವರು ರಂಗೂನಿನಲ್ಲಿ [illegible] ಪಕ್ಷದ ನಾಯಕರಾದ [illegible] ಶಮಿಗರ ಪರವಾಗಿ [illegible] ತಮ್ಮ ಕೈಯಲ್ಲಿ ಹಿಡಿದ ಕಾರಣದಿಂದ [illegible] ಶಮಿಗರ ದೇಶದಲ್ಲಿ ಸೇರಿರುವ [illegible] ಆಗುವದಿಲ್ಲವೆಂದು [illegible] ತರತಕ್ಕ ಠರಾವು [illegible] ಸ್ವರಾಜ್ಯದ ಕಂಪ ಸಾರಲಿಕ್ಕೆ [illegible] ಅರಿಯೋಣ.

ಸ್ವಾಮಿ ಶ್ರದ್ಧಾನಂದರ ರಾಷ್ಟ್ರ ಸೇವೆ—

ದಿಲ್ಲಿಯಲ್ಲಿ ಕೂಡಿದ್ದ ಹಿಂದೂ ಸಭೆಯಲ್ಲಿ ಬಾಲವಿವಾಹ ನಿಷೇಧ ಮತ್ತು ವಿಧವಾ ವಿವಾಹಕ್ಕೆ ಉತ್ತೇಜನ ಕೊಡುವಂಥ ಠರಾವುಗಳನ್ನು ತರಬೇಕೆಂದು ಪಂಜಾಬದಲ್ಲಿ ಕೂಡಿದ್ದ ಹಿಂದೂ ಪ್ರಾಂತಿಕ ಮಹಾ ಸಭೆಯಲ್ಲಿ ಸ್ವಾಮೀ ಶ್ರದ್ಧಾನಂದರು ಸೂಚನೆ ಮಾಡಿದರು. ಅಲ್ಲಿ ನೆರೆದ ಸನಾತನ ಪಂಡಿತರಿಗೆ ಈ ಠರಾವುಗಳಿಗೆ ಪೂರ್ಣ ಅನುಕೂಲರಾದ ಸನಾತನ ಧರ್ಮದ ಪುರಾಣ ವಚನಗಳಾದ ವಾಕ್ಯ ಪ್ರಮಾಣಗಳು ದೊರಕಲಿಲ್ಲ. ಮತವಾದಿಗಳು ಒಪ್ಪಿಗೆಯಾಗಲಿಲ್ಲ. ಈ ಬಗ್ಗೆ ಉಭಯಪಕ್ಷ ನಡುವೆ ಬಹಳ ಬಿಕ್ಕಟ್ಟಾಗಿ ಕೋಲಾಹಲವಾಯಿತು. ಕ್ಷಮಿಸಿ ಸ್ವಾಮಿ ಶ್ರದ್ಧಾನಂದರು ಸಭೆಯಿಂದ ಹೊರಬಿದ್ದರು. ಸ್ವರಾಜ್ಯದಲ್ಲಿ ನಿಯೋಗದ ಸ್ವಾಮಿ ಶ್ರದ್ಧಾನಂದರು ಪಂಡಿತ ಮಾಲವೀಯರ ಸಂಗಡ ಪಕ್ಷವನ್ನು ಬಿಟ್ಟು, ಕೊನೆಗೆ ಇಲ್ಲಿ ತಾವೇ ಅಗ್ರೇಸರರಾದರು. ಕೊನೆಗೆ ಹಿಂದೂ ಮಹಾಸಭೆಯ ನಿಯಮ ಸದಾ ತಮ್ಮ ಕಡೆಯಿಂದ ಶೋಧಿಸಿದ ಅನುಷ್ಠಾನದ ಸಂಗತಿಯು.

ಶುದ್ಧೀಕರಣ.

ಗುಜರಾಥ ಪ್ರಾಂತದಲ್ಲಿ ಮುಸಲಮಾನ ಮತ್ತು ಕ್ರಿಶ್ಚನರಾದಂಥ ಹಿಂದೂ ಜನರನ್ನು ಶಾಸ್ತ್ರೀಯ ಮಾರ್ಗದಿಂದ, ಪುನಃ ಹಿಂದೂ ಧರ್ಮದಲ್ಲಿ ತೆಗೆದುಕೊಳ್ಳುವ ಕೆಲಸವು ಪೂರ್ಣ ಶ್ರದ್ಧೆಯಿಂದ ನಡೆದಿದೆ. ಇದರಿಂದ ಅಗಲಿಹೋದ ಕೆಲವು ಜನರು ಆನಂದಿತರಾಗಿ ಸ್ವಾಭಾವಿಕವಾಗಿ ಧರ್ಮ ಪರಿವರ್ತನೆಗೆ ಹಿಂದೂ ಸಮಾಜದಲ್ಲಿ ಪ್ರವೇಶ ಮಾಡುತ್ತಿದ್ದಾರೆ. ಎಷ್ಟೋ ಜನ ಸ್ವಾಭಾವಿಕ ಮುಸಲಮಾನರಾದರು. ಇಂಥವರಲ್ಲಿ ಮೂರು ಸಾವಿರ ಜನರನ್ನು ಶುದ್ಧ ಮಾಡಿಕೊಂಡರು. ಇದೇ ಪ್ರಕಾರ ೧೫೦ ಕ್ರಿಶ್ಚನರನ್ನು ಹಿಂದೂ ಧರ್ಮದಲ್ಲಿ ತಕ್ಕೊಂಡರು. ಹಿಂದೂ ದೇಶದ ಹಿಂದುಗಳು ಶುದ್ಧ ಹೊಂದಿದವರನ್ನು ಆದರದಿಂದ ಆತ್ಮ ಸಂತೋಷದಿಂದ ತಮ್ಮ ಮೂಲ ಧರ್ಮದಲ್ಲಿ ಸೇರುವದೇ ಮುಖ್ಯ ಮಾರ್ಗವು. ಇಂಗ್ಲಂಡದ ಮೂರು ಕೋಟಿ ಜನಸಂಖ್ಯೆಯಲ್ಲಿ ಅರ್ಧ ಜನ ಮುಸಲಮಾನರಾದರೆ ಅದು ಕ್ರಿಶ್ಚನ ರಾಜ್ಯವೆಂದು ಎಂದೂ ಅನಿಸಲಾರದು. ಮೊದಲಿನಂತೆ ಧಾರ್ಮಿಕ ಸ್ವಾತಂತ್ರ್ಯವೂ ಉಳಿಯಲಾರದು. ಇಲ್ಲಿ ಹಿಂದೂ ಮುಸಲಮಾನ ಕಲಹವಾಗುವಂತೆ ಅಲ್ಲಿ ಕ್ರಿಶ್ಚನ ಮುಸಲಮಾನ ಕಲಹವೇಳುವದು.

ಸ್ವಾತಂತ್ರ್ಯ ದಿನೋತ್ಸವ—

ಕಾಬೂಲ ರಾಜ್ಯವು ರಶಿಯಾ ಅಥವಾ ಇಂಗ್ಲಂಡದ ಹಂಗಿನೊಳಗಿಂದ ಪಾರಾಗಿ, ಸ್ವತಂತ್ರವಾಗಿ, ಅಮೀರರಿಗೆ ಸಮ್ರಾಟ ಎಂಬ ಪದವಿ ದೊರೆತು, ಏಳನೇ ವರ್ಷ ಮುಗಿದಿದೆ. ಈ ಬಗ್ಗೆ ಆ ರಾಜ್ಯದಲ್ಲಿ ಎಲ್ಲ ಕಡೆ ದೊರೆಗಳು ಪಟ್ಟಣಗಳಲ್ಲಿ ಸ್ವಾತಂತ್ರ್ಯ ದಿನವೆಂದು ವಿಶೇಷ ಉತ್ಸವ ಮಾಡುತ್ತಿದ್ದಾರೆ. ಅದು ಕಳೆದ ಸೋಮವಾರ ಆರಂಭವಾಗಿ ಆಗುತ್ತದೆ. ಈ ಆನಂದೋತ್ಸವವನ್ನು ಕಾಬೂಲ ರಾಜ್ಯದ ಎಲ್ಲ ಕಡೆ ಮಾಡುವದೆಂದು ನಿಶ್ಚಯವು. ಕಾಬೂಲದ ವಕೀಲರು ರಾಜಧಾನಿಗಳಲ್ಲಿರುವಂಥ ಪ್ರತಿಯೊಂದು ದೇಶದಲ್ಲಿಯೂ ಉತ್ಸವ ಮಾಡಿದರು. ಕಾಬೂಲವು ಮುಸಲಮಾನ ರಾಜ್ಯವಾದರೂ, ಅದರ ವಿಷಯವಾಗಿ ಹಿಂದೂ ಜನರಿಗೆ ಬಹಳ ಅಭಿಮಾನವಿರುವದು. ಕಾಬೂಲದ ಎತ್ತ ಮಾರ್ಗಗಳನ್ನು ಪ್ರೀತಿಯಿಂದ ಒಪ್ಪಿಕೊಳ್ಳುವರು. ಪ್ರಸ್ತುತದ ಅಮೀರರು ಮುಸಲಮಾನರಾದರೂ ಉದಾರ ಧರ್ಮದವರಾಗಿ, ಮಾನಗಿ ನಿಷ್ಪಕ್ಷಪಾತದಿಂದ ಹಿಂದೂ ಜನರ ಅಭಿಮಾನಕ್ಕೆ ಪೂರ್ಣ ಪಾತ್ರರಾಗಿದ್ದಾರೆ. ಹಿಂದುಸ್ಥಾನದ ಸರಹದ್ದಿನಲ್ಲಿರುವ ಸ್ವಾತಂತ್ರ್ಯ ಸಂಸ್ಥಾನವೆನಿಸಿಕೊಂಡದ್ದು, ಹಿಂದೂ ಜನರು ಇದನ್ನು ಕಾಬೂಲದ ಬಗ್ಗೆ ಹೆಮ್ಮೆ ಪಡುವರು. ಚೀನಾ, ಜಪಾನ, ರಶಿಯಾ ಮತ್ತು ಇಂಗ್ಲಂಡದಂಥ ಬಲಿಷ್ಠ ದೇಶಗಳನ್ನು ಮಾರು ಹೋಗುವಂತೆ ಕಾಬೂಲದ ಪ್ರತಿನಿಧಿಗಳು ಸ್ವಾತಂತ್ರ್ಯ ಕಾಯ್ದುಕೊಂಡು ಇರುವುದರಿಂದ ಅಭಿಮಾನಕ್ಕೆ ಪಾತ್ರವಾಗಿರುವ ಪ್ರಶಂಸೆಗೆ ಮತ್ತು ಆದರವು.

ಮುಂದಾಳು.

ಕನ್ನಡ ಲೋಕದ ಪ್ರಸಿದ್ಧ ಸಂಪಾದಕರಾಗಿದ್ದ ಶ್ರೀ ಗುತ್ತಲ್‌ರವರು ವಿಜಾಪುರದಲ್ಲಿ "ಮುಂದಾಳು" ಎಂಬ ಹೆಸರಿನ ಸಾಪ್ತಾಹಿಕ ವರ್ತಮಾನಪತ್ರವನ್ನು ಬರುವ ವಾರದಿಂದ ಪ್ರಸಿದ್ಧ ಮಾಡಲಿರುವರು. ಇವರಿಗೆ ಎಲ್ಲ ಬಗೆಯ ಜನರ ಸಹಾಯ ದೊರೆಯಬೇಕೆಂಬುದು ಕನ್ನಡಿಗರ ಕರ್ತವ್ಯ. ಪತ್ರಿಕೆಗೆ ಸಂಗತಿಯು ಶ್ರೀ ಗುತ್ತಲ್‌ರ ಲೇಖನಗಳಿಂದ ಬೆಳಕಿಗೆ ಬರಬೇಕು. ವಿಜಾಪುರ ಜಿಲ್ಲೆಯ ಲೋಕ ಜಾಗೃತಿಯನ್ನು ಬೆಳೆಸಬೇಕೆಂದು ಇದಕ್ಕಾಗಿ ಬಂದಿದ್ದರು. ಅದೇ ಕೆಲಸವನ್ನು ಶ್ರೀ ಗುತ್ತಲ್‌ರು ಆರಿಸಿ, ವಿಜಾಪುರ ಜಿಲ್ಲೆಯ ಸಲುವಾಗಿ "ಮುಂದಾಳು" ಆಗಿರುವದೆಂದು ಕರ್ನಾಟಕದ ನಿದರ್ಶನಕ್ಕೆ ತರಬೇಕಾಗಿ ಹಾರೈಸುತ್ತೇವೆ.

ವಕೀಲರ ಮೇಲೆ ಕರ—

ಹಾವೇರಿ ಮ್ಯುನಿಸಿಪಾಲಿಟಿಯವರು ಪ್ರತಿ ವೆಕೀಲರ ನಾಕರಿಯಿಂದ ವರ್ಷಕ್ಕೆ ೩೦ ರೂಪಾಯಿ ತೆರಿಗೆ ಪ್ರತ್ಯೇಕ ಕರ ಹಾಕುವ ಬಗ್ಗೆ ಠರಾವು ಮಾಡಿದ್ದಾರೆ. ಮುಂಬಯಿ ಇಲಾಖೆಯಲ್ಲಿ ಇಂಥ ಪದ್ಧತಿಯು, ಮುಂಬಯಿ ನಗರದಲ್ಲಿ ಮಾತ್ರ ಇರುವದಿಲ್ಲ. ಹಾವೇರಿಯಲ್ಲಿ ಸರಾಸರಿ ೩೦ ಜನ ವಕೀಲರಿದ್ದಾರೆ. ಇದರಿಂದ ಮ್ಯುನಿಸಿಪಾಲಿಟಿಗೆ ೯೦೦ ರೂಪಾಯಿ ಕರ ಪ್ರಾಪ್ತಿಯಾಗಬಹುದು. ಈ ಮ್ಯುನಿಸಿಪಾಲಿಟಿಗೆ ಟೆಲಿಫೋನ ಮುಂತಾದ ಸಾಧನಗಳ ಸಹಾಯ ಸಿಗುತ್ತಿರುವಾಗ ವಕೀಲರ ಮೇಲೆ ೫೦ ಕೂಡಿಸುವಂಥ ಅಡಚಣೆಯ ಪ್ರಸಂಗವೇಕೆ ಬಂತೆಂಬದು ನಮಗೆ ತಿಳಿಯುವದಿಲ್ಲ.

ಜರ್ಮನಿ ತುಂಬ ಸೂತಕ.

ಮಹಾಯುದ್ಧದಲ್ಲಿ ಮಡಿದಂಥ ಸೈನಿಕರ ಸ್ಮರಣೆಗಾಗಿ ಕಳೆದ ಆದಿತ್ಯವಾರದ ದಿವಸ ಜರ್ಮನ ರಾಜ್ಯದ ತುಂಬ ಸೂತಕ ಪಾಲಿಸಲ್ಪಟ್ಟಿತು. ಹರತಾಳ ಮಾಡಿ, ಎಲ್ಲ ವ್ಯವಹಾರ ಬಂದು ಮಾಡಿದರು. ರಾಷ್ಟ್ರೀಯ ನಿಶಾನೆಗಳನ್ನು ಕೆಳಗಿಳಿಸಿದರು. ದೇವಾಲಯದಲ್ಲಿ ಗಂಟೆ ಬಾರಿಸಿ, ಪ್ರಾರ್ಥನೆ ಮಾಡಿದರು. ಅಧ್ಯಕ್ಷರಾದ ಜನರಲ ಹಿಂಡೆನಬರ್ಗ ಮೊದಲಾಗಿ ಪ್ರತಿಷ್ಠಿತರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಜರ್ಮನರು ಮುಂದೇ ದಿವಸದಲ್ಲಿ, ದಸ್ಯುದಿಂದ ನಡೆದರೆ ಯೂರೋಪ ಜರ್ಮನರ ನಾಶ ಮಾಡಲಾರರೆಂದು ನಿರ್ವಿಕಾರವಾದ ಪ್ರಜೆಯಲ್ಲಿ ವೀರಶ್ರೀಯು ಹುಟ್ಟುವಂಥ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಕುಡುಕರ ಕಯ್ಯೇ ಮೇಲು—

ಪಂಜಾಬದ ಕೌನ್ಸಿಲದಲ್ಲಿ ಮದ್ಯಪಾನವನ್ನು ಪೂರಾ ನಿಲ್ಲಿಸಬೇಕೆಂಬ ಠರಾವು ಬಂತು. ಆದರೆ ಅದಕ್ಕೆ [illegible] ಪ್ರಜಾ ಹಿತೈಷಿಗಳ ಕರ್ತವ್ಯ ಪರಾಭವಿಸಿತು. ಎಷ್ಟು ಕೋಲಾಹಲವಾಗಿದ್ದರೆಂಬುದನ್ನು ತೋರಿಸಿತು. ಆ ಇಲಾಖೆಯಲ್ಲಿ ಇನ್ನೂರು ಮ್ಯುನಿಸಿಪಾಲಿಟಿಗಳಿವೆ. ಲೋಕಲ ಬೋರ್ಡ ದೊಡ್ಡವುಗಳೂ, ಇವುಗಳಲ್ಲಿ ಅಂಗಡಿಗಳನ್ನು ಬಂದು ಮಾಡಬೇಕೆಂದು ಸರಕಾರವನ್ನು ಕೇಳಿ ಕೊಂಡದ್ದು ಬರೇ ಅಲ್ಲ!!

ದಿವಾನಗಿರಿಯ ಪಕ್ಕ—

ಇಂದೂರದಲ್ಲಿ ಹೊಸದಾದ ಬಾಪನಾ ಸಾಹೇಬರ ಮನೆತನದವರು ವಂಶ ಪರಂಪರೆಯಿಂದ ದಿವಾನ ಮನೆತನದವರು. ರಾಜ್ಯಕಾರಭಾರದಲ್ಲಿ ಕರ್ತವ್ಯದ ವರದನ್ನು ದಿವಾನರಾಗಿ ತಂದಾಗ, ಮಹಾರಾಜರು ಪರಭಾರೆ ಇವರಿಗೆ ದಿವಾನಗಿರಿಯ ವಸ್ತ್ರ ಕೊಡುವದಿಲ್ಲ. ಬಾಪನಾಸಾಹೇಬರ ವಂಶಸ್ಥರ ಕಯ್ಯಲ್ಲಿ ಮೊದಲು ವಸ್ತ್ರಗಳನ್ನು ಕೊಡಬೇಕು. ಬಳಿಕ ಅವರು ದಿವಾನರಿಗೆ ಒಪ್ಪಿಸುವಂತೆ ಪದ್ಧತಿಯುಂಟು. ಇದೀಗ ದಿವಾನರೇ ಸ್ವತಃ.

ಸಾಹೇಬರಿಗೆ ಶಿಕ್ಷೆ—

ಸಿಮಲೆಯಲ್ಲಿ ಒಬ್ಬ ರಿಕ್ಷಾ ಕೂಲಿಯನ್ನು ಕೊಂದ ಬಗ್ಗೆ ವ್ಯಾಪಾರಿ ಸ್ಲೇಡ ಹೆಸರಿನ [illegible] ಮೇಲೆ ಕೇಸು ನಡೆದು [illegible] ದಂಡವಾಯಿತು. ಆರೋಪಿ ಸಾಹೇಬನು [illegible] ನ ಜೀವವನ್ನು ಬ್ಯಾಂಕಿನಲ್ಲಿಟ್ಟು, ಆದರ ಬಡ್ಡಿ [illegible] ಕೂಲಿಯ ಕುಟುಂಬ ಪೋಷಣೆಗೆ ಕೊಡಬೇಕೆಂದು ಜಡ್ಜರು ತೀರ್ಮಾನಿಸಿದ್ದಾರೆ. ಯುರೋಪಿಯನ ಆರೋಪಿಗಳು ನೆಟ್ಟ ನೇಟನಗಳಿಂದ ಬಿಡುಗಡೆ [illegible] ಸಿಗುತ್ತಿರುವ ಒಂದು ನಿದರ್ಶನ [illegible] ದರ ಮೇಲೆ ಮಾಡಿದ ಘಾತೀ ದಂಡ, ಆ ದಂಡವು ಆ ಕಾರ್ಯ ಕರಮು ಮೃತನ ಮನೆತನದವರ ಪೋಷಣಾರ್ಥಕ್ಕಾಗಿ ಚಿರವಾದ ವ್ಯವಸ್ಥೆಯ ಬಗ್ಗೆ ಬಡ್ಡಿಯಲ್ಲಿ ತಿಳುವಳಿಕೆ ಕೇಳಿ, ಯುರೋಪಿಯನ್ನರು ಮಾಡಿದರಿಂದಲೇ ಸಹಿಸ ದಂಡಾಯಿತೆಂದು. ಅಸ್ತು ಬೀಳಾಗುತ್ತದೆ.

ಶ್ರೀ ಸತ್ಯಮೂರ್ತಿಯ ಉಪಕ್ರಮವಾದಿಯು—

ಶ್ರೀ. ಸತ್ಯಮೂರ್ತಿಯವರು ಮದ್ರಾಸದ ವಿಶ್ವವಿದ್ಯಾಲಯದ ಪರಿಷತ್ತಿನ ಕೌನ್ಸಿಲ ಮೆಂಬರ ರಾಗಿದ್ದಾರೆ, ತಾವು ಸ್ವಾಮಿನಾಥನರ ಎದುರು ಕಾಂಗ್ರೆಸದ ಧ್ಯೇಯದ ಪ್ರಕಾರ ನಡೆಯುವರೆಂದು ಸ್ವರಾಜ್ಯ ಪಕ್ಷದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರರ ಮುಂದೆ ಶಪಥ ಮಾಡಿದ್ದರು. ಆದರೆ ದಿನೆದಿನೆ ಶ್ರೀ. ಸತ್ಯಮೂರ್ತಿಯವರು ಕೌನ್ಸಿಲ ಮಹಾಸಭೆಗೆ ಹಿಂದಿನದನ್ನು ಬಿಟ್ಟು ಹೋಗಿದ್ದಾರೆ. ಒಂದೊಂದು ಮಹಾಸಭೆಯಲ್ಲಿ ಉದ್ದೇಶವಾದ ಠರಾವುಗಳು ಪಕ್ಷದ ಶಿಸ್ತಿನ ಹಿತವನ್ನು ನೋಡಲಾಗಿ ಆ ಪಕ್ಷದಲ್ಲಿ ಶಿಸ್ತು ಪಕ್ಷದ ಬಂಧನವಾಗುವದೆಂದು ಸ್ಪಷ್ಟವಾಗಿ ತಿಳಿಸಿದರೆಂದು ಹಿಂದೂ ಪತ್ರಿಕೆಯ ವರದಿಗಾರರು ತಿಳಿಸುತ್ತಾರೆ.

ಫೋಟೋ ಚನ್ನಬಸವೇಶ್ವರ
ಬಡಾ ಚನ್ನ ಬಸವೇಶ್ವರ.

ಹೋದವರ್ಷ ಶಿವ್ಲಾರ ಚನ್ನಬಸವೇಶ್ವರನೆಂಬವನು ಕರ್ನಾಟಕ ನಾಡಿನಲ್ಲಿ ಸಂಚಾರ ಮಾಡಿ, ಲಿಂಗಾಯಿತ ಸಮಾಜದಲ್ಲಿ ದೊಡ್ಡ ಗೊಂದಲವೆಬ್ಬಿಸಿದನು. ಇದೇನೋ ಚಮತ್ಕಾರವೆಂದು ಕೆಲ ವಿಚಾರಶೂನ್ಯ ಗೃಹಸ್ಥರು ಈತನನ್ನು ಹಿಂಬಾಲಿಸಿದರು. ಶಿವ್ಲಾರನ ಅಡಿಕೆಯೋ ಮೂರ್ಖತನವೋ ಗೊತ್ತಿಲ್ಲ. ತಾನು ಚನ್ನಬಸವೇಶ್ವರನು. ಆತನಲ್ಲಿದ್ದ ಗುರುಹುಗಳು ತನ್ನಲ್ಲಿ ಇತ್ತವೆಂದು ಸಾರುವನು. ನಿಜವಾಗಿ ಚನ್ನಬಸವೇಶ್ವರನಾಗಿದ್ದರೆ ಮುಸಲಮಾನ ಧರ್ಮವನ್ನು ಬಿಟ್ಟು, ಹಿಂದೂ ಆಗಬೇಕಾಗಿತ್ತಲ್ಲವೇ? ಚನ್ನಬಸವೇಶ್ವರನಾದವನು ತನ್ನ ಧರ್ಮ ಪ್ರಸಾರ ಮಾಡಬೇಕಲ್ಲವೆ, ಪರಧರ್ಮಗಳಲ್ಲಿ ಸೇರಿರೆಂದು ಹೇಳುವದು ಅಶಕ್ಯವಾದ ಮಾತು. ಆದ್ದರಿಂದಲೇ ಈ ಸಾಲ ಈತನ ಆಟ ನಡಿಯುವೆ, ನೆಲ್ಲಲಿಕ್ಕೆ ಸ್ಥಳವಿಲ್ಲದೆ ಊರೂರು ತಿರುಗುತ್ತಿರುವನು.

ಇದು ಫೋಟೋ ಚನ್ನಬಸವೇಶ್ವರನ ಕಥೆಯಾಯಿತು. ಬಡಾ ಚನ್ನಬಸವೇಶ್ವರರ ಇತಿಹಾಸವು ಬೇರೆಯಾಗಿದೆ. ಅವರು ಶ್ರೀಮಂತರು, ವಿಲಾಯತಿಯಲ್ಲಿ ಕೂಡ ಪ್ರಖ್ಯಾತರು. ಸಾಹೇಬವರ್ಗದಲ್ಲಿ ಸದ್ಗೃಹಸ್ಥರು. ಆದರೆ ಬೋಹರಾ ಮುಸಲಮಾನರಲ್ಲಿ ಸದ್ಗುರುಗಳು. ಇವರಿಗೆ ದೇವತ್ವ ಕೊಡಬೇಕೆಂದು ಶಿಷ್ಯರ ಕೌತುಕಹಲವು. ಹಿಂದೂ ಧರ್ಮದ ತತ್ವನೆಯು ಅವತಾರವಾಗಿದ್ದಾರೆಂದು ಶಿಷ್ಯರು ಸ್ತುತಿಪಾಠ ಹೇಳುವರು. ಶಾಪ ಹಿಂದೂ ಲೋಕಾಂತ ಸಂಭೂತರಾಗಿದ್ದಾರೆಂದು ಸಾರುವದು ನಾಮಧಾರಿ ಅಗಾಖಾನರಿಗೆ ಎಷ್ಟರ ಮಟ್ಟಿಗೆ ಸಮ್ಮತಿಸುವದೆಂಬದನ್ನು ದೇವರೇ ಬಲ್ಲ.

ಇಬ್ರಾಹಿಮ ಮುನಸಫರೆಂಬವರು ವೈದಿಕ ಇಸ್ಲಾಮಿಕರು ಪುಸ್ತಕ ಬರೆದಿದ್ದಾರೆ. ಪಾದ್ರಿಗಳು ಬಾಯಿಬಲಕ್ಕೆ ಸತ್ಯವೇದವೆಂದು ಹೆಸರಿಟ್ಟ ಕೊಂಡ ಪ್ರಕಾರವು. ವೈದಿಕ ಇಸ್ಲಾಮದಲ್ಲಿ ನಾಮಧಾರಿ ಅಗಾಖಾನರ ಒಂದು ಭಾವಚಿತ್ರ ಹಾಕಿದ್ದಾರೆ. ಅದರ ಮೇಲ್ಭಾಗದಲ್ಲಿ "ಕಲಿಯುಗದಲ್ಲಿಯ ಶ್ರೀ ಕೃಷ್ಣಾವತಾರ ಮತ್ತು ಹಿಂದೂ ಮುಸಲಮಾನ ಐಕ್ಯದ ಪ್ರಸ್ಥಾಪಕರು. ಎಂದೂ ಕೆಳಭಾಗದಲ್ಲಿ ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಎಂಬ ಭಗವದುಕ್ತಿಯನ್ನೂ ಬಾಯಬಲ ಮತ್ತು ಕುರಾಣದೊಳಗಿನ ಕೆಲವು ನುಡಿಗಳನ್ನೂ ಕೊಟ್ಟಿದ್ದಾರೆ. ಶಿವ್ಲಾರ ಚನ್ನಬಸವೇಶ್ವರನು ಒಂದು ಪ್ರಾಂತದ ಧರ್ಮೋದ್ಧಾರಕನಾದರೆ ನಾಮಧಾರಿ ಅಗಾಖಾನರ ಭಾರತಖಂಡದ ಉದ್ಧಾರಕರೆಂದು ಮೇಲಿನ ಬರಹದಿಂದ ತೋರಿಸಿದ್ದಾರೆ. ಪೌಂಡರೀಕ ವಾಸುದೇವನೆಂಬವನು ಎರಡು ಕೃತ್ರಿಮ ಕೈಗಳನ್ನು ಹಚ್ಚಿಕೊಂಡು, ತಾನೂ ಪರಮಾತ್ಮನೇ ಎಂದು ಸಾರಿಕೊಳ್ಳುತ್ತಿದ್ದನು ಅದೇ ಪ್ರಕಾರ ನಾಮಧಾರಿ ಅಗಾಖಾನರ ಕೃಷ್ಣಾವತಾರವಾಗುತ್ತದೆ.

ಇಷ್ಟೇ ಅಲ್ಲದೆ, ಇನ್ನೂ ಅನೇಕ ಅಪ್ರಯೋಜಕ ಮತ್ತು ಊಹಾಪೋಹ ಕಾರಣ ಗ್ರಂಥ ಪುಸ್ತಕಗಳನ್ನು ಬರೆದಿರುತ್ತಾರೆ. ನಿಷ್ಕಲಂಕ ಗೀತಾ, ಕೃಷ್ಣವಾಣಿ, ಸತ್ಪಂಥ ಶಾಸ್ತ್ರ ಮುಂತಾದವುಗಳಲ್ಲಿ ನಾಮಧಾರಿ ಅಗಾಖಾನರೆಂದರೆ ಪ್ರತ್ಯಕ್ಷ ದೇವರೆಂದು ತೋರಿಸಿದ್ದಾರೆ. ಇದಕ್ಕೆ ಆಧಾರವಾಗಿ ಇವರು ಪೈಗಂಬರರ ಅಳಿಯ ಅವತಾರ ಪುರುಷರೆಂದಿದ್ದಾರೆ. ದಶಾವತಾರದಲ್ಲಿ ಅಲ್ಲಾನು ಹತ್ತನೇ ಅವತಾರವೆಂದು ಪುನಃ ಪುನಃ ಹೇಳಿದ್ದಾರೆ. ತಮ್ಮ ಶಿಷ್ಯರು ಈ ತರಹವಾಗಿ ಮಾಡುವ ಹುಡುಗಾಟಿಕೆಯನ್ನು ನಿಷೇಧಿಸಿ, ಉತ್ಸವಗಳಿಗೆ ಆಗದಂತೆ ಮಾಡುವದನ್ನು ಒಂದು ಕಟ್ಟಿನಲ್ಲಿಡುವದು ನಾಮಧಾರಿ ಅವಶ್ಯವಾದ ಕರ್ತವ್ಯ ಕರ್ಮವಾಗಿರುತ್ತದೆಂದು ತಿಳಿಯುತ್ತೇವೆ.

ಧಾರವಾಡ—

ಮೊನ್ನಿನ ದಿವಸ ಇಲ್ಲಿಯ ಲಿಂಗಾಯಿತ ಬಾವುನ ಹಾಲಿನಲ್ಲಿ ಮುಚ್ಛೆಯ ಪ್ರೊಫೇಸರ ಗೋಖಲೆಯವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಹಿಂದೀ ಭಾಷೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದಂಥವರಿಗೆ ಇನಾಮು ಕೊಡುವ ಸಮಾರಂಭವಾಯಿತು.

ನಿನ್ನೆಯಿಂದ ಶ್ರೀ. ಶಾಂತ ಕವಿಗಳ ಶ್ರಾದ್ಧದ ಸ್ಮಾರಕಕ್ಕಾಗಿ ಸಾಹಿತ್ಯೋತ್ಸವ ಸಮಾರಂಭ ನಡೆದಿದೆ. ..ಂಪು ಮತ್ತು ವಾದೆನಾ ವ್ಯಾಖ್ಯಾನ ಮತ್ತು ಸಿಟಂಥ ವಾಚನಗಳು ನಡೆಯುವವು

ಮೊಗಲಾಯಿ ನ್ಯಾಯದ ಅಪೂರ್ವ ಮಾದರಿಯು.

ಬಿಕಾನೇರ ಮಹಾರಾಜರ ಖಾಸಗಿ ಕಾರಭಾರಿಯಾದ ಶೇಟ ಚಂದುಮಲ ಢಡ್ಡಾ ಎಂಬವನು ಪ್ರಸಿದ್ಧ ಮನುಷ್ಯನು. ಇಂಗ್ಲಿಷ ಸರಕಾರದವರು ಕೊಡ ಸಿ. ಆಯ. ಇ. ಪದವಿ ಕೊಟ್ಟಿದ್ದಾರೆ. ಪೈದಾಬಾದಿನ ನಾಹಸಾರದ ಶ್ರೀ ಪುರುಷೋತ್ತಮದಾಸರಿಂದ ಇವರಿಗೆ ಎರಡು ಲಕ್ಷ ರೂಪಾಯಿ ಬರತಕ್ಕದ್ದಿತ್ತು. ಈ ಹಣದ ದೆಸೆಯಿಂದ ಗಲಗಲ ನೆಯ ಇಸವಿಯಲ್ಲಿ ನಿಜಾಮ ಕೋರ್ಟಿನಲ್ಲಿ ಶೆಟಚಂದುಮಲ್ಲನು ದಾವೇ ತಂದನು. ಆದರೆ ಕೋರ್ಟ ಫೀ ಸ್ಟಾಂಪಿಗೆ ಬೇಕಾಗುವ ಹಣವನ್ನು ತುಂಬದ್ದರಿಂದ, ದಾವೆಯು ತಿತ್ತಿ ಹಾಕಲ್ಪಟ್ಟಿತು.

ಈ ಸಂಗತಿಯು ಸಂಭವಿಸಿ ೨೨ ವರ್ಷಗಳಾದ ನಂತರ ಶೇಟ ದಾದನು ಹೇಗೋ ವಸೀಲೆ ಹಚ್ಚಿ, ನಿಜಾಮರ ಭೆಟ್ಟಿ ತಕ್ಕೊಂಡು, ಅವರ ಮುಂದೆ ತನ್ನ ಬೇಡಿಕೆಯನ್ನು ಹೇಳಿಕೊಂಡನು. ವಾಸ್ತವಿಕವಾಗಿ ನಿಜಾಮಸಾಹೇಬರು ಕೋರ್ಟಿನ ಕಡಿಗೆ ಬೊಟ್ಟು ತೋರಿಸಬೇಕಾಗಿತ್ತು. ಆದರೆ ತಮ್ಮಂತೆ ಒಬ್ಬ ಸಂಸ್ಥಾನಿಕರ ಕಾರಭಾರಿಯಾದವನ ಮೊಕದ್ದಮೆಯನ್ನು ಪೂರ್ಣಮಾಡುವದಕ್ಕಾಗಿ ಮೂವರದೊಂದು ಕಮಿಟಿ ನೇಮಿಸಿದರು. ಇಬ್ಬರು ಜಡ್ಜರು, ಮತ್ತು ಒಬ್ಬರು ವ್ಯಾಪಾರಖಾತೆಯ ಮಂತ್ರಿಯಾದರು. ಈ ಮೂರ್ತಿಗಳು ಶೇಟಚಂದುಮಲ್ಲರಿಗೆ ಅನುಕೂಲವಾಗಿ ರಿಪೋರ್ಟ ಬರೆದು ಹುಜೂರ ಸನ್ನಿಧಾನಕ್ಕೆ ಕಳಿಸಿದರು. ಹುಜೂರ ಸಾಹೇಬರ ಆಜ್ಞೆಯು ಹುಕುಮು ಮಾಡಿ, ಶೇಟ ಪುರುಷೋತ್ತಮದಾಸರಿಗೆ ಹಣ ಕೊಡುವಂತೆ ನೋಟೀಸು ತೆಗೆದರು.

ತಮ್ಮ ಮೈಮೇಲೆ ಗುಡ್ಡ ಕಡಕೊಂಡು ಬಿದ್ದದ್ದನ್ನು ಕಂಡು, ಪ್ರತಿವಾದಿಯು ಮದ್ರಾಸಕ್ಕೆ ಓಡಿದನು. ಇಲ್ಲಿಗೆ ಶೇಟಚಂದಮಲ್ಲನು ಒಂದು ಅವರ ಮೇಲೆ ದಿವಾಣಿ ವಾರಂಟ ತೆಗೆಸಿದನು. ಪ್ರತಿವಾದಿಯ ವಕೀಲರು ಆಕ್ಷೇಪ ತಕ್ಕೊಳ್ಳಲು, ನ್ಯಾಯಮೂರ್ತಿ ಶ್ರೀನಿವಾಸ ಅಯ್ಯಂಗಾರರು ಶೇಟ ಪುರುಷೋತ್ತಮದಾಸರನ್ನು ೨೫ ಸಾವಿರದ ಜಾಮೀನದ ಮೇಲೆ ಬಿಟ್ಟರು.

ಆ ರಂಗ ವಾರಂಟಿನ ಪೂರ್ಣ ವಿಚಾರಣೆಯು ಮುಖ್ಯ ನ್ಯಾಯಾಧೀಶರಾದ ಸರ ಕಾವೆಲ್ಲ ಟ್ರಾಟರ ಸಾಹೇಬರ ಮುಂದೆ ನಡೆಯಿತು. ...ದೆ, ಸ್ಟ್ಯಾಂಪಿನ ಹಣ ಕೊಡದ್ದಕ್ಕಾಗಿ ದಾವೆಯು ತಿತ್ತಿ ಹೋದದ್ದು, ಒಂದು ತಲೆಯಷ್ಟು ವರ್ಷಗಳಾದ ನಂತರ, ಕೋರ್ಟಿನ ನ್ಯಾಯವಾದ ಪದ್ಧತಿಯನ್ನು ಬಿಟ್ಟು, ನಿಜಾಮಸಾಹೇಬರ ಹುಕುಮ ತೆಯಿಂದ ನಿಕ್ರಿಯಾದದ್ದು, ಇವೆಲ್ಲ ಅಕ್ರಮ ಅನ್ಯಾಯಗಳನ್ನು ಕಂಡು ನ್ಯಾಯಾಧೀಶರು ಸಮೇತ ಆಶ್ಚರ್ಯಪಟ್ಟು ಬೊಟ್ಟು ಕಚ್ಚಿದರು. ನಿಜಾಮರ ರಾಜ್ಯದಲ್ಲಿ ಕಾಪಿರಲಿಕ್ಕೆ ಒಡೆಯನು ದೇವರ ಕೃಪೆಯೇ ಎಂದು ತುಂಬಿದ ಕಚೇರಿಯಲ್ಲಿ ಉದ್ಗಾರ ತೆಗೆದರು. ದಯಾನಿಧಿಯರು ತಮ್ಮ ಮೇಲೆ ನಿಜಾಮರ ಮಹಾ... ಶಕ್ತಿ ಪಡಕೊಂಡು ಒಪ್ಪಿ ಹುಕುಮ ಮಾಡಿಟು ತಂದಿದ್ದರೆ ತಮ್ಮ ಗಳಿಯು ... ತುಂಬುತ್ತಿತ್ತೆಂದು ವರ್ತಕನ ಉದ್ಗಾರದ ಭಾವವಾಗಿರುತ್ತದೆ.

ಮೈಸೂರಲ್ಲಿ ಪೂರ್ಣಯ್ಯನವರ ಮನೆತನದ ನ್ಯಾಯವು ಕೋರ್ಟಿಗೆ ಒಂದಸಂತರ ಶ್ರೀಮನ್ಮಹಾರಾಜರು ಅದನ್ನು ಉಭಯ ಪಕ್ಷಗಳಿಗೂ ಸಮ್ಮತವಾಗುವಂತೆ ಪಂಚಾ ಮಕ್ಕೆ ಕೊಟ್ಟರು. ಆ ತೆರವಾಗಿ ನಿಜಾಮ ಸಾಹೇಬರ ವರ್ತನವ ಗಳಲ್ಲ ಎಲ್ಲಕ್ಕೂ ಮುಖ್ಯ ಮುದ್ದೆಯು ಮುದ್ದತ್ತಿನದು. ಮುದ್ದತು ಮೀರಿ ಅನೇಕ ವರ್ಷಗಳಾದನಂತರ ಜಗಳ ಬೆಳೆಯಿತು. ಇದಕ್ಕೆ ನ್ಯಾಯವೆಂದು ಯಾರು ಅನ್ನುವರು? ಇದರ ತರುವಾಯ ಕೆಮೊಟಿಗೆ ಪ್ರತಿವಾದಿಯ ಸಮ್ಮತಿಯು ಇಂದಿಲ್ಲ. ಕೇವಲ ಸುಲ್ತಾನಶಾಹಿಯು. ಸುಲ್ತಾನಶಾಹಿಯಿಂದ ರಾಜ್ಯವಾಳುವದಾದರೆ ಇನ್ನೂ ಹುಟ್ಟಿದವನ ಮೇಲೆ ಸಹ ಮುಂದಾಗಿ ಡಿಕ್ರಿ ಪಡಕೊಳ್ಳಬಹುದೆಂದು ಸರ ನ್ಯಾಯಾಧೀಶರು ನಿಜಾಮಸಾಹೇಬರ ಮರ್ಜಿಗೆ ಹತ್ತುವಂದ ಕಸ್ತೂರಿ ಬಿರುಸುಗಿಯನ್ನು ಅಡಿದ್ದಾರೆ. ನಿಜಾಮಸಾಹೇಬರ ಸರಕಾರವು ... ಪ್ರಜೆ ವಿವಿಧ ರೀತಿಯಿಂದ

ಆಂದೋಲನದಲ್ಲಿದ್ದಾರೆಂಬುದನ್ನು ಈ ಮೊದಲು ಬರೆದಿದ್ದೇವೆ. ತಮ್ಮ ಆಡಳಿತೆಯ ಮೇಲೆ ನ್ಯಾಯಾಧೀಶರು ಮಾಡಿದ ತೀವ್ರವಾದ ಟೀಕೆಯನ್ನು ನೋಡಿ, ನಿಜಾಮಸಾಹೇಬರು ಮಹಾನ ಬೇಗ ಯುಕ್ತ ಮುಚಿತವಾಗಿ ಕಾಯದೆ ಕಾನೂನಗಳ ನಿಷ್ಪಕ್ಷಪಾತ ಅಭಿಪ್ರಾಯ ತಕ್ಕೊಳ್ಳುವದು ಅವಶ್ಯವಾಗುತ್ತದೆ. ಇಲ್ಲವಾದರೆ ಮೊಗಲಾಯಿ ದರಬಾರ, ಮೊಗಲಾಯಿ ನ್ಯಾಯವೆಂಬ ಕುಂದು ಸ್ಥಿರವಾಗಿ ಉಳಿಯುವದು.

ಸಾಂಸಿ ಮತ್ತು ಗದಗೇರಿಯ ನಡುವೆ
ರೇಲ್ವೆಯ ಅಪಘಾತ.

ಪ್ರಯಾಣಿಕರು ಮತ್ತು ದಾಟಿದರು

ಸೋಮವಾರ ದಿವಸ ಬೆಂಗಳೂರಿಂದ ಬರುತ್ತಿದ್ದ ಮೇಲ ಬಂಡಿಯು ಗದಗೇರಿ ದಾಟಿ, ಸಾಂಸಿಗೆ ಬರುತ್ತಿರುವಾಗ ದಾರಿಯಲ್ಲಿ ಒಮ್ಮಿಂದೊಮ್ಮೆ ಧಡಕಿ ಹೊಡೆಯಿತು. ಡ್ರಾಯವ್ಹರನು ಆಕ್ಷಣವೇ ಬಂಡಿಯನ್ನು ನಿಲ್ಲಿಸಿ, ಏನಾಯಿತೆಂದು ನೋಡುವಾಗ- ಒಂದಿಗೆ ಕೇಡು ಒಗೆಯಬೇಕೆಂಬ ದುಷ್ಟಬುದ್ಧಿಯಿಂದ ಎರಡೂ ಮಗ್ಗಲಿನ ಎರಡು ಹಳಿಗಳನಡುವೆ ಗರುತರವಾದ ಮೊಳೆ ಬಡಿದಿದ್ದಾರೆಂದು ಕಂಡುಬಂತು. ಇದೇ ಪ್ರಕಾರ ಒಂದು ಫರ್ಲಾಂಗಿನ ತನಕ ಒಡೆದಿದ್ದರು. ಮೊಳೆ ... ಗದುಕರವಾಗಿ ತನು ಬತ್ತಿರವಾಗಿದ್ದವೆ- ದಯಂಕರ ಅಪಘಾತವಾಗುತ್ತಿತ್ತು. ದೇವರ ದಯೆಯಿಂದ ನೂರಾರು ಪ್ರಯಾಣಿಕರು ದೊಡ್ಡ ಕುತ್ತ ದಾಟಿದರೆಂಬದು ಸಂತೋಷದ ಸಂಗತಿಯು.

ಕೌನ್ಸಿಲುಗಳಿಗೆ ಸ್ವರಾಜ್ಯ ಪಕ್ಷೀಯರ ಶರಣು.

ಇಂದಿನ ದಿವಸ ಅಸೆಂಬ್ಲಿ ಮತ್ತು ಸ್ವರಾಜ್ಯ ಪಕ್ಷದ ಮೆಂಬರರು ತಮ್ಮ ತಮ್ಮ ಕೌನ್ಸಿಲಗಳನ್ನು ಬಿಟ್ಟು ಹೊರಬೀಳುವರು.

ಮದ್ರಾಸ ಕೌನ್ಸಿಲದ ೩೨ ಜನ ಮೆಂಬರರು ೧೭ ನೇ ತಾರೀಖಿನ ದಿವಸ ಕೌನ್ಸಿಲಕ್ಕೆ ಶರಣು ಹೊಡೆಯುವರು

ಶ್ರೀ ಪಟೇಲರು ಅಸೆಂಬ್ಲಿಯ ಅಧ್ಯಕ್ಷರಾಗಿ ಉಳಿಯುವರು. ಆದರೆ ಪಂಡಿತ ಮೋತಿಲಾಲರು ದಂಡಿನ ಕಮಿಟಿಯ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಡುವರು.

ಕೌನ್ಸಿಲಿಂದ ಹೊರಬಿದ್ದ ಬಳಿಕ, ಸ್ವರಾಜ್ಯ ಪಕ್ಷೀಯರು ಖಾದಿಯ ಪ್ರಸಾರ ಮತ್ತು ಹಿಂದೂ ಮುಸಲಮಾನ ಐಕ್ಯಕ್ಕಾಗಿ ಹಿಂದುಸ್ಥಾನದ ತುಂಬ ಲೋಕ ಜಾಗೃತಿಯನ್ನುಂಟು ಮಾಡುವರು.

ಮಹಾತ್ಮರು, ದೇಶಬಂಧು ... ಪಂಡಿತ ನೆಹರು, ಹಕೀಮ ಅಜಮಲಖಾನ, ಮೌಲಾನಾ ಅಬ್ದುಲ ಕಲಾಮ ಆಜಾದ ಮತ್ತು ಬೇರೆ ಗೃಹಸ್ಥರು ಹಿಂದೂ ಮುಸಲಮಾನ ಕಲಹವನ್ನು ತೀರಿಸಲು ಪ್ರಯತ್ನಿಸುವರು.

ಚಂದಾದಾರರಿಗೆ ಸೂಚನೆ.

ಮಾರ್ಚ ತಿಂಗಳ್ದ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಇಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವರ ಕಡಿಂದ ಯಾವತ್ತು ಜನರಿಗೆ ತಿಳಿಸೋದೇನಂದರೆ- ನನ್ನ ಕಡಿಂದ ಮಣೆಪ್ಪಾ ಪ್ರಭುನವರ ಸಾ॥ ಸವದತ್ತಿ ಇವನು ೪೦೦ ರೂಪಾಯಿ ಸಾಲಾ ತಗೊಂಡು ನನ್ನ ಹೆಸರಿನ ... ೧೭-೭-೨೫ ಇಸ್ವಿ ದಿವಸ ಸವದತ್ತಿ ಮನಿ ಕೋರ ಪತ್ರಿ ಬರಕೊಟ್ಟ ನೋಂದ ಮಾಡಿ ಕೊಟ್ಟಿರುತ್ತಾನೆ. ಆ ಕೋರಪತ್ರಿ ಕಾಗದ ಹೋಗಿರುವದೆ ಯಾರಿಗಾದರೂ ಸಿಕ್ಕರೆ ನನಗೆ ತಂದು ಕೊಡಬೇಕು. ಅವರಿಗೆ ೧೦ ರೂಪಾಯಿ ಇನಾಮು ಕೊಡುವೆನು. ತಿಳಿದು

ಸ ಪತ್ತಿ ತಾ॥ ೧೫ ೩ ೨೬ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಗೋವಿಂದಪ್ಪಾ ಅಲ್ಲಪ್ಪನವರ ... ಕೈದು ಅವೆ.

ಜಾಹೀರಾತು.

ಇಂಪೀರಿಯಲ ಬ್ಯಾಂಕ ಆಫ ಇಂಡಿಯಾ.

ಸೇವಿಂಗ್ಸ ಬ್ಯಾಂಕು.

ಈ ನೋಟೀಸಿನಿಂದ ಜಾಹೀರ ಪಡಿಸುವದೇನಂದರೆ—

ಸನ್ನ ೧೯೨೬ನೇ ಇಸವಿಯ ಮಾರ್ಚ ತಿಂಗಳ ೧ನೇ ತಾರೀಖಿನಿಂದ ಈ ಬ್ಯಾಂಕಿನ ಸೇವಿಂಗ್ಸ ಬ್ಯಾಂಕ ಅಕೌಂಟಿನ ಬಡ್ಡಿಯ ದರವನ್ನು ನೂರಕ್ಕೆ ವರ್ಷಕ್ಕೆ (೩॥, ಮೂರೂವರೀ ರೂಪಾಯಿಕ್ಕೆ), ಮತ್ತು ಸೇವಿಂಗ ಬ್ಯಾಂಕ್ಸ ಡಿಪಾಜಿಟ ಅಕೌಂಟಿನ ಬಡ್ಡಿಯ ದರವನ್ನು ಸನ್ನ ೧೯೨೬ನೇ ಇಸವಿಯ ಮೇ ತಿಂಗಳ ೧ನೇ ತಾರೀಖಿನಿಂದ ನೂರಕ್ಕೆ ವರ್ಷಕ್ಕೆ (೩॥), ಮೂರೂವರೀ ರೂಪಾಯಿಕ್ಕೆ ಇಳಿಸಲ್ಪಟ್ಟಿರುತ್ತದೆ. ತಿಳಿಯುವದು. ತಾ॥ ೧೩ನೇ ಫೆಬ್ರುವರಿ ೧೯೨೬ ಇಸಿ

ಎನ್. ಎಮ್. ಮೂರೇ.
ಡಿ. ಎಸ. ಮ್ಯಾಕಲ್ಲಿಯರ
(ಅಫಿಶಿಯ)
ಮ್ಯಾನೇಜಿಂಗ ಗವ್ಹರ್ನರರು

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ದೆಸೆಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳು ಮತ್ತೀ ... ಟ್ಟುಕೊಳ್ಳಲ್ಪಡುವವು ಚಕ್ಕ ಮ ಹುಂಡಿಯ ವ್ಯವಹಾರವು ಮಾಡಲ್ಪಡುವವು

ಮೆಸರ್ಸ ದೇಶಪಾಂಡೆ ಮತ್ತು ಕಂಪನಿ ಮ್ಯಾನೇಜಿಂಗ ಏಜೆಂಟ್ಸ — ಆಜ್ಞಾಪಾಲನೆ ... ಬೇಕಾಗಿದೆ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಯ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಆರು ಲಕ್ಷದ ಮೇಲಿದೆ. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ... ನಡೆಯುವದು. ಕಾಯಮ ಮತ್ತು ಸೇವಿಂಗ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುದ್ದವರಾವ ಬಿ. ಬಳ್ಳಾರಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒನ್ನರಡು ಆಣೆಯಂತಿರುತ್ತದೆ.

ಎ. ಕೆ. ...,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಲಿಂಗಾಚಾರ್ಯ ವಾಲೀಕಾರ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

...ಗ್ರಹಣಾದಿ ಪ್ರತ್ಯಕ್ಷ-ಮೊದಲಾದ ಕಾಲಗಳೂ ಸರಿಯಾಗಿ ಸರಿಯಾಗಿ ದೃಕ್ ಪ್ರತ್ಯಯಕ್ಕೆ ಬಾರದೇ ತಪ್ಪುವದು ವಿಜಯದ ವಾಚಕರಿಗೆ ಗೊತ್ತೇ ಇರುವದು. ಇದೇ ಗಣಿತದಿಂದ ಹೊರಡುವ ಅಧಿಕ ಚೈತ್ರವಾದರೂ ಹೇಗೆ ನಿಜವಾಗಬೇಕು?

ನೇ ವುವೆ- ಪಂಚಾಂಗ ಪ್ರವರ್ತನ ಕಮೀಟಿಯವರ ಗಣಿತವು ಮುಂಬೈ, ಪುಣೆ, ಸಾಂಗಲಿ ಮೊದಲಾದ ಕಡೆಗೆ ಜ್ಯೋತಿಷ ಸಂಮೇಲನ ಸಭೆ ಕೂಡಿಸಿ ನಿರ್ಣಯಿಸಿದ್ದಾದ್ದು ಇದ್ದು. ಈ ಗಣಿತದಿಂದ ತಯಾರಿಸಿದ ಪಂಚಾಂಗಗಳು ೧೯೧೮ನೇ ಇಸ್ವಿಯಿಂದ ಈ ವರೆಗೆ ನಮಗೆ ಸರಿಯಾಗಿ ದೃಕ್-ಪ್ರತ್ಯಯಕ್ಕೆ ಬಂದಿರುತ್ತವೆ. ಗ್ರಹಣಗಳೂ, ಗ್ರಹಗಳ ಯುತಿಗಳೂ, ಗ್ರಹಗಳ ಉದಯಾಸ್ತಗಳೂ ಇವೇ ಮೊದಲಾದ ಸ್ಪಷ್ಟ ಸಂಗತಿಗಳು ಎಲ್ಲ ದೃಕ್ ಪ್ರತ್ಯಯಕ್ಕೆ ಸರಿಯಾಗಿ ಬಂದಿರುತ್ತವೆ. ಮೊನ್ನಿನ ಸೂರ್ಯಗ್ರಹಣದ ದೃಕ್ ಪ್ರತ್ಯಯದಿಂದ ಎಲ್ಲ ಭಾರತೀಯರ ನಿಶ್ಚಯವು ಈ ಗಣಿತದ ಮೇಲೆ ಹೆಚ್ಚಾಗಿರುತ್ತದೆ. ಚೈತ್ರದಲ್ಲಿ ಮುಂಬರುವ ಅಧಿಕವೇ ಆಗುವದಿಲ್ಲವು ಈ ಗಣಿತದಿಂದ ತೋರುತ್ತದೆ. ಒಂದೇ ಗಣಿತದಿಂದ ಸ್ಪಷ್ಟ ಸಂಗತಿಗಳು ನಿಜವಾಗಿ ದೃಕ್-ಪ್ರತ್ಯಯಕ್ಕೆ ಬರುತ್ತಿರುವಾಗ ಬೇರೆ ಗಣಿತದಿಂದ ಹುಟ್ಟಿದ ಅಸ್ಪಷ್ಟ ಸಂಗತಿಗಳೂ ನಿಜವಿರಲಿಕ್ಕೆ ಬೇಕೆಂಬುದು ನಿಜವಾಗಿದೆ.

ಪಂಚಾಂಗ ಪ್ರವರ್ತನ ಕಮೀಟಿಯವರು ತಮ್ಮ "ಶುದ್ಧ ನಿರಯನ ಪಂಚಾಂಗವನ್ನು" ಝೀಟಾ (ರೇವತೀ) ಯೋಗತಾರೆಯಿಂದ ಸಂಪಾತವಾದ ವರೆಗಿನ ಅಂತರದ ಮೇಲಿಂದ ಅಯನಾಂಶವನ್ನು ಹಿಡಿದು ಗಣಿತ ಮಾಡಿದ್ದಾರೆ. ೧೮-೫೨-೩೦ ಈ ಗಣಿತದ ಪದ್ಧತಿ ಪುರಸ್ಕರ್ತರು ಕೈ. ಲೋ. ಟಿಳಕರು ಮತ್ತು ಬಾಲಚಂದ್ರ ಕೃಷ್ಣ ಭಾಟವಡೇಕರ ಇವರು. ಈ ಝೀಟಾ ತಾರೆಯ ಗಣಿತವು ಕೈ. ಕೇರೋ ಲಕ್ಷ್ಮಣ ಛತ್ರೆಯವರಿಗೂ, ಶಂ. ಬಾ. ದೀಕ್ಷಿತರಿಗೂ, ಜ್ಯೋತಿರ್ವೇದ ಕೇತಕರ (ಆಗಿನ ಮತದಿಂದ) ಇವರಿಗೂ, ಮತ್ತು ಪಾಶ್ಚಾತ್ಯ ಪಂಡಿತರಾದ ಕೋಲಬ್ರೂಕ, ವ್ಹಿಟನೆ, ಬರ್ಜೆಸ, ಬೆಂಟಲಿ ಮೊದಲಾದವರಿಗೂ ಮಾನ್ಯವಾಗುತ್ತದೆ.

ಈ ಶುದ್ಧ ಗಣಿತದಿಂದ ಯುಗಾದಿ ಪ್ರತಿಪದೆಯು ತಾ|| ೧೯ನೇ ಮಾರ್ಚ ಸನ್ ೧೯೨೯ ರವಿವಾರ ಘಟಿಗೆ ೫ ಪಳ ೧೯ ಹೊತ್ತಾದ ಮೇಲೆ ಆಗುವದು. ಮತ್ತು ಮುಂದೆ ಪ್ರತಿಪದೆಯು ಘಟಿಗೆ ೫೧ ಪಳ ೪೨ ವರೆಗೆ ಇರುವದು. ಅರ್ಥಾತ್ ೫ ಘಟಿಗೆಗಳ ಪಳದ ವರೆಗೆ ಫಾಲ್ಗುಣ ವದ್ಯ ಅಮಾವಾಸ್ಯಾ ನಂತರ ಧ್ವಜಾರೋಪಣ ಕಲ್ಯಾಣ ವತ್ಸರಾರಂಭ ಬೇವು ಭಕ್ಷಣ.

ಯುಗಾದಿ ಪ್ರತಿಪದೆಯ ದಿವಸವು ನಿಶ್ಚಯವಾಗಿ ವಾಚಕರಿಗೆ ಗೊತ್ತಾದಂತಾಯಿತು. ಇನ್ನು ವಾಚಕರ ಬೇವಿನ ಎಲೆಯನ್ನು ಪಡೆದು ಈ ಲೇಖವನ್ನು ಮುಗಿಸುವೆವು.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುಶೂಲಿಯೋ? ಮೈಯಲ್ಲಿ ನೋವು ತ್ರಾಸವೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟೊ ಟ್ಯಾಬ್ಲೆಟ್ ತಕ್ಕೊಳ್ಳಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ತಿನ್ನುವಿ, ತಿರುಗುವಿ. ಎಂದೇ ಅಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಶ್ರೀ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ,
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ಪಶುಗಳ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ಹಸಿ ಮತ್ತು ಒಣಗಜ್ಜಿ, ಗಜಕರ್ಣ, ಇಸಬು, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ.

ಹುಬ್ಬಳ್ಳಿಯ ಏಜಂಟರು— ದಿ ಕನಕಾದಿತ್ಯ ಮೆಡಿಕಲಸ್ಟೋರ, ಸ್ಟೇಶನ ರೋಡ ಹುಬ್ಬಳ್ಳಿ, ಕೋಟ ಮತ್ತು ಕಿರುಕೋಳದಿಂದ ದೊರೆಯುವದು.

ಎಸ. ಎಫ. ಪೆಂಟರ
ಖಡೇಬಝಾರ ಬೆಳಗಾವಿ

ಬಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

೧೯೧೭ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಬ್ಯಾಂಕಿನ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾಲ ಪತ್ರ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ವರೆಗೆ ನಡಿಯುವದು.

K. B. Ankaligi
ಧಾರವಾಡ

ವಿಜಯದ ವರ್ಗಣೀ ದರ

—೦—

ತ್ರೈಪತ್ರಕ್ಕೆ

೧೨	ತಿಂಗಳಿಗೆ	೧೨—೮—೦ ರೂ
೬	"	೬—೪—೦ ರೂ
೩	"	೪—೦—೨ ರೂ
ವಾರಪತ್ರಕ್ಕೆ	೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಪಡಿಸಿದರು.

R. N. B 1445

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ ಧಾರವಾಡ ಬುಧವಾರ ತಾ. ೧೦ನೇ ಮಾರ್ಚ ೧೯೨೬ (ಸಂಚಿಕೆ ೫೫

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿ ತಳ್ಳಿ ಬರುವ ... ನೀರು ಒಳ ಸೇರುವದು. ಕಪ್ಪಲಿಯ ಜಗ್ಗು ... ಬಾಗಿಲು ... ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ

ಎರಡು ಪ್ರಕಾರಗಳದ್ದಿರುವವು.

ನಂ ೧	೩೦ ಗ್ಯಾಲನ್.	ಬೆಲೆ	೨೦ರೂ.
ನಂ ೨	೫೦ ,,	,,	೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ... ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಿಸಲ್ಪಡುವದು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿ ಅಕ್ಟ ... ಪ್ರಕಾರ ... ಸ್ಥಾಪಿತವಾದದ್ದು.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಪಂದಿಗೆಯು ... ಉಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ... ಕರೆಂಟ ಮತ್ತು ಫಿಕ್ಸ ಡಿಪಾಜಿಟುಗಳಿಗೆ ... ಕೊಡುವೆವು.

... ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

... ಬಿ. ...,
ಮ್ಯಾನೇಜಿಂಗ ...

ಪ್ರಕಟನೆ

ಬಿ. ಎಸ್. ಎಸ್ ವೈದ್ಯ ಇವರು

ಉತ್ತಮ ಗಾಯನ, ಪೇಟಿ, ನಾಟಕ ಸಹಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕಟ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೩ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧... ಆಣೆಯಾಗಿ ಕೊಡುವೆವು. ವ್ಹಿ. ಪಿ. ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಭಾಷಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿಯಾಗುವದು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೦ ೩-೨೬ ನೇ ಇಸ್ವಿ

"ಹಾಲಗೇರಿಯ ಹೊಲಸ ನೀರು.

ಕೆಲಗೇರಿಯ ಕೊಳೆ ನೀರು.

ಧಾರವಾಡದ ನಿವಾಸಿಗಳ ಜೀವನವು ಹಾಲಗೇರಿ ಮತ್ತು ಕೆಲಗೇರಿಯ ನೀರಿನ ಮೇಲೆ ಅವಲಂಬಿಸಿರುತ್ತದೆ. ಇವೆರಡೂ ಕೆರೆಗಳ ನೀರು ಕುಡಿಯಲಿಕ್ಕೆ ಬರದಷ್ಟು ಕೆಟ್ಟಿರುತ್ತವೆ. ಇಲ್ಲಿಯ ಕರ್ನಾಟಕ ಟಾಯಿಮ್ಸವು ಅನ್ನದಾತಾ ಸುಖೀ ಭವ ಎನ್ನುವ ಧರದಲ್ಲಿ ಪ್ರಸ್ತುತದ ಮ್ಯುನಿಸಿಪಾಲಿಟಿಯ ಆಡಳಿತೆಯನ್ನು ಕೆಳಗೆ ಹೇಳಿದಂತೆ ವರ್ಣಿಸಿರುತ್ತದೆ

"ಶಹರ ನಿವಾಸಿಗಳ ಹಾಗು ಪರಸ್ಥಳದ ಜನರ ನೀರಿನ ತೊಂದರೆಯನ್ನು ತಪ್ಪಿಸುವದಕ್ಕಾಗಿ ಸ್ಪೇಶಲ ಅರೆಂಜಮೆಂಟ (ವ್ಯವಸ್ಥೆ) ಮಾಡಿ ಎರಡು ಅತಿ ದೊಡ್ಡ ಹೌದು ಕಟ್ಟಿಸಿರುವರು. ಇದರಿಂದ ಸಂತೆಗೆ ಬಂದ ಹಳ್ಳಿಗಾಡ ಜನರು ಹಾಲಗೇರಿಯ ಗಲೀಜ ನೀರು ಕುಡಿಯುವದನ್ನು ಬಿಡಿಸಿದಂತಾಯಿತು."

ಕರ್ನಾಟಕ ಟಾಯಿಮ್ಸವು ಹೊರಡುವ ದಿವಸವೇ ಕರ್ಮವೀರವು ಪ್ರಕಟವಾಗುತ್ತದೆ. ಅದೇ ಅಂದರೆ ೫ ನೇ ಮಾರ್ಚದ ಕ. ಟಾ. ದಲ್ಲಿ ಮೇಲಿನ ಬರಹವೂ ಕರ್ಮವೀರದಲ್ಲಿ ಕೆಳಗಿನ ಬರಹವೂ ಬಂದಿರುತ್ತವೆ

"ಧಾರವಾಡಕ್ಕೆ ಕೆಲಗೇರಿಯಿಂದ ನಳಗಳ ದ್ವಾರಾ ಬಂದ ನೀರು ಈಗ ಬಹಳೇ ಕೆಟ್ಟಿವೆ ಎಂಬದೆಲ್ಲ ಸುಜ್ಞರಿಗೆ ತಿಳಿದ ಮಾತು. ಇಲ್ಲಿ ಸ್ಯಾನಿಟರಿ ಖಾತೆಯ ಮೇಲಧಿಕಾರಿಯು ತಪಾಸಣೆಗೆ ಬಂದಾಗ, ಈ ನೀರನ್ನು ನೋಡಿ, ನಡುಗಿದನಂತೆ! ಸಾಮಾನ್ಯ ಜ್ಞಾನವಿದ್ದವನಿಗೆ ಸಹ ಈ ನೀರು ನೋಡಿ, ಮೈಮೇಲೆ ಮುಳ್ಳು ಏಳುತ್ತದೆ. ಅಜ್ಞಾನಿ ಇದ್ದವನೊಬ್ಬ ಈ ನೀರು ಕುಡಿದು ಚರ್ಮರೋಗದಿಂದ ನರಳುತ್ತ ನರಳುತ್ತ ಬಾಧೆಪಡುವನು. ಒಟ್ಟಿಗೆ ಎಲ್ಲರನ್ನು ಕಾಡಿಸುವಷ್ಟು ಈ ನೀರು ಪ್ರಬಲವಾಗಿದೆ. 'ಕೆಟ್ಟ ಮಳೆ ನಾಡಿನ ಮೂಲೆಯಲ್ಲಿ' ಇಂಥ ಮಲಿನ ನೀರು ಸಹ ಹೀಗಿರಲಿಕ್ಕಿಲ್ಲ. ಇದೇನು ನೀರೋ! ಬಡ್ಡಿನ ಜೇನೋ!"

ಕರ್ನಾಟಕ ಟಾಯಿಮ್ಸ ಕರ್ತರು ಅವಾಸ್ತವಿಕ ಮತು ಅಪ್ರಯೋಜಕ ಸ್ತುತಿ ಮಾಡುವಾಗ ಹಾಲಗೇರಿಯ ನೀರು ಗಲೀಜವಾಗಿರುತ್ತದೆಂಬ ಸ್ಪಷ್ಟೀಕರಣ ಮಾಡುತ್ತಿಲ್ಲದೆ ತಾವಾಗಿ ಕೊಟ್ಟು ಬಿಟ್ಟಿರುತ್ತಾರೆ. ಕೆಲಗೇರಿಯ ನೀರು ಸ್ವಚ್ಛವಾಗಿ ಎಷ್ಟು ಕೆಟ್ಟಿರುತ್ತದೆಂಬದಕ್ಕೆ ಊರ ಜನರ ಸಾಕ್ಷಿಯಂತಿರಲಿ, ಸ್ಯಾನಿಟರಿ ಖಾತೆಯ ಸರ್ಜನ ಮೇಜರ ಜನರಲರ ಕೂಡ ನಡೆದ ಪತ್ರವ್ಯವಹಾರವು ಎಂದೂ ಅಳಿಸದಂಥ ಗಟ್ಟಿಮುಟ್ಟಿಯಾದ ಸಾಕ್ಷಿಯಾಗಿರುತ್ತದೆ. ಎರಡೂ ನೀರನ್ನು ಕಲಿಕ್ಕೆ ಟಾಯಿಮ್ಸ ಕರ್ತರಿಂದ ಮಾತ್ರ ಹೊಗಳಿಸಿಕೊಳ್ಳುವ ಮುನಸಿಪಲ ಅಧಿಕಾರಿಗಳೇ ಕಾರಣ. ಆದರೂ ಕರ್ನಾಟಕ ಟಾಯಿಮ್ಸವು, ಹಾಲಗೇರಿಯ ಗಲೀಜ ನೀರಿನ ಬದಲಾಗಿ ಕೆಲಗೇರಿಯ ನಳದ ನೀರನ್ನು ಸಂತೆಯ ಜನರು ಕುಡಿಯುವ ಅನುಕೂಲತೆಗೆಯ ಸ್ವರೂಪದಿಂದ ಪ್ರತ್ಯೇಕವಾಗಿ ಪ್ರಸ್ತಾಪಿಸಿ ಮ್ಯುನಿಸಿಪಾಲಿಟಿಯ ಸ್ತುತಿ ಮಾಡುತ್ತದೆ. ಕರ್ನಾಟಕ ಟಾಯಿಮ್ಸದ ಈ ಸ್ತುತಿಯು ಕಣ್ಣಿಯಲ್ಲಿ ಕಾಲು ಮುಕೆಂಬ ಬಿಸ್ಸನ ನಸಂವರ ಮುಂದೆ ಏಳುತ್ತ ಬೀಳುತ್ತ ಹೋಗುವಂತಿರುತ್ತದೆ.

ತಾಳ್ಮೆಯ ಉಪದೇಶ.

— ೧ —

ಮುಂದಿನ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವ ಗವ್ಹರ್ನರ ಜನರಲರಾದ ಲಾರ್ಡ ಆಯರ್ವಿನ ಸಾಹೇಬರು ವಿಲಾಯತಿಯಲ್ಲಾದ ಒಂದು ಭೋಜನ ಪ್ರಸಂಗದಲ್ಲಿ ಹಿಂದೂ ಜನರಿಗೆ ತಾಳ್ಮೆಯ ಉಪದೇಶ ಮಾಡಿದ್ದಾರೆ. ಒಟ್ಟಿಗೆ ಕಟ್ಟಿದ ರೀತಿಯು ಬಾರವು ಅಗ್ಗಟು ಬಿದ್ದಿದ್ದು, ತಾಳ್ಮೆಯಿಂದ ಬಿಟ್ಟರೇ ಅದು ಬಿಚ್ಚುವದು. ಅದೇ ಪ್ರಕಾರ ಹಿಂದೀ ಜನರು ತಾಳ್ಮೆಯುಳ್ಳವರಾದರೆ ಸ್ವರಾಜ್ಯದ ಅಗ್ಗಟು ಬಿಚ್ಚುವದೆಂದಿದ್ದಾರೆ. ಹಿಂದೀ ಜನರು ಬೇಕಾದಷ್ಟು ಸಹನಶೀಲರಾಗಬಹುದು. ಆದರೆ ಸರಕಾರವು ಆ ಮಾರ್ಗದಲ್ಲಿರುತ್ತದೆಂಬದನ್ನು ಕೃತಿಯಿಂದ ತೋರಿಸಬೇಕಲ್ಲವೇ? ಕಾಂಗ್ರೆಸಿನ ಠರಾವಿನ ಪ್ರಕಾರ ಪಂಡಿತ ಮೋತೀಲಾಲರು ಸರಕಾರಕ್ಕೆ ಎರಡು ತಿಂಗಳ ನೋಟೀಸು ಕೊಟ್ಟರು. ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿದರು. ಕೌನ್ಸಿಲ ಆಫ ಸ್ಟೇಟದಲ್ಲಿ ಠರಾವು ತಂದರು. ಸರಕಾರವು ತಮ್ಮ ಉತ್ತರವನ್ನು ದಿನಕರ ಪರಿಣಾಮದಂತೆ ಹೇಳುತ್ತ ಬಂದದ್ದರಿಂದ, ಸ್ವರಾಜ್ಯ ಪಕ್ಷೀಯರು ಸಹಕಾರದಲ್ಲಿ ಅರ್ಥವಿಲ್ಲೆಂದೇ ನಿರ್ಧರಿಸಿಕೊಂಡು, ಅಸೆಂಬ್ಲಿ ಮತ್ತು ಕೌನ್ಸಿಲಗಳಿಂದ ಹೊರಬೀಳುವ ಠರಾವು ಮಾಡಿದರು. ಹಿಂದುಸ್ಥಾನಕ್ಕೆ ಬಂದಕೂಡಲೆ ಲಾರ್ಡ ಸಾಹೇಬರಿಗೆ ಬಹಳ ಅಗ್ಗಟು ಬಿಚ್ಚುವದು ತಾಳ್ಮೆಯ ಪ್ರಮಾಣ ಮೀರಿ ಬಹಳೇ ಕಠಿಣವಾಗುವದೆಂದು ನಿರ್ವಿವಾದವು.

ದಿಲ್ಲಿಯಲ್ಲಿ ಕೂಡಿದ

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ

ಠರಾವುಗಳು

ದಿಲ್ಲಿಯಲ್ಲಿ ಆಂಸ ೭ ನೇವಿನ ದಿವಸ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯು ಕೂಡಿತ್ತು. ನೂರು ಜನ ಮೆಂಬರರು ಬಂದಿದ್ದರು.

ಸ್ವರಾಜ್ಯ ಪಕ್ಷೀಯರ ಸೂಚಿಸಿದ ಮೇರೆಗೆ ಕೌನ್ಸಿಲ ಆಫ ಸ್ಟೇಟ, ಅಸೆಂಬ್ಲಿ ಮತ್ತು ಇತರ ಕೌನ್ಸಿಲಗಳ ಸ್ವರಾಜ್ಯ ಪಕ್ಷದ ಮೆಂಬರರು ಸಭೆಗಳನ್ನು ಬಿಟ್ಟು ಹೊರಬೀಳಬೇಕೆಂಬ ಠರಾವು ಪ್ರಚಂಡ ಬಹುಮತದಿಂದ ಪಾಸಾಯಿತು.

ಕೌನ್ಸಿಲಗಳಿಂದ ಹೊರಬಿದ್ದ ಕೂಡಲೆ, ನೂಲುವದು, ಖಾದೀ ಪ್ರಸಾರ ಮಾಡುವದು ಮತ್ತು ಲೋಕಜಾಗೃತಿ ಮಾಡುವದು ಇವೇ ಮುಂತಾದ ಲೋಕೋಪಯೋಗಿ ಕೆಲಸಗಳನ್ನು ಮಾಡಬೇಕೆಂದು ಗೊತ್ತಾಯಿತು.

ಬಂಗಾಲ ಮತ್ತು ಅಲ್ಹಾಬಾದ ಇವುಗಳಲ್ಲಿ ರೈತರ ದೆಸೆಯಿಂದ ಸ್ಪೇಶಲ ಕಾಯದೆಗಳು ಕೌನ್ಸಿಲಗಳ ಮುಂದೆ ಬಂದಿವೆ. ಇವುಗಳ ಮಟ್ಟಿಗೆ ಸ್ವರಾಜ್ಯ ಪಕ್ಷದ ಮೆಂಬರರು ಕೌನ್ಸಿಲಗಳಿಗೆ ಹೋಗತಕ್ಕದ್ದು. ಮುಂದೆ ಯಾವುದಾದರೂ ಬ್ಯಾಕಜೀದ ಯೋಜನೆಯು ವಿಚಾರಕ್ಕೆ ಬಂದಾಗ ಮಾತ್ರ ಸಭೆಗೆ ಹೋಗತಕ್ಕದ್ದು. ನಾಗಪೂರದ ಇಲಾಖೆಯಲ್ಲಿ ಮಂತ್ರಿಗಳ ಸಂಬಳವನ್ನು ನಾಮಂಜೂರ ಮಾಡಿದ ಬಳಿಕ ಮೆಂಬರರು ಕೌನ್ಸಿಲಕ್ಕೆ ಕರೆಯು ಹೋಡೆಯತಕ್ಕದ್ದೆಂದು ಆಯಾ ಪ್ರಾಂತಗಳ ಪರಿಸ್ಥಿತಿಯ ಪ್ರಕಾರ ಸ್ಪೇಶಲ ಅನುಕೂಲತೆ ಮಾಡಿ ಕೊಡಲ್ಪಟ್ಟಿರುತ್ತದೆ.

ಸ್ವರಾಜ್ಯ ಪಕ್ಷೀಯರ ಒಳಮತವಿರುವಲ್ಲಿ ಮಂತ್ರಿಯ ಅಧಿಕಾರ ಪಡೆಯಬೇಕೆಂದು ಪ್ರತಿಯೋಗಿ ಸಹಕಾರಿಯಾದ ಡಾಕ್ಟರ ಮುಂಜೆಯವರು ಠರಾವು ತಂದರು. ಆದರೆ ಅದು ಪಾಸಾಗಲಿಲ್ಲ.

ಮುಂದಿನ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರೇ ಆರಿಸಿ ಬರುವಂತೆಯೂ, ಕಾಂಗ್ರೆಸ ಕಮೀಟಿಗಳ ಪುನರ್ಘಟನೆ ಮಾಡುವದಕ್ಕೂ ೫೦೦೦೦ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದರು. ಇದರ ಕೂಡ ಅಲ್ಲಲ್ಲಿ ಸ್ಥಾನಿಕ ಫಂಡು ಕೂಡಿಸಿ, ಅದರ ವಳಿಗೆ ಬಲತರಬೇಕೆಂದೂ ಗೊತ್ತಾಗಿರುತ್ತದೆ.

ಈ ಮೊದಲು ಪ್ರಸಿದ್ಧವಾದಂತೆ ಪಂಡಿತ ಮೋತೀಲಾಲರು ಕಾವಾಗಿ ದಂಡಿನ ಕಮಿಟಿಗೆ ರಾಜೀನಾಮೆ ಕೊಟ್ಟರು.

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಪಟೇಲರು ಉಭಯ ಕಾಲ ಪಿತಾಮಹರಂತೆ, ರಾಜಕೀಯ ಪಕ್ಷ ಭೇದವಿರಹಿತರಾದ್ದರಿಂದ, ಇವರು ರಾಜೀನಾಮೆ ಕೊಡತಕ್ಕದ್ದಿಲ್ಲೆಂದು ನಿರ್ಣಯವಾಯಿತು.

ಆಯುರ್ವೇದಿಕ ಪರಿಷತ್ತು.

—೦—

ಕಾನಪೂರದಿಂದ ವಿಜಯಕ್ಕಾಗಿ ಬಂದ ತಾರು.

—೦—

೧೬ ನೆಯ ಆಯುರ್ವೇದಿಕ ಮಹಾಸಭೆಯು ಕಾನಪೂರದಲ್ಲಿ ಎಪ್ರಿಲ ತಿಂಗಳ ೯-೧೦-೧೧ ಈ ಮೂರು ದಿವಸ ಕೂಡುವದು. ಪಂಡಿತ ಮದನಮೋಹನ ಮಾಲವಿಯಾಯವರು ಅಧ್ಯಕ್ಷರಾಗ ಒಪ್ಪಿದ್ದಾರೆ. ಜಯಪೂರ ಸಂಸ್ಥಾನದ ಮಂತ್ರಿಮಂಡಲದ ಒರ್ವ ಪ್ರಧಾನಿಯಾದ ರಾಯಬಹಾದ್ದೂರ ಗೋಪೀನಾಥ ಪುರೋಹಿತರು ಸ್ವಾಗತ ಕಮೀಟಿಯ ಅಧ್ಯಕ್ಷರೂ, ವಿದ್ಯಾ[illegible] ರಾಯಬಹಾದ್ದೂರ ಶ್ರೀ ಶ್ಯಾಮಸುಂದರ ಎಮ್. ಎ. ಇವರು ಕಾರ್ಯದರ್ಶಿಯೂ ಆಗಿದ್ದಾರೆ. ದೊಡ್ಡ ದೊಡ್ಡ ಗೃಹಸ್ಥರು ಕಾರ್ಯ ನಿರ್ವಾಹಕ ಮಂಡಲದ ಮೆಂಬರರಾಗಿದ್ದಾರೆ. ವೈದ್ಯರೂ, ವೈದ್ಯದಲ್ಲಿ ಅಭಿಮಾನವಿದ್ದವರೂ ಪರಿಷತ್ತಿಗೆ ಬಂದು, ತಮ್ಮ ಅನುಭವದ ಲಾಭ ಕೊಡಬೇಕೆಂಬ ವಿನಂತಿಯು.

ಮರಾಟಿಯ ವಿರುದ್ಧ ಚಳವಳಿ-

ಪುಣೆಯ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು ಮರಾಟಿಯಲ್ಲಿ ಕೊಡಬೇಕೆಂಬ ವಿಚಾರಕ್ಕೆ ವಿಲಿಂಗಡನ್ನ ಕಾಲೇಜದ ಪ್ರಿನ್ಸಿಪಾಲರಾದ ಮಿ ಭಾಟೆಯವರು ಕಾಲೇಜದವರು ಪ್ರತಿಕೂಲರಿದ್ದಾರೆಂಬುದು ಸಂತೋಷದ ಸಂಗತಿಯು. ಈ ಕಾಲೇಜದಲ್ಲಿ ಸರಿ ಅರ್ಧ ವಿದ್ಯಾರ್ಥಿಗಳು ಕನ್ನಡಿಗರಿದ್ದು, ಇವರೆಲ್ಲರೂ ಕಾಲೇಜ ಬಿಡಬೇಕಾದೀತೆಂಬ ಅಭಿಪ್ರಾಯವನ್ನು ಪ್ರಸಿದ್ಧ ಮಾಡಿದ್ದಾರೆ. ರಾ. ಬ. ಚಿನ್ನಪ[illegible]ದ ಹನುಮಂತರಾಯರೂ ಮಹಾರಾಷ್ಟ್ರ ಕಾಲೇಜದಲ್ಲಿ ಮರಾಟಿಯನ್ನು ಶಿಕ್ಷಣದ ಭಾಷೆ ಮಾಡಿದರೆ- ಕಾರವಾರ, ಬೆಳಗಾವಿ ಮತ್ತು ಸೊಲ್ಲಾಪೂರ ಜಿಲ್ಲೆಗಳ ಕನ್ನಡಿಗರಿಗೆ ಇದರಿಂದ ಪ್ರಯೋಜನವಾಗಲಾರದೆಂಬ ಲೇಖವನ್ನು ಇಂಗ್ರೇಜಿ ವರ್ತಮಾನಗಳಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಫೆಬ್ರುವರಿಯ ಎರಡನೆಯ ವಾರದಲ್ಲಿ ಬಂಗಾಲದಲ್ಲಿ ೩೧ ದರೋಡೆಗಳಾದವು. ಅಲೀಪೂರ ಜಿಲ್ಲೆಯಲ್ಲಿಯೇ ಐದು ದರೋಡೆಗಳಾದವು.

ವಿವಿಧ ವರ್ತಮಾನಗಳು

—೦—

ಇಂದೂರಿನ ಹೋಳಕರ ಮಹಾರಾಜರು ರಾಜ್ಯತ್ಯಾಗ ಮಾಡಿದ ವರ್ತಮಾನ ಕೇಳಿ, ಮುಮತಾಜಬೇಗಮಳು ಹರ್ಷಭರಿತಳಾದಳು. ಇವಳು ಮುಂಬಯಿಯ ಮ್ಯುನಿಸಿಪಾಲಿಟಿಯ ಮೆಂಬರರೂ ಶೇಠಜಿಗಳ ವ್ಯಾಪಾರಿಯೂ ಆದಂಥ ಸೇಠ ಅಬ್ದುಲಕ[illegible] ಮಾನಸಾಹೇಬರನ್ನು ಸದ್ದಿಲ್ಲದೆ ಮದುವೆ ಮಾಡಿಕೊಂಡಿದ್ದಾಳೆ. ಸಾಹೇಬರಿಗೆ ೫೦ ವರ್ಷ

ಇಂದೂರಿನ ಆಡಳಿತವನ್ನು ನೋಡಲು ಐದರದೊಂದು ಕಮೀಟಿ ನೇಮಿಸುವರು. ಇದಕ್ಕೆ ಮಂತ್ರಿಮಂಡಲವೆಂಬ ಹೆಸರು ಕೊಡುವರು.

ಮುಂಬಯಿ ಇಲಾಖೆದ ಕೌನ್ಸಿಲಿನ ಉಪಾಧ್ಯಕ್ಷನ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರಾದ ಶ್ರೀ. ಜಾಲಭಾಯಿ ದೇಸಾಯಿಯವರು ಪ್ರಚಂಡ ಬಹುಮತದಿಂದ ಆರಿಸಲ್ಪಟ್ಟರು. ಡಾಕ್ಟರ ಜಾವಲೆ ಎಂಬುವವರು ಪ್ರತಿಪಕ್ಷಿಯಾಗಿದ್ದರು.

ನಾಗಪೂರದ ಕೌನ್ಸಿಲದಲ್ಲಿ ಮಂತ್ರಿಗಳನ್ನು ನೇಮಿಸುವ ವಿಚಾರ ನಡೆದಿದೆ. ಇವರಿಗೆ ಎರಡೇ ರೂಪಾಯಿ ಸಂಬಳ ಕೊಡಬೇಕೆಂಬ ಠರಾವು ತಂದು ಇವರ ಉಪಹಾಸ ಮಾಡಬೇಕೆಂದು ಸ್ವರಾಜ್ಯ ಪಕ್ಷೀಯರು ಯೋಚಿಸಿದ್ದಾರೆ.

ಪುಣೆ ಜಿಲ್ಲೆಯಲ್ಲಿ ಸಾಸವಡದ ಹತ್ತರದ ಮೋರಗಾವ ಎಂಬಲ್ಲಿ ಹೋಳೀ ಹಬ್ಬದಲ್ಲಿ ಭಯಂಕರ ದಂಗೆಯಾಗಿ ಒಬ್ಬನು ಸತ್ತನು ಅನೇಕರು ಘಾಯವಾಗಿದ್ದಾರೆ.

ಸರಹದ್ದಿನಲ್ಲಿ ಅಫ್ರಿದಿ ಮುಸಲಮಾನರು ಬ್ರಿಟಿಶ ಹದ್ದಿನಲ್ಲಿ ದರೋಡೆಯ ಹಲ್ಲಾ ಮಾಡಿದರು. ಹಲ್ಲೆಯಲ್ಲಿ ಪೋಲೀಸರು ದರೋಡೆಗಾರರಲ್ಲಿ ನಾಲ್ವರನ್ನು ಕೊಂದು ಅನೇಕರನ್ನು ಘಾಯಪಡಿಸಿದ್ದಾರೆ

ಈ ವರ್ಷ ಹಿಂದುಸ್ಥಾನದಲ್ಲಿ ಬಾದಶಹರ ವರ್ಧಂತ್ಯುತ್ಸವವನ್ನು ಜೂನ ತಿಂಗಳ ೫ ನೇಯ ತಾರೀಖಿನ ದಿವಸ ಮಾಡಬೇಕೆಂದು ಸರಕಾರದಿಂದ ಜಾಹೀರ ಮಾಡಲ್ಪಟ್ಟಿದೆ.

ಶಕೆ. ೧೮೪೮ನೇ ಯುಗ ಪ್ರತಿಪದೆಯು,

ಲೇಖಕ ಲಿಂಗೋ ಬಾಳಕೃಷ್ಣ [illegible]
ಎರಡಾಲ

ಹೊಸ ಸಂವತ್ಸರದ ಆರಂಭದ ದಿನವು ಹಿಂದುಗಳಾದ ನಮಗೆ ಅತ್ಯಂತ ಪವಿತ್ರ ಹಬ್ಬವಾಗಿರುವದಲ್ಲದೆ ಜ್ಯೋತಿಃಶಾಸ್ತ್ರದಿಂದ ಶುಭದಿನವೂ ಆಗಿರುವದು. ಶಕೆ ೧೮೪೮ನೇ ಯುಗ ಪ್ರತಿಪದೆಯನ್ನು ಯಾವ ದಿವಸ ಮಾಡಬೇಕೆಂಬುದು ದೊಡ್ಡ ದೊಡ್ಡ ಜ್ಯೋತಿಃಶಾಸ್ತ್ರಜ್ಞರಲ್ಲಿ [illegible] ಒಗೆಯ ಮತಭೇದವಿದ್ದದ್ದು ಕಂಡು [illegible]

(೧) ಶಕೆ ೧೮೪೮ [illegible] ಆರಂಭದ ದಿನದ ಅಧಿಕಮಾಸ (ಜ್ಯೇಷ್ಠ [illegible]) ಇರುವದರಿಂದ ಈ ತಿಂಗಳು ಬಿಟ್ಟು ಶುದ್ಧ ಚೈತ್ರ ಪ್ರತಿಪದೆಯೇ (ತಾ|| ೧೩-೪-೨೬) ಯುಗ ಪ್ರತಿಪದೆಯೆಂದು ಕೆಲವು ಗ್ರಹಲಾಘವೀ ಗಣಿ[illegible] ಅಭಿಪ್ರಾಯವು

(೨) ಅಧಿಕವು ಜ್ಯೇಷ್ಠದಲ್ಲಿ ಬಂದರೇನಾಯಿತು? ಅಧಿಕದ ಹಿಂದಿನ ದಿವಸವೇ ಯುಗ ಪ್ರತಿಪದೆಯನ್ನು ಮಾಡುವದು ಶಾಸ್ತ್ರ ಸಮ್ಮತವೆಂದೂ, ಆದುದರಿಂದ ತಾ|| ೧೫-೩-೨೬ ದಿವಸ ಮಾಡಬೇಕೆಂದೂ ಪುಣೆಯ ಸಂಸ್ಕೃತ ಪಾಠಶಾಳೆಯ ಮಹಾಮಹೋಪಾಧ್ಯಾಯರಾದ ವಾಸುದೇವ ಶಾಸ್ತ್ರಿ ಅಭ್ಯಂಕರರವರೂ, ಜ್ಯೋತಿರ್ವಿದರಾದ ಶಂಕರ ಶಾಸ್ತ್ರಿ [illegible] ಪ್ರಭೃತಿಗಳೂ, ಇನ್ನೂ ಕೆಲವರೂ ಹೇಳುವರು

(೩) ಬರುವ ಚೈತ್ರದಲ್ಲಿ ಅಧಿಕವು ಮೊದಲಾಗುವದಿಲ್ಲೆಂದು ಪಂಡಿತ ರಘುನಾಥ ಶಾಸ್ತ್ರಿ ಪಟವರ್ಧನ ಮೊದಲಾದ ಸುಪ್ರಸಿದ್ಧ ಜ್ಯೋತಿಃಶಾಸ್ತ್ರಜ್ಞರ ಅಭಿಪ್ರಾಯವು.

ಈ ಮೂರು ಬಗೆಯ ಜನರಲ್ಲಿ ಯಾರು ಹೇಳುವದನ್ನು ನಂಬಬೇಕು? ಮತ್ತು ಹಬ್ಬದ ನಿಶ್ಚಿತವಾದ ದಿವಸವೆಂದು? ಎಂಬ ಸಂಗತಿಗಳನ್ನು [illegible] ತಿಳಿಯಲು ವಾಚಕರು ಉತ್ಸುಕರಾಗಿ [illegible]. ನಮ್ಮ ಬುದ್ಧಿಗೆ ತೋಚಿದಷ್ಟು ಕೆಳಗೆ ವಿವರಿಸಿದ್ದೇನೆ. ಇದರಿಂದ ವಾಚಕರ ಸಮಾಧಾನವಾಗಬಹುದು.

ಮೇಲಿನ ೧ನೇ ಮತ್ತು ೩ನೇ ಮುದ್ದೆಗಳು ಜ್ಯೋತಿರ್ಗಣಿತಕ್ಕೆ ಸಂಬಂಧಿಸಿದವುಗಳೂ, ೨ನೇ ಮುದ್ದೆಯು ಒರೇ ಹಿಂದೂ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದು ಇರುತ್ತವೆ.

೧ನೇ ಮುದ್ದೆಯ ವಿವೇಚನೆ- ಹಳೇ ಪದ್ಧತಿಯ (ಗ್ರಹಲಾಘವಿಯ) ಗಣಿತದಿಂದ ಚೈತ್ರದಲ್ಲಿ ಅಧಿಕವು ಬರುತ್ತಿರುವದು. ಈ ಗಣಿತವನ್ನು ಅನುಸರಿಸಿದ ಪಂಚಾಂಗಗಳು ಸ್ಪಷ್ಟ ಪ್ರತ್ಯಕ್ಷ ಸರಿಯಾಗಿ ಬರುವದಿಲ್ಲೆಂಬುವದು ಎಲ್ಲರಿಗೂ ಗೊತ್ತೇ ಇರುವದು. ಗ್ರಹಲಾಘವೀ ಗಣಿತವು ಈಗಿನ ಕಾಲಕ್ಕೆ ನಿರುಪಯೋಗವಾದಷ್ಟು ಎಲ್ಲರಿಗೂ ಮನವರಿಕೆಯಾಗಿದೆ. ಶಕೆ ೧೮೪೮ನೇದಲ್ಲಿಯ ಗ್ರಹಗಳ ಯುತಿಗಳೂ, ಗ್ರಹಣಗಳ ಉದಯಾಸ್ತಗಳೂ, ಸೂ

ವಿವಿಧ ವರ್ತಮಾನಗಳು.

—೦—

...ದಲ್ಲಿ ಇಂದು ಪಟ್ಟಗಟ್ಟುವ ಯುವ ಮಹಾರಾಜಾಧಿರಾಜ ರಾಜರಾಜೇಶ್ವ...ನ ಸವಾಯಿ ಶ್ರೀ ಹೋಳಕರ ಬ... ಎಂದು ಭಟ್ಟಂಗಿಗಳು ಸಾರುವರು.

—

...ಭಾಸ್ಕರ ಮುಳೆಯವರು ಸೊಲ್ಲಾಪೂರ ಮ್ಯು...ಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು

—

ವರ್‍ಹಾಡದ ಮಾಜೀ ಕೌನ್ಸಿಲ ಮೆಂಬರರಾದ ಮಿ. ಸಖಾರಾಮಪಂತ ಎಂಬವರು ಖೊಟ್ಟ ಸಾಲದ ...ಗದಗಳನ್ನು ಸೃಷ್ಟಿಮಾಡಿ, ಸುಳ್ಳು ಸಾಕ್ಷೀ ನುಡಿದ ಆರೋಪದಿಂದ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಇವರಿಗೆ ರಾವಸಾಹೇಬ ಪದವಿ ಇರುವದಲ್ಲದೆ, ಬೆಂಚ ಮ್ಯಾಜಿಸ್ಟ್ರೇಟರೂ ಆಗಿದ್ದಾರೆ.

—

ನಾಗಪೂರ ಕೌನ್ಸಿಲದಲ್ಲಿ ತೆರವಾಗಿದ್ದ ಅಧ್ಯಕ್ಷ ಸ್ಥಳಕ್ಕಾಗಿ ಸರ ಗಂಗಾಧರರಾವ ಚೀಟಣೀಸ ಮತ್ತು ಸ್ವರಾಜ್ಯ ಪಕ್ಷದವರಾದ ಮಿ. ತಾಳೆ ಈ ಪ್ರಕಾರ ಇಬ್ಬರು ಉಮೇದವಾರರಾಗಿದ್ದರು. ಮಿ ತಾಳೆಯವರು ಬಹುಮತದಿಂದ ಆರಿಸಲ್ಪಟ್ಟರು.

—

ಸಾಂಗಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ವಿರುದ್ಧ ಬಂದ ನಿಂದಾವ್ಯಂಜಕ ಠರಾವು ಪಾಸಾಗದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ವಿರುದ್ಧ ಪಕ್ಷದವರು ಅಧ್ಯಕ್ಷರ ಮೇಲೆ ಫಿರ್ಯಾದಿ ಮಾಡಲು ಮಂಜೂರಿ ಕೊಡಬೇಕೆಂದು ಯಜಮಾನರಿಗೆ ಬೇಡಿಕೊಂಡಿದ್ದಾರೆ.

—

ಸಿಂಧದಲ್ಲಿ ದರೋಡೆಗಾರರು ಬಲ್ಗಾಯಿ ಸ್ಟೇಶನದಲ್ಲಿ ದಾಳೀ ಇಟ್ಟು, ಸ್ಟೇಶನ ಮಾಸ್ತರನನ್ನು ಎಚ್ಚರವಿಲ್ಲವಂತೆ ಕಂದ್ಲಿಯಿಂದ ಹೊಡೆದು, ಮನೆಗೆ ಹೋಂದು, ಆತನ ಹೆಂಡತಿಯ ಮೈಮೇಲಿನ ಒಡಿವೆಗಳನ್ನು ಕಳಕ್ಕೊಂಡು ಕಾಲಿಗೆ ಬುದ್ಧೀ ಹೇಳಿದ್ದಾರೆ.

—

ಹೈದರಾಬಾದಿನ ನಿಜಾಮಸಾಹೇಬರು ಹೋದ ದರ್ಬಾರದಲ್ಲಿ ದರಬಾರ ಕೂಡಿಸಿ, ನ್ಯಾಯವಿಚಾರಣೆ ಮಾಡುವ ಹಾಯಕೋರ್ಟಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟ ಸನದನ್ನು ಒಪ್ಪಿಸಿದರು. ಪುರುಷೋತ್ತಮದಾಸನ ಠಿಕ್ರಿಯ ಪರಿಣಾಮವೇ ಸೈ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ಗಲಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಹುಳಿಯೋ? ಮುಖ್ಯದಲ್ಲಿ ನೊಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮುಖ್ಯದಲ್ಲಿ ನೋಯುತ್ತದೆ

ಕಂದ— ಹಾಗಾದರೆ ಮೋಹಿನಿ ಹಲ್ಲುಪುಡಿ ಉಪಯೋಗಿಸಿರಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ತೀರ ತುಂಬ ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ನರಸಿಂಹ ಪಂಡಿತ ಸ್ಟೋರ್, ಡಿಸ್ಪೆನ್ಸಿಂಗ ಕೆಮಿಸ್ಟ ಮಾತು ಡ್ರಗಿಸ್ಟ್ಸ ಸ್ಟೇಶನರೋಡ ಹುಬ್ಬಳ್ಳಿ



ಪ್ರಾಣಸಂಹಾರ

ಅಥವಾ

ಘಾಟಿಮುಡ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಮಿಸ್ಟಿ, ಗರ್ಮಿ ಯಜಿಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಹಾ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರು ಆಣೆ. ಪಂಸ್ಟೇಜದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು— ದಿ ಕರ್ನಾಟಕ ಮೆಡಿಕಲ್ ಹಾಲ - ಸ್ಟೇಶನ ರೋಡ ಹುಬ್ಬಳ್ಳಿ ಕೋಕ ಮತ್ತು ಕಿರಕೋಳದಿಂದ ದೊರೆಯುವದು. } ಎನ. ಎಫ. ಪೆಂಟರ ಖಡೇಬಝಾರ ಬೆಳಗಾವಿ

ಸಿ. ಆಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ ವಸ್ತ್ರಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Aukaligi
ಧಾರವಾಡ

ವಿಜಯದ ವರ್ಗಣೀ ದರ

—•—

ನಿತ್ಯಪತ್ರಕ್ಕೆ	
೧೨ ತಿಂಗಳಿಗೆ	೧೨—೮—೦ ರೂ
೬ "	೭—೨—೦ ರೂ
೩ "	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 144

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ ಧಾರವಾಡ ಗುರುವಾರ ತಾರೀಖು ೧೧ನೇ ಮಾರ್ಚ ೧೯೨೬ ಸಂಚಿಕೆ ೫೬

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಹಾರ ಕಪ್ಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಲಿಯು ನೀರನ್ನು ಮುಟ್ಟಿ ... ಕಪ್ಲಿಯು ತಕ್ಷಣ ... ಕೆಳಭಾಗದಲ್ಲಿಯು ಜಾಗೆ ... ಬೇರೆ ಬಲ ಸೇರುವದು. ... ಜಾಳಿಗೆಯ ಪರದೆಯು ನೀರಿನ ... ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್	ಬೆಲೆ	೨೦ ರೂ.
ನಂ ೨	೫೦ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ
ಜಿಲ್ಹಾ, ಸಾತಾರಾ

ಪ್ರಕಟನೆ.

ವಿ. ಎಸ್. ಎಸ್ ವೈದ್ಯ ಇವರು-

ಉತ್ತಮ ಗಾಯನ, ಪೇಟಿ, ವ ನಾಟಕ ಸ ... ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ ,,
ಲೋ: ಟಿಳಕರ ಚರಿತ್ರ	೪ ,,
... ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧೫ ಆಣೆಯಾಗಿ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಳ್ಳದ್ದಿರುತ್ತದೆ.

... ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೇಟಿವ್ಹ ... ಸೊಸಾಯಟಿಯ ಆಕ್ಟ ಪ್ರಕಾರ ... ಮಾಡಲ್ಪಟ್ಟದೆ

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ... ಸ್ಥಾನ.

... ಲಕ್ಷ ... ಚೆಕ್ಕ ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ... ಕರಾರು ಮತ್ತು ... ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ... ರಿಂದ ತಿಳಕೊಳ್ಳಬೇಕು.

ಮಧ್ವರಾವ ... ಜಹಗೀರದಾರ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಳ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲೀಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೧-೩-೨೬ ನೇ ಇಸ್ವಿ

ಅಸೆಂಬ್ಲಿಗೆ ಶರಣು.

ಶ್ರೀ. ಪಟೇಲರ ಧೀರವೃತ್ತಿಯು.

ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಸೋಮವಾರದ ದಿವಸ ಅಸೆಂಬ್ಲಿಯ ಸ್ವರಾಜ್ಯ ಪಕ್ಷದ ಮೆಂಬರರು ಮಧ್ಯಾನ್ಹದ ಒಂದು ತಾಸಿನ ಸಮಯದ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ, ಅಲ್ಲಿಂದ ಹೊರಬಿದ್ದು ಬಂದರು. ಜಗತ್ತಿನ ಇತಿಹಾಸದಲ್ಲಿ ಅತ್ಯಾಶ್ಚರ್ಯ ಮತ್ತು ಅಪೂರ್ವವಾಗುವ ಪ್ರದರ್ಶನವನ್ನು ನೋಡುವದಕ್ಕಾಗಿ ಅಖಿಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮೆಂಬರರಾದ ದೇವಿ ಸರೋಜಿನಿ, ವಲ್ಲಭಭಾಯಿ ಪಟೇಲ, ಶ್ರೀನಿವಾಸ ಅಯ್ಯಂಗಾರ, ಸತ್ಯಮೂರ್ತಿ, ರಾಜೇಂದ್ರ ಪ್ರಸಾದ ಮೊದಲಾದವರೆಲ್ಲರೂ ಹೋಗಿದ್ದರು. ಇವರಿಗೆ ಸ್ವತಂತ್ರ ಪಕ್ಷೀಯರು ಅನುಕೂಲರಾಗುವದಂತಿರಲಿ; ಸುಧಾರಣೆಯ ಗತಿ ಹಿಂಕೊಳ್ಳಬೇಕೆಂದು ಸರಕಾರದ ಮುಖ್ಯ ಠರಾವನ್ನು ಅಂದರೆ- ಕಾರ್ಯಕಾರಿ ಮಂಡಲದ ಸಂಬಳದ ರಕಮನ್ನು ನಾಮಂಜೂರ ಮಾಡಬೇಕೆಂದಿದ್ದರು. ಇವರ ಪ್ರಮುಖರಾದ ಬ್ಯಾರಿಸ್ಟರ ಜಿನ್ನಾ ಸಾಹೇಬರು ಸ್ವರಾಜ್ಯ ಪಕ್ಷದ ಸಹಾಯದಿಂದ ತಮ್ಮ ಹೇತು ಭರ್ತಿ ಮಾಡಿಕೊಳ್ಳಬೇಕೆಂದಿದ್ದರು. ಇವರಿಗಿಂತ ಎಷ್ಟೋ ಸಮುದ್ರಗಳ ನೀರು ಕುಡಿದ ಸರ ಮುದಿಮನ ಸಾಹೇಬರು ಈ ಠರಾವನ್ನು ಮೊದಲು ತರದೆ, ೧೮ ವಿಷಯಗಳ ಹಿಂದೆ ಇಟ್ಟರು. ಬ್ಯಾರಿಸ್ಟರ ಜಿನ್ನಾ ಸಾಹೇಬರು ಸರ ಸಾಹೇಬರ ತಂತ್ರ ಕಂಡು ಸಿಟ್ಟಿನಿಂದ ಟೀಕೆಯ ಪ್ರಕಟಿಸಿದರು. ಆದರೂ ಅವರು ತಮ್ಮ ಜಿದ್ದು ಬಿಡಲಿಲ್ಲ. ಯಾವದೇ ಠರಾವು ಬರಲಿ; ಅದನ್ನು ಲಕ್ಷಿಸದೆ, ಕೌನ್ಸಿಲದಿಂದ ಹೊರಬೀಳುವದೇ ಪಂಡಿತ ಮೋತಿಲಾಲರ ಚಿತ್ತವಾಗಿತ್ತು. ಆ ಪ್ರಕಾರ ಇವರು ಇವರಿಬ್ಬರ ವಾಗ್ಯುದ್ಧವನ್ನು ಊರು ಸುಟ್ಟರೂ ಹನುಮಪ್ಪ ಹೊರಗೆ ಎಂಬಂತೆ ನೋಡುತ್ತ ಕೂತರು; ಮತ್ತು ತಮ್ಮ ಸಮಯ ಬಂದ ಕೂಡಲೆ ಪಂಡಿತ ಮೋತಿಲಾಲರ ಅಪ್ಪಣೆಯನ್ನು ಪಡಕೊಂಡು ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿ ಬಿಟ್ಟು ಎಳೆ ಹೊರಬಿದ್ದು ಹೋಗುವವರೆಂಬ ಕಾರಣಗಳನ್ನು ಬರೆದ ಕಾಗದವನ್ನು ಓದಿದರು. (ಇದನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು.) ಲೇಖವನ್ನು ಓದಿದವರೇ ಬಿಡಾರದ ದಾರಿ ಹಿಡಿದರು. ಉಳಿದವರೂ ಇವರನ್ನು ಹಿಂಬಾಲಿಸಿದರು. ಈ ತೆರವಾಗಿ ಇವರು ಹೋದದ್ದನ್ನು ಕಂಡು, ಪಂಡಿತ ಮಾಲವೀಯರವರು ಸಂತಪ್ತರಾಗಿ ಸರಕಾರವು ಅಸೆಂಬ್ಲಿಯ ಬೇಡಿಕೆಯನ್ನು ತಿರಸ್ಕರಿಸಿದ ಬಗ್ಗೆ ತಿರಸ್ಕಾರವನ್ನು ವ್ಯಕ್ತಪಡಿಸಿದರು. ಆದರೆ ಮವಾಳ ಅಥವಾ ಸ್ವತಂತ್ರ ಪಕ್ಷವು ಒತ್ತಟ್ಟಿಗಿದ್ದಂತಾಗಿ, ಪಂಡಿತರು ಸ್ವರಾಜ್ಯ ಪಕ್ಷೀಯರನ್ನು ಹಿಂಬಾಲಿಸದೆ, ತಮ್ಮ ಸ್ಥಳದಲ್ಲಿ ಕೂತುಕೊಂಡರು. ಜಗತ್ತಿನಲ್ಲಿ ಅಪಹಾಸ್ಯವಾಗುವಂಥ ಕೃತಿಯು ನಡೆದ್ದರೂ, ಸರ ಮುದಿಮನ ಸಾಹೇಬರು ಮನಸ್ಸಿನಲ್ಲಿ ನಗುತ್ತ ಇತರ ವರ್ತನವನ್ನು ದೂಷಿಸುವವರಂತೆ ಕೂತುಕೊಂಡಿದ್ದರು. ಸ್ವರಾಜ್ಯ ಪಕ್ಷೀಯರ ಸ್ಥಳವು ತೆರವಾದ ಬಳಿಕ ಒಬ್ಬಿಬ್ಬರು ಅಲ್ಲಿ ಕೂಡಲಿಕ್ಕೆ ಹೋದರು. ಆ ಪವಿತ್ರ ಸ್ಥಳದಲ್ಲಿ ನೀವು ಕೂಡತಕ್ಕದಲ್ಲೆಂದು ಅಧ್ಯಕ್ಷರು ನುಡಿದು, ಅವರನ್ನು ಅಲ್ಲಿಂದ ಎಬ್ಬಿಸಿದರು.

ಸ್ವರಾಜ್ಯ ಪಕ್ಷೀಯರು ಶರಣು ಹೊಡೆದು ಹೋದನಂತರ ಅಧ್ಯಕ್ಷರು ಮಹತ್ವದ ಭಾಷಣ ಮಾಡಿದರು. ಅದೇನೆಂದರೆ—

" ಹಿಂದುಸ್ಥಾನದ ಕಾಯದೆಯ ಪ್ರಕಾರ, ಅಸೆಂಬ್ಲಿಯ ಪ್ರಾತಿನಿಧಿಕ ಸ್ವರೂಪವು ಹೊರಟು ಹೋಯಿತು. ಇದು ಪ್ರಾತಿನಿಧಿಕತ್ವವುಳ್ಳದ್ದಾಗಿರುವದೋ? ಇಲ್ಲವೋ ? ಎಂಬದನ್ನು ನೋಡುವ ಕೆಲಸವು ಸರಕಾರದ್ದಾಗಿರುತ್ತದೆ. ಮಂತ್ರಿಗಳ ಠರಾವುಗಳನ್ನು ಆ ಮಾಲಿನಲ್ಲಿ ತರುವ ಒಂದು ಸಂಸ್ಥೆ ಮಾತ್ರ ಆಯಿತು. ಸರಕಾರವು ವಾದಗ್ರಸ್ತ ಪ್ರಶ್ನೆಗಳನ್ನು ಅಸೆಂಬ್ಲಿಯ ಮುಂದೆ ತರತಕ್ಕದ್ದಲ್ಲ. ಹಾಗೆ ಮಾಡದಾದರೆ- ಇವನ್ನು ಅಸೆಂಬ್ಲಿಯ ಮುಂದೆ ತರದೆ ತನಗಿರುವ ಅಧಿಕಾರವನ್ನು ಉಪಯೋಗಿಸಬೇಕಾಗುವದು. ಅಥವಾ ಅಸೆಂಬ್ಲಿಯನ್ನು ಕಡೆತನಕ ತಹಕೂಬ ಮಾಡಬೇಕಾದೀತು. ಇಂಥ ಅಸಾಧಾರಣ ಅಧಿಕಾರದ ಉಪಯೋಗ ಮಾಡುವ ಪ್ರಸಂಗವನ್ನು ಸರಕಾರವು ತರಗೊಡಲಾರದೆಂದು ಆಶಿಸುತ್ತೇನೆ"

ಶ್ರೀ. ಪಟೇಲರು ತಮ್ಮ ಮೇಲೆ ಇಂಥ ಭಯಂಕರ ಬಾಂಬು ಚಲ್ಲಲಾರರೆಂದು ಸರಕಾರ ಪಕ್ಷೀಯರು ಊಹಿಸಿದ್ದರು. ಆಕಲ್ಪಿತವಾಗಿ ಬಂದ ಕಠಿಣ ಪ್ರಸಂಗ ನೋಡಿ ಬೆದರಿ ಬೆಂಡಾಗಿದ್ದಾರೆ.

ಕಾಲಿಕತ್ತದ ಪೊ. ಸಬ್ ಇನ್ಸಪೆಕ್ಟರರಾದ ಮಿ. ಮಾಧವನಾಯ್ಡರೆಂಬವರು ಆರೋಪಿಗಳಿಗೆ ಹಿಂಸೆ ಕೊಟ್ಟರೆಂಬ ಆರೋಪದ ಮೇಲಿಂದ ಸೆಶನಜಡ್ಜರು ಇವರಿಗೆ ಆರು ತಿಂಗಳ ಸಕ್ತಮಜುರಿ ಶಿಕ್ಷೆ ವಿಧಿಸಿದರು.

ಬ್ರಹ್ಮದೇಶಿಯರ ಬಂಟತನ.

ಕಾಂಗ್ರೆಸದ ಅಜ್ಞೆಯ ಮೇರೆಗೆ ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿ, ಕೌನ್ಸಿಲುಗಳಿಂದ ಹೊರಬೀಳುವ ಮುಂಚೆಯೇ ಬ್ರಹ್ಮದೇಶದ ಕೌನ್ಸಿಲದ ರಾಷ್ಟ್ರೀಯ ಸ್ವರಾಜ್ಯ ಮತ್ತು ಹೋಮರೂಲ ಪಕ್ಷದ ಮೆಂಬರರು ೫ನೆಯ ತಾರೀಖಿನ ದಿವಸವೇ ಕೌನ್ಸಿಲಕ್ಕೆ ಶರಣು ಹೊಡೆಯುವ ಠರಾವು ಮಾಡಿದರು. ಪ್ರಜಾಹಿತದ ವಿರುದ್ಧವಾಗಿ ಸರಕಾರವು ಒದ್ದಿಯೊ ವರ್ತಿಸುವದೇ ಕೌನ್ಸಿಲ ಬಹಿಷ್ಕಾರಕ್ಕೆ ಕಾರಣವಾಯಿತು. ಮೂರೂ ಪಕ್ಷಗಳ ಮೆಂಬರರು ಒಬ್ಬರ ಹಿಂದೊಬ್ಬರು ಎದ್ದು ಹೋದ ಬಳಿಕ ಉಳಿದವರನ್ನು ಎಣಿಸಲು- ಕೋರಮ ಕೂಡ ಆಗಲಿಲ್ಲ. ಆಗ ಕೌನ್ಸಿಲ ಕೆಲಸವನ್ನು ತಹಕೂಬ ಮಾಡಿದರು. ತಾವು ಮಾಡುವ ಪ್ರತಿಯೊಂದು ಯೋಜನೆಯು ಪ್ರಜಾ ಹಿತದ್ದೇ ಇರುತ್ತದೆ. ಮೆಂಬರರು ಕ್ಯಾಲೆತ್ತಿನಂತೆ ಗೋಣು ಹಾಕಬೇಕೆಂದು ಆಳರಸರ ಅಭಿಲಾಷೆ ಇರುತ್ತದೆ. ಇದು ಹೇಗೆ ಕೊನೆಗಾಣಬೇಕು! ಬ್ರಹ್ಮದೇಶದ ಬಂಟರು ತೋರಿಸಿದ ಅಭಿಮಾನವು ನಿಜವಾಗಿ ಅಭಿನಂದನೀಯವಾಗಿರುತ್ತದೆ.

ಸತ್ಯಾಗ್ರಹಿಗಳ ಸಿಂಹಗರ್ಜನೆ-

ಮಂಡಾಲೆಯ ತುರಂಗದಲ್ಲಿರುವ ರಾಜಕೀಯ ಕೈದಿಗಳು ನಿರಾಹಾರ ಮಾಡಿದ ಸುದ್ದಿಯನ್ನು ಈ ಮೊದಲು ಬರೆದಿರುತ್ತೇವೆ. ಈ ನಿರಾಹಾರವು ಕೊನೆಯದಲ್ಲ. ಮಧ್ಯದಲ್ಲಿ ತಹಕೂಬ ಮಾಡಿದ್ದು. ಸರಕಾರವು ಇವರ ಬೇಡಿಕೆ ಕೋರಿಕೆಗಳನ್ನು ಪೂರ್ಣ ಮಾಡದಿದ್ದರೆ- ಮುಂದಾಗಿ ಸ್ವದೇಶಿಯ ಪ್ರಮುಖರಿಗೆ ತಿಳಿಸಿ, ನಿರಾಹಾರ ಪ್ರಾರಂಭಿಸುವರು. ಒಮ್ಮೆ ಸುರುವು ಮಾಡಿದ ನಂತರ ಯಾತು ಹೇಳಿದರೂ ಅದರ ಪಾರಣೆ ಮಾಡುವದಿಲ್ಲ. ಸರಕಾರವು ಉದ್ದೇಶವನ್ನು ಪೂರ್ಣ ಮಾಡಿದರೆ ಮಾತ್ರ ಅನ್ನೋದಕ ತಕ್ಕೊಳ್ಳುವರು. ಸರ ಮುದಿಮನ್ನ ಸಾಹೇಬರು ನಿರಾಹಾರದ ಬೆದರಿಸುವದಕ್ಕೆ ಹೆದರುವದಿಲ್ಲೆಂದು ಗರ್ಜಿಸಿದ್ದಾರೆ. ಅದೇ ಪ್ರಕಾರ ತಾವು ಸಾಯಲಿಕ್ಕೆ ಹೆದರತಕ್ಕವರಲ್ಲೆಂದು ಇವರು ಸಿಂಹ ಗರ್ಜನೆ ಮಾಡಿದ್ದಾರೆ.

ದೇವಾದಾಯದ ದಾವೆ-

ಮದ್ರಾಸ ಇಲಾಖೆಯ ದೇವಾದಾಯ ಧರ್ಮಾದಾಯ ಕಾಯದೆಯನ್ನು ತಿರುಪತಿಯ ದೇವಸ್ಥಾನಕ್ಕೆ ಹಚ್ಚಬಾರದೆಂದು ಮಹಂತರು ಮದ್ರಾಸದ ಹಾಯಕೋರ್ಟಿನಲ್ಲಿ ದಾವೆ ತಂದಿದ್ದಾರಷ್ಟೇ; ಆ ದಾವೆಯಲ್ಲಿ ಪ್ರತಿವಾದಿಗಳಲ್ಲಿ ಸ್ಟೇಟ ಸೇಕ್ರೆಟರಿಯವರನ್ನೂ ಸೇರಿಸಬೇಕೆಂದು ಪ್ರತಿವಾದಿಯು ಅರ್ಜಿಯನ್ನು ಮಾಡಿಕೊಂಡರು. ಸ್ಟೇಟ ಸೇಕ್ರೆಟರಿಯು

ನ್ನು ಕೊಡಿಸಿಕೊಂಡರೆ ತಮಗೆ ಸಂಕಾರದ ಹಿಂಬಲ ದೊರೆಯುವದೆಂದು ಇವರ ಉದ್ದೇಶವಾಗಿತ್ತು. ಆದರೆ ನ್ಯಾಯಮೂರ್ತಿ ಶ್ರೀನಿವಾಸಯ್ಯಂಗಾರರು ಎರಡೂ ಪಕ್ಷಗಳ ಉತ್ತರ-ಪ್ರತ್ಯುತ್ತರಗಳನ್ನು ಕೇಳಿಕೊಂಡು, ಪ್ರತಿವಾದಿಗಳಲ್ಲಿ ಸ್ಟೇಟ ಸೇಕ್ರೆಟರಿಯನ್ನು ಸೇರಿಸುವದು ಅನವಶ್ಯಕವೆಂಬ ತೀರ್ಪು ಹೇಳಿದರು. ಇದರಿಂದ ದಾವೆಯಲ್ಲಿ ಸಂಕಾರದ ಪ್ರತ್ಯಕ್ಷ ಸಂಬಂಧವೇನೂ ಉಳಿಯಲಿಲ್ಲ.

ಕ್ರಿಶ್ಚನ್ನರು ಹಿಂದೂ ಆದದ್ದು-

ಮದ್ರಾಸ ಇಲಾಖೆಗೆ ಸೇರಿದ ಯಾ... ಗ್ರಾಮದಲ್ಲಿರುವ ರೋಮನ ಕ್ಯಾಥಲಿಕ ಪಂಥದ ೬೧ ಹಿಂದೂ ಕ್ರಿಶ್ಚನ್ನರು ಪುನಃ ಪಾವನ ಮಾಡಿಕೊಂಡು ಹಿಂದೂ ಧರ್ಮದಲ್ಲಿ ತಕ್ಕೊಂಡರು. ಇವರನ್ನು ಮತಾಂತರ ಮಾಡಿಸುವಾಗ ಸಂಭವಿಸಿದ ದೋಷಪರಿಹಾರಾರ್ಥವಾಗಿ ಹೋಮ ಹವನಗಳನ್ನು ಮಾಡಿದರು. ಇವರೆಲ್ಲರೂ ಅಸ್ಪೃಶ್ಯರಾಗಿದ್ದಾರೆ. ಅಸ್ಪೃಶ್ಯರಾದ ಹಿಂದೂ ಇತರರು ಯಾವ ತಕರಾರನ್ನೆ ಮಾಡಿಕೊಳ್ಳದೆ, ಇವರನ್ನು ತಮ್ಮೊಳಗೆ ಸೇರಿಸಿಕೊಂಡು ಇವರ ಕೈಯಿಂದ ಅನ್ನೋದಕ ಗ್ರಹಣ ಮಾಡಿದರು.

ಕಡಿಮೆ ಅಳತೆ ಮತ್ತು ತೂಕ-

ಹಿಂದುಸ್ಥಾನದ ಪೇಟೆಗಳಲ್ಲಿ ತೂಕ ಮತ್ತು ಅಳತೆಯು ಕ್ವಚಿತವಾಗಿ ಕಂಡುಬರುವದು. ತೂಗುವವರ ಹಸ್ತಚಾಪಲ್ಯದಿಂದ ಜನರಿಗೆ ಕಡಿಮೆ ದೊರೆಯುವದು. ವಿಲಾಯತಿಯಲ್ಲಿ ಹೀಗಿಲ್ಲ. ಅಂಗಡಿಕಾರರು ಬುದ್ಧಿಪೂರ್ವಕವಾಗಿ ಕಡಿಮೆಯ ತಾವು ಮತ್ತು ಕಲ್ಲುಗಳನ್ನು ಇಟ್ಟುಕೊಂಡು, ಅವುಗಳಿಂದಲೇ ವ್ಯಾಪಾರ ಮಾಡುವರು. ತುಂಬಿದ ಡಬ್ಬಿಗಳಲ್ಲಿ ಪೌಂಡು, ಎರಡು ಪೌಂಡು ಎಂದು ಬರೆದು, ಮೇಲೆ ಚೀಟಿ ಹಚ್ಚುವರು. ಆದರೆ ಅವು ಮೇಲೆ ಬರೆದಂತೆ ತೂಕಕ್ಕೆ ಸರಿಯಾಗಿರುವದಿಲ್ಲ. ಅಂಗಡಿಕಾರರ ಈ ವಂಚನೆಯನ್ನು ನಿಲ್ಲಿಸಬೇಕೆಂದು ನ್ಯೂ ಸ್ಟೇಟ್ಸಮನ್ನ ಎಂಬ ಪತ್ರಿಕೆಯು ದೊಡ್ಡ ಚಳವಳಿ ಎಬ್ಬಿಸಿರುತ್ತದೆ.

ಶ್ರೀ. ಸಿ. ಆರ ರಡ್ಡಿಯವರು ಆಂಧ್ರಯುನಿವರ್ಸಿಟಿಯ ವ್ಹಾಯಿಸ ಚಾನ್ಸಲರರಾಗಿಯೂ, ಮಿ. ಸುಬ್ರಮ್ಮಣ್ಯ ರಡ್ಡಿಯವರು ರಜಿಸ್ಟ್ರಾರರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಬಾಂಬು ಹಾರಿ ಭಯಂಕರ ಹಾನಿಯು.

—೦—

೨೫ ಜನರು ಸತ್ತರು; ನೂರಾರು ಜನರು ಘಾಯವಾದರು.

ಆಸ್ಟ್ರೀಯಾ ದೇಶಕ್ಕೆ ಸೇರಿದ ಪ್ರೇಗ ಪಟ್ಟಣದಲ್ಲಿ ಐದು ಮೋಟಾರ ಲಾರಿಗಳಲ್ಲಿ ಬಾಂಬು, ಗುಂಡು ತುಂಬಿಕೊಂಡು ಬೇರೊಂದು ಸ್ಥಳಕ್ಕೆ ಒಯ್ಯುವದಕ್ಕಾಗಿ ಪಟ್ಟಣದಲ್ಲಿ ಹೋಗುತ್ತಿದ್ದರು. ೫೦ ಜನ ಸೋಲ್ಜರರು ಕಾವಲುಗಾರರಾಗಿದ್ದರು. ಟೆಸಲೆರವೆಂಬ ಐತಿಹಾಸಿಕ ಬೀದಿಯಲ್ಲಿ ಲಾರಿಗಳು ಹೋಗುತ್ತಿದ್ದಾಗ, ಒಂದರಲ್ಲಿದ್ದ ಬಾಂಬಿನ ಪೆಟ್ಟಿಗೆಯು ಜರಿದು ಕೆಳಗೆ ಬಿತ್ತು. ಕೂಡಲೆ ಭಯಂಕರ ಸ್ಫೋಟವಾಗಿ ಕಾವಲುಗಾರರಾದ ೧೫ ಜನ ಸೋಲ್ಜರರೂ, ಹತ್ತು ಜನ ದಾರಿಕಾರರೂ ಸತ್ತುಬಿದ್ದರು. ಮತ್ತು ಸೆರೆಮನೆಗಳ ಹಾಗು ದಾರಿಕಾರರಾಗಿದ್ದ ನೂರಾರು ಜನರೂ ಮತ್ತು ಸೋಲ್ಜರರೂ ಭಯಂಕರ ಘಾಯ ಹೊಂದಿದ್ದಾರೆ. ಅನೇಕರ ಕಾಲುಗಳು ಕತ್ತರಿಸಿ ಹೋಗಿವೆ.

ಬಾಂಬು ಹಾರಿದ ಕೂಡಲೆ ಎಡಬಲದ ಮನೆಗಳ ಗೋಡೆಗಳು ಕತ್ತರಿಸಿ, ಕಲ್ಲು ಇಟ್ಟಂಗಿಗಳು ಬಳಬಳ ಉದುರಿದವು. ಕಿಡಿಕೆಗಳು ಚೂರುಚೂರಾದವು. ಎಷ್ಟೋ ಕಲ್ಲು, ಇಟ್ಟಿಗೆ ಮತ್ತು ಹಂಚುಗಳು ಆಕಾಶದಲ್ಲಿ ಹಾರಿಬಿದ್ದವು. ಅನಾಹುತಕ್ಕೆ ಬಲಿಬಿದ್ದವರ ರೋದನವು ಹೃದಯವಿದಾರಕವಾಯಿತು. ಬಾಂಬು ಹಾರಿದ ಸಪ್ಪಳವು ೧೫ ಮೈಲುಗಳ ತನಕ ಕೇಳಿಸಿತು.

ಝಾರಶಾಹಿ, ಕೇಸರಶಾಹಿಯ ಪುನಃ ಪ್ರಯತ್ನ.

ಜರ್ಮನಿಯಲ್ಲಿ ಕೇಸರರಿಗೆ ಪುನಃ ಪಟ್ಟಗಟ್ಟಬೇಕು. ರಶಿಯಾದಲ್ಲಿಯೂ ಝಾರಶಾಹಿಗೆ ಪುನರ್ಜನ್ಮ ಕೊಡಬೇಕೆಂದು ವಿಲಾಯತಿಯಲ್ಲಿರುವ ರಾಜಪಕ್ಷೀಯರು ಚಳವಳಿ ನಡಿಸಿದ್ದಾರೆ. ಜರ್ಮನ ರಾಜ್ಯಕ್ಕೆ ಸೇರಿದ ಮ್ಯುನಿಚ್ ಪಟ್ಟಣದಲ್ಲಿ ಇವರದೊಂದು ಪ್ರಾಸ್ತಾವಿಕ ಕಮಿಟಿ ಕೂಡಿತ್ತು. ಇಂಗ್ಲಂಡ- ಫ್ರಾನ್ಸ ಮುಂತಾದ ದೇಶಗಳಲ್ಲಿರುವ ರಶಿಯರೂ ಬೇರೆ ಜನರೂ ಈ ಕಮಿಟಿಗೆ ಬಂದಿದ್ದರು. ಹಂಗೇರಿಯ ಡೆಲಿಗೇಟರು ಬರದ್ದರಿಂದ ಒಂದು ವಾರ ಕಮಿಟಿಯ ವಿಚಾರವನ್ನು ತಹಕೂಬ ಮಾಡಿದ್ದಾರೆ. ಇಲ್ಲಿ ಪೂರ್ವಾಲೋಚನೆ ಮಾಡಿದ ನಂತರ ಎಪ್ರಿಲ ತಿಂಗಳ ಮೊದಲನೆಯ ವಾರದಲ್ಲಿ ಪ್ಯಾರೀಸದಲ್ಲಿ ರಾಜಪಕ್ಷೀಯರ ದೊಡ್ಡ ಪರಿಷತ್ತು ಕೂಡಿಸುವರು. ಎರಡು ನೂರು ರಶಿಯರೇ ಪ್ರತಿನಿಧಿಯಾಗಿ ಬರುವರು. ಆ ಸಭೆ ಎಲ್ಲಿ ಕ್ರಿಲ ಅಥವಾ ನಿಕೋಲಾಸರೆಂಬವರನ್ನು ರಶಿಯಾದ ಝಾರರಾಗಿ ಆರಿಸುವರು. ಆ ನಂತರ ರಾಜಸತ್ತೆಯನ್ನು ಸ್ಥಾಪಿಸಲೋಸುಗ ಆಯಾ ದೇಶಗಳಲ್ಲಿ ಗದ್ದಲವೆಬ್ಬಿಸುವರು.

ಕರ್ನಾಟಕ ಕಾಲೇಜ ಧಾರವಾಡ.

ಪಿ. ಈ. ಪರೀಕ್ಷೆಯ ರಿಝಲ್ಟ.

ನಿನ್ನಿನ ದಿವಸ ಮಧ್ಯಾನ್ಹದಲ್ಲಿ ಪಿ. ಈ. ಪರೀಕ್ಷೆಯ ಪರಿಣಾಮವು ಹೇಳಲ್ಪಟ್ಟಿತು. ಕೆಳಗೆ ಬರೆದ ನಂಬರಿನವರು ಪಾಸಾಗಿದ್ದಾರೆ.

ಫರ್ಸ್ಟ ಕ್ಲಾಸ—

೧೬೯, ೧೯, ೯೮, ೬೮, ೧೪೮, ೩೬, ಮತ್ತು ೧೩೪.

ಸೇಕಂಡ ಕ್ಲಾಸ—

೪, ೨೦, ೨೩, ೩೧, ೩೨, ೩೯, ೪೫, ೪೮, ೪೯, ೬೪, ೬೭, ೮೯, ೯೪, ೧೦೪, ೧೧೫, ೧೧೯, ೧೩೨, ೧೪೬, ೧೫೦, ೧೬೧, ೧೭೨, ೧೭೪, ೧೯೨, ೧೯೯, ೨೦೨, ೨೧೨, ೨೩೨, ಮತ್ತು ೧೬.

ಥರ್ಡ ಕ್ಲಾಸ—

೧, ೨, ೩, ೬, ೮, ೧೨, ೨೧, ೨೫, ೨೮, ೩೦, ೩೫, ೫೨, ೫೩, ೫೪, ೫೬, ೫೭, ೫೯, ೬೨, ೬೩, ೬೪, ೬೫, ೬೬, ೬೮, ೮೨, ೮೬, ೮೮, ೯೧, ೯೩, ೯೬, ೯೭ ೯೯, ೧೦೦, ೧೦೧, ೧೦೩, ೧೦೪, ೧೦೬, ೧೦೭, ೧೧೦, ೧೨೨, ೧೨೩, ೧೨೭, ೧೨೯, ೧೩೨, ೧೩೩, ೧೩೮, ೧೪೧, ೧೪೨, ೧೪೪, ೧೪೫, ೧೪೭, ೧೪೯, ೧೫೩, ೧೫೪, ೧೫೭, ೧೬೨, ೧೬೩ ೧೬೪, ೧೬೬, ೧೭೦, ೧೭೧, ೧೭೩, ೧೭೫, ೧೮೨, ೧೮೩, ೧೮೫, ೧೮೮, ೧೯೫, ೨೦೦, ೨೦೩, ೨೦೬, ೨೦೮, ೨೧೦, ೨೧೩, ೨೧೪, ೨೨೨, ೨೨೭, ೨೨೮, ೨೨೯, ೨೩೦, ೨೩೫, ೨೩೮, ೨೩೯, ೨೪೧, ೨೪೨, ೨೪೭, ಮತ್ತು ೨೪೯.

ಕೆಳಗಿನ ನಂಬರಿನವರ ಪರಿಣಾಮವು ಈ ನಂತರ ಪ್ರಸಿದ್ಧ ಮಾಡಲ್ಪಡುವದು.

೩೩, ೯೨, ೧೫೮, ೨೪೬.

ಈ ಕೆಳಗಿನ ನಂಬರಿನವರ ಪರೀಕ್ಷೆಯನ್ನು ೨೨ ನೇ ತಾರೀಖಿನ ದಿವಸ ಪುನಃ ತಕ್ಕೊಳ್ಳಲ್ಪಡುವದು.

೪೭, ೬೦, ಮತ್ತು ೧೯೬.

ಮೂವರು ವಿದ್ಯಾರ್ಥಿನಿಯರು ಪರೀಕ್ಷೆಗೆ ಕೂತಿದ್ದರು. ಮೂವರೂ ಪಾಸಾಗಿದ್ದಾರೆ.

ವಿವಿಧ ವರ್ತಮಾನಗಳು.

—o—

ಹೋಳಕರ ಮಹಾರಾಜರನ್ನು ಪದಚ್ಯುತ ಮಾಡಿಸಿದ ಅಸಂತೋಷದ ದೆಸೆಯಿಂದ ೧೯ನೇ ತಾರೀಖಿನ ದಿವಸ ಇಂದೂರ ರಾಜ್ಯದಲ್ಲಿ ಹರತಾಳ ಮಾಡಲ್ಪಡುವದು. ಮಹಾರಾಜರು ಬಾದಶಹರ ಕಡೆಗೆ ಅಪೀಲು ಮಾಡುವರು.

———

ಮುಂಬಯಿಯ ಸರ ಸಸೂನರು ೫೦ ಲಕ್ಷದ ಬಂಡವಲ ಕೂಡಿಸಿ, ವರ್ತಮಾನ ಪತ್ರಗಳನ್ನು ಮುದ್ರಿಸುವ ಕಂಪನಿ ತೆಗೆದಿದ್ದಾರೆ. ಮುಂಬಯಿ, ಕಲಕತ್ತೆ ದಿಲ್ಲಿ, ಮದ್ರಾಸ, ಈ ಶಹರಗಳಲ್ಲಿ ನಿತ್ಯ ಪತ್ರಗಳನ್ನು ತೆಗೆಯುವರು. ಮುಂಬಯಿಯಲ್ಲಿ ಹೊರಡುವ ಪತ್ರಕ್ಕೆ ಮಾರ್ನಿಂಗ ಪೋಸ್ಟ ಆಫ ಇಂಡಿಯಾ ಎಂಬ ಹೆಸರಿಟ್ಟಿದ್ದಾರೆ.

——

ದಿಲ್ಲಿಯಲ್ಲಿ ಖಾದೀ ಪ್ರದರ್ಶನವಾಗುವದು. ಜಂಡ್ರದ ಓವರ ಭಗಿನಿಯು ನೂಲು ನೂಲುವ ನೂಲು ತೆಗೆದು ತೋರಿಸುವಳು. ಬಂಗಾಲದ ಉಸ್ತಾದನೊಬ್ಬ ಮಸಲ್ಮಾನ ಗೃಹಸ್ಥನು ತಾಸಿಗೆ ೮೦೦ ವಾರು ನೂಲು ತೋರಿಸುವನು. ರಾಜಪುತಾನಾದ ಕೋಟೆಯ ನೇಯಕಾರರು ೧೪೪ ಇಂಚು ಅಗಲ ಬಟ್ಟೆಯನ್ನು ನೇಯ್ದು ತೋರಿಸುವರು.

———

ಡಾಕ್ಟರ ಅನಿಬಿಝಾಂಟಬಾಯಿಯವರು ಮೆಸರ್ಸ ಜಯಕರ- ಕೇಳಕರರ ಪ್ರತಿಯೋಗಿ ಸಹಕಾರದ ಪ್ರತಿಜ್ಞಾ ಪತ್ರಿಕೆಯ ಮೇಲೆ ಸಹಿ ಮಾಡಿದರು. ಹೊಸತ್ತು ಬಂದಂತೆ ಕೂಡೆ ಹಿಡಿಯುವದರಲ್ಲಿ ಅಮ್ಮನವರು ಧುರೀಣರು!!

———

ನಿಜಾಮು ಹೈದರಾಬಾದಿನಲ್ಲಿ ಕೊಲೆ ಪಾತಕಿಗಳಿಗೆ ಬಹಿರಂಗವಾಗಿ ಆಜನ್ಮ ಶಿಕ್ಷೆ ವಿಧಿಸುವರು. ಆದರೆ- ಜಂದ್ರಿಗನೆಂಬ ನಾವಲಿಗನು ಕತ್ತಿಯಿಂದ ಒಬ್ಬನನ್ನು ಭಯಂಕರ ಘಾಯಪಡಿಸಿಕೊಂದದ್ದರಿಂದ, ಆತನ ತಲೆ ಹೊಡೆಸಿದರು. ಇಲ್ಲಿ ಕಂಬಕ್ಕೆ ತೂಗು ಹಾಕಿ- ಕೊಲ್ಲುವ ಪದ್ಧತಿಯಿಲ್ಲ.

———

ಪುನಃ ಪಾಸು-

ಕರ್ನಾಟಕ ಕಾಲೇಜದ ಪ್ರೀವ್ಹಿಯಸ ಪರೀಕ್ಷೆಗೆ ಕೂತಂಥ ವಿದ್ಯಾರ್ಥಿಗಳ ಗುಣಗಳನ್ನು ಪುನಃ ಎಣಿಸಲಾಗಿ ನಂಬರ ೫, ೨೨, ೬೨, ೧೮೬, ೨೦೯ ಮತ್ತು ೨೩೩ ಈ ಆರು ಜನ ವಿದ್ಯಾರ್ಥಿಗಳು ಪಾಸಾದಂತೆ ಪ್ರಸಿದ್ಧ ಪಡಿಸಿದ್ದಾರೆ.

ಮಾತಾಡುವ ಔಷಧವು:

ಅಜ್ಜಾ! ಮಾತಾಡುವದಿಲ್ಲೇ? ಏಳಿಗೆ, ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ! ಹಲ್ಲುಶೂಲಿಯೋ? ಮಯ್ಯಲ್ಲಿ ನೋವು ತ್ರದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮಯ್ಯೆಲ್ಲ ನೋಯುತ್ತದೆ.

ಕಂದ— ಹಾಗಾದರೆ ಮೊನೆಂಟೆ ಚ್ಯುಯರ ತಕ್ಕೊಳ್ಳಿರಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳು ಸಂಪೂರ್ಣವಾಗಿ ಮಾಯವಾಗುವವು ಮತ್ತು ಕೂಡಲೆ ನಿಮ್ಮನ್ನು ತೀರ ಖುಷಿ ಮಾಡುವದು.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಧನಕಾಪಿಕ್ಸ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ತುರಿ ಯುಕ್ತ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗುತ್ತದೆ ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು- ದಿ ಜನಕಾಂತ್ಯ ಮೆಡಿಕಲ ಸ್ಟೋರ ಸ್ಟೇಶನ ರೋಡ ಹುಬ್ಬಳ್ಳಿ. ಕೋಟ ಮತ್ತು ಕಿರಾಣಿ ದುಕಾನದಿಂದ ದೊರೆಯುವದು. } ಎನ. ಎಫ. ಪೊಟರ ಬಿಡೇಬಝಾರ ಬೆಳಗಾವಿ

ದಿ. ಅಂಕಲಿಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ ಪತ್ತಿ; ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K. B. Ankaligi

ಧಾರವಾಡ

ವಿಜಯದ ವರ್ಗಣೀ ದರ

ಪಕ್ಷಪತ್ರಕ್ಕೆ

೧೨	ತಿಂಗಳಿಗೆ	೧೩—೦—೦ ರೂ
೬		೭—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಚಂದಾದಾರರಿಗೆ ಸೂಚನೆ.

ಮಾರ್ಚ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಮಾಡಿ ವಿಜಯನನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಂಕಲಿಗಿ ಕರಿಬಸಪ್ಪ ... ಯರ ... ವಾಣಿ ... ಮುದ್ರಿಸಿ ಪ್ರಸಿದ್ಧ ಮಾಡಿ

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ । ಧಾರವಾಡ ಶುಕ್ರವಾರ ತಾ. ೧೨ನೇ ಮಾರ್ಚ ೧೯೨೬ । ಸಂಚಿಕೆ ೫೭

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಯುಕ್ತಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಎತ್ತುತ್ತಲೇ ಜಾಳಿಗೆಯು ಪಾಡೆಯು ನೀರಿನ ಭರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೩೦ ರೂ.
ನಂ ೨	೫೫ ,,	,, ೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ಪ್ರಕಟನೆ-

ವಿ. ಎಸ್. ಎಸ್ ವೈದ್ಯ ಇವರು-

ಉತ್ತಮ ಗಾಯನ, ಪೇಟಿ, ವ ನಾಟಕ ಸಹಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೮ ,,
ಲೋ. ಟಿಳಕರ ಚರಿತ್ರೆ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ಉಪಾಯಿಗೆ ಕೊಡಲಾಗುವವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ವ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಸತ್ತು ವೋಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವೋಳಿಗೆ ಒಂದೊಂದು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ, ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಮೂರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇದ್ದು ಹಿಚಾಯತ. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ
ಹೊಂದಿದೆಯು ೩ ಲಕ್ಷದ ಮೋಲಾಯಿಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ನಡೆಯುವವು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಈ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೩-೩-೨೬ ನೇ ಇಸ್ವಿ

ಸುವರ್ಣಾಕ್ಷರಗಳಿಂದ ಬರೆದ ದಿವಸವು.

ಪಂಡಿತ ಮೋತೀಲಾಲ, ಲಾಲಾ ಲಜಪತರಾಯ ಮೊದಲಾದ ಪ್ರಮುಖ ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿಯಲ್ಲಿಯೂ ಕೆಲವು ಕೌನ್ಸಿಲಗಳಲ್ಲಿಯ ತತ್ಪಕ್ಷೀಯರೂ, ಪ್ರಾಂತಿಕ ಕೌನ್ಸಿಲಗಳಿಗೆ ಶರಣು ಹೊಡೆದು ಬಂದ ದಿವಸವನ್ನು ಹಿಂದುಸ್ಥಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಾಗಿರುತ್ತದೆ. ಅಸಹಕಾರದ ಆಂದೋಲನದಲ್ಲಿ ಕೌನ್ಸಿಲಗಳಿಗೆ ಬಹಿಷ್ಕಾರ ಹಾಕಿದ್ದು ನಿಜ. ಆದರೆ ಸ್ವರಾಜರು ಅವುಗಳಲ್ಲಿ ಸೇರಿ, ದೇಶಹಿತಕ್ಕೆ ಅರಿಷ್ಟ ಬರುವಂಥ ಕಾಯದೆ ಕಾನೂನುಗಳಿಗೆ ಸಮ್ಮತಿ ಕೊಡಲಾರಂಭಿಸಿದರು. ಮಹಾತ್ಮರನ್ನು ಬಂಧಮುಕ್ತ ಮಾಡಬೇಕೆಂಬ ಠರಾವಿಗೆ ಕೂಡ ಇವರು ಸರಕಾರಕ್ಕೆ ಪೂರ್ಣ ಅನುಕೂಲರಾಗಿ ವರ್ತಿಸಿದರು. ಇವರಿಂದ ಭಯಂಕರ ಹಾನಿಯಾಗುವದೆಂದು ಕಂಡುಬಂದದ್ದರಿಂದಲೇ ದೇಶಬಂಧು ದಾಸ, ಪಂಡಿತ ನೆಹರು ಮೊದಲಾದವರು ಕೌನ್ಸಿಲ ಪ್ರವೇಶದ ಉಪಾಯ ಕೈಕೊಂಡರು. ಅಲ್ಲಿ ಇವರು ಸರಕಾರದ ಸ್ತುತಿ ಪಾಠಕರಾಗಿ ನಿಲ್ಲಲಿಕ್ಕೆ ಹೋಗಲಿಲ್ಲ. ಕೌನ್ಸಿಲಗಳಿಂದ ದೇಶಹಿತವಾಗುತ್ತಿದ್ದರೆ ಅದನ್ನು ಸಾಧಿಸಿಕೊಳ್ಳಬೇಕು, ಇಲ್ಲವಾದರೆ ಅವನ್ನು ಮುರಿದು ತಿಲಾಂಜಲಿ ಕೊಡಬೇಕೆಂದರು. ಕೊನೆಯಲ್ಲಿ ತಿಲಾಂಜಲಿ ಕೊಡುವ ಹೊತ್ತೇ ಬಂತು. ಆದರೆ ಅದು ಕಡೆತನಕ ಮಾತ್ರವಲ್ಲ. ಸಂಕ್ರಮಣದಲ್ಲಿ ಸಂಕಲ್ಪ ಮಾಡುವಂಥಾದ್ದು. ಅಸೆಂಬ್ಲಿಯಲ್ಲಾದ ಠರಾವಿನನ್ವಯ ಸರಕಾರವು ಹಿಂದುಸ್ಥಾನಕ್ಕೆ ರಾಜಕೀಯ ಹಕ್ಕುಗಳನ್ನು ಕೊಡಬೇಕು. ಇದಕ್ಕೆ ಎರಡೇ ತಿಂಗಳ ಮುದ್ದತು. ಈ ಮುದ್ದತು ಮೀರಿದ ನಂತರ ಯೋಗ್ಯ ತೋರಿದ ಉಪಾಯ ಕೈಕೊಳ್ಳತಕ್ಕದ್ದೆಂದು ಕಾಂಗ್ರೆಸದಲ್ಲಿ ಠರಾವಾಯಿತು. ಆ ಪ್ರಕಾರ ಫೆಬ್ರುವರಿ ಕೊನೆಯ ತನಕ ಅವಧಿಯಿತ್ತು. ಸರಕಾರವು ಈ ಕಾಲದಲ್ಲಿ ಸ್ವರಾಜ್ಯದ ಬಗ್ಗೆ ಅಭಿಮಾನ ಪಡುವಂಥ ಯಾವ ಉದ್ಯೋಗ ಮಾಡದೆ ಬಿರ್ರನೆ ಬಿಗಿದುಕೊಂಡು ಕೂತದ್ದರಿಂದ, ಸ್ವರಾಜ್ಯ ಪಕ್ಷೀಯರಿಗೆ ತಮ್ಮ ಪ್ರತಿಜ್ಞೆಯನ್ನು ಕೊನೆಗಾಣಿಸುವದು ಅವಶ್ಯವಾಯಿತು. ಆ ಪ್ರಕಾರ ಅವರು ಮುಂದಾಗಿ ಜಾಹೀರ ಮಾಡಿ, ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಠರಾವು ಮಾಡಿ ಅಸೆಂಬ್ಲಿ ಮತ್ತು ಕೌನ್ಸಿಲಗಳಿಗೆ ಶರಣು ಹೊಡೆದಿರುತ್ತಾರೆ. ರಾಜಕೀಯ ದೃಷ್ಟಿಯಿಂದ ಸ್ವರಾಜ್ಯ ಪಕ್ಷೀಯರಿಗೆ ಯಾವ ದೋಷವನ್ನೂ ಹೇಳಲಿಕ್ಕೆ ಬರುವಂತಿಲ್ಲ. ಕೌನ್ಸಿಲವನ್ನು ಸುಧಾರಿಸುವೆವು; ಅಥವಾ ಮುರಿಯುವೆವು; ಎಂಬ ಪ್ರತಿಜ್ಞೆಯಲ್ಲಿ ಎರಡನೆಯದನ್ನು ತಮ್ಮ ಶಕ್ತ್ಯನುಸಾರ ಮಾಡಿ ತೋರಿಸಿದಂತಾಯಿತು. ಭಾವೀ ಚುನಾವಣೆಯಲ್ಲಿ ಮತದಾರರು ಬಹುಮತವಾಗುವಂತೆ ಸ್ವರಾಜ್ಯ ಪಕ್ಷೀಯರನ್ನು ಆರಿಸಿದರೆ ಇವರು ನಿಃಸಂಶಯವಾಗಿ ಕೌನ್ಸಿಲಗಳ ಪುನರ್ಘಟನೆ ಮಾಡುವರು. ಇದೇ ಸ್ವರಾಜ್ಯ ಸೋಪಾನದ ದಾರಿಯಾಗಿರುವದು. ಸ್ವರಾಜ್ಯ ಸಂಪಾದಿಸುವದು ಅಥವಾ ಆಳಸಿಂದ ಹಾಗೆನೇ ಇದ್ದು ಕಾಲಹರಣ ಮಾಡುವದು ಮತದಾರರನ್ನೇ ಅವಲಂಬಿಸಿರುತ್ತದೆ.

ಅಸೆಂಬ್ಲಿಯಲ್ಲಿ ಪಂಡಿತ ಮೋತೀಲಾಲರ ಧೀರೋದಾತ್ತ ಭಾಷಣ.

ಅಸೆಂಬ್ಲಿಗೆ ತಾವೇಕೆ ಶರಣು ಹೊಡೆಯತಕ್ಕವರೆಂಬದನ್ನು ಜಾಹೀರಾಗಿ ಹೇಳುವಾಗ ಪಂಡಿತ ಮೋತೀಲಾಲರು ಮಾಡಿದ ಭಾಷಣದ ಸಾರಾಂಶವು ಕೆಳಗೆ ಕೊಡಲ್ಪಡುತ್ತದೆ.

ನಮ್ಮ ಕುಂದು ನಮಗೆ ಗೊತ್ತುಂಟು. ಜಾತಿ ಜಾತಿಗಳ ಕಲಹಗಳ ಮೂಲಕ ನಮ್ಮೊಳಗೊಂದೇ ಶಸ್ತ್ರವಾದ ಕಾಯದೆಭಂಗವು ಸಾಧ್ಯವಿರುವದಿಲ್ಲೆಂಬದನ್ನೂ ಬಲ್ಲೆವು. ಇದರಂತೆ ಈ ನಂತರ ಅಸೆಂಬ್ಲಿಯಲ್ಲಿರುವದರಿಂದೇನೂ ಪ್ರಯೋಜನವಿಲ್ಲೆಂಬದನ್ನೂ ನಾವು ತಿಳಿದಿದ್ದೇವೆ. ಪ್ರಚಂಡವಾಗಿ ಪ್ರಬಲವಾದ ಬ್ರಿಟಿಶ ಸಾಮ್ರಾಜ್ಯವನ್ನು ಬುಡಮೇಲು ಮಾಡುವದಕ್ಕಾಗಿಯೇ ನಾವು ಅಸೆಂಬ್ಲಿ ಬಿಟ್ಟು ಹೋಗುವದಿಲ್ಲ. ಸರಕಾರವನ್ನು ಬುಡಮೇಲು ಮಾಡಬೇಕೆಂದು ಅಪೇಕ್ಷಿಸಿದರೂ, ಅದು ಶಕ್ಯವಲ್ಲೆಂಬದನ್ನು ನಾವು ಬಲ್ಲೆವು. ನಮ್ಮ ಇಷ್ಟಾರ್ಥವನ್ನು ಪೂರ್ಣ ಮಾಡಿಕೊಳ್ಳಲಿಕ್ಕಾಗದ್ದರಿಂದಲೇ ಮೋರೆ ಕೆಳಗೆ ಮಾಡಿಕೊಂಡು ಹೊರಬೀಳುತ್ತಿದ್ದೇವೆ. ಹೊರಬಿದ್ದು ಎಷ್ಟೋ ದಿವಸಗಳಾಗುತ್ತಿತ್ತು. ಆದರೆ ಸರಕಾರದ ಶ್ರೇಷ್ಠವಾದ ಮುತ್ಸದ್ದಿತನದ ಕಾರಸ್ಥಾನವು ಮುಂದೆ ಹಾಕಿಸುತ್ತಾ ಬಂತು. ಮತದಾರರ ಮತವನ್ನು ಇನ್ನೊಮ್ಮೆ ತಕ್ಕೊಳ್ಳುವದಕ್ಕಾಗಿ ನಾವು ಹೊರಬೀಳುತ್ತೇವೆ, ನಾವು ಈ ಯುದ್ಧವನ್ನು ಬಿಡತಕ್ಕವರಲ್ಲ. ನಮ್ಮ ಬ್ರಹ್ಮಲಿಖಿತ ಬಗ್ಗೆ ನಮಗೇನೂ ಸಂದೇಹವಿಲ್ಲ. ಸ್ವರಾಜ್ಯ ಗಳಿಸಬೇಕು; ಅಥವಾ ಕಳಕೊಳ್ಳಬೇಕು; ಎರಡರಲ್ಲಿ ಒಂದಾಗಬೇಕೆಂಬದೇ ನಮ್ಮ ಪ್ರಸ್ತುತದ ನಿರ್ಧಾರವು. ಈ ಮೋಸದ ಅಸೆಂಬ್ಲಿ, ಮತ್ತು ಕೌನ್ಸಿಲಗಳ ಉಪಯೋಗವೇನೂ ಇರುವದಿಲ್ಲ. ಒಂದು ದೇಶದ ಮಾನ ಮತ್ತು ಪ್ರತಿಷ್ಠೆಯ ರಕ್ಷಣೆಯ ದೆಸೆಯಿಂದಾದರೂ ಹೊರಬೀಳಬೇಕಾಗಿದೆ. ಸರಕಾರವು ಜಾಗಿ, ತಾಗಿ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳನ್ನು ಪೂರೈಸುವಂತೆ ಮತದಾರರಿಂದ ಮನ್ನಣೆ ಪಡಕೊಳ್ಳುವೆವು. ಸರಕಾರವು ಜಗಳಗಂಟತನದಿಂದ ಪೂರೈಸದಿರುವ ಬೇಡಿಕೆಗಳನ್ನು ಪೂರೈಸಿಕೊಳ್ಳುವಂತೆ ಮತದಾರರಿಂದ ಮಂಜೂರಿ ಪಡಕೊಳ್ಳುವೆವು. ಮತದಾರರು ಇದಕ್ಕೆ ದೊಡ್ಡ ಸಂಖ್ಯೆಯಿಂದ ಮೆಂಬರರನ್ನು ಆರಿಸಿ, ಸರಕಾರವು ನಮ್ಮ ಬೇಡಿಕೆಗಳನ್ನು ಪೂರೈಸುವಂತೆ ನಮಗೆ ಬಲವಾಗಿ ಸಹಾಯ ಮಾಡುವರೆಂದು ನಂಬಿದ್ದೇವೆ. ನಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಕುರಿತು ಸಂಕಟವನ್ನು ಅಗತ್ಯ ಪಡಿಸುವ ಹಾಗೆ ದೇವರು ನಮಗೆ ಅನುಗ್ರಹಿಸಲೆಂದು ಬೇಡಿಕೊಳ್ಳುತ್ತೇನೆ.

ಅಸೆಂಬ್ಲಿಯಲ್ಲಿ ಕಂಡು ಬಂದ ನೋಟವು.

ಅಸೆಂಬ್ಲಿಯಿಂದ ಹೊರಬೀಳುವ ಮೊದಲು ಪಂಡಿತ ಮೋತಿಲಾಲರು ಅರ್ಧತಾಸಿನ ತನಕ ಭಾಷಣ ಮಾಡಿದರು. ಇವರು ಮಾತಾಡುತ್ತಿದ್ದಾಗ ಎಲ್ಲ ಕಡೆಯಲ್ಲಿಯೂ ಗಂಭೀರವಾದ ಸ್ತಬ್ಧತೆಯುಂಟಾಗಿತ್ತು. ಇವರ ಭಾಷಣವು ಪರಿಣಾಮಕಾರಕವಾಗಿ ಅಂತಃಕರಣವನ್ನು ಬಿರಿಯುವಂತಾಗಿತ್ತು. ಸರಕಾರವನ್ನು ಮಣಿಸುವದಕ್ಕಾಗಿ ಲೋಕಮತದ ಒಪ್ಪಿಗೆ ಪಡಕೊಳ್ಳಲೋಸುಗ ಅಸೆಂಬ್ಲಿಯನ್ನು ಬಿಟ್ಟು ಹೋಗುತ್ತೇವೆಂಬದು ಕೊನೆಯ ವಾಕ್ಯವಾಗಿತ್ತು.

ಲಾಲಾ ಲಜಪತರಾಯರು ಪಂಡಿತ ಮೋತಿಲಾಲರನ್ನು ಹಿಂಬಾಲಿಸಿ, ಹೊರಗೆ ಬಂದರು. ಉಳಿದ ೪೬ ಜನ ಮೆಂಬರರು ಒಬ್ಬರ ಹಿಂದೊಬ್ಬರಂತೆ ಹೊರಟು ಬಂದರು. ಇವರು ಹಿಂದೂ ಮತ್ತು ಮುಸಲಮಾನ ಸ್ವರಾಜ್ಯವಾದಿಗಳಾಗಿದ್ದಾರೆ.

ಬ್ಯಾರಿಸ್ಟರ ಜಿನ್ನಾಸಾಹೇಬರ ನೇತೃತ್ವದಲ್ಲಿದ್ದ ಸ್ವತಂತ್ರ ಪಕ್ಷೀಯರು ತಮ್ಮ ಸ್ಥಳಗಳಲ್ಲಿ ಕದಲದೆ ಕೂತುಕೊಂಡಿದ್ದರು. ಬ್ಯಾರಿಸ್ಟರ ಜಿನ್ನಾ

ಸ್ವಾಮಿಸಾಹೇಬರು ಗಡ್ಡದ ಮೇಲೆ ಕಯ್ಯಾಡಿಸಿಕೊಳ್ಳುತ್ತಿದ್ದರು.

ತುರಂಗದಲ್ಲಿ ರಾಜಕೀಯ ಕೈದಿಗಳನ್ನು ನಡಿಸಿಕೊಳ್ಳುವ ಪ್ರಕಾರವು ಕೆಟ್ಟದ್ದಾಗಿರುತ್ತದೆಂದು ಜೇಲ ಸುಪರಿಂಟೆಂಡೆಂಟರಾದ ಮಿ. ಮಾಲಿಹೋನಿ ಸಾಹೇಬರ ರಿಪೋರ್ಟಿನ ಉಲ್ಲೇಖವನ್ನು ಪಂಡಿತರು ಮಾಡಿದ ಕೂಡಲೆ- ಒಬ್ಬ ಗೌರಕಾಯ ಮೆಂಬರರು ಮಾಲಿಹೋನಿಸಾಹೇಬ[illegible] ಸುಳ್ಳಗಾರರಿದ್ದಾರೆಂದರು. "ನೀವು ಈ [illegible] ಮ್ಮ ಹಿಡಿತದಲ್ಲಿ ಹಿಡಿಯುವದಕ್ಕಾಗಿ [illegible] ಮಾಡುವಿರಿ ನಿಮ್ಮ ಜನರಿಗೆ [illegible] ಮತ್ತು ಅವರ ತ್ಯಾಗ [illegible]" [illegible]ದಾಗಿ ಪಂಡಿತರು ವೈಗೆ ವಿದಿನ [illegible] ಉತ್ತರ ಕೊಟ್ಟರು.

ಸ್ವರಾಜ್ಯವಾದಿ[illegible] ಹೋದನಂತರ- "ಸ್ವರಾಜ್ಯವಾದಿಗಳು ಸ[illegible] ಕೂಡ ಸಹಕಾರ ಮಾಡಲಿಲ್ಲ. ಅಸೆಂಬ್ಲಿ[illegible] ನಾಶವಾಗುವದಕ್ಕಾಗುವದಿಲ್ಲೆಂ[illegible] ಮುದಿಮನ್ನರು ಭಾಷಣ ಮಾಡಿದರು. [illegible] ಕಡೆಗೆ ಉಳಿದವನೇ ಗೌಡನು.

ಪಂಡಿತ ಮಾ[illegible] ಇವರಿಗೆ ಉತ್ತರ ಕೊಟ್ಟರು. ಇವರು [illegible] ನಡೆದಿರುವಾಗ ಸರಕಾರ ಪಕ್ಷದ ಮೆಂ[illegible] ಹೋದರು.

ಅಸೆಂಬ್ಲಿಯ [illegible] ಸಿದ್ಧಿ [illegible] ಕೆಂಬರಾಗಿ ಅಧ್ಯಕ್ಷ[illegible] ಪಟೇಲರು ಮಾಡಿದ ಭಾಷಣದಿಂದ ತ[illegible] ಅವಮಾನವ[illegible] ಸ್ವತಂತ್ರರೂ, ಕಾಸ- ಅಧಿ[illegible] ಯನ್ನ ಮೆಂಬರರೂ ಕಪಟ ಕೂಡಿ ಒಬಳ ಹೂತ್ತಿ ಸಕನಳ ತರ್ಕವಿತರ್ಕಗಳನ್ನು ಮಾಡಿ ಬಾಬೂ ಬಿಪಿನಚಂದ್ರ ಪಾಲ, ಮಿ. ರಾಮಚಂದ್ರರಾವ, ಬ್ಯಾರಿಸ್ಟರ ಜಿನ್ನಾ, ಡಾಕ್ಟರ ಸ್ಯುದರ, ಮಿ. ಎನ. ಎಮ್. ಜೋಶಿ, ಸರ ಸ್ಕೇನಿಯುನ ಮತ್ತು ಸರ ಡಾರ್ಸಿ ಲಿಂಡಸೆಯವರ ಒಂದು ಡೆಪುಟೇಶನವನ್ನು ಅಧ್ಯಕ್ಷರ ಕಡೆಗೆ ಕಳಿಸಬೇಕೆಂದು ಗೊತ್ತು ಮಾಡಿದರು.

ಮೇಲಿನ ಗೃಹಸ್ಥರಿಗೂ, ಅಧ್ಯಕ್ಷರಿಗೂ, ಒಂದು ತಾಸಿನ ತನಕ ಸಂಭಾಷಣೆ ನಡೆಯಿತು ಉಭಯತರು ಮನಸು ಬಿಚ್ಚಿ ಮಾತಾಡಿದರು. ಮರುದಿವಸ ಅಧ್ಯಕ್ಷರು ಈ ಮಾತಿನ ಸ್ಪಷ್ಟೀಕರಣ ಮಾಡಿದರು.

ಪಂಡಿತ ಮೋತಿಲಾಲರು ಕೌನ್ಸಿಲದಿಂದ ಹೊರಬಿದ್ದ ಸುದ್ದಿಯ ಕೂಡ, ಅವರು ಸ್ವಂತ ಕೆಲಸಕ್ಕಾಗಿ ಇಂಗ್ಲಂಡಕ್ಕೆ ಪ್ರಯಾಣ ಬೆಳೆಸುವರೆಂಬ ಸುದ್ದಿಯೂ ಪ್ರಕಟವಾಗಿರುತ್ತದೆ. ಪಂಡಿತರ ಗೃಹಕೃತ್ಯದ ಕೆಲಸದ ಹೊಟ್ಟೆಯಲ್ಲಿ ರಾಜಕಾರಣವೂ ಇ[illegible]ಬೇಕೆಂದು ತಾನಾಗಿ ಊಹೆಯಾಗುತ್ತದೆ. ಇವರು ವಿಲಾಯತಿಗೆ ಹೋ[illegible] ಕಾಲದಲ್ಲಿ ಶ್ರೀ. ಶ್ರೀನಿವಾಸ ಅಯ್ಯಂಗಾರರು ಸ್ವರಾಜ್ಯ ಪಕ್ಷದ ಮುಖಂಡರಾಗಿ ಎಲ್ಲ ಸೂತ್ರ[illegible] ನಡಿಸುವರು. ಇವರೇ ಆಸಾಮದಲ್ಲಿ ಸೇರ[illegible]ಗ್ರೆಸದ ಅಧ್ಯಕ್ಷರಾಗುವರೆಂದು ಈಗಾಗಲೇ [illegible]ವಾಗಿರುತ್ತದೆ

೧೧ನೇ ತಾರೀಖಿನಿಂದ ಸರಕಾರದಿಂದ ಭತ್ತೆ ತಕ್ಕೊಳ್ಳಬಾರದೆಂದು ಅಸೆಂಬ್ಲಿಯ ಸ್ವರಾಜ್ಯ ಪಕ್ಷದ ಮೆಂಬರರು ಜಾಹೀರ ಮಾಡಿದ್ದಾರೆ. ಅದೇ ಪ್ರಕಾರ ಕೌನ್ಸಿಲಗಳ ಮೆಂಬರರೂ ಭತ್ತೆ ತಕ್ಕೊಳ್ಳಲಾರರು.

ನಾಗಪೂರದಲ್ಲಿ ಮಂತ್ರಿಗಳ ಸಂಬಳವನ್ನು ನಾಮಂಜೂರ ಮಾಡಿದನಂತರ ಸ್ವರಾಜ್ಯ ಪಕ್ಷೀಯರು ಕೌನ್ಸಿಲಕ್ಕೆ ಶರಣು ಹೊಡೆದರು.

ಆಗಲಾರದ ಪ್ರಯತ್ನ—

ಡಿಲ್ಲಿಯ ಮ್ಯುನಿಸಿಪಲ ಚುನಾವಣೆಯಲ್ಲಿ ಮುಸಲಮಾನರಿಗೆ ಸ್ವತಂತ್ರವಾದ ಮತದಾರ ಸಂಘದ ಅಧಿಕಾರ ದೊರೆತ ಮೇರೆಗೆ ಅವರನ್ನು ಆರಿಸಬೇಕಾಗಿದೆ. ಪಟ್ಟಣದ ಪೂರ್ವ ಭಾಗದಲ್ಲಿ ಮೂವರನ್ನು ಮತ್ತು ಉಪಭಾಗಗಳು ಸೇರಿ ಇಬ್ಬರನ್ನು ಆರಿಸಬೇಕೆಂದು ಒಡೆದು ಹಾಕಿದ್ದಾರೆ. ವೋಟು ಬೇಡುವ ಮತ್ತು ವೋಟು ಕೊಡುವ ಕ್ರಮವನ್ನು ತಪ್ಪಿಸಬೇಕೆಂದು ಕೆಲ ಮುಸಲಮಾನರು ಆಲೋಚಿಸಿ, ಎಲ್ಲ ಮುಸಲಮಾನರು ಸಭೆ ಕೂಡಿ, ಐವರನ್ನು ಗೊತ್ತು ಮಾಡಬೇಕು; ಅವರೇ ಅರ್ಜಿಗಳನ್ನು ಕೊಟ್ಟು, ಚುನಾವಣೆಯ ತಾಪವಿಲ್ಲದೆ ಮೆಂಬರರಾಗಬೇಕು; ಎಂಬ ಹಸ್ತಪತ್ರಿಕೆಗಳನ್ನು ಊರು ತುಂಬ ಹಚ್ಚಿದ್ದಾರೆ. ಡಿಸ್ಟ್ರಿಕ್ಟ ಲೋಕಲಬೋರ್ಡಿನ ಚುನಾವಣೆಯಲ್ಲಿ ಎಲ್ಲರೈವರು ಇದೇ ತರದ ಪ್ರಯತ್ನ ಮಾಡಿದರು. ಆದರೆ ಅದರಲ್ಲಿ ಅವರಿಗೆ ಯಶ ದೊರೆಯಲಿಲ್ಲ. ಮುಸಲಮಾನರಿಗಾದರೂ ಇದೇ ತರದ ಅನುಭವ ಬರುವದೆಂದು ಅವರಲ್ಲಿ ನಡೆದ ಚರ್ಚೆ ಮತ್ತು ವಾದವಿವಾದದಿಂದ ಸ್ಪಷ್ಟವಾಗುತ್ತಿರುವದು. ಸಭೆಯು ಆದಿತ್ಯವಾರ ಕೂಡತಕ್ಕದ್ದಿದೆ.

ಕರ್ನಾಟಕದ ಏಕೀಕರಣ-

ಕೌನ್ಸಿಲ ಆಫ ಸ್ಟೇಟದಲ್ಲಿ ಕರ್ನಾಟಕವನ್ನು ಒಂದು ರಾಷ್ಟ್ರ ಮಾಡುವ ಠರಾವಿಗೆ ಅರ್ಧ ಜಯ ದೊರೆತ ಬಳಿಕ, ಕರ್ನಾಟಕವು ಹೇಗೆ ಒಂದು ನಾಡಾದೀತೆಂದು ಕನ್ನಡಿಗರು ವಿಚಾರ ಮಾಡುತ್ತಲಿದ್ದಾರೆ. ಮುಂಬಯಿಯಲ್ಲಿ ವಾಸವಾಗಿರುವ ಕನ್ನಡಿಗರೂ ಈ ಕೆಲಸದಲ್ಲಿ ಮುಂದೊರೆದಿದ್ದಾರೆ. ಅಲ್ಲಿ ಕೌನ್ಸಿಲದ ದೆಸೆಯಿಂದ ಕೂಡಿದ ಮೆಂಬರರು ಸಹಿತವಾಗಿ ಒಂದು ಸಭೆ ಕೂಡಿಸಿದರು. ರಾಜಕೀಯ ಮತ್ತು ಶೈಕ್ಷಣಿಕವಾಗಿ ಕರ್ನಾಟಕದ ಏಕೀಕರಣವನ್ನು ಹೇಗೆ ಮಾಡಬೇಕೆಂಬ ಯೋಜನೆಯನ್ನು ಸಿದ್ಧಪಡಿಸಲೋಸುಗ ಒಂದು ಕಮಿಟಿ ನೇಮಿಸಿದರು. ಈ ಕಮಿಟಿಯು ಮೇ ತಿಂಗಳ ೩ ನೆಯ ವಾರದಲ್ಲಿ ಬಳ್ಳಾರಿಯಲ್ಲಿ ಕೂಡುವ ರಾಜಕೀಯ ಪ್ರಾಂತಿಕ ಪರಿಷತ್ತಿನಲ್ಲಿ ತನ್ನ ವರದಿಯನ್ನು ಒಪ್ಪಿಸಬೇಕೆಂದು ಗೊತ್ತು ಮಾಡಿದ್ದಾರೆ.

ಕೂಲಿಕಾರರ ಸತ್ಯಾಗ್ರಹ-

ಇಂಗ್ಲಂಡದಲ್ಲಿರುವ ಕೂಲಿಕಾರ ಜನದ ಸ್ವತಂತ್ರ ಭಾಗದವರು ಸತ್ಯಾಗ್ರಹದಿಂದ ತುರಂಗಕ್ಕೆ ಹೋಗುವ ಸಿದ್ಧತೆ ನಡೆಸಿದ್ದಾರೆ. ಹೋದ ವಾರದಲ್ಲಿ ಮಿ. ಲ್ಯಾನ್ಸಬರಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯನ್ನು ಕೂಡಿಸಿದ್ದರು. ಎಪ್ರಿಲ ಅಥವಾ ಮೇ ತಿಂಗಳಲ್ಲಾಗುವ ರಾಷ್ಟ್ರೀಯ ಸಂಪಿನ ಕೋಲಾಹಲದಲ್ಲಿ ಸರಕಾರದವರು ಕೂಲಿಕಾರರ ಮೇಲೆ ಗುಂಡು ಹಾಕಲಿಕ್ಕೆ ಹುಕುಮು ಮಾಡಿದರೆ- ಸೋಲ್ಜರರು ಗುಂಡು ಹಾಕಬಾರದು. ವಸ್ತ್ರ ಹೀಗೆ ನರಬಲಿ ತಕ್ಕೊಳ್ಳಬಾರದು. ಸರಕಾರದ ಹುಕುಮನ್ನು ಮಾನ್ಯ ಮಾಡಬೇಕು ಎಂಬದಾಗಿ ನಾವು ಸೋಲ್ಜರರಿಗೆ ಸಾರಿ, ಸಾರಿ ಹೇಳುತ್ತೇವೆ. ಎಂಬದಾಗಿ ಸಭೆಯಲ್ಲಿ ಠರಾವು ಪಾಸ ಮಾಡಿದರು. ಈ ಪ್ರಕಾರ ಠರಾವು ಪಾಸು ಮಾಡುವದು ರಾಜದ್ರೋಹವಾಗುವದರಿಂದ ಸರಕಾರವು ಒಬ್ಬೊಬ್ಬರ ಮೇಲೆ ಖಟ್ಲೆ ಮಾಡಬಹುದು. ಆದುದರಿಂದ ಸಭೆಯಲ್ಲಿದ್ದವರೆಲ್ಲರ ಮೇಲೂ ಖಟ್ಲೆ ಮಾಡುವಂತೆ ಪ್ರತಿಯೊಬ್ಬ ಮೆಂಬರನಿಂದ ಈ ಠರಾವನ್ನು ಏಕಕಾಲಕ್ಕೆ ಸೂಚಿಸಿದರು. ಹಿಂದುಸ್ಥಾನದ ಸತ್ಯಾಗ್ರಹಕ್ಕಿಂತ ಕೂಲಿಕಾರರ ಸತ್ಯಾಗ್ರಹ ಮತ್ತು ಅವರ ರಾಜದ್ರೋಹವು ಭಯಂಕರ ಪ್ರಕಟವಾಗುವದು ನಿಶ್ಚಯ.

ಹಂಪಿಯ ದೇವಸ್ಥಾನ-

ಹಂಪಿಯ ಶ್ರೀ ವಿರೂಪಾಕ್ಷ ಹಾಗು ಬೇರೆ ಪುರಾತನ ದೇವಾಲಯಗಳನ್ನು ದೇವಸ್ಥಾನ[illegible] ಯದೆಯಲ್ಲಿ ಸೇರಿಸಬಾರದೆಂದು, ಅಲ್ಲಿನ ವಹಿವಾಟುದಾರರು ದೇವಸ್ಥಾನ ಕಮಿಟಿಗೆ ಅರ್ಜಿ ಮಾಡಿಕೊಂಡಿದ್ದರು. ಕಮಿಟಿಯವರು, ಅರ್ಜಿಯನ್ನು ನಾಮಂಜೂರ ಮಾಡಿ, ದೇವಾಲಯಗಳನ್ನು ತಮ್ಮ ಪ್ರಭುತ್ವದಲ್ಲಿ ಸೇರಿಸಿಕೊಂಡರು.

ಸರಕಾರದಿಂದ ಪೆಟೆಂಟ ದೊರಕಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿ ತಲೆ ಆದ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಮೇಲ್ಪಟ್ಟಲೇ ಜಾಳಿಗೆಯು ಪಟ್ಟಿಯ ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ

ಎರಡು ಪ್ರಕಾರಗಳದ್ದಿರುವವು.

ನಂ ೧	೩೦ ಗ್ಯಾಲನ್.	ಬೆಲೆ	೩೦ ರೂ.
ನಂ ೨	೨೫ ,,	,,	೨೪ ರೂ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಮಾತಾಡುವ ಔಷಧವು.

ಅಣ್ಣಾ! ಮಾತಾಡುವದಿಲ್ಲೇಕೆ? ಗಲ್ಲಕ್ಕೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಣ್ಣನು— ಕಂದಾ— ಹೌದು ಮೈಯಲ್ಲಾ ನೋಯುತ್ತದೆ

ಕಂದ— ಹಾಗಾದರೆ ಪೇಪರಮೆಂಟ ಕ್ಯಾಯರ ತಕ್ಕೊಳ್ಳು, ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ತೀರ ಸುಲಭ. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಶನಗಾರದಿಕ್ಷ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗರ್ಮಿಯ ಹುಣ್ಣು, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ ವರ್ತಕರಿಗೆ ಕಮಿಶನ ಕೊಡಲಾಗುವದು. ... ಮೆಡಿಕಲ ಸ್ಟೋರ್ಸ ... ಸ್ಟೇಶನ ರೋಡ ಹುಬ್ಬಳ್ಳಿ, ರೋಡ ಮತ್ತು ಕಿರಾಣಿ ದುಕಾನದಲ್ಲಿ ದೊರೆಯುವದು. | ಎನ ಎಸ. ಪೋತದಾರ ...

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ದಿವಾಳಿ ಟ್ಟುಕೊಳ್ಳಲಾಗುವದು ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ... ಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ... ಆಣೆಯಂತಿರುತ್ತದೆ

... ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೨೫ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ
ಹೊಂದಿದೆಯು. ಒಂದು ಲಕ್ಷದ ಮೇಲೆ ಠೇವು ... ಕ ... ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ... ಯುವದು. ಕಾಯಮ ಮತ್ತು ಸೇವಿಂಗ್ಸ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು
ಬೇರೆ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ಒಕ್ಕ ಪತ್ರಕ್ಕೆ	
... ಗಳಿಗೆ	೧೨—೬—೦ ರೂ
,,	೬—೨—೦ ರೂ
,,	೪—೨—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಚಂದಾದಾರರಿಗೆ ಸೂಚನೆ.

ಮಾರ್ಚ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದರಿಂದ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ... ... ಧಾರವಾಡ ... ... ಮುದ್ರಿಸಿ ... ಪ್ರಸಿದ್ಧ ಪಡಿಸಿದರು ...

R. N. B 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧. ಧಾರವಾಡ ಶನಿವಾರ ತಾ॥ [illegible]೩ನೇ ಮಾರ್ಚ ೧೯೨೬. (ಸಂಚಿಕೆ [illegible]

ಜಾಹೀರ ನೋಟೀಸು.

[illegible]ವತ್ತು ಜನರಿಗೆ ಈ ನೋಟೀಸದ್ವಾರ ತಿಳಿಸುವದೇನಂದ್ರೆ—

ಶ್ರೀ [illegible] ಸ್ವಾಮಿ ಗುರು [illegible] ಸ್ವಾಮಿ ಮಠ ಮುಂಡರಗಿ ಅನ್ನುವ ಇವರು ಕಳೆದ ಜಾನೇವರಿ [illegible] ನೇ ತಾರೀಖಿನ ದಿವಸ ಲಿಂಗೈಕ್ಯರಾದರು. ಅವರು ಶ್ರೀ ಜಗದ್ಗುರು [illegible] ಮಠದ [illegible] ಸಂಸ್ಥಾನ ಮಠ ಡಂಬಳ ಮತ್ತು ಗದಗ ಇವರ ಶಿಷ್ಯರು ಇದ್ದು ಸದರ ಶ್ರೀ ಜಗದ್ಗುರು [illegible] ಸ್ವಾಮಿಗಳವರ ತರ್ಫೆಯಿಂದ ಸದರ ಮುಂಡರಗಿ ಮಠ ಮತ್ತು ಅದಕ್ಕೆ ಹೊಂದಿ[illegible] ಆಸ್ತಿಗಳ ವಹಿವಾಟ ಮಾಡುತ್ತಿದ್ದರು. ಈ ವಿಷಯವಾಗಿ ಹೈಕೋರ್ಟಿನ [illegible] ನ್ಯಾಯ [illegible] ಸಿದ್ಧ ಸಹಾ ಆಗಿರುತ್ತದೆ. ಅವರು ತಮ್ಮ ಅಂತ್ಯ ಸಮಯಕ್ಕೆ ತಮ್ಮ ತರುವಾಯ [illegible] ಮಠದ ಯಾವ ವ್ಯವಸ್ಥೆಯನ್ನೂ ಮಾಡಿರುವದಿಲ್ಲಾ. ಅಥವಾ ಯಾರನ್ನೂ ತಮ್ಮ ಜಾಗಕ್ಕೆ [illegible] ಇಲ್ಲಾ. ಮತ್ತು ಅದರಂತೆ ವ್ಯವಸ್ಥೆ ಮಾಡಲಿಕ್ಕೆ ಸಹಾ ಅವರಿಗೆ ಅಧಿಕಾರ ಇದ್ದಿಲ್ಲಾ. ಅವರ ತರುವಾಯ [illegible] ಮಠ ವ ಮಠಕ್ಕೆ ಹೊಂದಿದ ಯಾವತ್ತು ಆಸ್ತಿ ಮುಖಲ ಮಾಲೀಕ ಅಂತಾ ಸದರ ಶ್ರೀ ಜಗದ್ಗುರು ತೋಂಟದ ಸ್ವಾಮಿಗಳವರ ಕಡೆಗೇನೇ ಬಂದಿರುತ್ತದೆ. ಮತ್ತು ಅದಕ್ಕೆ ಸದರ ಶ್ರೀ ಜಗದ್ಗುರು ತೋಂಟದಸ್ವಾಮಿಗಳೇ ಬಾಧ್ಯರು ಇದ್ದಾರೆ. ಹೀಗಿರತಾ ಕೆಲವರು ಇಲ್ಲದ್ದೊಂದು [illegible] ಜನರಿಗೆ ವಿಪರೀತ ಭಾವನೆ ಆಗುವಂತೆ ಒಂದು ನೋಟೀಸು ಹುಬ್ಬಳ್ಳಿಯ ಲೋಕ ಮತದ [illegible] ದಲ್ಲಿ ತಾ॥ [illegible]-೧೯೨೬ ನೇ ಇಸ್ವಿ ದಿವಸ ಪ್ರಸಿದ್ಧ ಪಡಿಸಿ ಅದಕ್ಕೆ ಒಬ್ಬ ವೀರಪ್ಪ ಸಿದ್ದಪ್ಪ ಅಂಗಡಿ ಅಂಬು ಆವನು ಸದರ ಮಠದ ಕಾರಭಾರಿ ಅಂತಾ ಸಹಿ ಮಾಡಿರುತ್ತಾನೆ. ಸದರಿಯವನು ಕೊಟ್ಟ ಸದರ ನೋಟೀಸು ಆಗದೀ ಸುಳ್ಳು ಇದೆ. ಸದರ ನೋಟೀಸಿನಲ್ಲಿ ಬರೆದ ಪ್ರಕಾರ [illegible] ಸದರ ಅನ್ನದಾನಸ್ವಾಮಿಯವರು ಯಾವ ಅಧಿಕಾರ ಕೊಟ್ಟಿರುವದಿಲ್ಲಾ. ಕೊಟ್ಟಿದ್ದರೂ ಅದು [illegible] ಅದೆ ಸದರ ಜನರಿಗೆ ಆ ಮಠಕ್ಕೆ ಸ್ವಾಮಿಯವರನ್ನು ಆರಿಸುವ ಅಧಿಕಾರ ಇಲ್ಲಾ. ಆದ್ದರಿಂದ ಅವರ ಮಾತಿಗೆ ಯಾರೂ ಮೋಸ ಬೀಳಬಾರದು ಮತ್ತು ನ್ಯಾಯಕ್ಕೆ ಗುರಿ ಆಗಬಾರದು. ಸದರ ಮಠಕ್ಕೆ [illegible] ಹೆಚ್ಚು ಬಾಬು ಜಪ್ತಿ ವಗೈರೆ ಯಾವತ್ತು ಸದರ ಶ್ರೀ ಜಗದ್ಗುರು ತೋಂಟದ ಸ್ವಾಮಿಗಳವರದೇ ಇದ್ದು ನಮ್ಮ ಹೊರತು ಯಾರಿಗೂ ಮುಟ್ಟಸಬಾರದು ಮತ್ತು ಸದರ ಮಠದ ಆಸ್ತಿ ಲಾವಣಿ ವಗೈರೆ ಹಿಡಿಯುವದು ಇದ್ದರೆ ಸಹಾ ನಮ್ಮ ಕಡೆಯಿಂದಲೇ ಹಿಡಿಯಬೇಕು. ಬಾಕಿಯವರಿಂದ ಹಿಡಿಯಕೂಡದು ಈ ಬಗ್ಗೆ ಅಲಾಹಿದ ತಾಲೂಕುಗಳಲ್ಲಿ ಮತ್ತು ಗ್ರಾಮಗಳಲ್ಲಿ ಸಹಾ ಸಾವು ವರ್ದಿ ಕೊಟ್ಟಿರುತ್ತೇವೆ. ಇದರ ವಿರುದ್ಧವಾಗಿ ನಡೆದವರು ಲುಕಸಾನಿಗೆ ಪಾತ್ರರಾದಾರು ತಿಳಿಯುವದು.

ತಾ॥ ೨೧- ಮಾರ್ಚ ೧೯೨೬ ನೇ ಇಸ್ವಿ

ಸಹಿ—ಶ್ರೀ ಜಗದ್ಗುರು ತೋಂಟದ ಸ್ವಾಮಿಗಳವರ ಡಂಬಳ ವ ಗದಗ ಸಂಸ್ಥಾನ ಮಠದ ವಕೀಲರು ಮು[illegible]ರು ಕೆಂಚಟಿ [illegible], ಸಿದ್ದಲಿಂಗಪ್ಪ ಯಾ. ಲಕ್ಕುಂಡಿ ನಾಗಾವಿ ಹಿರೇಮಠದ

ಪ್ರಕಟನೆ.

ವಿ. ಎಸ್. ಎಸ್ ವೈದ್ಯ ಇವರು

ಉತ್ತಮ ಗಾಯನ, ಪೇಟಿ, ವ ನಾಟಕ ಪ[illegible] ಕಲಿಸುವರು. ಅಪೇಕ್ಷಿಸುವವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕಟ	೫ „
ಲೋ॥ ತಿಲಕರ ಚರಿತ್ರ	೪ „
ದೇಶಬಂಧು ದಾಸರ ಚರಿತ್ರ	೩ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧। ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ,
ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಒಳ್ಳೆ ಪಂಕ್ತಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಪಂಕ್ತಿಗೆ ಎರಡಾಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಆಣೆ ಡಬಲ ಕಾಲಮಿನ ಪಂಕ್ತಿಗಳಿಗೆ ಇಮ್ಮಡಿ ದರ. [illegible] ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬೇಕು,

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ-ತಾ- ೧೩ ೩-೨೬ ನೇ ಇಸ್ವಿ

ಅನಿಬಿಸೆಂಟಮ್ಮನವರ ಸಂಯುಕ್ತ ಸ್ವರಾಜ್ಯ ಸಂಘದ ಸಭೆ.

ಸ್ವರಾಜ್ಯ ಪಕ್ಷೀಯರು ಕೌನ್ಸಿಲಗಳ ನಿರುಪಯೋಗವನ್ನು ಜಗತ್ತಿಗೆ ಪ್ರಕಟಿಸಿ, ಅಲ್ಲಿಂದ ಹೊರಬೀಳುತ್ತಿರುವಾಗ, ಅನಿಬಿಸೆಂಟಮ್ಮನವರು ತಮ್ಮ ಸಂಯುಕ್ತ ಸ್ವರಾಜ್ಯ ಸಂಘದ ಯೋಜನೆಯ ಕುದುರೆಯನ್ನು ಮುಂದೆ ಬಿಡುವದರಲ್ಲಿ ತತ್ಪರರಾಗಿದ್ದಾರೆ. ಇದೇ ಉದ್ದಿಶ್ಯವಾಗಿ ತಾವೂ ಸರ ತೇಜಬಹಾದ್ದೂರ ಸಪ್ರೂಸಾಹೇಬರೂ ಸಹೀ ಮಾಡಿದಂಥ ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿ, ಅದನ್ನು ರಾಜಕೀಯವಾದ ಎಲ್ಲ ಪಕ್ಷಗಳ ಪ್ರಮುಖರ ಅವಲೋಕನಕ್ಕಾಗಿ ಕಳಿಸಿ, ತಾವು ತದ್ವಿಷಯವಾಗಿ ಕೂಡಿಸುವ ಸಭೆಗೆ ಬರಬೇಕೆಂಬ ಸ್ನೇಹದ ಔತಣವನ್ನು ಹೇಳಿದ್ದಾರೆ. ಆಮಂತ್ರಣ ಪತ್ರ ಕಳಿಸಲ್ಪಟ್ಟವರಲ್ಲಿ ಮಹಾತ್ಮರು, ದೇವಿ ಸರೋಜಿನಿ, ಮಿ. ಜಿನ್ನಾ, ಸರ ಶಿವಸ್ವಾಮಿ ಅಯ್ಯರ, ಪಂಡಿತ ಮೋತಿಲಾಲ ನೆಹರು, ಸರ ಅಲ್ಲಿ ಇಮಾಮ, ಲಾಲಾ ಲಜಪತರಾಯ, ದಿವಾನ ಬಹಾದ್ದೂರ ಚಿಂತಾಮಣಿ, ಪಂಡಿತ ಮಾಲವಿಯಾ, ಸಾಮುದಾರ ಶಾಸ್ತ್ರಿ, ಶ್ರೀ. ರಂಗಾಚಾರಿಯರ ಮೆಸರ್ಸ ಜಯಕರ ಮತ್ತು ಕೇಳಕರರು ಪ್ರಮುಖರಾಗಿದ್ದಾರೆ.

" ಪ್ರತಿಯೊಬ್ಬರು ತಂತಮ್ಮ ರಾಜಕೀಯ ಮತಗಳಿಗೆ ಬಾಧೆ ಬರದಂತೆ ಈ ಸಂಯುಕ್ತ ಸಂಘದಲ್ಲಿ ಸೇರತಕ್ಕದ್ದು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವಂತೆ ಎಲ್ಲರೂ ಪ್ರಯತ್ನಿಸುವದೇ ಒಂದು ಕರ್ತವ್ಯವಾಗಿರಬೇಕು. ೧೯೧೯ನೆಯ ಇಸವಿಯ ಕಾಂಗ್ರೆಸದಲ್ಲಿ ವಸಾಹಾತಿನ ಸ್ವರಾಜ್ಯವೇ ಹಿಂದುಸ್ಥಾನದ ಧ್ಯೇಯವೆಂದು ಠರಾವಾಗಿದೆ. ಅದೇ ಧ್ಯೇಯವನ್ನು ಈಗಾದರೂ ಇಟ್ಟುಕೊಳ್ಳತಕ್ಕದ್ದು. ಶಕ್ಯವಾದಲ್ಲೆಲ್ಲ ಪ್ರತಿಯೋಗಿ ಸಹಕಾರವನ್ನೇ ಇಟ್ಟುಕೊಟ್ಟು, ಹಿಂದುಸ್ಥಾನದ ಹಿತಕ್ಕೆ ಬಾಧೆ ಬರುವಂಥಲ್ಲಿ ಸರಕಾರವನ್ನು ವಿರೋಧಿಸಬೇಕಾದದ್ದು. ಅಮ್ಮನವರ ಕಾಮನವೆಲ್ಥ ಬಿಲ್ಲನ್ನು ಸ್ವೀಕರಿಸತಕ್ಕದ್ದು. ಬೇಕಾದರೆ- ಸಂಯುಕ್ತ ಸಭೆಯವರು ಇದರಲ್ಲಿ ಹೆಚ್ಚು ಕಡಿಮೆ ಮಾಡಿ, ತಿದ್ದಿ, ಪಾರ್ಲಮೆಂಟ ಸಭೆಗೆ ಕಳಿಸಬಹುದು" ಎಂಬದಾಗಿ ಅಮ್ಮನವರು ಕಳಿಸಿದ ಆಮಂತ್ರಣ ಪತ್ರಿಕೆಯು ಒಕ್ಕಣಿಕೆಯಾಗಿರುತ್ತದೆ. ತಮ್ಮ ಸ್ವರಾಜ್ಯ ಬಿಲ್ಲನ್ನು ಅಂಗೀಕರಿಸಬೇಕೆಂದು ಅಮ್ಮನವರು ಕಾಂಗ್ರೆಸದ ಬೆನ್ನು ಹತ್ತಿದರು. ನೂಲುವ ದೀಕ್ಷೆ ತಳೆದರು. ಆದರೆ ಕಾಂಗ್ರೆಸವು ಇವರ ಮಾತಿಗೆ ಮೋಸ ಹೋಗಲಿಲ್ಲ. ಆದುದರಿಂದ ಈಗ ಸಂಯುಕ್ತ ಸಭೆಯ ಹೊಸ ಹಂಚಿಕೆ ತೆಗೆದಿದ್ದಾರೆ, ಅಸೆಂಬ್ಲಿಯ ಠರಾವಿನಂತೆ ಕಾಂಗ್ರೆಸ ಸಭೆಯವರು ರಾಜಕೀಯ ಹಕ್ಕುಗಳನ್ನು ಬೇಡಿದ್ದಾರೆ. ಆದುದರಿಂದ ಇವರು ಅಮ್ಮನವರು ಹಿಡಿದ ಹಾದಿಗೆ ಒಂದು, ನಗೆಗೇಡು ಮಾಡಿಕೊಳ್ಳಲಾರರು. ಮಹಾತ್ಮರೇ ಮೊದಲಾಗಿ ಪ್ರಮುಖ ರಾಷ್ಟ್ರೀಯರೆಲ್ಲರೂ ದೂರಿಂದಲೇ ಈ ಸಭೆಗೆ ಶರಣು ಹೊಡೆಯುವರು.

ಬುದ್ಧಿ ಭ್ರಂಶ-

ವರ್ತಮಾನ ಪರಿಸ್ಥಿತಿಯಲ್ಲಿ ಪ್ರತಿಯೋಗಿ ಸಹಕಾರಿಗಳ ಬುದ್ಧಿಭ್ರಂಶವಾಗಿರುತ್ತದೆ. ಮುಂಬಯಿ ಕೌನ್ಸಿಲದಲ್ಲಿರುವ ಈ ಪಕ್ಷದ ಕೆಲ ಮೆಂಬರರು ಕಾಂಗ್ರೆಸದ ಆಜ್ಞೆ ಎಂದು ಪಂಡಿತ ಮೋತಿಲಾಲರ ಕಯ್ಯೊಳಗಿನ ಸೂತ್ರ ಗೊಂಬೆಗಳಾಗಬೇಕೆಂದು ಕುತರ್ಕ ನಡೆಸಿದ್ದಾರೆ. ನಾಗಪೂರದಲ್ಲಿ ಮಂತ್ರಿಗಳ ಅವಶ್ಯಕತೆ ಇಲ್ಲೆಂಬೂ, ಇವರ ಸಂಬಳವು ಎರಡೇ ರೂಪಾಯಿ ಇರಬೇಕೆಂದೂ ಪಾಸಾದ ಠರಾವಿಗೆ ಮವಾಳ ಮತ್ತು ಬ್ರಾಹ್ಮಣೇತರರ ಸಹಾಯವಿತ್ತು. ಆದರೆ ಪ್ರತಿಯೋಗಿ ಸಹಕಾರಿಗಳು ಮಾತ್ರ ದಿವಾನರು ಬೇಕೇ ಎಂಬದಾಗಿ ವಾದಿಸಿದರು. ಊರವರದೊಂದಾದರೆ- ಉಳ್ಳವ್ವನದೊಂದು ಬೇರೆ ಎಂಬದಾಗಿ ಇವರ ವರ್ತನವಾಗಿದೆ.

ಮುಂಬಯಿ ಕೌನ್ಸಿಲದ ಸ್ವರಾಜ್ಯ ಮತ್ತು ಪ್ರತಿಯೋಗಿ ಸ್ವರಾಜ್ಯದ ಎಲ್ಲ ಮೆಂಬರರು ಹೊರಬಿದ್ದು ಬಂದರೆಂದು ನಿನ್ನೆ ಸಾಯಂಕಾಲದಲ್ಲಿ ಬಂದ ವರ್ತಮಾನವಾಗಿದೆ.

ಖಿಲಾಫತದ ಸಹಾಯ-

ಕಾಂಗ್ರೆಸ ಮತ್ತು ಖಿಲಾಫತ ಬೇರೆಯಲ್ಲ; ಕಾಂಗ್ರೆಸ ಸಭೆಯವರು ಸ್ವರಾಜ್ಯ ಪಕ್ಷೀಯರಿಗೆ ವಿಧಿಸಿದ ಆಜ್ಞೆಯು ತಮಗೂ ಇರುತ್ತದೆಂದು ತಾವಾಗಿ ಊಹಿಸಿಕೊಂಡು, ಪಂಜಾಬದ ಕೌನ್ಸಿಲದಲ್ಲಿರುವ ಖಿಲಾಫತದ ಮೆಂಬರರು ಸ್ವರಾಜ್ಯ ಪಕ್ಷೀಯರ ಕೂಡ ಕೌನ್ಸಿಲ ಬಿಟ್ಟು ಹೊರಬಿದ್ದರು. ಖಿಲಾಫತ ಮತ್ತು ಸ್ವರಾಜ್ಯ ಪಕ್ಷೀಯರು ಚುನಾವಣೆಯಲ್ಲಿ ರಾಮಲಕ್ಷ್ಮಣರಂತೆ ನಿಂತರೆ- ಅಸೆಂಬ್ಲಿ ಮತ್ತು ಕೌನ್ಸಿಲಗಳಲ್ಲಿ ಬಹುಮತವು ಖಂಡಿತವಾದದ್ದು.

ಕೌನ್ಸಿಲಗಳು ಹಾಳು ಸುರಿದವು-

ಬ್ರಹ್ಮದೇಶ ಮತ್ತು ಪಂಜಾಬದ ಕೌನ್ಸಿಲಗಳಿಂದ ಸ್ವರಾಜ್ಯ ಪಕ್ಷದವರು ಹೊರಬಿದ್ದ ಬಳಿಕ ಕೌನ್ಸಿಲಗಳು ಹಾಳು ಸುರಿದವು. ಪಂಜಾಬದ ಕೌನ್ಸಿಲದಲ್ಲಂತೂ ಚುನಾಯಿಸಲ್ಪಟ್ಟಂಥ ಹತ್ತು ಜನರು ಕೂಡ ಇರಲಿಲ್ಲ. ಸರಕಾರಿ ಮೆಂಬರರೇ ಭಾಷಣ ಮಾಡತಕ್ಕವರೂ ಠರಾವು ಹೇಳತಕ್ಕವರೂ ಆದರು. ಇದೇ ತೆರವಾಗಿ ಬ್ರಹ್ಮದೇಶದ ಕೌನ್ಸಿಲವು ರಣಗುಟ್ಟಿತು. ಸಣ್ಣ ಸ್ಟೇಶನಗಳಲ್ಲಿ ಸ್ಟೇಶನಮಾಸ್ತರ, ಟಿಕೇಟ ಕಲೆಕ್ಟರ, ಕಾಂಟಾಮಾಸ್ತರ, ಲಾಯಿನಕ್ಲಿಯರ ಸಿಗ್ನಲರ, ಟಿಕೇಟ ಕಲೆಕ್ಟರ ಇವೆಲ್ಲ ಅಧಿಕಾರಗಳನ್ನು ಒಬ್ಬನೇ ನೋಡುವಂತೆ ಪ್ರಸ್ತುತದಲ್ಲಿ ಕೌನ್ಸಿಲಗಳ ಪಾಡಾಗಿರುತ್ತದೆ.

ಠರಾವುಗಳು ಹಿಂದೆ ಬಿದ್ದವು.

ಕೌನ್ಸಿಲ ಆಫ ಸ್ಟೇಟದ ಸ್ವರಾಜ್ಯ ಮೆಂಬರರು ಹೊರಬಿದ್ದ ಕಾರಣದಿಂದ ಇವರು ತರಬೇಕಾಗಿದ್ದ ಮಹತ್ವದ ಠರಾವುಗಳು ಹಿಂದೆ ಬಿದ್ದವು. ಶ್ರೀ. ರಾಮದಾಸ ಪಂತಲುಗಾರು ಮದ್ಯಪಾನ ಪ್ರತಿಬಂಧದ ಠರಾವನ್ನು ತರಬೇಕಾಗಿತ್ತು. ಆದರೆ ಠರಾವು ತರುವದಿಲ್ಲೆಂದು ಕಡ್ಡಾಯವಾಗಿ ಹೇಳಿದರು. ಗೋವಧ ಬಂದು ಮಾಡುವ ಠರಾವೂ ಬರತಕ್ಕದ್ದಿತ್ತು. ಅದು ಸತ್ಯಾಗ್ರಹದ ದೆಸೆಯಿಂದ ಮುಂದೆ ಬಿತ್ತು. ಸ್ವರಾಜ್ಯ ಪಕ್ಷೀಯರಿಂದ್ದರಿಂದ ತಮ್ಮ ಬಹುಮತವಾಗುವದಿಲ್ಲೆಂದು ಶ್ರೀ ದೇಶಿಕಾಚಾರ್ಯರು ತಮ್ಮ ಠರಾವಿನ ಮೇಲೆ ಹೋಟು ಕೇಳಲಿಲ್ಲ.

ಡಾಕ್ಟರರು ಲಕ್ಷದ ದಾವೆ ಸೋತರು.

ವಿಲಾಯತಿಯಲ್ಲಿ ಡಾಕ್ಟರ ಪರೀಕ್ಷೆ ಕೊಟ್ಟು, ಮುಂಬಯಿಯಲ್ಲಿ ಉಪಜೀವನ ಮಾಡುತ್ತಿರುವ ಡಾಕ್ಟರ ತಿಂಗಾವಕರರೆಂಬವರು ಧ್ರಾಂಗಧ್ರಾ ಸಂಸ್ಥಾನದ ಕುಟುಂಬ ವೈದ್ಯರಾದರು. ಹ್ವಜೆಗೆ ೭೫೦ ರಿಂದ ೧೦೦೦ ರೂಪಾಯಿ ತನಖ ಬಿಲ್ಲು ಮಾಡುವರು. ಈ ನಾಲ್ಕು ವರ್ಷಗಳಲ್ಲಿ ಸಂಸ್ಥಾನದಿಂದ ೮೦ ಸಾವಿರ ರೂಪಾಯಿಗಳನ್ನು ತಕ್ಕೊಂಡದ್ದಲ್ಲದೆ, ೧,೭೯,೦೦೦ ದ ಬಾಕೀ ತೆಗೆದರು. ಸಂಸ್ಥಾನಿಕರು ಕೊಡದಾಗಲು ಹಾಯಕೋರ್ಟಿನಲ್ಲಿ ದಾವೇ ಮಾಡಿದರು. ಮಹಾರಾಜರಾಗಲಿ, ದಿವಾನರಾಗಲಿ ಇಂತಿಷ್ಟೇ ಫೀ ಕೊಡುತ್ತೇವೆಂಬದಾಗಿ ವಾಚಾಬದ್ಧರಾದಂತೆ ಪುರಾವೆ ದೊರೆಯದ್ದರಿಂದ ನ್ಯಾಯಮೂರ್ತಿಗಳು ದಾವೆಯನ್ನು ಕಿತ್ತಿ ಹಾಕಿದರು.

ಮಧ್ಯ ಮುಂಬಯಿಯಲ್ಲಿ ದರೋಡೆಗಾರರಿಗೂ ಪೋಲೀಸರಿಗೂ ಹೊಡೆದಾಟ.

—೦—

ಮುಂಬಯಿಯಲ್ಲಿ ಸಲಬಾಜಾರಿನಲ್ಲಿರುವ ಬಾಪೂಖೋಟೆ ಎಂಬ ಬೀದಿಯಲ್ಲಿರುವ ಒಂದು ಮನೆಯಲ್ಲಿ ಬದಮಾಷ ಜನರು ದರೋಡೆ ಹಾಕುವ ಯುಕ್ತಿಯಲ್ಲಿದ್ದಾರೆಂಬ ವರ್ತಮಾನ ಕೇಳಿ, ಪೋಲೀಸರು ಮಧ್ಯರಾತ್ರಿಯ ಸಮಯದಲ್ಲಿ ಇವರನ್ನು ಹಿಡಿಯಲಿಕ್ಕೆ ಹೋದರು. ಆಗ ದರೋಡೆಗಾರರು ಪೋಲೀಸರ ಮೇಲೆ ಗುಂಡು ಹಾರಿಸಿದರು. ದಾವೂದನೆಂಬ ಮುಖ್ಯ ಪುಂಡನು ಇನ್ಸಪೆಕ್ಟರ ದಾಖೂರನ [illegible] ಮೇಲೆ ಚಾಕುವಿನಿಂದ ಹೊಡೆದು, ಆತನ ಕಣ್ಣಿನ [illegible] ಕಳಚಿ ಬೀಳುವಂತೆ ಮಾಡಿದನು. ಹತ್ತಿರ ಇದ್ದ ಸಬ್ ಇನ್ಸಪೆಕ್ಟರ ಸೋರಾಬಜಿ [illegible] ದಾವೂದನಮೇಲೆ [illegible] ವೇಳೆ ನಾಲ್ಕು ಬಾರೆ ಗುಂಡು ಹಾರಿಸಿದನು. [illegible] ಜಮಾದಾರರು ಮಂದಿ ಗಾಯಾಳುಗಳಾಗಿದ್ದಾರೆ. ದರೋಡೆಗಾರರಲ್ಲಿ ಅನೇಕರು ಓಡಿ ಹೋದರು. ಇವರಲ್ಲಿ ಮೂವರನ್ನು ಹಿಡಿದಿದ್ದಾರೆ. ಇವರಲ್ಲಿ ಅನುರಡಿ? [illegible] ಎಂಬವನಿದ್ದಾನೆ. ಈತನು ತಾನು ಒಬ್ಬ ಸಂತೆಯುವನೆಂತಲೂ ತನ್ನ ಹತ್ತಿರ ದೊಡ್ಡ ದೊಡ್ಡ [illegible] ಸರ್ಟಿಫಿಕೇಟುಗಳುಂಟೆಂತಲೂ ಹೇಳುತ್ತಾನೆ. ಪುಂಡ ದಾವೂದನನ್ನು ಹಿಡಿಕೊಟ್ಟವರಿಗೆ ೫೦೦ ರೂಪಾಯಿ ಇನಾಮು ಕೊಡುವರು.

ಚೀನದಲ್ಲಿ ಯುದ್ಧ.

—೦—

ಚೀನದ ರಾಜಧಾನಿಯಾದ ಪೆಕಿಂಗದ ಹತ್ತಿರ ಹರಿಯುವ ಪೆಟುನದಿಯೊಳಗಿಂದ ಸಂದೇಶ ಹಡಗಗಳು ರಾಜಧಾನಿಗೆ ಒರಬಾರದೆಂದು ಮಂತ್ರಿಗಳು ಹುಕುಮು ಮಾಡಿದ್ದರಿಂದ ವಿಲಾಯತಿ ಅಮೇರಿಕೆಯ ಟಪಾಲು, ಸಂಕುಗಳು ಅಲ್ಲಿಗೆ ಬರುವದು ಕಟ್ಟಾಗಿರುತ್ತದೆ. ನದಿಯಲ್ಲಿ ಸುರಂಗಗಳನ್ನು ಹಾಕಿ, ದೂರಿಂದಲೇ ಹಡಗಗಳ ಮೇಲೆ ತೋಫು ಹೊಡೆಯುತ್ತಿದ್ದಾರೆ ಸದ್ಯದಲ್ಲಿ ರಾಜಧಾನಿಯು ಕೂಡ ಜಗತ್ತಿನ ವ್ಯವಹಾರ ನಿಂತು ಹೋಗಿದೆ. ಪರರಾಷ್ಟ್ರಗಳ ವಕೀಲರು ತಮಗೆ ಮುಂದಾಗಿ ತಿಳಿಸದೆ, ಮಾಡಿದ ಹುಕುಮಿನ ಬಗ್ಗೆ ತಕರಾರು ಮಾಡಿದ್ದಾರೆ. ಸದ್ಯದಲ್ಲಿ ಚೀನದ ಮಂತ್ರಿಮಂಡಲವು ಹೆಸರಿಗೆ ಇರುವದು. ಒಬ್ಬಿಬ್ಬ ಪ್ರಧಾನರು ಮಾತ್ರ ಒಲಗದಲ್ಲಿ ಕಾಣುವರು. ಉಳಿದವರ ವಿಳಾಸ ದೆಸೆ ಮುಂತಾದದ್ದು ಗೊತ್ತಾಗುವದಿಲ್ಲ.

ಹಡಗದಲ್ಲಿ ಹುಲಿಯು

—೦—

ಮುಂಬಯಿಯಿಂದ ಮಂಗಳೂರಿಗೆ ಬರುವ ಪ್ರಯಾಣಿಕರ ಹಡಗದಲ್ಲಿ ಯಾವ ಮಾಯದಿಂದಲೋ ಒಂದು ಹುಲಿಯು ಒಂದು ಇದ್ದಲಿಯ ಕೋಣೆಯಲ್ಲಿ ಸೇರಿಕೊಂಡಿತ್ತು. ಆಳುಗಳು ಇದ್ದಲಿ ತರಲಿಕ್ಕೆ ಹೋಗಲು ಇವರನ್ನು ಘಾಯಪಡಿಸಿತು. ಹುಲಿಯು ಬಂದ ವರ್ತಮಾನ ಕೇಳಿ, ಪ್ರಯಾಣಿಕರು ಗಭರಗೊಳಿಸಿರಾದ [illegible] ಬಹಳ ಪ್ರಯಾಸದಿಂದ ಅದನ್ನು ಗುಂಡಿನಿಂದ ಕೊಂದರೆಂದು ಮಂಗಳೂರಿನಿಂದ ಬಂದ ತಾರು ಹೇಳುತ್ತದೆ.

ಟಿಳಕ ಪಂಚಾಂಗದ ಪ್ರಕಾರ ನಿರ್ಣಯಗಳು.

—೦—

ಮಹಾರಾಷ್ಟ್ರ ಪ್ರಾಂತದಲ್ಲಿ ಮಾನ್ಯ ಮತ್ತು ರೂಢವಾಗಿರುವ ಟಿಳಕ ಪಂಚಾಂಗದ ಪ್ರಚಾರ ಅಧಿಕವು ಕೈತದಲ್ಲಿ ಒಂದೆ, ಜೇಷ್ಠದಲ್ಲಿ ಒಂದಿರುತ್ತದೆ. ಧಾರವಾಡ ಪ್ರಾಂತದಲ್ಲಿರುವ ಮಹಾರಾಷ್ಟ್ರೀಯರು ಜ್ಯೇಷ್ಠದಲ್ಲಿಯೇ ಅಧಿಕ ಮಾಡುವರು.

ಈ ಪಂಚಾಂಗದ ಪ್ರಕಾರ ರವಿವಾರವು ಯುಗಪ್ರತಿಪದೆಯಾಗುತ್ತದೆ. ಅದಕ್ಕೆ ಶಾಸ್ತ್ರಾಧಾರವನ್ನೂ ತೋರಿಸಿದ್ದಾರೆ

ಚೈತ್ರ ಮತ್ತು ವೈಶಾಖದಲ್ಲಿ ಉಪನಯನ ಮತ್ತು ವಿವಾಹದ ಮುಹೂರ್ತಗಳಿರುತ್ತವೆ. ಈ ಪಂಚಾಂಗದ ಪ್ರಕಾರ ರವಿವಾರ ಪ್ರತಿಪದೆ, ಸೋಮವಾರ (ತಾ॥ ೨೨) ರಾಮನವಮಿ, ಸೋಮವಾರ (ತಾ॥ ೨೯) ಹನುಮಜ್ಜಯಂತಿ, ಗುರುವಾರ (ತಾ॥ ೧೫ ಎಪ್ರಿಲ) ಅಕ್ಷಯ್ಯ ತೃತೀಯಾ, ಮತ್ತು ಸೋಮವಾರ (ತಾ॥ ೨೬) ನೃಸಿಂಹ ಜಯಂತಿಯಾಗುತ್ತದೆ.

ಗತಾನುಗತಿಕವಾಗಿ ನಡೆದು ಬಂದ ತಪ್ಪು ಪಂಚಾಂಗಗಳನ್ನು ಬಾಟಾ ವಾಕ್ಯ ಪ್ರಮಾಣ ಮಾಡಿಕೊಳ್ಳದೆ, ಶುದ್ಧ ಪಂಚಾಂಗದಂತೆ ಧರ್ಮಾಚಾರಗಳನ್ನು ಮಾಡುವದು ಲೇಸು. ಕನ್ನಡಿಗರು ಅವಶ್ಯವಾಗಿ ವಿಚಾರ ಮಾಡುವಂಥ ಪ್ರಶ್ನವು.

ಪೋರ್ತುಗಾಲದ ಸೀನಾರ ಅಲ್ಫಾನ್ಸೋ ಡಿ. ಕಾಸ್ಟ್ರಾಸ-ಹೇಬನನ್ನು ರಾಷ್ಟ್ರ ಸಂಘದ ಅಧ್ಯಕ್ಷರಾಗಿ ನೇಮಿಸಿದ್ದಾರೆ.

ಮೋಸಲದ ನ್ಯಾಯದ ಬಗ್ಗೆ ಕಿಮಾಲ ಪಾಶ್ಯಾನ ಕೂಡ ಸಂಭಾಷಣೆ ಮಾಡುವದಕ್ಕಾಗಿ ಕಾನ್ಸಟಂಟಿನೋಪಲಿನಲ್ಲಿರುವ ಬ್ರಿಟಿಶ ವಕೀಲನು ಅಂಗೋರಾಕ್ಕೆ ಹೋಗುವನು.

ವಿವಿಧ ವರ್ತಮಾನಗಳು.

—೦—

ಪದಚ್ಯುತ ಹೋಳಕರ ಮಹಾರಾಜರು ವಸಂತಕಾಲದ ತಂಪು ಹವೆಯ ದೆಸೆಯಿಂದ ಮಸೂರಿಗೆ ಹೋಗುವರು. ಅಲ್ಲಿಯೇ ನಾಭಾದ ಪದಚ್ಯುತ ಮಹಾರಾಜರಿದ್ದಾರೆ.

ಕೋಚೀನದ ಕಾಯದೆ ಕೌನ್ಸಿಲ ಸಭೆಯಲ್ಲಿ ಅನಾಥರಾದ ಮುದುಕರಿಗೂ, ಮಕ್ಕಳುಳ್ಳ ದರಿದ್ರ ವಿಧವೆಯರಿಗೂ ಸರಕಾರದಿಂದ ಜೀವನಾಂಶ ಕೊಡಬೇಕೆಂಬ ಬಿಲ್ಲನ್ನು ಶ್ರೀ ನಾರಾಯಣ ಅಯ್ಯರವರು ತಂದಿದ್ದರು. ಆದರೆ ಅದು ಪಾಸಾಗಲಿಲ್ಲ.

ಮದ್ರಾಸದ ಕೌನ್ಸಿಲದ ಮೆಂಬರರಾದ ಮಿ. ವೆಂಕಟಾಚಲ ಪದಯಾಚಿ ಎಂಬವರು ಎರಡನೆಯವರ ಗದ್ದೆಯಲ್ಲಿ ಹರಿಯುವ ನೀರನ್ನು ಅನ್ಯಾಯಾಕ್ರಾಂತ ಮಾಡಿ, ತನ್ನ ಹೊಲಕ್ಕೆ ಬಲವಂತಿಕೆಯಿಂದ ಬಿಡಿಸಿದರೆಂಬ ಆರೋಪದ ದೆಸೆಯಿಂದ, ಬೆಂಚ ಮ್ಯಾಜಿಸ್ಟ್ರೇಟರು ಇವರಿಗೆ ೫೦ ರೂಪಾಯಿ ದಂಡ ಮಾಡಿದ್ದಾರೆ

ಢಾಕಾ ಜಿಲ್ಲೆಗೆ ಸೇರಿದ ನಾರಾಯಣಗಂಜ ವೆಂಬ ಗ್ರಾಮದಲ್ಲಿ ಭಯಂಕರ ಬಿರುಗಾಳಿ ಬೀಸಿ, ಅನೇಕ ಮನೆಗಳು ನೆಲಸಮವಾದವು. ಗುಡಿಸಲುಗಳು ಪತಂಗಗಳಂತೆ ಹಾರಿದವು. ಮುನ್ನೂರು ಜನರು ನಿರಾಶ್ರಿತರಾಗಿದ್ದಾರೆ.

ತ್ರಾವಣಕೋರ ಸಂಸ್ಥಾನದಲ್ಲಿ ಶ್ರೀ ಮೂಲಮ್ ವೆಂ? ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ಸ್ಮರಣೆಗಾಗಿ ದಿವಾನ ಮಾಧವರಾಯರ ಸ್ಮಾರಕ ಮಾಡುವ ವಿಚಾರ ನಡೆದಿದೆ. ಈ ಬಗ್ಗೆ ಪ್ರಮುಖರ ಒಂದು ಕಮಿಟಿಯೂ ನೇಮಿಸಲ್ಪಟ್ಟಿದೆ.

ಕೊಲ್ಹಾಪೂರದ ಚಿತ್ರಕಲಾ ಪ್ರವೀಣರಾದ ಮಿ. ಬಾಗಲರು ವರ್ಣಸಂಕರದ ಪ್ರೀತಿಭೋಜನ ಸಮಾರಂಭ ನೆರವೇರಿಸತಕ್ಕವರಿದ್ದಾರೆ. ಬ್ರಾಹ್ಮಣರಿಂದ ಅಸ್ಪೃಶ್ಯರ ತನಕ ಎಲ್ಲ ವರ್ಣದವರು ಒಂದೆಡೆಯಲ್ಲಿ ಕೂತು ಭೋಜನ ಮಾಡುವರು.

ವಿಲಾಯತಿಯಿಂದ ಹಿಂದುಸ್ಥಾನಕ್ಕೆ ಬರುವ ಪತ್ರಕ್ಕೆ ಒಂದೂವರೆ ಆಣೆ ಹಾಕಲು ಬೇಕಾಗುತ್ತದೆ. ಆದರೆ ಹಿಂದುಸ್ಥಾನದಿಂದ ವಿಲಾಯತಿಗೆ ಹೋಗುವ ಪತ್ರಕ್ಕೆ ಎರಡಾಣೆಯ ಟಿಕೀಟು ಹಚ್ಚಬೇಕಾಗುತ್ತದೆ ಸೋಜಿಗವೇ ಸರಿ.

ನಮ್ಮ ತ... ನಮ್ಮ ರಾಣೇಬಿನ್ನೂರ

ದು ಪರಿಷತ್ತು ನಡೆದಾಗ, ಕುಧ್ರಕಾಳಿಯವರು [illegible] ಮ್ಮ ಕುಟಿಲ [illegible]ಗಳನ್ನು ಪ್ರಕಾಶ[illegible] ಲ್ಲಿ ಕೂಡಿದ ಪರಮತೀಯ ಸದ್ಗೃಹಸ್ಥರೇ ಅವರನ್ನು ಹಳಿದು [illegible], ಆ ಮೇಲೆಯೂ ಅವರು ಬುದ್ಧಿಗಲಿಯದೆ, ನಮ್ಮಲ್ಲಿ ಒಡಕನ್ನು ಹುಟ್ಟಿಸಲಾರಂಭಿಸಿದ್ದರಿಂದ, ಇಂಥವರಿಂದ ದೂರಿರಬೇಕಾಗಿ ಆ ಪರಿಷತ್ತಿನ ಅಸಹಕಾರ ಮಾಡಬೇಕಾಯಿತು. ಇದನ್ನರಿಯದೆ ನಮ್ಮ ಮೇಲೆ ಇಲ್ಲದ ದೋಷಾರೋಪ ಮಾಡಿರುವದು ಅಸಂಬದ್ಧ ಪ್ರಲಾಪ!

ನಾವು ಪೈಗೆ ಪೈ ಲೆಕ್ಕ ಇಟ್ಟು ಅದನ್ನು ವಾರ್ಷಿಕ ರಿಪೋರ್ಟಿನಲ್ಲಿ ಕಾಣಿಸಿ ಸ್ವಮತೀಯರೆಲ್ಲರಿಗೂ ಕಳಿಸುವದಲ್ಲದೆ, ಪತ್ರಕಾರರಿಗೂ ಕಳಿಸುತ್ತೇವೆ. ಇಲ್ಲಿಯ ವರೆಗೆ ಯಾರಿಂದಲೂ ಆ ಬಗ್ಗೆ ತಕರಾರ ಇಲ್ಲದಿರಲು ಈ ಲೇಖಕರು ಮಾತ್ರ ಅದನ್ನು ನೋಡದೆ ವಿಚಾರ ಶೂನ್ಯರಂತೆ ಟೀಕಿಸುವದು ಅಸಂಬದ್ಧ ಪ್ರಲಾಪ!

ಈ ಸಮಾಜದ ಮುಂದಾಳುಗಳಾದ ಶ್ರೀ ರಾಮಪ್ಪಾ ಸಾಲಿ ಕದರಮಂಡಲಗಿ, ಶ್ರೀ ನೀಲಪ್ಪಾ ಬೆನ್ನೂರ ಕರ್ಜಗಿ, ಶ್ರೀ ಹನುಮಂತಪ್ಪಾ ಬೆಂಕಿ ತುಮ್ಮಿನಕಟ್ಟಿ ಮತ್ತು ಶ್ರೀ ಮಾರ್ತಾಂಡಪ್ಪಾ ಸಿಗ್ಗಲಿ ರಾಣೇಬಿನ್ನೂರ ಮೊದಲಾದವರು ತಮ್ಮ ಸುಖೋಪಭೋಗಕ್ಕಾಗಿ ಕರುಣೆಯಿಲ್ಲದೆ ಬಡಬಡವರಿಂದ ವರ್ಗಣೀ ವಸೂಲ ಮಾಡುತ್ತಿರುವರೇ? ಮೂ, ನಿಮ್ಮಂಥವರಿಗೆ ಹೆದರಿ ಸ್ವಲ್ಪ ಸಮಾಜವನ್ನು ಬೇರೆ ಮಾಡಿಕೊಂಡರೆಂದೂ ಬರೆಯುವ ನಿಮ್ಮ ಕುತ್ಸಿತ ಬುದ್ಧಿಯ ಕಾಣೆದಾಟಕ್ಕೆ ನಗಬೇಕೋ ಅಳಬೇಕೋ? ದ್ವಿ. ಪ. ನ ಅಧ್ಯಕ್ಷರ ಭಾಷಣವನ್ನು ನೋಡಿದರೆ ನಮ್ಮ ವಿಚಾರಗಳೇನವೆ ಎಂಬದು ನಿಮಗೇ ತಿಳಿಯುವದು. ದ್ವಿತೀಯ ಪರಿಷತ್ತು ನಡೆದಾಗ ಬಂದ ಎಷ್ಟೋ ಸದ್ಗೃಹಸ್ಥರು ನಮ್ಮ ಪ್ರಗತಿ ಮತ್ತು ಧ್ಯೇಯಗಳನ್ನು ನೋಡಿ ನೂರಾರು ರೂಪಾಯಿ ವಿದ್ಯಾ ಫಂಡು ಕೊಡಲಿಕ್ಕೆ ಅವರಿಗೆ ನಿಮ್ಮಷ್ಟು ಬುದ್ಧಿಯಿದ್ದಿಲ್ಲವೇ? ಇದನ್ನರಿಯದೆ ಮೂಲೆಯಲ್ಲಿ ಕುಳಿತು ಮನಬಂದಂತೆ ಬರೆದಿರುವದು ಅಸಂಬದ್ಧ ಪ್ರಲಾಪ!

ನಮ್ಮ ಸಮಾಜದ ಬಗ್ಗೆ ಲೇಖಗಳೂ ವಾರ್ಷಿಕ ರಿಪೋರ್ಟಗಳೂ ಪ್ರಸಿದ್ಧವಾಗುತ್ತಿರುವದನ್ನು ನೋಡದೆ, ಹುಟ್ಟಿದ ಕೂಸು ಕಾರ್ಯ ಪ್ರವೃತ್ತವಾಗಲಿಕ್ಕೆ ಕೆಲವು ಅವಕಾಶವು ಬೇಕೆಂಬದನ್ನು ಅರಿಯದೆ ಅದಕ್ಕೇನು ಮಾಡಿದಿರಿ; ಇವಕ್ಕೇನು ಮಾಡಿದಿರಿ? ಎಂದು ಸಮುದ್ರದ ತೆರೆಗಳಂತೆ ಪ್ರಶ್ನೆ ಮಾಡಿದರೆ, ಅದಕ್ಕೆ ನಾವಿಷ್ಟೇ ಕೇಳುತ್ತೇವೆ— ನೀವು ಇಲ್ಲಿಯ ವರೆಗೆ ಯಾವ ಮಹತ್ಕಾರ್ಯಗಳನ್ನು ಮಾಡಿರುವಿರಿ? ಸಮಾಜ ಉನ್ನತಿಯ ಎಲೆಯಲ್ಲಿ ಉಗುಳುವದು ನಿಮ್ಮಂಥವರಿಗೆ ಸರಿಯಲ್ಲ. ನಿಮ್ಮಲ್ಲಿ ಯೋಗ್ಯತೆಯಿದ್ದರೆ ಇದೇ ಸಮಾಜವನ್ನೇ ನಿಮ್ಮಂತೆ ಜಗ್ಗಿಕೊಳ್ಳಲಿಕ್ಕೆ ಬೇಡವೆನ್ನುವವರಾರು? ಜಗತ್ತಿನ ಮತ್ತು ನಮ್ಮ ನಿಮ್ಮ ಜನಸಂಖ್ಯೆಯ ಪರಿಸ್ಥಿತಿಯನ್ನು ಪರಿಶೀಲಿಸಿ ಐಕ್ಯಕ್ಕೆ ಪ್ರಯತ್ನ ಮಾಡಿರಿ. ಇಷ್ಟೆಯಿಲ್ಲದಿದ್ದರೆ ನಿಮ್ಮ ಸ್ವಪ್ನಕ್ಕೆ ನೀರೆರಲಿಕ್ಕೆ ಯಾರ ಅಡ್ಡಿಯೂ ಇಲ್ಲ. ಮುಂದೆ ಒಮ್ಮೆಲೆ ನಿಮ್ಮ ಕೂಗುವ ಕಾಲವು ಬಂದೇ ಬರುವದು. ಅಲ್ಲಿಯ ವರೆಗೆ ನೀವೂ ನಿಮ್ಮ ಸಮಾಜವನ್ನು ಕೂಡಿಸಿ ಅದರ ಉನ್ನತಿಯನ್ನು ಮಾಡಿರಿ. ಬರೇ ನಮ್ಮ ದೋಷಗಳನ್ನೆಣಿಸುವದರಲ್ಲೇ ನಿಮ್ಮ ಬುದ್ಧಿಯ ಉಪಯೋಗ ಮಾಡದೆ, ಆತ್ಮೀಯ ಉನ್ನತಿಗಾಗಿ ಉಪಯೋಗಿಸಿರಿ. ನಿಮ್ಮ ಬುದ್ಧಿ ಬಲದಿಂದ ನಿಮ್ಮ ಸಮಾಜವನ್ನು ಬೆಳೆಯಿಸಿರಿ.

ನಮ್ಮ ಪಟ್ಟಸಾಲಿ ಬಂಧುಗಳು ಇಂಥ ಅಪಲಾಪಗಳಿಗೆ ಕಿವಿಗೊಡದೆ ಸ್ವೀಕೃತ ಕಾರ್ಯಗಳನ್ನು ಕೊನೆಗಾಣಿಸಿ ಕೃತಕಾರ್ಯರಾಗಲೆಂದು ಹಾರೈಸುತ್ತೇನೆ.

ಹನುಮಂತಪ್ಪಾ, ಕದರಮಂಡಲಗಿ.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ! ಹಲ್ಲುಕಡಿಲಿಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅರ್ಜುನ— ಕಂದಾ— ಹೌದು ಮೈಯ್ಕೈ ನೋಯುತ್ತದೆ.

ಕಂದ— ಈ ಗಾಡಜೆ ವೇನಮೆಂಟ ಕ್ಯೂರ ತಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ [illegible] ತೀರ ತುಸು [illegible]ಡೇ ಆಣೆ.

[illegible] ಪ್ರಕಾರ ಔಷಧವನ್ನು ತಯಾರ ಮಾಡಿ [illegible]

ವಿಳಾಸ: [illegible] ಕೆಮಿಸ್ಟ ಮತ್ತು ಡ್ರಗಿಸ್ಟ, [illegible] ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ಹಸಿ ಮತ್ತು ಒಣಖುಜ್ಜಿ, ಗಜಕರ್ಣ, [illegible] ಮೊದಲಾದವುಗಳ ಮೇಲೂ [illegible] ಉಪಯೋಗವಾಗುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕಾದದ್ದು. [illegible] ಒಂದು ಡಬ್ಬಿಗೆ ಬೆಲೆ ಆಣೆ. [illegible] ಎಸ್ ಎಸ್. ಪೆಂಟರ ಖಡೇಬಜಾರ ಬೆಳಗಾವಿ [illegible] ಹುಬ್ಬಳ್ಳಿ ಕೋಟ ಮತ್ತು [illegible] ದೊರೆಯುವದು.

ವಿಜಯದ ವರ್ಗಣೀ ದರ

ಏಕ್ಯಪತ್ರಕ್ಕೆ

೧೨ ತಿಂಗಳಿಗೆ		೧೨—೦—೦ ರೂ
೬	,,	೬—೦—೦ ರೂ
೪	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಚಂದಾದಾರರಿಗೆ ಸೂಚನೆ.

ಮಾರ್ಚ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತಾರ್ಣವರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭. ಧಾರವಾಡ ರವಿವಾರ [illegible] ನೇ ಮಾರ್ಚ [illegible] (ಸಂಚಿಕೆ [illegible]

ಸರಕಾರದಿಂದ ಪೇಟೆಂಟ ದೊರೆಕಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯು ಸರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಪ್ರಕಟನೆ-

ಮಿ. ಎಸ್. ಎಸ್ ವೈದ್ಯ ಇವರು ಉತ್ತಮ ಗಾಯನ, ಪೇಟಿ, ವ ನಾಟಕ ಸ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ವಿಚಾರಿಸಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೧ ನೇ [illegible]	೧೦ ಆಣೆ
[illegible]	೫ ,,
[illegible] ಚರಿತ್ರ	೪ ,,
[illegible] ಚರಿತ್ರ	೨ ,,
[illegible]	೧ ,,

ಈ ಪು[illegible] ಒಟ್ಟಿಗೆ ಕೊಳ್ಳುವವರಿಗೆ ೧[illegible] [illegible] ವಿ. ಪಿ. ಖರ್ಚು ಬಿಟ್ಟು [illegible]

ಮ್ಯಾನೇಜರ ವಿಜಯ ಪುಸ್ತಕಾಲಯ.
ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ಸಾಲಿಗಳಿಗೆ ಒಂದು [illegible] ಮುಂದೆ ಪ್ರತಿಯೊಂದು ಸಾಲಿಗೆ ಒಂದಾಣೆ [illegible] ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಆಣೆ [illegible] ಕಾಲಮಿನ [illegible] ಇನ್ನು ಹೆಚ್ಚಿನ [illegible] ಜಾಹೀರಾತುಗಳನ್ನು ಕೊಡುವವರು ಕೆಳಗಿನ ಸಹಿಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಒತ್ತಿಯ ದರವು ನೂರಕ್ಕೆ [illegible] ಕಿಂತ ಕಡಿಮೆ ಅಣೆಯಂತಿರುತ್ತದೆ.

ಎ. ಕೆ. ಶಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

[illegible] ಸೇವಿಂಗ [illegible] [illegible] ಸ್ವೀಕರಿಸಲಾಗುವದು. [illegible] ಬ್ಯಾಂಕಿನ ವ್ಯವಹಾರದಲ್ಲಿ [illegible] ಸ್ವರೂಪ [illegible] ಅಕ್ಷರ [illegible] ಬ್ಯಾಂಕಿನ ಎಲ್ಲ [illegible] ಕಾರ್ಯ [illegible] ಬಡ್ಡಿ ದೊರೆಯುವದು [illegible] ಸಹಿ [illegible] ಬಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೪-೩-೨೬ ನೇ ಇಸ್ವಿ

ಆಳರಸರಿಗೆ ಆನಂದ! ಆತ್ಮಾನಂದ!!

ಸ್ವರಾಜ್ಯ ಪಕ್ಷೀಯರು ಕೌನ್ಸಿಲ ಆಫ ಸ್ಟೇಟ, ಅಸೆಂಬ್ಲಿ ಮತ್ತು ಇಲಾಖೆಗಳ ಕೌನ್ಸಿಲಗಳಿಗೆ ದೂರಿಂದಲೇ ಶರಣು ಹೊಡೆದದ್ದು ಆಳರಸರಿಗೆ ಆನಂದವಾಗಿರುತ್ತದೆ. ಕೌನ್ಸಿಲಗಳಲ್ಲಿ ಮವಾಳ, ಉದಾರ, ರಾಜನಿಷ್ಠ, ಬ್ರಾಹ್ಮಣೇತರವೆಂಬ ವಿವಿಧ ಪಂಗಡಗಳಿದ್ದರೂ, ಬಹು ಸಂಖ್ಯೆಯಿಂದ ಸ್ವರಾಜ್ಯ ಪಕ್ಷೀಯರೇ ಆಗಿ, ಆಳರಸರ ಅಂತರಂಗಗಳನ್ನು ಬಹಿರಂಗ ಮಾಡತಕ್ಕವರು ಇವರೇ ಆಗಿದ್ದರು. ಎರಡೂ ದಂಡೆಯ ಮೇಲೆ ಕಯ್ಯಿಡುವ ಸ್ವತಂತ್ರರು ಸ್ವರಾಜ್ಯ ಪಂಗಡದವರಂತೆ ಹೋಟು ಕೊಡುವರು. ಆದುದರಿಂದ ಮುಖ್ಯವಾದ ಹೆದರಿಕೆಯು ಸ್ವರಾಜ್ಯ ಪಕ್ಷೀಯರದೇ ಆಗಿತ್ತು. ಕನಸು ಮನಸಿನಲ್ಲಿ ಕೂಡ ಇವರ ಹೆದರಿಕೆಯು ಮೂರ್ತಿವಂತವಾಗಿ ಎದುರಿಗೆ ನಿಲ್ಲುತ್ತಿತ್ತು. ಮೇಲೆ ಹೇಳಿದಂತೆ ವಿವಿಧ ಬಣಗಳಿದ್ದರೂ, ಲಾರ್ಡ ಬರ್ಕನಹೆಡ್ಡ ಸಾಹೇಬರು ಸ್ವರಾಜ್ಯವಾದಿಗಳ ಸಿಸ್ತನ್ನು, ಒಕ್ಕಟ್ಟನ್ನು, ಕರ್ತೃತ್ವವನ್ನು ಹೊಗಳಿ, ಇವರಿಗೇ ಸಹಕಾರದ ಬುದ್ಧಿವಾದ ಹೇಳಿದ್ದಾರೆ. ಹಿಂದುಸ್ಥಾನದಲ್ಲಿ ಲಾರ್ಡ ರೀಡಿಂಗಸಾಹೇಬರು ಸಹಕಾರವನ್ನು ಅಪೇಕ್ಷಿಸಿದ್ದು ಇವರಿಂದಲೇ. ಇವರು ಬೇರೆಯವರಂತೆ ತಮ್ಮ ಜಾಳಿಗೆಯಲ್ಲಿ ಬಿದ್ದು ತದ್ರೂಪ ತಮ್ಮಂತಾಗಿದ್ದರೆ- ಇವರಿಗೆ ರಾಜ್ಯವಾಳುವದಕ್ಕೆ ಬೇರೊಂದು ಹೆದರಿಕೆಯೇ ಇರುತ್ತಿದ್ದಿಲ್ಲ. ಹಿಂದೆ ಹೇಳಿದಂತೆ ಇವರನ್ನು ತಮ್ಮ ಕುಲದಲ್ಲಿ ಸೇರಿಸಿಕೊಳ್ಳಬೇಕೆಂದು ಆಳರಸರು ವರ್ಷಾರು ತಿಂಗಳಿಂದ ಮಾಡಿದ ಪ್ರಯತ್ನವು ಹೊಳೆಯಲ್ಲಿ ಹೋಮ ಮಾಡಿದಂತಾಯಿತು. ಕೌನ್ಸಿಲದಲ್ಲಿದ್ದು ಬಜೆಟ್ಟಗಳನ್ನು ನಾಮಂಜೂರ ಮಾಡಿದರೆ ಕಾದಿಟ್ಟ ಅಸ್ತ್ರ ಉಪಯೋಗ ಮಾಡಿ, ಅಪಮಾನದ ಟೀಕೆಗೆ ಗುರಿಯಾಗಬೇಕಾಗುತ್ತಿತ್ತು. ಮತ್ತು ಶಬ್ದ ತಾಡನಗಳಿಂದ ಜರ್ಜರವಾಗಬೇಕಾಗುತ್ತಿತ್ತು. ಎಷ್ಟೋ ಠರಾವು, ಉಪಠರಾವುಗಳು ಸ್ವರಾಜ್ಯ ಪಕ್ಷೀಯರಿಗೆ ಅನುಕೂಲವಾಗಿ, ಅವನ್ನು ಅಂಗೀಕರಿಸುವದರಿಂದ ಕನಿಷ್ಠರನ್ನು ಹೊಟ್ಟೆಯಲ್ಲಿ ಹೊಕ್ಕಂತಾಗುತ್ತಿತ್ತು. ಇವೆಲ್ಲ ಅನಿಷ್ಟ ಅರಿಷ್ಟಗಳು ತಾವಾಗಿ ದೂರಾದುದಕ್ಕೆ ಇವರು ಆನಂದಭರಿತರಾಗುವದು ಸ್ವಾಭಾವಿಕವಾದದ್ದು. ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿಯಿಂದ ಹೊರಬಿದ್ದ ಕೂಡಲೆ ಇದರ ಪ್ರಾತಿನಿಧಿಕ ಸ್ವರೂಪವು ಲಯವಾಯಿತೆಂದು ಅಧ್ಯಕ್ಷರಾದ ಶ್ರೀ ಪಟೇಲರು ಅಂದ ಕೂಡಲೆ ಹಾಗೆಲ್ಲುಂಟೆಂದು ಪ್ರಶ್ನೆ ಮಾಡಿದರು. ಮವಾಳ, ಸ್ವತಂತ್ರ ಮೊದಲಾದವರ ಸಂಖ್ಯೆಯನ್ನು ನೋಡಿ, ಪೂರಾ ಆ ಸ್ವರೂಪ ಹೋಗಿಲ್ಲೆಂದು ಮರು ದಿವಸ ಶ್ರೀ ಪಟೇಲರು ಸ್ಪಷ್ಟೀಕರಣ ಮಾಡಿದ ಕೂಡಲೆ, ಸರ ಮುಡಿಮನ್ನಸಾಹೇಬರ ನೆತ್ತಿಯಿಂದ ಹೋದ ಬೇವ ಮರಳಿ ಬಂತು. ಮುಂಬಯಿ ಕೌನ್ಸಿಲದಿಂದ ಹೊರಬಿದ್ದವರಲ್ಲಿ ೨೧ ಜನ ಮೆಂಬರು ೧೧೧ ಜನರಲ್ಲಿ ಇಷ್ಟು ಜನರನ್ನು ವಜಾ ತೆಗೆಯಲಾಗಿ ೯೦ ಜನರು ಉಳಿದರು. ರಾಜ್ಯ ಕಾರಭಾರ ಮಾಡಲಿಕ್ಕೆ ಇಷ್ಟು ಜನ ಸಂಖ್ಯೆಯು ಪುಷ್ಕಳವಾಯಿತೆಂದು ಸರ ಲಾರೆನ್ಸ ಸಾಹೇಬರು ಆನಂದೋದ್ಗಾರ ತೆಗೆದಿದ್ದಾರೆ. ಬಂಗಾಲ ಮತ್ತು ನಾಗಪೂರ ಇಲಾಖೆಗಳಲ್ಲಿ ಮಾತ್ರ ಸ್ವರಾಜ್ಯ ಪಕ್ಷದ ಬಹುಮತವುಂಟು. ಆದರೆ ಕೋರಮ ಮಾಡಗೊಡದಷ್ಟು ಬಹುಮತವಿರುವದಿಲ್ಲ. ಆದುದರಿಂದ ಇವರಿಗೂ ಸ್ವರಾಜ್ಯ ಪಕ್ಷದ ತ್ಯಾಗದಿಂದ ಕಾಲ್ತೊಡಕು ದೂರಾಯಿತೆಂಬ ಆನಂದವಾಗಿರುತ್ತದೆ. ಈ ಆನಂದವು ವರ್ಷಾರು ತಿಂಗಳ ಮಟ್ಟಿಗೆ ಮಾತ್ರ ಇರುತ್ತದೆಂದು ತೋರಿಸುವಂತೆ ಮತದಾರರು ಈಗಿನಿಂದಲೇ ಸಭೆಗಳನ್ನು ಮಾಡಿ ಠರಾವುಗಳಿಂದ ಅವರ ಸ್ಮೃತಿ ಸ್ಥಳಕ್ಕೆ ತಂದು ಕೊಡಬೇಕಾದುದು ತೀರ ಅವಶ್ಯಕ.

ರಾಜೀನಾಮೆ —

ಆಯರ್ಲಂಡದಲ್ಲಿ ಬಂಡಾಯ ಮಾಡಿ, ಭಯಂಕರ ಅನಾಹುತಕ್ಕೆ ಕಾರಣರಾಗಿದ್ದ ಮಿ. ಡಿ. ವ್ಯಾಲೆರಾಸಾಹೇಬರು ಸಿನಫಿನ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟರು.

ಪಟ್ಟಾಭಿಷೇಕ-

ಗುರುವಾರದ ದಿವಸ ಪದಚ್ಯುತ ಶ್ರೀ. ತುಕೋಜೀರಾವ ಹೋಳಕರ ಮಹಾರಾಜರೇ ಯಶವಂತರಾಯರಿಗೆ ಯುವರಾಜಪಟ್ಟಾಭಿಷೇಕ ಮಾಡಿದರು. ಆಗ ಅವರ ಮೇಲೆ ಬಂಗಾರದ ಹೂವುಗಳು ಹಾರಿಸಲ್ಪಟ್ಟವು. ೨೧ ಗುಂಡಿನ ಸಲಾಮು ಆಯಿತು.

ಧಾರವಾಡ ಮ್ಯುನಿಸಿಪಾಲಿಟಿಯ ಚುನಾವಣೆಯು.

ಒಂದು ತಿಂಗಳೊಳಗಾಗಿ ಇಲ್ಲಿಯ ಮ್ಯುನಿಸಿಪಾಲಿಟಿಯ ಚುನಾವಣೆಯು ಮುಗಿದು- ಯಾರಾರು ಆರಿಸಿಬಂದರೆಂಬುದು ಕೂಡ ತಿಳಿದು ಹೋಗುವದು. ಒಟ್ಟು ೨೪ ಜನರನ್ನು ಆರಿಸುವದಿದ್ದು, ಇವರಲ್ಲಿ ಐವರು ಮುಸಲಮಾನ ಗೃಹಸ್ಥರಾಗುವರು. ಉಳಿದ ಹತ್ತೊಂಭತ್ತು ಸ್ಥಳಗಳ ದೆಸೆಯಿಂದ ಹಿಂದೂ ಜನರೇ ಉಮೇದವಾರರಾಗತಕ್ಕದ್ದು. ಇವರಲ್ಲಿ ನಮ್ಮ ತಿಳುವಳಿಕೆಯ ಪ್ರಕಾರ ಒಂಭತ್ತು ಜನರು ಬ್ರಾಹ್ಮಣರು, ಒಬ್ಬರು ಮರಾಠಾ ಒಬ್ಬರು ಜೈನ ಉಳಿದವರೆಲ್ಲರೂ ವೀರಶೈವರಾಗುವರು. ಅಸ್ಪೃಶ್ಯರು ತಮ್ಮ ಪಕ್ಷದಿಂದ ಉಮೇದವಾರರನ್ನು ನೇಮಿಸಬೇಕೆಂದು ಮಾಡಿದ್ದರು. ಆದರೆ ಆರಿಸಲ್ಪಡುವಷ್ಟು ಹೋಟುಗಳು ದೊರೆಯುವದು ಶಕ್ಯವಾಗದ್ದರಿಂದ, ಅವರು ನಾಮಿನೇಶನದಿಂದಲೇ, ತೃಪ್ತರಾಗಬೇಕಾಗುತ್ತದೆ.

ಹೋಟುಗಳ ಯಾಚನೆಯಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವೇನೂ ಉಳಿದಿರುವದಿಲ್ಲ. ಬ್ರಾಹ್ಮಣ ಲಿಂಗಾಯತವೆಂಬ ಭೇದವೂ ಕಂಡುಬರುವದಿಲ್ಲ. ಪ್ರತಿಯೊಂದು ಬಹು ಸಂಖ್ಯಾತರಾದ ಮತ್ತು ಅಲ್ಪಸಂಖ್ಯಾತರಾದ ಕುಲದವರು ಹೋಟಿನ ವಚನ ಕೇಳುವರಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವೆಂಬ ಭೇದಭಾವವನ್ನು ತೋರಿಸುವದಿಲ್ಲ. ಆದುದರಿಂದ ಚುನಾವಣೆಯಲ್ಲಿ ಯೋಗ್ಯತೆಯುಳ್ಳಂಥವರೇ ಆರಿಸಲ್ಪಡುವದಾಗಿ ತೋರುತ್ತದೆ

ಚುನಾವಣೆಯಲ್ಲಿ ಯಾವದೊಂದು ತತ್ವವಮಾತ್ರವಿರುವದಿಲ್ಲ. ಮುಖ್ಯ ತತ್ವವು ಸ್ವರಾಜ್ಯ ಪಕ್ಷೀಯರೇ ಆರಿಸಲ್ಪಡಬೇಕೆಂಬುದೇ. ಆದರೆ ಉಮೇದವಾರರಲ್ಲಿ ಒಬ್ಬಿಬ್ಬರ ಹೊರತು ಸ್ವರಾಜ್ಯ ಪಕ್ಷೀಯರೆಂದು ಹೇಳಿಕೊಳ್ಳುವಂಥವರು ಇಲ್ಲವೇ ಇಲ್ಲ. ಆದರೂ ಈ ಸಾರೆ ಆರಿಸಲ್ಪಡುವ ಮೆಂಬರು ಆಕುಂಚಿತ ದೃಷ್ಟಿಯವರಾಗದೆ, ದೇಶಕಾರ್ಯವನ್ನು ಆದಷ್ಟು ಹೆಚ್ಚಾಗಿ ಸಾಧಿಸುವಂಥವರಾಗುತ್ತಾರೆಂದು ನಮ್ಮ ಊಹೆಯಾಗಿರುತ್ತದೆ.

ಪುಣೆಯಲ್ಲಿ ಒಂದು ತಂಬಾಕದ ಅಂಗಡಿಗೆ ಬೆಂಕಿ ಹತ್ತಿ, ೫೦ ಸಾವಿರದ ಹಾನಿಯಾಯಿತು.

ಇಂದೂರಿನ ಕೋಟ್ಯಾಧೀಶರಾದ ಸರದಾರ ಹುಕುಮಚಂದರು ಒಂದು ಮದುವೆಗೆ ಹೋಗಿ ಬರುತ್ತಿರುವಾಗ ದಾರಿಯಲ್ಲಿ ೩೫ ಸಾವಿರದ ಮುತ್ತು ಮಾಣಿಕದ ಕಂಠಿಯನ್ನು ಕಳಕೊಂಡರು. ಇದನ್ನು ಹುಡುಕಿ ಕೊಟ್ಟವರಿಗೆ ಹತ್ತು ಸಾವಿರದ ಇನಾಮು ಕೊಡುವರು.

ಕ್ಷಯ ಸಂವತ್ಸರದ ಫಲಶ್ರುತಿಯು.

—o—

ಈ ಸಂವತ್ಸರದಲ್ಲಿ ಚಂದ್ರನು ಅರಸನಾಗಿರುವದರಿಂದ, ದನಗಳು ಹೆಚ್ಚು ಹಾಲು ಕೊಡುವವು. ಅರಸರು ಸುಖಿಯಾಗಿರುವರು. ಮಳೆಯಿಂದ ಧಾನ್ಯ ವೃದ್ಧಿಯಾಗಿ, ಜನರು ಸುಖಿಸುವರು. ಆದರೆ ಚಂದ್ರನು ನೀಚರಾಶಿಗತನಾದ ಮತ್ತು ಶತ್ರುವಾದ ಬುಧನನ್ನು ಸೇರಿಕೊಂಡು ಬಲಹೀನನಾಗಿರುವ ಪ್ರಯುಕ್ತ ಜನರಿಗೂ ಭೂಮಿಗೂ ಕಷ್ಟಸುಖಫಲಗಳು ಮಿಶ್ರವಾಗಿ ಕಂಡುಬಂದೀತು. ಕ್ಷಯ ಸಂವತ್ಸರದ ಫಲವೇನೆಂದರೆ- ಭೂಮಿಯಲ್ಲಿ ಯುದ್ಧಭಯವೂ, ಕಳ್ಳರ ಭೀತಿಯೂ, ಅನಾವೃಷ್ಟಿಯಿಂದ ಕಂದಮೂಲಾದಿ ಕಟ್ಟು ಬೆಳೆಗಳ ನಾಶವಾದರೂ, ಜನರನ್ನು ರಕ್ಷಣಮಾಡುವಷ್ಟು ವಸ್ತುಗಳು ಬೆಳೆದೀತು. ರಾಜಕೀಯ ವಿಚಾರದಲ್ಲಿ ಅಕಸ್ಮಾತ್ತಾಗಿ ಅನೇಕ ಸಂಗತಿಗಳು ನಡೆದೀತು. ಲೋಕದಲ್ಲಿ ಅನೇಕ ನವ ಸುಧಾರಣೆಯೂ ಆದೀತು. ರಾಜರು ಜಯಪ್ರದರಾಗಿ ಸುಖಿಯಾಗುವರು. ಜನರು ಮಾತ್ರ ಕ್ರೋಧಯುಕ್ತರಾಗಿ ಅವಿಚಾರ ಕೃತ್ಯಗಳನ್ನಾಚರಿಸುವರು. ಎಪ್ರಿಲ ತಿಂಗಳ ೨೩ ನೆಯ ತಾರೀಖಿನಲ್ಲಿ ಅಂಗಾರಕನೂ, ಬೃಹಸ್ಪತಿಯೂ ಒಂದೇ ರಾಶಿ ಮತ್ತು ಒಂದೇ ಅಂಶಾಂತದಲ್ಲಿಯೂ ಬರುತ್ತಾರೆ. ಇದರಿಂದ ಅರಸರಿಗೆ ರಾಜ್ಯವೂ ಬಲವೂ ವೃದ್ಧಿಯಾಗವದು. ಮುಂಬಯಿ ಮತ್ತು ಹಿಂದುಸ್ಥಾನದ ಪಶ್ಚಿಮ ದಂಡೆಯಲ್ಲಿ ಮಾತ್ರ ಗುಡುಗು, ಮಿಂಚು, ಗಾಳಿ, ಮಳೆ ಮಹಾಪೂರ ಮತ್ತು ಭೂಕಂಪದ ಭೀತಿ ತೋರುವದೆಂದು ಮುಂಬಯಿಯ ಶ್ರೀ ಬಾಳಕೃಷ್ಣ ರಾಮುತರೆಂಬ ಜ್ಯೋತಿಷಜ್ಞರು ಭವಿಷ್ಯ ಹೇಳಿದ್ದಾರೆ.

ಆತ್ಮಜ್ಞಾನವಾಯಿತು.

ಪ್ರತಿಯೋಗಿ ಸಹಕಾರ ಸಂಘದಲ್ಲಿ ಸೇರಿದ ಡಾಕ್ಟರ ಮುಂಜೆಯವರು ಆಲ ಇಂಡಿಯಾ ಕಾಂಗ್ರೆಸ ಕಮಿಟಿಗೆ ಹೋಗಿದ್ದರು. ಇವರು ಲೋಕಮಾನ್ಯರ ಪ್ರಬಲ ಶಿಷ್ಯರು. ಇಂಥವರು ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿ ಸ್ವರಾಜ್ಯದಲ್ಲಿ ಹುಟ್ಟಿದ ಒಡಕನ್ನು ನೋಡಿ, ಮನ ಮರುಗುವಷ್ಟು ವ್ಯಸನಪಟ್ಟು, ಆತ್ಮಜ್ಞಾನ ಮಾಡಿಕೊಂಡು ನಾಗಪೂರಕ್ಕೆ ಬಂದಿದ್ದಾರೆ. ಇವೆರಡೂ ಪಂಗಡಗಳು ಬೇರೆ ಬೇರೆ ದಿಕ್ಕಿಗೆ ಎಳೆದರೆ- ಎರಡೂ ಮಣ್ಣುಗೂಡುವವು. ನಿಲ್ಲಲಿಕ್ಕೇ ನೆಲೆ ದೊರೆಯಲಾರದು. ಈ ಪರ್ಯಂತರ ನಡೆದಿದ್ದ ಕ್ರಮವು ಗುದ್ದಕ್ಕೆ ಕಲ್ಲು ಪೊತ್ತಂತಾಗುವದೆಂದು ಅಭಿಪ್ರಾಯಪಟ್ಟಿರುತ್ತಾರೆ. ಬ್ಯಾರಿಸ್ಟರ ಜಯಕರರೂ ತಮ್ಮ ಪಕ್ಷವು ತಪ್ಪಿದುದಾಗಿರುತ್ತದೆಂದು ಒಪ್ಪಿಗೆ ಕೊಟ್ಟಿದ್ದಾರೆ. ತಾವು ಮಾಡಿದ ಭೇದಬುದ್ಧಿಯಿಂದಲೇ ಡಾಕ್ಟರ ಪರಾಂಜಪೆಯವರು ಅರಿಸಲ್ಪಟ್ಟರೆಂಬದನ್ನು ಇವರು ...ನ್ನಾದರೂ ಸ್ಮರಣೆಗೆ ತಂದು, ಡಾಕ್ಟರ ಮುಂಜೆಯವರಂತೆ ಆತ್ಮಜ್ಞಾನ ಮಾಡಿಕೊಂಡು, ಪ್ರತಿಯೋಗಿ ಸಹಕಾರದ ಗಂಟನ್ನು ಕೆಲ ಕಾಲ ಕಟ್ಟಿಡುವರೆಂದು ನಂಬುತ್ತೇವೆ.

ಕೃತಜ್ಞತೆ-

ಮುಂಬಯಿಯಲ್ಲಿ ಪ್ರತಿಯೋಗಿ ಸಹಕಾರಿಗೆ ಕಲೆದ್ದಿಬ್ಬರಾದ ಡಾಕ್ಟರ ವೇಲಕರರು ಮೆಸರ್ಸ ಜಯಕರ ಕೇಳಕರರ ದೆಸೆಯಿಂದ ಆತಿಥ್ಯ ಸತ್ಕಾರ ಮಾಡಿಸಿದರು. ಈ ಸಭೆಗೆ ಮುಖ್ಯಾಗ್ರಣಿಗಳಾದ ಡಾಕ್ಟರ ಪರಾಂಜಪೆಯವರೂ ದಯಮಾಡಿಸಿ, ಉಭಯತರೂ ಕೂಡಿ ನಡೆದರೆ- ಸೂಕ್ಷ್ಮ ಮತಭೇದವು ಅಳಿಯುವದೆಂದು ಇವರ ಬೆನ್ನು ಚಪ್ಪರಿಸಿದರು. ಬ್ಯಾರಿಸ್ಟರ ಜಯಕರರ ಸಹಾಯದಿಂದಲೇ ತಮ್ಮ ಚುನಾವಣೆಯಾಯಿತೆಂದು ಕೃತಜ್ಞತೆಯನ್ನು ತೋರಿಸುವ ರಹಸ್ಯದಿಂದ ಇವರು ಸಭೆಗೆ ಹೋಗಿದ್ದರೆಂದು ಹೇಳಬಹುದು. ಈ ಕೃತಜ್ಞತೆಯು ಇಷ್ಟಕ್ಕೆ ಸಾಕು. ಮುಂದೆ ನಿಮ್ಮ ಮಾರ್ಗ ಬೇರೆ; ನಮ್ಮ ಮಾರ್ಗ ಬೇರೆ ಎಂದು ಹೇಳಿ, ಬ್ಯಾರಿಸ್ಟರ ಜಯಕರ ಸಾಹೇಬರು ಡಾಕ್ಟರ ಮುಂಜೆಯವರ ಎಚ್ಚರಿಕೆಯ ಮಾತಿನ ಪ್ರಕಾರ ನಡೆಯುವದು ಹಿತವಾಗುತ್ತದೆ.

ಬಡೋದೆಯಲ್ಲಿ ಹರತಾಳ-

ಬಡೋದೆಯ ಮ್ಯುನಿಸಿಪಾಲಿಟಿಯವರು ಸರಕಾರದ ಹುಕುಮಿನ ಪ್ರಕಾರ ಮನೆಪಟ್ಟಿಯನ್ನು ಹೆಚ್ಚಿಸಿದ್ದರಿಂದ, ಲೋಕನಿಯುಕ್ತ ಮೆಂಬರೆಲ್ಲರೂ ಕಮಿಟಿಯಿಂದ ಹೊರಬಿದ್ದು ಬಂದದಲ್ಲದೆ, ರಾಜೀನಾಮೆಯನ್ನೂ ಕೊಟ್ಟರು. ಕರದ ಅನ್ಯಾಯವನ್ನು ನಿಷೇಧಿಸುವದಕ್ಕಾಗಿ ಹರತಾಳ ಮಾಡಿ, ಎಲ್ಲ ವ್ಯವಹಾರವನ್ನು ಬಂದಿಡುವರು. ಇಡೀ ರಾಜ್ಯದಲ್ಲಿಯೂ ಕರ-ಕಂದಾಯ ಹೆಚ್ಚಿಸಿದ ಬಗ್ಗೆ ಪ್ರಜರಲ್ಲಿ ಅಸಂತೋಷವಾಗಿದ್ದು ೨ನೇ ತಾರೀಖಿನ ದಿವಸ ರಾಜ್ಯದ ತುಂಬ ಉಪೋಷಣ ಮಾಡಿ, ದೇವತಾರಾಧನೆ ಮಾಡುವರು

ಭಾವನಗರದ ಹತ್ತರಿರುವ ಬಿಜರಾವ ಎಂಬ ಸ್ಟೇಶನಕ್ಕೆ ದರೋಡೆಗಾರರು ಹೋಗಿ, ಸ್ಟೇಶನ ಮಾಸ್ತರನ ಹಣೆಗೆ ರಿವ್ಹಾಲ್ವರ ಹಚ್ಚಿ, ಸಿಂಧಿಪ ಕೈ ತಕ್ಕೊಂಡು, ಬಾಗಿಲ ತೆಗೆದು ಹಣವು ಮತ್ತು ನೋಟುಗಳನ್ನು ಬಗಲಿಗೆ ಹಾಕಿ, ಪಲಾಯನ ಸೂತ್ರ ಪಠಿಸಿದರು.

ಸೊಲ್ಲಾಪೂರದ ಹಿಂದೂ ಮುಸಲಮಾನ ದಂಗೆಯಲ್ಲಿ ಹಿಡಿಯಲ್ಪಟ್ಟ ಮುಸಲಮಾನರೆಲ್ಲರು ದೋಷಮುಕ್ತರಾದರು.

ಅಸಂಬದ್ಧ ಪ್ರಲಾಪ.

—o—

ತಾ|| ೮-೪-೨೬ ನೇದು ವಿಜಯದಲ್ಲಿ, ನಮ್ಮ ಪಟ್ಟಸಾಲಿ ಸಮಾಜದ ಬಗ್ಗೆ ಅಸಂಬದ್ಧ ಪ್ರಲಾಪ ಮಾಡುವಾಗ ಒರ್ವ ಲೇಖಕರು ತಮ್ಮ ನಿಜವಾದ ಹೆಸರನ್ನು ಮುಚ್ಚಿಟ್ಟಿರುವಂತೆ ನಿಜಾಂಶಗಳನ್ನು ಬಚ್ಚಿಟ್ಟಿರುವದಲ್ಲದೆ, ಇದ್ದ ಸಮಾಜದಲ್ಲಿ ನಡು ಒಡಕನ್ನು ಹುಟ್ಟಿಸುವ ಹೇಯ ಕರ್ಮವನ್ನಾರಂಭಿಸಿರುವದರಿಂದ ಇಲ್ಲಿ ಎರಡು ಮಾತುಗಳನ್ನು ಬರೆಯಬೇಕಾಯಿತು.

ನಮ್ಮ ಪಟ್ಟಸಾಲಿ ಸಮಾಜದ ಪ್ರಥಮ ವಾರ್ಷಿಕ ರಿಪೋರ್ಟನಲ್ಲಿ ಈ ಸಮಾಜದ ಪ್ರಾಚೀನತ್ವ, ಉದ್ದೇಶ ಮತ್ತು ಜಾಗೃತಿ ಇವುಗಳನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ನನ್ನ ಅನುಭವದಂತೆ ವರ್ಷಾನು ವರ್ಷಗಳಿಂದ ಸುಧಾರಣೆಯ ಸುಳಿವು ಟಕ್ಕೆ ಸುರುವಾಗಿ ದೇವರ ಅನುಗ್ರಹದಿಂದ ಈಗ ಎರಡು ವರ್ಷಗಳಿಂದ ಈ ವಿಚಾರಕ್ಕೆ ಮೂರ್ತಸ್ವರೂಪ ಬಂದಿದೆ. ಮತ್ತು ಈ ಸಭೆಯ ಮೂಲಕರ್ತರೂ ಪುರಸ್ಕರ್ತರೂ ಯಾರೆಂಬುದನ್ನು ಮೊದಲನೆಯ ರಿಪೋರ್ಟನಲ್ಲಿಯೇ ಬರೆದಿದೆ. ನಿಜಾಂಶವು ಹೀಗಿರಲು, ನಮ್ಮ ಸಮಾಜದ ಪಂಡಿತರು ಈಗ ಎರಡು ವರ್ಷಗಳ ಒಳಗೆ ದ್ವಿಭಾಗವನ್ನುಂಟು ಮಾಡಿದರೆಂದು ಬರೆದಿರುವದು ಕೇವಲ ಅಸಂಬದ್ಧ ಪ್ರಲಾಪ!

ಪರಸ್ಪರ ಅನ್ನೋದಕ ವ್ಯವಹಾರ ಸಂಬಂಧವಿಲ್ಲದ ಎಷ್ಟೋ ಸಾಲಿಗರಿರುವಾಗ, ನಿರ್ಧಾರಣಕ್ಕವಕಾಶವಿಲ್ಲದೆ ಎಲ್ಲರನ್ನು ಒಂದೇ ಹೆಸರಿನಿಂದ ಕರೆಯುವದೆಂತು? ಬ್ರಾಹ್ಮಣ, ವೀರಶೈವರು ಒಂದೊಂದೇ ಸಮಾಜವಾಚಕವಾದರೂ ಅದರಲ್ಲಿ ಒಳಪಂಗಡಗಳಿಗೆ ಬೇರೆ ಬೇರೆ ಹೆಸರುಗಳಿಲ್ಲವೇ? ವೀರಶೈವರಲ್ಲಿ ಪಟ್ಟಸಾಲಿ ಎಂಬ ಸಮಾಜವಿರುವದು ಗೊತ್ತಿಲ್ಲವೇ? ಶಿವನೇ ಪಟ್ಟಸಾಲಿಯೆಂಬದನ್ನು ಮಾಡಿದನೆ- ಶಿವಪ್ರಸಾಲಿ ...ಲ್ಲಿಂದ ಬಂದಿತು! ಇದನ್ನು ನಾನೇ ಮಾಡಿದೆನೆಂದು ನೀವೇ ನಿಮ್ಮ ಲೇಖದಲ್ಲಿ ಒಪ್ಪುತ್ತೀರೆಂಬ ಮೇಲೆ ಅದನ್ನೇ ಸಾಧಿಸ ಹೋಗುವದು ನಿಮ್ಮ ಪಂಡಿತಗಿರಿಯ ಪರಮಾವಧಿಯನ್ನು ತೋರಿಸುವದು. ಸತ್ಯಾಂಶವು ಹೀಗಿರಲು ಸ್ವಮತಪ್ರತಿಪಾದನಕ್ಕಾಗಿ ಮೊದಲು ಸಾಲಿ ಎಂಬದೊಂದೇ ಇತ್ತೆಂದು ಬರೆಯುವದು ಕೇವಲ ಅಸಂಬದ್ಧ ಪ್ರಲಾಪ! ಚಾತುರ್ವರ್ಣ ವ್ಯವಸ್ಥೆಯ ಕಾಲಕ್ಕೆ ಈ ಸಾಲಿಯಾದರೂ ಎಲ್ಲಿತ್ತು?

ಎರಡೂ ಕೈ ಕೂಡದೆ ಚಪ್ಪಾಳೆಯಾಗುವದಿಲ್ಲೆಂಬುದು ಸಿದ್ಧಾಂತ. ಮತ್ತು ನಕ್ಕ ಸಂಗತಿಯು ತಿಳಿದ ಮೇಲೆ ಅದರಂತೆ ವರ್ತಿಸುವದು ವಿ

ನೋಟೀಸು

ಸಾಹೇಬಿಯ್ಯಾ ವ॥ ದಾವಲಸಾಬ ಶಿಕಾರಿ ಸಾ॥ ಶಹರ ಹುಬ್ಬಳ್ಳಿ.

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಹಾಫೀಜಬಿ ಕೋಂ ಸಾಹೇಬಿಯ್ಯಾ ಶಿಕಾರಿ ಹಾಲಿ ವಸ್ತಿ ಕಲಘಟಗಿ ಇವಳು ನಿನಗೆ ತಿಳಿಸುವದೇನಂದರೆ—

ನೀನು ನನ್ನ ಮದಿವೆಯ ಗಂಡನಾಗಬೇಕು ಮದಿವೆಯಾಗಿ ಹತ್ತು ವರ್ಷದ ಮೇಲಾಯಿತು ನಾನು ಪ್ರಬುದ್ಧಳಾದ ಬಳಿಕ ನೀನು ಬಹಳ ಹುಸಿ ವಿವಹ ಪ್ರಸಂಗ ಮಾಡಿದಿ ನನ್ನ ಕೂಡ ಚಲೋ ರೀತಿಯಿಂದ ನಡೆಯಲಿಲ್ಲ ಇಟ್ಟುಕೊಂಡ ಹೆಂಗಸಿನ ಮಾತು ಕೇಳಿ ವ್ಯಸನದಲ್ಲಿರುವಾಗ ಹೊಡೆದು ಬಡಿದು ಮಾಡಿ ನನ್ನ ಮೇಲಿನ ದಾಗೀನೆಗಳು ಅಂದರೆ-

೧ ಗುಂಡಿನ ಟೀಕಿ ೨ ಕಿವಿಯೊಳಗಿನ ಬುಗಡಿ, ೩ ತೋಳಬಂದಿ ಒಂದು. ೪ ಕಯ್ಯಲ್ಲಿಯ ಗೋಟು ೫ ನತ್ತು ಮತ್ತು ಬುಲಾಕು, ೬ ಕರ್ನಫೂಲು ಇಷ್ಟು ಕಸಕೊಂಡು ಮನೀಬಿಟ್ಟು ಹೋಗಿ ಹಾಕಿದಿ ಆಗಿನಿಂದ ನಾನು ಎರಡನೇದವರಲ್ಲಿ ಸಾಲ ಮಾಡಿ ಹೊಟ್ಟೀ ತುಂಬಿಕೊಂಡೆ ಮೂರು ವರ್ಷಗಳ ಹಿಂದೆ ಈ ಬಗ್ಗೆ ಆಲಾಹಿದಾ ನೋಟೀಸು ಕೊಟ್ಟಿದ್ದೆ ಅದರೆ ನೀನು ಅದರಂತೆ ನಡಿಯಲಿಲ್ಲ ಅನಂತರ ನಾನು ಈಗ ಕಲಘಟಗಿಯಲ್ಲಿದ್ದೇನೆ ಈ ಮೂರು ವರ್ಷಗಳಲ್ಲಿ ಮುನ್ನೂರು ರೂಪಾಯಿ ಸಾಲವಾಗಿರುತ್ತದೆ ನೀನು ಯಾವ ರೀತಿಯಿಂದ ನನ್ನ ದರಕಾರ ಮಾಡದ್ದರಿಂದ ಸಾಲಗಾರರ ತಗಾದಿಯಾಗಿದೆ ಕಾರಣ ಈಗ ಆಖೈರ ನೋಟೀಸು ಕೊಡಬೇಕಾಯಿತು ಈ ನೋಟೀಸು ಕೊಡುವ ಮೊದಲು ಕಾರ್ಡಿನ ಮೇಲೆ ಹೋದ ನವೆಂಬರ ತಿಂಗಳಲ್ಲಿ ನೋಟೀಸು ಕೊಟ್ಟೆನು ಅದನ್ನು ನೀನು ಇನಕಾರ ಮಾಡಿದಿ ಆದ್ದರಿಂದ ಈಗ ಈ ಜಾಹೀರ ನೋಟೀಸು ಕೊಡುತ್ತೇನೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಉಪಜೀವನಕ್ಕಾಗಿ ಈ ಪರ್ಯಂತರ ಆದಂಥ ಯಾವತ್ತು ಸಾಲದ ಬೋಜಾ ತೀರಿಸಿ, ದಾಗೀನೆ ಪರತ ಕೊಟ್ಟು ಸುಶೀಲ ಪ್ರಸಂಗ ಮಾಡುತ್ತೇನೆಂದು ಪಂಚರ ಜಾಮೀನ ಕೊಟ್ಟು ಕರಕೊಂಡು ಹೋಗಬೇಕು ಇಲ್ಲದಿದ್ದರೆ ಇದೇ ನೋಟೀಸ. ಫಾರೀಖತ್ತು ಅಂತಾ ತಿಳಿದು ನಾನು ಎವಜನೆಯವನನ್ನು ಉಡಿಕಿ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಿಕಿ ಗಂಡನ ಮೇಲೆ ಬಿಲಕೂಲ ಉಳಿಯಲಾರದು ಮತ್ತು ನನ್ನ ಸ್ತ್ರೀ ಧನದ ದಾಗೀನೆ, ಸಾಲದ ರಕಮು ಮತ್ತು ಖಾವಂದನ ಹಣದ ದೆಸೆಯಿಂದ ಕಾಯದೆ ಪ್ರಕಾರ ಇಲಾಜ ಮಾಡುವೆನು ಮತ್ತು ಈ ನೋಟೀಸಿನ ಖರ್ಚ ನಿನ್ನ ಮೇಲೆ ಇರುತ್ತದೆ ತಿಳಿಯುವದು ತಾ॥ ೧೫-೩ ೧೯೨೭ ನೇ ಇಸವಿ—

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಹಾಫೀಜಬಿ ಕೋಂ ಸಾಹೇಬಿಯ್ಯಾ, ಶಿಕಾರಿ ಈಕೆಯದು ಅದೆ.

ಮಾತಾಡುವ ಔಷಧವು.

ಅಹಾ! ಮಾತಾಡುವದಿಲ್ಲೇಕೆ? ನಾಲಿಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಲಿಯೋ? ಮೈಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು!

ಅಜ್ಜನು— ಕಂದಾ— ಹೌದು ಮಯ್ಯೆಲ್ಲಾ ನೋಯ್ಯುತ್ತದೆ.

ಕಂದ— ಹಾಗಾದರೆ ಪೋಸ್ಟ್ ಟಕ್ಕಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ತಿಮ್ಮತು, ತೀರತು. ಎರಡೇ ಆ.

ನಮ್ಮಲ್ಲಿ ಬೇಕಾದ ಡಾ. ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಗನಶಾದಿತ್ಯ ಕೆಮಿಸ್ಟ್ರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಬಜ್ಜಿ, ಗರ್ಮಿಯಬಜ್ಜಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿ, ಏಜಂಟರು— ದಿ ಗನಶಾದಿತ್ಯ ಮೆಡಿಕಲಸ್ಟೋರ್ಸ- ಸ್ಟೇಶನರೋಡ ಹುಬ್ಬಳ್ಳಿ, ಲೋಕ ಮತ್ತು ಕಿರುಕೋಳದಿಂದ ದೊರೆಯುವದು. } ಎನ. ಎಫ್. ಪಂಟರ ಖಡೇಬಝಾರ ಬೆಳಗಾವಿ

ದಿ. ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಬ್ಯಾಂಕಿನ ಖಾತೆ, ಠೇವು, ಸೆಕ್ಯುರಿಟಿ ಡಿಪಾಜಿಟ, ಸಾಲ ವಸ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Aukaligi

ಧಾರವಾಡ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ		೧೨—೦—೦ ರೂ
೬	,,	೬—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ವಂದಾದಾರರಿಗೆ ಸೂಚನೆ.

ಮಾರ್ಚ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ವಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ವಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1436

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಸೋಮವಾರ ತಾರೀಖು ೧೫ನೇ ಮಾರ್ಚ ೧೯೨೬ (ಸಂಚಿಕೆ ೬೦

ಸರಕಾರದಿಂದ ಪೇಟೆಂಟ ದೊರಕಿದ

ಮಲ್ಲಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟದ್ದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಹೋಗುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ — ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible]

[illegible]

ಕರ್ನಾಟಕದಲ್ಲಿ ಬ್ಯಾಂಕಿನ [illegible]ದಲ್ಲಿ

[illegible]

ಸಂಬಂಧಿಸಿದ [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮತ್ತು [illegible] ಹೆಚ್ಚಿನ ಬಡ್ಡಿ ದೊರೆಯುವದು.

[illegible] ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಪ್ರಕಟನೆ.

ಬಿ. ಎಸ್. ಎಸ್ ವೈದ್ಯ ಇವರು

ಉತ್ತಮ ಗಾಯನ, ಪೇಟಿ, ಮತ್ತು ನಾಟಕ ಸಹಾ ಕಲಿಸುವರು. ಅವಶ್ಯವಿದ್ದವರು ಸಮಕ್ಷಮ ಭೆಟ್ಟಿಯಾಗಬೇಕು.

ಪತ್ತೆ:— ವಿಜಯ ಆಫೀಸ
ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂಬೆ	೧೦ ಆಣೆ
ವಿಚಿತ್ರ ಸಂಸಾರ	೫ ,,
ಶ್ರೀ [illegible] ಚರಿತ್ರ	೪ ,,
[illegible] ಚರಿತ್ರ	೨ ,,
[illegible] ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ೧| ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಪಂಕ್ತಿ ವೇಳೆಗೆ ಒಂದು [illegible] ಮುಂದೆ ಪ್ರತಿಯೊಂದು ವೇಳೆಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ [illegible] ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೫-೩-೨೬ ನೇ ಇಸ್ವಿ

ಅಸೆಂಬ್ಲಿಯಲ್ಲಿ ಸ್ವರಾಜ್ಯ ವಿಷಯವಾಗಿ ಬ್ಯಾರಿಸ್ಟರ ಜಿನ್ನಾಸಾಹೇಬರ ಭಾಷಣವು.

ಸ್ವರಾಜ್ಯ ಪಂಥದವರು ಅಸೆಂಬ್ಲಿಯಿಂದ ಹೊರಬಿದ್ದ ಬಳಿಕ, ಸ್ವತಂತ್ರ ಪಕ್ಷೀಯರೇ ಸರಕಾರದ ಎದುರಾಳಿಯಾದರು. ಇವರ ಮುಖಂಡರಾದ ಬ್ಯಾರಿಸ್ಟರ ಜಿನ್ನಾಸಾಹೇಬರು ಸ್ವರಾಜ್ಯ ವಿಷಯವಾಗಿ ಕೆಳಗೆ ಕೊಟ್ಟಂತೆ ಭಾಷಣ ಮಾಡಿದ್ದಾರೆ.

... [illegible] ಳ್ಳುತ್ತಾರೆ. ಇದು ಬದಲಾಗಿ ಎಲ್ಲರೂ ಸ್ವರಾಜ್ಯ ಪಕ್ಷೀಯರೇ ಆಗಿದ್ದರೆ ನೀರಿನ ಝರಿಯನ್ನು ಪೇಳುವದಕ್ಕಾಗಿ ಸ್ವರ್ಗಲೋಕದಿಂದ ಬಂದ ಹಾಗೆಸನ ಸಾಹೇಬನ ಕಿಸೆ ತುಂಬುತ್ತಿದ್ದಿಲ್ಲ. ದಿವಾನ ಜಾಧವ ಸಾಯರು ಅಧಿಕಾರದ ದುರುಪಯೋಗ ಮಾಡುತ್ತಿದ್ದಿಲ್ಲ. ಕೌನ್ಸಿಲಗಳಲ್ಲಾಗುವ ಇಂಥ ಅಹಿತಕಾರಕ ಠರಾವುಗಳಿಗೆ ಆಸ್ಪದವು ದೊರೆಯಬಾರದೆಂದು ಮತದಾರರು ನಿಶ್ಚಯವಾಗಿ ಅಭಿಪ್ರಾಯವುಳ್ಳವರಾದರೆ ಸ್ವರಾಜ್ಯ ಪಕ್ಷೀಯರಿಗೆ ಮಾತ್ರ ಹೋಟು ಕೊಡಬೇಕು. ಏಕೆಂದರೆ ಇವರಲ್ಲಿ ಸ್ವಾರ್ಥವಿಲ್ಲ; ದೇಶಹಿತವೇ ಇವರ ಮುನ್ನುಡಿಯು. ಆಳರಸರ ಹಂಗಿನೊಳಗಿರಬಾರದೆಂದೇ ಕೌನ್ಸಿಲಕ್ಕೆ ಶರಣು ಹೊಡೆದಿದ್ದಾರೆ. ಈ ಪ್ರಕಾರ ಕೃತಿಯಿಂದ ಇವರು ತಾವು ಮಾನತಕ್ಕ ಕರ್ತವ್ಯದ ಪರೀಕ್ಷೆ ಕೊಟ್ಟಿರುತ್ತಾರೆ. ಇಂಥವರನ್ನು ಸನ್ಮಾನಿಸಿ, ಪ್ರೋತ್ಸಾಹಿಸಿ, ತಮ್ಮ ಹಿತಮಾಡಿಕೊಳ್ಳುವದೇ ಮತದಾರರಿಗೆ ಭೂಷಣವು.

ಮವಾಳರ ಮೂಢತನವು.

ಕಾಂಗ್ರೆಸದ ಹೊರಗೆ ನಿಂತಿರುವ ಪ್ರತಿಯೊಂದು ಪಕ್ಷವು ಒಂದಿಲ್ಲೊಂದು ತರದಿಂದ ಮವಾಳವಾಗುತ್ತದೆ. ಬ್ರಾಹ್ಮಣೇತರ ಪಕ್ಷಕ್ಕಂತೂ ರಾಜನಿಷ್ಠವೆನಿಸಿಕೊಳ್ಳುವದೇ ಭೂಷಣವೆನಿಸುತ್ತದೆ. ರಾಜನಿಷ್ಠರಾಗಲಿ, ಮವಾಳರಾಗಲಿ, ಎಲ್ಲರೂ ಅರಸರ ವರ್ತನದ ಪ್ರಕಾರ ಕೊಡೆ ಹಿಡಿಯತಕ್ಕವರು. ಅಥವಾ ಅವರಿಗೆ ಯಾವ ಪ್ರಕಾರದ ತಾಪವಾಗಬಾರದೆಂದು ಅವರ ಮೇಲೆ ಛತ್ರ-ಚಾಮರ ಹಿಡಿಯುವಂಥ ಸ್ವಾಮಿನಿಷ್ಠ ಪರಾಯಣರೆಂದರೂ ಸಲ್ಲುವದು. ಇವರಿಂದಲೇ ಸ್ವರಾಜ್ಯ ಹಿಂದೆ ಬಿತ್ತು. ಮುಂದೆ ಬೇಗನೆ ಕೈಗೆ ಹತ್ತುವದು ದುರ್ಲಭವಾಸ್ತವೆನಿಸಹತ್ತಿದೆ. ೧೯೨೧ರ ನೆಯ ಇಸವಿಯಲ್ಲಿ ಅಸಹಕಾರಿಗಳು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿ, ಸ್ವರಾಜ್ಯ ಸಂಪಾದನೆಗಾಗಿ ಸುರಂಗವನ್ನು ಸ್ವರ್ಗಲೋಕವೆಂದು ಭಾವಿಸಿದರು. ೪೦ ಸಾವಿರ ಜನ ತರುಣರು ಶ್ರೀ ಕೃಷ್ಣಜನ್ಮ ಸ್ಥಾನವನ್ನು ಕಂಡುಬಂದರು. ಆಗ ಸರಕಾರವು ತತ್ತರಿಸಿತ್ತು. ಸ್ವರ್ಗೀಯ ದೇವದೂತರೆಂದು ಆತ್ಮಸ್ತುತಿ ಮಾಡಿಕೊಳ್ಳುತ್ತಿರುವ ಸಿವ್ಹಿಲ ಸರ್ವಂಟರ ಹಲ್ಲಿನ ನೀರಿ ಹೋಗಿತ್ತು. ನಾನ-ಕೋ-ಆಪರೇಟರರ ದೇಶಾಭಿಮಾನವನ್ನು ಪ್ರಶಂಸಿಸಿ ಮವಾಳರೂ ಕೌನ್ಸಿಲಗಳಿಗೆ ಶರಣು ಹೊಡೆದಿದ್ದರೆ ಸರಕಾರವು ಬೆದರಿ ಬೆಂಡಾಗಿ ಬೇಡಿದ ವರವನ್ನು ಕೊಡುತ್ತಿತ್ತು. ಆದರೆ ಇವರು ಸುಧಾರಣೆಯನ್ನು ಯಶಸ್ಸು ಮಾಡಿ ತೋರಿಸುವ ಸುಳ್ಳು ಮತ್ತು ಪೊಳ್ಳು ಸಂಧ್ರಮದಲ್ಲಿ ಅಸಹಕಾರವನ್ನು ಮುರಿಯಲು ಸರಕಾರಕ್ಕೆ ಬೇಕಾದಂಥ ಸಹಾಯ ಮಾಡಿದರು. ರಾಜಕೀಯ ಕೈದಿಗಳನ್ನು ಬಂದಿಖೋಲಿನಿಂದ ಸೆಳೆಯಬೇಕೆಂಬದಾಗಿ ಪಾಂಡಿತ್ಯದ ಪ್ರದರ್ಶನ ಮಾಡಿಕೊಂಡರು. ಈ ಪ್ರಕಾರ ಅಸಹಯೋಗವನ್ನು ಮುರಿಯುವಾಗ ಮಂತ್ರಿಪದದಲ್ಲಿ ಮಾನವಿಲ್ಲೆಂದು ದಿವಾನಬಹಾದ್ದೂರ ಚಿಂತಾಮಣಿಯವರೇ ರಾಜೀನಾಮೆ ಕೊಟ್ಟರು. ಬೇರೆ ಗೃಹಸ್ಥರೂ ಇವರನ್ನು ಹಿಂಬಾಲಿಸಿದರು. ಆದರೆ ಪ್ರಯೋಜನವೇನು? ಸರಕಾರದ ಉದ್ದೇಶವು ಕೊನೆಗಂಡು ಹೋಯಿತು. ದೇಶದ ತುಂಬ ಹಬ್ಬಿದ ಚಳವಳಿಯು ಸದ್ದು ಅಡಗಿತು. ಶಾಂತತೆ ಮತ್ತು ಸುವ್ಯವಸ್ಥೆಯನ್ನು ಸ್ಥಿರಗೊಳಿಸುವ ವಿಷಯದಲ್ಲಿ ಸಹಾಯ ಮಾಡಿದ ಬಗ್ಗೆ ಮವಾಳರು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರು. ಹೊಳೀ ದಾಟಿದ ಸರಕಾರವು ತಮ್ಮ ಹೇಳಿಕೆಯಂತೆ ನಡಿಯುವದೆಂದು ತಿಳಿದ, ಮವಾಳರಿಗೆ ಬುದ್ಧಿಬರುವ ಸಮಯ ಬಂತು. ಅಸೆಂಬ್ಲಿಯಲ್ಲಾದ ಠರಾವುಗಳಿಂದ ರಾಪುಂಡ ಟೇಬಲವಿರಲಿ; ರಾಯಲ ಕಮೀಶನ ನೇಮಿಸುವದೆಂದು ಇವರು ಆಶೆಗೊಂಡಿದ್ದರು. ಆದರೆ ಇದೆಲ್ಲ ಮೂಢತನವೆಂದು ಅನಿಸಿತು. ಆದರೂ ಸ್ವರಾಜ್ಯ ಪಕ್ಷೀಯರನ್ನು ಕೂಡಿಕೊಳ್ಳುವದಕ್ಕೆ ನಾಚುವರು. ಈ ಪಕ್ಷಕ್ಕೆ ಬಹಿಷ್ಕಾರ ಹಾಕಿ, ಸ್ವತಂತ್ರ ರಾಷ್ಟ್ರೀಯ ಪಕ್ಷವೆಂಬ ಬಣಾ ಕಟ್ಟಲೆ... [illegible] ..., ಅತ್ಯಂತ ತೀವ್ರ ಶಬ್ದಗಳಿಂದ ನಿಷೇಧದ ಠರಾವು ಮಾಡುವದಕ್ಕಿಂತ ಮುಂದೆ ಹೋಗಲಾರರೆಂದು ಸರಕಾರಕ್ಕೆ ಪೂರ್ಣ ನಂಬಿಗೆಯುಂಟು. ಇಂಥವರು ಒಂದಲ್ಲದೆ, ಹತ್ತು ರಾಷ್ಟ್ರೀಯ ಸಂಘಗಳನ್ನು ಸ್ಥಾಪಿಸಿದರೂ, ಅವುಗಳಿಂದ ಅವರಿಗೆ ನೊಣ ಕಡಿದಷ್ಟು ನೋವು ಕೂಡ ತಮಗೆ ಆಗದೆಂದು ಅಳರಸರು ಬಲ್ಲರು. ಆದುದರಿಂದ ಮವಾಳರಿಗೆ ಮತ ಕೊಡದೆ, ಕಾಂಗ್ರೆಸದ ಉಮೇದವಾರರಿಗೇ ಮತ ಕೊಡಬೇಕೆಂಬ ಚಳವಳಿಗೆ ಈಗಾಗಲೇ ಪ್ರಾರಂಭವಾಗಿರುತ್ತದೆ. ಐದಾಗಲಿ, ಹತ್ತಾಗಲಿ, ಎಷ್ಟೇ ವರ್ಷಗಳ ಗಲಿ ಕಾಂಗ್ರೆಸದಿಂದಲೇ ಸ್ವರಾಜ್ಯ ದೊರೆಯುವದು; ಕಾಂಗ್ರೆಸವನ್ನೇ ಹಿಂಬಾಲಿಸಬೇಕೆಂದು ಲಾಲಾ ಲಜಪತರಾಯರು ಪಂಜಾಬದಲ್ಲಿ ಜನಾರ್ದನೆಯ ವ್ಯಾಖ್ಯಾನ ಸತ್ರವನ್ನು ಪ್ರಾರಂಭಿಸಿದ್ದಾರೆ. ಕರ್ನಾಟಕದ ಕಾಂಗ್ರೆಸ ಕಮಿಟಿಗಳೂ ಇವರ ಅನುವಾದವನ್ನು ಬೇಗನೆ ಪ್ರಾರಂಭಿಸಬೇಕೆಂದು ಸೂಚಿಸುತ್ತೇವೆ.

ಹನ್ನೆರಡು ಮಂದಿ ಹವಾಲದಾರರ ಮಜಲಿಸ.

ಮುಂಬಯಿಯಲ್ಲಿ ಇಂದು ಮತ್ತು ನಾಳೆಯು ತಾರೀಖಿನ ದಿವಸ ಮುಂಜಾನೆಯಿಂದ ಪ್ರಾರಂಭವಾಗಿ ಕೂಡುವ ಸಂಯುಕ್ತ ರಾಷ್ಟ್ರೀಯ ಸಂಘವೆಂಬ ಪರಿಷತ್ತಿಗೆ ಯಾರಾರು ಅನುಕೂಲರಿದ್ದಾರೆ ಮತ್ತು ಸಭೆಯನ್ನು ಕರೆದವರಾರೆಂಬ ಒಂದು ಜಾಹೀರ ಪತ್ರಿಕೆಯು ಪ್ರಸಿದ್ಧವಾಗಿರುತ್ತದೆ. ಮವಾಳ ಪ್ರಮುಖರಾದ ಡಾಕ್ಟರ ಪರಾಂಜಪೆ ಎನ್. ಸಿ. ಕೇಳಕರ ಮೊದಲಾದವರಂತೂ ಸರಿಯೇ, ಡಾಕ್ಟರ ಅನಿಬಿಝಾಂಟನ್ನವರೂ ಇದರಲ್ಲಿ ಸೇರಿದ್ದಾರೆ. ಇವರು ಹೊತ್ತು ಬಂದಂತೆ ಕೊಡೆ ಹಿಡಿಯತಕ್ಕವರೆಂದು ಪ್ರಸಿದ್ಧರು. ತಮ್ಮ ಕಾಮನವೆಲ್ಥ ಬಿಲ್ಲಿಗೆ ಕಾಂಗ್ರೆಸದ ಒಪ್ಪಿಗೆ ದೊರೆಯಬೇಕೆಂದು ಇವರು ಬೆಳಗಾವಿಯ ಕಾಂಗ್ರೆಸ ಸಭೆಗೆ ಬಂದಿಗಲ್ಲದೆ, ಮಹಾತ್ಮರ ಕೃಪೆ ಸಂಪಾದಿಸಲೋಸುಗ ನೂಲಲಿಕ್ಕೂ ಪ್ರಾರಂಭಿಸಿದರು. ಕಾಂಗ್ರೆಸ ಸಭೆಯವರು ಇವರ ಬಿಲ್ಲಿಗೆ ಅನುಕೂಲವಾಗುವಂತಿರಲಿ; ಸಹಾನುಭೂತಿ ಕೂಡ ತೋರಿಸಲಿಲ್ಲ. ಆದುದರಿಂದ ಅಮ್ಮನವರು ಕಾಂಗ್ರೆಸದ ಮೇಲೆ ಮುನಿದು, ಈಗ ಮವಾಳರ ರಾಷ್ಟ್ರೀಯ ಸಂಯುಕ್ತ ಮಂಡಲವನ್ನು ಸೇರಿಕೊಂಡು, ಆ ಸಭೆಯನ್ನು ಕರೆಯುವ ಒಬ್ಬ ಮೆಂಬರರಾಗಿದ್ದಾರೆ. ಇವರ ಕಾಮನವೆಲ್ಥ ಬಿಲ್ಲಿನ ಮಸೂದೆ ಸ್ವದೇಶದ ಈ ಪರಿಷತ್ತಿನಲ್ಲಿ ಸೇರಿದ... ಸಂಯೋಜಿಸಿದೆ. ಕಾಂಗ್ರೆಸ ಸಭೆ ಬಿಟ್ಟು ಹೋಗುವದಿಲ್ಲ, ಅದರಲ್ಲಿಯೇ ಇದ್ದು ಬಹುಮತವಾಡಿಕೊಳ್ಳತಕ್ಕವರೆಂದೇ ಇವರ ವೀರ ಪ್ರತಿಜ್ಞೆಯು. ಆ ಪ್ರತಿಜ್ಞೆಯು ಉತ್ತರ ಕುಮಾರನಂತೆ ಸಗ್ಗದಲ್ಲಿ ಪರಿಣಮಿಸಿತು. ಈ ಪ್ರಕಾರ ಮವಾಳ, ಅನಿಬಿಝಾಂಟ, ಮತ್ತು ಪ್ರತಿಯೋಗಿ ಸಹಕಾರಿಗಳ ತ್ರಿಕೂಟದ ಪರಿಷತ್ತು ಕೂಡಿ, ಆದಷ್ಟು ಬೇಗನೆ ಸ್ವರಾಜ್ಯ ಸಂಪಾದಿಸುವ ಠರಾವು ಪಾಸ ಮಾಡಲ್ಪಡುವದು. ಇವರು ಹೇಳಿಕೊಳ್ಳುವದು ರಾಷ್ಟ್ರೀಯ ಸಂಯುಕ್ತ ಮಂಡಲ. ಅರಿಸುವದು ಸ್ವರಾಜ್ಯ. ಆದರೆ ಕಾಂಗ್ರೆಸದಂಥ ಜಗನ್ಮಾನ್ಯವಾದ ರಾಜಕೀಯ ಸಂಸ್ಥೆಯನ್ನು ಸೊರಗಿಸಿ, ಇವರ ಪರಿಷತ್ತು ಹೇಗೆ ರಾಷ್ಟ್ರೀಯವಾಗುವದೆ? ಸಂಯುಕ್ತವಾಗುವದು? ಎತ್ತ ಸ್ವರಾಜ್ಯ ದೊರೆಯುವದೆಂತು? ಎಂಬ ಪ್ರಶ್ನಗಳು ಸಹಜವಾಗಿ ಹೊರಡುತ್ತವೆ. ಕಾಂಗ್ರೆಸ ಸಭೆಯನ್ನು ಬಿಟ್ಟರೂ, ಪಂಡಿತ ಮಾಲವೀಯರ ಎಂತರ ಮೂರನೆಯದೊಂದು ಪಂಥವು ಪ್ರಕಟವಾಗುತ್ತಲಿದೆ. ಇದರ ಧ್ಯೇಯ ಬೇರೆ; ರಾಷ್ಟ್ರೀಯ ಸಂಯುಕ್ತ ಮಂಡಲದ ಧ್ಯೇಯ ಬೇರೆ, ಹೀಗಾಗಿ ರಾಜಕೀಯ ವಿಚಾರದಲ್ಲಿ ಹಿಂದುಸ್ಥಾನದ ಏಕಮತವಾಗಬೇಕೆಂಬ ಉದ್ದೇಶ ಮತ್ತು ಅದಕ್ಕಾಗಿ ಮಾಡತಕ್ಕ ಯೋಗ್ಯ ಪ್ರಯತ್ನದ ದಾರಿಯು ಮತ್ತಿಷ್ಟು ಒಡಕು ಹುಟ್ಟಲಿಕ್ಕೆ ನಿಮಿತ್ತವಾಗಿ, ಅಸೆಂಬ್ಲಿ ಅಥವಾ ಕೌನ್ಸಿಲಗಳು ಹನ್ನೆರಡು ಮಂದಿ ಹವಾಲದಾರರ ಮಜಲಿಸವಾಗುವದೆಂದು ತಾನಾಗಿ ಧ್ವನಿತವಾಗುತ್ತದೆ. ಜಾತಿಗಳಲ್ಲಿ ಐಕ್ಯ ಮಾಡಿದ... ಇದರ ಪರಿಣಾಮವು ಗುದ್ದಾಕ್ಕಿ ಕಲ್ಲು ಹಾತ್ತುತಪಾಗುವದೇ ನಿಜ.

ಲಾರ್ಡ ರೀಡಿಂಗಸಾಹೇಬರ ಪ್ರಯಾಣವು.

ಲಾರ್ಡ ರೀಡಿಂಗಸಾಹೇಬರು ಇಂದಿನ ದಿವಸ ವಿಲಾಯತಿಯ ದಾರೀ ಹಿಡಿಯುವರು. ಬಾದಶಾಹಿ ಸಂಭ್ರಮದಿಂದ ಇವರನ್ನು ಮೆರೆಸುತ್ತಾ ಬಂದರಕ್ಕೆ ಕಳಿಸುವರು. ಮತ್ತು ಬಹುಮಾನ ಸೂಚಕವಾಗಿ ತೋಪುಗಳು ಹಾರುವವು. ಸಾಮಾನ್ಯ ಜನ ಸಮೂಹಕ್ಕೆ ನೇತ್ರಾನಂದಕರವಾದ ನೋಟವಾಗುವದು. ಲಾರ್ಡ ಸಾಹೇಬರ ಆಗಮನದ ನಂತರ ಪ್ರಿನ್ಸ ಆಫ ವೆಲ್ಸರ ಆಗಮನವಾದಾಗ ಹರತಾಳವಾಯಿತು. ಆಗಿನಂಥ ಪ್ರಸಂಗವು ಈಗಿರದ್ದರಿಂದ, ದಂಡು ಮತ್ತು ಬ್ಯಾಂಡಿನ ಸಂಭ್ರಮದಿಂದ ಆಗುವ ಮೆರವಣಿಗೆ ನೋಡುವದಕ್ಕೆ ಕೂಡುವ ಅಜ್ಞ ಜನತೆಯನ್ನು ಕಂಡು, ತಮ್ಮ ಆಡಳಿತೆಯು ಲೋಕಪ್ರಿಯವಾಯಿತೆಂದು ಸಾಹೇಬರು ತಿಳಿಯುವದು ಪೂರಾ ತಪ್ಪು. ದಾತಿಯಾ ಎಂಬ ಸಂಸ್ಥಾನದ ಅರಸರು ಸಾಹೇಬರ ಪ್ರತ್ಥಳಿಯನ್ನು ಮಾಡಿಸಿ, ದಿಲ್ಲಿಯಲ್ಲಿಡಲಿಕ್ಕೆ ಹತ್ತುವಷ್ಟು ದ್ರವ್ಯ ಕೊಡಲೊಪ್ಪಿದ್ದಾರೆ. ಇಷ್ಟರ ಮಟ್ಟಿಗೆ ಈ ಪ್ರತ್ಥಳಿಯು ಲೋಕಪ್ರಿಯದ ಲಕ್ಷಣವೆಂದೆಂದೂ ತಿಳಿಯಕೂಡದು. ದೊರೆಗಳು ಹಾಗೆ ಲೋಕಪ್ರಿಯರಾಗಿದ್ದರೆ ಪ್ರಮುಖ ಜನರು ಸ್ಮಾರಕ ಫಂಡು ಕೂಡಿಸುತ್ತಿದ್ದರು. ಲಾರ್ಡ ಹಾರ್ಡಿಂಜ ನಂಥವರ ಸ್ಮಾರಕ ಫಂಡು ಆಗಿದೆ. ಆದರೆ ಇವರ ಸ್ಮಾರಕ ಫಂಡಿನ ವಿಚಾರವೇ ಹೊರಡಲಿಲ್ಲ. ಇದೊಂದೇ ಸಂಗತಿಯಿಂದ ಇವರ ದೊರೆತನವು ಹಿಂದೀ ಜನರ ದೃಷ್ಟಿಯಿಂದ ಲೋಕಪ್ರಿಯವಾಗಲಿಲ್ಲೆಂದು ಸ್ಪಷ್ಟವಾಗುತ್ತದೆ.

ಲಾರ್ಡ ರೀಡಿಂಗಸಾಹೇಬರು ಹಿಂದೀ ಜನರಿಗೆ ಸ್ವರಾಜ್ಯದ ಆಶೆ ತೋರಿಸಿ, ನಿರಾಶೆ ಮಾಡಿರುತ್ತಾರೆ. ಅಸಹಕಾರದ ಅದ್ಭುತ ಚಳವಳಿಯಲ್ಲಿ ಸಾಹೇಬರು ಮಹಾತ್ಮರ ಕೂಡ ರಾವುಂಡ ಟೇಬಲ ಕಾನಫರನ್ಸ ಕೂಡಿಸಿ, ಸ್ವರಾಜ್ಯ ವಿಷಯವಾಗಿ ವಿಚಾರ ಮಾಡಲು ಸಿದ್ಧರಾಗಿದ್ದರು. ಚವರಿ ಚವರಾದ ಅನರ್ಥವಾದ ಕೂಡಲೆ, ಮಹಾತ್ಮರು ಅಸಹಕಾರ ಮತ್ತು ಕಾಯದೆ ಭಂಗವನ್ನು ಹಿಂತೆಗೆದುಕೊಂಡಿದ್ದೇ ನೆವವಾಯಿತು. ಸಾಹೇಬರು ಗೆದ್ದೆನೆಂದು ತಿಳಕೊಂಡು ಸ್ವರಾಜ್ಯ ರಾವುಂಡ ಟೇಬಲ ಕಾನಫರನ್ಸ ಅಥವಾ ಅಸೆಂಬ್ಲಿಯ ಠರಾವನ್ನು ಲಕ್ಷಿಸದಂತಾದರು. ಆಳಿಕೆಯ ಕೊನೆಯ ಕೊನೆಯಲ್ಲಂತೂ ವಿಲಕ್ಷಣವಾದ ತರ್ಕಶಾಸ್ತ್ರವನ್ನು ಮುಂದೆ ಚಾಚಿದ್ದಾರೆ. ಈ ಪಮೇಯ ಮತ್ತು ಭಾಷಣಗಳನ್ನು ನೋಡುವದರಿಂದ ಸರಕಾರದ ದೃಷ್ಟಿಯಿಂದ ಸ್ವರಾಜ್ಯವೆಂಬದು ಬಹು ದಿವಸದ ಕನಸೇ ಆಗುತ್ತದೆ.

ಹಿಂದೂ ಮುಸಲಮಾನರೆಲ್ಲರು ಒಂದಾಗಿ, ಉಳಿದ ಅನ್ಯ ಜಾತಿಗಳನ್ನು ಸಮಾಧಾನ ಪಡಿಸಿ, ನಮ್ಮ ಹತ್ತರ ಬಂದರೆ ಆ ಬಗ್ಗೆ ವಿಚಾರ ಮಾಡುವೆವೆಂದು ರಾಜ್ಯಕರ್ತರು ಹೇಳುವದಂತೂ ಅಸಂಭವನೀಯವಾದದ್ದು. ಇಂಗ್ಲಂಡದಲ್ಲಿರುವ ಎಲ್ಲ ಬಣಗಳು ಒಂದಾಗುವದು ಶಕ್ಯವಾಗಿರುವಷ್ಟೇ, ಹಿಂದುಸ್ಥಾನದ ಬಣಗಳು ಒಂದಾಗುವದು ಶಕ್ಯವಾಗಿರುತ್ತದೆ. ಪಿಂಡವಿದ್ದಷ್ಟು ಪ್ರಕೃತಿಗಳಿರುವವು. ಪ್ರಕೃತಿಗಳಿದ್ದಷ್ಟು ಮತಗಳಿರುವವು. ಇಂಗ್ಲಂಡದ ದೊರೆತನವು ಬಹುಮತವಾದ ಪಕ್ಷದಿಂದಲೇ ನಡೆಯುವದು. ಅದೇ ಪ್ರಕಾರ ಹಿಂದುಸ್ಥಾನದ ಸೂತ್ರಗಳೂ ಬಹುಮತ ವಿದ್ಯಮಾನವಾಗಿ ನಡೆಯಬೇಕಾದುದು ಅವಶ್ಯಕ. ಸರ್ವಸಾಧಾರಣವಾಗಿ ಒಪ್ಪಿಗೆಯಾಗುವಂಥ ತತ್ವವನ್ನು ಅಲ್ಲಗಳೆದು, ಎಲ್ಲರೂ ಒಂದಾಗಿ ನಮ್ಮೆಡೆಗೆ ಬನ್ನಿರೆಂದು ಹೇಳುವದು ತಪ್ಪಿಯ ತಿರುಳ ಮಾಡಿದಂತಾಗುತ್ತದೆ. ತಮ್ಮ ಮೇಲಿನ ದೋಷ ತಪ್ಪಿಸಿಕೊಳುವದಕ್ಕಾಗಿ ರಾಜ್ಯಕರ್ತರು ಇಂಥ ಅಸಂಭವನೀಯ ಪ್ರಶ್ನೆ ಮಾಡಿದ್ದಾರೆ. ಇಂಥ ಅಗಡ ಕವಡಿಗಂಟ ಮಾತಿನಿಂದಲೇ

ಹನುಮಂತದೇವರು ಹಗ್ಗ ತಿಂಬುವಾಗ ಪೂಜಾರಿ ಶಾವಿಗಿ ಬೇಡಿದಾ.

ಗದಗ ಕೋ. ಆಪರೇಟಿವ್ಹ ಕಾಟನ್ ಸೇಲ ಸೊಸಾಯಿಟಿಯ ಅಪ್ಲಂಡ ಹತ್ತಿಯ ಲಿಲಾವ ಮತ್ತು ದಲಾಲರ ಸಂಘದ ಅಪ್ಲಂಡ ಹತ್ತಿಯ ಲಿಲಾವ.

ಇವುಗಳಲ್ಲಿ ಕೆಳಗಿನಂತೆ ಧಾರಣೆ ಆಯಿತು.

ಕಾ. ಸೇಲ ಸೊಸಾಯಿಟಿ ಅಪ್ಲಂಡ ಹತ್ತಿ ಲಿಲಾವ

ಕ್ಲಾಸ	ಉತಾರ (ಮಣ—ಪೌಂಡು)	ಧಾರಣೆ
ಸ್ಪೇಶಲ ಕ್ಲಾಸ	೧೬—೧೫—೨೨೬	
೧	೧೬—೮—೨೧೭	
೨	೧೫—೨೩ ೨೧೧	
೩	೧೫—೧೦—೨೦೦	

ದಲಾಲ ಸಂಘದ ಅಪ್ಲಂಡ ಹತ್ತಿ ಲಿಲಾವ.

ಕ್ಲಾಸ	ಉತಾರ (ಮಣ—ಪೌಂಡು)	ಧಾರಣೆ
ಸ್ಪೇಶಲ ಕ್ಲಾಸ	೧೬—೧೫—೨೪೦	
,, ಬಿ	೧೬ ೭—೨೩೨	
೧	೧೫—೨೫—೨೨೫	
೧ ಬಿ	೧೪—೧೯—೨೨೩	
೨	೧೫—೧೪—೨೧೭	

ಈ ಎರಡೂ ಸಂಘಗಳ ಲಿಲಾವುಗಳಲ್ಲಿ ಒಂದ ಧಾರಣೆಯನ್ನ ನೋಡಿದರೆ ಯಾವ ಸಂಘದಲ್ಲಿ ಮಾಲು ಹಾಕುವದರಿಂದ ರೈತರಿಗೆ ಫಾಯಿದೆಯಾಗುವದೆಂಬುವದ ಹುಡುಗರಿಗೂ ತಿಳಿಯುವಂತಿದೆ.

ಕೋ ಆಪರೇಟಿವ್ಹ ಕಾಟನ್ ಸೇಲ ಸೊಸಾಯಿಟಿಯ ಲಿಲಾವಿನಲ್ಲಿ ಬಾಜಾರ ಧಾರಣೆಗಿಂತ ಮತ್ತು ದಲಾಲ ಸಂಘದ ಲಿಲಾವಿನಲ್ಲಿ ಆದ ಧಾರಣೆಗಿಂತ ೨೦—೩೦ ರೂಪಾಯಿ ಧಾರಣೆ ಒಂದೊಂದು ನಗಕ್ಕೆ ಕಡಿಮೆ ಬಂದಿರುವದು, ರೈತರು "ಎನ್ನಪಾ ಸೊಸಾಯಿಟಿಯವರು ಕೊಟ್ಟ ನೋಟೀಸಿನ್ಯಾಗ, ಬಾಜಾರ ಧಾರಣೆಗಿಂತ ಹೆಚ್ಚು ಕಿಮ್ಮತ್ತು ಬರ್ತೈತಿ ಅಂತ ಬರದಿದ್ರು ಹಳ್ಳಿ ಹಳ್ಳಿ ತಿರ್ಗಿ ಕೊಂತ ಹೂಲಿ ಸಾಬ್ರಂತ ಗುಡ್ಡದಂಥ ದೊಡ್ಡ ದೊಡ್ಡ ಮಾತುಗಳನ್ನ ಹೇಳತಿದ್ರು ಸೊಲ್ಲಾಪೂರ ಮುಂಬೈಯಿಂದ ಖರೀ ದಾರ್ರು ಬರ್ತಾರಂತಿದ್ರು. ಎಲ್ಲೈತ್ರಿಪಾ, ಇಲ್ಲಿ ಒಂದ ನೋಡಿದ್ರ ಖರೀ ದಾರು ಇಲ್ಲಾ; ಧಾರ್ಣೆನೂ ಬಹಳ ಕಮ್ಮಿ ಬಂತು. ಸೊಸಾಯಿಟ್ಯಾಗ ಬಾಂದಾನ ಮ್ಯಾಟೂಗಿಂತ ಬಹಳ ಮುರಕೋತಾರಂತ, ಸೊಸಾಯ್ಟಿ ಲಿಲಾವಿನ್ಯಾಗ ತಿರ್ಗಾ ಮರ್ಗಿ ಮುಚ್ಚಳ್ಳಿ ಹಿಡಿಬಾಯಿಯಮ್ಯಾಲೇ ಬಗೋ ಳ್ಳೋರಂತ ಅನರಾದ್ರು ಏನಮಾಡ್ಯರ. ನಾಕ ಮಂದಿ ಕೇಳವರು ಇದ್ರ ಚಂದ. ಒಬ್ಬರಪ್ಪಾ ಗೆಂಟ್ರು ಏರಿಸಾಡಿದರ ಧಾರ್ಣೆನಾದ್ರೂ ಬರ್ತೇತು. ಛೇ ಹಿಂಗಾದ್ರು ಹಾಕಾಕ್ರೀ ಅಲ್ಲ ಇನ್ನೊಮೆ.

ನನಗೆ ಮೊದಲೇ ಗೊತ್ತಿತ್ರಿ, ಸೊಸಾಯಿಟ್ಯಾಗ ಯಾರೂ ಮಾಲು ತಗೆ ಳ್ಳೋದಿಲ ಅನ್ನೋದು ಏನದಾರಪೇಕ್ರಿ. ಹೋಟೆಲ್ನ್ಯಾಗ ಓದ್ಯಾಡಿದಾಂಗ ಓಡಾಡತಿದ್ದಿ,, ಸೊಸಾಯ್ಟಿ ಸೇಕ್ರೇಟರಿ ಹೂಲಿ ಸಾಬ್ರಂತ ಬಾಳ ಬಾಳ ಹೇಳ್ತಿದ್ರಂತ ನಮ್ಮೂರ ಸೊಸಾಯ್ಟಿ ಚೇರಮನ್ ಬಾಳ ದೊಡ್ಡ ಮನಸ್ಯಾ ಆನಿಸಿಗೊಂಬೇಕಂತ ನಮಗೆಲ್ಲ ಆಪ್ಪಕಾರ ಹಚ್ಚಿ ನಮ್ಮ ಮಾಲ ಹಾಕ್ಸಿದನ್ರಿ ಸೊಸಾಯಿಟ್ಯಾಗ. ಇಲ್ಲದಿದ್ರ ನಾವಲ್ಲಿ ಅಲ್ಲಿ ಹಾಕತಿದ್ವಿ ಅವನ್ಯಾಗ ಮಾಡ್ತೋಕ್ಕ ತಗೊಂಡೋಕ್ಕ ಬರಾದಿರ್ತೈತಿ. ಬಟ್ಟಂದ್ರು ದಲಾಲ್ರು ಮಾಡ ನಮಗೆನ ಅಂದಿರಗಾ ಬಿಟ್ಟದ್ದಿಲ್ಲ. ಅವಾರು ಗಿಸಾಮಿ ಬರಕೊಳ್ಳೋದು ಒಟ್ಟ ತಪ್ಪ ಹಿಟ್ಟ ವಾರದಾರ ತೋಕ ಆದ ಕೂಡ್ಲೆ ಪಟ್ಟಿ ಮಾಡಿ ರೂಪಾಯಿ ಕೊಡತಾರಾ.

ಈಗೊಂದು ಪಂಚೇಜಿಂಗ ಸೊಸಾಯ್ಟಿ ಅಂತ ಮಾಡ್ಯರಂತ ಇನ್ನ ಮ್ಯಾಗ ಜಿನಿಂಗ ಸೊಸಾಯ್ಟಿ ಪ್ರೆಸ್ಸಿಂಗ ಸೊಸಾಯ್ಟಿಅಂತ ಮಾಡೋರಡಾ ರಂತ ಕೇಳ್ರಿ ಸೇಲ ಸೊಸಾಯಿಟ್ಯಾಗಿನ ಮಾಲು, ಪರ್ಚೇಜಿಂಗ ಸೊಸಾಯ್ಟಿಯವರಿಗೆ ಕೊಟ್ಟು, ಜಿನಿಂಗ ಸೊಸಾಯಿಟ್ಯಾಗ ಹತ್ತಿ ಹಿಂಡಿ, ಪ್ರೆಸ್ಸಿಂಗ ಸೊಸಾಯಿಟ್ಯಾಗ ಗಂಟ ಕಟ್ಟಿ ಕಳಿಸತಾರಂತ ಮುಂಬೈಗೆ. ಅಲ್ಲಿ ಮಾರಿತಾರಂತ ಗಿರ್ಣಿಯವರಿಗೆ ಅವರಂತ ದಲಾಲರ್ನ ತಗದಹಾಕತೀವಿ, ಖರೀದಿದಾರ್ನ ತಗದಹಾಕತೀವಿ, ಅಂತ ಬಾಳ ಬಾಳ ಬರದ್ರಂತೆ, ಈ ಸೊಸಾಯ್ಟಿಯವರು. ಆದ ಇವರ್ನ ತಿಂಬು. ಆದಕ ಯಾರೇನ ಮಾಡೋದು. ನವತಿ ಗಂತ ಹಾಯಿ ಆಂದ ಮುಂದೆ ಆಗುವದಾ ಗಿ?

ಏನಾದ್ರು ಮಾಡಿ ದಲಾಲ ವ್ಯಾಪಾರಸ್ಥರ್ನ ಸೊಸಾಯಿಟಿಯವರ್ನ ಕೂಡ್ಸಿ ಹೇರ್ಗಬೇಕಂತ ಪ್ರಯತ್ನಾದಾಗಿಂದ ಬಂದಿದನಂತ್ರಿ ನಮ್ಮಪ್ಪ ವ್ಯಾಪಸಾಬ್ರಂತ. ಆಕ ಸೊಸಾಟ್ಯಾಗ ಚಲೇಪಾಲ ಪತಗೋ ಅಂತ ಹೇಳಿದ್ದನಂತ್ರಿ. ಈ ಸೊಸಾಯ್ಟಿಯವರು ಅಕಾಕಬಿದ್ದು ಚಲೋಹತ್ತಿ ಸುವಾರಕತ್ತಿ ಪಣ್ಣಹತ್ತಿ ಹಕ್ಕಬಹತ್ತಿ ಎಲ್ಲಾ ತಗೊಂಬರ್ರಿ ಅಂತ ನೋಟೀಸ ಕೊಟ್ಟಿದ್ರು. ದಲಾಲ ವ್ಯಾಪಾರಸ್ಥರು ವ್ಯಾಪಸಾಬ್ರ ಭೆಟ್ಟಿಗೆ ಹೋದಾಗ ಹಲಿಸ ಹಣ್ಣ ಬಚ್ಚಿ ಬಚ್ಚಿ ಇಟ್ಟಾಂಗ ಇಡತಿದ್ರಂತ್ರಿ ಸೊಸಾಯ್ಟಿಪ್ಪು ಅವರ ಮುಂದ. ನೀವು ಚಲೋ ಹತ್ತಿ ತಪ್ಪೋತಗೋಳ್ಯಾಕ ಸೊಸಾಯ್ಟಿಯವರಿಗೆ ತಿಸ್ಲೀಪಿ ಅಂತ ನಮಗ ಹೇಳಿದ್ರಿ; ನಮ್ಮ ಸಂಘದವರು ಚಲೋಹತ್ತಿ ಅಷ್ಟೇ ತಗೊಂಬರ್ರಿ ಅಂತ ನೋಟೀಸ ತಗದ್ರು. ನಿಮ್ಮ ಸೊಸಾಯ್ಟಿಯವರು ಚಲೋದು ಗಿಲೋದು ಹಕ್ಕಲ್ಕ ಗಿಕ್ಕಲ ಮಣ್ಣ ಗಿಣ್ಣ ಹತ್ತಿಯಲ್ಲಾ ತಗೊಂಬರ್ರಿ ಅಂತ ನೋಟೀಸ ತಗದಾರ ಇದನೋಡ್ರಿ ಅಂತ ಕೊಟ್ರಂತ ವ್ಯಾಪಸಾಬ್ರ ಕೈಯಾಗ ಅದನ. ಅದನ ನೋಡಿ ಸಾಹೇಬ್ರು ಟಳಟಿಟ್ಟ ಮಾಡಿದ್ರಂತ್ರಿ ಸೊಸಾಯ್ಟಿಯವರಿಗೆ ಮಾತದೇನ ಮಾಡ್ಯಾರ್ರಿ ಹಿಂಗಮಾಡಿದ್ರ. ಹಿಂಗಮಾಡಿದವ್ಯಾಲೆ ಸಾಹೇಬ್ರಾಗೂ, ಹ್ಯಾಂ ಹೇಳಬಾರ್ರಿ ಬರಬೇ ಆಗ್ರಿ ಅಂತ ಮತ್ತೆ. ಆಗೋದಾದ್ರು ಹ್ಯಾಗ್ರಿ ಇವರು ಹೇಳೋದೊಂದು ಮಾಡೋದೊಂದು ಮಾಡಾಕ ಹತ್ತಿದವ್ಯಾಗ. "ಹೀಗೆ ನಮ್ಮ ಕಷ್ಟಗಳಿಗೆ ಮಾತಾಡುತ್ತಾ ಹೋಗುತ್ತಿದ್ದರ. ಪಟ್ಟಿನ ಖರೀದಿದಾರೇ ಬರಲಿಲ್ಲವೆಂದು ಸೊಸಾಯಿಟಿಯವರು ವಿಚಾರದಲ್ಲಿರುವಾಗ, ರೈತರು ಪಟ್ಟಿನ ಧಾರಣೆ ಆಪೇಕ್ಷಿಸುವದು "ಹನುಮಂತದೇವರು ಹಗ್ಗ ತಿಂಬುವಾಗ ಪೂಜಾರಿ ಶಾವಿಗಿ ಬೇಡಿದಾ" ಎಂಬ ಗಾದೆಯಂತಾಗುವದು.

ಬೆಟಗೇರಿ ಟಿ. ಕೆ.

ಸಾಗಲಿ ದೀಕ್ಷ!!

ಮದ್ರಾಸ ಇಲಾಖೆಯಲ್ಲಿ ವಿಶೇಷವಾಗಿ ಮಂಗಳೂರ ಕಾಲಿಕತ್ತ ಜಿಲ್ಹೆಗಳಲ್ಲಿ ಅನೇಕ ಪರ್ವಕ ಸಂಘಗಳೂ, ವರ್ತಕರೂ ದಿವಾಳಿ ತೆಗೆದಿದ್ದಾರೆ. ಕೆಲವರು ಹಲವು ದೀಪ ಹಚ್ಚುವ ಸ್ಥಿತಿ ಎಣಿಸ್ತಾರೆ. ವ್ಯಾಪಾರಕ್ಕೆ ಒಂದ ಮಂದಿಯ ವಿಚಾರ ಮಾಡ, ಅವರಿಗೆ ಏನಾದರೂ ಆಶ್ರಯ ಕೊಡಬೇಕೆಂದು ಮಂಗಳೂರಿನ ಮಿ. ಸಾಲ್ಡಾನ್ಹಾನ ಹೇಳಿದ ಕೌನ್ಸಿಲದಲ್ಲಿ ಸ್ಪೇಶಲ ಠರಾವು ತಂದರು. ಆದರೆ ಈ ಠರಾವು ಸಂಕಾರ ಪಕ್ಷೀಯರಿಗೆ ಅಷ್ಟು ಅಗತ್ಯವಾಗಿ ತೋರದ್ದರಿಂದ, ಅಧ್ಯಕ್ಷರು ಇದನ್ನು ಕೌನ್ಸಿಲದ ಮುಂದೆ ತೆಗೆದುಕೊಳ್ಳಲಿಲ್ಲ. ಪರದಾಟವು ಸೀತಳಪೇ ಸ್ಯ.

ಸಹಕಾರ ಶಕ್ಯವೇ?-

ಬಂಗಾಲದ ದಬ್ಬಾಳಿಕೆಯ ಕುಂಡದಲ್ಲಿ ಹರಿಚರಣ ಚಕ್ರವರ್ತಿ ಎಂಬವರು ಆಹುತಿಬಿದ್ದು, ಬ್ರಹ್ಮದೇಶದ ಸುರಂಗದಲ್ಲಿ ವಾಸವಾಗಿದ್ದಾರೆ. ಇವರ ಪತ್ನಿಗೆ ವಿಶೇಷ ಚಿಂತಾಯಿತು. ಗಂಡನನ್ನು ತನ್ನ ಬಳಿಯಲ್ಲಿ ನಜರ ಕೈದಿಯಾಗಿಡಬೇಕೆಂದು ಸರಕಾರಕ್ಕೆ ಬಿನ್ನಹ ಮಾಡಿಕೊಂಡಳು. ಆದರೆ ಆಳಗರ ಮನಸು ಎಷ್ಟೂ ಕರಗಲಿಲ್ಲ. ಶ್ರೀ. ಅನಿಲ ಬಾಬು

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇ? ತಲೆಗೆ ಕೈ ಹಚ್ಚಿದಿಯಾ? ಕಾಲು ಸುಟ್ಟಿತೇ? ಹಲ್ಲುಕುಳಿಯೋ? ಮೈಯಲ್ಲಿ ನೋಯುತ್ತಿದೆಯೋ? ಏನಾದರೂ ಏನು?

ಅಪ್ಪನು— ಕಂಡಾ— ಹೌದು ಮೈಯಲ್ಲಾ ನೋಯುತ್ತದೆ.

ಮಗ— [illegible] ಮೊಕ್ಕಿಕ್ಕಿಯಾರ [illegible] ಒಂದೇ [illegible] ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ [illegible] [illegible] ತೆರ ಮು ೩ ಆಣೆ ಆಣೆ.

ಸ. [illegible] ಡಾಕ್ಟರರ [illegible] ಕರಾರ ಮಾಡಿ ಕೊಡುವೆನು.

[illegible] — [illegible] [illegible] ಸ್ಟೋಅರ್ಸ ಹುಬ್ಬಳ್ಳಿ



ವ್ರಣಸಂಹಾರಿ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಿದ [illegible] ಯಹಚ್ಚಿ, ವಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ. [illegible] ಯವಾಗುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕು [illegible] ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಸರಸ್ವತಿಯವರಿಗೆ ಆಚೇಪುಸ್ತ ಗೇರಿ ಹುಬ್ಬಳ್ಳಿಯ ಏಜಂಟರು— ದಿ ಕನಕಾಪಟ್ಟಿ ಮೆಡಿಕಲ ಹಾಲ [illegible] ಬೆಳಗಾವಿ ರೋಡ ಹುಬ್ಬಳ್ಳಿ ರೋಗ ಮತ್ತು ಕಿರುಕುಳದಿಂದ ದೊರೆಯುವದು. } [illegible] ಎಫ್. ಪೆಂಟರ ಹಿರೇ ಮಲ್ಲಾಪುರ ಬೆಳಗಾವಿ

ವ್ಯಾಕಸಾಮಾರಾನ ಪಲಾಯನ—

ಟ್ಯೂನಿಸಿಯಾ ಪಟ್ಟಣದಲ್ಲಿ ಫ್ರೆಂಚರ ದೊರೆತನವು ಬುಡಮೇಲಾಗಬೇಕೆಂದು ಚಿಂತಿಸಿದ ಬಿ, ಟಿ. ಲೆಫ್ಟಿನೆಂಟ ವ್ಯಾಕಸಾಮಾರಾ ಸಾಹೇಬನನ್ನು ಸ್ವಂತ ಮುಚ್ಚಳಿಕೆಯ ಮೇಲೆ ಬಿಟ್ಟಿದ್ದರು. ಈತನು ಹೇಗೋ ಫ್ರೆಂಚ ಅಧಿಕಾರಿಗಳ ಕಣ್ಣಿಗೆ ಮಣ್ಣು ಹಚ್ಚಿ ಪಲಾಯನ ಹೇಳಿಸಿದನು. ಈತನನ್ನು ಹಿಡಿದು, ತುರುಂಗಕ್ಕೆ ಕಳಿಸಬೇಕೆಂದು ಫ್ರೆಂಚ ಅಧಿಕಾರಿಗಳ ಮನಸ್ಸಿನಲ್ಲಿಲ್ಲ. ಪುನಃ ಟ್ಯೂನಿಸಿಯಾಕ್ಕೆ ಬಂದು, ತಮ್ಮ ವಿರುದ್ಧ ಭಾಷಣ ಮಾಡಿದರೇ- ಈತನ ಸನಾಚಾರ ತಿಳಿಸಲ್ಪಡುವರು. ವ್ಯಾಕಸಾಮಾರಾ ಸಾಹೇಬನು ಸಾಮಂತರನಂಥ ಅನಾಥ ಪ್ರಜನಲ್ಲೆಂಬುದು ಫ್ರೆಂಚರಿಗೆ ಗೊತ್ತುಂಟು.

ಸಿಪಾಯರ ಅನ್ನದಲ್ಲಿ ಕೀಟಕ-

ಲಿಪಜಕವೆಂಬಲ್ಲಾಗುವ ಒಂದು ಸಮಾರಂಭಕ್ಕೆ ಜರ್ಮನಿಯ ಅಧ್ಯಕ್ಷರಾದ ಜನರಲ ಹಿಂಡನಬರ್ಗ ಸಾಹೇಬರು ಹೋಗತಕ್ಕವರಿದ್ದರು. ಪೋಲಿಸ ಬಂದೋಬಸ್ತು ವಿಶೇಷವಾಗಿರತಕ್ಕದ್ದಿತ್ತು. ಪರಸ್ಥಳದಿಂದ ಮುನ್ನೂರು ಸಿಪಾಯರು ಬಂದಿದ್ದರು. ಬಂದೋಬಸ್ತಿಗೆ ಹೋಗುವ ಮುಂಚೆ ಇವರಿಗೆ ನೀಡಿದ ಅನ್ನದಲ್ಲಿ ಜುಲಾಬು ಆಗುವಂಥ ಔಷಧ ಕೂಡಿಸಿದ್ದರು. ಜನರಲ ಹಿಂಡನಬರ್ಗರು ಬರುವ ವೇಳೆಯಲ್ಲಿ ಸಿಪಾಯರಿಗೆ ವಾಂತಿ ಭ್ರಾಂತಿ ಪ್ರಾರಂಭವಾಗಿ, ಇವರೆಲ್ಲರೂ ಹಾಸಿಗೆ ಹಿಡಿದರು. ಒಂದೊಂದೇ ಸೋಜಿಗ!!!

ಪಂಢರ್ಪುರ ತ್ಯಾಗ-

ಮುಂಬಯಿಯಲ್ಲಿ ನಾಲ್ವರು ಹಿಂದೂ ಜನರು ಐದು ವರ್ಷಗಳ ಹಿಂದೆ ಮುಸಲಮಾನರಾಗಿ ಮಹಮ್ಮದ, ಪೀರ ಮಹಮದ, ಮುರಾದ , ರಹಿಮ ತುಲ್ಲಾ ಎಂಬ ಹೆಸರಿಟ್ಟುಕೊಂಡದ್ದಲ್ಲದೆ, ತಮ್ಮ ಜನಕರಿಗೂ ಮುಸಲಮಾನ ಹೆಸರುಗಳನ್ನು ಕೊಟ್ಟಿದ್ದರು. ಅಲ್ಲಿಯ ಹಿಂದೂ ಮಿಶನರಿ ಸಂಘದವರು ಇವರನ್ನು ಪುನಃ ಪಾವನ ಮಾಡಿಕೊಂಡು. ಕೃಷ್ಣದಾಸ, ಪಿತಾಂಬರ, ಮಗನಮಂಜಿ, ಅಂಬಾಲಾಲ ಎಂಬ ನಾಮಕರಣ ಮಾಡಿದರು.

ಡಾಕ್ಟರ ನಾಡಗೇರರ ಅಭಿನಂದನೆ-

ಮುಂಬಯಿಯ ಗ್ರ್ಯಾಂಟ ಮೆಡಿಕಲ ಕಾಲೇಜದ ಮುಖ್ಯಸ್ಥರಾಗಿ ಈ ಪರ್ಯಂತರ ಯುರೋಪಿಯನ ಜನರಿದ್ದರು. ಡಾಕ್ಟರ ನಾಡಗೇರರನ್ನು

ಬಿ. ಡಿ. [illegible]

ಕೆಳಗೆ ಸಹಿ [illegible] ಬೆನ್ನೂರ ಶಿ [illegible] ರಗೂ ಮತ್ತು [illegible] ರಾಣಿಬೆನ್ನೂರ್ನ [illegible] ಲೋಕಲ್‌ಬೋರ್ಡ [illegible] ಮಧ್ಯದಲ್ಲಿ [illegible] ಳ್ಳ ಒಂದು ಇದರ [illegible] ನಂಬರ [illegible] ಇದರ ಅಜಮಾಸ ಕಿಮ್ಮತ ೮೦೦೦ ರೂಪಾಯಿ ಇದನ್ನು [illegible] ಟವರು ಸವರ ಮುದ್ದತಿನ ಹಳಗಿಗೆ ಖಂಡಾಕ [illegible] ಸಮಕ್ಷಮಾ ಅಗದ [illegible]

[illegible] ತಾಲ್ಲೂಕ ರಾಣಿಬೆನ್ನೂರ

ಮರಣಯಾತ್ರೆಗಳು.

—೦—

ಸಿಂಗಲ [illegible] ರೂಪಾಯಿ ಮುಂದೆ [illegible] ಇಂಗ್ಲಿಷ [illegible] [illegible] ಅನಾರೋಗ್ಯ [illegible] ಟೇಬಲ್‌ಕಾಲಮಿನ [illegible] ಜಾಹೀರಾತುಗಳನ್ನು [illegible] ರತ್ಯೇಕ ಪತ್ರವ್ಯವಹಾರ ಮಾಡತಕ್ಕದು.

ಮ್ಯಾನೇಜರ ವಿಜಯ [illegible]

ವಿಜಯದ ವರ್ಗಣೆ ದರ

ವಿಜಯಪತ್ರಿಕೆ

೩ ತಿಂಗಳಿಗೆ		೧೨—೦—೦ ರೂ
೬	,,	೭—೦—೦ ರೂ
೧	,,	೪—೦—೦ ರೂ
ಒಂದಕ್ಕೆ ೧ ವರ್ಷಕ್ಕೆ		೩—೧೨—೮ ರೂ

ಸ್ಥಳಿಕ ಮಾಹಿತಿ ಕಳಿಸ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

—೦—

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫
ರೋ. ಟಿಳಕರ ಚರಿತ್ರ	೪
ದೇಶಬಂಧು ದಾಸರ ಚರಿತ್ರ	೩

ಹಂಗಿನವರ ಮನೆಗಿಂತ ಇಂಗಡದ ಗುಡಿ ಲೇಸು

ಸ್ವರಾಜ್ಯ, ಸ್ವತಂತ್ರ, ಮವಾಳ ಮತ್ತು ಬ್ರಾಹ್ಮಣೇತರವೆಂಬ ನಾಲ್ಕು ಒಳಭೇದಗಳಲ್ಲಿ ಬ್ರಾಹ್ಮಣೇತರ ಪಕ್ಷವು ಮದ್ರಾಸ ಇಲಾಖೆಯಲ್ಲಿ ಮಾತ್ರವುಂಟು. ಉಳಿದ ಮೂರು ಪಕ್ಷಗಳು ಉಳಿದ ಇಲಾಖೆಗಳಲ್ಲುಂಟು. ಇವುಗಳಲ್ಲಿ ಸ್ವರಾಜ್ಯ ಪಕ್ಷದ ಮೆಂಬರರ ಸಂಖ್ಯೆಯು ಜಾಸ್ತಿಯಾಗಿರುತ್ತದೆ. ಸ್ವರಾಜ್ಯ ಮತ್ತು ಸ್ವತಂತ್ರರ ಕೂಡಿದಾಗ, ಸರಕಾರ, ಮವಾಳ ಮತ್ತು ಬ್ರಾಹ್ಮಣೇತರ ಈ ಮೂರರ ಬಣಗಳ ವಿರೋಧವನ್ನು ಹೊಡೆದು ಹಾಕುವಷ್ಟು ಬಹುಮತವಾಗುತ್ತದೆ. ಸ್ವರಾಜ್ಯ ಮತ್ತು ಸ್ವತಂತ್ರರಲ್ಲಿ ಹೊರಗೆ ಮತಭೇದವು ಕಾಣಲಾರದು. ಆದರೆ ಉಭಯತರಲ್ಲಿ ತಾನೇ ಬ್ರಹ್ಮ, ಎನ್ನುವಂಥ ಮತ್ತು ದೇವಾಕ್ಕ- ಪಾಮಾಕ್ಕ ಬೇರೆ ಎನ್ನುವಂಥ ಮತಭೇದವುಂಟು. ತಂಡುಲವು ಪ್ರಸ್ತಮೂಲವಷ್ಟೇ; ಈ ತಂಡುಲವನ್ನೇ ಒದಗಿಸುವ ಮಂಜೂರಿ ಕೊಡದೆ, ಸರಕಾರವನ್ನು ಇಕ್ಕಟ್ಟಿಗೆ ಒಡ್ಡಬೇಕೆಂಬುದು ಸ್ವರಾಜ್ಯ ಪಕ್ಷೀಯರ ಸಿದ್ಧಾಂತವು. ತಂಡುಲವನ್ನು ಮೊದಲು ಅದರ ಮುಂದಿಡೋಣ; ಒಳಿತ ಕೆಲವರಿಗೆ ಮಾತ್ರ ಅಂಜೊಟ್ಟಿ ಹಾಕೋಣ, ಎಂಬುದೇ ಸ್ವತಂತ್ರರ ವಿಚಾರವು. ಇವರ ನಂತರ ಮವಾಳ ಮತ್ತು ಬ್ರಾಹ್ಮಣೇತರರು ಕೃತಿಯಿಂದ ತೀರ ವಿಪರೀತವಾಗಿರುವರು. ಸರಕಾರದ ಮುಂದೆ ನಿಷ್ಕಾಮ ಬುದ್ಧಿಯಿಂದ ಅಕ್ಕಿಯ ರಾಶಿಯನ್ನು ಒಟ್ಟಬೇಕು. ಆ ಬಳಿಕ ಪ್ರಸಾದವೆಂದು ಅದು ಕೊಟ್ಟಷ್ಟರಲ್ಲಿ ತೃಪ್ತರಾಗಬೇಕೆಂದು ಇವರ ಮತವು. ಸರಕಾರದವರೂ ಹೀಗೇ ಹೇಳುತ್ತಲಿ. "ನಾವು ಕೊಟ್ಟಂಥ ಸುಧಾರಣೆಗಳು ಅಪೂರ್ಣ ಮತ್ತು ದೋಷಯುಕ್ತವಾಗಿದ್ದರೂ, ಮೊದಲು ಅವುಗಳ ಉಪಭೋಗ ಮಾಡಿರಿ. ಆ ಮೇಲೆ ಅವನ್ನು ಪೂರ್ಣ ಮಾಡಲಿಕ್ಕೆ ಒದಗುವದು" ಎಂದೇ ಸರಕಾರದ ಸಾರುವಿಕೆಯು. ಸರಕಾರದ ಹೇಳಿಕೆಯ ಪ್ರಕಾರ ನಡೆಯುವದೇ ಹಂಗಿನೊಳಗಿರುವಂತಾಗುತ್ತದೆ. ಆದುದರಿಂದ ಹಂಗಿನವರ ಮನೆಗಿಂತ ಇಂಗಡದ ಗುಡಿ ಲೇಸೆಂಬ ಪ್ರಸಿದ್ಧ ನುಣ್ಣುಡಿಗನುಸರಿಸಿ, ಸ್ವರಾಜ್ಯ ಪಕ್ಷೀಯರು ಕೌನ್ಸಿಲುಗಳಿಗೆ ಶರಣು ಹೊಡೆದಿರುತ್ತಾರೆ.

ಈಗಿನ ಮಂತ್ರಿಗಳು ಸರಕಾರಕ್ಕೆ ಜವಾಬದಾರರಿರುತ್ತಾರಲ್ಲದೆ, ಕೌನ್ಸಿಲಗಳಿಗಿರುವದಿಲ್ಲ. ಸರಕಾರ ಮತ್ತು ನಾಮಿನೇಟ ಮೆಂಬರರ ಹೋಟುಗಳ ಬಲದಿಂದ ಲೋಕಮತದ ವಿರುದ್ಧ ವರ್ತಿಸುತ್ತಾರೆ. ಆದುದರಿಂದ ಇವರು ಪ್ರಜರಿಗೆ ಅಂದರೆ ಕೌನ್ಸಿಲಕ್ಕೆ ಜವಾಬದಾರರಾಗುವಂತೆ ಕಾಯ್ದೆಯನ್ನು ಬದಲು ಮಾಡಿದ ಹೊರತು ರಾಜ್ಯಕಾರಭಾರವು ಸರಳತನದಿಂದ ನಡೆಯಲಾರದು. ಕೌನ್ಸಿಲುಗಳಿಗಿಂತ ಅಸೆಂಬ್ಲಿಯಲ್ಲಿ ಪ್ರತ್ಯಕ್ಷ ಅನುಭವ ಬಂದಿದೆ. ಸ್ವರಾಜ್ಯ ಮತ್ತು ಸ್ವತಂತ್ರರು ಸೇರಿ, ಸರಕಾರದ ಹಲವು ಠರಾವುಗಳನ್ನು ರದ್ದು ಮಾಡಿದರು. ಬೇಡಿಕೆಗಳನ್ನು ನಾಮಂಜೂರ ಮಾಡಿದರು. ನಿಷೇಧದ ಠರಾವುಗಳನ್ನು ಸೇರಿಸಿದರು. ಪರಿಣಾಮವೇನು? ಇದೆಲ್ಲ ಕಾಗದದಲ್ಲಿ ಮಾತ್ರ ಉಳಿದವು. ಲೋಕಮತದ ವಿಚಾರದಂತೆ ನಡೆಯಲು ಅರಸರು ತುಸುವಾದರೂ ಉದಾರ ಬುದ್ಧಿಯನ್ನು ವ್ಯಕ್ತಪಡಿಸಲಿಲ್ಲ. ಗವರ್ನರ ಜನರಲ್ಲರಂತೂ ಸರ್ಟಿಫಿಕೇಟನ್ನು ಯಾವಾಗಲು ಸಿದ್ಧಪಡಿಸಿಟ್ಟುಕೊಂಡೇ ಕೂಡ್ರುವರು. ಹೀಗಾಗಿ ಭಾರತೀಯ ಮುಂದಾಳುಗಳು ಮಾಡಿದ ಪ್ರಯತ್ನವೆಲ್ಲ ಹೊಳೆಯಲ್ಲಿ ಹೋಯಿತು. ಮಾಡಿದಂತೆಯೂ, ಭಾಷಣಗಳು ಅರಣ್ಯರೋದನದಂತೆಯೇ ಆಗಿರುತ್ತವೆ. ಅರಸರು ಲೋಕಮತವನ್ನು ಧಿಕ್ಕರಿಸಿ, ಸ್ವೇಚ್ಛೆಯಿಂದ ಮನಸೋಕ್ತವಾಗಿ ಕಾರಭಾರ ಮಾಡುವ ಹವ್ಯಾಸ ತೊಡಲಿಕ್ಕೆ ನಮ್ಮೊಳಗಿನ ಭೇದಗಳೇ ಕಾರಣ. ಆದುದರಿಂದ ಬರುವ ಚುನಾವಣೆಯಲ್ಲಿ ಯಾವದೊಂದು ಪಕ್ಷವು ಅನ್ಯರ ಸಹಾಯದ ಅಪೇಕ್ಷೆ ಮಾಡದೆ, ಸ್ವಯಂ ತೂಕದಾಗುವಂತೆ ಮಾಡಿದರೇ ಅರಸರಿಗೆ ಹೆದರಿಕೆ ಕೊಡುವದು. ಆ ಪಕ್ಷವು ಸ್ವರಾಜ್ಯ ಪಕ್ಷವೇ ಎಂದು ಹೇಳುವಂತಾಗಿದೆ. ಮುಂಬಯಿ ಕೌನ್ಸಿಲದ್ದೇ ಉದಾಹರಣೆ ತಕ್ಕೊಳ್ಳುವಾ. ಇಲ್ಲಿ ಎರಡು ಜನರು ಮವಾಳರೂ, ಎಳೆಂಟು ಜನರು ಬ್ರಾಹ್ಮಣೇತರರೂ ಆಗಿದ್ದಾರೆ, ಒಟ್ಟು ೧೧೧ ಜನರಲ್ಲಿ ಇವರ ಸಂಖ್ಯೆಯು ತೀರ ಕಿರಿಯದ್ದಾಗುತ್ತದೆ. ಆದರೆ ಇವರು ಸರಕಾರ, ಮತ್ತು ನಾಮಿನೇಟ ಜನರ ಗುಂಪಿನಲ್ಲಿ ಸೇರಿ, ಬಹುಪಕ್ಷದ ಠರಾವುಗಳನ್ನು ರದ್ದು ಮಾಡಿಸುವ ಪುಣ್ಯ ಕಟ್ಟಿಕೊಳ್ಳುತ್ತಾರೆ. ಇವರು ಒಡನಾಗಿ ಎಲ್ಲರೂ ಸ್ವರಾಜ್ಯ ಪಕ್ಷೀಯರೇ ಆಗಿದ್ದರೆ ನೀರಿನ ಝರಿಯನ್ನು ಸೇವಿಸುವದಕ್ಕಾಗಿ ಸ್ವರ್ಗಲೋಕದಿಂದ ಬಂದ ಹಾಗೆ ನಾಮೇಟರ ಕಿಸೆ ತುಂಬುತ್ತಿದ್ದಿಲ್ಲ. ದಿವಾನ ಬಾಧವರ ರಾಯರು ಅಧಿಕಾರದ ದುರುಪಯೋಗ ಮಾಡುತ್ತಿದ್ದಿಲ್ಲ. ಕೌನ್ಸಿಲಗಳಲ್ಲಾಗುವ ಇಂಥ ಅಹಿತಕಾರಕ ಠರಾವುಗಳಿಗೆ ಅನುವು ದೊರೆಯುವದಾರದೆಂದು ಮತದಾರರು ನಿಶ್ಚಯವಾಗಿ ಅಭಿಪ್ರಾಯವುಳ್ಳವರಾದರೆ ಸ್ವರಾಜ್ಯ ಪಕ್ಷೀಯರಿಗೆ ಮಾತ್ರ ವೋಟು ಕೊಡಬೇಕು. ಏನಂದರೆ ಇವರಲ್ಲಿ ಸ್ವಾರ್ಥವಿಲ್ಲ, ದೇಶಹಿತವೇ ಇವರ ಮುನ್ನುಡಿಯು. ಅರಸರ ಹಂಗಿನೊಳಗಿಲ್ಲದೆ ಸ್ವತಂತ್ರರಾಗಿದ್ದಾರೆ. ಈ ಪ್ರಕಾರ ಕೃತಿಯಿಂದ ಇವರು ತಮ್ಮ ಮಹಾತ್ಮ್ಯಕ್ಕೆ ಕರ್ತವ್ಯದ ಪರೀಕ್ಷೆ ಕೊಟ್ಟಿರುತ್ತಾರೆ. ಇಂಥವರನ್ನು ಸನ್ಮಾನಿಸಿ, ಪ್ರೋತ್ಸಾಹಿಸಿ, ತಮ್ಮ ಹಿತವನ್ನು ಸಾಧಿಸಿಕೊಳ್ಳುವದೇ ಮತದಾರರಿಗೆ ಭೂಷಣವು.

ಮವಾಳರ ಮೂಢತನವು.

ಕಾಂಗ್ರೆಸದ ಹೊರಗೆ ನಿಂತಿರುವ ಪ್ರತಿಯೊಂದು ಪಕ್ಷವು ಬಂದಿಲ್ಲೊಂದು ತರದಿಂದ ಮವಾಳವಾಗಿರುತ್ತದೆ. ಬ್ರಾಹ್ಮಣೇತರ ಪಕ್ಷಕ್ಕಂತೂ ರಾಜನಿಷ್ಠೆಯನ್ನು ಸಿಕೊಳ್ಳುವದೇ ಭೂಷಣವೆನಿಸುತ್ತದೆ. ರಾಜನಿಷ್ಠರಾಗಲಿ, ಮವಾಳರಾಗಲಿ, ಎಲ್ಲರೂ ಅರಸರ ವರ್ತನದ ಪ್ರಕಾರ ಕೊಡೆ ಹಿಡಿಯತಕ್ಕವರು. ಅಥವಾ ಅವರಿಗೆ ಯಾವ ಪ್ರಕಾರದ ತಾಪವಾಗಬಾರದೆಂದು ಅವರ ಮೇಲೆ ಛತ್ರ ಚಾಮರ ಹಿಡಿಯುವಂಥ ಸ್ವಾಮಿನಿಷ್ಠ ಪರಾಯಣರೆಂದರೂ ಸಲ್ಲುವದು. ಇದರಿಂದಲೇ ಸ್ವರಾಜ್ಯ ಹಿಂದೆ ಬಿದ್ದು ಮುಂದೆ ಬೇಗನೆ ಕೈಗೆ ಹತ್ತುವದು ದುರ್ಲಭವಾಗುತ್ತಿದೆ. ೧೯೨೦ನೆಯ ಇಸವಿಯಲ್ಲಿ ಅನಂತರಗಳು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿ, ಸ್ವರಾಜ್ಯ ಸಂಪಾದನೆಗಾಗಿ ತುರಂಗವನ್ನು ಸ್ವರ್ಗಲೋಕವೆಂದು ಭಾವಿಸಿದರು. ೪೦ ಸಾವಿರ ಜನ ತರುಣರು ಶ್ರೀ ಕೃಷ್ಣನ ಸ್ಥಾನವನ್ನು ಕಂಡುಬಂದರು. ಆಗ ಸರಕಾರವು ಚಿಕ್ಕಾರಿಸಿತ್ತು. ಸ್ವರ್ಗೀಯ ಗೌಪದೂತರೆಂದು ಆತ್ಮಸ್ತುತಿ ಮಾಡಿಕೊಳ್ಳುತ್ತಿರುವ ಸಿವ್ಹಿಲ ಸರ್ವಂಟರ ಹಕ್ಕಿನ ನಾರಿ ಹೋಯಿತು. ನಾನಾಕೋ ಅಪರೋಪಕರ ದೇಶಾಭಿಮಾನವನ್ನು ಪ್ರಶಂಸಿಸಿ ಮವಾಳರೂ ಕೌನ್ಸಿಲಗಳಿಗೆ ಧರಣಿ ಹೊಡೆದರು. ಸರಕಾರವು ಬೆದರಿ ಬೆಂಡಾಗಿ ಬೇಡಿದ ವರವನ್ನು ಕೊಡುತ್ತಿತ್ತು. ಆದರೆ ಇವರು ಸುಧಾರಣೆಯನ್ನು ಯಿತಸ್ಸು ಮಾಡಿ ತೋರಿಸುವ ಸುಳ್ಳು ಮತ್ತು ಪೊಳ್ಳು ಯತ್ನದಲ್ಲಿ ಅನಂತರವನ್ನು ಸುರಿಯಲು ಸರಕಾರಕ್ಕೆ ಬೇಕಾದಂಥ ಸಹಾಯ ಮಾಡಿದರು. ರಾಜಕೀಯ ಕೈದಿಗಳನ್ನು ಬಂದೀಖಾನೆಯಿಂದ ಬಿಡಬೇಕೆಂಬುದಾಗಿ ಪಾಂಡಿತ್ಯ ಪ್ರದರ್ಶನ ಮಾಡಿಕೊಂಡರು. ಈ ಪ್ರಕಾರ ಉಪಯೋಗವನ್ನು ಮುರಿಯುವಾಗ ಮಂತ್ರಿಪದದಲ್ಲಿ ಮಾನವಿಲ್ಲೆಂದು ದಿವಾನಬಹಾದ್ದೂರ ಚಿಂತಾಮಣಿಯವರೇ ರಾಜೀನಾಮೆ ಕೊಟ್ಟರು. ಬೇರೆ ಗೃಹಸ್ಥರೂ ಇವರನ್ನು ಹಿಂಬಾಲಿಸಿದರು. ಆದರೆ ಪ್ರಯೋಜನವೇನು? ಸರಕಾರದ ಉದ್ದೇಶವು ಕೊನೆಗಂಡು ಹೋಯಿತು. ದೇಶದ ತುಂಬ ಹಬ್ಬಿದ ಚಳವಳಿಯ ಸದ್ದು ಅಡಗಿತು. ಶಾಂತತೆ ಮತ್ತು ಸುವ್ಯವಸ್ಥೆಯನ್ನು ಸ್ಥಿರಗೊಳಿಸುವ ವಿಷಯದಲ್ಲಿ ಸಹಾಯ ಮಾಡಿದ ಬಗ್ಗೆ ಮವಾಳರು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರು. ಹೊಳೆ ದಾಟಿದ ಸರಕಾರವು ತನ್ನ ಹೇಳಿಕೆಯಂತೆ ನಡೆಯುವದೆಂದು ತಿಳಿದ, ಮವಾಳರಿಗೆ ಒದ್ದಿ ಬರುವ ಸಮಯ ಬಂತು. ಅಸೆಂಬ್ಲಿಯಲ್ಲಾದ ಠರಾವುಗಳಿಂದ ರಾವುಂಡ ಟೇಬಲ ಏರಲಿ; ರಾಯಲ ಕಮೀಶನ ನೇಮಿಸುವದೆಂದು ಇವರು ಆಶೆಗೊಂಡಿದ್ದರು. ಆದರೆ ಇದೆಲ್ಲ ಮೂರ್ಖತನವೆಂದು ಅನಿಸಿತು. ಆದರೂ ಸ್ವರಾಜ್ಯ ಪಕ್ಷೀಯರನ್ನು ಕೂಡಿಕೊಳ್ಳುವದಕ್ಕೆ ನಾಚುವರು. ಈ ಪಕ್ಷಕ್ಕೆ ಬಹಿಷ್ಕಾರ ಹಾಕಿ, ಸ್ವತಂತ್ರ ರಾಷ್ಟ್ರೀಯ ಪಕ್ಷನೆಂಬ ಬಣಾ ಕಟ್ಟಲಿಕ್ಕೆ ನಿಂತಿದ್ದಾರೆ. ಬರೇ ಬಣದಿಂದಿಷ್ಟು ಸ್ವರಾಜ್ಯ ಕಾರ್ಯವಾಗಲಾರದು. ಅಸೆಂಬ್ಲಿಯಲ್ಲಿಯ ಠರಾವು, ಭಾಷಣ ಪುಕ್ಕಟ್ಟೆ, ವಾಂಸ್ಕೃತದ ಹಿಂದೆ ಪಾಣ್ಯಕ್ಕಂತ ಮೇನಾ ಇಲ್ಲೆಂದೂ, ಕೇವಲ ವಾಗಾಡಂಬರವೆಂದೂ ಅರಸರಿಗೆ ಪೂರಾ ಗೊತ್ತುಂಟು. ಮೇಲಾಗಿ ಮವಾಳರು ತೀವ್ರ, ಅತ್ಯಂತ ತೀವ್ರ ಶಬ್ದಗಳಿಂದ ನಿಷೇಧದ ಠರಾವು ಮಾಡುವದಕ್ಕಿಂತ ಮುಂದೆ ಹೋಗಲಾರರೆಂದು ಸರಕಾರಕ್ಕೆ ಪೂರ್ಣ ನಂಬಿಗೆಯುಂಟು. ಅಥವರು ಬಂದಲ್ಲದೆ, ಹತ್ತು ರಾಷ್ಟ್ರೀಯ ಸಂಘಗಳನ್ನು ಸ್ಥಾಪಿಸಿದರೂ, ಅವುಗಳಿಂದ ಆನೆಗೆ ನೊಣ ಕಡಿದಷ್ಟು ನೋವು ಕೂಡ ತಮಗೆ ಆಗದೆಂದು ಅರಸರು ಬಲ್ಲರು. ಆದುದರಿಂದ ಮವಾಳರಿಗೆ ಮತಕೊಡದೆ, ಕಾಂಗ್ರೆಸದ ಉಮೇದವಾರರಿಗೇ ಮತ ಕೊಡಬೇಕೆಂಬ ಚಳವಳಿಗೆ ಈಗಾಗಲೇ ಪ್ರಾರಂಭವಾಗಿರುತ್ತದೆ. ಎರಡಾಗಲಿ, ಹತ್ತಾಗಲಿ, ಎಷ್ಟೇ ವರ್ಷಗಳಾಗಲಿ ಕಾಂಗ್ರೆಸದಿಂದಲೇ ಸ್ವರಾಜ್ಯ ದೊರೆಯುವದು; ಕಾಂಗ್ರೆಸವನ್ನೇ ಹಿಂಬಾಲಿಸಬೇಕೆಂದು ಪಂ. ಮೋತಿಲಾಲರು ... ಜನಜಾಗೃತಿಯ ವ್ಯಾಖ್ಯಾನ ಸತ್ರವನ್ನು ಪ್ರಾರಂಭಿಸಿದ್ದಾರೆ. ಕರ್ನಾಟಕದ ಕಾಂಗ್ರೆಸ ಕಮೀಟಿಗಳೂ ಇದೇ ಬಗೆ ವಾದವನ್ನು ಬೇಗನೆ ಪ್ರಾರಂಭಿಸಬೇಕೆಂದು ಸೂಚಿಸುತ್ತೇವೆ.

ಹನ್ನೆರಡು ಮಂದಿ ಹನುಮಂಲದಾರರ ಮಬಲಿನ.

ಮುಂಬಯಿಯಲ್ಲಿ ಇಂದು ಮತ್ತು ಇನ್ನು ತಾರೀಖಿನ ದಿವಸ ಮವಾಳರಿಂದ ಬೇರೆಯಾಗಿ ಕೂಡಿದ ಸಂಯುಕ್ತ ರಾಷ್ಟ್ರೀಯ ಸಂಘವೆಂಬ ಪಕ್ಷಕ್ಕೆ ಯಾರಾರು ಅನುಕೂಲರಿದ್ದಾರೆ ಮತ್ತು ಸಭೆಯನ್ನು ಕರೆದವರಾರೆಂಬ ಒಂದು ಜಾಹೀರ ಪತ್ರಿಕೆಯು ಪ್ರಸಿದ್ಧವಾಗಿರುತ್ತದೆ. ಮವಾಳ ಪ್ರಮುಖರಾದ ಡಾಕ್ಟರ ಪರಾಂಜಪೆ ... ದೊರೆಯವರಂತೂ ಸರಿಯೇ, ಡಾಕ್ಟರ ಅನಿಬಿ ಝೆಂಟನ್ನವರೂ ಇದರಲ್ಲಿ ಸೇರಿದ್ದಾರೆ. ಇವರು ಬೊಕ್ಕ ಬಂದಂತೆ ಕೊಡೆ ಹಿಡಿಯತಕ್ಕವರೆಂದು ... ತಮ್ಮ ಠರಾವಿನವೆಲ್ಲ ... ಕಾಂಗ್ರೆಸದ ಒಪ್ಪಿಗೆ ದೊರೆಯಬೇಕೆಂದು ಇವರು ಬೆಳಗಾವಿಯ ಕಾಂಗ್ರೆಸ ಸಭೆಗೆ ಬಂದುಗಲ್ಲದೆ, ಮಹಾತ್ಮರ ಕೃಪೆ ಸಂಪಾದಿಸಲಿಕ್ಕೂ ನಾಲಿಕ್ಕೂ ಪ್ರಯತ್ನಿಸಿದರು. ಕಾಂಗ್ರೆಸ ಸಭೆಯವರು ಇವರ ಬಿಲ್ಲಿಗೆ ಅನುಕೂಲವಾಗುವಂತಿರಲಿ, ಸಹಾನುಭೂತಿ ಕೂಡ ತೋರಿಸಲಿಲ್ಲ. ಆದುದರಿಂದ ಅಮ್ಮಾಸಾಹೇಬರು ಕಾಂಗ್ರೆಸದ ಮೇಲೆ ಮುನಿದು, ಈಗ ಮವಾಳರ ರಾಷ್ಟ್ರೀಯ ಸಂಯುಕ್ತ ಮಂಡಲವನ್ನು ಸೇರಿಕೊಂಡು, ಆ ಸಭೆಯನ್ನು ಕರೆಯುವ ಒಬ್ಬ ಮೆಂಬರರಾಗಿದ್ದಾರೆ. ಇವರ ತತ್ವಾಭಿಮಾನ ನೋಡಲು ಬಹಳ ... ಕಾಂಗ್ರೆಸ ಸಭೆ ಬಿಟ್ಟು ಹೋಗುವದಿಲ್ಲ. ಆದರಲ್ಲಿಯೇ ಇದ್ದು ಒಡುರುತವನ್ನು ದಿಕ್ಕೊಳ್ಳುವವರೆಂದೇ ಇವರ ಪ್ರತಿಷ್ಠೆಯು, ಆ ಪ್ರತಿಷ್ಠೆಯು ಉತ್ತರ ಗುಜರಾತಿನಂತೆ ಸಭ್ಯದಲ್ಲಿ ಪರಿಣಮಿಸಿತು. ಈ ಪ್ರಕಾರ ಮವಾಳ, ಅನಿಬಿಝೆಂಟ, ಮತ್ತು ಪ್ರತಿಯೋಗಿ ಸಹಕಾರಿಗಳ ತ್ರಿಕೂಟದ ಪರಿಷತ್ತು ಕೂಡಿ, ಆದಷ್ಟು ಬೇಗನೆ ಸ್ವರಾಜ್ಯ ಸಂಪಾದಿಸುವ ದಿವ್ಯ ಮಾರ್ಗ ಮಾಡಲ್ಪಡುವದು. ಇವರು ಹೇಳುವದು ರಾಷ್ಟ್ರೀಯ ಸಂಯುಕ್ತ ಮಂಡಲ. ಆಶಿಸುವದು ಸ್ವರಾಜ್ಯ. ಆದರೆ ಕಾಂಗ್ರೆಸದಂಥ ಜಗನ್ಮಾನ್ಯವಾದ ರಾಜಕೀಯ ಸಂಸ್ಥೆಯನ್ನು ಹೊರತು ಪಡಿಸಿ, ಇವರ ಪರಿಷತ್ತು ಹೇಗೆ ರಾಷ್ಟ್ರೀಯವಾಗುವದು? ... ಸ್ವರಾಜ್ಯ ದೊರಕುವದು? ಎಂಬ ಪ್ರಶ್ನೆಗಳು ಸಹಜವಾಗಿ ಹೊರಡುತ್ತವೆ. ಕಾಂಗ್ರೆಸ ಸಭೆಯನ್ನು ಬಿಟ್ಟರೂ, ಪಂಡಿತ ಮಾಲವಿಯಾ ಎಂಬ ಮೂರನೆಯದೊಂದು ಪಂಥವು ಪ್ರಕಟವಾಗುತ್ತಲಿದೆ. ಇದರ ಧ್ಯೇಯ ಬೇರೆ; ರಾಷ್ಟ್ರೀಯ ಸಂಯುಕ್ತ ಮಂಡಲದ ಧ್ಯೇಯ ಬೇರೆ, ಹೀಗಾಗಿ ರಾಜಕೀಯ ವಿಚಾರದಲ್ಲಿ ಹಿಂದುಸ್ಥಾನದ ಏಕಮತವಾಗಬೇಕೆಂಬ ಉದ್ದೇಶ ಮತ್ತು ಅದಕ್ಕಾಗಿ ಮಾಡತಕ್ಕ ಯೋಗ್ಯ ಪ್ರಯತ್ನದ ದಾರಿಯು ಮತ್ತಿಷ್ಟು ಬಿಡಕು ಹುಟ್ಟಲಿಕ್ಕೆ ನಿಮಿತ್ತವಾಗಿ, ಅಸೆಂಬ್ಲಿ ಅಥವಾ ಕೌನ್ಸಿಲಗಳು ಹನ್ನೆರಡು ಮಂದಿ ಹವಾಲದಾರರ ಮಬಲಿನವಾಗುವದೆಂದು ಶಾನಾಗಿ ಧ್ವನಿತವಾಗುತ್ತದೆ. ಜಾತಿಗಳಲ್ಲಿ ಐಕ್ಯ ಮಾಡಿ ಜಾತಿಭೇದ ಕಡಿಮೆ ಮಾಡತಕ್ಕವನು ಹೊಸದೊಂದು ಜಾತಿಯ ನಿರ್ಮಾಣ ಮಾಡುತ್ತಾ ಬಂದ ಬಂದ ಹಾಗೆ, ಹಿಂದುಸ್ಥಾನದಲ್ಲಿ ಊರೂರಿಗೆ ಹೊಸ, ಹೊಸ ಜಾತಿ ಪಂಥಗಳಾಗಿರುತ್ತವೆ. ಅದೇ ಪ್ರಕಾರ ರಾಜಕೀಯ ಮಂಡಲಿಗಳ ಕರ್ಮ ಗತಿಯಾಗಿರುತ್ತದೆ. ಇದರ ಪರಿಣಾಮವನ್ನು ಗುಜರಾತಿ ಕಲ್ಲು ಬೊಕ್ಕತರಾಗುವದೇ ಸರಿ.

ಲಾರ್ಡ ರೀಡಿಂಗಸಾಹೇಬರ ಪ್ರಯಾಣವು.

ಲಾರ್ಡ ರೀಡಿಂಗಸಾಹೇಬರು ಇಂದಿನ ದಿವಸ ವಿಲಾಯತಿಗೆ ದಾರೀ ಹಿಡಿಯುವರು. ಬಾದಶಾಹಿ ಸಂಭ್ರಮದಿಂದ ಇವರನ್ನು ಮೆರೆಸುತ್ತಾ ಬಂದರಕ್ಕೆ ಕಳಿಸುವರು. ಮತ್ತು ಬಹುಮಾನ ಸೂಚಕವಾಗಿ ತೋಫುಗಳು ಹಾರುವವು. ಸಾಮಾನ್ಯ ಜನ ಸಮೂಹಕ್ಕೆ ನೇತ್ರಾನಂದಕರವಾದ ನೋಟವಾಗುವದು. ಲಾರ್ಡ ಸಾಹೇಬರ ಆಗಮನದ ನಂತರ ಪ್ರಿನ್ಸ ಆಫ ವೆಲ್ಸರ ಆಗಮನ ಮಾಡಿದಾಗ ಹರತಾಳವಾಯಿತು. ಆಗಿನಂಥ ಪ್ರಸಂಗವು ಈಗಿರದ್ದರಿಂದ, ದಂಡು ಮತ್ತು ಬ್ಯಾಂಡಿನ ಸಂಭ್ರಮದಿಂದ ಆಗುವ ಮೆರವಣಿಗೆ ನೋಡುವದಕ್ಕೆ ಕೂಡುವ ಅಲ್ಪ ಜನತೆಯನ್ನು ಕಂಡು, ತಮ್ಮ ಆಡಳಿತೆಯು ಲೋಕಪ್ರಿಯವಾಯಿತೆಂದು ಸಾಹೇಬರು ತಿಳಿಯುವದು ಪೂರಾ ತಪ್ಪು. ದಾತಿಯಾ ಎಂಬ ಸಂಸ್ಥಾನದ ಅರಸರು ಸಾಹೇಬರ ಪುತ್ಥಳಿಯನ್ನು ಮಾಡಿಸಿ, ದಿಲ್ಲಿಯಲ್ಲಿಡಲಿಕ್ಕೆ ಹತ್ತು ಸಾವಿರ ದ್ರವ್ಯ ಕೊಡಲೊಪ್ಪಿದ್ದಾರೆ. ಇಷ್ಟರ ಮಟ್ಟಿಗೆ ಈ ಪುತ್ಥಳಿಯೂ ಲೋಕಪ್ರಿಯದ ಲಕ್ಷಣವೆಂದೆಂದೂ ತಿಳಿಯಕೂಡದು. ದೊರೆಗಳು ಹಾಗೆ ಲೋಕಪ್ರಿಯರಾಗಿದ್ದರೆ ಪ್ರಮುಖ ಜನರು ಸ್ಮಾರಕ ಫಂಡು ಕೂಡಿಸುತ್ತಿದ್ದರು. ಲಾರ್ಡ ಹಾರ್ಡಿಂಜರಂಥವರ ಸ್ಮಾರಕ ಫಂಡು ಆಗಿದೆ. ಆದರೆ ಇವರ ಸ್ಮಾರಕ ಫಂಡಿನ ವಿಚಾರವೇ ಹೊರಡಲಿಲ್ಲ. ಇದೊಂದೇ ಸಂಗತಿಯಿಂದ ಇವರ ದೊರೆತನವು ಹಿಂದೀ ಜನರ ದೃಷ್ಟಿಯಿಂದ ಲೋಕಪ್ರಿಯವಾಗಲಿಲ್ಲೆಂದು ಸ್ಪಷ್ಟವಾಗುತ್ತದೆ.

ಲಾರ್ಡ ರೀಡಿಂಗಸಾಹೇಬರು ಹಿಂದೀ ಜನರಿಗೆ ಸ್ವರಾಜ್ಯದ ಆಶೆ ತೋರಿಸಿ, ನಿರಾಶೆ ಮಾಡಿರುತ್ತಾರೆ. ಅಸಹಕಾರದ ಅದ್ಭುತ ಚಳವಳಿಯಲ್ಲಿ ಸಾಹೇಬರು ಮಹಾತ್ಮರ ಕೂಡ ರಾವುಂಡ ಟೇಬಲ ಕಾನ್ಫರನ್ಸ ಕೂಡಿಸಿ, ಸ್ವರಾಜ್ಯ ವಿಷಯವಾಗಿ ವಿಚಾರ ಮಾಡಲು ಸಿದ್ಧರಾಗಿದ್ದರು. ಚವರಿ ಚವರದ ಅನರ್ಥವಾದ ಕೂಡಲೆ, ಮಹಾತ್ಮರ ಅಸಹಕಾರ ಮತ್ತು ಕಾಯದೆ ಭಂಗವನ್ನು ಹಿಂತೆಗೆದುಕೊಳ್ಳೇ ನೆಪವಾಯಿತು. ಸಾಹೇಬರು ನಿಶ್ಚಯದಿಂದ ತಿಳಿಕೊಂಡು ಸ್ವರಾಜ್ಯ- ರಾವುಂಡ ಟೇಬಲ ಕಾನ್ಫರನ್ಸ ಅಥವಾ ಅಸೆಂಬ್ಲಿಯ ಠರಾವು ... ಬಂದರು. ಆಳಿಕೆಯ ಕೊನೆಯ ಕೊನೆಯಲ್ಲಿ ಕೂಡ ವಿಲಕ್ಷಣವಾದ ತರ್ಕಶಾಸ್ತ್ರವನ್ನು ಮುಂದೆ ಚಾಚಿದ್ದಾರೆ. ಈ ಪಮೇಯ ಮತ್ತು ಭಾಷಣಗಳನ್ನು ನೋಡುವದರಿಂದ ಸರಕಾರ ದೃಷ್ಟಿಯಿಂದ ಸ್ವರಾಜ್ಯವೆಂಬುದು ಬಹು ದಿವಸದ ಕನಸೇ ಆಗುತ್ತದೆ.

ಹಿಂದೂ ಮುಸಲಮಾನರೆಲ್ಲರು ಒಂದಾಗಿ, ಉಳಿದ ಉಪಜಾತಿಗಳನ್ನು ಸಮಾಧಾನ ಪಡಿಸಿ, ಸರ್ವಾನುಮತದ ಬಂದರೆ ಆ ಬಗ್ಗೆ ವಿಚಾರ ಮಾಡುವೆವೆಂದು ರಾಜ್ಯಕರ್ತರು ಹೇಳುವದಂತೂ ಅಸಂಭವನೀಯವಾದದ್ದು. ಇಂಗ್ಲಂಡದಲ್ಲಿರುವ ಎಲ್ಲ ಬಣಗಳು ಒಂದಾಗುವದು ಶಕ್ಯವಾಗಿರುವಷ್ಟೇ, ಹಿಂದುಸ್ಥಾನದ ಬಣಗಳು ಒಂದಾಗುವದು ಶಕ್ಯವಾಗಿರುತ್ತದೆ. ಪಿಂಡವಿದ್ದಷ್ಟು ಪ್ರಕೃತಿಗಳಿರುವವು. ಪ್ರಕೃತಿಗಳಿದ್ದಷ್ಟು ಮತಗಳಿರುವವು. ಇಂಗ್ಲಂಡದ ದೊರೆತನವು ಬಹುಮತವಾದ ಪಕ್ಷದಿಂದಲೇ ನಡೆಯುವದು. ಅದೇ ಪ್ರಕಾರ ಹಿಂದುಸ್ಥಾನದ ಸೂತ್ರಗಳೂ ಬಹುಮತವಿದ್ದವರ ಐಕ್ಯಮತವಾಗಿ ನಡೆಯಬೇಕಾದುದು ಅವಶ್ಯಕ. ಸರ್ವಸಾಧಾರಣವಾಗಿ ಒಪ್ಪಿಗೆಯಾಗುವಂಥ ತತ್ವವನ್ನು ಅಲ್ಲಗಳೆದು, ಎಲ್ಲರೂ ಒಂದಾಗಿ ನಮ್ಮೆಡೆಗೆ ಬನ್ನಿರೆಂದು ಹೇಳುವದು ಕಪ್ಪೆಯ ತಕತ ಮಾಡಿದಂತಾಗುತ್ತದೆ. ತಮ್ಮ ಮೇಲಿನ ದೋಷ ತಪ್ಪಿಸಿಕೊಳುವದಕ್ಕಾಗಿ ರಾಜ್ಯಕರ್ತರು ಇಂಥ ಅಸಂಭವನೀಯ ಪ್ರಶ್ನೆ ಮಾಡಿದ್ದಾರೆ. ಇಂಥ ಆಗದ ಕವಡಿಗಂಟೆ ಮಾತಿನಿಂದಲೇ ದೊರೆತನವು ಅಪ್ರಿಯವಾಗುತ್ತದೆ. ಈ ಅಪ್ರೀತಿಯನ್ನು ಲಾರ್ಡ ರೀಡಿಂಗಸಾಹೇಬರು ತಮ್ಮ ಮಟ್ಟಿಗೆ ಪೂರಾ ಕಟ್ಟಿಕೊಂಡರೆಂದು ಹಿಂದ ದೇವಿಯು ಸಾರಿ ಹೇಳುತ್ತಿದ್ದಾಳೆ.

ಹನುಮಂತದೇವರು ಹಗ್ಗ ತಿಂಬುವಾಗ ಪೂಜಾರಿ ಶಾವಿಗಿ ಬೇಡಿದಾ.

ಗದಗ ಕೋ. ಆಪರೇಟಿವ್ಹ ಕಾಟನ್ ಸೇಲ ಸೊಸಾಯಿಟಿಯು ಅಷ್ಟಂತ ಪತ್ತಿಯು ಖರಾದ ಮತ್ತು ದಲಾಲರ ಸಂಘದ ಅಷ್ಟಂತ ಹತ್ತಿಯು ಖರಾದ.

ಇವುಗಳಲ್ಲಿ ಕೆಳಗಿನಂತೆ ಧಾರಣೆ ಆಯಿತು.

ಕೋ. ಸೇಲ ಸೊಸಾಯಿಟಿ ಅಷ್ಟಂಡ ಪತ್ತಿ ಖರಾದ

ಕ್ಲಾಸ	ಉತಾರ	ಧಾರಣೆ
	[illegible]	
ಸ್ಪೇಶಲ ಕ್ಲಾಸ	[illegible]	[illegible]
೧	[illegible]	[illegible]
೨	[illegible]	[illegible]
೩	[illegible]	[illegible]

ದಲಾಲ ಸಂಘದ ಅಷ್ಟಂಡ ಪತ್ತಿ ಖರಾದ

ಕ್ಲಾಸ	ಉತಾರ	ಧಾರಣೆ
	[illegible]	
ಸ್ಪೇಶಲ ಕ್ಲಾಸ	[illegible]	[illegible]
೧ ಬಿ	[illegible]	[illegible]
೨	[illegible]	[illegible]
೧ ಬಿ	[illegible]	[illegible]
೩	[illegible]	[illegible]

ಈ ಎರಡೂ ಸಂಘಗಳ ಖರಾದುಗಳಲ್ಲಿ ಒಂದ ಧಾರಣೆಯನ್ನು ನೋಡಿದರೆ [illegible]

[illegible]

ಮಾರ್ಮಿಕ ವಿಷಯವು

[illegible]



ಪ್ರಾಣಸಂರಕ್ಷಣ

ಅಥವಾ

ಘಾಯದ ಮೇಲಿನ ಮಲಮು

[illegible]

ವ್ಯಾಕುಳಮಾನಾಣದ ಪಲಾಯನ—

[illegible]

ವಿಜಯದ ಅನ್ನದಲ್ಲಿ ಕಲ್ಲು.

[illegible]

ಸದ್ಧರ್ಮ ಕ್ಷಾಂತಿ.

[illegible]

ಪಕ್ಕಾರ ತಕ್ಕವೇ!-

[illegible]

ಪ್ರಕೃತ ನಾಡವರಿಗೆ ಅಭಿನಂದನ.-

[illegible]

ವಿಜಯದ ವರ್ಗಣೀದಾರರು

[illegible]

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ಪವಿತ್ರ ಸಂಸಾರ	೫
ಲೋ. ಟಿಳಕರ ಚರಿತ್ರ	೪
ದೇಶಬಂಧು ದಾಸರ ಚರಿತ್ರೆ	೩
ಲೋಕಮಾನ್ಯರ ಸಂದೇಶಗಳು	೧

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ [illegible] ರೂಪಾಯಿಗೆ ಕೊಡುವೆವು. [illegible]

ವ್ಯವಸ್ಥಾಪಕರು ವಿಜಯ ಪುಸ್ತಕಾಲಯ

ಧಾರವಾಡ.

ಅತ್ಯದ್ಭುತ!! ಅಮೇರಿಕಾಖಂಡದ ಅತ್ಯದ್ಭುತ!!

ಪ್ರಸಿದ್ಧ ಡಾಕ್ಟರರು ಕಂಡು ಹಿಡಿದ ಸಿದ್ಧೌಷಧ

ಸರ್ವರೋಗ ನಿವಾರಣೆಗಾಗಿ ಸಂಜೀವನೌಷಧವನ್ನು ಕಂಡು ಹಿಡಿಯುವ ಸಲುವಾಗಿ ಅಮೇರಿಕಾಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ವ್ಯಯ ಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲೆಕ್ಜಿರ್ ಆಫ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು. ಅನುಪಾನ ಭೇದದಿಂದ ಅನೇಕ ರೋಗಗಳಿಗೆ ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಬೇನೆ ಅಥವಾ ಶೂಲೆ, ವಾಂತಿ, ಅತಿಸಾರ, ವಾಂತಿ ಭೇದಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ, ಜ್ವರ, ... ಕಣ್ಣು ಮತ್ತು ಕಿವಿ ನೋವು, ... ಸ್ತ್ರೀವ್ಯಾಧಿ ... ಇನ್‌ಫ್ಲೂಯಂಜ, ... ಕಾಲ್ರಾ, ... ವಿಷ ಜಂತುಗಳ ಕಡಿತ ... ಗಳಿಗೆ ಜೀವನಾಧಾರವನ್ನು ಕೊಟ್ಟು ಗುಣಪಡಿಸಿದ್ದಾನೆ. ... ರೋಗ ... ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಬರುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಶೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತಿರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ ಜೀವನಾಧಾರವೆಂಬ ಡಾಕ್ಟರರಿಗೆ ಕೊಡಬೇಕಾಗಿದ್ದಿಲ್ಲ. ಶೀಸೆ ಒಂದಕ್ಕೆ ೧-೪-೦ ಟಪಾಲು ಖರ್ಚು ಪ್ರತ್ಯೇಕ ... ಬೇಕಾದಲ್ಲಿ ...

ಜೀವನಾಧಾರ ಡಿಪೋ,
ಮೈಸೂರು.
ಬ್ರಾಂಚ:— ಜೀವನಾಧಾರ ಡಿಪೋ,
ಹುಬ್ಬಳ್ಳಿ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:- ಮುಂಜಾನೆ ೧೦ ರಿಂದ ಮಧ್ಯಾಹ್ನ ೩ ... ೧೦ ರಿಂದ ... ಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುತಕ್ಕ ವ್ಯವಹಾರಗಳು.

ಚಾಲೂ ಖಾತೆಗಳು- ಪುಕ್ಕಟೆಯಾಗಿ ತೆಗೆಯಲಡುವವು.

ಮುದ್ದತೀ ಠೇವುಗಳು- ಬಡ್ಡಿಯದರದಿಂದ ತೆಗೆದುಕೊಳ್ಳಲ್ಪಡುವವು.

ಸೇವ್ಹಿಂಗ ಬ್ಯಾಂಕ- ಪುಗಳು ತೆಗೆದುಕೊಳ್ಳಲ್ಪಡುವವು ... ದರ ... ರೂ.

ಸವಕಾರೀ ಹಾಗೂ ಇತರ ಕಾಗದಗಳು.

ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ತೊಡಕೊಳ್ಳುವದನ್ನು ಒಡಗಿಸಿಕೊಡುವದಾಗ್ಗಿ ಬರುವದು. ಬಡ್ಡಿ ಹಾಗೂ ಸಹ ... ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು ಇಲ್ಲವೆ ತಿಳಿಸಿದಲ್ಲಿ ... ಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೋಖಡಾ ಉದಾರಿ ಕೊಡಲ್ಪಡುವವು. ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚೆಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಾವದರಲ್ಲಿ ಬರುವದು. ದರ ಹಾಗೂ ನಿಯಮ ... ಗಳೂ, ಮೊಬದಲ್ಲಾರ ಪತ್ರಗಳೂ ಸಹ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಆರ್, ಎ, ಒಡ್ಸ.
ತಾ|| ೨೩ ಆ-೩೬ ಬ್ರ್ಯಾಂಚ ಏಜಂಟ

ಆಯೌಷಧಿ ಕಾರಖಾನಾ ಕಿತ್ತೂರ.

ಮನ್ಮಥ ... ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಹಾಸವಾಗಿ ... ೩೦ ಗುಳಿಗೆಗಳಿಗೆ ೧ ರೂ. ೧೦ ಕ್ಕೆ ೪ ರೂ.

ಹುರುಕಿನ ಔಷಧ- ಟೀಟು ೧ ಕ್ಕೆ ೧ ಆಣೆ ೧೦೦ ಕ್ಕೆ ೩ ರೂ ೮ ಆಣೆ.

ಕಣ್ಣಿನ ಔಷಧ- ಟೀಟು ೧ ಕ್ಕೆ ೩ ಪೈ ೧೦೦ ೧ ರೂ.

ಹೇನಿನ ಔಷಧ- ಟೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೩ ರೂ.

ಜ್ವರದ ಗುಳಿಗೆ- ಈ ಗುಳಿಗೆಗಳು ಮೊಸಿಕ ಜ್ವರ, ಮಲೇರಿಯಾ, ಇನ್‌ಫ್ಲ್ಯುಯೆಂಝಾ, ಸನ್ನಿಪಾತ, ಮೊಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುವವು ಮತ್ತು ಪ್ರವಾಸಕರಿಗೆ ಉಪಯುಕ್ತವಾದವುಗಳಿರುತ್ತವೆ. ೪೦ ಕ್ಕೆ ೧ ರೂ. ೧೦೦ಕ್ಕೆ ೬ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಪಶುಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯೌಷಧಿ ಕಾರಖಾನಾ, ಪ್ರೋ. ಕಿತ್ತೂರ ಜಿಲ್ಹಾ ಬೆಳಗಾವ

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೮-೦ ಆಗಾಯಿತು ... ಪರಿಮಳ ... ಬೆಲ್ಲಾ, ಮಲ್ಲಿಗೆ, ಭೃಂಗಾಮಲಕ ತೈಲ, ದಶಾಂಗ, ಜವಾದಿ ಮುಂತಾದ ಸುಗಂಧ ದ್ರವ್ಯಗಳು ಸುಭದ್ರಯುಕ್ತ ... ಬೇಕಾದವರು ನಮಗೆ ಆರ್ಡರ ಕೊಟ್ಟು ... ಪಡೆಯಬಹುದು.

ಟಿ. ಎಲ್. ಉಪಾಧ್ಯಾಯ ಆಂಡ ಸನ
ಸುಗಂಧಾಧೀಶರ ಮೈಸೂರ

ಕಿರ್ಲೋಸ್ಕರ ಸನ್ಸ ಕಂಪನಿ ಇವರ

೩, ೪, ೬, ೮, ಎತ್ತಿನ ೪ ಪ್ರಕಾರದ

ಪತನದಾರ ರೆಂಟಿಗಳು



ಹೆಚ್ಚಿನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ

ಕಿರ್ಲೋಸ್ಕರ ಸನ್ಸ ಕಂಪನಿ
ಕಲ್ಲಿ, ಧಾರವಾಡ

... ಮನುಷ್ಯನ ಪ್ರಾಣರಕ್ಷಣವು ... ದಿಂದಾಗುತ್ತದೆ ಅಂದಮೇಲೆ ಪಶುಗಳ ಪ್ರಾಣರಕ್ಷಣದ ಭಾರವು ಮನುಷ್ಯನ ಮೇಲೆ ಇರುತ್ತದೆ. ಈ ಸಂಗತಿಯನ್ನು ವಿಚಾರ ಮಾಡಿ ಪಶು ವೈದ್ಯಕ ಪ್ರದರ್ಶನದಲ್ಲಿ ಸರ್ಟಿಫಿಕೇಟು ಪಡೆದ ಮತ್ತು ರಾಣೀ ಬಿನ್ನೂರ ಒಕ್ಕಲತನದ ವಸ್ತುಗಳ ಪ್ರದರ್ಶನದಲ್ಲಿ ಪಾಸು ಸರಕಾರೀ ದನಗಳ ಆಸ್ಪತ್ರೆಗಳ ಡಾಕ್ಟರರಿಂದಲೂ ಅನೇಕ ಸದ್ಗೃಹಸ್ಥರಿಂದಲೂ ಸರ್ಟಿಫಿಕೇಟುಗಳನ್ನೂ ಅನೇಕ ಬೆಳ್ಳಿ ಭಂಗಾರದ ಪದಕಗಳನ್ನೂ ಸಂಪಾದಿಸಿದ

ಡಾ. ಎಸ. ಆರ. ಕಿತ್ತೂರ ಇವರ

ಪಶುಸಂಜೀವಿನಿ.

ಔಷಧವನ್ನು ದನದ ... ಕ್ಕೆ ಇಡುವದು ಪ್ರತಿಯೊಬ್ಬನ ಧರ್ಮವಾಗಿದೆ. ಹೊಟ್ಟೆ ಬೇನೆ Rinderpest ಗಂಟಲರೋಗ, ಕಾಲುಬೇನೆ ಬಾಯಿಬೇನೆ, ಕುಂದುರೋಗ ಮೊದಲಾದ ಎಲ್ಲ ಪ್ರಕಾರದ ಪಶು ರೋಗಗಳ ಮೇಲೆ ಇದು ರಾಮಬಾಣ ಉಪಾಯವಾಗಿರುವದೆಂದು ... ವರ್ಷ ಅನುಭವದಿಂದ ಸಿದ್ಧವಾಗಿರುತ್ತದೆ. ಕಾರಣ ಇದಕ್ಕೆ ಹೆಚ್ಚು ಬರೆಯುವ ಕಾರಣವೇ ಇಲ್ಲ. ... ಆಣೆ ... ಟಿಕೀಟು ... ನಮ್ಮ ಪಶು ಸಂಜೀವಿನಿ ಪತ್ರಿಕೆಯನ್ನು ಪುಕ್ಕಟೆಯಾಗಿ ತರಿಸಿಕೊಂಡಲ್ಲಿ ವಿಸ್ತಾರ ಮಾಹಿತಿ ದೊರೆಯುವದು. ಬೆಲೆ ೧ ಡಬ್ಬಿಗೆ ೧ ರೂಪಾಯಿ ಟಪಾಲ ಖರ್ಚ ಬೇರೆ

ಶಾಖೆ ... | ಶಾಂತವೀರಸ್ವಾಮಿ ಕಟ್ಟೀಮಠ ಕಿತ್ತೂರ.]
... ಧಾರವಾಡ | " ... " ಬೋಧಕ ಧಾರವಾಡ

ಸರಕಾರದಲ್ಲಿ ರಜಿಸ್ಟರ್ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ರಕ್ತಶುದ್ಧಿ! ದ್ರಾಕ್ಷಾರ್ಕಮಧು ಧಾತುವರ್ಧಕ!

... ವಾಗಿಯೂ ... ಕರವಾಗಿಯೂ ಇರುತ್ತದೆ ಈ ಮಧುವಿನ ಸೇವನದಿಂದ ... ವಿಕಾರದಿಂದಾದ ಬೇನೆಯು ಹೋಗುವದು. ... ಪ್ರವರ್ಧಮಾನವಾಗುವದು. ... ಅನುಭವಕ್ಕೆ ಬರುವದು ... ಶಕ್ತಿಯು ಹೋಗಿ ... ನಪುಂಸಕತ್ವವು ... ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ... ದುರ್ಬಲತೆ ನಿರೋಗವಾಗುವದು. ... ಗುಣಬರುವದು ... ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ... ರೋಗ, ಉದರರೋಗ, ದಮು ... ನಾಶವಾಗುವವು. ... ಊಟ ಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ... ಆಗುವದು. ... ಈ ಔಷಧಕ್ಕೆ ಪಥ್ಯವಿಲ್ಲ ... ೧೦ ದಿವಸ ಸಾಲುವ ಒಂದು ಬಾಟಲಿಯಿಂದ ... ಒಂದು ಬಾಟಲಿಯ ಕಿಮ್ಮತ್ತು ೧—೪—೦, ... ಬಾಟಲಿಯ ಕಿಮ್ಮತ್ತು ... ಮೂರು ಬಾಟಲಿ ... ಒಂದೇ ... ಟಪಾಲ ಖರ್ಚ ಹೆಚ್ಚು ... ಬಾಟಲಿಗಳ ಕಿಮ್ಮತ್ತು ... ಏಜಂಟರ ಕಡೆಯಿಂದ ... ೧—೪—೦; ... ೧—೦—೦; ... ೩—೮—೦;

ಮ್ಯಾನೇಜರ ದ್ರಾಕ್ಷಾರ್ಕಮಧು ಆಫೀಸು, ಪೋ. ಹಿಪ್ಪರಗಿ ಜಿ. ಬೆಳಗಾವ

ಅಪೂರ್ವ ಗ್ರಂಥವು!! ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ ಚಂದಾದಾರರಾಗಿರಿ!!!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ೬೪೩ ರ ವರೆಗೆ

ಆಕಾರ ಕ್ರೌನ ಷೋಡಶಪತ್ರಿ. ಪುಟ ಸಂಖ್ಯೆ ಸುಮಾರು ೨೬೫.

ಮುದ್ದಾದ ಮುದ್ರಣ ೧೬ ಅಪೂರ್ವವಾದ ಚಿತ್ರಗಳು.

ಬರೆದವರು:— ರಾಮಚಂದ್ರ ವಾಸುದೇವ ದೇಶಪಾಂಡೆ ಎಮ್. ಎ.

ಈ ಅತ್ಯಮೂಲ್ಯವಾದ ಮಹತ್ವದ ಗ್ರಂಥವನ್ನು ಪ್ರಖ್ಯಾತ ವಿಮರ್ಶನ ವಿಚಕ್ಷಣ ಡಾ. ನರಸಿಂಹಾಚಾರ್ಯರೂ ಹಾ, ಕೃಷ್ಣಶಾಸ್ತ್ರಿಗಳೂ ನೋಡಿ ... ಇದು ಈಗ ಅಚ್ಚಾಗುತ್ತಿದು ಮುಂದಿನ ಜೂನ ... ಟಕ್ಕೆ ಸಿದ್ಧವಾಗುವದು. ... ವಿವರ:—

	ರೂ. ಆ ಪೈ.
೧ ಶ್ರೀ. ವಿದ್ಯಾರಣ್ಯ ಪುಸ್ತಕ ಮಾಲೆಯ ಚಂದಾದಾರರಿಗೆ	೧—೪—೦
೨ ಮುಂಗಡವಾಗಿ ಹಣ ಕಳಿಸುವವರಿಗೆ	೧—೬—೦
೩ ಮೇಲ್ಕಂಡ ಅವಧಿಯಲ್ಲಿ ವ್ಹಿ. ಪಿ ಯಿಂದ ಬೇಡುವವರಿಗೆ	೧—೭—೦

ಚಂದೇನೆಷ್ಟು ೬ ಆಣೆ ಪ್ರತ್ಯೇಕ. ಸ್ವಲ್ಪೇ ಪ್ರತಿಗಳನ್ನು ಮುದ್ರಿಸುವದರಿಂದ ಗ್ರಾಹಕರು ಶ್ರೀಘ್ರ ... ಬೇಕು. ... ಹೊಸದಾಗಿ ಚಂದಾದಾರರಾಗಲಿಚ್ಛಿಸುವವರು ೮ ಆಣೆ ಪ್ರವೇಶ ಫೀಯನ್ನು ... ಟಿಕೀಟು ರೂಪದಿಂದ ಕಳಿಸಿ ಬರೆಯತಕ್ಕದ್ದು.

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾದಂಬರಿ ಸಹ) ... ಚಿತ್ರಗಳೂ ಬರವಣಿಗೆಗಳೂ ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ
ಮಾಳಮಡ್ಡಿ ಧಾರವಾಡ. ಆಡಳಿತಗಾರ

ದಿ ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ

೧೯೧೩ ಇಸ್ವಿಯ ಕಂಪನಿ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ರ, ಹುಂಡಿ, ಮುಂತಾದ ವ್ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ಸಮಕ್ಷ ತಿಳಿದುಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ಘಂಟೆ ೧೦-೩೦ ಸಾಯಂಕಾಲ ೩ರಿಂದ ೬ ರವರೆಗೆ ನಡೆಯುವದು

K. B. ANKALIGI.

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡಿನ ೧೯೩೭-೩೮ ಸಾಲಿನ ಅಂದಾಜ ಪತ್ರಿಕೆಯು.

—ಜಮೆ—

ಧಾರವಾಡ ಜಿಲ್ಹೆಯ ಆಣೆ ಪಟ್ಟಿಯ ಅಜಮಾಸ ವಸೂಲ ರೂ|| ೨,೨೩,೫೦೦ ಇದ್ದು ಇದರ ಪೈಕಿ ೧/೩ ಶಿಕ್ಷಣದ ದಸಿಂದಾ ತೆಗೆದಿಟ್ಟಲ್ಪಡುತ್ತದೆ. ಉಳಿದ ೨/೩ದ ಪೈಕಿ ೧/೩ ತಾಲೂಕ ಲೋಕಲಬೋರ್ಡುಗಳಿಗೆ ಹಂಚಲ್ಪಟ್ಟು ಬಾಕಿ ಉಳಿದ ೨/೩ ಅಂದ್ರೆ ಪಟ್ಟಿ ವಸೂಲಿಯ ४/೯ ರಕಮನ್ನು ಡಿ|| ಲೋ|| ಬೋರ್ಡಿನ ಖರ್ಚಿಗೆ ಇಟ್ಟುಕೊಳ್ಳಲ್ಪಡುತ್ತದೆ. ಇಂಥ ४/೯ ಉತ್ಪನ್ನವೇ ಕೆಳಗೆ ತೋರಿಸಿದ ರೂ|| ೯೬,೯೩४ ಇರುತ್ತದೆ.

ಜಮಾ—

೧ ತಾ|| ೧-४-೩೬ ದಿವಸ ಆರಂಭದ ಶಿಲ್ಕು ರೂ. ೧೩೩೦೬

೨ ಲೋಕಲಫಂಡ ಆಣೆಪಟ್ಟಿ ರೂ ೯೬೯೩४.

೩ ಅಬಕಾರಿ ಉತ್ಪನ್ನದ ಆಣೆ ಪಟ್ಟಿರೂ. ೧೦४೩೮

४ ಲೋಕಲ ಫಂಡ ರಸ್ತೆಗಳ ಮೇಲಿನ ಬಿಡಾರ ಮತ್ತು ಹಗೋಲು ಉತ್ಪನ್ನ ರೂ. ४೦,೦೦೦

೫ ಡಿ|| ಲೋ|| ಬೋರ್ಡಿನ ಶಾಲೆ ನಂ ೧೫ ದ ದಸಿಂದಾ ಸರಕಾರದವರು ಕೊಡುವ ರಕಮು ರೂ. ೫೨೦೦

೬ ಬೋರ್ಡಿನ ಇಂಜಿನೀಯರ ಪಗಾರದ ದಸಿಂದ ಸರದ ರೂ. ३೦೦೦

೭ ಸಾರ್ವಜನಿಕ ಕೆಲಸಕ್ಕೆ ಜನರಿಂದಾ ವರ್ಗಣಿ ಬರುವದಾದ ರಕಮು ರೂ. ೧೨೦೦

೮ ಕಲ್ಲು ಮಣ್ಣಿನ ಫೀ ರೂ ೧೫೮೦

೯ ಕೊಂಡವಾಡ ವುತ್ಪನ್ನ ರೂ. ೮೦೦೦

೧೦ ಮ್ಯಲಿ ತೆಗೆಯುವದರ ದಸಿಂದಾ ಮ್ಯನಿಸಿಪಾಲ್ಟಿಯಿಂದ ಲೋಕಲ ಬೋರ್ಡಿಗೆ ಬರುವ ವರ್ಗಣಿ ರೂ. ३४೮

೧೧ ಕೀರಕೋಳ ಉತ್ಪನ್ನ ರೂ. ೧೬೫೧

೧೨ ಲೋ|| ಬೋ|| ರಸ್ತೆಗಳನ್ನು ದುರಸ್ತಿಮಾಡುವುದಕ್ಕೆ ಸರಕಾರದವರಿಂದಾ ಸಿಗಬಹುದಾದ ಮದತ (ಗ್ರ್ಯಾಂಟು) ರೂ. ೧೧೦೨೦೦

ಒಂಟು ಒಟ್ಟು ಜಮಾ ರೂ. ३,೦೯,೦೬೬

ಖರ್ಚು—

೧ ಆರೋಗ್ಯ ರಕ್ಷಣೆ ಬಗ್ಗೆ ಖರ್ಚು ರೂ. ೨೦೮೧೫

೨ ಮನುಷ್ಯರ ದವಾಖಾನೆಗಳು ೬ ರೂ. ೧೦೬೨೦

೩ ಪ್ಲೇಗ ಪ್ರತಿಬಂಧಕ ಉಪಾಯಗಳು ರೂ ३೦೦೦

४ ಮುನಸಿಪಾಲ್ಟಿ ದವಾಖಾನೆಗಳಿಗೆ ದೇಣಗಿ ರೂ ३೦೨೦

೫ ಧಾರವಾಡ ಸಿವ್ಹಿಲ್ಲ ಹಾಸಪಿಟಲ್ಲದಲ್ಲಿಯ ಲೋ|| ಬೋ|| ನರ್ಸ ನ ಕಂಪೌಂಡರ ಪಗಾರ ರೂ ೧೧೬೫

೬ ರಾಣೆಬೆನ್ನೂರ ನರ್ಸಿನ ಪಗಾರಕ್ಕೆ ವರ್ಗಣಿ ३೦೦

ಸಾರ್ವಜನಿಕ ಸಂಸ್ಥೆಗಳಿಗೆ ವರ್ಗಣಿ ರೂ ೨೬೦೦

ಒಂಟು ೨೦೮೧೫

೬ ದನದ ದವಾಖಾನೆಗಳ ಖರ್ಚು ರೂ. ३೯೯३

ಹುಡುಗರ ಮ್ಯಲಿ ವ್ಯಾಕ್ಸಿನೇಟರ ಪಗಾರದ ಮ್ಯಲಿ ರಸದ ಕಿಮ್ಮತ್ತು ರೂ. ೧೬೮೮४

೮ ಡಿ|| ಲೋ|| ಬೋರ್ಡ ಕಛೇರಿ ಚೇರಮನ್ನರ ಕಾರಕೂನ ಸಿಪಾಯಿ ಜನರ ಪಗಾರ ರೂ ೧३२६

೯ ಸದಾ ಟಪಾಲ ಖರ್ಚು, ಛಪಣಾವಳಿ, ಸಾಹಿಲವಾರ ರೂ ೧೬೦೦

೧೦ ಇಂಜನೀಯರ ವ ಆವರ ಡಿಪಾರ್ಟಮೆಂಟ ಜನರ ಪಗಾರ ರೂ ೧೧೦೨೦ ಡಿ|| ಲೋ|| ಬೋರ್ಡ ಕೆಲಸಕ್ಕೆ ಇಟ್ಟಿರುವ ವೋವರ್‌ಸೀಯರ ಪಗಾರೂ. ४೯೬४ ೫ ಮಂದಿ ಮೇಸ್ತ್ರಿ ಕಾರಗಾ ಮತ್ತು ಸ್ಟೀಮ ರೋಡ ರೋಲರ ಯುಸ್ಟಾಬ್ಲಿಷಮೆಂಟದ ಪಗಾರ ರೂ. ೭६३೫

ಒಂಟು ರೂಪಾಯಿ ೭೬४೯

೧೧ ೧೧ ತಾಲ್ಲುಕ ಲೋಕಲಬೋರ್ಡ ಕಾರಕೂನ ವ ಶಿಪಾಯಿ ಜನರ ಪಗಾರ ರೂ. ೯೧೧೫

೧೨ ೧೧ ತಾಲ್ಲುಕ ಸಬ್ ವೋವರ್‌ಸೀಯರ ಪಗಾರ ವ ಭತ್ತೆ ರೂ. ೧३४೬೫

೧३ ಧರ್ಮಶಾಲಾ ಕಾಯುವವರ ಪಗಾರ ರೂ. ४४೫೦

೧४ ಡಿ|| ಲೋ|| ಬೋರ್ಡ ಪ್ರೆಸಿಡೆಂಟ ವ ಮೆಂಬರ ಜನರ ಭತ್ತೆ ರೂ ३೬೦೦

೧೫ ಮುನ್ಸಿಪಾಲ್ಟಿ ಹದ್ದಿಯಲ್ಲಿ ವಸೂಲಾದ ಆಣೆಪಟ್ಟಿ ಪರತ ಕೊಡುವದು ರೂ. ೧೦೦೦

೧೬ ಕೊಂಡವಾಡ ವೋಟಗಿ ವ ದುರಸಿ ರೂ ३೦೦೦

೧೭ ರಿಫಂಡು ರೂ ೧೩೦೦

೧೮ ಶಿಪಾಯರ ಡಗಲಿ, ಪಟ್ಟಿ ರೂ. ೨೦೦

೧೯ ಡಿ|| ಲೋ|| ಬೋರ್ಡ ರಸ್ತೆ ರಿಪೇರಿ ३६೧ ಮೈಲು ೧,೧೦,೦೦೦

ಇಮಾರತು ३३,೦೦೦

ಒಂಟು ೧,३३,೦೦೦

२೦ ಸಲಕೆ ಗುದ್ದಲಿ ರೂ. ೫೦೦೦

२೧ ಕಲ್ಲಿನ ಮೇಲೆ ಬೇಕಾಗುವ ಹಂಗಾಮಿ ನವಕರ ಜನರ ಪಗಾರ ವಗೈರೆ ರೂ ४೦೦೦

२२ ಹೊಸ ಕೆಲಸಗಳ ಪ್ರೊಜೆಕ್ಟ ತಯಾರಿಸಲಿಕ್ಕೆ ರೂ. ೫೦೦

२३ ... ೧೬೧೫३

२४ ... ೫೬३२

ಒಟ್ಟು ಖರ್ಚು ... ೬೬

ಸಿ. ಸಿ. ಹುಲಕೋಟಿ
ಪ್ರೆಸಿಡೆಂಟ
ಡಿ. ಎಲ್. ಬಿ. ಧಾರವಾಡ

ಡಿ. ಲೋ. ಬೋ. ಬೆಳಗಾವ

—೦—

ಸ್ಕೂ. ಬೋ. ಸರ್ಕ್ಯುಲರ ನಂಬರು ३. ಬೆಳಗಾವ ತಾ. ೧೬ ಮಾರ್ಚ ಸನ್ ೧೯३೭

ಸಕ್ತೀಶಿಕ್ಷಣ

ಈ ಸರಕ್ಯೂಲರ ಮೂಲಕ ಬೆಳಗಾವ ಜಿಲ್ಹೆಯೊಳಗಿನ ಎಲ್ಲಾ ಹೆಡಮಾಸ್ತರರಿಗೆ ತಿಳಿಸುವದೇನಂದರೆ —

ಈ ಜಿಲ್ಹೆಯಲ್ಲಿ ಸಕ್ತೀಶಿಕ್ಷಣ ... ಬೇಕಾಗಿದೆ. ... ನಮೂನೆಯಲ್ಲಿ ಬೇಡಿದಂತೆ ಮಾಹಿತಿಯನ್ನು ಬರುವ ಎಪ್ರೇಲ ತಿಂಗಳ ಸತ್ತರೇ ತಾರೀಖಿನೊಳಗಾಗಿ ನಿಮ್ಮ ತಾಲೂಕ ನೋಟ್ಟಂ ಕಡೆಗೆ ಮುಟ್ಟುವಂತೆ ತಪ್ಪದೆ ಕಳಿಸಿಕೊಡತಕ್ಕದ್ದು. ಈ ಮಾಹಿತಿಯು ವ್ಯಕ್ತಿ ನಿಮಗೆ ... ಸಿಗದ ಪಕ್ಷಕ್ಕೆ ಗ್ರಾಮಸ್ಥರ ... ಸಹಾಯದಿಂದ ದೊರಕಿಸಿ ಕಳಿಸಿಕೊಡತಕ್ಕದ್ದು. ಈ ಮಾಹಿತಿಯನ್ನು ದೊರಕಿಸುವ ಕೆಲಸದಲ್ಲಿ ನಿಮಗೆ ಮದತ ಮಾಡುವದರ ದೆಸೆಯಿಂದ ನಿಮ್ಮ ಊರ ಗ್ರಾಮಸ್ಥರಿಗೆ ... ತಾಲೂಕಿನ ... ಕಡೆಯಿಂದ ಬರೆದ ಬರುವದು. ಈ ಮಾಹಿತಿಯು ಬಹಳೇ ಮಹತ್ವದ್ದು ಮತ್ತು ಅತೀ ಜರೂರ ಇರುವದರಿಂದ ವಿಶೇಷ ಕಾಳಜೀಪೂರ್ವಕ ಮೇಲಿನ ಮುದ್ದತಿನೊಳಗಾಗಿ ಮಾಹಿತಿಯನ್ನು ದೊರಕಿಸಿ ನಿಮ್ಮ ತಾಲೂಕ ಮಾಸ್ತರ ಇವರಿಗೆ ಮುಟ್ಟುವಂತೆ ಕಳಿಸಿಕೊಡತಕ್ಕದ್ದು. ಇದರಲ್ಲಿ ಹಯಗಯ ಆದಲ್ಲಿ ಸಕ್ತ ತಜವೀಜ ಮಾಡುವದರಲ್ಲಿ ಬಂದೀತು ತಿಳಿಯುವದು.

ಇತ್ತಕಡೆಯ ಸರ್ಕ್ಯುಲರ ನಂ ३ ನೇದರ

೧೬-३-३७

ಕೆಳಗೆ ಇರುವ ನಮೂನೆಯಲ್ಲಿ ಅ. ಬ. ಕ. ಡ. ಕಾಲಮ್ಮುಗಳಲ್ಲಿ ತೋರಿಸಿದ ಜಾತಿಗಳ ಪೈಕಿ ಕನ್ನಡ ಮರಾಠಿ ಮತ್ತು ಮುಸಲ್ಮಾನಿ, ಅಥವಾ ಉರ್ದು ಇವು ಮಾತೃಭಾಷೆ ಇದ್ದ ೬ ಮತ್ತು ೧೧ ವರ್ಷಗಳ ನಡುವಿನ ವಯಸ್ಸುಳ್ಳ ಗಂಡು ಮತ್ತು ಹೆಣ್ಣು ಹುಡುಗರ ಬೇರೆ ಬೇರೆ ಸಂಖ್ಯೆಯನ್ನು ತೋರಿಸತಕ್ಕದ್ದು. ಇದಕ್ಕಾಗಿ ಈಗ ಕಳಿಸಿದ ನಮೂನೆಯಲ್ಲಿಯೇ ಹೆಚ್ಚಿಗೆ ಕಾಲಮ್ಮುಗಳನ್ನು ಹಾಕಿ ಮಾಹಿತಿಯನ್ನು ಕೊಡತಕ್ಕದ್ದು. ಅ. ಬ. ಕ. ಡ ಕಾಲಮ್ಮುಗಳಲ್ಲಿಯ ಜನಸಂಖ್ಯೆಯನ್ನು ತೋರಿಸುವಾಗ್ಗೆ ಸಹ ಮೇಲೆ ಕಾಣಿಸಿದಂತೆ ಮಾತೃಭಾಷೆಯ ಪ್ರಕಾರ ಜನರ ಸಂಖ್ಯೆಯನ್ನು ಬೇರೆ ಬೇರೆಯಾಗಿ ತೋರಿಸತಕ್ಕದ್ದು.

೨ ಈ ಮಾಹಿತಿಯನ್ನು ನಿಮ್ಮ ಶಾಲೆಗಳಿಗೆ ಸಂಬಂಧಿಸಿದ ಊರುಗಳ ಪೂರ್ತೆ ಮಾತ್ರ ಬೇಕಾಗಿರುತ್ತದೆ.

ಪಿ. ಆರ್. ಚಿಕ್ಕೋಡಿ
ಚೇರಮನ ಸ್ಕೂಲಬೋರ್ಡ
ಜಿಲ್ಹಾ ಲೋಕಲಬೋರ್ಡ ಬೆಳಗಾವ

ಒಕ್ಕಲತನದ ರಾಯಲಕಮೀಶನ
ಹೊಟ್ಟೆ ನೋವಿಗೆ ಗಂಧ ಸವರುವದು.

ಲಾರ್ಡ ಆಯರ್ವಿನಸಾಹೇಬರ ಆಗಮನದ ಕೂಡ ವಿಲಾಯತಿ ಸರಕಾರದವರು ಒಕ್ಕಲತನದ ರಾಯಲ ಕಮೀಶನ ನೇಮಿಸಿದಂತೆ ಜಾಹೀರಪಡಿಸುವನ್ನು ಪ್ರಸಿದ್ಧ ಮಾಡಿದ್ದಾರೆ. ಇದರ ಮೆಂಬರರು.

೧ ಮಾರ್ಕ್ವಿಸ ಆಫ ಲಿನಲಿಥಗೋ.

೨ ಮಿ. ಹ್ಯೂಬರ್ಟ ಕಾಲ್ವರ್ಟ, ರಜಿಸ್ಟ್ರಾರ ಕೋ. ಸೊಸಾಯಟಿ ಪಂಜಾಬ

३ ಪ್ರೊಫೇಸರ ನಾಗೆಂದ್ರನಾಥ ಗಾಂಗೋಲಿ

४ ಡಾಕ್ಟರ ಲೋಧಿ ಕರೀಮ ಹೈದರ, ಎಮ. ಎಲ್. ಎ. ಪ್ರೊಫೇಸರ ಅಲೀಗಡ ಕಾಲೇಜ

೫ ಮಿ. ಬಾಳಕೃಷ್ಣ ಸೀತಾರಾಮ ಕಾಮತ, ಮೆಂಬರ ಬೊಂಬೆ ಲ್ಯಾಜಿಸ್ಲೇಟಿವ ಬೋರ್ಡ

೬ ಸರ ಲಾರೆನ್ಸ ... ಯು

೭ ಸರ ಜೇಮ್ಸ ಮ್ಯಕೆನಾ ಲೇಟ ಡೆಪ್ಯುಟಿಮೆಂಟ ಕಮೀಶನರ ಬಹ್ಮದೇಶ

೮ ಸರ ಥಾಮಸ ಮಿಡಲಮನ ಕಮೀಶನರ ಡೆವ್ಹಲಪಮೆಂಟ ಬೋರ್ಡ ಮತ್ತು ಇಂಪ್ರೂವ್ಹಮೆಂಟ ಫಂಡಿಂಗ ಆಕ್ಟ

೯ ರಾಜಾ ಶ್ರೀಕೃಷ್ಣ ಚಂದ್ರ ಗಜಪತಿ ನಾರಾಯಣ ದೇವಗಾರು ಪಾರ್ಲಕಿಮಿಡಿಯ ಜಮೀನದಾರರು

ಈ ... ಕಮೀಶನ ... ಹಿಂದೂಸ್ಥಾನದಲ್ಲಿ ದೊಡ್ಡ ಜಮೀನದಾರರು ೫೬೨೦೦ ಎಕರೆ ಭೂಮಿಯುಳ್ಳವರು. ಮಹಾಯುದ್ಧದಲ್ಲಿ ಪರಾಕ್ರಮ ತೋರಿಸಿ, ಭಾಪುರೆ ಎನಿಸಿಕೊಂಡವರು. ಇವರ ... ಯುರೋಪಿಯನ ಮೆಂಬರರು ಯಾವ ದರ್ಜೆ ಮತ್ತು ಬುದ್ಧಿಯವರೆಂಬುದು ಅವರ ಮುಂದೆ ಬರೆದ ಒಕ್ಕಣಿಕೆಯಿಂದಲೇ ತಿಳಿಯುತ್ತದೆ. ಕಮೀಶನದಲ್ಲಿ ಐದು ಗೌರಮೆಂಟ್ಯುರು ನಾಲ್ವರು ಹಿಂದೀ ... ರಾಗಿರುವದರಿಂದ, ವಿಶಿಷ್ಟರ ಬಹುಮತ ... ದ ಎಲ್ಲಕ್ಕೂ ಮೊದಲು ಕಂಡುಬರುತ್ತದೆ. ಕೊನೆಯ ಪರಿಣಾಮವು ಮುದಿಮನ ಕಮೀಟಿಯಂತೆ ನಿಸ್ಸಂಶಯವಾಗಿ ಆಗುವದೆಂಬು ಈಗಿನಿಂದಲೇ ಭವಿಷ್ಯ ಹೇಳಬಹುದು. ನಾಲಕಿಮಿಡಿಯ ಮದ್ರಾಸ ಇಲಾಖೆಯುಳ್ಳವು. ರಾಜರು ಜಸಿಸನ ಪಕ್ಷಕ್ಕೆ ಸೇರಿದವರಿದ್ದಾರೆ. ಇದೊಂದೇ ಸಂಗತಿಯಿಂದ ಇವರು ಗೌರ್ನಮೆಂಟಿನ ಕಡೆಗೆ ಒಲಿಯುವರೆಂದು ಧ್ವನಿತವಾಗುತ್ತದೆ. ನೊಲ ಹೇಗೆ ಬಿತ್ತಬೇಕು, ಬೆಳೆ ಹೇಗೆ ತೆಗೆಯಬೇಕೆಂಬ ಕೃಷಿ ವಿಚಾರಗಳ ... ಕೃಷಿಕರ ಹಿತವಾಗುವಂಥ ವಿಚಾರ ಮಾಡಲಿಕ್ಕೆ ಕಮೀಶನಕ್ಕೆ ಅಧಿಕಾರವೇ ಇರುವದಿಲ್ಲ. ಮೇಲಿನ ಪೋಲಿ ... ಬಂಗಾಲದಂತೆ ಭೂಮಿಯ ಕಂದಾಯವನ್ನು ಸ್ಥಿರ ... ಬೇಕೆಂದು ರೈತರ ಮುಖ್ಯ ಬೇಡಿಕೆಯುಂಟು. ಬಹುಕಾಲ ರೈತರ ಹಿತವಾಗುವಂಥ ಆಲೋಚನೆ ಬಿಟ್ಟು ತೋರಿಕೆಯಲ್ಲಿ ಹಿತವೆನಿಸುವಂಥ ವಿಚಾರಗಳಿಂದ ಪ್ರಯೋಜನವೇನು? ಹೊಟ್ಟೆನೋವಿಗೆ ಮೇಲೆ ಗಂಧ ಲೇಪ ಕೊಟ್ಟರೆ ನೋವು ಹೋಗುವದುಂಟೇ?

ಸಾಹುಕಾರರಿಗೆ ದಂಡದ ಜಲೋ ಶಿಕ್ಷೆ ಕೂಡಿತು.

—೦—

ಇಲಿಯ ಪೆಟ್ಟು ಗಣಪತಿಗೆ ಬಡಿಯಿತು

ಮುಂಬಯಿಯಲ್ಲಿ ಶೇಠಜೀವರಂಜವರನ್ನು ಪ್ರತಿವರ್ಷ ಹೊಸದಾಗಿ ನೇಮಿಸುವರು. ಇವರಿಗೆ ಪಟ್ಟಣಶೆಟ್ಟಿ ಎಂದರೂ ಸಲ್ಲುವದು. ಈತನಿಗೆ ಸಂಬಳವಿಲ್ಲದಿದ್ದರೂ ಕಮೀಶನವುಂಟು. ಪ್ರತಿ ತಿಂಗಳು ಮೂರು ನಾಲ್ಕು ಥೈಲಿ ತುಂಬಿಕೊಂಡು ಮನೆಗೆ ಹೋಗುವನು. ಪಟ್ಟಣಶೆಟ್ಟರೆಂದರೆ ಅವರಿಗೆ ಊರು ಬರೆದ ... ಇವರಲ್ಲದೆ, ದಿವಾಣಿ ಕೋರ್ಟುಗಳ ಹುಕುಮುನಾಮೆಗಳನ್ನು ಜಾರಿಯಿಸುವ ಅಧಿಕಾರವೂ ಉಂಟು. ಕೈಕಳಗೆ ಅನೇಕ ಜನ ಬೇಲಿಫರಿದ್ದಾರೆ. ಒಂಭತ್ತು ಸಾವಿರ ರೂಪಾಯಿಗಳ ರಿಕ್ತಿ, ಪಡಸಂಬಂಧ ವಾದಿಯು ಪ್ರತಿವಾದಿಯ ಮೇಲೆ ಹುಕಂಗ ವಾರಂಟು ತೆಗೆಸಿದನು. ಬೇಲೀಫನು ಪ್ರತಿವಾದಿಯನ್ನು ಹಿಡಿದನು. ಈತನನ್ನು ನೇಟಾಗಿ ದಿವಾಣಿ ತುರಂಗಕ್ಕೆ ಕರೆದುಕೊಂಡು ಹೋಗದೆ, ರಾತ್ರಿಯಲ್ಲಿ ಆತನ ಮನೆಗೆ ಕರೆಕೊಂಡು ಹೋದನು. ಪ್ರತಿವಾದಿಯು ಈ ಸಂದು ಸಾಧಿಸಿ, ಗದ್ದ ಹೇಳಿಸಿದನು. ಪ್ರತಿವಾದಿಯನ್ನು ಹಿಡಕೊಟ್ಟಿದ್ದರೂ, ಬೇಲೀಫನ ತಪ್ಪಿನಿಂದ ಆತನು ಪಲಾಯನ ಹೇಳಿಸಿದನು. ಆದ್ದರಿಂದ ಹುಕುಮುನಾಮೆಯು ಹಣವನ್ನು ಶೇರಿಫರಿಂದ ಕೊಡಿಸಬೇಕೆಂದು ವಾದಿಯು ದಾವೇ ತಂದನು. ಶೇರಿಫನು ಸಂಬಳ ತಿನ್ನುವ ಸರಕಾರಿ ನೌಕರನಲ್ಲ. ಬಹುಮಾನದ ದೆಸೆಯಿಂದ ಕೆಲಸ ಮಾಡತಕ್ಕವನು. ಆದುದರಿಂದ ಈತನ ಮೇಲೆ ಡಿಕ್ರಿಯಾಗಬಾರದೆಂದು ಸರಕಾರೀ ವಕೀಲರು ವಾದಿಸಿದರು. ನ್ಯಾಯಮೂರ್ತಿ ಮಿರಜಾನ-ಸಾಹೇಬರು ಈ ಅರ್ಥಹೀನವಾದ ತಕರಾರು ಕೇಳದೆ, ಶೇರಿಫನು ಈ ಪರ್ಯಂತರ ಬಡ್ಡಿ ಎಲ್ಲ ಸೇರಿ ಅಂದರೆ ೧೨४೦೦ ರೂಪಾಯಿಗಳನ್ನು ಕೊಡಬೇಕೆಂದು ಹುಕುಮು ಮಾಡಿದ್ದಾರೆ. ಶ್ರೀಮಂತರೂ ದೊಡ್ಡ ... ನವರೂ ಆದಂಥವರನ್ನೇ ಶೇರಿಫರನ್ನಾಗಿ ನೇಮಿಸುತ್ತಾರೆ. ಅವರಿಗೆ ಕನಿಷ್ಟ ಲಕ್ಷದ ಕನಕ ಕಮೀಶನ ದೊರೆಯುತ್ತದೆ. ೧೨ ಸಾವಿರವು ದೊಡ್ಡ ವಿಷಯವಲ್ಲ. ಪರಿಣಾಮ ಮಾತ್ರ ಕೆಟ್ಟದಾಗುತ್ತದೆ. ಇಲಿಯ ಪೆಟ್ಟು ಗಣಪತಿಗೆ ಬಡಿಯಿತು ಎನ್ನುವಂತೆ ಬೇಲೀಫನ ತಪ್ಪಿಗಾಗಿ ಶೇರಿಫರು ದಂಡ ತೆತ್ತಬೇಕಾಯಿತು. ಸಾಹುಕಾರರು ಎಚ್ಚರದವಾಗಿರುವದು ಮಾತು.

ಚೀನದಲ್ಲಿ ಹೊಮುಲ ಕಾಳಗದ ಪ್ರಾರಂಭ

—೦—

ಪೆಕಿಂಗ ಪಟ್ಟಣದ ಮೇಲೆ ದಂಡಯಾತ್ರೆಯನ್ನು ಹೊರಡಿಸಿದ ಮಾರ್ಶಲ ... ಚಾಂಗ ಸೂ ಲಿನ ದಂಡು ಟಿಂಟಿಸೇನ ಬಂದರ ದಾಟಿ, ಪೆಕಿಂಗದ ಅರ್ಧ ದಾರಿಯ ಮೇಲೆ ಬಂದಿರುತ್ತದೆ. ... ವಾಗಿ ಊ ಪೈ ಫೂ ಎಂಬವನೂ ಒಂದಿದ್ದಾನೆ. ಇವರ ಎದುರಾಳಿ ಮತ್ತು ಮಂತ್ರಿ ಮಂಡಲದ ಪಕ್ಷಪಾತಿಯಾದ ಕೋಮುಚೆನ್ನನ ४೦ ಸಾವಿರ ಪಡೆಯನ್ನು ಕೂಡಿ ಹಾಕಿ, ಟಾಕ ನದಿಯಗುಂಟ ವ್ಯೂಹರಚನೆ ಮಾಡಿ, ವೈರಿಯನ್ನು ತಡೆಯುವ ಸಿದ್ಧತೆ ನಡೆಸಿದ್ದಾನೆ. ಇಂಗ್ಲಾಗು ... ಕಾಳಗದಿಂದಲೇ ಜಯಾಪಜಯವು ತಿಳಿಯಬೇಕಾಗಿರುವದರಿಂದ, ಉಭಯ ಪಕ್ಷಗಳು ... ದು ತಯಾರಾದಬೇಕೆಂದಿರುತ್ತಿವೆ. ಚಾಂಗ ಸೂ ಲಿನನ ದಂಡು ಕವಾಯತು ಕಲಿತು ನಿಸ್ಸೀಮದ ಯುದ್ಧ ಮಾಡುವಂಥಾದ್ದಾಗಿದೆ. ಆದರೆ ... ರಕ್ಷಣಾ ಪಕ್ಷದ ಪಡೆಯಲ್ಲಿ ಅನಾಯಕತನ ಮತ್ತು ಅವ್ಯವಸ್ಥೆ ಮಾಡಿದೆ. ಕಾಳಗ ಪ್ರಾರಂಭವಾಗುವ ಮುಂಚಿತವಾಗಿ ಟಿಂಟಿಸೇನ ಮತ್ತು ಪೆಕಿಂಗದ ನಡುವಿರುವ ಎಲ್ಲ ... ವಾಹನವೂ ಬಂದಾಗಿದೆ. ಪೆಕಿಂಗ ಪಟ್ಟಣವು ಮುತ್ತಿಗೆಯ ಸ್ವರೂಪವಲ್ಲುಂಟು. ಈಗಿನ ಮಂತ್ರಿಗಳು ಸಾಮ್ರಾಜ್ಯವನ್ನಾಳಲಿಕ್ಕೆ ದುರ್ಬಲರಿದ್ದು, ಪರಕೀಯರ ತಂತ್ರದಂತೆ ನಡಿಯುತ್ತಿದ್ದಾರೆ. ಆದುದರಿಂದ ಇವರನ್ನು ಪದಚ್ಯುತ ಮಾಡಬೇಕೆಂದು ಚಾಂಗ ಸೂ ಲಿನನ ಅಭಿಯೋಗವಾಗಿರುತ್ತದೆ. ಇವನಿಗೆ ಅನುಕೂಲವಾಗಿ ವಿದ್ಯಾರ್ಥಿಗಳೂ ಕೂಲಿಕಾರರೂ ಸಂಪು, ಪರಕೀಯರ ಸರಕಿನ ಬಹಿಷ್ಕಾರ ಸ್ವಯಂ ನಿರ್ಣಯ ಮುಂತಾದ ತತ್ವಗಳಿಂದ ದೇಶದ ತುಂಬ ಕ್ರಾಂತಿಯನ್ನು ಹುಟ್ಟಿಸಿದ್ದಾರೆ. ಚಾಂಗ ಸೂ ಲಿನನಿಗೆ ಜಯ ದೊರೆತರೆ ಚೀನದ ಪ್ರಸ್ತುತದ ಆಡಳಿತೆಯಲ್ಲಿ ರೂಪಾಂತರವಾಗಿ, ಪಾಶ್ಚಿಮಾತ್ಯರ ಕಿರಾಟಿಕೆ ದುದುಗಾಟಿಕೆಯು ಅಳಿಯುವ ಕಾಲ ಬರುವದು.

ಜಪಾನ ವರ್ತಕರು ರಶಿಯಾದಲ್ಲಿರುವ ವಿಸ್ತಾರವಾದ ಅರಣ್ಯವನ್ನು ಕೆಲವು ಕರಾರಗಳಿಂದ ತಮ್ಮ ವಶಕ್ಕೆ ತಕ್ಕೊಂಡು ಅಲ್ಲಿ ಕಟ್ಟಿಗೆ ಕೊಯ್ಯುವ ಮತ್ತು ಕಾಗದದ ಕಾರಖಾನೆಗಳನ್ನಿಡುವರು.

ಶ್ರೀರಂಗಪಟ್ಟಣದ ಹತ್ತರ ಒಂದು ಮೋಟಾರು ಹಳ್ಳದಿಗೆ ಹಾರಿ, ಅಪಘಾತವಾಗಿ ಮೋಟಾರು ನಡೆಸುವವನು ಸತ್ತನು. ಐವರು ಪ್ರಯಾಣಿಕರು ಹೆಚ್ಚು ಕಡಿಮೆ ಪೆಟ್ಟು ತಿಂದಿದ್ದಾರೆ.

ಅಹ್ಮದಾಬಾದಿನಲ್ಲಿ ಪಂಡಿತ ಮೋತಿಲಾಲರು ಶ್ರೇಷ್ಠ ದರ್ಜೆದ ಒಂದು ಸಾಪ್ತಾಹಿಕ ಪತ್ರವನ್ನು ಮುದ್ರಿಸುವ ಕಂಪನಿ ತೆಗೆದಿದ್ದಾರೆ. ... ಗೃಹಸ್ಥರಾದ ಶ್ರೀ. ಪ್ರಕಾಶಮು ಸಂಪಾದಕರಾಗುವರು.

[illegible] ಪತ್ರ ಪೂರಾ

ನಿಜಾಮ ಸಾಹೇಬರ ಕೈ ಬಿಟ್ಟಿತು.

ಹೈದರಾಬಾದಿನ ನಿಜಾಮ ಸಾಹೇಬರು ವ ರ್‍ಹಾಡ ಪ್ರಾಂತವು ಮರಳಿ ತಮಗೆ ದೊರೆಯಬೇಕೆಂದು ಲಾರ್ಡ ಕರ್ಝನ ಕಾಲದಲ್ಲಿ [illegible] ಕರ್ಝನಸಾಹೇಬರು ವರ್‍ಹಾಡ ಮೇಲಿನ [illegible] ಸ್ವಾಮಿತ್ವ ಒಪ್ಪಿದರು. ಆದರೆ ಆಧಿಕಾರವನ್ನು ತಮ್ಮ ವಶದಲ್ಲಿಟ್ಟುಕೊಂಡರು. ಸತ್ಯಭಾಮೆಯ ಮನೆಯಲ್ಲಿ ಪಾರಿಜಾತಗಿಡ, ಹೂವು ರುಕ್ಮಿಣಿಯ ಮನೆಯಲ್ಲಿ [illegible]. ಅನಂತರ ಈಗಿನ [illegible] ಪುನಃ ಈ ವಿಷಯವೆತ್ತಿದರು. ಮಹಾಯುದ್ಧದಲ್ಲಿ ದ್ರವ್ಯ ಸಹಾಯ ಮಾಡಿದರು. ಸೇನಾಸಹಾಯ ಮಾಡಿದರು. ಅದರ ಪ್ರತ್ಯುಪಕಾರವೆಂದು ವರ್‍ಹಾಡವನ್ನು ಹಿಂದಿರುಗಿ ಕೊಡಬೇಕಾಗಿತ್ತು. ಹಾಗೆ ಮಾಡದೆ, ಹಿಜ ಹಾಯನೆಸ ಎಂಬಿರುದು ತಮ್ಮಗೆ ಕೊಡುವೆ ಎಗ್ಝಾಲ್ಟೆಡ ಎಂಬ [illegible] ಯ ಆಧಿಕಾರ [illegible] ಕೊಡಿಸಿದರು ಹಿಂದುಸ್ಥಾನದ ರಾಜರು ಮಹಾರಾಜರಲ್ಲಿ ಇವರ ನಂಬರವೊಂದನೆಯದು. ಆದರೆ ಪದವಿಯು ಎಲ್ಲರಂತೆ ಸಾಮಾನ್ಯವಾಗಿತ್ತು. ಘನವಂತಿಕೆಯ ಬೋಧಣಿಯಿಂದ ಪ ದವಿಯೂ ದೊಡ್ಡದಾಯಿತು. ನವಾಬಸಾಹೇಬರು ಈಗ ಅಷ್ಟರಿಂದಲೇ ತೃಪ್ತರಾಗಿ, ದೇಶದಲ್ಲಿ [illegible] ಶಾಂತತೆ [illegible] ಬಳಿಕ, ವರ್‍ಹಾಡದ ವಿಷಯ ವೆತ್ತಿ [illegible] ಎಂಬುದನ್ನು ಲಂಡನಕ್ಕೆ ಕಳಿಸಿದರು. ಕಾಲಾವಧಿ ಇಲ್ಲದಿದ್ದರೂ, ಲಕ್ಷಾವಧಿ ರೂಪಾಯಿಗಳನ್ನು ವೆಚ್ಚ ಮಾಡಿದರು ಅದರ ಪರಿಣಾಮವವು ದಂಡಸ್ವನನ್ನು ಬೇಡಿದಂತಾಯಿತು. ಈ ವಿಚಾರವು ಲಾರ್ಡ ರೀಡಿಂಗರ ಹೇಟಕ ಕಾಲದಲ್ಲಿ ಪುನಃ ಮುಂದೆ ಬಂತು. ಕೊನೆಯಲ್ಲಿ ಅವರೇ ಹಿಂದುಸ್ಥಾನಕ್ಕೆ ತಿರುಗಿ ಹೋದೆಯುವಾಗ ಇದರ ಸಮಾಪ್ತಿ ಮಾಡಿ, ವರ್‍ಹಾಡವು ಮರಳಿ ಸಿಗಲಾರದೆಂದು ನಿಜಾಮ ಸಾಹೇಬರಿಗೆ ತಿಳಿಸಿದ್ದಾರೆ. ನಿಜಾಮ ಸಾಹೇಬರು "ತಾವು ಸ್ವತಂತ್ರರು, ಇಂಗ್ಲಿಷ ಸರಕಾರದ ವಿಶ್ವಾಸದ ಮಿತ್ರರು, ಆವರ ಸಮಮಾನಸ್ಥರಾದರು" ಎಂಬ ವ್ಯರ್ಥ ಗರ್ವ ತಾಳಿ, ಮಾಂಡಲಿಕರಲ್ಲೊಬ್ಬರಾಗಿ ತಿಳಿಕೊಂಡಿದ್ದರು. ಲಾರ್ಡ ರೀಡಿಂಗಸಾಹೇಬರ ಈಯುತ್ತರದಲ್ಲಿ ಅವರ ಗರ್ವಭಂಗ ಸಹ ಮಾಡಿದ್ದಾರೆ ವರ್‍ಹಾಡದ ನಿರ್ಣಯವನ್ನು ಪಂಚರ ಮುಖಾಂತರ ತೀರಿಸಿಕೊಳ್ಳಬೇಕೆಂದು ನಿಜಾಮರು ಬಯಸಿಕೊಂಡಿದ್ದರು.

"ಬ್ರಿಟಿಶ ಪ್ರಭುತ್ವವೇ ಹಿಂದುಸ್ಥಾನದಲ್ಲಿ ಶ್ರೇಷ್ಠವಾದದ್ದು. ಆದ್ದರಿಂದ ಯಾವ ಸಂಸ್ಥಾನಿಕನೂ ತಾನು ಇಂಗ್ಲಿಷ ಸರಕಾರದ ಸರಿ ಸಮಾನಸ್ಥನೆಂದು ತಿಳಕೊಂಡು ತಕರಾರು ತಟ್ಟೆಗಳ ಮಾತು ನಡಿಸಬಾರದು"

ಎಂಬುದಾಗಿ ಲಾರ್ಡ ಸಾಹೇಬರು ಝಳಿ ಝಳಿ ಹೇಳಿದ್ದಾರೆ ನಿಜಾಮಸಾಹೇಬರಿಗೆ ವರ್‍ಹಾಡ ಹೋದದ್ದೊಂದು ಚಿಂತೆಯಲ್ಲದೆ, ತಮಗೆ ಮಾಂಡಲಿಕತ್ವದ [illegible] ದ್ರೋಹ ಹತ್ತಿತು [illegible] ಹೋಗುವಾಗ ನಿಜಾಮರಿಗೆ ಮಾತ್ರ [illegible] ದೊಡ್ಡ ದೊಡ್ಡ ಸಂಸ್ಥಾನಿಕರಿಗೆ ಒಳ್ಳೇ ಗುದಿಕೆ ಕೊಟ್ಟರೆಂದೇ ಹೇಳಬೇಕಾಗುತ್ತದೆ

ಸತ್ತವರನ್ನು ಬದುಕಿಸುವ ಶಾಸ್ತ್ರಾಭ್ಯಾಸ

ಅಮೇರಿಕೆಯ ರಾಜಧಾನಿಯಾದ ನ್ಯೂಯಾರ್ಕ ಪಟ್ಟಣದಲ್ಲಿಂದ ಸುಪ್ರಸಿದ್ಧ ರಸಾಯನಶಾಸ್ತ್ರಜ್ಞನಾದ ಡಾಕ್ಟರ ಕಾರೇಲಸಾಹೇಬನು ವತ್ತವರಿಗೆ ಪುನಃ ಜೀವದಾನ ಕೊಡುವ ಶಾಸ್ತ್ರೀಯ ಶೋಧ ನಡೆಸಿದ್ದಾನೆ ದ್ವಿಪಾದ ಪ್ರಾಣಿಯಾದ ಮನುಷ್ಯ ಅಥವಾ ಪಕ್ಷಿಯಾಗಲಿ; ಚತುಷ್ಪಾದ ಪ್ರಾಣಿಯಾದ ಪಶುವಾಗಲಿ ಕಾಲಮರಣ ಬಂದು ಸಾಯುವಾಗ ಅವಯವಗಳು ಇದ್ದಕ್ಕಿದ್ದಂತೆ ಇರುತ್ತವೆ ಅವುಗಳೊಳಗಿನ ರಕ್ತಾಭಿಸರಣವು ಬಂದಾಗಿ, ಶ್ವಾಸೋಚ್ಛ್ವಾಸ ನಿಂತು, ಜೀವ ಹೋಗುತ್ತದೆ ಹೀಗೆ ಹೋದ ಜೀವವನ್ನು ರಸಾಯನದ ಉಪಯೋಗದಿಂದ ಮರಳಿ ತರಬಹುದೆಂದು ಡಾಕ್ಟರ ಕಾರೇಲಸಾಹೇಬನು ಈ ವರೆಗೆ ಮಾಡಿದ ಶೋಧ ಮತ್ತು ಪ್ರಯೋಗದಿಂದ ನಂಬಿಗೆಯುಳ್ಳವನಾಗಿದ್ದಾನೆ. ಮೊದಲು ಪ್ರಯೋಗದ ಅನುಕೂಲತೆಗಾಗಿ ಸತ್ತಂಥ ಒಂದು ಹೆಣ್ಣು ಕೋಳಿ ತಂದ್ದಾನು, ಅದರ ಹೊಟ್ಟೆಯಲ್ಲಿ ರಸಾಯನಗಳನ್ನು ಹಾಕಿದನು. ಒಂದರಿಂದ ಉದ್ದೇಶ ಸಫಲವಾಗದಿದ್ದರೆ ಮತ್ತೊಂದು ಮಿಶ್ರಣ ಹಾಕಿದನು ಕೊನೆಯಲ್ಲಿ ಒಂದು ಮದ್ದಿನಿಂದ ಕೋಳಿಯು ಎದೆಯು ಹಾರಹತ್ತಿತು ಸಾಹೇಬನು ಉತ್ಸಾಹಗೊಂಡನು ಅದಕ್ಕೂ ಬಲವಾದ ಮಿಶ್ರಣ ಹಾಕಿದನು ಇದರಿಂದಂತೂ ಆ ಕೋಳಿಯು ಎದೆಯು ಸಶಕ್ತ ಪ್ರಾಣಿಯಂತೆ ಹಾರಹತ್ತಿತು. ಬೇರೆ ಪ್ರಕಾರ ಸತ್ತಂಥ ಒಬ್ಬ ಮನುಷ್ಯನ ಎದೆಯನ್ನು ಕೊಯ್ದು, ಅದರೊಳಗಿನ ಕಫ ಮತ್ತು ಕಲ್ಮಷವನ್ನು ತೆಗೆದು ಹಸನಾಗಿ ತೊಳೆದು ಮತ್ತೆ ಕೂಡಿಸಿ, ಮುಚ್ಚಿ ಹೊಲಿದನು. ಕೂಡಲೆ ಎದೆಯು ಹಾರ ಹತ್ತಿತು ಮನಸ್ಯನಲ್ಲಿ ನವೀನವಾದ ಚೈತನ್ಯವುಂಟಾಗಲಿಕ್ಕೆ ಎಡಯೇ ಮುಖ್ಯ ಕಾರಣವಾಗಿರುತ್ತದಷ್ಟೇ; ಇದರ ಚಕ್ರವು ಪುನಃ ನಡಿಯುವಂತೆ ಮಾಡಿ ತೋರಿಸಿದ್ದಕ್ಕಾಗಿ ಡಾಕ್ಟರ ಕಾರೆಲಸಾಹೇಬನು ಉಪ್ಪು ಉಳಿದ ಅವಯವಗಳನ್ನು ಸಲೀಲವಾಗಿ ನಡೆಯುವಂತೆ ಪ್ರಯತ್ನ ನಡಿಸಿದ್ದಾನೆ. ಬಲರಾಂತಗಾರ್ಡಿ ಹಡಗ ಮತ್ತು ಆಕಾಶಯಾನಗಳ ಅದ್ಭುತ ಶೋಧದಂತೆ ಸಂಜೀವನಿಯ ಶಾಸ್ತ್ರೀಯ ಶೋಧವೂ ಲೋಕಾದ್ಭುತವಾಗಿ, ಶಾವ್ರ [illegible] ದೂರುಳಿಯಲಿಕ್ಕಿಂದು ಪಾಶ್ಚಿಮಾತ್ಯರು ನಂಬಿದ್ದಾರೆ.

ಕನ್ಯಾವಿಕ್ರಯದ ದುಷ್ಪರಿಣಾಮ.

ಗುಂಟೂರ ಜಿಲ್ಹೆಗೆ ಸೇರಿದ ಒಂದು ಗ್ರಾಮದಲ್ಲಿ ವಾಸವಾಗಿರುವ ಹತ್ತು ಮತ್ತು ಎಂಟು ವರ್ಷದ ಇಬ್ಬರು ತೀರ ಅಲ್ಪ ವಯಸ್ಸಿನ ಕುಮಾರಿಯರ ತಂದೆ ಅವರ ಅಣ್ಣನು ತಾಯಿಗೆ ಏನೂ ತಿಳಿಸದೆ, ೬೦ ಮತ್ತು ೧೦೦೦ ರೂಪಾಯಿಗಳಿಗೆ ಮಾರಿಕೊಂಡು, ಮದುವೆ ಮಾಡಿಕೊಟ್ಟನು. ಆಳಿಯಂದಿರಲ್ಲಿ ಒಬ್ಬನಂತೂ ಪಂಚಮತೀಯವು. ವಿವಾಹವು ಅಶಾಸ್ತ್ರವಾಗಿದೆ. ಕಾರಣ ಇದನ್ನು ರದ್ದು ಮಾಡಬೇಕೆಂದು ತಾಯಿಯು ದಾವೇ ತಂದಳು. ಪ್ರಕರಣವು ಹಾಯಕೋರ್ಟಿನ ತನಕ ಹೋಯಿತು. ಅಲ್ಲಿಯೂ ಪೂರ್ಣಬೆಂಚದ ತೀರ್ಪು ಹೇಳುವ ಪ್ರಸಂಗ ಬಂತು ಹಣವು ಕೊಂಡು, ಮದುವೆ ಮಾಡಿಕೊಂಡಿದ್ದರೆ ವ್ಯವಹಾರ ಮತ್ತು ಶಾಸ್ತ್ರದೃಷ್ಟಿಯಿಂದ ಹೆಂಡಂದಿರನ್ನು ತಾಯಿಯ ವಶವಾಗುವ ಕಾರಣವಿಲ್ಲೆಂದು ಆಳಿಯಂದಿರು ತಕರಾರು ತೆಗೆದರು. ಈ ತಕರಾರನ್ನು ದೂರೀಕರಿಸಿ, ಇಂಥ ಅಯೋಗ್ಯ ರೀತಿಯಿಂದ ವಿವಾಹ ಮಾಡಿಕೊಂಡ ಬಗ್ಗೆ ಯೋಗ್ಯ ಶಾಸ್ತ್ರಯುಕ್ತವಾಗಲೇಬೇಕು. ಅದರ ಪರಿಣಾಮವನ್ನು ಅನುಭವಿಸಲೇಬೇಕೆಂದು ಮುಖ್ಯ ಜಡ್ಜರು ತೀರ್ಪು ಹೇಳಿ, ಇಬ್ಬರೂ ಹುಡುಗೆಯರನ್ನು ತಾಯಿಯ ವಶಮಾಡಬೇಕೆಂದು ಹುಕುಮ ಮಾಡಿದ್ದಾರೆ.

ಬಾಸಗೆಲ್ಲಿನ ಸತ್ಯವು

ಧಾರವಾಡ ಜಿಲ್ಹೆಯ ಡೆಪ್ಯೂಟಿ ಕಲೆಕ್ಟರರಾದ ಮಿ॥ ಭದ್ರಾಪೂರರವರು ಕೆಲವು ದಿವಸಗಳಿಂದ ಈ ಊರಲ್ಲಿ ಇರುವರು. ನಿನ್ನೆ ದಿವಸ ಇಲ್ಲಿಯ ತಾರಕೇಶ್ವರ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿಯ ಪೂಜಾರಿಯು ಇವರಿಗೆ [illegible] ಒಡೆದ ಕೊಟ್ಟು ಮಂಗಳಾರುತಿಯನ್ನು ಕೊಟ್ಟು ಹೋಗೆ ಕುಳಿತ ಮತ್ತಿಬ್ಬರಿಗೆ ಮಂಗಳಾರುತಿಯನ್ನು ಕೊಡುವದಕ್ಕೋಸ್ಕರ ಹೋಗಿರಲು ಮಿ॥ ಭದ್ರಾಪೂರರವರ ಪತ್ನಿಯವರು ಗರ್ಭಗುಡಿಯಲ್ಲಿ ಹೊಕ್ಕು ದೇವರ ಗದ್ದುಗೆಯ ಮೇಲೆ ವಿಲ್ಲೆಗಳನ್ನು ಇಟ್ಟು ದೇವರ ಮೇಲಿದ್ದ ಹೂಗಳನ್ನು ತಲೆಯಲ್ಲಿ ಇಟ್ಟುಕೊಂಡರು. ಅಷ್ಟರಲ್ಲಿ ಪೂಜಾರಿಯು ಒಳಗೆ ಬಂದು "ಒಳಗೆ ಹೋಗಿ ದೇವರಿಗೆ ಮೈಲಿಗೆ ಮಾಡಿದಿರಿ ದೇವರಿಗೆ ಸಂಪ್ರೋಕ್ಷಣೆ ಮಾಡಬೇಕಾಯಿತು. ಅದರ ಖರ್ಚನ್ನು ನಿಮ್ಮ ಕಡೆಯಿಂದ ವಸೂಲ ಮಾಡುವದರಲ್ಲಿ ಬರುವದು." ಎಂದು ಹೇಳಿದನು. ಅದಕ್ಕೆ ಮಿ॥ ಭದ್ರಾಪೂರರವರ ಪತ್ನಿಯವರು "ಬ್ರಾಹ್ಮಣರು ಒಳಗೆ ಹೋಗಬಹುದು ಬ್ರಾಹ್ಮಣೇತರರು ಹೋದರೆ ದೇವರಿಗೆ ಮೈಲಿಗೆಯಾಗುವದು ಇದೆಲ್ಲಿಯದು? ಹಾಗಿಂದ ಬ್ರಾಹ್ಮಣೇತರರಷ್ಟೇ ತಂದು ಪೂಜೆ ಮಾಡಿಸುವೆನು. ಮತ್ತು ಅದೇನಾಗುತದೋ ನೋಡುವೆನು" ಎಂದೆನ್ನುತ್ತ ಮೋಟಾರಿನಲ್ಲಿ ಕುಳಿತು ಹೋದರು.

ದೇ. ಭ. ಶ್ರೀನಿವಾಸರಾವ ಕೌಜಲಗಿಯವರಿಗೆ ವಕೀಲಿ ಸನದು ಸಿಕ್ಕಿರುವದೆಂದು ಕಾರಿನ ವರ್ತಮಾನ ಬಂದಿದೆ.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ ವಿವೇಚನೆಯು

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನು, ಜಾಹೀರ ಸಂದೇಶಗಳನ್ನು, ಭಾಷಣಗಳನ್ನು ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ ಹೋರ್ಸ ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಕಾರೋಬಾರ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ತಕ್ಕವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕ್ಷೇತ್ರದ ಕುರುಡರು. ಪ್ರತಿ [illegible] ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಸ್ವಾಭಿಮಾನ ಮತ್ತು ಪಕ್ಷಾಭಿಮಾನದ ಹೊಡತಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಕೈಲ್ಕೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೋರುವದೆಂಬುದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದಬೇಕು. [illegible] ವಿಜಯವನ್ನು ಸ್ವತಃ ಓದಬೇಕು [illegible] ಸ್ವರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿತವೆಂದಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ಚಂದಾ ನಿರ್ಣಯ. ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೩-೮-೦. ವಾರ ಪತ್ರಕ್ಕೆ ೩-೨-೦

ಮೋಟಾರ ರಂಟೆಯ ಜಂಗೀ ಪ್ರದರ್ಶನವು.

ಮಿ॥ ಡೆಪ್ಯೂಟಿ ಡಾಯರೆಕ್ಟರಸಾಹೇಬ ಕೇತಬಾತ ದಕ್ಷಿಣಭಾಗ ಧಾರವಾಡ ಇವರ ಶಿಫಾರಸಿನ ಪ್ರಕಾರ [illegible] ಜಿಲ್ಹಾ ಶೇತ್ಕಿ ಸಂಘದವರು ಮೋಟಾರ ರಂಟೆಯ ಪ್ರದರ್ಶನವನ್ನು ಇದೇ ಎಪ್ರೀಲ ತಿಂಗಳ ತಾ॥ ೮-೯-೧೦ ಈ ಮೂರು ದಿವಸ ಮುಂಜಾನೆ ೮ ರಿಂದ ೧೧ ಘಂಟೆಯವರೆಗೆ ಮತ್ತು ಮಧ್ಯಾಹ್ನದ ೪ ರಿಂದ ೬ ಘಂಟೆಯವರೆಗೆ ಹೆಬ್ಬಳ್ಳಿ ಕಾಯು ಮಗ್ಗಲಿನ ಹೊಲದಲ್ಲಿ ನೆರವೇರಿಸತಕ್ಕವರಿದ್ದಾರೆ. ಈ ರಂಟೆಯು ಭೂಮಿಯಲ್ಲಿ ೧೩ ಇಂಚು ಆಳವಾಗಿ ರಂಟೆ ಹೊಡೆಯುವದು. ಇವತ್ತಿನವರೆಗೆ ಇಲ್ಲಿಗೆ ಬಂದ ಮೋಟಾರ ರಂಟೆಗಳಲ್ಲಿ ಇದೇ ಹೆಚ್ಚು ಉತ್ತಮವಾದದ್ದಿರುತ್ತದೆ ಇಂಥ ರಂಟೆಗಳು ಇಲ್ಲಿಗೆ ಬರುವದು ಕ್ವಚಿತ. ಆದ್ದರಿಂದ ಸಮ್ಮ ಎಲ್ಲಾ ಒಕ್ಕಲಿಗ ಬಾಂಧವರು ಮತ್ತು ಜಮೀನದಾರರು ಈ ರಂಟೆಯ ಕೆಲಸವನ್ನು ಕಣ್ಣಾರೆ ನೋಡುವ ಸುಸಂಧಿಯನ್ನು ಕಳೆದುಕೊಳ್ಳಲಿಕ್ಕಿಲ್ಲೆಂದು ಆಶೆ ಅದೆ.

ಈ ರಂಟೆಯನ್ನು ಕರಿಕೆ ಇದ್ದ ಹೊಲದಲ್ಲಿಯೇ ಹೊಡೆದು ತೋರಿಸಲ್ಪಡುವದು.

ವ್ಹಿ. ಎನ್. ಕುಲಕರ್ಣಿ.
ಆನರರಿ ಸೆಕ್ರೆಟರಿ
ಧಾರವಾಡ ಜಿಲ್ಹಾ ಶೇತಕಿ ಸಂಘ ಧಾರವಾಡ

ಚಂದಾದಾರರಿಗೆ ಸೂಚನೆ.

ಎಪ್ರೀಲ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಜಾಹೀರಾತು.

ಇಂಪೀರಿಯಲ ಬ್ಯಾಂಕ ಆಫ ಇಂಡಿಯಾ.

ಸೇವ್ಹಿಂಗ್ಸ ಬ್ಯಾಂಕು.

ಈ ನೋಟೀಸಿನಿಂದ ಜಾಹೀರ ಪಡಿಸುವದೇನೆಂದರೆ—

ಸನ್ನ ೧೯೨೬ನೇ ಇಸವಿಯ ಮಾರ್ಚ ತಿಂಗಳ ೧ನೇ ತಾರೀಖಿನಿಂದ ಈ ಬ್ಯಾಂಕಿನ ಸೇವಿಂಗ್ಸ ಬ್ಯಾಂಕ ಆಕೌಂಟಿನ ಬಡ್ಡಿಯ ದರವನ್ನು ನೂರಕ್ಕೆ ವರ್ಷಕ್ಕೆ (೩॥) ಮೂರುವರಿ ರೂಪಾಯಿಯಂತೆ, ಮತ್ತು ಸೇವ್ಹಿಂಗ್ಸ ಬ್ಯಾಂಕ್ಸ ಡಿಪಾಜಿಟ ಆಕೌಂಟಿನ ಬಡ್ಡಿಯ ದರವನ್ನು ಸನ್ನ ೧೯೨೬ನೇ ಇಸವಿಯ ಮೇ ತಿಂಗಳ ೧ನೇ ತಾರೀಖಿನಿಂದ ನೂರಕ್ಕೆ ವರ್ಷಕ್ಕೆ (೩॥) ಮೂರುವರಿ ರೂಪಾಯಿಯಷ್ಟು ಇಳಿಸಲ್ಪಟ್ಟಿರುತ್ತದೆ. ತಿಳಿಯುವದು. ತಾ॥ ೧೩ನೇ ಫೆಬ್ರುವರಿ ೧೯೨೬ ಇಸ್ವಿ

ಎಸ್ಮ. ಎಸ್. ಮೂರೇ.
ಡಿ. ಎಸ. ಮ್ಯಾಕ್ಲೆಯರ
(ಆಫೀಸು)
ಮ್ಯಾನೇಜಿಂಗ ಗವ್ಹರ್ನರರು

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲ ಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ದಿನಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳು ವಸ್ತೀ ಇಟ್ಟುಕೊಳ್ಳಲ್ಪಡುವವು ಚಕ್ಕ ಪ ಹುಂಡಿಯ ವ್ಯವಹಾರವು ಮಾಡಲ್ಪಡುವದು

ಮಸ್ಸ ದೇಶಪಾಂಡೆ ಮತ್ತು ಕಂಪನಿ ಮ್ಯಾನೇಜಿಂಗ ಏಜಂಟ್ಸ — ಆಣ್ಣಾ ಜಾಹಗೀರದಾರ ಚೇರಮನ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

[illegible] ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲಿಯಿತು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಡುವದು. ಠಾಹೇಮ ಮತ್ತು ಚಾಲು ಕರಡ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

[illegible] ಸಂಗತಿಗಳನ್ನು ಕಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮತ್ತ ಕರಾವ ಬಿ. ಜಕಾತಿ
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ನಮ್ಮಿಂದ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಸ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ದು ಆಣೆಯಂತಿರುತ್ತದೆ

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಜಾಳೀಹಾಳ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ನೋಟೀಸು.

—೦—

ಶ್ರೀ. ಹನಮವ್ವಾ ತಾಯಿ ಹನಮವ್ವಾ ತಳವಾರ ಸಾ. ಹನಮನಹಳ್ಳಿಯಲ್ಲಿ ದುಂಡವ್ವಾ ತಳವಾರ ಇವಳ ಮನೆಯಲ್ಲಿ ತಾ. ಶಿಗ್ಗಾವಿ ಇವರಿಗೆ-

ಈ ಕೆಳಗೆ ಸಹಿ ಮಾಡಿದವಳು ಕೊಡುವ ನೋಟೀಸು ಯೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ನಿನ್ನ ಕೂಡಾ ೫-೬ ವರ್ಷ ಸುರಳೀತ ರೀತಿಯಿಂದಾ ಪ್ರಪಂಚ ಮಾಡಿಕೋತಾ ಬಂದು ಮಕ್ಕಳ ಮರಿಗಳಾಗಿ ಏರೀ ಕಡಿಗೆ ಕೆಟ್ಟ ಜನರ ಚ್ಯಾಲ ಚಿತಾವಣೆಗೆ ಬಿದ್ದು ರಾಂಡಬಾಜೀ ಮಾಡುವದು. ಶರೇ ಕುಡಿಯುವದು ಈ ದುರ್ವ್ಯಸನಗಳ ಸುಂದುಗಾರಿಕೆಯಲ್ಲಿ ಯಾವಾಗಲೂ ನಿರತರಾಗಿ ಒಬ್ಬ ರಾಂಡಿಯನ್ನು ಸಹಾ ಇಟ್ಟುಕೊಂಡು ಅವಳ ಮನೆಯಲ್ಲಿ ನೀನು ಇರಲಿಕ್ಕೆ ಹತ್ತಿದ ಮೇಲೆ ಈಗ ಅಜಮಾಸ ೪-೫ ತಿಂಗಳ ಹಿಂದೆ ನನಗೆ ಹೊಡಿಯುವದು ಬಡಿಯುವದು ನಾನಾ ತರದ ತ್ರಾಸ ಕೊಟ್ಟು ನಾನು ಬಸರು ಇದ್ದ ಹೆಣ್ಣು ಮಗಳನ್ನು ಉಟ್ಟ ಸೀರೆ ತೊಟ್ಟ ಕುಬಸದ ದರಿಶಿಲೆ ಮತ್ತು ನನ್ನ ತವರ ಮನೆಯವರು ಕೊಟ್ಟ ದಾಗೀನಗಳನ್ನು ಕಸುಕೊಂಡು ನಿರಾಶ್ರಿತಳನ್ನಾಗಿ ಮಾಡಿ ಯಾವ ಕಾಲಕ್ಕೆ ಯೇನಾಗುವದೋ ಎಂಬ ಭೀತಿ ಹುಟ್ಟಿ ಇದ್ದ ಮಕ್ಕಳನ್ನು ಸಹಿತವಾಗಿ ಹೊರಗೆ ಹಾಕಿದಿ ಈ ಬಗ್ಗೆ ಆ ಊರ ಸಂಭಾವಿತ ಜನರು ಬೇಕಾದ ರೀತಿಯಿಂದಾ ನಿನಗೆ ಸಮಜೂತ ಹೇಳಿದರೂ ಕೇಳದೇ ಅವರಿಗೆ ಸಹಾ ದುರ್ವಚನಗಳನ್ನು ಉಪಯೋಗ ಮಾಡಿದಿ. ಈ ರೀತಿ ನನ್ನನ್ನು ಗೋಳಾಡ್ಸಿ ಹೊರಗೆ ಹಾಕಿದ ಮೇಲೆ ನನಗೆ ಯಾವದೂ ಮಾರ್ಗವು ತೋರದಂತಾಗಿ ನಾನು ಬಸುರಾದ ಹೆಣ್ಣು ಮಗಳಾದ್ದರಿಂದಾ ದುಡಿಯಲಿಕ್ಕೆ ಶಕ್ತಿ ಸಹಾ ಇಲ್ಲದಂತಾದ್ದರಿಂದಾ ಹೊಟ್ಟೆ ಬಟ್ಟೆಯ ಅವಶ್ಯಕಗಾಗಿ ನನ್ನ ತವರ ಮನೆಯಾದ [illegible] ಗ್ರಾಮಕ್ಕೆ ಹೋಗಿ ನನ್ನ ತವರ ಮನೆಯವರಿಂದಾ ಕೆಲವು ರೂಪಾಯಿಗಳನ್ನು ಖರ್ಚಿಗೆ ಬೇಕಾದ ವೇಳೆಗೆ ಬೇಕಾಗುವಷ್ಟು ಇಸಕೊಂಡು ಈವರೆಗೂ ಕಾಲ ಹರಣ ಮಾಡಿಕೋತಾ ಬಂದೆ ಮುಂದೆ ನನ್ನ ತವರ ಮನೆಯವರಿಂದಾ ನನಗೆ ಸಾಲ ಹುಟ್ಟದಂತಾದ್ದರಿಂದ ನಾನು ತುಂಬಾ ಗರ್ಭಿತಳಾಗಿ ತಿನೀಸಾಗಿ ಹೋಗಿ ದುಡಕೊಂಡು ಹೊಟ್ಟೆ ಹೊರಕೊಳ್ಳಲಿಕ್ಕೆ ಬಾರದ್ದರಿಂದಲೂ ಮತ್ತು ನನ್ನ ತವರ ಮನೆಯವರು ನಿನಗೆ ಕೊಟ್ಟ ರೂಪಾಯಿಗಳ ದಶಿಂದಲೂ ಮತ್ತು ನನ್ನನ್ನು ಹೊರಗೆ ಹಾಕಿದ ಕಾಲಕ್ಕೆ ಕಸ್ಕೊಂಡ ದಾಗೀನಗಳು ಇಲ್ಲವೇ ಅವುಗಳ ಕಿ. ರೂಪಾಯಿಗಳು ಬರುವ ದಶಿಯಿಂದಲೂ ಈ ನೋಟೀಸು ಕೊಡುವ ಪ್ರಸಂಗ ಬಿತ್ತು.

ಇದರಿ ಈ ನೋಟೀಸಿನಿಂದ ತಿಳಿಸುವದೇನಂದರೆ ನೀನು ಈ ನೋಟೀಸು ಮುಟ್ಟಿದ ಮಂದೇ ವಾರದೊಳಗಾಗಿ ಮೇಲೆ ನನ್ನ ತವರ ಮನೆಯವರಿಂದಾ ಬೇಕ ಬೇಕಾದಾಗ್ಗೆ ಇಸಕೊಂಡ ರೂಪಾಯಿ [illegible] ಮತ್ತು ದಾಗೀನೆಯಲ್ಲವೇ ಅವುಗಳ ಕಿ. ರೂಪಾಯಿ [illegible] ಬಂಗಾರ ತೊಲಿ ೧೬ ತೊಲಿ ಅಂತೂ ರೂಪಾಯಿ ೪೦೦ ಕೊಟ್ಟು ನನ್ನನ್ನು ನನ್ನ ಮಗನನ್ನು ಕರಕೊಂಡು ಹೋಗಬೇಕು ಕರಿಯಲಿಕ್ಕೆ ಬರುವಾಗ್ಗೆ ನೀನು ಮೊದಲಿನಂತೆ ಚಲೋ ಬಾಳ್ವೆ ಮಾಡತೇನೆ ಶರೆ ಶಿಂದಿ ಕುಡಿಯೋದು ಬಿಡತೇನೆ ಮತ್ತು ನನಗೆ ಯಾವ ರೀತಿಯಿಂದಲೂ ನನ್ನ ಜನ್ಮಕ್ಕೆ ಅಪಾಯ ಮಾಡುವದಿಲ್ಲಾ ಎಂಬೋ ಬಗ್ಗೆ ಎರಡು ಯೋಗ್ಯ ಜಾಮೀನ ಕೊಟ್ಟು ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ದಲ್ಲಿ ನಾನು ಪ್ರಬುದ್ಧಳಾಗಿರುವದರಿಂದಾ ನನ್ನ ಮಾರ್ಗವನ್ನು ನಾನು ಕಾಣಬೇಕಾಯಿತು ಅಂದರೆ ಉದ್ಕಿ ಮಾಡಿಕೊಂಡು ಹೋಗತಕ್ಕವಳಿದ್ದೇನೆ ಆದ್ದರಿಂದ ಈ ನೋಟೀಸು ಕೊಟ್ಟಿರುತ್ತೇನೆ ನಾನು ಗರ್ಭವತಿ ಇದ್ದು ಮುಂದೆ ಹುಟ್ಟಿದ ಕೂಸು ನಿನ್ನ ಮನೆತನದ ವಾರಸಾ ಹಕ್ಕಿಗೆ ಬರತಕ್ಕದ್ದಾಗುತ್ತದೆ ಆ ಕೂಸು ನಾನು ಉದ್ಕಿ ಮಾಡಿಕೊಂಡು ಹೋಗುವ ಮನೆತನಕ್ಕೆ ಬರಲಾರದು ಮತ್ತು ನಾನು ಪ್ರಸೂತಳಾಗಿ ಆ ಬಗ್ಗೆ ಹಿಡಿದ ಖರ್ಚು ಸಹಾ ನಿನ್ನಿಂದಲೇ ವಸೂಲ ಮಾಡಲ್ಪಡುವದು ಈ ನೋಟೀಸಿನಲ್ಲಿಯ ಮಜಕೂರಿಗೆ ನೀನು ಒಳಪಟ್ಟು ಚಲೋ ಬಾಳ್ವೆ ಮಾಡಬೇಕಂತಾ ನಿನ್ನ ಮನಸಿದ್ದರೆ ಮೇಲೆ ತೋರಿಸಿದಂತೆ ಕೊಡುವದು ಕೊಟ್ಟು ಬಿಡುವದು ಬಿಟ್ಟು ಕರಕೊಂಡು ಹೋಗಬೇಕು ಹಾಗೆ ಮಾಡದೇ ಇದ್ದಲ್ಲಿ ನಾನು ನೋಟೀಸಿನಲ್ಲಿಯ ದಿವಸಗಳ ವರೆಗೆ ನೋಡಿ ಎರಡನೇ ಉದ್ಕೀ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ಮೇಲೂ ನನ್ನ ಉದ್ಕಿ ಗಂಡನಮೇಲೂ ನಿನ್ನ ಯಾವ ತರದ ತಕರಾರು ನಡಿಯುಣಿಕ್ಕಿಲ್ಲಾ ನೀನು ಮೇಲಿನ ಅವಧಿಯಲ್ಲಿ ಸರಿಯಾದ ಉತ್ತರ ಕೊಡದಿದ್ದರೆ ಇದೇ ನೋಟ ಚೀಟಿಯಂತಾ ತಿಳಕೊಂಡು ಅವಕ್ತಿನ ತಾರೀಖಿಗೆ ಅಂದರೆ ೮ನೇ ದಿವಸಕ್ಕೆ ಗಂಡಹೆಂಡ ಭಾವ ದೂರಾಯಿತೆಂದು ನಾನೂ ನೀನೂ ಕೂಡೇ ತಿಳಕೊಳ್ಳಬೇಕು ನಾನು ಹೆಂಡತಿ ಎಂಬ ಭಾವವು ನಿನ್ನಲ್ಲಿ ಬಂದದ್ದಾದರೆ ಈ ನೋಟೀಸಿಗೆ ಉತ್ತರ ಕೊಟ್ಟು ಮೇಲಿನ ಮಾತಿಗೆ ಯೂವತ್ತುಕೊಳ್ಳಪಟ್ಟು ಮೇಲಿನ ಅವಧಿಯಲ್ಲಿ ಕರಕೊಂಡು ಹೋಗಬೇಕು ಹಾಗೆ ಮಾಡದೇ ಇದ್ದಲ್ಲಿ ಮೇಲ್ಕಂಡ ರೂಪಾಯಿ ಮತ್ತು ದಾಗೀನೆಗಳ ಬಗ್ಗೆ ಮತ್ತು ನಿನ್ನ ಜಾನಾಂಕಿತನದ ಖರ್ಚಿನ ಬಗ್ಗೆ ಇದಲ್ಲದೆ ಈ ನೋಟೀಸಿನ ಖರ್ಚು ಸಹಿತಾ ನಿನ್ನ ಮೇಲೆ ವಸೂಲ ಮಾಡಲಾಗುವದೆಂತು ತಿಳಿಯುವದು ತಾ. ೩-೪-೨೬

ಈ ಎಡಗೈ ಹೆಬ್ಬಟ್ಟಿನ ಗುರ್ತು ದ್ಯಾಮವ್ವಾ ಕೋಮ ಹನಮವ್ವಾ ತಳವಾರ ಸಾ. ಹನಮನಹಳ್ಳಿ ತಾ. ಶಿಗ್ಗಾವಿ ಈಕಿ ಕೈದು ಅದೆ.

ಮಾತಾಡುವ ಔಷಧವು

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೇ? ಹಲ್ಲುಶೂಲಿಯೋ? ಮೈಯಲ್ಲಿ ನೋಯುತ್ತದೆಯೋ? ಅಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯ್ಯೆಲ್ಲಾ ನೋಯುತ್ತದೆ

ಕಂದ— ಹಾಗಾದರೆ ನೊಮೆಂಟ ಕ್ಯಾಯುಗ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಸ್ಟ್ರ್ರವಿ ಕಿಮ್ಮತ್ತು ಶೀಶೆಗೆ ತುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಚಂದಾದಾರರಿಗೆ ಸೂಚನೆ.

—೦—

ಎಪ್ರೀಲ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. b.

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಬುಧವಾರ ತಾರೀಖು ೭ನೇ ಏಪ್ರೀಲ ೧೯೩೭ (ಸಂಚಿಕೆ ೭೯

ಸರಕಾರದಿಂದ ಪೆಟೆಂಟ ದೊರೆತ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ದ್ವಾರಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗುತ್ತಲೇ ಬಾಗಿಲಿಯ ಪದರು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೯ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಜಾಹೀರಾತು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೇಬೆನ್ನೂರ ತಿಟ್ಟರ್ ಪಬ್ಲಿಕೇಶನ್ ಪಾವತ್ತು ಜನರಿಗೂ ಮತ್ತು ಯಾವತ್ತೂರಿಗೂ ತಿಳಿಸೋದೇನಂದರೆ ರಾಣೆಬೆನ್ನೂರಲ್ಲಿ ಸ್ಟೇಶನ್ ರಸ್ತೆಕ್ಕೆ ಹೊಂದಿ ಪ್ರೋಗ್ರೆಸ್ಸ ಲೋಕಲ್‌ಬೋರ್ಡ ಮ್ಯುನಸಿಪಾಲಿಟಿ ಕಚೇರಿಗಳ ಮಧ್ಯದಲ್ಲಿ ಇರೋ ನನ್ನ ಮಾಲ್ಕಿ ವ ವಹಿವಾಟಿಯುಳ್ಳ ಒಂಗ್ಲೆ ಇದರ ಪ್ಲೈಲ ಜಾಗಾ ಸಹಾ ಸಿಟಿಸರ್ವೆ ನಂಬರ ೧೮೬೫|೨ ಇದರ ಅಜಮಾಸ ಕಿಮ್ಮತ ೪೦೦೦ ರೂಪಾಯಿ ಇದನ್ನು ತಾರೀಖು ೧೧-೪-೧೯೩೭ ಇಸ್ವಿ ದಿವಸ ಮಾರತಕ್ಕವನಿದ್ದೇನೆ. ಬೇಕಾದವರು ಸದರ ಮುದ್ದತಿನ ಒಳಗಾಗಿ ಟೆಂಡರ ಕಳ್ಸಬೇಕು. ಸವಿಸ್ತರ ಅಗರ ಟಪಾಲದ್ವಾರ ಮಾಹಿತಿ ತಿಳಕೊಳ್ಳಬಹುದು.

ವೆಂಕಟೇಶ ರಾಮಚಂದ್ರ ಅಳಲಗೇರಿ ಸಾಕ್ಷಿ ರಾಣೇಬೆನ್ನೂರ ಹಾಲವಸ್ತಿ ಜೋಶಿ ಸರ ಹರಳಹಳ್ಳಿ ತಾಲೂಕ ರಾಣೆಬೆನ್ನೂರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨	ತಿಂಗಳಿಗೆ	೧೨-೮-೦ ರೂ
೬	,,	೭-೨-೦ ರೂ
೩	,,	೪-೦-೦ ರೂ
ವಾರಪತ್ರಕ್ಕೆ	೧ ವರ್ಷಕ್ಕೆ	೩-೧೨-೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವವಿದ್ದರೆ ಆರು ಆಣೆ ಡಬಲ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ರನ್ನಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಭತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಒಡ್ಡಿಯು ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಬೇಕಾದವರಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲಾಗುವದು. ಕಾಯಮು ಮತ್ತು ಸೇವಿ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,

ಮ್ಯಾನೇಜಿಂಗ ಡಾಯರೆಕ್ಟರ

ಮಧುಬಿಂದು ಕಲಹ.

ಕಲಕತ್ತೆಯಲ್ಲಿ ಹಿಂದೂ ಮುಸಲಮಾನರ ದಂಗೆ.

೪೦ ಜನರು ಸತ್ತರು; ಐನ್ನೂರು ಜನರು ಘಾಯವಾದರು.

ಪೇಟೆಗಳ ಸುಲಿಗೆ; ಅಂಗಡಿಗಳ ಹರಾಳಿ.

ದಂಡಿನ ಬಂದೋಬಸ್ತು; ಬೀದಿಬೀದಿಗೆ ತೋಫುಗಳ ಏರ್ಪಾಡು.

ಪಟ್ಟಣವು ಸ್ಮಶಾನದಂತೆ ಬಣಗುಟ್ಟುತಲಿದೆ.

ಜನರ ಸ್ವಪ್ನದಲ್ಲೂ ಇಲ್ಲದಂಥ ರೀತಿಯಲ್ಲಿ ಕಲಕತ್ತೆಯಲ್ಲಿ ಹಿಂದೂ ಮುಸಲಮಾನರ ನಡುವೆ ಭಯಂಕರ ದಂಗೆಯಾಗಿ ಶಿರೋಲೇಖದಲ್ಲಿ ಹೇಳಿದಂತೆ ಅನರ್ಥವಾಗಿದೆ. ಈ ಪ್ರಕಾರ ಆಕಸ್ಮಿಕವಾಗಿ ಆಗುವ ರಣಬುಸ್ತರಕ್ಕೆ ಮಧುಬಿಂದು ಕಲಹವೆನ್ನುವರು. ಕಳೆದ ಶುಕ್ರವಾರ ಸಾಯಂಕಾಲದಲ್ಲಿ ಆರ್ಯ ಸಮಾಜದವರು ವಾದ್ಯ ಬಾರಿಸುತ್ತಾ ಬಡಾ ಬಝಾರದಲ್ಲಿರುವ ನಾಕೋಡಾ ಎಂಬ ಮಸೀದಿಯ ಹತ್ತರ ಬಂದರು. ಮಸೀದಿಯು ದೂರವಾಗಲೇ ಕೆಲ ಮುಸಲಮಾನರು ವಾದ್ಯ ನಿಲ್ಲಿಸಿರೆಂದು ಹೇಳಿದರು. ಮಸೀದಿ ದೂರುಂಟು. ಇಷ್ಟೇಕೆ ಆಪಶಕುನವೆಂದು ಆರ್ಯ ಸಮಾಜದವರು ಉತ್ತರ ಕೊಟ್ಟರು. ಮುಸಲಮಾನರು ಬಲಾತ್ಕಾರದಿಂದ ಮೆರವಣಿಗೆ ನಿಲ್ಲಿಸಲೆತ್ನಿಸಿದರು. ಕಲ್ಲು, ಇಟ್ಟಂಗಗಳು ತೂರಿದವು. ಬಡಿಗೆಗಳು ತಾಂಡವಾಡಿದವು. ಜನರು ಪೆಟ್ಟು ತಿಂದು, ಆಕ್ರೋಶ ಮಾಡಿದರು. ಕೂಡಲೆ ಸಾವಿರಾರು ಜನರು ನೆರೆದರು. ಇಲ್ಲಿಂದ ಪೋಲೀಸ ಸ್ಟೇಶನವು ಒಂದು ಫೈಗಸ್ತಿನ ಅಂತರವು. ವೇಳೆಯು [illegible] ಪೋಲೀಸರು ಬರುವದರೊಳಗಾಗಿ ನೂರು ಜನರು ಘಾಯವಾದರು. ಒಬ್ಬನು ಸತ್ತನು. ಸತ್ತವರೂ, ಘಾಯವಾದವರೂ ವಿಶೇಷವಾಗಿ ಹಿಂದೂ ಜನರೇ ಆಗಿದ್ದಾರೆ. ದಂಗೆಯ ವರ್ತಮಾನ ಕೇಳಿ, ಪೋಲೀಸ ಮತ್ತು ಮ್ಯಾಜಿಸ್ಟ್ರೇಟರು ಬಂದರು. ಪಟ್ಟಣದ ಪ್ರಮುಖರೂ ಬಂದು, ಉಭಯ ಪಕ್ಷಗಳ [illegible] ಸಮಾಧಾನ ಹೇಳಿದರು. ಆದರೂ ಅಂಗಡಿ [illegible] ಕೆಡಹಿ, ಅಂಗಡಿಗಳನ್ನು ಸೂರೆಮಾಡಿದರು. ಇಷ್ಟ [illegible] ಪೋಲೀಸರು [illegible] ಅದು ಒಡೆದು ಮುಚ್ಚಿದ ಕೆಂಡ [illegible] ನ ಒಮ್ಮಿಂದೊಮ್ಮೆ ಹೊ [illegible] ಮುಸಲಮಾನರು ನಾಚಿಸುವಂಥ ಭಾಗದಲ್ಲಿ ದಂಗೆಗೆ ಪ್ರಾರಂಭವಾಯಿತು. ಹಿಂದೂ ಜನರು ಒಂದು ಮಸೀದಿಗೆ ಬೆಂಕಿ ಹಚ್ಚ ತೊಡಗಿದ್ದರಿಂದ ದಂಗೆ ಮುರಕಳಿಸಿತು. ಬೇರೆ ಮುಸಲಮಾನರು ದೊಣ್ಣೆಗಳನ್ನು ತಕ್ಕೊಂಡು ಹಿಂದೂ ಜನರನ್ನು ಸಿಕ್ಕಲ್ಲಿ ಹೊಡೆಯಲಾರಂಭಿಸಿದರು. ಒಂದು ಶಿವಾಲಯದಲ್ಲಿ ಹೊಕ್ಕು ಮೂರ್ತಿಯನ್ನು ಒಡೆದರು. ಅದರ ಚೂರುಗಳನ್ನು ಬೀದಿಗಳಲ್ಲಿ ಬೀಸಾಡಿದರು. ಗುಡಿಯನ್ನು ಬಹಳವಾಗಿ ಕೆಡಿಸಿದರು. ಕಾಳಿಕಾದೇವಿಯ ಗುಡಿಯನ್ನು ಧ್ವಂಸ ಮಾಡಬೇಕೆಂದು ತಂಡತಂಡವಾಗಿ ಹೊರಟರು. ಆದರೆ ಸಿಖರೂ ಬಂಗಾಲಿಗಳೂ ದೊಡ್ಡ ಬಲವಂತನಾಗಿ ದೇವಾಲಯದ ರಕ್ಷಣೆ ಮಾಡಿದರು. ಇಲ್ಲಿ ಆಟ ಸಾಗದ್ದರಿಂದ ಪುಂಡರು ಮಾರವಾಡಿಗಳ ಪೇಟೆಯನ್ನು ಹೊಕ್ಕರು. ಒಬ್ಬ ಮಾರವಾಡಿಯು ಎದುರಿಗೆ ಬಂದವರಲ್ಲಿ ಒಬ್ಬನಿಗೆ ಗುಂಡು ಹಾಕಿ ಅವನನ್ನು ಯಮಲೋಕಕ್ಕೆ ಕಳಿಸಿದನು. ಇದರ ಸೇಡು ತೀರಿಸಿಕೊಳ್ಳುವ ದ್ವೇಷದಿಂದ ಮುಸಲಮಾನರು ಆ ಬೀದಿಯ ಭಯಂಕರ ಲೂಟಿ ನಡಿಸಿದರು. ಅಂಗಡಿ ಮತ್ತು ಮನೆಗಳಿಗೆ ಬೆಂಕಿ ಹಚ್ಚಿದರು. ಸೈತಾನಗಳಂತೆ ಲೂಟಿ ನಡಿಸಿದರು. ದಂಗೆಯು ಕಡೆಗೆ ಅಟೋಪ ಮೀರಿತೆಂದು ತಿಳಿದ ಕೂಡಲೆ ಪೋಲೀಸರು ದಂಡು ಕರೆಸಿದರು. ಬೀದಿ, ಬೀದಿಗೆ ದಂಡು ಕಾವಲಾಗಿ ನಿಂತು, ಮಶಿನಗನ್ನ ಅಂದರೆ ಚಿಕ್ಕ ತೋಫುಗಳನ್ನು ಹೂಡಿರುತ್ತದೆ. ದಂಡಿನ ಬಂದೋಬಸ್ತಿನಿಂದ ದಂಗೆಯು ಉಲ್ಬಣ ಅಡಗಿದೆ. ಆದರೆ ವ್ಯವಹಾರವೆಲ್ಲ ಕಟ್ಟಾಗಿರುವದರಿಂದ ಪಟ್ಟಣವು ಬಣಗುಟ್ಟಿ, ಸ್ಮಶಾನದಂತೆ ಕಾಣಿಸುತ್ತಿರುವದು.

ಮೊನ್ನಿನ ದಿವಸ ಅಮರಾವತಿಯಲ್ಲಿ ಮೇಘಗ [illegible] ಗಿ, ನೆಲ ತೊಯ್ಯುವಷ್ಟು ಮಳೆ ಬಿತ್ತು.

[illegible] ಚುನಾವಣೆಯ ಚಿಂತೆ

ಹೆಗ್ಗಣ ಹೊಗಿಸಿ ಹೋರು ಮುಚ್ಚುವಿಕೆ

ದಿವಾನ ಬಹಾದ್ದೂರ ಚಿಂತಾಮಣಿರಾವ ವರು [illegible] ಮಂತ್ರಿಯಾಗಿದ್ದು, [illegible] ಹರಿಯದ್ದರಿಂದ, [illegible] ರಾಜೀನಾಮೆ ಕೊಟ್ಟರು. ಮುಂದೆ [illegible] ವರ್ಷದ ನಂತರ [illegible] ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದವರು [illegible] ಚಿಂತಾಮಣಿಯ ರಾತ್ರಿಯ [illegible] ಕೊಟ್ಟರು. ಪ್ರಸ್ತುತದ ಚುನಾವಣೆಯಲ್ಲಿ [illegible] ಮಧುಕರಬೇಕೆಂಬ ಅಧಿಕಾರವಾಸನೆಯಿಂದ ಸಂಯುಕ್ತ ರಾಷ್ಟ್ರೀಯ ಪಕ್ಷದ ಹೆಸರಿನಿಂದ ರಾಷ್ಟ್ರೀಯ ಸಭೆಯ ಮೇಲೆ ಬಾಣ ಬಿಡುತ್ತಿದ್ದಾರೆ. ಸ್ವರಾಜ್ಯ ಪಕ್ಷದ ಬಲಿಯುವದು [illegible] ಅವರ ಚಿತ್ತವನ್ನು ಕನ್ನ ಕಡಿಗೆ [illegible] ಕೊಳ್ಳುವದಕ್ಕಾಗಿ ಯುಕ್ತಿ ಪ್ರಯುಕ್ತಿಗಳನ್ನು ನಡೆಸಿದ್ದಾರೆ. ಮನಸ್ಸು ಹಳಿಯದಿದ್ದರೂ, ಅದನ್ನೇ ಕಾಣಸ್ವರೂಪ ಕೊಡುತ್ತಿದ್ದಾರೆ. ಇವರ ಸ್ವರ ಘಂಟೆಯಲ್ಲಿ ಪಂಡಿತ ಮೋತಿಲಾಲರಿಗೆ ತುರಂಗವಾಸದ ಅವಸ್ಥೆಯುಂಟಾಯಿತು. ಪಂಡಿತರಂಥ ಮಂದ್ಯ ಗೃಹಸ್ಥರನ್ನು ನೆನೆಸುವಂತೆ ಅಟ್ಟಿದ್ದರ ರೀತಿಯಿಂದ ಪ್ರಜರು ದಿವಾನ ಬಹಾದ್ದೂರರನ್ನು ಇಂದಿಗೂ [illegible] ತಾರೆ. ಸಾರ್ವಜನಿಕ ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ಮೋರೆಯೇ ಇಲ್ಲವಾಗಿದೆ. ಹೇಗಾದರೂ ಮಾಡಿ, ತನ್ನ ಮೋರೆಗೆ ಹತ್ತಿದ ಕಪ್ಪು ಅಳಿಸಿಕೊಳ್ಳಬೇಕೆಂದು ಇವರು ಈಗನ್ನುವದೇನಂದರೆ—

" ನೆಹರೂರವರನ್ನು ತುರಂಗಕ್ಕೆ ಕಳಿಸಿದ್ದರ ಸಂಬಂಧವು ನನಗಿಲ್ಲ; ನನ್ನ ಹೇಳಿಕೆ ಅಥವಾ ನನ್ನ ಮುಖದಿಂದಲ್ಲ; ಸಾವಿರಾರು ಜನರನ್ನು ತುರಂಗಕ್ಕೆ ಕಳಿಸುತ್ತಿರುವಾಗ ನನಗೆ ಇಷ್ಟಷ್ಟು ಸಂಬಂಧವೇ ಪಂಡಿತರನ್ನು ಕಳಿಸಿದ್ದರಲ್ಲಿ ಇತ್ತು. "

ಕಾಯದೆಭಂಗ, ಅಸಹಕಾರ, ಚಳವಳಿ [illegible] ಕೊಲೆಯು ಕೋರ್ಟಿನ [illegible] ತೆಗೆ ಸೇರಿದುವಲ್ಲ. ಅವುಗಳ ಕೌನ್ಸಿಲರನೇ ಬೇರೆ, ಪಾಪ ಪ್ರಧಾನ ಆತನೇ ಹೊಣೆಗಾರನೆಂದು ದಿವಾನ ಬಹಾದ್ದೂರರು ಹೇಳಿಕೊಂಡು, ಬರಿಗೆ ನಿಂತು, ಕತ್ತಿಯ ಪೆಟ್ಟು ತಪ್ಪಿಸಿಕೊಳ್ಳಬೇಕೆಂದಿದ್ದಾರೆ. ಪಂಡಿತ ಮಾಳವಿಯಾರವರು ರಾಸ್ತ್ರ [illegible] ಗಿ ತುರಂಗಕ್ಕೆ ಹೋದವರು ದಿವಾನರೂ ರಾಷ್ಟ್ರೀಯ ಹಿತೈಷಿಗಳು ಇವರ ಕೂಡ ನಿತ್ಯ ಬಂಬಾರದ ಮಾತು ಕಥೆಗಳನ್ನಾಡುತ್ತಿರುವರು ಆಸ [illegible] ಕೆಲಸ ಮಾಡುತ್ತಿದ್ದನ್ನು ನೋಡುತ್ತಾ [illegible] ತಪ್ಪು [illegible]

ಶ್ರೀ ರಾಜೇನಾಮೆ ಕೊಡಬೇಕಾಗಿತ್ತು. ಮಹಾತ್ಮರು, ದೇಶಬಂಧು ದಾಸರು ಪಂಡಿತರು, ಲಾಲಾ ಲಜಪತರಾಯರು, ಇನ್ನೀ ಬಂಧುಗಳಂಥವರು ಹುಟ್ಟಿ ಸತ್ತು ಹೋಗುತ್ತಿರುವಾಗ ಇವರು ಕುತ್ತಿಗೆಯು ಗಾದಿಯ ಬಳಿಗೆ ಕೂಡುವ ಮಂತ್ರಿಯ ಅಧಿಕಾರ ಸೋಲಿಸು ತ್ತಿದ್ದದ್ದು ಆಶ್ಚರ್ಯವಾದ ಶಿಷ್ಟು! ಇದು ಪಿಟವಾದ ಮಂತ್ರಿತ್ವವಲ್ಲ. ಆ ಟೀಕೆ ಮಾಡಿದ ಮೇಲೆ ಸಂತರು ತ್ತದೆಂದು ನಮಗೇ ಹಿಂದುಗಡೆ ಅನುಭವ ಬಂತು. ಆ ಕರೆ ಆ ನೇಸ! ಮತ್ತು ಮಲ್ಲಿನಾಥ ಮನ್ನು ಕೇಳಿದಂ ತು ಒಗೆಯಿ ದ ಮಾಡಿ ಪ್ರಯೋಜನವೇನು! ದಿವಾನರ, ಯಾವ ಪಕ್ಷವನ್ನೇ ಕೂಡದೆ; ಯಾರೊಬ್ಬರ ಸ್ನೇಹಿತ್ವಕ್ಕೆ ವಡಲ್ಲಾಗಿ ಹುರಿಗಟ್ಟಲಿ ಅದರ ನ ಗ್ಯದ ಪರಿಣಾಮವಂತೂ ಕಣ್ಣಿಗಾಣನ್ನು ಹೋರಿನಲ್ಲಿ ನೂಗಿಸ ಮೇಲೆ ಮೆಟ್ಟಿಗೆ ಹಾಕುವಂತಾಗಿರುವದು ಸಿಟು.

— —

ಕಾಗಲ ಸಂಸ್ಥಾನದ ಮೇಲೆ ಕೇಸು

ಕಾಗಲ ಸಂಸ್ಥಾನವು ಕೊಲ್ಹಾಪೂರ ಸಂಸ್ಥಾನದಲ್ಲಿ ಚಿಕ್ಕ ಸಂಸ್ಥಾನವಾಗಿದೆ. ಸ್ವರ್ಗವಾಸಿ ಮಹಾರಾಜರು ಈ ಮನೆತನದವರೇ ಕಾಗಲದ ಸಧ್ಯದ ಅರಸರು ರಾಜ್ಯಕಾರಭಾರದಲ್ಲಿ ಬಹಳವಾಗಿ ಅವ್ಯವಸ್ಥೆ ಮತ್ತು ಅನಾಚಾರವನ್ನು ಮಾಡಿಸಿದನೆಂಬ ಆರೋಪವಿದ್ದು, ಮಹಾರಾಜರು ಇದರ ದಿವಾನ, ಪೋಲೀಸ ಮತ್ತು ಫೌಜದಾರಿ ಅಧಿಕಾರಿಗಳನ್ನು ಆಕಸ್ಮಿತು, ಮೇಲ್ವಿಚಾರಣೆಯನ್ನು ತಮ್ಮ ಕಡೆಗೆ ತೆಗೆದುಕೊಂಡ ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

—— •

ಕೌನ್ಸಿಲ ಉಮೇದವಾರ-

ಒಕ್ಕಾರಿಯ ಸುಪ್ರಸಿದ್ಧ ವಕೀಲರಾದ ಶ್ರೀ. ಜಿಲ್ಹೇಕರ ಭೀಮರಾಯರು ಕೌನ್ಸಿಲ ಚುನಾವಣೆಯಲ್ಲಿ ಆ ಜಿಲ್ಹೆಯ ಪಕ್ಷದಿಂದ ಉಮೇದವಾರರಾಗಿದ್ದಾರೆ. ಇವರ ಪ್ರೋತ್ಸಾಹನ ಮತ್ತು ಮುಂದಾಳುತನದಿಂದಲೇ ಒಕ್ಕಾರಿಯಲ್ಲಿ ಬರುವ ತಿಂಗಳಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು, ಸಾಹಿತ್ಯ ಪರಿಷತ್ತು, ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತುಗಳು ಕೂಡುವವು. ಕೌನ್ಸಿಲಗಾಗಿ ಇವರನ್ನು ಆರಿಸಿ ಕೊಡುವರೆಂದು ಪೂರ್ತಿ ನಂಬಿದ್ದೇವೆ.

——

ರಾಜ್ಯಕಾರಭಾರದಲ್ಲಿ ಸುಧಾರಣೆ-

ಒಡೆಸೇಯ ರಾಜ್ಯಕಾರಭಾರವು ಇಂಗ್ಲಿಷ ಪದ್ಧತಿಯಂತೆ ಪುಟ್ಟ ಮಂತ್ರಿಮಂಡಳ ಮತ್ತು ಸೇಕ್ರೆಟರಿ, ಅಂಡರ ಸೇಕ್ರೆಟರಿ ಮೊದಲಾದವರ ಕ್ರಮಪ್ರಕಾರ ನಡೆಯಬೇಕೆಂದು ಶ್ರೀಮಂತ ಸರಕಾರದವರ ಮಹಾರಾಜರು ಅಜ್ಞೆ ಮಾಡಿದ್ದಾರೆ. ಈಗಿನ ದಿವಾನರಾದ ಸರ ಮನುಭಾಯಿಯವರು ಗವ್ಹರ್ನರ ನಂಥ ಅಧಿಕಾರಿಯಾಗಿ, ಮಂತ್ರಿಮಂಡಳದ ಅಧ್ಯಕ್ಷರಾಗುವರು. ಕಾರಭಾರದಲ್ಲಿ ಸುಧಾರಣೆಯಾದಂತೆ ಆ ಕಾಲ ಅಂದಾಜದಲ್ಲಿ ಸುಧಾರಣೆಯಾಗಿದ್ದರೆ ಪ್ರಜರು ಅನಂತೃಪ್ತರಾಗಿ ಸಂಪು, ಹರತಾಳ ಮತ್ತು ಉಪೋಷಣೆಗಳನ್ನು ಮಾಡುತ್ತಿದ್ದರು.

——

ಅಮ್ಮನವರ ಗುಪ್ತ ಪರಿಷತ್ತು-

ಅನಿವಿಯುಂಟವ್ಮನವರು ಮುಂಬಯಿಯಲ್ಲಿ ಕಾಮನವೆ ಬಿಲ್ಲಿನ ಕುದುರೆಯನ್ನು ಮುಂದೆ ಹಾಕಿ ಕೊಳ್ಳುಗ, ಮದ್ರಾಸ ಸಂಯುಕ್ತ ರಾಷ್ಟ್ರೀಯ ಪರಿಷತ್ತು ಕೂಡುವ ಮುಂಚೆಯಾಗಿ ತಮ್ಮ ಪಕ್ಷದ ಗುಪ್ತ ಕಮಿಟಿ ಕೂಡಿಸಿದ್ದರು. ನಂ ಮೋರೋಪಂತ ಜೋಶಿ, ಬ್ಯಾರಿಸ್ಟರ ಜಯಕರ ಮೊದಲಾದ ೩೫ ಜನರು ಈ ರಹಸ್ಯದಲ್ಲಿ ಸೇರಿದ್ದರು. ಮದ್ರಾಸಿಗರು ತಮ್ಮ ಪರಿಷತ್ತಿನಲ್ಲಿ ಕಾಮನಬಿಲ್ಲು ಬಿಲ್ಲಿಗೆ ಹೇಗೆ ಸಹಾಯ ಮಾಡುವರೆಂಬುದನ್ನು ನೋಡಿಕೊಂಡು, ಕುದುರೆಗೆ ಹಣೆ ಪಟ್ಟಿ ಕಟ್ಟಿ ಬಯಲಿನತ್ತ ವರು, ಬಯಲಿರೆಂದು ಹೊರಗೆ ಬಿಡುವರು.

——

ಆಸಿಯಮೇಲೆ ಮೊರೆಹೊಗ-

ತ್ರಾವಣಕೋರ ಸಂಸ್ಥಾನದಲ್ಲಿ ಅಂತ್ಯಜರು ಪುನಃ ಸತ್ಯಾಗ್ರಹ ಪ್ರಾರಂಭಿಸಕ್ಕನರಿದ್ದಾರೆ. ಬೇರೆ ಹಿಂದೂ ಜನರಂತೆ ಇವರಿಗೂ ಗುಡಿಗುಂಡಾರದಲ್ಲಿ ಅನಿರ್ಬಂಧವಾಗಿ ಹೋಗುವ ಜನ್ಮಸಿದ್ಧ ಹಕ್ಕು ಇರಬೇಕೆಂದು ಮಹಾತ್ಮರು ಒಂದು ಉತ್ತೇಜಕ ಪತ್ರವನ್ನು ಕಳಿಸಿದಾರೆ. ಸತ್ಯಾಗ್ರಹಿಗಳು ಇದನ್ನು ಆಸೆಯ ಮೇಲಿಟ್ಟು ಮೆರವಣಿಗೆ ಸಾರ್ವಜನಿಕ ಸಭೆಯ ಸ್ಥಾನಕ್ಕೆ ಬಂದರು ಮತ್ತು ಮುಂದೆ ಸರಕಾರವು ದೇವಾಲಯಗಳ ಮೊರೆಹೊಗಲು ಅದನ್ನು ಪುನಃ ಮೆರೆಸು ತ್ತಾ ಸತ್ಯಾಗ್ರಹದ ಮುಂದರಿಕ್ಕೆ ಪ್ಯದರು.

——

ವೈಕುಂಠಕ್ಕೆ ಹೋಗುವದಕ್ಕೆ ಕುಂಟನಾಸನ ಮಧ್ಯಸ್ಥಿಕೆ ಏಕೆ?

—o—

ಸಿಂಧದ ಪ್ರಮುಖರಾದ ಡಾಕ್ಟರ ಚೊಥರಾಮ, ಜಯರಾಮದಾಸ, ಮೊದಲಾದವರು ಹೆಸರಾದ ಅಸಹಕಾರಿಗಳು. ಇವರು ಕೌನ್ಸಿಲದ ಚುನಾವಣೆಯಲ್ಲಿ ಉಮೇದವಾರರಾಗುವರು. ಶಿಸ್ತಿನ ಮೂಲಕ ಇದರಂಥ ಪ್ರತಿಬಂಧವನ್ನು ತೆಗೆದು ಹಾಕಬೇಕೆಂದು ಅಲ್ಲಿಯ ಕಾಂಗ್ರೆಸ ಕಮಿಟಿ: ಇವರು ಮುಂಬಯಿ ಸರಕಾರಕ್ಕೆ ಪತ್ರ ಬರೆದರು. ವೈಕುಂಠಕ್ಕೆ ಹೋಗುವವನಿಗಾಗಿ ನಿಮ್ಮ ಮಧ್ಯಸ್ಥಿಕೆ ಏಕೆ? ಅವರೇ ಅರ್ಜಿ ಮಾಡಿಕೊಳ್ಳಲೆಂದು ... ಉತ್ತರ ಬರೆದಿದ್ದಾರೆ.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ ವಿವೇಚನೆಯು.

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನು, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನೂ ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯ ಮಾಡಿದ್ದೇವೆ. ವಿಜಯದ ಜೊತೆ ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಟಾಲೋಚಕ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಅದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಲ್ಸಿನ ಪಕ್ಷವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಂದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಚುನಾವಣೆಯ ಮತ್ತು ಪಕ್ಷಾಧಿಕಾರದ ಕೊಡಕೆಯಲ್ಲಿ ದೀಕದೆ. ದೇಶಹಿತ ಮಾಡುವ ಪಕ್ಷಕ್ಕೇ ಹೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷವು ನಿಶ್ಚಯವಾಗಿ ಅಧಿಕ ಕಾರ್ಯಕ್ಷಮವಾದುವ ... ಓದಿರಿ. ಅಂದರೆ ಒಂದು ವರ್ಷದ ಒಳಗೆ ಓದ ಬರುವ ಬಲ್ಲವರು ವಿಜಯವನ್ನು ಸ್ವತಃ ಓದಬೇಕು. ಬರದವರು ಅ ನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತನನ್ನೇ ಮೂಲ ಹಿತವಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಚಂದಾ ನಿರ್ಣಯ. ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೨-೦-೦. ವಾರ ಪತ್ರಕ್ಕೆ ೩-೧೨-೦

——

ಧಾರವಾಡ—

ರಾಷ್ಟ್ರೀಯ ಸಪ್ತಾಹದಲ್ಲಿ ಇಲ್ಲಿಯ ಕಾಂಗ್ರೆಸ ಕಮಿಟಿಯವರು ಮನೆಮನೆಗೆ ... ನಿಸ್ತು ಒಂದು ಸಾವಿರ ರೂಪಾಯಿಯ ... ಮಾರಬೇಕೆಂದಿದ್ದಾರೆ.

ನೋಟೀಸು.

—೦—

ಕೃಷ್ಣ ಕೋಮ ಭೀಮು ಹೋಮಕರ ಸಾಕೀನ ಹುಬ್ಬಳ್ಳಿ ಹಾಲಿವಸ್ತಿ ಗದಗ ಇವಳಿಗೆ-

ಕಳಗೆ ಸಹಿ ಮಾಡುವ ಭೀಮು ತಂದಿ ಫುಂಡಲೀಕಪ್ಪಾ ಹೋಮಕರ ಸಾಕೀನ ಹುಬ್ಬಳ್ಳಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದುವೆಯ ಹೆಂಡತಿಯಾಗಬೇಕು ನಿನ್ನ ತಾಯಿಯು ವ್ಯಭಿಚಾರಿಯು ಈ ಮಾತು ನನಗೆ ತಿಳಿಸಿದೆ, ನಿನ್ನನ್ನು ನನಗೆ ಮದುವೆ ಮಾಡಿಕೊಟ್ಟಳು. ಈ ಸಂಗತಿಯು ನನಗೆ ತಿಳಿದ ಮೇಲೆ ಸಹ ನಾನು ನಿನ್ನ ಕೂಡ ಪ್ರಪಂಚ ಮಾಡಿದ ನಿನ್ನ ಹೊಟ್ಟೆಯಿಂದ ಒಂದು ಹೆಣ್ಣು ಹುಟ್ಟಿದ ಅಜಮಾಸು ಮೂರು ವರ್ಷಗಳ ಹಿಂದ ನೀನು ನನ್ನ ಮನೆ ಬಿಟ್ಟು ಹೊರಬಿದ್ದು ಹೋದಿ ಹೋಗುವಾಗ ನಾಲ್ಕು ನೂರು ರೂಪಾಯಿ ರೋಖ ಮತ್ತು ಐದು ನೂರು ರೂಪಾಯಿಯ ದಾಗೀನ ಮತ್ತು ಶೀರೆ ಕುಬಸಾ ನನಗೆ ತಿಳಿಯದೆ ನೀನು ನಿನ್ನ ಜವಾಬು ಮಾಡಿ, ಕರಿಯ ಅಕ್ಕಬಂದೆ ನಂಬಿ ಕಡೆಯಿಂದ ಹೇಳಿಸಿದೆ ನೋಟೀಸು ಕೊಟ್ಟ ಯಾವದಕ್ಕೂ ದರಕಾರ ಮಾಡಲಿಲ್ಲ. ಅನಂತರ ನೀನು ಬುದ್ಧಿಬಂದು, ಬಾಳೆವೆ ಮಾಡ ಬಂದು ನನ್ನ ಕಡೆಗೆ ಒರಲಿಲ್ಲ ಮತ್ತು ಓದುವ ಆಶೆ ಅಥವಾ ಮಾರ್ಗ ಯಾವದೂ ತೋರಲಿಲ್ಲ ಕಾರಣ ನಾನು ನಿನಗೆ ಈಗ ಎರಡನೇ ನೋಟೀಸು ಕೊಟ್ಟಿರುತ್ತೇನೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ರೋಖ ರಕಮು ದಾಗೀನೆ ತಕ್ಕೊಂಡು ಬಂದು ಗುಣಶೀಲ ಪ್ರಪಂಚ ಮಾಡಿಕೊಂಡಿರಬೇಕು ಜರ ಇದಕ್ಕೆ ತಪ್ಪಿದರೆ- ನೀನು ನನ್ನ ಕೂಡ ಪ್ರಪಂಚ ಮಾಡಲಿಕ್ಕೆ ಹಕ್ಕಿಲ್ಲಾ ಅಂತ ತಿಳಿದು, ನಾನು ನಿನ್ನನ್ನು ಬಿಟ್ಟು ಬಿಡುವೆನು ಮತ್ತು ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು ನಾನು ನನ್ನ ಧರ್ಮ ಪ್ರಕಾರ ಮ್ಯಾಜಿಸ್ಟ್ರೇಟ ... ನು ಧರ್ಮದಲ್ಲಿ ಸೇರಿಕೊಂಡು, ಬೇರೆ ಮದುವೆ ಮಾಡಿಕೊಳ್ಳುವೆನು ಈ ನಂತರ ನಿನ್ನ ಹಕ್ಕು ವ ನಿನ್ನ ... ಬಾದಲ್ಲಿರುವ ಕೂಸಿನ ಹಕ್ಕು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಮತ್ತು ನಿನಗೆ ಅಥವಾ ನಿನ್ನಲ್ಲಿರುವ ಕೂಸಿನ ಉಪಜೀವನದ ಬಗ್ಗೆ ಪೋಟಗಿ ವಗೈರೆ ಏನೂ ದೊರೆಯಲಾರದು ಅಂತಾ ತಿಳಿಸಿದ ನೋಟೀಸು ಮತ್ತು ನನ್ನ ರಕಮು ಹಾಗು ದಾಗೀನೆಗಳ ದೆಸೆಯಿಂದ ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ ವಸೂಲ ಮಾಡುವೆನು ಆ ಸಂಬಂಧಿ ಹತ್ತುತ ಯಾವತ್ತು ಖರ್ಚಿನ ಬೋಜಾ ನಿನ್ನ ಮೇಲೆ ಮತ್ತು ನಿನಗೆ ಫೂಲತಾಫ ಕೊಡುವವರ ಮೇಲೆ ಬೀಳುತ್ತದೆ ಈ ನೋಟೀಸಿನ ಬಗ್ಗೆ ನಿನ್ನ ವಿಚಾರ ತಿಳಿಯುವದು ತಾ॥ ೬ ಏಪ್ರಿಲ ೧೯೨೩ ನೇ ಇಸವಿ.

ಭೀಮು ತಂದಿ ಫುಂಡಲೀಕಪ್ಪಾ ಹೋಮಕರ ಸಾಕೀನ ಹುಬ್ಬಳ್ಳಿ.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲವೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಪ್ಪನು— ತಂದೀ— ಹೌದು ಮೈಯೆಲ್ಲಾ ನೋಯುತ್ತದೆ.

ತಂದೆ— ಹಾಗಾದರೆ ಮೊಹಮ್ಮಟ ಕಂಪನಿ ತರಿಸಿಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲಾ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಶಿವ್ಯತ್ತು ತೀರಕುಸು. ಎಂದೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಔಷಧವನ್ನು ತಯಾರ ಮಾಡಿ ಕೊಡುವೆವು.

ಶ್ರೀನಿವಾಸ— ನಕಾರಟಿತ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ್ಸ, ಮತ್ತು ಡ್ರಗಿಸ್ಟ್ಸ,
ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗರ್ಮಿ ಗಜ್ಜಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಕಾರವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟದೆ ... ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ ಹುಬ್ಬಳ್ಳಿಯ ... ಶನಕಾದಕ್ಕ ಮೆಡಿಕಲ ಸ್ಟೋರ್ಸ ಸ್ಟೇಶನರೋಡ ಹುಬ್ಬಳ್ಳಿ ರೋಕ ... ಕಡುಕಾರದಿಂದ ದೊರೆಯುವದು.

ಎನ. ಎಸ. ಪಂಚರ
ಖಡೇಬಝಾರ ಬೆಳಗಾವಿ

ನೋಟೀಸು

ಜಸಬಸಯ್ಯಾ ತಂದಿ ... ದನಗುಂಡಿ ಮಠ ಸಾ॥ ಯತ್ತಿನಗುಡ್ಡ ತಾಲೂಕ ಧಾರವಾಡ ಇವರಿಗೆ-

ನಾನು ಕಲ್ಲಪ್ಪಾ ತಂದಿ ಬಸಪ್ಪಾ ಖಾರೆಗೊಪ್ಪ ಸಾಕೀನ ಯತ್ತಿನಗುಡ್ಡ ತಾಲೂಕ ಧಾರವಾಡ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ವ ಬಸವಂತಗೌಡಾ ... ವೀರೇಂದ್ರಗೌಡಾ ವ ನೀಲಪ್ಪಗೌಡಾ ವ ... ಇವರು ಕೂಡಿ ಕಳೆದ ಶಿವರಾತ್ರಿ ಅದನಂತ್ರ ನನ್ನ ... ಇಲ್ಲದ ವೇಳೆ ಮತ ಹಾಕಿ ನನಗೆ ಧಾರವಾ ... ಕರಕೊಂಡು ಒಂದು ನಿನ್ನ ಮನೆಯಲ್ಲಿ ತುಡುಗಿನ ಸಾಮಾನ ತಿಕ್ಕದೆ ನಿನ್ನ ಮೇಲೆ ಬಿಟ್ಟಿ ಆ ... ಅಂತಾ ವಗೈರೆ ಬೆದರಿಕೆ ಹಾಕಿ ನನಗೆ ಬಿಡಿಸಿಕೇವೆ ... ಈ ಕಾಗದದ ಮೇಲೆ ಹೆಬ್ಬಟ್ಟಿನ ಗುರ್ತಾ ಮಾಡು ಅಂತಾ ಹೇಳಿ ಒತ್ತಾಯದಿಂದ ಒಂದು ಕಾಗದದ ಮೇಲೆ ನನ್ನ ಹೆಬ್ಬಟ್ಟಿನ ಗುರ್ತಾ ಮಾಡಿಸಿಕೊಂಡಿರತೀರಿ ಈಗ ಸದರಿ ಕಾಗದಾ ಮೂರುನೂರು ರೂಪಾಯದ ಪ್ರಾಮೆಸರೀ ನೋಟು ಇರತದೆ ಅಂತಾ ತಿಳಿಯುತದೆ ಆದರೆ ನಾನು ನಿನ್ನಲ್ಲಿ ಎಂದೂ ಸಾಲಾ ಮಾಡಿಲ್ಲಾ ವ ಪ್ರಾಮೆಸರೀ ನೋಟು ಬರಕೊಟ್ಟಿಲ್ಲಾ ಮತ್ತು ನೀನು ನನಗೆ ಎಂದೂ ಮೂರು ನೂರು ರೂಪಾಯಿ ಕೊಟ್ಟಿಲ್ಲಾ ಹೀಗಿದ್ದು ಸುಳ್ಳು ಸಮಜೂತ ಕೊಟ್ಟು ಒತ್ತಾಯದಿಂದ ಸದರ ಕಾಗದಾ ಬರಿಸಿಕೊಂಡದ್ದರಿಂದ ಸದರೀ ಕಾಗದಾ ನನ್ನ ಮೇಲೆ ಬಾಧಾಯಿಸಲಾರದು ಅದು ರದ್ದು ಇರುತ್ತದೆ. ಮತ್ತು ಅದರ ಆಧಾರದ ಮೇಲೆ ನೀನು ನನ್ನ ಕಡಿಂದ ಮೂರು ನೂರು (೩೦೦) ರೂಪಾಯಿ ವಸೂಲ ಮಾಡಲಿಕ್ಕೆ ಬರಲಾರದು ತಿಳಿಯೋದು ಅಂತಾ ಕೊಟ್ಟ ನೋಟೀಸು ಸಹಿ ತಾ. ೬-೪-೧೯೨೩ ಇಸ್ವಿ.

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಕಲ್ಲಪ್ಪಾ ತಂದಿ ಬಸಪ್ಪಾ ಇವರದು ಅದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1468

ಸಾಪ್ತಾಹಿಕ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ೧ ರುವಾರ ೨೯ನೇ ಎಪ್ರೇಲ ೧೯೩೮ (ಸಂಚಿಕೆ ೮೦

ಸರಕಾರದಿಂದ ಪೇಟೆಂಟ ದೊರಕಿದ



ಮಲ್ಲಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ರೂ.
ನಂ ೨	೫೫	,,	೪೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ
ಜಿಲ್ಹಾ, ಸಾತಾರಾ

ಜಾಹೀರಾತು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೇಬೆನ್ನೂರ ಶಿಟಿಸರ್ವೇ-ಹದ್ದಿನೊಳಗಿನ ಯಾವತ್ತು ಜನರಿಗೂ ಮತ್ತು ಯಾವತ್ತರಿಗೂ ತಿಳಿಸೋದೇನಂದರೆ ರಾಣೇಬೆನ್ನೂರಲ್ಲಿ ಸ್ಟೇಶನ್ ರಸ್ತೆಕ್ಕೆ ಹೊಂದಿ ಪೋಸ್ಟ ಲೋಕಲ್‌ಬೋರ್ಡ ಮ್ಯುನಿಸಿಪಾಲಿಟಿ ಕಚೇರಿಗಳ ಮಧ್ಯದಲ್ಲಿ ಇರೋ ನನ್ನ ಮಾಲ್ಕಿ ವ ವಹಿವಾಟಿಯುಳ್ಳ ಬಂಗ್ಲೆ ಇದರ ಖುಲ್ಲ ಜಾಗಾ ಸಹಾ ಸಿಟಿಸರ್ವೆ ನಂಬರ ೧೮೩೪|೨ ಇದರ ಅಜಮಾಸ ಕಿಮ್ಮತ ೬೦೦೦ ರೂಪಾಯಿ ಇದನ್ನು ತಾರೀಖು ೧೧-೪-೧೯೩೮ ಇಸ್ವಿ ದಿವಸ ಮಾರಕಕ್ಕಿಡುವದ್ದೇನೆ. ಬೇಕಾದವರು ಸದರ ಮುದ್ದತಿನ ಒಳಗಾಗಿ ಟೆಂಡರ ಕಳ್ಸಬೇಕು. ಸವಿಸ್ತಾರ ಆಗರ ಟಪಾಲದ್ವಾರ ಮಾಹಿತಿ ತಿಳಕೊಳ್ಳಬಹುದು

ವೆಂಕಟೇಶ ರಾಮಚಂದ್ರ ಅಳಲಗೇರಿ ಸಾ|| ರಾಣೇಬೆನ್ನೂರ ಹಾಲವಸ್ತಿ ಪೊಬಸರ ಪರಳಕರ ತಾಲ್ಲೂಕ ರಾಣೇಬೆನ್ನೂರ

ವಿಜಯದ ವರ್ಗಣೀ ದರ

ಪತ್ರಪತ್ರಕ್ಕೆ

೨ ತಿಂಗಳಿಗೆ	೧೨—೮—೦ ರೂ
	೬—೨—೦ ರೂ
,,	೪—೦—೦ ರೂ
ಸಂಘಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ತಿಂಗಳ ಕಾಲಮಿನ ಹತ್ತು ಪಙಕ್ತಿಗೆ ಒಂದು ಆಣೆಯಾಯಿತು ಮುಂದೆ ಪ್ರತಿಯೊಂದು ಪಙ್ತಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಪಙ್ತಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡವನ್ನು ಮಾಡುವದಾದರೆ ಆ ಆಣೆ ಡಬಲ್‌ಕಾಲಮಿನ ಜಾಹಿರಾತಿ ವಿಮ್ಮತಿಯಾಗಿ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡ ಬೇಕು ಇಟ್ಟುಕೊಳ್ಳಲಾಗುವದು. ದರವನ್ನು ಸಾಕ್ಷಾತ್ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಭಟ್ಟ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೯ ನೇ ಕೋಆಪರೇಟಿವ್ಹ ಸೊಸಾಯಿಟಿಯ ಕಾಯಿದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ... ಲಕ್ಷದ ಮೇಲ್ಪಟ್ಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಕಾಯಂ ಮತ್ತು ಚಾಲು ಖಾತೆಯ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಹೆಚ್ಚಿನ ಮಾಹಿತಿ, ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ... ಜಹಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೮-೪-೨೬ ನೇ ಇಸ್ವಿ

ಸಂಯುಕ್ತ ರಾಷ್ಟ್ರೀಯ ಸಂಘ ಸ್ಥಾಪನೆ.

ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಮುಂಬಯಿಯಲ್ಲಿ ದಿವಾನ ಬಹಾದ್ದೂರ ಚಿಂತಾಮಣಿಯವರ ಸಂಯುಕ್ತ ರಾಷ್ಟ್ರೀಯ ಸಂಘದ ಪ್ರತಿಷ್ಠಾಪನೆಯು ಸರ ತೇಜ ಬಹಾದ್ದೂರ ಸಪ್ರುರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಈ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಬರಬೇಕೆಂದು ೫೫೦ ಜನರಿಗೆ ಆಮಂತ್ರಣ ಕಳಿಸಿದ್ದರು. ಬ್ರಾಹ್ಮಣ-ಬ್ರಾಹ್ಮಣೇತರ ಮೊದಲ್ಗೊಂಡು ರಾಜಕೀಯ ಪ್ರಸಕ್ತಿಯಲ್ಲಿ ಮುಂದೊಗೆದಿರುವಂಥ ಪ್ರತಿಯೊಬ್ಬರಿಗೂ ಪತ್ರ ಬರೆದಿದ್ದರು. ಇವರಲ್ಲಿ ೧೩೫ ಜನರು ಮಾತ್ರ ದಯ ಮಾಡಿಸಿದರು. ಮುಂಬಯಿಯ ಜನರ ಸಂಖ್ಯೆಯು ದೊಡ್ಡದಾಗಿತ್ತೆಂದು ಹೇಳಲವಶ್ಯವಿಲ್ಲ. ಸಭೆಯಲ್ಲಿ ನಡೆದ ಭಾಷಣಗಳೆಲ್ಲ ಗುಪ್ತವಾಗಿದ್ದವು. ವರದಿಗಾರರಿಗೆ ಕೂಡ ಮಜ್ಜಾವು ಮಾಡಿದರು. ವರ್ತಮಾನ ಪತ್ರಕಾರರ ಪ್ರತಿನಿಧಿಗಳಿಗೆ ಅನುವು ಕೊಡಲಿಲ್ಲ. ಸಭೆಯಲ್ಲಿ ನಡೆದ ವಿದ್ಯಮಾನಗಳನ್ನು ಮಾತ್ರ ಸಾರಾಂಶದಿಂದಲೂ ಠರಾವುಗಳನ್ನು ಇದ್ದಕ್ಕಿದ್ದಂತೆಯೂ ಪ್ರಸಿದ್ಧ ಮಾಡಿದ್ದಾರೆ.

ಮವಾಳವೆಂಬ ಹೆಸರು ಹಿಂದೀ ಜನರಿಗೆ ಒಳ್ಳೆ ಬಲವಂತದ್ದಾಗಿರುತ್ತದೆಂದು ಕೂಡಿದವರಿಗೆಲ್ಲ ಅನಿಸಿತು. ಗೊಂದಾ, ಗೊಂದಾ, ನವಣೇ ನವಣೇ ಎಂದಂತೆಯೇ ಸೈ. ಮೊದಲು ಈ ಹೆಸರಿಗೆ ತಿಲಾಂಜಲಿ ಕೊಟ್ಟು, ಸಂಯುಕ್ತ ರಾಷ್ಟ್ರೀಯ ಸಂಘವೆಂಬ ಮಾರ್ಮಿಕ ಹೆಸರಿಟ್ಟುಕೊಂಡರು. ಬ್ರಾಹ್ಮಣೇತರರು ಅಖಿಲ ಭಾರತೀಯ ಬ್ರಾಹ್ಮಣೇತರ ರಾಷ್ಟ್ರೀಯ ಸಭೆ ಎಂದು ಹೆಸರಿಟ್ಟುಕೊಂಡ ಬಳಿಕ, ಇವರೇಕೆ ಸಂಯುಕ್ತ ರಾಷ್ಟ್ರೀಯ ಸಂಘವೆಂದಿಟ್ಟುಕೊಳ್ಳಬಾರದು? ತವರ ಮನೆಯ ಹೆಸರು ಬದಲಾಗಿ ಅತ್ತೆಯ ಮನೆಯ ಹೆಸರು ಬೇರೆಯಾದರೂ ಹುಡುಗೆಯ ಹುಟ್ಟು ಗುಣ ಹೋಗುವದುಂಟೇ? ಅದೇ ಪ್ರಕಾರ ಹೆಸರು ಬದಲಾಯಿಸಿದರೂ ಮವಾಳ ಸ್ವಭಾವ ಹೋಗಿರುವದಿಲ್ಲ. ಅಸಹಕಾರ, ಕಾಯದೆಭಂಗ, ಕೌನ್ಸಿಲ ವಿರೋಧ ಇವೆಲ್ಲ ಕಾಂಗ್ರೆಸದ ಮುಖ್ಯ ಧ್ಯೇಯಗಳಾಗಿವೆ ಇವನ್ನು ಮವಾಳರು ಹಿಂದೆ ವಿರೋಧಿಸಿದ್ದಾರೆ. ಮವಾಳವೆಂಬ ಹೆಸರಿದ್ದರೂ, ಮುಂದಾದರೂ ವಿರೋಧಿಸುತ್ತಿದ್ದರು. ಸಂಯುಕ್ತ ರಾಷ್ಟ್ರೀಯ ಸಂಘವಾದರೂ ಆ ವಿರೋಧವನ್ನು ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡಿದ್ದಾರೆ. ತಾವು ಸ್ವರಾಜ್ಯಕರ್ತರೆನ್ನುವಂಥ ದುರ್ಧಿಮಾನವು ಇವರ ಅಂಗಾಂಗಗಳನ್ನೆಲ್ಲ ಭೇದಿಸಿದೆ. ದಿವಾನ ಬಹಾದ್ದೂರ ಚಿಂತಾಮಣಿಯವರು "ಪಂಡಿತ ಮೋತಿಲಾಲರನ್ನು ಅಜ್ಞಾತವಾಸಕ್ಕೆ ಅಟ್ಟುವದರಲ್ಲಿ ತಮ್ಮ ಸಂಬಂಧವೇನೂ ಇದ್ದಿಲ್ಲೆಂದು" ಉಸುರಿದ್ದನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಆದರೆ ಇವರಿಗೆ ಸ್ಮರಣಶಕ್ತಿಯು ಬಹಳ ಕಡಿಮೆ ಎಂದು ಶ್ರೀ. ರಂಗಸ್ವಾಮಿಯ್ಯಂಗಾರರು ಹೇಳಿ, "ಯಾವತ್ತು ಪ್ರತಿಕಸಾಮರ್ಥ್ಯವನ್ನು ವೆಚ್ಚ ಮಾಡಿ ಅಸಹಕಾರದ ನಿಃಪಾತ ಮಾಡುವೆನೆಂದು ಬಾಣ ತೊಟ್ಟು ಮಹಾತ್ಮರನ್ನೂ, ಪಂಡಿತ ನೆಹರೂರವರನ್ನೂ ನೀವು ಎದುರಿಸಲಿಲ್ಲವೇ?" ಎಂಬದಾಗಿ ಸವಾಲು ಹಾಕಿದ್ದಾರೆ. ಸಂಯುಕ್ತ ರಾಷ್ಟ್ರೀಯ ಸಭೆಯ, ಇಂದಿನ ಠರಾವಾದರೂ ಇವರೀರ್ವರನ್ನು ಈಗ ಸಹ ಅಣಗಿಸಿ ತೆಗೆದಂತಿರುತ್ತದೆ. ಆದ್ದರಿಂದ ಇವರ ಠರಾವು ಕಾಂಗ್ರೆಸಕ್ಕೆ ಪ್ರತಿಕೂಲವಾಗಿಯೇ ಇರುವದು. ಕಾಂಗ್ರೆಸದಲ್ಲಿ ಸೇರಿ, ಅಲ್ಲಿ ತಮ್ಮ ಬಹುಮತ ಮಾಡಿಕೊಳ್ಳಬೇಕೆಂದು ಇವರು ಹತ್ತು ಮಾತುಗಳಲ್ಲಿ ಒಂದು ಮಾತಾಡಿದ್ದಾರೆ. ಆದರೆ ಇದರಲ್ಲಿ ತಥ್ಯವೇನೂ ಇರುವದಿಲ್ಲ. ಇವರ ಅಂತಿಮ ಧ್ಯೇಯವು ಶಾಂತರೀತಿಯಿಂದ ಸಾಹೇಬರುಗಳ ಸ್ವರಾಜ್ಯ ದೊರಕಿಸುವದಾಗಿರುತ್ತದೆ.

ಅಸೆಂಬ್ಲಿಯಲ್ಲಿರುವಾಗ ಪಂಡಿತ ಮಾಲವಿಯಾಯವರು ಬ್ಯಾರಿಸ್ಟರ ಜಿನ್ನಾಸಾಹೇಬರ ಸ್ವತಂತ್ರ ಪಕ್ಷದಿಂದೊಡೆದು ತನ್ನದೊಂದು ರಾಷ್ಟ್ರೀಯ ಪಕ್ಷದ ಕಲ್ಪನೆ ತೆಗೆದಿದ್ದರು. ಇವರು ಸಹ ಮುಂಬಯಿಗೆ ಬಂದು, ಸ್ವಂತ ಪಕ್ಷದ ಅಭಿಮಾನಬಿಟ್ಟು, ದಿವಾನ ಬಹಾದ್ದೂರರ ಸಂಗತಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿ, ಅದರ ದೀಕ್ಷೆ ತೆಗೆದುಕೊಂಡರು. ಇವರಂತೆ ಬ್ಯಾರಿಸ್ಟರ ಜಯಕರರೂ ಈ ಪಕ್ಷದಲ್ಲಿ ಸೇರಿದ್ದಲ್ಲದೆ, ಕಮೀಟಿಯ ಓರ್ವ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀ. ಕೇಳಕರರಂತೂ ಉಪಾಧ್ಯಕ್ಷರಾಗಿದ್ದಾರೆ. ಅಂದರೆ ಪ್ರತಿಯೋಗಿ ಸಹಕಾರ ಪಕ್ಷವೂ ಇದರಲ್ಲಿ ಮಿಶ್ರವಾಯಿತು. ಮವಾಳ ಮತ್ತು ಶ್ರೀ. ಕೇಳಕರರ ನಡುವೆ ಐಕ್ಯವಾಗುವ ಸಂಭವವೇ ಇದ್ದಿಲ್ಲ. ಯಾವಾಗಾದರೂ ಕೂಡಿದರೆ ಎಣ್ಣೆ ನೀರು ಕೂಡಿದಂತೆ ಕಾಣಿಸುತ್ತಿದ್ದರು. ದಿವಾನ ಬಹಾದ್ದೂರರು ಇವರನ್ನು ಕುರುಡನ ಕೈ ಹಿಡಿದಂತೆ ತನ್ನಂತೆ ಮಾಡಿಕೊಂಡರು. ಈ ಪ್ರಕಾರ ಮವಾಳರ ಮಹಾಮಹಿಮೆಯಿಂದ ದೇಶದಲ್ಲಿ ಸಂಯುಕ್ತ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ವರಾಜ್ಯವೆಂಬಂಥ ಬಣಗಳಾದವು. ಇವುಗಳ ನಡುವೆ ಸಂಘದಲ್ಲಿ ಚುನಾವಣೆಯಲ್ಲಿ ಹುಮ್ಮಸ ಮಾಡಿಕೊಳ್ಳುವ ವಿಷಯವಾಗಿ ಪ್ರಚಂಡವಾದ ಆಷೋಷವೂ, ಚಳವಳಿಯೂ ನಡೆಯುವಂತಾಯಿತು. ಈ ಎರಡು ಸಂಗತಿಗಳ ತುಮುಲ ಹೋರಾಟದಲ್ಲಿ ಬ್ರಾಹ್ಮಣೇತರ ಪಕ್ಷವು ತ್ರಿವೇಣಿ ಸಂಗಮದಲ್ಲಿ ಸರಸ್ವತಿಯಂತೆ ಗುಪ್ತಗಾಮಿನಿಯಾಗಬಹುದಾಗಿದೆ.

—

ಅಗ್ನಿ ಸಂಸ್ಕಾರಕ್ಕೆ ವಿಘ್ನ-

ನಾಗಪೂರ ಇಲಾಖೆಗೆ ಸೇರಿದ ಚಿಂದವಾಡದ ಶ್ರೀ. ತ್ರಿಯಂಬಕ ಘಾಟಕನೆಂಬ ವಿದ್ಯಾರ್ಥಿಯು ಬನಾರಸಿಗೆ ಓದಲಿಕ್ಕೆ ಹೋಗಿದ್ದನು. ಈತನು ದುರ್ದೈವದಿಂದ ಸಿಲೋನಿಯಾ ಪರ್ವತದ ಘಟ್ಟದಲ್ಲಿ ಸಿಕ್ಕು ಅದರ ಚಳಿಯಿಂದ ಪರಲೋಕವಾಸಿಯಾದನು. ಬ್ರಾಹ್ಮಣ ಧರ್ಮಪ್ರಕಾರ ಈತನಿಗೆ ಅಗ್ನಿ ಸಂಸ್ಕಾರ ಮಾಡತಕ್ಕದ್ದು. ಮೃತ್ಯುಪತ್ರದಲ್ಲಿ ಸುಡಬೇಕೆಂದು ಬರೆದಿಟ್ಟ ಹೊರತು ಯಾರಿಗೂ ಈ ತರದ ಅಂತ್ಯವಿಧಿ ಮಾಡಕೂಡದೆಂದು ಬನಾರಸದ ಕಾಯಿದೆಯು. ಘಾಟಕನು ಸಾಯುವಾಗ ಆ ಪ್ರಕಾರ ಮೃತ್ಯುಪತ್ರ ಬರೆದಿದ್ದರಿಂದ, ಅವನನ್ನು ಹುಗಿಯಲೇಬೇಕೆಂದು ಬನಾರಸ ಸರಕಾರದವರು ಆಗ್ರಹ ಹಿಡಿದರು. ಅಲ್ಲಿ ವಾಸವಾಗಿರುವ ಹಿಂದೂ ವಿದ್ಯಾರ್ಥಿಗಳು ೧೫ ದಿವಸಗಳ ತನಕ ಸರಕಾರದ ಕೂಡ ಹೋರಾಡಿ, ಘಾಟಕನಿಗೆ ಅಗ್ನಿ ಸಂಸ್ಕಾರ ಮಾಡಬೇಕೆಂದು ಅಪ್ಪಣೆ ಪಡೆಕೊಂಡು ಅಂತ್ಯ ದಹನ ಮಾಡಿದರು.

—

ಬಗದಾದದ ಗಡಿಯಲ್ಲಿ ಕಾಳಗ-

ಸೀರಿಯಾ ಮತ್ತು ಅರಬ ಕುಲದ ಎರಡು ಸಾವಿರ ಜನರು ಬಗದಾದದ ಸರಹದ್ದಿನಲ್ಲಿ ಇಂಗ್ಲಿಷ ಪಡೆಯ ಮೇಲೆ ದಾಳಿ ತಂದರು. ಇಂಗ್ಲಿಷರ ಚಿಲ್ಲರ ಬಂಡಿಗಳೂ, ವಿಮಾನಗಳೂ ಇವರ ಮೇಲೆ ಅಭಿಯೋಗ ಮಾಡಿ, ೪೫ ಜನ ವೈರಿಗಳನ್ನು ಕೊಂದರು. ವಿಮಾನಗಳು ಬಂದ ಕೂಡಲೆ, ವೈರಿಗಳು ರಾತ್ರಿಗೆ ಬುದ್ಧಿ ಹೇಳಿಸಿದರು.

—

ಸ್ವರಾಜ್ಯ ಪಕ್ಷೀಯರ ಸಭೆ-

ಮುಂಬಯಿಯಲ್ಲಿ ಪ್ರತಿಯೋಗಿ ಸಹಕಾರಿಗಳನ್ನು ಸಹ ಕೂಡಿಸಿಕೊಂಡು ಸ್ಥಾಪಿಸಿದ ಸಂಯುಕ್ತ ರಾಷ್ಟ್ರೀಯ ಮಂಡಲದ ಸಭೆಯು ನಡೆದಿರುವಾಗ- ಮಹಾರಾಷ್ಟ್ರ ಕಾಂಗ್ರೆಸ ಕಮೀಟಿಗಳು ಸೇರಿ, ಸ್ವರಾಜ್ಯ ಪಕ್ಷಕ್ಕೆ ಅನುಸರಿಸಿಯೇ ಉಮೇದವಾರರನ್ನು ನಿಲ್ಲಿಸಬೇಕೆಂದೂ, ಆ ಪ್ರಕಾರ ಯೋಗ್ಯ ಮತ್ತು ಅವಶ್ಯವಾದ ಕರ್ತವ್ಯಗಳನ್ನು ಮಾಡಬೇಕೆಂದೂ ಠರಾವುಗಳು ಪಾಸಾದವು.

ಹೀಬುವು ಸ್ವರಾಜ್ಯ ಪಕ್ಷ ಸೇರಿದರು.

ಅಕೋಲದಲ್ಲಿ ತಿಲಕರ ಪರಿಷತ್ತು ಕೂಡಿತ್ತು. ದಾದಾ ಸಾಹೇಬ ಕರಂದೀಕರರು ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ತಿಲಕರು ಸ್ವರಾಜ್ಯ ಪಕ್ಷವನ್ನೇ ಸೇರಬೇಕೆಂಬ ಠರಾವಾಯಿತು. ತಿಲಕರು ಒಂದು ಕಾಲದಲ್ಲಿ ಸರಕಾರದ ಅಪ್ರೀತಿಗೆ ಪಾತ್ರರಾಗಿದ್ದರು. ಕಳೆದೈದು ವರ್ಷಗಳಲ್ಲಿ ಅವರು ಕೊಂಡ ಓಸೆಯು ಸರಕಾರದ ವಿರುದ್ಧ ಅಸಹಕಾರ ಮಾಡುವಂತೆ ಪರಿಣಮಿಸಿದೆ. ಸರಕಾರದ ಹಾಸದಿಂದ ಸ್ವರಾಜ್ಯ ಪಕ್ಷಕ್ಕೆ ಲಾಭವಾಗಿರುತ್ತದೆ

ಜೈನರ ಹರತಾಳ-

ಪ ಲಿಟಾಣಾ ಸಂಸ್ಥಾನದಲ್ಲಿರುವ ಶತ್ರುಂಜಯವೆಂಬ ಜೈನ ಪವಿತ್ರಸ್ಥಾನದ ಯಾತ್ರೆಗೆ ಹೋಗುವ ಜನರಮೇಲೆ ಎರಡು ರೂಪಾಯಿಯ ತಲೆಪಟ್ಟಿ ಕೂಡಿಸಿದ್ದಾರೆ ಈ ಅನ್ಯಾಯ ಮತ್ತು ಜುಲುಮೆಯನ್ನು ನಿಷೇಧಿಸುವದಕ್ಕಾಗಿ ಹಿಂದುಸ್ಥಾನದಲ್ಲಿ ವಾಸವಾಗಿರುವ ಜೈನರೆಲ್ಲರೂ ಹರತಾಳ ಮತ್ತು ಉಪವಾಸ ಮಾಡಿದ್ದಾರೆ. ಅಹಮದಾಬಾದಿನಲ್ಲಿ ಜೈನರ ದೊಡ್ಡ ವಸತಿಯುಂಟು ಅಲ್ಲಿಯ ಹರತಾಳದಲ್ಲಿ ಮೂರು ಮಾರ್ಕೆಟುಗಳೂ ಅನೇಕ ಗಿರಣಿ- ಕಾರಖಾನೆಗಳೂ ಒಂದು ದಿವಸ ಬಂದು ಮಾಡಲ್ಪಟ್ಟವು

ಧಾರವಾಡ-

ಗುರುವಾರ ತಾ|| ೧-೪-೨೬ ನೇ ದಿವಸ ಅಖಿಲ ಕರ್ನಾಟಕ ಆಯುರ್ವೇದ ಮಂಡಳದ ಕಾರ್ಯಕಾರಿ ಸಭೆಯು ಡಾ| ಶಿರಹಟ್ಟಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಶ್ರಿಂಗೇರಿ, ಚಿತ್ರಕಲ್‌ದುರ್ಗ, ಹೊಸಪೇಟ, ಗದಗು, ಹುಬ್ಬಳ್ಳಿ ಮತ್ತು ಬೆಳಗಾವಿ ಮೊದಲಾದ ಸಭಾಸದರು ಬಂದಿದ್ದರು. ಅನೇಕ ಠರಾವುಗಳು ಪಾಸಾದವು. ಅವುಗಳಲ್ಲಿ ಡಾ| ಯಶವಂತರಾವ ನಾಡಗೀರ ಇವರನ್ನು ಮುಂಬಯಿಯ ಗ್ರಾಂಟ ಮೆಡಿಕಲ್ ಕಾಲೇಜದ ಪ್ರಿನ್ಸಿಪಾಲರನ್ನಾಗಿ ನೇಮಣೂಕ ಮಾಡಿದ ಬಗ್ಗೆ ಅಭಿನಂದನದ ಠರಾವು ಮತ್ತು ಇದೇ ತಿಂಗಳ ೯ ನೇ ತಾರೀಖಿನ ದಿವಸ ಬನಾರಸದಲ್ಲಿ ಪಂಡಿತ ಮದನಮೋಹನ ಮಾಲವಿಯರ ಅಧ್ಯಕ್ಷತೆಯಲ್ಲಿ ಕೂಡುವ ಅಖಿಲಭಾರತೀಯ ಆಯುರ್ವೇದಮಹಾಮಂಡಳದ ಕಾಂಗ್ರೆಸ್ಸಿಗೆ ಕರ್ನಾಟಕದ ಪರಿಯಿಂದ ಬೆಳಗಾವಿಯ ಡಾ| ಸವಣೂರ ಮತ್ತು ಶ್ರಿಂಗೇರಿಯ ವಿದ್ವಾನ್ ಕೆ. ಕೇಶವಶಾಸ್ತ್ರಿ ಇವರೀರ್ವರನ್ನು ಪ್ರತಿನಿಧಿಗಳಾಗಿ ನೇಮಿಸಿದ ಠರಾವುಗಳು ಮಹತ್ವದ್ದಾಗಿರುತ್ತವೆ.

ಬಂಗಾಲದಲ್ಲಿ ಬಿಟ್ಟ ಬಿರುಗಾಳಿಯ ಮೂಲಕ ಒಂದು ಸಾವಿರ ಕುಟುಂಬಗಳು ನಿರಾಶ್ರಿತವಾಗಿರುತ್ತವೆ.

ಕಲಕತ್ತೆಯ ದಂಗೆಯ ವಿಶೇಷ ಸುದ್ದಿ.

ಆದಿತ್ಯವಾರ ಪುನಃ ದಂಗೆಗೆ ಪ್ರಾರಂಭವಾಯಿತು. ಮುಖ್ಯವಾಗಿ ದಂಡು ಮತ್ತು ಪೋಲೀಸರ ಕಾವಲಿದ್ದಂಥ ಬೀದಿಗಳಲ್ಲಾಯಿತು. ಹಿಂದೂ ಮುಸಲಮಾನ ಪುಂಡರು ಸುಲಿಗೆ ಮಾಡಿ, ತಮ್ಮ ಕಿಸೆಗಳನ್ನು ತುಂಬಿಕೊಂಡರು ಪುಂಡರಿಗೆ ಇಂಥ ಸಮಯವೇ ಒಂದು ಹಬ್ಬ.

ಘಾಯ ಹೊಂದಿದ ಜನ ಸೈ ಹೊರಸಿನ ಮೇಲೆ ಹಾಕಿಕೊಂಡು, ಆಸ್ಪತ್ರೆಗೆ ಒಯ್ಯುವದೇ ಈ ದಿವಸ ಕಾಣಿಸುತ್ತಿತ್ತು. ಸಂದಿ ಗೊಂದಿಗಳಲ್ಲಿ ಸತ್ತ ಅಥವಾ ಘಾಯವಾದರೂ ಅಲ್ಲಲ್ಲಿ ದೃಷ್ಟಿಗೆ ಬೀಳುವವು. ಆಸ್ಪತ್ರೆಗಳೆಲ್ಲ ತುಂಬಿ ಹೋಗಿವೆ

ಕಾಂಗ್ರೆಸದ ಹ್ವಾಲಂಟಿಯರರು ಹಿಂದೂ ದೇವಾಲಯಗಳ ಸಂರಕ್ಷಣೆ ಮಾಡಿದರು. ಇವರ ನೆರವಿಗೆ ಮುಸಲಮಾನ ಹ್ವಾಲಂಟಿಯರರನ್ನೂ ಕಳಿಸಿದ್ದರು. ಪೋಲೀಸರು ಗುಡಿ ಗುಂಡಾರಗಳ ರಕ್ಷಣೆಯ ಕೆಲಸವನ್ನು ಕೈಕೊಂಡದ್ದರಿಂದ, ಹ್ವಾಲಂಟಿಯರರನ್ನು ತೆಗೆಯಬೇಕಾಯಿತು. ಈ ಕೆಲಸವನ್ನು ತಮಗೇ ಒಪ್ಪಿಸಬೇಕೆಂದು ಶ್ರೀ. ಸೇನಗುಪ್ತರು ಪೋಲೀಸ ಕಮೀಶನರರಿಗೆ ಬರೆದಿರುತ್ತಾರೆ.

ಅಸಿಸ್ಟಂಟ ಪೋಲೀಸ ಕಮೀಶನರರಾದ ಮಿ. ಬ್ಯಾನರಜಿಯವರನ್ನ ಮುಸಲಮಾನ ಪುಂಡರು ಹ್ಯೊಮುರಿ ಹೊಡೆದಿದ್ದಾರೆ. ೪೪ ಜನರ ಗುಂಪಿನಲ್ಲಿ ಇವರು ಒಂಟಿಗರಾಗಿ ಸಿಕ್ಕಿದ್ದರು. ಶಸ್ತ್ರಧಾರಿಗಳಾದ ಪೋಲೀಸರು ಕೂಡಲೆ ಬಂದು, ೩೦ ಜನರನ್ನು ದಸ್ತಗಿರ ಮಾಡಿದ್ದಾರೆ.

ಐವರು ಅಥವಾ ಐವರಿಗಿಂತ ಹೆಚ್ಚಿಗೆ ಜನರು ಗುಂಪುಗೂಡಬಾರದೆಂದು ಚೀಫ ಮ್ಯಾಜಿಸ್ಟ್ರೇಟರ ಜಾಹೀರನಾಮೆ ಹಚ್ಚಿದ ಬಳಿಕ, ಜನರು ತಂಡ ತಂಡವಾಗಿ ಸೇರುವದು ಬಂದಾಗಿದೆ.

---

೮೦ ಜನ ಮುಸಲಮಾನ ಫಕೀರರು ಸ್ತ್ರೀಯರು ಒಬ್ಬ ಹಿಂದುವಿನ ಮನೆಯಲ್ಲಿ ಜೀವ ರಕ್ಷಣೆ ಮತ್ತು ಮಾನರಕ್ಷಣೆಗಾಗಿ ಅಡಗಿ ಕೊಂಡಿದ್ದರು. ಪೋಲೀಸರು ಇವರನ್ನು ಸುರಕ್ಷಿತ ಸ್ಥಳಕ್ಕೆ ದಾಟಿಸಿದರು

ಪೋಲೀಸರು ಈ ವರೆಗೆ ಮುನ್ನೂರು ಜನರನ್ನು ದಸ್ತಗಿರ ಮಾಡಿದ್ದಾರೆ.

ವಿವಿಧ ವರ್ತಮಾನಗಳು

— o —

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಚುನಾವಣೆಯಲ್ಲಿ ೯ ಜನ ಲಿಂಗಾಯತರು, ೫ ಜನ ಬ್ರಾಹ್ಮಣರು, ಇಬ್ಬರು ಜೈನರು, ಇಬ್ಬರು ಬೇರೆ ಜನರು ಆರಿಸಲ್ಪಟ್ಟಿದ್ದಾರೆ. ಬೆಳಗಾವಿಯು ತಮ್ಮ ಹೆಡ್ ಕ್ವಾರ್ಟರವೆಂದು ಮರಾಠರು ತಿಳಕೊಂಡಿದ್ದಾರೆ. ಆದರೆ ಒಬ್ಬನೂ ಆರಿಸಲ್ಪಡಲಿಲ್ಲ.

ದೇಶಭಕ್ತ ಶ್ರೀನಿವಾಸರಾವ ಕೌಜಲಗಿಯವರು ಮುಂಬಯಿ ಕೌನ್ಸಿಲದ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಪರಿಯಿಂದ ಉಮೇದವಾರರಾಗುವರೆಂದು ವರ್ತಮಾನ ಬಂದಿದೆ.

ಕರಾಚಿ ಪಟ್ಟಣದಲ್ಲಿ ಎಲೆಕ್ಟ್ರಿಕ ಕಂಪನಿಯವರು ದೀಪದ ದರವನ್ನು ಹೆಚ್ಚಿಸಿದ್ದರಿಂದ, ಪಟ್ಟಣಿಗರು ಕಂಪನಿಯ ವಿರುದ್ಧ ಅಸಹಕಾರ ಮಾಡಿ, ದೀಪಗಳನ್ನು ಬಂದು ಮಾಡಿದ್ದಾರೆ. ಇವರ ಸಂಖ್ಯೆಯೂ ಮುನ್ನೂರಾಗಿದೆ ದಿನಾಲು ಜನರು ಬಿಡುತ್ತಿರುವರು.

ಅಹಮದಾಬಾದ ಪಟ್ಟಣದಲ್ಲಿ ಹೋದ ವರ್ಷ ದೇಶಿ ಸಾರಾಯಿಯ ಗುತ್ತಿಗೆಯ ಲಿಲಾವು ೮ರು ಲಕ್ಷಕ್ಕಾಗಿತ್ತು. ಈ ಸಾರೆ ಅದು ಮೂರು ಲಕ್ಷಕ್ಕೆ ಸನಿಮವಾಗಿದೆ. ಸರಕಾರದವರು ಲಿಲಾವುಗಳನ್ನು ಕಾಯಂ ಮಾಡಿ, ಪುನಃ ಲಿಲಾವ ಮಾಡಬೇಕೆಂದು ಹುಕುಮ ಮಾಡಿದ್ದಾರೆ.

ರಶಿಯಾದ ಟಿಕೋವಿನಾವವೆಂಬ ರಸಾಯನಶಾಸ್ತ್ರಜ್ಞನು ಮೋಹರೋಗದ ಮೇಲೆ ರಾಮಬಾಣ ಉಪಾಯವನ್ನು ಹುಡುಕಿ ತೆಗೆದಿದ್ದಾನೆ. ಪ್ಲೇಗಿನ ವೈರಿಯ ರಸಿಕೆಯ ಶೋಧ ಮಾಡಿದ ಹಾಫಕಿನ್ನ ಸಾಹೇಬನು ರಶಿಯನೇ ಆಗಿದ್ದಾನೆ.

ಮದ್ರಾಸದಲ್ಲಿ ಕರ್ನಾಟ ಪವಧರಿಸುವ ಹಕ್ಕು ಮುಣ್ಣಾಗಿಸಿ, ಸರ್ಜನ ಹಕೀಮನನ್ನರೆಂಬವರನ್ನು ಸರ್ಜನ ಜನರಲ್ಲರಾಗಿ ನೇಮಿಸಿದ್ದಾರೆ. ಹಿಂದೀ ಜನರಿಗೆ ವರಿಷ್ಠ ಅಧಿಕಾರಗಳನ್ನು ಕೊಡುವ ಅಭಿವಚನದ ಮಾದರಿಯೇ ಸೈ.

ದಬ್ಬಾಳಿಕೆಯ ಕಾಯದೆಯಿಂದ ಕಲಕತ್ತೆ (ಅಲೀಪೂರ) ಯ ತುರಂಗದಲ್ಲಿದ್ದ ಅಂಬಿಕಾಪ್ರಸಾದನೆಂಬ ಯುವಕನು ಸುಟ್ಟುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ಪ್ರಸಿದ್ಧವಾಗಿದೆ.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮೊದಲಾದ ಪಕ್ಷಗಳ ವಿಚಾರಗಳನ್ನು, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನು ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ [illegible] ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, [illegible] ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಸಶ್ಯವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಅಜ್ಞಾನದಿಂದ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ [illegible] ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ [illegible] ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ವೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೋರುವದೆಂಬದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬರುವ [illegible] ವಿಜಯವನ್ನು ಸ್ವತಃ ಓದಬೇಕು. ಬರದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿಡಿದಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ವರ್ಗಣಿ ನಿರ್ಣಯ- ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ಕಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮುಖದಲ್ಲಿ ನೋವು [illegible]ಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು [illegible] ನೋಯುತ್ತದೆ

ಕಂದ— ಹಾಗಾದರೆ [illegible] ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ [illegible] ಎಂದೇ ಅಜ್ಜ.

[illegible] ಬೇಕಾದ [illegible] ಔಷಧಗಳನ್ನು [illegible] ಕೊಡುವೆವು.

ವಿಳಾಸ— [illegible] ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ



ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ಹುಣ್ಣು ಮತ್ತು [illegible], [illegible] ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿದೆ. ಪ್ರತಿಯೊಬ್ಬರೂ ಸಂಗ್ರಹಿಸಿಕೊಳ್ಳಲು ಕ್ರಯ ಬಹಳ ಸುಲಭ ಇಟ್ಟಿದೆ. [illegible]

ಮುಖ್ಯ ಏಜಂಟರು- [illegible] ಹುಬ್ಬಳ್ಳಿ [illegible] ಮತ್ತು [illegible] | ಎಸ್. ಎಮ್. [illegible] ಬೆಳಗಾವಿ

ನೋಟೀಸು

ರಾ|| ರಾ|| ಶಿವರುದ್ರಯ್ಯಾ ಕಿತ್ತೂರ ಹಾಲಿ ವಸ್ತಿ ಉಪ್ಪಿನಬೇಟಗೇರಿ ಇವರಿಗೆ-

ಸಹಿ ಮಾಡುವ ಬಸನಗೌಡಾ ರುದ್ರಗೌಡಾ ಪೋಲೀಸ ಪಾಟೀಲ ಈತನು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ನಿನಗೆ ಬರಕೊಟ್ಟಿದ್ದ ಪ್ರಾಮಿಸರಿ ನೋಟಿನ ಹಣವು ಫೇಡಾಗಿರುತ್ತದೆ. ಆದರೆ ಅದು ನಿನ್ನಲ್ಲಿ ವಿಶ್ವಾಸದಿಂದ ಉಳಿಯಿತು ಈಗ ನೀನು ನನಗೆ ಆಗಲಾರದವರ ಮಾತು ಕೇಳಿ, ಸದರ ಪ್ರಾಮಿಸರಿ ನೋಟನ್ನು ಎರಡನೆಯವರಿಗೆ ಮಾರಲಿಕ್ಕೆ ಕೊಟ್ಟು, ಅವರ ಮಾರ್ಫತ ನನ್ನ ಮೇಲೆ ಇಲಾಜ ಮಾಡತಕ್ಕವನಿದ್ದೀ ಎಂದು ಕೇಳಿ, ನಾನು ನಿನಗೆ ಸಮಕ್ಷಮ ಕೇಳಿದೆ. ನೀನು ಗುಮ್ಮನಗುಸಕನಂತೆ ಕೂತು ನನ್ನ ಕಾಗದ ಮರತ ಕೊಡಲಿಲ್ಲ. ಕಾಗದ ಎಲ್ಲಿಯೋ ಗಹಾಳ ಆಗಿದೆಂದು ಹೇಳಿದಿ ಆದ ಕಾರಣ ನನಗೆ ನಿನ್ನ ವಿಷಯವಾಗಿ ಅವಿಶ್ವಾಸ ಹುಟ್ಟಿ ಈ ಸಾರ್ವಜನಿಕ 'ನೋಟೀಸು' ಕೊಟ್ಟಿರುತ್ತೇನೆ. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸದರ ಪ್ರಾಮಿಸರಿ ನೋಟು ಮರತ ಮಾಡಬೇಕು. ಇಲ್ಲದಿದ್ದರೆ [illegible] ಆ ಬಾಬತು [illegible] ಕೊಡಬೇಕು ಮತ್ತು ಯಾರ ಮಾರ್ಫತ [illegible] ಮಾಡಿಸಿದರೆ ನಿನ್ನ ಮೇಲೆ [illegible] ವಿಶ್ವಾಸಘಾತದ ಫಿರ್ಯಾದಿ ಮಾಡಲಾಗುವದು.

ಇದೇ ನೋಟೀಸಿನಿಂದ ಜಾಹೀರ ಮಾಡುವದೇನಂದರೆ- ಸದರಿ ಶಿವರುದ್ರಯ್ಯಾ ಕಿತ್ತೂರ ಈತನಿಂದ ನನ್ನ ನಾಮದಲ್ಲಿರುವ ಪ್ರಾಮಿಸರಿ ನೋಟು ಯಾರೂ ಖರೀದಿ ತಕ್ಕೊಳ್ಳಬಾರದು. ಖರೀದಿ ತಕ್ಕೊಂಡರೆ ಅದರ ಜವಾಬದಾರಿ ನನ್ನ ಮೇಲಿಲ್ಲ. ಅವರ ಕೆಲಸ ನಿಕಾಲೆಯಾಗಿದೆ ಅದರ ಬಗ್ಗೆ ಆಗುವ ಲುಕಸಾನಕ್ಕೆ ನೀವೇ ಪಾತ್ರರಾಗುವಿರಿ ತಿಳಿಯುವದು.

ತಾ. ೭ ಎಪ್ರಿಲ ೧೯೨೬ ನೇ ಇಸವಿ

ಸಹಿ ಬಸನಗೌಡಾ ಪಾಟೀಲ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ । ಧಾರವಾಡ ಶುಕ್ರವಾರ ಏಪ್ರಿಲ ೧೯ ನೇ (ಸಂಚಿಕೆ ೮೧

ಸರಕಾರದಿಂದ ಪೇಟಂಟ ದೊರೆತಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇವು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಹೋಗುವದು. ಕಪ್ಪಲಿಯು ಜಗ್ಗುತ್ತಲೇ ಜಾಳಿಗೆಯ ಹದವು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರಾತು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೀಬೆನ್ನೂರ ಶಿಟಿ ಸರ್ವೆ ಹದ್ದಿನೊಳಗಿನ ಯಾವತ್ತು ಜನರಿಗೂ ಮತ್ತು ಮಾಲಕರಿಗೂ ತಿಳಿಸುವದೇನಂದರೆ ರಾಣೀಬೆನ್ನೂರಲ್ಲಿ ಸ್ಟೇಶನ್ ರಸ್ತೆಕ್ಕೆ ಹೊಂದಿ ಪೋಸ್ಟ ಆಫೀಸ್ ಎದುರಿಗೆ ಮ್ಯುನಸಿಪಾಲಿಟಿ ಕಡೇರಿಗಳ್ಳ ಮಧ್ಯದಲ್ಲಿ ಇರೋ ನನ್ನ ಮಾಲ್ಕಿ ನ ಸಹಿವಾಟಿಯು ಳ್ಳ ಒಂದು ಇದರ ಬೈಲ ಜಾಗಾ ಸಹಾ ಸಿಟಿಸರ್ವೆ ನಂಬರ ೧೮೫ ಇದರ ಅಜಮಾಸ ಕಿಮ್ಮತ ೧೦೦೦ ರೂಪಾಯಿ ಇದನ್ನು ತಾರೀಖು ೧೧-೪-೧೯೩೫ ರಂದು ದಿನ್ನ ಮಾರಕತ್ತವನಿದ್ದೇನೆ. ಬೇಕಾದವರು ಸದರ ಮುದ್ದತಿನ ಒಳಗಾಗಿ ಕೊಂಡರ ಕೊಳ್ಳಬಹುದು. ನಮ್ಮೊಡನೆ ಆಗದ ಟಪಾಲದ್ವಾರ ಮಾಹಿತಿ ತಿಳಕೊಳ್ಳಬಹುದು.

ವೆಂಕಟೇಶ ರಾಮಚಂದ್ರ ಆಕಳಗೇರಿ ಸಾ॥ ರಾಣೀಬೆನ್ನೂರ ಹಾಲವನ್ನು ಬೊಮ್ಮಕರ ಪಡಶಣ ತಾಲ್ಲೂಕ ರಾಣೀಬೆನ್ನೂರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧ ವರ್ಷಕ್ಕೆ		೧೩—೦—೦ ಟಪಾಲ
,,		೭—೮—೦ ,,
,,		೪—೦—೦ ,,
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ,,

ಹೆಚ್ಚು ಮಾಹಿತಿ ಬೇಕಾದವರು ವ್ಯವಸ್ಥಾಪಕರು ವಿಜಯ, ಧಾರವಾಡ

ಸೂಚನೆ ಕಳಿಸುವ ವರಿಗೆ.

ಸಂಗತಿ ನಾಟಕದ ಪತ್ರ, ವಾರ್ತೆಗಳಿಗೆ ಬಂದು ಸೇರಬೇಕು ಮುಂದೆ ಪ್ರತಿನಿಧಿಯ ವರಿಗೆ ಒಂದು ಪ್ರತಿ ಇಂಗ್ಲಿಷ ಪ್ರತಿಯನ್ನು ಒಳಗೆ ಇದ್ದರೆ ಅದನ್ನು ಅವರಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಕ್ಕೆ ಅನುಕೂಲವಾಗುವ ಹಾಗೆ ಬರೆಯಬೇಕು ಸಂಬಂಧಪಟ್ಟ ವಿಷಯಗಳನ್ನು ಕಳಿಸುವವರು ವ್ಯವಸ್ಥಾಪಕರ ಪತ್ರವ್ಯವಹಾರ ಮಾಡಬಹುದು.

ವ್ಯವಸ್ಥಾಪಕರು ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಠರಾವಿನಿಂದ ಹಣವನ್ನು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಒಡ್ಡಿಯ ದರವು ನೂರಕ್ಕೆ ತಿಂಗಳ ಕಡಿಮೆ ಇರುತ್ತದೆ.

ಎ. ಕೆ. ಶೆಟ್ಟಿ, ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿ ಆಕ್ಟ ಪ್ರಮಾಣ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕು ವ್ಯವಹಾರದಲ್ಲಿ ಶ್ರೇಷ್ಠವಾಗಿದೆ.

ಠೇವಣಿಗಳು ಬಡ್ಡಿಯಿಂದ ಸ್ವೀಕರಿಸಲಾಗುವದು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲಾಗುವದು. ಡಾಗೀನೆ ಮತ್ತು ಬೇರೆ ತರದ ಸಿಕ್ಯೂರಿಟಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಹೆಚ್ಚಿನ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ, ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೯-೪-೩೮ ನೇ ಇಸ್ವಿ

ಜಿನ್ನಾರವರ ಕಾಂಗ್ರೆಸ ದ್ವೇಷ

ರಣಮಂಡಲದಲ್ಲಿ ಕಯ್ಯಲಿಲ್ಲ

ಮುಂಬಯಿಯಲ್ಲಿ ಮ. ಜಿನ್ನಾರವರ ಜೇಕೆ ಜನರನ್ನು ಸೇರಿಕೊಂಡು, ಕವಡಿಯಂತೆ ತಮ್ಮನೆಂದು ಹೇಳಿಕೊಳ್ಳುವವನ್ನು ಗುಪ್ತ ರೀತಿಯಿಂದ ಹೊಲ್ಲಕೊಂಡ ಸಭೆ ಅದರ ಪ್ರದರ್ಶನವನ್ನು ಗೇಟೀ ಥಿಯೇಟರದಲ್ಲಿ ಮಾಡಿಕೊಂಡರು. ಜಿನ್ನಾ ಸ್ವರಾಜ್ಯ, ಅನಂತ ಪ್ರತಿಯೋಗಿ ಸಹಕಾರಿ, ಈಗ ಸಂಯುಕ್ತ ರಾಷ್ಟ್ರೀಯ ಪಕ್ಷದವರಾಗಿ ಬಿಸಿಲು ಬಂದತ್ತ ಕೊಡೆ ಹಿಡಿಯುತ್ತಿರುವ ಬ್ಯಾರಿಸ್ಟರ ಜಮುನದಾಸ ಈ ಥಿಯೇಟರದಲ್ಲಿ ಕೂಡಿದ್ದ ಸಭೆಯ ಅಧ್ಯಕ್ಷರಾಗಿದ್ದರು. ಹಿಂದೆಯ ಪರಿಷತ್ತಿಗೆ ಸೇರಿದ ಬಹುತೇಕ ಮೆಂಬರರು ಆಗಮಿಸಿದ್ದರು. ಭಾಷಣ ಮಾಡುವವರು ನಾಲ್ಕಾರು ಜನರು ಮಾತ್ರರಾಗಿದ್ದರು. ಪ್ರೇಕ್ಷಕರು ತಮ್ಮ ಕ್ಷೇಮ ಸಮಾಚಾರವನ್ನು ಜನ್ನಾಗಿ ತಕ್ಕೊಳ್ಳುವರೆಂದು ಇವರು ಮುಂದಾಗಿ ಭಾವಿಸಿದ್ದರು ಮತ್ತು ಸುಷ್ಟ, ದುಷ್ಟ ಪರಿಣಾಮಗಳಿಗೆ ತಲೆಗೊಡಲು ಧೈರ್ಯ ತಾಳಿದ್ದರು. ಮೊದಲನೇ ಗಾಂಧಿ ಟೋಪಿಗೆ ಮುದ್ರಾಪತ್ರ ಸಭೆಕೆ ನ್ನಿ ರಡ್ಡಿಯವರು ನಿಂತರು. ಧಾರವಾಡದಲ್ಲಿ ಇವರ ಭಾಷಣ ಮುಗಿದ ಕೂಡಲೆ, ಅನೇಕರು ಪ್ರತಿ ಸವಾಲು ಕೇಳಹತ್ತಿದ್ದರು. ಆದರೆ ಹಾಗೆ ಮಾಡಗೊಡದ್ದರಿಂದ ಮುಂದೆ ಎಷ್ಟನೆ ಸಭೆ ಮಾಡಿ, ಅವರಿಗೆ ಉತ್ತರ ಕೊಡಬೇಕಾಯಿತು. ಇಲ್ಲಿ ಉತ್ತರ ಕೊಟ್ಟ ವೀರಾಗ್ರಣಿಯಾದ ಪುಣೆಯ ಭಾಬಾರಾವ ಗೊಖಲೆ ಯವರು ಮುಂಬಯಿಯಲ್ಲಿ ಸಭೆ ರಡ್ಡಿಯವರಲ್ಲಿಯೇ ಸೇರಿಕೊಂಡರು. ಮುಳೆಗಾಂವ ಕಂಬಳಿ? ಹೊಳವು ಇತರಿಗಳಲ್ಲಿ ಪಾತ್ರರಾಗುತ್ತಿರುವರು. ಇವರು ಟೀಕಿಸರ ರಡ್ಡಿಯವರಿಗೆ ಸವಾಲು ಕೇಳಬೇಡಿರೆಂದು ಹೇಳುವ ಹಕ್ಕು ಅಲ್ಲಿ ಯಾರಿಗೂ ಇರಲಿಲ್ಲ. ಹೇಳಿದ್ದನ್ನು ಕೇಳಿಕೊಂಡು ಹೋಗಬೇಕೆಂದು ನೋಟೀಸಿನಲ್ಲಿ ಮುಂದಾಗಿ ಪ್ರಸಿದ್ಧ ಮಾಡಿದ್ದಿಲ್ಲ. ಅಧ್ಯಕ್ಷರು ಹಾಗೆ ಉಪದೇಶ ಮಾಡಲಿಲ್ಲ. ಆದ್ದರಿಂದ ಶರ್ಮಾ ಸಾಹೇಬರು ಭಾಷಣ ಪ್ರಾರಂಭ ಮಾಡಿದ ಕೂಡಲೆ, ಅವರ ಪುಣ್ಯಂತನ್ನೆಲ್ಲ ತೀರಿ ಹೋಗುತ್ತದೆಂದು ಕಂಡು ಬಂತು. ಸರದು ಮಾತಿನ ಪ್ರಾರಂಭದಲ್ಲಿ "ನಾವು ಈಗ ಪರದೆಯಿಂದ ಹೊರ ಬಿದ್ದಿದ್ದೇವೆ. ಕಾಂಗ್ರೆಸ್ಸು ಪಕ್ಷವು ದೇಶವನ್ನು ಅನ್ಯ ದಾರಿಗೆ ಎಳೆಯುತ್ತಿರುವದರಿಂದ, ಹೊಸ ಕಾಂಗ್ರೆಸ ಸ್ಥಾಪಿಸುವ ಅಗತ್ಯ ಉಂಟಾಯಿತೆಂದು ಕೂಡಲೆ" ಪ್ರೇಕ್ಷಕರು ಇವರ ಮೇಲೆ ಕೇನು ಶಬ್ದಗಳ ತೂರಿಸ್ಗಿದರು. ಆಗ ಅಧ್ಯಕ್ಷರು ಎದ್ದು ನಿಂತು ಮುಂಬಯಿಯ ಮರ್ಯಾದೆಯನ್ನು ಕಾಯ್ದುಕೊಳ್ಳ ಪ್ರೇಕ್ಷಕರಿಗೆ ವಿನಂತಿ ಮಾಡಿಕೊಂಡರು. ಸರದ ಆತಕೆಯು ಮೇಲು ಕಾಂಗ್ರೆಸದ ಅಪಮಾನ ಮಾಡಿದಂತಾದ್ದಾಗಿರುತ್ತದೆಂದು ಪ್ರೇಕ್ಷಕರು ಸಭಾ ಮಂದಿರವು ನಡುಗುವಂತೆ ಗದ್ದಲಿಸಿದರು. ಪಂಡಿತ ಮಾಲವಿಯರಾಯರು ಮುಂದೆ ಬಂದು, ತಾಳ್ಮೆ ತಾಳ್ಮೆ ಎಂದು ಬಿನ್ನಹ ಮಾಡಿಕೊಂಡರು. ಒಳಕ ಎಂಬನೆಮವರ ಮೇಲೆ ಟೀಕೆ ಮಾಡುವದು ನನ್ನ ಉದ್ದೇಶವಿಲ್ಲ. ಇಂಥದೊಂದು ವಿಚಾರದ ಪಕ್ಷವುಂಟೆಂದು ಸರದು ಅಂದಕೂಡಲೆ, ಅಧ್ಯಕ್ಷರು ಶಾಂತವಾಗುವದಕ್ಕೆ ಪುನಃ ವಿನಂತಿ ಮಾಡಿಕೊಂಡರು. ಆಗ ಪ್ರೇಕ್ಷಕರು "ನಮಗೆ ಸರದ ಭಾಷಣವೇ ಬೇಕಾಗಿಲ್ಲ, ಅವರು ಕೂತುಕೊಳ್ಳಲೆಂದು" ಗರ್ಜಿಸಿದರು. ಇಷ್ಟಾದ ನಂತರ ನಾವು ಸುಧಾರಣೆಯನ್ನು ಅಂಗೀಕರಿಸಿ, ಕೆಲಸ ಮಾಡಿ ತೋರಿಸಿದ್ದೇವೆ. ಪುಸ್ಕಳ ಫಲ ತರುತ್ತಾಗುತ್ತಿದ್ದಂದ ಕೂಡಲೆ- ನೋ ನೋ ಎಂಬ ಗದ್ದಲವಾಯಿತು. ಪ್ರಜರಿಂದ ಆರಿಸಲ್ಪಟ್ಟ ಕಾಂಗ್ರೆಸಿಗಳ ಮೆಂಬರರು ತಮ್ಮ ಕರ್ತವ್ಯ ಮಾಡಲು ತಪ್ಪಿದರೆಂದು ಸರದು ಅತ್ಯಂತ ಉದ್ಗಾರ ತೆಗೆದ ಕೂಡಲೆ ಇವರ ಭಾಷಣ ಕೇಳುವದು ಪ್ರಜರಿಗೆ ಅಸಹ್ಯವಾಗಿ, ಇವರನ್ನು ಕೂಡಿಸಿ ಬಿಟ್ಟರು. ಇವರ ತರುವಾಯ ಅಸೆಂಬ್ಲಿಯಲ್ಲಿನ ಸಭ್ಯ ಎದ್ದು ನಿಂತು ಪ್ರೇಕ್ಷಕರಿಗೆ ಒಪ್ಪಿಗೆಯಾಗುವಂಥ ಭಾಷಣ ಮಾಡಲು- ಸಭೆಯು ಕೆಲಕಾಲ ಶಾಂತರೀತಿಯಿಂದ ನಡೆಯಿತು. ಬ್ಯಾರಿಸ್ಟರ ಜಿನ್ನಾ ಸಾಹೇಬರು ತಮ್ಮ ಪ್ರತಾಪ ತೋರಿಸಲು ಮುಂದೊರೆದರು. ಕೂಡಲೆ ಜನಸ್ತೋಮವು ಪುನಃ ಅಲ್ಲೋಲಕಲ್ಲೋಲವಾಯಿತು. ಆಗ ನಡೆದ ಪ್ರಶ್ನೋತ್ತರಗಳು ಕೆಳಗೆ ಕೊಟ್ಟಂತಿರುತ್ತವೆ

ಜಿನ್ನಾ — ಕಾಂಗ್ರೆಸವನ್ನು ಮುರಿಯಬೇಕೆಂದು ನಮ್ಮ ಪಕ್ಷದ ಉದ್ದೇಶವಿಲ್ಲೆಂದು ನಾನು ನಿಮಗೆ ಖಂಡಿತವಾಗಿ ಹೇಳುತ್ತೇನೆ ಇದು ಪೂರಾ ಸುಳ್ಳು.

ಒಂದು ಧ್ವನಿ— ದಿವಾನಬಹಾದ್ದೂರ ಟಾಂಬಾ ಮಣೆಯವರೂ ಹಾಗನ್ನುತ್ತಾರೆ.

ಜಿನ್ನಾ — ದಿವಾನರೊಬ್ಬರೇ ನಮ್ಮ ಪಕ್ಷದ ಮೆಂಬರರಾಗಿರುವದಿಲ್ಲ.

ಮತ್ತೊಂದು ಧ್ವನಿ— ಇವರು ಈ ಪಕ್ಷದ ಮೂಲ ಉತ್ಪಾದಕರಾಗಿರುತ್ತಾರಲ್ಲ!

ಜಿನ್ನಾ— ಹಾಗೂ ಇಲ್ಲ. ಮುಖ್ಯ ಸಂಗತಿಯನ್ನು ವಿವರಿಸಿ ಹೇಳುತ್ತೇನೆ.

ಒಂದು ಧ್ವನಿ— ಸ್ವರಾಜ್ಯ ಪಕ್ಷೀಯರನ್ನು ಸೋಲಿಸುವದಕ್ಕೇ? ಇದೇ ನಿಮ್ಮ ಉದ್ದೇಶ ವಿರಬಹುದಲ್ಲವೇ?

ಜಿನ್ನಾ — ಹಾಗಿಲ್ಲೆಂದು ಹೇಳುತ್ತೇನೆ. ನಡನಡುವೆ ಅಡ್ಡ ಪ್ರಶ್ನೆ ಕೇಳತಕ್ಕವರನ್ನು ನಾನು ಲಕ್ಷಿಸುವದಿಲ್ಲ. ನಾವಿಷ್ಟು ಜನರು ಯಾವ ಉದ್ದೇಶ ಮತ್ತು ಯಾವ ಸಾಧನೆಗಾಗಿ ಇಲ್ಲಿ ಕೂಡಿರುತ್ತೇವೆಂಬದನ್ನು ಧ್ಯಾನಕ್ಕೆ ತನ್ನಿರಿ. ಸ್ವರಾಜ್ಯ ಪಕ್ಷೀಯರ ವಿರುದ್ಧ ನಮ್ಮ ದೇನು ಉದ್ದೇಶವಿರುವದಿಲ್ಲೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ

ಒಂದು ಧ್ವನಿ- ನಮಗೆ ನಿಮ್ಮ ಹೇಳಿಕೆಯು ಅಗತ್ಯವಿಲ್ಲ. ಕೂತುಕೊಳ್ಳಿರಿ.

ಜಿನ್ನಾ- ಈ ವಿಷಯವಾಗಿ ನಾನು ನಿಮಗಿಂತ ಹೆಚ್ಚು ವಿಚಕ್ಷಣತೆಯಿಂದ ವಿಚಾರ ಮಾಡಿದ್ದೇನೆ. ಆದ್ದರಿಂದ ನಾನೇನು ಮಾಡತಕ್ಕದ್ದಿರುವದೆಂಬದನ್ನು ಹೇಳುವದನ್ನು ಕೇಳಿಕೊಳ್ಳಿರಿ

ಒಂದು ಧ್ವನಿ- ಕಾಂಗ್ರೆಸದ ಧ್ವಂಸ ಮಾಡುವದಕ್ಕೆ-

ಜಿನ್ನಾ- ಹಾಗಲ್ಲ ನಾವು ನೀತಿಯಾದ ಕೂಡ ಶುದ್ಧ ಮತ್ತು ಪ್ರಾಮಾಣಿಕ ರೀತಿಯಿಂದ ಹೋರಾಡುವೆವು

ಆಗ ಸಭೆಯು ತುಂಬ ಗದ್ದಲವಾಯಿತು. ಒಬ್ಬರು ತಾವು ಸಭೆಯು ವಿಸರ್ಜನೆ ಮಾಡಬೇಕೆನ್ನುವಷ್ಟು ಗದ್ದಲವಾಯಿತು. ಕೆಲ ಹೊತ್ತಿನ ಮೇಲೆ ಶಾಂತತಾ ಆಗಲು ಪುನಃ ಜಿನ್ನಾ ಸಾಹೇಬರು "ನಮ್ಮ ಪಕ್ಷವು ಶುದ್ಧ ಮತ್ತು ಪ್ರಾಮಾಣಿಕ ರೀತಿಯಿಂದ ಹೋರಾಡುವೆವು" ಎನ್ನಲು- ಕೂತುಕೊಳ್ಳಿರಿನ್ನು! ಕೂತುಕೊಳ್ಳಿರೆಂದು ಪುನಃ ನಾಲ್ಕೂ ಕಡೆಯಿಂದ ಧ್ವನಿಯಾಯಿತು.

ಒಂದು ಧ್ವನಿ- ಸಾಹೇಬರೇ ಕಾಂಗ್ರೆಸದ ಮೆಂಬರರಾಗಿರಿ,

ಜಿನ್ನಾ- ಕಾಂಗ್ರೆಸವು ಈ ಮೊದಲೇ ಒಂದು ಠರಾವು ಮಾಡಿದೆ ಆದರೆ ಅದು ನಿಜವಾದ ರಾಷ್ಟ್ರೀಯ ಸಭೆಯ ಠರಾವು ಆಗಿರುವದಿಲ್ಲ.

ಧ್ವನಿ- ನೀಚಬುದ್ಧಿಯ ತೃಷೆ

ಜಿನ್ನಾ- ನಾನು ಹೇಳುವದಾದರೂ ಕೇಳಿರಿ ನೀವು ನನ್ನ ಮಾತು ಕೇಳದಿದ್ದರೆ. ನಿಷೇಧದ ಠರಾವು ಪಾಸ ಮಾಡಿರಿ.

ಧ್ವನಿ- ನಮಗೆ ನಿಮ್ಮ ಭಾಷಣ ಕೇಳುವದೇ ಬೇಕಾಗಿಲ್ಲ.

ಜಿನ್ನಾ- (ಸಿಟ್ಟಿನಿಂದ) ನನ್ನಲ್ಲಿ ಕುರುವಾದರೂ ಜೀವವಿರುವತನಕ ಈ ಸರಕಾರದ ಕಡೆಗೆ ಶುದ್ಧ ಮತ್ತು ಪ್ರಾಮಾಣಿಕತನದಿಂದ ಹೋರಾಡುವೆನು.

ಧ್ವನಿಯು ಮೇಲೆ ಧ್ವನಿ- ಕೂಡಿ, ಹೊರಗೆ ಎಸ್ಸೆಯಿರಿ.

ಈ ಪ್ರಕಾರ ಪುನ್ಹಳವಾಗಿ ಅನ್ಯ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಜ್ಯಾವಿಸ್ಟರಸಾಹೇಬರು ತಮ್ಮ ಭಾಷಣ ಮುಗಿಸಿದರು. ನಂತರ ಪಂಡಿತ ಮದನ ಮೋಹನ ಮಾಳವಿಯಾಯವರ ಭಾಷಣವಾಯಿತು. ಜ್ಯಾವಿಸ್ಟರರೂ ತಮಗೂ ಕಾಂಗ್ರೆಸ್ಸ್- ಅಜ್ಞೆಯು ಪ್ರಕಾರ ಕೌನ್ಸಿಲಗಳ ಮೆಂಬರರು ವರ್ತಿಸತಕ್ಕದ್ದಲ್ಲ; ಮಹಾತ್ಮರ ಹೇಳಿಕೆಯಂತೆ ವರ್ತಿಸತಕ್ಕದ್ದೆಂದು ಹುಟ್ಟಾಕಿಸಿದ್ದರು. ಕಾಂಗ್ರೆಸ್ಸೇ ಹಿಂದ ಸ್ವಾ[illegible] ಪ್ರತಿನಿಧಿಯು, ಅವರ ಅಪ್ಪಣೆ ಮುಂತೆ ಮೇ[illegible] ನಡೆ[illegible]ಕ್ಕದ್ದೆಂದು ಎ. [illegible] ಉತ್ತರ ಕೊಟ್ಟನಂತರ ಸಭೆಯು ವಿಸರ್ಜನೆಯಾಯಿತು.

ನಿಜಾಮ ಸಾಹೇಬರು
ಇಂಗ್ಲಿಷ ಸರಕಾರದ ಸಾಮಂತರೇ ಸೈ!!

ಹೈದರಾಬಾದಿನ ನಿಜಾಮಸಾಹೇಬರು ಕಳಕೊಂಡ ವರ್ಹಾಡವನ್ನು ಮರಳಿ ಗಳಿಸುವ ಹವ್ಯಾಸದಲ್ಲಿ ತಾವು ಬ್ರಿಟಿಶ ಸರಕಾರದ ಒಬ್ಬ ಸಾಮಂತರೆಂಬ ಶಿಕ್ಷೆ ಹೊಡೆಸಿಕೊಂಡರೆಂಬ ಸಂಗತಿಯನ್ನು ಈ ಮೊದಲು ಬರೆಯುತ್ತೇವೆ. ಇವರು ಹೇಗೆ ಸಾಮಂತರಾಗಿರುತ್ತಾರೆಂಬ ಇತಿಹಾಸವನ್ನೇ ಹೇಳಿದಂಥ ಹೊತ್ತಿಗೆಯನ್ನು ಲಾರ್ಡ ರೀಡಿಂಗಸಾಹೇಬರು ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಇವರ ಬಜ್ಜ ಮುತ್ತೆಂದು ಹಗ್ಗ ಕೊಟ್ಟು ಹೇಗೆ ಕೈ ಕಟ್ಟಿಸಿಕೊಂಡಿರುತ್ತಾರೆಂಬದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಒಬ್ಬ ನಿಜಾಮರು ತಮ್ಮಾಯಾ ಇಷ್ಟಾ[illegible] ಪಟ್ಟಕ್ಕೆ ಕೂಡುವಾಗ ಅದಕ್ಕೆ ಬ್ರಿಟಿಶ ಸರಕಾರದ ಸಮ್ಮತಿ ಬೇಕು. ಬ್ರಿಟಿಶ ಸರಕಾರದವರು ಅನುಕೂಲ ಮಾಡಕೊಡದಿದ್ದರೆ- ಔರಸ ಪುತ್ರನು ಕೂಡ ಗದ್ದುಗೆತನಕ್ಕೆ ಅನರ್ಹನಾಗುವನು. ತನ್ನ ರಾಜ್ಯದ ಉಪಭೋಗ ಪಡೆಯುವ ಹಕ್ಕಿನ ಜೊತೆಯಿಂದಲೇ ಸ್ವಾತಂತ್ರ್ಯದ ಬಗ್ಗೆ [illegible] ಕಟ್ಟಿಕೊಳಬೇಕು! ಬ್ರಿಟಿಶ ಸರಕಾರದವರು ಬಂಡಾಯದ ವೇಳೆಯಲ್ಲಿ ಇವರಿಗೆ "ಫೇಥಫುಲ ಅಲಾಯ" ಅಂದರೆ ನಂಬಿಗೆಯ ಮಿತ್ರನೆಂದು ಪದವಿ ಕೊಟ್ಟದ್ದಾರೆ. ಈ ಪದವಿ ಸ್ವಾತಂತ್ರ್ಯದನ್ನು ಮರೆಸಿ ನಿಜಾಮರು ಸಾಹೇಬರು ಇದನ್ನು ಶಿಲಾಶಾಸನ ಮಾಡಿಕೊಂಡಿದ್ದಾರೆ. ಇದು ಗೌರವಾರ್ಥವಲ್ಲದೆ, ದೇರೆಯಿಂದ ಒಗೆಯಿಂದ ಭಾವಿಸಲಾಗದೆಂದೂ, ಲಾರ್ಡ ರೀಡಿಂಗ ಸಾಹೇಬರು ನಿಶ್ಚುಣ್ಣವಾಗಿ ಹೇಳಿದ್ದಾರೆ. ಬಂಗಾಲದ ಗವ್ಹರ್ನರರ ಮೇಲೆ ಓರ್ವ ಅರಾಜಕನು ರಿವ್ಹಾಲ್ವರ ಹಿಡಿದಾಗ- ಬಂದ್ವಾನದ ಮಹಾರಾಜರು ಅದನ್ನು ಒಡಿದು, ಸಾಹೇಬರ ಮೇಲಿನ ಆ[illegible] ತಪ್ಪಿಸಿದರು. ಈ ಉಪಕಾರದ ದೆಸೆಯಿಂದ ಸರಕಾರದವರು ಕೃತಜ್ಞತೆಯ ಸಲುವಾಗಿ ಇವರಿಗೆ ಮಹಾರಾಜಾಧಿರಾಜ ಎಂಬ [illegible] ಕೊಟ್ಟಿದ್ದಾರೆ. ಈ [illegible] ಇವರ [illegible] ನ ಮಾನ ಸ್ಥಾನ ದ[illegible] [illegible]? ಇಂಗ್ರೇಜಿ [illegible]ದಲ್ಲಿ ಬಿರುದುಗಳಿಗೆ ಕೊರತೆ ಇರ[illegible] ಸಾಮ್ರಾಜ್ಯದಲ್ಲಿ ಸಂಸ್ಥಾನ ಅಥವಾ [illegible] ದೊರೆಯುತ್ತಿದ್ದಂಥ [illegible] ಕ್ಕೆ ಇಂಗ್ರೇಜಿ ರಾಜ್ಯದಲ್ಲಿ ಬಿರುದುಗಳು ಪ್ರೀ[illegible] ತಾಗ ಪದ ಎಟು. ಫೇಥಫುಲ ಅಲಾಯ, [illegible] ರ್ಹಾಲ್ಡ ಹ[illegible]ವೆಂಬಷ್ಟು ಉಪಚಾರ ಮ[illegible] [illegible] ಅವನ್ನು [illegible] ಮಾಡಿಕೊಂಡು ಹೆಮ್ಮೆ [illegible] ಪಡ್ಡತಕವೇದು [illegible] ಮಾತ್ರವಲ್ಲ; ದೇಶಿ ಸಂಸ್ಥಾನಿಕರೂ, ಪದವಿಗಳ ಲೋಲುಪ[illegible] [illegible] ಜಾಣತನವಿಟ್ಟು ಕೊಳ್ಳುವರೆಂದು ತಿಳಿಯುತ್ತೇವೆ.

ವಿಜಾಪೂರದ ಉಮೇದವಾರರು

ಕೌನ್ಸಿಲ ಚುನಾವಣೆಯಲ್ಲಿ ಕೆಳಗಿನ ಗೃಹಸ್ಥರು ವಿಜಾಪೂರ ಜಿಲ್ಲೆಯ ಪತಿಯಿಂದ ಉಮೇದವಾರರಾಗಿದ್ದಾರೆ.

೧ ಶ್ರೀಮಂತ ಎಸ. ಎ. ಸರದೇಸಾಯಿ, ಹಾಲಿದ್ದ ಮೆಂಬರರು

೨ ರಾವಸಾಹೇಬ ಶಿವಲಿಂಗರಾವ ಜಗದೇವರಾವ ದೇಶಮುಖ ಅಲಮೇಲ, ಹೋದ ಚುನಾವಣೆಯಲ್ಲಿ ಉಮೇದವಾರರಿದ್ದರು

೩ ಮ. ಎ. ಸಿ ಅಂಗಡಿ ಪ್ರೆಸಿಡೆಂಟ ವಿಜಾಪೂರ ಮ್ಯುನಿಸಿಪಾಲಿಟಿ

೪ ಎ. ಎಸ ಟಿ. ಪಾಟೀಲ. ಪ್ರೆಸಿಡೆಂಟ ಡಿಸ್ಟ್ರಿಕ್ಟ ಲೋಕಲಬೋರ್ಡ

೫ ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ-

ಮೊದಲಿನ ನಾಲ್ವರು ಲಿಂಗಾಯತರು, ಉಮೇದವಾರರಾಗಿದ್ದರೂ, ಲಿಂಗಾಯತ ಅಸೋಸಿಯೇಶನದವರು ತಮ್ಮ ಪತಿಯಿಂದ ಸ್ವತಂತ್ರರಾಗಿ ಒಬ್ಬ ಉಮೇದವಾರರನ್ನು ನೇಮಿಸುವ ಆಲೋಚನೆ ನಡೆಸಿದ್ದಾರೆ.

ಶ್ರೀ ಶಿವಾಜಿಯ ಸ್ಮಾರಕ-

ಕಳೆದ ಶನಿವಾರದ ದಿವಸ ರಾಯಗಡದಲ್ಲಿ ಶ್ರೀ ಶಿವಾಜಿ ಮಹಾರಾಜರ ಸ್ಮಾರಕದ ಗುಮಟವನ್ನು ತೆರೆಯುವ ಸಮಾರಂಭವು ನಾಗಪೂರದ ಶ್ರೀ ಬೋಸಲೆರಾಜರಿಂದ ನೆರವೇರಿಸಲ್ಪಟ್ಟಿತ್ತು. ಸಮಾರಂಭಕ್ಕೆ ನಾಲ್ಕೈದು ಸಾವಿರ ಜನ ಕೂಡಿತ್ತು. ಮುಕ್ತದ್ವಾರ ಭೋಜನವಿತ್ತು. ಬ್ರಾಹ್ಮಣರಿಂದ ಅಂತ್ಯಜರವರೆಗೆ ಎಲ್ಲರೂ ಒಂದೆಡೆಯಲ್ಲಿ ಕೂತು ಭೋಜನ ಮಾಡಿದರು. ಪ್ರಸಂಗದ ಸಾರ ಬ್ರಾಹ್ಮಣ ಸ್ವಯಂಸೇವಕರು ಅಂತ್ಯಜರ ಎಲೆಗಳು ಸಹ ಬಳೆದರು. ಗುಮಟವನ್ನು ತೆರೆದ ಉಡುಗೊರೆಯಾಗಿ ಉತ್ಸವ ಕಮೀಟಿಯವರು ಶ್ರೀಮಂತ ಭೋಸಲೇರಾಜರಿಗೆ ಬೆಳ್ಳಿಯಿಂದ ಮಾಡಿಸಿದ ಒಂದು ಕತ್ತಿಯನ್ನು ಕಾಣಿಕೆಯಾಗಿ ಕೊಟ್ಟರು.

ಲಿಂಗಾಯತರಿಗೆ ಮೀಸಲ್ ಸ್ಥಾನ-

ಕೊಲ್ಹಾಪೂರದಲ್ಲಿ ಮಾನ್ಯವಾಗಿರುವ ಅಲಿಂಗಾಯತ ಲಿಂಗಾಯತ ಮನೆತನದಲ್ಲಿ ಲಿಂಗಾಯತರಾಗಿದೆ. ಶ್ರೀ. [illegible] ಅನೇಕ ಮಹಿಮೆಯನ್ನು ಲಿಂಗಾಯತ ಧರ್ಮದಲ್ಲಿ ತಪ್ಪಿದರು, ಅವರ ಕೂಡ ಅನ್ಯೋನ್ಯ ಕ[illegible] [illegible] ಪರಂಪರೆಯನ್ನು [illegible] [illegible] ಅವರೆ ಕೆಲವು [illegible] ಮತಗಳಿಂದ ಧರ್ಮೋಪದೇಶರ [illegible] ಮಾಡಿ, ಇವರಿಗೆ ವೀರಶೈವ ಧರ್ಮದೀಕ್ಷೆ ಕೊಟ್ಟು, ಅವರನ್ನು ಪಂಕ್ತಿಯಲ್ಲಿ ಕೂಡಿಸಿಕೊಂಡು ಭೋಜನ ಮಾಡಿದರು. ಅಭಿನಂದನೀಯವು

ಭಯಂಕರ ಅಗ್ನಿಪ್ರಳಯ.

ಆರುನೂರು ಮನೆಗಳು ಸುಟ್ಟವು: ೪೦೦೦ ಜನರು ನಿರಾಶ್ರಿತರಾದರು; ೩೬ ಜನರು ಸತ್ತರು

ಜಪಾನ್ಯದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಭಯಂಕರ ಅಗ್ನಿ ಪ್ರಳಯವಾಯಿತು. ೨೪ ತಾಸುಗಳ ಪರ್ಯಂತರ ಬೆಂಕಿ ಉರಿದು ಕಸವು ಕಡಿಮೆಯಾಗಲೇ ಇಲ್ಲ. ೬೧೨ ಮನೆಗಳು ಸುಟ್ಟವು. ೪೦೦೦ ಜನರು ಮನೆ ಇಲ್ಲದವರಾಗಿ ನಿರಾಶ್ರಿತರಾಗಿದ್ದಾರೆ. ೩೬ ಜನರು ಅಗ್ನಿ ದೇವರಿಗೆ ಆಹುತಿಯಾದರು. ದ್ರವ್ಯನಾಶ ದಂತೂ ಭಾಗ್ಯವಂತರ ಮನೆ ಸುಡುಬಾಂದನ್ನು ಮೀರಿಸಿರುತ್ತದೆ

ಕಲಕತ್ತೆಯ ದಂಗೆಯಲ್ಲಿ ಬಾಂಬು ಬಿತ್ತು.

ಕಲಕತ್ತೆಯಲ್ಲಿ ಒಂದು ಬೀದಿಯಲ್ಲಿ ಹಿಂದು-ಮುಸಲಮಾನರು ಜಗಳದಲ್ಲಿ ಬಾಂಬು ಬಿದ್ದದ್ದು, ಅದರಿಂದ [illegible] [illegible] ತಿಳಿದಿದೆ.

ಧಾ. ವಾ. [illegible]

[illegible] ಕಲ್ಲು, ಗುತ್ತಿಗೆ ಮತ್ತು ನೆಂಟತನದ ವ್ಯವಹಾರದ ವಕೀಲರಿಗೆ ವಕೀಲಿ ನಡೆಸುತ್ತಿರುವ ಅನುಭವಸ್ಥರು ಇದ್ದಾರೆ. ದೊರೆಯುತ್ತಿರುವ ವರ್ತಮಾನ ಬಂದಿದೆ.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ ವಿವೇಚನೆಯು.

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮೊದಲಾದ ಪಕ್ಷಗಳ ವಿಚಾರಗಳನ್ನೂ, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನೂ ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ ಹೊರ [illegible] ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಸಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ವೋಟಿನ ಹಕ್ಕುಳ್ಳವರು ದಿವಾಳು [illegible] ಜವರು ವಿಜಯವನ್ನು ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಳಿದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ವೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಪ್ರತಿನಿಧಿಯಾಗಿ ಆರಿಸಿದ [illegible] ಕರ್ತವ್ಯ ಮಾಡುವ ಹಂಬಲ ತೋರುವದೆಂಬುದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದಬೇಕು [illegible] ವಿಜಯವನ್ನು [illegible] ಓದಬೇಕು. [illegible] ನ್ಯರಿಂದ [illegible] ತರಿಸಿಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿಡಿದಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಚಂದಾ ನಿರ್ಣಯ- ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೩-೮-೦. ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಜ್ಜಾ! [illegible] ಕೈ [illegible] ಎಕೆ ಕುಳಿತಿರುವಿ? ತಲೆನೋವೋ? ಹಲ್ಲುನೋವಿಯೋ? ಮೈಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮೈಯ್ಯಲ್ಲಾ ನೋಯುತ್ತದೆ

[illegible]— [illegible] ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ [illegible] ಕೊಡುವ [illegible] ಎಂಥೇ ಅದೆ.

[illegible] ಬೇಕಾದ [illegible] ಕೊಡುವೆವ.

[illegible] ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗುತ್ತದೆ. ಹುಸಿ ಮತ್ತು ಒಣತುರಿಕೆ, [illegible] ಯುಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ [illegible] ವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು [illegible] ಬಹಳ ಸುಲಭ [illegible] ಒಂದು ಡಬ್ಬಿಗೆ [illegible] ಅಂಚೆವೆಚ್ಚ ಬೇರೆ [illegible] ತೋಟ ಮತ್ತು [illegible] ದೊರೆಯುವದು.

ಎನ ಎಫ. ಪೆಂಟರ
ಖಡೇಬಜಾರ ಬೆಳಗಾವಿ

ನೋಟೀಸು

ಚಿ| ರಾ| ಈರಪ್ಪ ಬಿನ್ನ ಸಣ್ಣಸಂಗಪ್ಪ ಬಸೆಟ್ಟಿ ವ ಗಂಗವ್ವಾ ಕೋಮ ತಿಂಗಪ್ಪಾ ಬಸೆಟ್ಟಿ ಸಾಕೀನ ದೊಡವಾಡ ಇವರಿಗೆ.

ಕೆಳಗ ಸಹಿ ಮಾಡುವವಳ ಕಡಿಂದಾ ನೋಟೀಸು ಕೊಡುವದೇನಂದರೆ- ನಿಮ್ಮೊಳಗಿನ ಮೊದಲನೆಯವನು ನನ್ನ ಖಾಸ ಹೊಟ್ಟೆಯ ಮಗನು ಎರಡನೆಯವಳು ನನ್ನ ಖಾಸ ಹಿರೇ ಮಗನ ಹೆಂಡತಿಯು ಇದ್ದು ನನ್ನನ್ನ ಪೋಷಣೆ ಮಾಡುವದು ನಿಮ್ಮಿಬ್ಬರ ಕರ್ತವ್ಯವದೆ. ನೀವು ಬೇಕಿನೂಗುವ ಕಾಲಕ್ಕೆ ನನ್ನ ಉಪಜೀವನದ ತಜವೀಜು ಏನೂ ಮಾಡಲಿಲ್ಲ. ಬಿಟ್ಟುಸಂತೂ ತಮ್ಮ ಅತ್ತೆ ಮಾವಂದಿರ ಮನೆ ಸೇರಿಕೊಂಡು ಯಾವತ್ತು ಆಸ್ತಿಯ ಉತ್ಪನ್ನ ಒಳ್ಳೆಯ ವಿನಿಯೋಗ ಮಾಡುತ್ತಿರುವನು. ನನಗೆ ಉಪಜೀವನದ ಬಗ್ಗೆ ಏನೂ ಸಾಧನವಿಲ್ಲದ್ದರಿಂದಲೂ ತೀರ ಮುಪ್ಪಿನವಳಿದ್ದರಿಂದಲೂ ಹೊಟ್ಟೆಗಾಗಿ ನನಗೆ ಸಾಲ ಮಾಡುವ ಭಾಗ ಬಿತ್ತು. ಈಗ ನಾಲ್ಕೈದು ವರುಷ [illegible]

[illegible] ನೂರು (೪೦೦) ರೂಪಾಯಿ ಸಾಲ ಮಾಡಿರುವೆನು. ಇನ್ನು ಮುಂದೆ ನನಗೆ ಸಾಲ ಕೊಡತಕ್ಕವರು ಕೊಡಲೊಲ್ಲರು ಆದ ಕಾರಣ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ನಾನು ಮಾಡಿದ ಸಾಲ ತೀರಿಸಿ, ಮುಂದಿನ ಪೋಟಿಗೆ ವರ್ಷ ಒಂದು ನೂರು (೧೦೦) ರೂಪಾಯಿಗಳ ತೆ ಕೊಟ್ಟು ಪಾವತಿ ತಗೋಬೇಕು. ಹಾಗೆ ಮಾಡದೆ ಇದ್ದರೆ ನಿಮ್ಮಿಬ್ಬರ ಮೇಲೆ ಕಾಯ್ದೆ ಶೀರ ಇಲಾಜ ಮಾಡಲಾಗುವದು. ಈ ನೋಟೀಸಿನ ಖರ್ಚ ನಿಮ್ಮಿಬ್ಬರ ತಲೆಯಮೇಲೆ ಇದೆ ತಿಳಿಯುವದು ತಾರೀಖು ೭ ಎಪ್ರಿಲ ೧೯೨೬ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರತು ದ್ಯಾಮವ್ವಾ ಕೋಮ ಸಣಸಂಗಪ್ಪಾ ಬಸೆಟ್ಟಿ ಸಾಕೀನ ದೊಡವಾಡ ಇವಳ ಕೈದು ಇರುತ್ತದೆ.

ಈ ಪತ್ರವನ್ನು [illegible] ಬಾಳಶಾಸ್ತ್ರಿ [illegible] ಹೊಸಕೇರಿ ಇವರು [illegible] ದಲ್ಲಿರುವ ತಮ್ಮ ಮಾತೃಭೂಮಿ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B 1448

ವಿಜಯ

ಸಿಕ್ಕ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭। ಧಾರವಾಡ ಶನಿವಾರ ತಾರೀಖು ೧೦ ನೇ ಏಪ್ರೀಲ ೧೯೩೬ (ಸಂಚಿಕೆ ೮)

ಸರಕಾರದಿಂದ ಪೆಟೆಂಟ ದೊರೆಕಿದ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿ ತೈಲೇ ಅದ ಕೆಳಭಾಗದಲ್ಲಿಯ ಬಾಗಿಲಿಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಬಾಗಿಲಿಯು ಹಿಂದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೫	,,	೪೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರಾತ..

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೀಬೆನ್ನೂರ ಹಿಟ್ಟಿನ ಗಿರಣಿ ಹಾಗೂ ಜಮೀನುಗಳು ... ಇವೆಲ್ಲವುಗಳನ್ನು ತೀರಿಸೋಣವೆನ್ನುವದರೆ ರಾಣೀಬೆನ್ನೂರಲ್ಲಿ ಸ್ಟೇಶನ ರಸ್ತೆಕ್ಕೆ ಹೊಂದಿ ... ಲೋಕಲ್ ಬೋರ್ಡ ಮ್ಯುನಿಸಿಪಾಲಿಟಿ ಕಛೇರಿಗಳ ... ನಡುವೆ ಇರುವ ನನ್ನ ಮಾಲ್ಕಿಯ ... ಬಂಗ್ಲೆ ... ಸಹಾ ... ಇದರ ... ೧೦೦೦೦ ರೂಪಾಯಿ ಇದನ್ನು ತಾರೀಖು ೧೧-೪-೧೯೩೬ ... ದಿವಸ ಮಾರಲಿಕ್ಕಿದ್ದೇನೆ. ಬೇಕಾದವರು ಸದರ ಮುದ್ದತಿನ ಒಳಗಾಗಿ ... ಬೇಕು. ಸಮಕ್ಷಮ ಅಗರ ಟಪಾಲದ್ವಾರೆ ಮಾಹಿತಿ ತಿಳಕೊಳ್ಳಬಹುದು.

ವೆಂಕಟೇಶ ರಾಮಚಂದ್ರ ಅಳಲಗೇರಿ ಸಾ॥ ರಾಣೇಬೆನ್ನೂರ ... ತಾಲೂಕ ರಾಣೆಬೆನ್ನೂರ

ಇಟಲಿಯ ಮಂತ್ರಿಯ ಮೇಲೆ ಗುಂಡಿನ ಪ್ರಯೋಗ

—೦—

ಇಂಗ್ಲಿಷ ಸ್ತ್ರೀಯಳ ದಸ್ತಗಿರಿ.

—೦—

ಇಟಲಿಯ ಮಂತ್ರಿವರ್ಯರಾದ ಮಿ. ಮುಸಲೋನಿ ಸಾಹೇಬರು ಒಂದು ವೈದ್ಯಶಾಲೆಯ ಸಮಾರಂಭವನ್ನು ತೀರಿಸಿಕೊಂಡು ಹೊರಬೀಳುವಾಗ ಅವರ ಮೇಲೆ ... ಇಂಗ್ಲಿಷ ಸ್ತ್ರೀಯು ... ಗುಂಡು ಹಾಕಿದಳು. ಗುಂಡು ಮೂಗಿನ ತುದಿಗೆ ತಾಕಿ ಹೋಯಿತು. ಮಂತ್ರಿಗಳು ಶಾಂತ ಮುಖ ಸಮಾಧಾನ ವೃತ್ತಿಯನ್ನು ಹಿಡಿದು, ಜನರು ... ಅತ್ಯಾಚಾರ ಮಾಡಬಾರದೆಂದು ... ಉಪದೇಶ ಮಾಡಿದರು ... ಪ್ರಯತ್ನದಿಂದ ... ಸಂದಟನೆ ... ದರು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ... ತಿಂಗಳ ಮುದ್ದತಿ ಠೇವಿನಿಂದ ಹಣವನ್ನು ... ಇಟ್ಟುಕೊಳ್ಳಲಾಗುವದು. ದರವನ್ನು ವಿಚಾರಿಸಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ... ವ ಒಡ್ಡಿಯ ದರವು ನೂರಕ್ಕೆ ತಿಂಗಳ ... ಬಡಾಯಿಂದ ...

ಎ. ಕೆ. ಕಟ್ಟಿ,
ಮ್ಯಾನೇಜಿಂಗ್ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

೧೯೧೬ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

... ಡಿಗೆಯು ... ಲಕ್ಷದ ಮೇಲುಂಟು. ಚಕ್ ... ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ... ಕಾಯಿಮ ಮತ್ತು ಬೇರೆ ತರದ ... ಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು. ... ಸಹಿ ಮಾಡಿದವ ...

ವಿಜಯ.

ಧಾರವಾಡ ತಾ- ೧೧ ೪-೩೦ ನೇ ಇಸ್ವಿ

ಜಾಲಿನವಾಲಾಬಾಗ ಮತ್ತು ಲಷ್ಕರೀ ಕಾಯಿದೆ.

ಜಾಲಿನವಾಲಾಬಾಗ ಮತ್ತು ಪಂಜಾಬದ ಲಷ್ಕರೀ ಕಾಯಿದೆಯ ಅನರ್ಥ ಮತ್ತು ಅಪಮಾನಗಳನ್ನು ಹಿಂದೀ ಜನರು ಎಂದೂ ಮರೆಯುವಂತಿಲ್ಲ. ಇವುಗಳ ನಿಷೇಧವೆಂದೂ ಸ್ಮಾರಕವೆಂದೂ ಹಿಂದುಸ್ಥಾನದ ತುಂಬ ಕಾಂಗ್ರೆಸ ಕಮೀಟಿಗಳ ವಿದ್ಯಮಾನವಾಗಿ ರಾಷ್ಟ್ರೀಯ ಸಪ್ತಾಹದ ಸಭೆಗಳಾದುವು. ಖಾದಿಯ ಪ್ರಸಾರ ಮಾಡಲ್ಪಡುವದು, ಆ ದಿನದ ಪ್ರಾರಂಭವು ಮೊದಲಿನಿಂದಾಗಿರುತ್ತದೆ. ಲಾಹೋರದಲ್ಲಾದ ಸಭೆಯ ಅಧ್ಯಕ್ಷರಾಗಿದ್ದ ಸ ದಾರ ಮಂಗಲಸಿಂಗರು "ಕಾಯದೆಭಂಗ ಮಾಡಿ, ಕರ ಕಂದಾಯ ಕೊಡುವದಿಲ್ಲೆಂದು ಸತ್ಯಾಗ್ರಹ ಮಾಡಿದ ವಿನಹ ಸ್ವರಾಜ್ಯ ದೊರೆಯಲಾರದೆಂದು" ಭಾಷಣ ಮಾಡಿದ್ದಾರೆ. ಶ್ರೀ ರಾಜಗೋಪಾಲಾಚಾರ್ಯರು ಅಹಮದಾಬಾದಿನಲ್ಲಿದ್ದು, ಅವರು "ಖಾದಿಯ ಪ್ರಸಾರ ಮಾಡಿದರೇ ಲ್ಯಾಂಕಶಾಯರಕ್ಕೆ ಹೊಡೆತ ಕೊಡುವದಾದ ಕಾರಣ ಖಾದಿಯ ವ್ಯಾಪಾರವನ್ನು ಹಚ್ಚಿಸಿರೆಂದು" ಉಪದೇಶ ಮಾಡಿದ್ದಾರೆ. ಮುಂಬಯಿಯಲ್ಲಾದ ಸಭೆಯಲ್ಲಿ ದೇಪ ಸರೋಜಿನಿಯವರು ಅಧ್ಯಕ್ಷರಾಗಿದ್ದರು. ಮೌಲಾನಾ ಶೌಕತಲ್ಲಿ, ಆಸಿಬರ್ಯಾಂಟ, ಸರ ಕೆ. ವ್ಹಿ ರೆಡ್ಡಿಯವರ ಭಾಷಣಗಳಿಂದವು ಪಂಜಾಬದ ಜನರು ಕಷ್ಟಸಿಂದ ಒಗೆದರೆ. ಪ್ರತ್ಯಕ್ಷವಾಗಿ ಗುಂಡು ಹಾಕಿರೆಂದು ಉಸುರಿದ ಡಾಯರನವರು ಈ ಸಪ್ತಾಹದಲ್ಲಿ ಮಾತಾಡಿದ್ದು ಆಶ್ಚರ್ಯವೇ ಸರಿ. ಸರ ಕೆ. ವ್ಹಿ. ರೆಡ್ಡಿಯವರು ರಾಷ್ಟ್ರೀಯ ಸಪ್ತಾಹಕ್ಕಿಂತ ತನ್ನ ಪ್ರದರ್ಶನ ಮಾಡುವದಕ್ಕಾಗಿಯೇ ಮಾತಾಡಿದರೆಂದು ಹೇಳಬಹುದು. "ಕಾಂಗ್ರೆಸವು ಭೇದದ ಪ್ರಕಾರ ಜ್ಞಾನಾವಣೆಯಾಗುವಂತೆ ಇದು ಒಪ್ಪಲಿ; ನಾಳಿನ ದಿವಸವೇ ಇದೇ ಬ್ರಾಹ್ಮಣೇತರ ಪಕ್ಷವನ್ನು ಕಾಂಗ್ರೆಸದಲ್ಲಿ ಕರೆದು ಬಿಡುವೆನೆಂದು" ಅವರೆಂದರು. ಸ್ವಾಮಿ ಶ್ರದ್ಧಾನಂದರು ಕಳೆದ ಸಾಲು ಪಠಾಣ ಒಬ್ಬನ ಕೈಯಿಂದ ಭಗ್ನರಾಗಿದ್ದರು. ಅದರ ಹೊ... ದೇಶೀಯರೇ ಹೊಣೆಗಾರರೆಂದು ಮನಸಾ...

...ಕ್ಷಿಯಾಗಿ, ಪುನಃ ಚಳವಳಿಯಲ್ಲಿ ಸೇರುವ ಸಂಕಲ್ಪ ಮಾಡಿದ್ದಾರೆ. ಅಲಹಾಬಾದಿನಲ್ಲಿ ಇವರ ನೇತೃತ್ವದಲ್ಲಿಯೇ ಸಪ್ತಾಹದ ಪ್ರಾರಂಭವಾಯಿತು. ಇವರು ರಾಷ್ಟ್ರೀಯ ನಿಶಾನೆಯನ್ನು ಏರಿಸಿದರು. ಪಂಡಿತ ಮೋತೀಲಾಲರಂತೂ ಹೆಗಲ ಮೇಲೆ ಖಾದೀ ಹೊತ್ತು ಬೀದಿ ಬೀದಿಯಲ್ಲಿ ಮಾರುತ್ತಿದ್ದಾರೆ. ಮದ್ರಾಸದಲ್ಲಿ ಶ್ರೀ. ಸತ್ಯಮೂರ್ತಿಯವರ ಮಹತ್ವದ ಭಾಷಣವಾಯಿತು. ಇದೇ ಸಮಯದಲ್ಲಿ ಆಸ್ಟ್ರೇಲಿಯಾದಿಂದ ನಾಮದಾರ ಶಾಸ್ತ್ರಿಯವರಿಗೆ ಹಾರ್ನಬ್ಲೋಯರೆಂಬ ಸಾಹೇಬರ ಕಾಗದ ಬಂದಿದೆ. ಈ ಪತ್ರ ಓದಿಕೊಂಡ ಬಳಿಕ 'ಬ್ರಿಟಿಶ ಸರಕಾರವು ಹಿಂದೀ ಜನರೊಂದಿಗೆ ಸಹಕಾರ ಮಾಡುವಂತೆ ಬಲವಂತಿಕೆ ಮಾಡಿದ ವಿನಹ, ಸರಕಾರವು ಸಹಕಾರ ಮಾಡಲಾರದೆಂಬದು ನಾಮದಾರ ಶಾಸ್ತ್ರಿಯವರ ಮತವಾಗಿರುತ್ತದೆಂಬ' ಸಂಗತಿಯನ್ನು ಶ್ರೀ ಸತ್ಯಮೂರ್ತಿಯವರು ಜಾಹೀರ ಮಾಡಿದರು. ರಾಷ್ಟ್ರೀಯ ಸಪ್ತಾಹವು ಒಂದಿಲ್ಲೊಂದು ಬಗೆಯಿಂದ ಮಹತ್ವದ್ದಾಗಿದ್ದು, ಅದರಲ್ಲಿ ಸಂಯುಕ್ತ ರಾಷ್ಟ್ರೀಯ ಸಂಘದವರು ಸೇರದೆ, ದೂರ ಸರಿದು ನಿಂತಿರುವದೇ ಅವರಲ್ಲಿರುವ ರಾಷ್ಟ್ರಾಭಿಮಾನದ ಕೊರತೆಯನ್ನು ವ್ಯಕ್ತಮಾಡಿ ತೋರುತ್ತದೆ.

ಮಹಾತ್ಮರ ಕೂಡ ಒಪ್ಪಂದ-

ಪಂಡಿತ ಮಾಲವೀಯರವರು ಮುಂಬಯಿಯಲ್ಲಿ ರಾಷ್ಟ್ರೀಯ ಸಂಘದಲ್ಲಿ ಸೇರಿದರಷ್ಟೇ; ಇವರು ಬೇಗನೆ ಅಹಮದಾಬಾದಿಗೆ ಹೋಗಿ, ಮಹಾತ್ಮರನ್ನು ಕಂಡು, ತಮಗೂ ಸ್ವರಾಜ್ಯ ಪಕ್ಷದ ಧುರೀಣರಾದ ಪಂಡಿತ ಮೋತಿಲಾಲರಿಗೂ ಒಡಂಬಡಿಕೆ ಮಾಡಿಸಬೇಕೆಂದು ವಿನಂತಿ ಮಾಡಿಕೊಳ್ಳುವರು. ಕೌನ್ಸಿಲಕ್ಕೆ ಪೂರಾ ಬಹಿಷ್ಕಾರ ಹಾಕಬೇಕು; ಇಲ್ಲವಾದರೆ ಅದನ್ನು ಅದರ ಉಪಯೋಗ ಮಾಡಿಕೊಳ್ಳಬೇಕು. ಬ್ಯಾರಿಸ್ಟರ ಜಿನ್ನಾ ಸಾಹೇಬರ ಶುದ್ಧ ಮತ್ತು ಪ್ರಾಮಾಣಿಕ ರೀತಿಯಿಂದ ಸರಕಾರದ ಕೂಡ ಹೋರಾಡುವ ಮತವು ತಮಗೆ ಒಪ್ಪಿಗೆಯಾಗಿರುತ್ತದೆಂದು ಪಂಡಿತಜಿಯವರು ಮುಂಬಯಿಯ ಸಭೆಯಲ್ಲಿ ಭಾಷಣ ಮಾಡಿದ್ದಾರೆ.

ಉಮೇದವಾರಿಯ ಆಮಂತ್ರಣ-

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಪಟೇಲರಿಗೆ ಸಿಂಧದ ಪತಿಯಿಂದ ಅಸೆಂಬ್ಲಿಯ ಚುನಾವಣೆಯಲ್ಲಿ ಉಮೇದವಾರರಾಗಬೇಕೆಂದು ಸಿಂಧ ಕಾಂಗ್ರೆಸ ಕಮಿಟಿಯವರು ಆಮಂತ್ರಣ ಕಳಿಸಿದರು. ನಾನು ಅಧ್ಯಕ್ಷನಾಗಿರುವದರಿಂದ ಯಾವದೊಂದು ಪಕ್ಷಕ್ಕೆ ಸೇರದೆ, ಸರ್ವಾನುಮತದಿಂದ ಎದುರಾಳಿಯಿಲ್ಲದೆ ಆರಿಸಲ್ಪಡುವದು ಲೇಸು. ಈ ಪ್ರಕಾರ ತಮ್ಮನ್ನು ಆರಿಸುವಂತೆ ಗುಜರಾಥದ ಒಂದು ಭಾಗದಿಂದ ಆಶ್ವಾಸನ ದೊರೆತಿದೆ. ಆದುದರಿಂದ ನಿಮ್ಮ ಆಮಂತ್ರಣ ಅಂಗೀಕರಿಸಲಿಕ್ಕಾಗುವದಿಲ್ಲೆಂದು ಇವರು ಉತ್ತರ ಬರೆದಿದ್ದಾರೆ.

ಎಂಟು ಲಕ್ಷದ ವರ್ಷಾಸನ-

ಇಂದೂರಿನ ಪದಚ್ಯುತ ಹೋಳಕರ ಮಹಾರಾಜರಿಗೆ ಎಂಟು ಲಕ್ಷದ ವರ್ಷಾಸನ ಮಾಡಿಕೊಟ್ಟಿದ್ದಾರೆ. ಐದು ಲಕ್ಷವನ್ನು ಮಹಾರಾಜರು ಸ್ವಂತಕ್ಕಾಗಿ ಉಪಯೋಗಿಸುವರು. ಒಂದು ಲಕ್ಷ ಹಿರಿಯ ಹೆಂಡತಿ ಮತ್ತು ೮೦ ಸಾವಿರವನ್ನು ಕಿರಿ ಹೆಂಡತಿಗೆ ಕೊಡುವರು. ಉಳಿದದ್ದರಲ್ಲಿ ಹೊಸದಾಗಿ ಮಾಡಿಕೊಂಡ ಮೂರನೆಯ ಹೆಂಡತಿ ಮತ್ತು ರಾಜಪುತ್ರಿಯರಿಗೆ ಹಂಚಿ ಕೊಡುವರು. ದಿವಾನ ನರಸಿಂಗರಾಯರಿಗೆ ಸಂಸ್ಥಾನದಿಂದ ೧೫೦೦ ರೂಪಾಯಿ ಪೆನಶನ ಮಾಡಿಕೊಟ್ಟದ್ದಲ್ಲದೆ, ಮಹಾರಾಜರು ಸ್ವಂತ ಕಿಸೆಯಿಂದ ತಿಂಗಳಿಗೆ ಸಾವಿರ ರೂಪಾಯಿ ಕೊಡುವರು.

ಕಲಕತ್ತೆಯ ದಂಗೆಯ ಸುದ್ದಿಗಳು.

—೦—

ಅನೇಕ ಜನ ಪುಂಡರು ಪೋಲೀಸ ಸ್ಟೇಶನದ ಮೇಲೆ ಹಲ್ಲೆ ಮಾಡಿದರು. ಇಬ್ಬರು ಸಿಪಾಯರು ಘಾಯವಾದರು

. .

ಪುಂಡ ಜನರು ಮಾರವಾಡಿಗಳ ಮೇಲಿನ ಸೇಡು ತೀರಿಸಿಕೊಂಡರು. ಇವರು ಭಾರೀ ಬುಟ್ಟಿಯ ಫಲಭೋಗವನ್ನು ಚನ್ನಾಗಿ ಉಂಡರು. ಹದಿನೆಂಟು ಹೆಂಡರು ಮಕ್ಕಳನ್ನು ದೇಶಕ್ಕೆ ಕಳಿಸುತ್ತಿದ್ದಾರೆ.

ರಾಗವಪುರಿ ಮತ್ತು ಅಂತೀಪೂರ ಎಂಬ ಬೀದಿಗಳಲ್ಲಿರುವ ಹಿಂದೂ ಮತ್ತು ಶೀಖ ದೇವಾಲಯಗಳನ್ನು ಕೆಡವಬೇಕೆಂದು ಮುಸಲಮಾನರು ಬಹಳ ಪ್ರಯತ್ನ ಮಾಡಿದರು. ಆದರೆ ಅವರ ಆಟ ಸಾಗಲಿಲ್ಲ

ಒಬ್ಬ ಚಿನಿವಾಲನ ಅಂಗಡಿಯನ್ನು ಮುರಿದು, ಐದು ಸಾವಿರದ ಬುಡಿವೆಗಳನ್ನು ಒಡೆದು, ಬೀದಿಗುಂಟ ತೂರಿದರು. ಕೈಗೆ ಸಿಕ್ಕ ಪದಾರ್ಥಗಳನ್ನು ಬಗಲಿಗೂ ಹಾಕಿದರು.

ಶೀಖರ ಮೇಲೆ ಮುಸಲಮಾನರ ಕೋಪ ಬಹಳ. ಇವರ ಒಂದು ಊಟದ ಮನೆಯಲ್ಲಿ ಹೊಕ್ಕು ಸುಲಿದು, ಮೂವರನ್ನು ಘಾಯ ಪಡಿಸಿದರು.

...ಕ್ಯಾನಿಂಗ ಬೀದಿಯಲ್ಲಿದ್ದ ರೇಶಿಮೆಯ ಜವಳಿಯ ಅಂಗಡಿಗಳಲ್ಲಿ - ಲೂಟಿ ಮಾಡಿ ಬೀದಿಗುಂಟ ಚಲ್ಲಿದ್ದ ಒಂದು ಲಕ್ಷ ರೂಪಾಯಿಯ ಬಟ್ಟೆಗಳನ್ನು ಪೋಲೀಸರು ಬಂಡಿಯ ಮೇಲೆ ಬಂಡಿ ತುಂಬಿಕೊಂಡು ಜಕರಿಯಾ ಪೋಲಿಸ ಸ್ಟೇಶನಕ್ಕೆ ಒಯ್ದರು

ಝಕೇರಿಯಾ ಎಂಬ ಬೀದಿಯಲ್ಲಿ ಕಾವಲು ಕಬಾಲಸಿಂಗನೆಂಬ ಪೋಲೀಸ ಕಾನ್ಸಟೇಬಲನಿಗೆ ಗುಂಡು ಹಾಕಿದ್ದರು.. ಈ ಗುಂಡಿನ ಘಾಯದಿಂದ ಆತನು ಮೃತಪಟ್ಟನು.

ಕೆಲ ಮುಸಲಮಾನರು ದೋಣಿಗಳಲ್ಲಿ ಕೂತು, ಕಲಕತ್ತೆಗೆ ಬಂದು, ದಂಗೆ ಮಾಡಿ, ಪುನಃ ದೋಣಿಗಳಲ್ಲಿ ಕೂತು ಪಲಾಯನ ಹೇಳಿಸಿದರು ಪೋಲೀಸರು ಇವರ ಮೇಲೆ ಗುಂಡು ಹಾಕಿದರು. ಯಾರೂ ಸಾಯಲಿಲ್ಲ.

ಪ್ರಕಟಣೆ.

—೦—

ಕಾನಪುರದ ರಾಷ್ಟ್ರೀಯ ಮಹಾಸಭೆಯ ನಿರ್ಣಯದ ಮೇರೆಗೂ ಹಾಗು ದಿಲ್ಲಿಯಲ್ಲಿ ಅಖಿಲ ಭಾರತ ರಾಷ್ಟ್ರೀಯ ಮಂಡಲದವರು ನಿರ್ಣಯಿಸಿದ ಮೇರೆಗೂ ಪ್ರಾಂತಿಕ ಕಾಯದೆ ಕೌನ್ಸಿಲುಗಳಿಗೂ, ಅಸೆಂಬ್ಲಿಗೂ ಕಾಂಗ್ರೆಸದ ಪರವಾಗಿ ಉಮೇದವಾರರನ್ನು ನಿಲ್ಲಿಸಬೇಕೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಲದವರು ತಾ|| ೧೪-೩-೩೬ ನೇ ದಿವಸ ಮಾಡಿದ ನಿರ್ಣಯವು ಎಲ್ಲರಿಗೂ ಗೊತ್ತಿದೆಯಷ್ಟೇ! ಅದರಂತೆ ನಮ್ಮ ಪ್ರಾಂತದಲ್ಲಿ ದಿಲ್ಲಿಯ ಅಖಿಲ ಭಾರತ ರಾಷ್ಟ್ರೀಯ ಮಂಡಲದವರು ಹಾಕಿಕೊಟ್ಟ ನಿರ್ಬಂಧಗಳನ್ನು ಒಪ್ಪಿಕೊಳ್ಳುವಂಥ ಕಾಂಗ್ರೆಸ ಸಭಾಸದರಾಗಿದ್ದು ಯಾರಾದರೂ ಮುಂಬೈ ಮದ್ರಾಸ ಕೌನ್ಸಿಲುಗಳಿಗೂ ಮತ್ತು ದಿಲ್ಲಿಯ ಅಸೆಂಬ್ಲಿಗೂ ಉಮೇದವಾರರಾಗಿ ನಿಲ್ಲಲಪೇಕ್ಷಿಸುತ್ತಿದ್ದರೆ ನಮ್ಮ ಕಡೆಗೆ ಒಂದು ಆಣೆಯ ಪೋಸ್ಟ ಟಿಕೀಟನ್ನು ಕಳುಹಿಸಿಕೊಡಬೇಕು. ಅಂದರೆ ಪ್ರತಿಜ್ಞಾ ಪತ್ರವನ್ನೊಳಗೊಂಡ ಅರ್ಜಿಯ ನಮೂನೆಯ ನಕಲೊಂದನ್ನು ಕಳಿಹಿಸುವೆವು. ಉಮೇದವಾರರು ಅವುಗಳನ್ನು ಸರಿಯಾಗಿ ತುಂಬಿ ಸಹಿ ಮಾಡಿ ಇದೇ ತಿಂಗಳ ೩೦ ನೇ ತಾರೀಖಿನೊಳಗೇ ನಮಗೆ ಮುಟ್ಟುವಂತೆ ಕಳುಹಿಸಿಕೊಡಬೇಕೆಂದು ಬೇಡಿಕೆಯಿದೆ,

ಮುದ್ವೇರಾವ ಕೆಂಭಾವಿ
ಕಾರ್ಯದರ್ಶಿ
ಕ. ಪ್ರಾ. ಕಾ. ಕ. ಗದಗ.

ಕರ್ನಾಟಕ ಕೀರ್ತನ ಸಮ್ಮೇಲನ, ಬಳ್ಳಾರಿ.

—೦—

ಕರ್ನಾಟಕ ಕೀರ್ತನ ಸಮ್ಮೇಲನವು ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ಜರಗುವ ಸಂಬಂಧವಾಗಿ ಎಲ್ಲ ಕಡೆಗೂ ಪ್ರಕಟನಾ ಪತ್ರಿಕೆಗಳು ಕಳಿಸಲ್ಪಟ್ಟಿವೆ ಮತ್ತು ಸಾಧ್ಯವಾದ ಮಟ್ಟಿಗೆ ಎಲ್ಲ ಪತ್ರಕಾರರಿಗೂ ಅವುಗಳನ್ನು ಮುದ್ರಿಸಲು ಕೇಳಿಕೊಂಡಿದೆ.

ಇದೇ ಸಮ್ಮೇಲನದ ಕಾಲಕ್ಕೆ ಕರ್ನಾಟಕ ಪ್ರಾಂತಿಕ ಪರಿಷತ್ತು ಹಾಗು ಸಾಹಿತ್ಯ ಪರಿಷತ್ತುಗಳೂ ಬಳ್ಳಾರಿಯಲ್ಲಿ ನೆರೆಯುವದರಿಂದ ತ್ರಿವೇಣಿ ಸಂಗಮವು ಬಳ್ಳಾರಿಯಲ್ಲಿ ಈ ಸಂಗಮದಲ್ಲಿಯ ಜ್ಞಾನ ಸತ್ರದಲ್ಲಿ ಮಿಂದು ಬರುವ ನರನೇ ಧನ್ಯನು! ಅವನೇ ದೇಶೋದ್ಧಾರದ ಶೇವಕನು! ಅವನೇ ಕನ್ನಡ ಮಾತೆಯ ಸತ್ಪುತ್ರನು!!

ನಾವು ನಮಗೆ ಗೊತ್ತಿದ್ದ ಮಟ್ಟಿಗೆ ಕೀರ್ತನಕಾರರಿಗೂ ಪುರಾಣಿಕರಿಗೂ ದಾಸರುಗಳಿಗೂ ಬೇರೆ ಬೇರೆ ಪತ್ರಗಳನ್ನು ಕಳಿಸಿದ್ದರೂ ಅವು ಅವರು ಸಂಚಾರದಲ್ಲಿರುವ ಮೂಲಕ ಸರಿಯಾಗಿ ಮುಟ್ಟುವವೋ ಇಲ್ಲವೋ ಎಂಬ ಭೀತಿಯಿದೆ. ಕಾರಣ ಯಾರಿಗೆ ಪತ್ರಿಕೆಯು ಬಂದಿಲ್ಲವೋ ಅವರು ಕೆಳಗಿನ ವಿಳಾಸಕ್ಕೆ ಬರೆದರೆ ಅವರಿಗೆ ಕಳಿಸುತ್ತೇವೆ

ಎಂದಿನಂತೆ ಈ ಸಲವೂ ಈ ಕೀರ್ತನಕಾರರಿಗೂ ಪುರಾಣಿಕರಿಗೂ ದಾಸರ ಪದಗಳನ್ನು ಸುಸ್ವರವಾಗಿಯೂ ಅರ್ಥಗಂಭೀರವಾಗಿಯೂ ಹಾಡುವವರಿಗೂ ದಾಸರ ಪದಗಳನ್ನು ಸಂಗ್ರಹಿಸಿದವರಿಗೂ ಸಂಮೇಲನದ ಕಾಲದಲ್ಲಿಯೂ ಸಂಮೇಲನಕ್ಕೆ ಮುಂಚೆ ಹಾಗು ಒಂದು ದಿವಸ ಹಿಂದುಗಡೆ ಈ ಪ್ರಕಾರ ಊಟ ವಸತಿಗಳು ಪುಕ್ಕಟೆಯಾಗಿ ಜರಗುವವು. ಹಾಗು ಆ ಅವರ ಯೋಗ್ಯತಾನುಸಾರ ಸಂಭಾವನೆಗಳನ್ನು ಕೊಡುವದಲ್ಲದೆ, ರೈಲ ಚಾರ್ಜ ವ್ಯಯವನ್ನು ಕೊಡುತ್ತದೆ. ಮೇಲಿನ ವಿಷಯಗಳಲ್ಲಿ ಪ್ರವೀಣರಾದವರಿಗೆ ಸರ್ಟಿಫಿಕೇಟ ಹಾಗು ಪದಕಗಳೇ ಮೊದಲಾದ ಬಹುಮಾನಗಳು ಕೊಡಲ್ಪಡುವವು. ಕಾರಣ ಭಕ್ತಿ ರಸವನ್ನು ಬೀರಿ ಇಹ ಪರಲೋಕಗಳ ಸಾಧನವನ್ನು ಮಾಡಿಕೊಳ್ಳತಕ್ಕವರು ಶೀಘ್ರವೇ ಬರಬೇಕು

ಕೀರ್ತನಕಾರರೇ ಮೊದಲಾದ ಮೇಲಿನ ಗೃಹಸ್ಥರು ತಮ್ಮ ಹೆಸರು ವಿಳಾಸ ತಾವು ಪ್ರವೀಣರಾದ ಕೀರ್ತನ ಪುರಾಣ ಸಂಗೀತಯನ್ನು ವಿವರಿಸಿ ಮೇ ತಿಂಗಳ ೧೦ ನೇ ತಾರೀಖಿನೊಳಗಾಗಿ ಕೆಳಗಿನ ವಿಳಾಸಕ್ಕೆ ಬರೆಯಲಿಕ್ಕೇ ಬೇಕು.

ಕರ್ನಾಟಕದ ಅಖಿಲ ಗೃಹಸ್ಥರೂ ಈ ಧಾರ್ಮಿಕ ಸಂಸ್ಥೆಯನ್ನು ಪ್ರಬಲಗೊಳಿಸಲು ಬೇಕಾದ ಸೂಚನೆಗಳನ್ನೂ ಅದಕ್ಕನುಕೂಲಿಸುವಂಥ ಗೊತ್ತುವಳಿಗಳೇನಾದರೂ ತರತಕ್ಕವಿದ್ದರೆ ಅವುಗಳನ್ನು ಸಹ ಮೇ ತಿಂಗಳ ೧೦ ನೇ ತಾರೀಖಿನೊಳಗಾಗಿ ಕಳಿಸಲಿಕ್ಕೇಬೇಕು.

ಸಂಮೇಲನದ ಅಧ್ಯಕ್ಷತೆಯನ್ನು ಸ್ವೀಕರಿಸಲು ರಾಜ ಕವಿಭೂಷಣ ಶ್ರೀಮಾನ್ ಎಚ್ ಲಿಂಗರಾಜೆ ಅರಸಿನವರನ್ನು ಒತ್ತಾಯದಿಂದ ಕೇಳಿಕೊಳ್ಳಲಾಗಿದೆ. ಅವರು ಸಮ್ಮತಿ ಕೊಡುವದರಲ್ಲಿ ಸಂಶಯವಿಲ್ಲ.

ಈ ಸಂಮೇಲನವು ಕರ್ನಾಟಕದ ಜಾಗೃತೆಗೆ ಅತ್ಯಂತ ಮುಖ್ಯವಾದದ್ದರಿಂದ ಅಲಕ್ಷಿಸದೆ ಪ್ರತಿಯೊಬ್ಬರೂ ಬಂದೇ ತೀರಬೇಕು. ಹೆಚ್ಚಿನ ಮಾಹಿತಿ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಅಖಿಲ ಪತ್ರಕಾರರು ಇದನ್ನು ಪ್ರಕಟಿಸುವದಲ್ಲದೆ, ಸಂಮೇಲನದ ಕಛೇರಿಗೆ ಎರಡು ತಿಂಗಳ ಮಟ್ಟಿಗೆ ತಮ್ಮ ಪತ್ರವನ್ನು ಕಳಿಸಿದರೆ ಅದರ ವರ್ಗಣಿಯನ್ನು ಕೊಡಲಾಗುವದು.

ಕನ್ನಡಿಗರ ಸೇವಕ
ರಾಘವೇಂದ್ರರಾವ ಜಾಕಲಬ್ಬಿ ವಕೀಲ
ಕೊಪ್ಪಳ
ಸಹಾಯಕ ಕಾರ್ಯದರ್ಶಿ ೩ ನೇ ಕರ್ನಾಟಕ ಕೀರ್ತನ ಸಂಮೇಲನ

ದಿವಾನ ಬಹಾದ್ದೂರ ಗೋಪಾಲಸ್ವಾಮಿ ಮೊದ್ಲಿಯಾರರು ಈ ಸಮ್ಮೇಲನದ ಸ್ವಾಗತ ಕಮಿಟಿಯ ಚೇರಮನ್ನರೂ, ಕೀರ್ತನಕೇಸರಿ ಬಹುರಾಮಾಚಾರ್ಯರು ಕಾರ್ಯದರ್ಶಿಗಳೂ ರಾ. ಬ. ಚಿತ್ತವಾಡಿಗಿ ಹಣಮಂತಗೌಡರೂ ಕೊಪ್ಪಳದ ವಕೀಲರಾದ ಶ್ರೀ ರಾಘವೇಂದ್ರರಾವ ಜಾಕಲಬ್ಬಿಯವರೂ ಸಹಾಯಕ ಕಾರ್ಯದರ್ಶಿಗಳೂ ಆಗಿದ್ದಾರೆ. ಎಲ್ಲ ಪತ್ರವ್ಯವಹಾರವನ್ನು ಜಾಯಿಂಟ ಸೆಕ್ರೆಟರಿ ಮೂರನೇ ಕೀರ್ತನ ಸಮ್ಮೇಲನವೆಂಬ ವಿಳಾಸದ ಮೇಲೆ ಮಾಡಬೇಕು.

ನಿಜಾಮ ಹೈದರಾಬಾದಿನ ಅಡವಿಗಳಲ್ಲಿ ಹುಲಿಗಳ ಹಾವಳಿಯು ಬಹಳವಾದ್ದರಿಂದ ಬೇಟೆಯಾಡುವವರಿಗೆ ಅನಿರ್ಬಂಧ ಪಾಸುಗಳನ್ನು ಕೊಡಬೇಕೆಂದು ಹುಜೂರದ ಫರ್ಮಾನ ಹೊರಬಿದ್ದಿರುತ್ತದೆ.

ನೋಟೀಸು

—೦—

ಬಸಪ್ಪಾ ಬಿನ್ ಕಲ್ಲಪ್ಪಾ ಹಿರೇಶೆಟ್ಟಿ ಸಾ ಕೀನ ನರೇಗಲ್ಲ ತಾಲೂಕ ರೋಣ ಜಿಲ್ಲಾ ಧಾರವಾಡ ಇವರಿಗೆ-

ಕೆಳಗೆ ಸಹಿ ಮಾಡಿದವಳ ಕಡಿಂದಾ ಈ ನೋಟೀಸಿನ ದ್ವಾರ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ಈಗ [illegible] ದರವರುಷದ ಆಚೆ ಉಡಕಿ [illegible] ಮಾಡಿಕೊಂಡಿರುತ್ತಿ. ನೀನು ಬಸ್ಸಿ ಫಕೀರವ್ವಾ ಗಾಣಿಗೇರ ಎಂಬುವವಳ ಸಹವಾಸದಲ್ಲಿ ಇದ್ದ ಪ್ರಯುಕ್ತ ಸದರಿಯವಳ ಸ್ಥಾವರ ಆಸ್ತಿ [illegible] ವ ಮನಿ ನುಬದಲೆ ಇಲ್ಲದೆ ಫೋಕಳ ಖರೀದಿ ನಿನ್ನ ಹೆಸರಿಗೆ ಮಾಡಿರತಾಳೆ. ಅದ್ದರಿಂದ ನೀನು ಅವಳ ಆಜ್ಞೆ ಪ್ರಕಾರ ನಡೆಯುತ್ತಿದ್ದು ಸದರಿ ಫಕೀರವ್ವನ ಮನೆಯಲ್ಲೇ ಇರತಿ. ನಿನ್ನ ಪಿತ್ರಾರ್ಜಿತ ಆಸ್ತಿ ಹೊಲಾ ಮನಿ ಏನೂ ಇರುವದಿಲ್ಲ. ನೀನು ಸದರಿ ಫಕೀರವ್ವಾ ಗಾಣಿಗೇರ ಇವಳ ದುರ್ಬೋಧನೆಗೆ ಒಳಪಟ್ಟು ಉಡಕಿ ಕಾರ್ಯವಾದ ಒಂದು ತಿಂಗಳೊಳಗಾಗಿ ನನ್ನನ್ನು ಹೊಡೆದು ಬೈದು ನೀನು ನನ್ನ ಮೈಮೇಲೆ ಇಟ್ಟ ದಾಗೀನೆ ಬೆಳ್ಳಿ ತೋಳಬಂದಿ ಎರಡು ಸಹಾ ಕಸಕೊಂಡು ಉಟ್ಟ ಶೀರೆಯ ಮೇಲೆ ದುರ್ನಡತೆಯಿಂದ ನನ್ನನ್ನು ಮನೆ ಬಿಟ್ಟು ಹೊರಗೆ ಹಾಕಿದಿ. ಎರಡು ತೋಳಬಂದಿ ಶಿವಾಯ ಬಾಕಿ ದಾಗೀನೆ ಬೆಳ್ಳಿ ಬಂಗಾರದವು ನನ್ನ ಮೈಮೇಲೆ ಯಾವು ಇಟ್ಟಿದ್ದಿಲ್ಲಾ. ಈ ವರ್ತಮಾನವನ್ನು ನನ್ನ ತವರ ಮನೆಯವರಿಗೆ ಪತ್ರದ್ವಾರ ತಿಳಿಸಿದೆ. ಅವರು ಯಾರೂ ಬರಲಿಲ್ಲ. ಕಾರಣ ನನ್ನ ಉಪಜೀವನದ ದೆಶಿಯಿಂದ ಎರಡನೇದವರ ಬಳಿಯಲ್ಲಿ ಸಾಲಾ ಮಾಡದ ವಿನಹ ಎರಡನೇ ಮಾರ್ಗ ಉಳಿಯಲಿಲ್ಲ. ನರೇಗಲ್ಲಲ್ಲಿ ಎಳೆಂಟು ತಿಂಗಳ ಲಾಗಾಯಿತು ಸಾಲಾ ಮಾಡಿ ಉಪಜೀವನ ಮಾಡಿಕೊಂಡೆ ನಾನು ಹೊತ್ತುಗಳೆದ್ದು ನನ್ನ ಆಪ್ತ ಇಷ್ಟರು ಯಾರೂ ನರೇಗಲ್ಲದಲ್ಲಿ ಇಲ್ಲದ ಮೂಲಕ ನನ್ನ ಉಪಜೀವನಕ್ಕೆ ತೊಂದರೆಯಾದ ಪ್ರಯುಕ್ತ ನಾನು ಸದರಿ ನರೇಗಲ್ಲ ಬಿಟ್ಟು ತಾಲೂಕ ಮುಜಕೇರಮಾನನಕಟ್ಟಿಯಲ್ಲಿ ಈಗ ಎಳೆಂಟು ತಿಂಗಳಲಾಗಾಯಿತು ಇರುತ್ತೇನೆ. ಎರಡೂ ಗ್ರಾಮದಲ್ಲಿ ನನ್ನ ಉಪಜೀವನದ ದೆಶಿಯಿಂದ ಮಾಡಿದ ಸಾಲ ಒಂದು ನೂರಾ ಇಪ್ಪತ್ತೈದು (೧೨೫) ರೂಪಾಯಿ ಆಗಿರುತ್ತದೆ. ಈಗ ನನಗೆ ಸಾಲಗಾರರ ಉಪದ್ರ ಬಹಳ ಆಗಿರುತ್ತದೆ. ಅದ್ದರಿಂದ ನಿನಗೆ ಈ ನೋಟೀಸು ಕೊಡುವ ಭಾಗ ಏನಂದರೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸದೊಳಗಾಗಿ ಒಂದು ನೂರಾ ಇಪ್ಪತ್ತೈದು (೧೨೫) ರೂಪಾಯಿ ತೆಗೆದುಕೊಂಡು ಬಂದು ನಾನು ಮಾಡಿದ ಸಾಲಗಾರರ ಸಾಲಾ ತೀರಿಸಿ ನನ್ನನ್ನು ಕರೆದುಕೊಂಡು ಹೋಗಿ ಛಲೋ ರೀತಿ ಬಾಳ್ವೆ ಮಾಡಿಕೊಂಡು ಹೋಗಬೇಕು. ಇದಕ್ಕೆ ನೀನು ತಪ್ಪಿದರೆ ಇನ್ನೇ ನೋಡಬೇಕು ಅಂತಾ ತಿಳಿದು ನಾನು ಮೇಲೆ ನಮೂದಿಸಿದ ಸಾಲ ತೀರಿಸುವ ಉದ್ದೇಶದಿಂದ ಎರಡನೇದವನನ್ನು ಉಡಕಿ ಕಾರ್ಯ ಮಾಡಿಕೊಳ್ಳುವೆನು. ಆ ಮೇಲೆ ನನ್ನ ಮೇಲೆ ವ ನನ್ನ ಉಡಕಿ ಕಾರ್ಯ ಮಾಡಿಕೊಂಡವನ ಮೇಲೆ ನಿನ್ನದು ಯಾವ ಸಮ್ಮಂಧ ಹಕ್ಕು ನಡೆಯಲಾರದು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇದೆ ತಿಳಿಯುವದು.

ತಾರೀಖು ೬ ನೇ ಮಾಹೆ ಎಪ್ರಿಲ ಸನ್ ೧೯೨೬ ನೇ ಇಸ್ವಿ

ಸಹಿ- ಗಂಗವ್ವಾ ಹಿರೇಶೆಟ್ಟಿ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿಯವಿ? ತಲೆನೋವೋ? ಹಲ್ಲುಕಸಲಿಯೋ? ಮೊಳ್ಕಾಲ್ಲಿ ನೋಯುತ್ತದಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹಾಡು ಮುಟ್ಟಿಕಲ್ಲಿ ನೋಯುತ್ತದೆ.

ಕಂದ— [illegible] ಮೊಮೆಂಟ ಕ್ಯೂರ ತಕೊಳ್ಳು. ಒಂದೇ ಕ್ಷಣದಲ್ಲಿ [illegible] ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕುಣಿದ್ರುವಿ [illegible] ಕಿ.ರ ಘು. ಎರಡೇ ಆಣೆ.

[illegible] ಬೇಕಾದ ಡಾಕ್ಟರ [illegible] ಔಷಧವನ್ನು [illegible] ಕೊಡುವೆವು.

ವಿಳಾಸ— [illegible] ಕಂಪನಿ ಸ್ಟೋರ್ಸ, [illegible] ಕೆಮಿಸ್ಟ, [illegible] ಸ್ಟೇಶನರೋಡ ಹುಬ್ಬಳ್ಳಿ.



ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣ ಕಜ್ಜಿ, ಗಜ್ಜಿ ಯುಚಟ್ಟಿ, [illegible]ಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ [illegible] ಸುಲಭ ಇಟ್ಟಿದೆ. ಒಂದು ದಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ ಬೇರೆ.

[illegible] ಏಜಂಟರು:- ಧನಕಾದಿತ್ಯ ಮೆಡಿಕಲಸ್ಟೋರ್ಸ - ಸೆತಿನ [illegible] ತೋಟಿ ಮತ್ತು ಕಿರುಕಳದಾದಿಂದ ದೊರೆಯುವದು. | ಎಸ. ಎಫ. ಪಂಟರ ಖಡೇಬಜಾರ ಬೆಳಗಾವಿ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ „
ಲೋ. ಟಿಳಕರ ಚರಿತ್ರ	೪ „
ದೇಶಬಂಧು ದಾಸರ ಚರಿತ್ರ	३ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ [illegible] ಇವರು ಧಾರವಾಡದಲ್ಲಿರುವ ಶ. ಮ್ಮ [illegible] ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಸಿತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ | ಗುರುವಾರ | ತಾರೀಖು | ಎಪ್ರೇಲ ೧೯೨೬ | (ಸಂಚಿಕೆ ೮೩

ಸರಕಾರದಿಂದ ಪೇಟೆಂಟ ದೊರಕಿದ



ಮಲ್ಲಾರ ಕಪ್ಪಲಿ.

ತೋಟಗಾರರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಎತ್ತುತ್ತಲೇ ಅದರ ಕೆಳಭಾಗದಲ್ಲಿನ ಬಾಗಿಲು ಮುಚ್ಚಿ ನೀರು ಒಳಸೇರುವದು. ಕಪ್ಪಲಿಯು ಎಲ್ಲ ಕಡೆಯಲ್ಲಿಯೂ ಬಾಗಿಲು ಮುಚ್ಚಲ್ಪಟ್ಟಿದ್ದರಿಂದ ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಿದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೩೦ ರೂ.
ನಂ ೨	೨೫ ,,	,, ೨೫ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಜಾಹೀರಾತು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೇಬೆನ್ನೂರ ಸಿಟಿ ಪೋಲೀಸ್ ಹದ್ದಿನೊಳಗಿನ ಯಾವತ್ತು ಜನರಿಗೂ ಮತ್ತು ಯಾವತ್ತರಿಗೂ ತಿಳಿಸೋದೇನೆಂದರೆ ರಾಣೆಬೆನ್ನೂರಲ್ಲಿ ಸ್ಟೇಶನ್ ರಸ್ತೆಕ್ಕೆ ಹೊಂದಿ ಪೋಸ್ಟ ಲೋಕಲ್ ಬೋರ್ಡ ಮ್ಯುನಸಿಪಾಲಿಟಿ ಕಚೇರಿಗಳ ಮಧ್ಯದಲ್ಲಿ ಇರೋ ನನ್ನ ಮಾಲ್ಕಿ ವ ವಹಿವಾಟಿನ [illegible] ಒಂಗ್ಲೆ ಇದರ ಪೈಲ ಜಾಗಾ ಸಹಾ ಸಿಟಿಸರ್ವೆ ನಂಬರ ೧೨೬೫|೨ ಇದರ ಅಜಮಾಸ ಕಿಮ್ಮತ [illegible] ರೂಪಾಯಿ ಇದನ್ನು ತಾರೀಖು ೧೧-೪-[illegible] ಇಸ್ವಿ ದಿವಸ ಮಾರಕತ್ತವಿದ್ದೇನೆ. ಬೇಕಾದವರು ಸದರ ಮುದ್ದತಿನ ವಳಗಾಗಿ ಟೆಂಡರ ಕಳ್ಸಬೇಕು. ಸಮಕ್ಷಮ ಅಗರ ಟಪಾಲದ್ವಾರ ಮಾಹಿತಿ ತಿಳಕೊಳ್ಳಬಹುದು

ವೆಂಕಟೇಶ ರಾಮಚಂದ್ರ ಅಳಲಗೇರಿ ಸಾ|| ರಾಣೇಬೆನ್ನೂರ [illegible] ಹಾಲ ಮುಕ್ಕಾಂ ತಾಲ್ಲೂಕ ರಾಣೆಬೆನ್ನೂರ

ವಿಜಯದ ವರ್ಗಣೀ ದರ

ಪಿತ್ರಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ
[illegible]	೭—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ,

ಮ್ಯಾನೇಜರ ವಿಜಯ, ಧಾರವಾಡ

ಸೂಚನೆಯ ದರಗಳು.

ತಿಂಗಳ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] [illegible] ಜಾಹೀರಾತುಗಳಿಗೆ ಕಮ್ಮಿಯಾಗುವದು [illegible] ಜಾಹೀರಾತುಗಳನ್ನು [illegible] ಕೆಳಗಿನ ಪ್ರಸ್ಥವರಿಗೆ [illegible]

ಮ್ಯಾ [illegible] ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಸಾಬ್ಬ [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ

[illegible] ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಗಲಿಯು ಎರಡು ಲಕ್ಷದ ಮೇಲಿರುವದು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಸುವದು. ಕಾಯಂ ಮತ್ತು ಚಾಲು ಖಾತೆ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

[illegible] ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

[illegible] ರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೧ ೪-೧೯೨೬ ನೇ ಇಸ್ವಿ

ಕಲಕತ್ತೆಯ ದಂಗೆ
ಮತ್ತು
ಅದರಿಂದ ತೆಗೆದ. ಕೊಳ್ಳತಕ್ಕ ಬೋಧವು.

ಕಲಕತ್ತೆಯಲ್ಲಾದ ಹಿಂದೂ ಮುಸಲಮಾನ ದಂಗೆಯ ಸುದ್ದಿಗಳನ್ನು ಕಳೆದ ಮೂರು ದಿವಸಗಳಿಂದ ಓದುತ್ತಲೇ ಬಂದಿದ್ದೇವೆ. ಪೋಲೀಸ, ದಂಡು ಮತ್ತು ಪುರ ಪ್ರಮುಖರು ಸೇರಿ, ದಂಗೆಯನ್ನು ನಿಲ್ಲಿಸಿದ್ದರೂ, ಮಳೆ ನಿಂತರೂ ಮರದ ಹನಿಯು ನಿಲ್ಲಲಾರದೆನ್ನುವಂತೆ ಸಂದಿ ಗೊಂದಿಗಳಲ್ಲಿ ಹೊಡೆದಾಟ ಮತ್ತು ಕೊಲೆಗಳಾಗುತ್ತಿರುವವು. ಒಂದೆರಡು ದಿವಸಗಳಲ್ಲಿ ಈ ಅತ್ಯಾಚಾರದ ಸದ್ದೂ ಅಡಗುವದು. ದಂಗೆಯು ಇಷ್ಟು ಭಯಂಕರ ವಿಕೋಪಕ್ಕೆ ಹೋಗುವದೆಂದು ಯಾರಿಗೂ ಅನಿಸಿದ್ದಿಲ್ಲ. ಶಾಸ್ತ್ರಿಗಳು ಶಾಸ್ತ್ರದಿಂದ ವಾಗ್ವಾದ ಮಾಡುತ್ತಿರುವಾಗ ಶಿಷ್ಯರು ದೊಣ್ಣೆಗಳಿಂದ ಹೊಡೆದಾಡುವರೆಂಬ ತೆರನಾಗಿ ಹಿಂದೂ ಮುಸಲಮಾನ ಪುಂಡರು ಮತಾಭಿಮಾನದ ಪ್ರದರ್ಶನ ಮಾಡಿಕೊಂಡರು. ೩೦ ವರ್ಷಗಳ ಹಿಂದೆ ಮುಂಬಯಿಯಲ್ಲಿ ಹಿಂದೂ ಮುಸಲಮಾನ ದಂಗೆಯಾಗಿ, ನೂರಾರು ಜನರು ಸತ್ತರು. ಸಾವಿರಾರು ಜನರು ಘಾಯವಾದರು. ಅದೇ ಪ್ರಕಾರದ ಭಯಂಕರ ಕೊಲೆಯು ಕಲಕತ್ತೆಯಲ್ಲಾಯಿತು. ತಮಗಾರೂ ಸರಿಯಿಲ್ಲೆಂದು ಮುಂಬಯಿಯ ಮುಸಲಮಾನರು ಬಗೆದಿದ್ದರು. ಆ ಮೊದಲು ಪಾರ್ಸಿಗಳನ್ನು ಹೊಡೆದು ಚಿಪ್ಪಂಡಿ ಮಾಡಿದ್ದರು. ಅವೇ ಸಳಸಳ ಅನ್ನುತ್ತಿದ್ದ ಕೈಗಳನ್ನು ಹಿಂದೂ ಜನರ ಮೇಲೆ ಎತ್ತಿದರು. ಆದರೆ ಬಲವಿದ್ದೋಧ ಕಟ್ಟಿಕೊಂಡಂತಾಯಿತು. ಆಗಿನಿಂದ ಅಲ್ಲಿಯ ಮುಸಲಮಾನರು ಹಿಂದೂ ಜನರ ಹೆಸರು ತೆಗೆಯದಂತಾಗಿದ್ದಾರೆ. ಇದೇ ತರದ ಅನುಭವವ [illegible] ಪ್ರತ್ಯಕ್ಷ ಫಲಭೋಗ ಉಣ್ಣುವಂಥ ನಿದರ್ಶನವು ಕಲಕತ್ತೆಯ ಪುಂಡ ಬುದ್ಧಿಯ ಮುಸಲಮಾನರಿಗಾಯಿತು. ಕೋಹಾಟದ ದಂಗೆಯಲ್ಲಿ ಹಿಂದೂ ಜನರು ಭೀಕರವಾದ ಪ್ರಾಣಾಪಾಯವನ್ನು, ಅಸಂಖ್ಯವಾದ ದ್ರವ್ಯ ನಷ್ಟವನ್ನು ಹೊಂದಿದರು. ಅಂಥ ಶಿಕ್ಷಾಸನವನ್ನು ಕಲಕತ್ತೆಯಲ್ಲಿ ಮಾಡಬೇಕೆಂದು ಮುಸಲಮಾನರು ಹವಣಿಸಿದರು. ಆದರೆ ತಮ್ಮ ಬಲಿಯಲ್ಲಿ ತಾವೇ ಬಿದ್ದು, ದುಃಖಿಸುವ ಪ್ರಸಂಗ ತಂದುಕೊಂಡರು. ಕಲಕತ್ತೆಯಲ್ಲಿನಂತ ಘೋರ ಭೋಗವನ್ನು ಕಂಡು ಬೇರೆ ಕಡೆಯ ಮುಸಲಮಾನರು ಕಲಹಪ್ರಿಯರಾಗಲಾರದಂತಾಯಿತು.

ದಂಗೆ ಮಾಡಿದವರು ಗುಂಡ ಮತ್ತು ಪುಂಡರೆಂಬದನ್ನು ಮೇಲೆ ಹೇಳಿದ್ದೇವೆ. ದಂಗೆಯು ಭಯಂಕರವಾಗಿ ನಡೆದಾಗ ಕೂಡ ಸುಶಿಕ್ಷಿತ ಹಿಂದೂ ಮುಸಲಮಾನರು ಒಂದಾಗಿ, ಶಾಂತತೆಯನ್ನು ನೆಲೆಗೊಳಿಸಲು ಸತತವಾಗಿ ಅವಿರಾಮ ಪ್ರಯತ್ನಶಾಲಿಗಳಾಗಿದ್ದರು. ಇವರಿಗೆ ಉಭಯ ಕುಲಗಳ ಸ್ವಯಂಸೇವಕರೂ ನಿಷ್ಕಾಮ ಭಕ್ತಿಯಿಂದ ಸಹಾಯ ಮಾಡಿದರು. ಮುಸಲಮಾನ ಹ್ವಾಲಂಟಿಯರರು ಗುಡಿಗಳ ಮತ್ತು ಹಿಂದೂ ವ್ಹಾಲಂಟಿಯರರು ಮಸೀದೆಗಳ ಸಂರಕ್ಷಣೆಗಾಗಿ ತನುವನ್ನು ಅರ್ಪಿಸಲು ಸಿದ್ಧವಾಗಿ ನಿಂತದ್ದು ಸಾಮಾನ್ಯವಾಗಿ ಹೇಳುವಂಥ ಸಂಗತಿಯಲ್ಲ. ಲಾರ್ಡ ಮೇಯರರಾದ ಶ್ರೀ ಸೇನಗುಪ್ತ, ಇವರ ಡೆಪ್ಯುಟಿ ಸುರವರಾಧಿ (ಮುಸಲಮಾನ) ಮತ್ತು ಮೌಲಾನಾ ಅಬ್ದುಲ ಕಲಮ ಆಜಾದರು ಬೀದಿ ಬೀದಿಗೆ ಹೋಗಿ ದಂಗೆಯಾಗುವದೆಂದು ಟೆಲಿಫೋನಿನಿಂದ ಸುದ್ದಿ ಬಂದ ಸ್ಥಳಕ್ಕೆ ಹೋಗಿ, ಉಭಯ ಪಕ್ಷಗಳಿಗೂ ಶಾಂತತೆಯ ಉಪದೇಶ ಮಾಡುತ್ತಿದ್ದದ್ದು, ಹಿಂದೂ ಮುಸಲಮಾನರಲ್ಲಿಯೂ, ಶಾಂತತೆ ಮಾತ್ರವಲ್ಲ; ಐಕ್ಯದ ಬಗ್ಗೆ ನಿಜವಾಗಿ ಶುದ್ಧಾಂತಃಕರಣವಿರುತ್ತದೆಂಬದನ್ನು ತೋರಿಸುತ್ತದೆ.

ಲಾರ್ಡ ಅರ್ಯುವಿನಸಾಹೇಬರು ಈ ದೇಶದಲ್ಲಿ ಕಾಲಿಟ್ಟಾಗ ಇಂಥ ಭಯಂಕರ ದಂಗೆಯಾಯಿತು. ಹಿಂದುಸ್ಥಾನವು ಸ್ವರಾಜ್ಯಕ್ಕೆ ಅನರ್ಹವಾಗಿರುತ್ತದೆಂಬದನ್ನೇ ಈ ದಂಗೆಯು ತೋರಿಸುತ್ತದೆಂದು ಇಂಗ್ಲಂಡದ ವರ್ತಮಾನಪತ್ರಗಳು ಕೂಗೆಬ್ಬಿಸಿವೆ. ಇಲಿಯು ಹರಿಯಿತೆಂದ ಕೂಡಲೆ, ಹುಲಿಯು ಹರಿಯಿತೆಂದು ಅನ್ನುವದಕ್ಕೆ ಈ ಪತ್ರಗಳು ಯಾವಾಗಲೂ ಒಂಟಿಗಾಲಿನ ಮೇಲೆ ಸಿದ್ಧವಿರುತ್ತವೆ. ಹಿಂದುಸ್ಥಾನದ ಪ್ರಗತಿಯ ಸಮಯದಲ್ಲಿ ಹೆಬ್ಬಾವಿನಂತೆ ಅಡ್ಡ ಬೀಳುವದಕ್ಕೆ ಏನಾದರೊಂದು ಸಂದನ್ನು ಹುಡುಕಲು ಇವು ನಿರಂತರ ಕಾತರದೃಷ್ಟಿಯಿಂದಲೇ ನೋಡುತ್ತಿರುವವು. ಡಾಕ್ಟರ ರಥರ್‌ಫೋರ್ಡಸಾಹೇಬರು ಇವಕ್ಕೆ ಸಮರ್ಪಕ ಉತ್ತರ ಕೊಟ್ಟಿದ್ದಾರೆ. ಕೆನಡಾ ದೇಶದಲ್ಲಿ ಅಂತಃಕಲಹವು ವಿಕೋಪಕ್ಕೆ ಹೋಗಿತ್ತು. ಸ್ವರಾಜ್ಯ ಕೊಟ್ಟ ಕೂಡಲೆ ಆ ಕಲಹ ನಿಂದಿತು. ಅದೇ ಪ್ರಕಾರ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಿರಿ. ಅಂದರೆ ಮತ ಕಲಹವೆಲ್ಲ ಲಯವಾಗುವದೆಂದು ಈ ಸಾಹೇಬರು ಅಂದಿದ್ದಾರೆ. ಲಾರ್ಡ ಅರ್ಯುವಿನಸಾಹೇಬರು ವರ್ತಮಾನ ಪತ್ರಗಳ ಬರಹಗಳಿಗಿಂತ ಮುತ್ಸದ್ದಿಯಾಗಿರುವಂಥ ಡಾಕ್ಟರ ರಥರ್‌ಫೋರ್ಡಸಾಹೇಬರ ವಿಚಾರಕ್ಕೆ ಮಹತ್ವ ಕೊಟ್ಟು, ಸ್ವರಾಜ್ಯ ಅಥವಾ ಪ್ರಾಂತಿಕ ಸ್ವಾತಂತ್ರ್ಯ ಕೊಟ್ಟು, ಕಲಹದ ಬೀಜವನ್ನು ಹುರಿಯುವರೆಂದು ನಿರೀಕ್ಷಿಸುತ್ತೇವೆ.

ಕರ್ನಾಟಕ ನಟ ಸಮ್ರಾಟರ ಮೃತ್ಯು-

ಮೈಸೂರ ಇಲಾಖೆಯಲ್ಲಿ ಅಥವಾ ಕರ್ನಾಟಕ ಮಂಡಲದಲ್ಲಿ ಅಥವಾ ಇಡೀ ದಕ್ಷಿಣ ದೇಶದಲ್ಲಿ ನಟ ಸಮ್ರಾಟರೆಂದು ಪ್ರಸಿದ್ಧರಾಗಿದ್ದ ಶ್ರೀ ವರದಾಚಾರ್ಯರು ವೈಕುಂಠವಾಸಿಗಳಾದರೆಂಬ ಅತ್ಯಂತ ವಿಷಾದಕರವಾದ ಸುದ್ದಿಯನ್ನು ಬರೆಯುವದಕ್ಕೆ ವಿಷಾದಿಸುತ್ತೇವೆ. ಶಾಸ್ತ್ರೋಕ್ತ ಸಂಗೀತ, ಮಧುರವಾದ ಕಂಠ ಮತ್ತು ಅಭಿನಯ [illegible]ಯಿಂದ ಇವರನ್ನು ಸರಿಗಟ್ಟುವಂಥ ನಟರೇ ದಕ್ಷಿಣ ದೇಶದಲ್ಲಿರಲಿಲ್ಲೆಂದರೂ ಸಲ್ಲುವದು. ಮಹಾರಾಷ್ಟ್ರ ಪ್ರಾಂತದಲ್ಲಿ ರಾಹೂ ನಗರವಾಸಿಯ ಗಣಪತರಾಯರು, ಗಂಧರ್ವ ಕಂಪನಿಯ ಬಾಲ ಗಂಧರ್ವರು ನಾಟ್ಯಕಲಾಪ್ರವೀಣತೆಯಿಂದ ಪ್ರಸಿದ್ಧರೂ ಬಹುಮಾನಾರ್ಹರೂ ಆಗಿದ್ದಂತೆ, ಕರ್ನಾಟಕ ದೇಶದಲ್ಲಿ ಶ್ರೀ. ವರದಾಚಾರ್ಯರಾಗಿದ್ದರು. ಇವರು ಶ್ರೇಷ್ಠ ನಟರಾಗಿದ್ದರು. ದೇವರ ವರವು [illegible]. ಇವರ ಮೃತ್ಯುವಿನಿಂದ ಕರ್ನಾಟಕದ [illegible] ಹಾನಿಯಾಯಿತು. ಮ್ಯಾಟ್ರಿಕ್ಯುಲೇಶನ್ನ [illegible] ಪಾಸಾದ ಬಳಿಕ ರತ್ನಾವಳಿ ಕಂಪನಿಯನ್ನು ಕಟ್ಟಿದರು. ಇವರಿಗೆ ನಾಟಕ ಶಿರೋಮಣಿ ಎಂಬ ಬಿರುದು ಕೊಟ್ಟಿದ್ದಾರೆ. ಇವರು ಉದಾರರು; ಅನೇಕ ದಾನ ಧರ್ಮಗಳನ್ನು ಮಾಡಿ, ಲೋಕಪ್ರಿಯರಾಗಿದ್ದರು.

ಮಹಾರಾಜರ ಖಾದಿಯ ಅಭಿಮಾನ.

ಮೈಸೂರಿನ ಶ್ರೀಮನ್ಮಹಾರಾಜರು ಖಾದಿಯ ಭಕ್ತರಿದ್ದು, ದಿನಾಲು ಸ್ವತಃ ನೂಲುವರೆಂಬ ಸಂಗತಿಯನ್ನು ಈಗೊಮ್ಮೆ ಬರೆದಿರುತ್ತೇವೆ. ಮಹಾರಾಜರ ಅಂಗರಕ್ಷಕರಿಗೆ ಯಾವಾಗಲು [illegible]ದಿಲ್ಲ ಸೋಮಾರಿಯಂತೆ ಕೂಡುವದು, ಆದ್ದರಿಂದ ಮಹಾರಾಜರು ಇವರಿಗೆ ನೂಲುವ ಹೊರೆ ಹಚ್ಚಿದ್ದಾರೆ. ಇದೇ ಪ್ರಕಾರ ಅರಮನೆಯ ಆಳುಗಳಿಗೂ ನೂಲುವದನ್ನು ಕಲಿಸಬೇಕೆಂದಿದ್ದಾರೆ. ಮಹಾರಾಜರು ಸ್ನಾನ ಮಾಡಿ ದೇವರ ಪೂಜೆ ಮಾಡುವಾಗ ಉಡುವ ಮಡಿ ವಸ್ತ್ರವು ಶುದ್ಧ ಮತ್ತು ಪವಿತ್ರ ಖಾದಿಯಾಗಿರುತ್ತದೆ. ಖಾದಿಯು [illegible]ಯಿಂದ ಮಹಾರಾಜರಿಗೆ ಆದರ

ವಿರುವಂತೆ ಅಭಿಮಾನವೂ ಉಂಟು. ಪ್ರಜೆಯು ಮಹಾರಾಜರ ಅನುಕರಣ ಮಾಡುವದು ರಾಜಭಕ್ತಿಯ ಆದರ್ಶವಾಗುತ್ತದೆ.

ಒಂದು ದಿವಸದ ಜೀವದಾನ-

ಮುಂಬಯಿ ಪಟ್ಟಣಕ್ಕೆ ನಿತ್ಯ ಮಾಂಸ ಪೂರೈಸುವದಕ್ಕಾಗಿ ಬಾಂದ್ರೆಯ ಕೊಲೆ ಮನೆಯಲ್ಲಿ ಎತ್ತು, ಆಕಳ, ಕುರಿಗಳನ್ನು ಸೇರಿ ದಿನಾಲು ಸಾವಿರಕ್ಕಿಂತ ಹೆಚ್ಚು ಪಶುಗಳ ವಧ ಮಾಡುವರು. ಕಟುಕರಿಗೂ ಮ್ಯುನಿಸಿಪಾಲಿಟಿಗೂ ಬಾಡಿಗೆ ಮತ್ತು ದನಗಳ ತಪಾಸಣಿಯ ವಿಷಯವಾಗಿ ವ್ಯಾಜ್ಯವಿದ್ದದ್ದರಿಂದ ಕಟುಕರು ಸಂಪು ಮಾಡಿ ಕೊಲೆ ನಿಲ್ಲಿಸಿದರು. ಅದೇ ಸಾಯಂಕಾಲದೊಳಗಾಗಿ ಮ್ಯುನಿಸಿಪಾಲಿಟಿಯವರು ಇವರ ಕೂಡ ರಾಜೀ ಮಾಡಿಕೊಂಡರು. ವಿರೋಧ ಭಕ್ತಿಯಂತೆ ಆಟಕಾಗಿ ಒಂದು ದಿವಸದ ಮಟ್ಟಿಗೆ ಸಾವಿರಾರು ಪ್ರಾಣಿಗಳಿಗೆ ಜೀವದಾನ ಕೊಟ್ಟಂತಾಯಿತು.

ಹುಲಿಯು ಸಾಹೇಬರನ್ನು ಕೊಂದಿತು-

ಇಂದೂರ ರಾಜ್ಯಕ್ಕೆ ಸೇರಿದ ಮುಹುವಿನಲ್ಲಿರುವ ಇಂಗ್ಲಿಷ ದಂಡಿನಲ್ಲಿ ಮೇಜರರಾಗಿದ್ದ ಟೀಲರೆಂಬವರು ಹೆಂಡತಿ ಮತ್ತು ಕೆಲ ಗೃಹಸ್ಥರನ್ನು ಕರಕೊಂಡು ಬಾತಗೋಳಿಯ ಬೇಟೆಗಾಗಿ ಮಂಚಾ ಸರೋವರಕ್ಕೆ ಹೋದರು. ಸಾಹೇಬರು ಕೆಲವೊತ್ತು ಬಾತಗೋಳಿಗಳನ್ನು ಹೊಡೆದ ಬಳಿಕ, ಅಡವಿಯಲ್ಲಿ ಹೊಕ್ಕರು. ಸಾಹೇಬರ ಮರಣವೇ ತುಂಬಿ ಬಂದಿತ್ತು. ಅಲ್ಲಿ ಒಂದು ಹುಲಿಯು ಇವರ ಮೇಲೆ ಹಾರಿ, ಮೈ ತುಂಬ ಘಾಯ ಮಾಡಿ, ಕೊಂದಿತು. ಪ್ರೇತವನ್ನು ಮುಹೂಕ್ಕೆ ತಂದು, ದಂಡಿನ ಮರ್ಯಾದೆಯ ಪ್ರಕಾರ ಅದಕ್ಕೆ ಮಣ್ಣು ಕೊಟ್ಟರು.

ಡೆಪ್ಯುಟಿ ಕಲೆಕ್ಟರರಿಗೆ ಶಿಕ್ಷೆ-

ಸೂರತ ಜಿಲ್ಹೆಯಲ್ಲಿ ಕಾವಮಾ ಎಂಬ ಹೆಸರಿನ ಪಾರ್ಸಿ ಗೃಹಸ್ಥರು ಡೆಪ್ಯುಟಿ ಕಲೆಕ್ಟರರಾಗಿದ್ದರು. ಇವರು ಲಂಚಗುಳಿಗಳು. ಮಿ. ದುರ್ಲಭಭಾಯಿ ಎಂಬ ಮಾಮಲೇದಾರರೇ ಗಟ್ಟಿಯಾಗಿ ನಿಂತು, ಇವರ ಲಂಚದ ಗೊಂದಲವನ್ನು ಬೈಲಿಗೆ ತಂದರು. ವಿಚಾರಣೆಗಾಗಿ ಮಿ. ವಿಲಿಯಂಸಾಹೇಬರನ್ನು ಸ್ಪೇಶಲ ಮ್ಯಾಜಿಸ್ಟ್ರೇಟರಾಗಿ ನೇಮಿಸಿದರು. ಕಾವಮಾ ಸಾಹೇಬರ ಮೇಲೆ ವಿಚಾರಾಂತ್ಯದಲ್ಲಿ ಆರೋಪವು ಸಿದ್ಧವಾಗುತ್ತದೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯ ಪಟ್ಟು, ೧೪ ತಿಂಗಳ ಸಾದಾ ಕೈದು ಮತ್ತು ಎರಡು ಸಾವಿರ ರೂಪಾಯಿ ದಂಡ ವಿಧಿಸಿದರು.

ಫ್ರಾನ್ಸದಲ್ಲಿ ಅರಸೊತ್ತಿಗೆಯ ಕಿಡಿಯು-

ಫ್ರಾನ್ಸ ದೇಶವು ಪ್ರಜಾಸತ್ತಾತ್ಮಕವಾಗಿ ೪೦ ವರ್ಷವಾಯಿತು. ಡಕ ಡಿ. ಗುಯಿಜನೆಂಬ ಸಾಹೇಬನು ತಾನು ಫ್ರಾನ್ಸ ದೇಶದ ಅರಸೊತ್ತಿಗೆಯ ಬಾಧ್ಯಸ್ಥನೆಂದೂ ದೊರೆತನದ ಜವಾಬದಾರಿಯನ್ನೂ ಕರ್ತವ್ಯಗಳನ್ನೂ ತಾನು ಮಾಡಲು ಸಿದ್ಧನಿರುವಂತೆಯೂ ಜಾಹೀರ ಮಾಡಿ ರಾಜಪಕ್ಷೀಯರು ತನಗೆ ನೆರವಾಗಿ, ತನ್ನನ್ನು ಪಟ್ಟಕ್ಕೆ ಕೂಡಿಸಬೇಕೆಂದು ಸೂಚಿಸಿದ್ದಾನೆ.

ಮೋಟಾರಗಳ ಪ್ರಸಾರ-

ಇಂಗ್ಲಂಡದಲ್ಲಿ ಪ್ರತಿ ವರ್ಷ ಬಾಡಿಗೆಯ ಮೋಟಾರಗಳ ಹೊರ್ತು ಲಕ್ಷ ಮೋಟಾರಗಳು ಹೆಚ್ಚುತ್ತಿರುವವು. ಜಗತ್ತಿನಲ್ಲಿ ಮೋಟಾರಿನಲ್ಲಿ ಈ ದೇಶದ ಸಂಖ್ಯೆಯು ಮೂರನೆಯದಾಗಿದೆ. ಮೊದಲಿನದು ಅಮೇರಿಕೆಯ ಯುನಾಯಿಟೆಡ ಸ್ಟೇಟ್ಸವು; ಎರಡನೆಯದು ಅದರ ನೆರೆಯದಾದ ಕಾನಡಾ ದೇಶವು.

ಪೇಕಿಂಗದ ಹತ್ತರ ಕಾಳಗ ಪ್ರಾರಂಭ.

—೦—

ಕಳೆದ ವಾರದಲ್ಲಿ ಪೇಕಿಂಗದ ನೆರೆಯಲ್ಲಿ ಉಭಯ ಪಕ್ಷಗಳ ನಡುವೆ ವಿಮಾನಗಳ ಯುದ್ಧ ಪ್ರಾರಂಭವಾಯಿತು. ಇಬ್ಬರಲ್ಲಿಯೂ ನಾಲ್ಕರಕ್ಕಿಂತ ಹೆಚ್ಚು ವಿಮಾನಗಳಿರದ್ದರಿಂದ, ಆಕಾಶದ ಆಹವದಲ್ಲಿ ಯಾರಿಗೂ ಯಶ ದೊರೆಯಲಿಲ್ಲ. ಈ ಹೋರಾಟದ ನಂತರ ಚಾಂಗ ಸೋಲಿನನ ಸೈನಿಕರು ರಾಜಧಾನಿಯ ಮೇಲೆ ಹಲ್ಲೆಗೆ ಪ್ರಾರಂಭಮಾಡಿದ್ದಾರೆ. ಕಣವು ೩೦ ಮೈಲುಗಳ ಮೇಲುಂಟು. ಉಭಯ ಪಕ್ಷದವರು ಮಹಾಂಕಾಳಿಯಂಥ ತೋಪುಗಳಿಂದ ಹೋರಾಡುತ್ತಿದ್ದಾರೆ.

ಅಹಮದಾಬಾದಿನ ಅಮೇಚ್ಯೂರ ನಾಟಕ ಕಂಪನಿಯವರು ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿಯನ್ನು ಬಿಟ್ಟು ಬಂದದ್ದನ್ನು ನಾಟಕ ಮಾಡಿ ತೋರಿಸಿದರು.

ಮಹಾ ಯುದ್ಧದಲ್ಲಿ ನಿಜಾಮಸಾಹೇಬರು ಇಂಗ್ಲಿಷ ಸರಕಾರಕ್ಕೆ ಎರಡು ಕೋಟಿಯನ್ನು ಉಚಿತವಾಗಿ ಕೊಟ್ಟರು. ಇದೇ ದ್ರವ್ಯದಿಂದ ಒಂದು ಜಿಲ್ಹೆಯನ್ನು ಕೊಳ್ಳಬಹುದಾಗಿತ್ತು. ಅಥವಾ ಜಿಲ್ಹೆಯ ಉತ್ಪನ್ನದಷ್ಟು ಬಡ್ಡಿ ಬರುತ್ತದೆ. ಇದಕ್ಕೆ ದೊರೆತ ಪ್ರತಿಫಲವು ಎಗ್ಜಾಲ್ಟೆಡ ಹಾಯನೆಸವೆಂಬ ಪದವಿಯು!!!

ಸಿಡ್ಲು ಬ[illegible] ಎಣ್ಣೆಯ ಉಗ್ರಾಣ ಸುಟ್ಟಿತು.

೩೫ ಲಕ್ಷ ಡಬ್ಬಿಗಳು ಸುಡುತ್ತವೆ.

—೦—

ಆರು ಕೋಟಿಯ ಹಾನಿಯು.

ಅಮೇರಿಕೆಯಲ್ಲಿ ಕಾಲಿಫೋರ್ನಿಯಾ ಪ್ರಾಂತಕ್ಕೆ ಸೇರಿದ ಸಾನ ಲೂಯಿ ಅಬಿಸ್ಪೋ ಎಂಬಲ್ಲಿ ಯುನಿಯನ ಆಯಿಲ ಕಂಪನಿಯ ಕಲ್ಲೆಣ್ಣೆಯ ವಖಾರಕ್ಕೆ ಸಿಡ್ಲು ಬಡೆದು, ಅದ್ಭುತವಾದ ಉರಿಯು ಎದ್ದಿತು. ಅಲ್ಲಿ ೩೫ ಲಕ್ಷ ಎಣ್ಣೆಯ ಡಬ್ಬಿಗಳಿದ್ದವು. ಇವೆಲ್ಲಕ್ಕೂ ಉರಿಯು ತಾಕಿಕೊಂಡು ಅತ್ಯದ್ಭುತವಾದ ಉರಿಯು ಎದ್ದು ಗಗನ ಮಂಡಲವನ್ನು ವ್ಯಾಪಿಸಿತು. ಇದನ್ನು ಆರಿಸುವದು ಶಕ್ಯವೇ ಇಲ್ಲ. ಈ ಅನಾಹುತದಿಂದ ಕಂಪನಿಗೆ ಆರು ಕೋಟಿಯ ಹಾನಿಯಾಗಿರುತ್ತದೆ.

ಬ್ಯಾರಿಸ್ಟರ ಸೇನಗುಪ್ತರು ಹಿಂದೂ ಮುಸಲಮಾನರದೊಂದು ಆತ್ಮರಕ್ಷಣೆಯ ಕಮೀಟಿ ನೇಮಿಸಿದ್ದಾರೆ. ಇದರಲ್ಲಿ ಕೆಲ ಯುರೋಪಿಯನ್ನರೂ ಸೇರಿದ್ದಾರೆ.

ಧಾರವಾಡ —

ಮಿ. ಸುಬ್ಬಾಜಿ ಗ.ತ.ರಾವ ಪಾಟೀಲ ಇವರು ವಿಜಾಪೂರದ ಡಿ. ಪೋ. ಸುಪರಿಂಟೆಂಡೆಂಟರಾಗಿ ವರ್ಗ ಮಾಡಲ್ಪಟ್ಟಿದ್ದಾರೆ.

ಮೆಸರ್ಸ್ ಗುತ್ತಲ ಮತ್ತು ಕಟ್ಟೂರ ಇವರಿಗೆ ಹಾಯಕೋರ್ಟಿನವರು ವಕೀಲಿ ಸನದು ಕೊಟ್ಟು ಮಿ. ವೆಂಕಟರಾವ ಮುದವೇಡಕರರಿಗೆ ೧೯೨೭ ರಿಂದ ವಕೀಲಿ ಪ್ರಾರಂಭ ಮಾಡಬೇಕೆಂದು ಹುಕುಮು ಮಾಡಿದ್ದಾರೆ.

ಯಮನೂರ ಜಾತ್ರೆಯಲ್ಲಿ ೩೪೦೦೦ ಪಶುಗಳ ವಧೆಯಾಗುತ್ತಿತ್ತು. ಕರ್ನಾಟಕ ಜೀವರಕ್ಷಾ ಮಹಾ ಮಂಡಳದ ಪರಿಶ್ರಮದಿಂದ ಈ ಸಂಖ್ಯೆಯು ೧೮, ೧೩ ಮತ್ತು ೯ ಸಾವಿರಕ್ಕೆ ಇಳಿಯುತ್ತಾ, ಈ ವರ್ಷವಂತೂ ಏಳು ಸಾವಿರಕ್ಕೆ ಬಂದಿದೆ. ಪಶುವಧವಿಲ್ಲದ ಜಾತ್ರೆಯ ಸುದಿನವನ್ನು ಕಾಣಬಹುದೆಂದು ಮಂಡಳದವರು ನಂಬಿದ್ದಾರೆ.

ವ್ಯಾಪಾರವು ಬಹಳ ಮಂದಿಯಾಗಿರುವದರಿಂದ ಮಾರ್ಕೆಟಿನ ಅಂಗಡಿಗಳ ಬಾಡಿಗೆಯನ್ನು ರೂಪಾಯಿಗೆ ನಾಲ್ಕಾಣೆಯಂತೆ ಕಡಿಮೆ ಮಾಡಬೇಕೆಂದು ಇಲ್ಲಿಯ ಮಾರ್ಕೆಟಿನ ವ್ಯಾಪಾರಸ್ಥರು ಮ್ಯುನಿಸಿಪಾಲಿಟಿಗೆ ಅರ್ಜಿ ಬರಕೊಂಡಿದ್ದಾರೆ.

ಕೌನ್ಸಿಲ ಚುನಾವಣಿ

ಚುನಾವಣಿಯ ಸಂಪೂರ್ಣ ವಿವೇಚನೆಯು.

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನೂ, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನು ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ ಹೋರ್ಟ ಚುನಾವಣಿಯನ್ನು ಕುರಿತು ವಿವಿಧ ಲೇಖಗಳೂ, ಕಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ತಕ್ಕಿವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಸಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣಿ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಹುಲ್ಮೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೊಡುವದೆಂಬುದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬರಹ ಬಲ್ಲವರು ವಿಜಯವನ್ನು ಸ್ವತಃ ಓದಬೇಕು. ಬರದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿತವಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಚಂದಾ ಪ್ರಮಾಣ- ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುಕೂಲಿಯೋ! ಮೈಯಲ್ಲಿ ನೆಣಯುತ್ತದೆಯೋ! ಆಗಿರುವದಾದರೂ ಏನು!

ಅಪ್ಪನು— ಕಂದಾ— ಹೌದು ಮೈಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಪೆಡಿಮೆಂಟ ಕ್ಯೂಯರ ತಕೊಳ್ಳಿರಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ತಿರುಗುವಿ, ತೀರ ಹುಸು. ಎರಡೇ ಆಣೆ.

ನಮ್ಮಲ್ಲಿ ದೇಶಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುತ್ತೇವೆ.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ್ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಗಜ್ಜಿ, ಗರ್ಮಿಯ ಬಿಕ್ಕೆ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ.

ಹುಬ್ಬಳ್ಳಿಯ ಏಜಂಟರು— ದಿ ಕನಕಾದಿತ್ಯ ಮೆಡಿಕಲಸ್ಟೋರ್ಸ- ಸ್ಟೇಶನರೋಡ ಹುಬ್ಬಳ್ಳಿ. ಹೋಲ ಮತ್ತು ಕಿರುಕೋಳದರಿಂದ ದೊರೆಯುವದು. | ಎನ. ಎಫ. ಪೆಂಟರ- ಖಡೇಬಜಾರ ಬೆಳಗಾವಿ

ವಿಜಯದ ವರ್ಗಣೀ ದರ

—೦—

ನಿತ್ಯಪತ್ರಕ್ಕೆ	
೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

—೦—

ತಿಂಗಳು ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ... ಆಣೆ ... ಪದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ... ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ... ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡುವದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಟ್ಯಾ. ಓ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಸಿಕ್ಸ್ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಸೋಮವಾರ ತಾರೀಖು ೧೬ನೇ ಎಪ್ರೀಲ ೧೯೩೭ (ಸಂಚಿಕೆ ೪೪

ಸರಕಾರದಿಂದ ಪೇಟಂಟ ದೊರೆಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಏಗ್ಗಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೫ ,,	,,	೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಜಾಹೀರಾತು.

ಕೆಳಗೆ ಸಹಿ ಮಾಡಿದವರ ಕಡೆಯಿಂದ ರಾಣೇಬೆನ್ನೂರ ಸಿಟಿಸರ್ವೆ ಹದ್ದಿನೊಳಗಿನ ಯಾವತ್ತು ಜನರಿಗೂ ಮತ್ತು ಯಾವತ್ತರಿಗೂ ತಿಳಿಸೋದೇನಂದರೆ ರಾಣೆಬೆನ್ನೂರಲ್ಲಿ ಸ್ಟೇಶನ್ ರಸ್ತೆಕ್ಕೆ ಹೊಂದಿ ಪೋಸ್ಟ ಲೋಕಲ್‌ಬೋರ್ಡ ಮ್ಯುನಸಿಪಾಲಿಟಿ ಕಚೇರಿಗಳ ಮಧ್ಯದಲ್ಲಿ ಇರೋ ನನ್ನ ಮಾಲ್ಕಿ ವ ವಹಿವಾಟಿಯುಳ್ಳ ಬಂಗ್ಲೆ ಇದರ ಬೈಲ ಜಾಗಾ ಸಹಾ ಸಿಟಿಸರ್ವೆ ನಂಬರ ೧೮೬೫|೨ ಇದರ ಅಜಮಾಸ ಕಿಮ್ಮತ ೮೦೦೦ ರೂಪಾಯಿ ಇದನ್ನು ತಾರೀಖು ೧೧-೪-೧೯೩೭ ಇಸ್ವಿ ದಿವಸ ಮಾರತಕ್ಕವನಿದ್ದೇನೆ ಬೇಕಾದವರು ಸದರ ಮುದ್ದತಿನ ವಳಗಾಗಿ ಟೆಂಡರ ಕಳಸಬೇಕು. ಸಮಕ್ಷಮಾ ಅಗರ ಟಪಾಲದ್ವಾರ ಮಾಹಿತಿ ತಿಳಕೊಳ್ಳಬಹುದು.

ವೆಂಕಟೇಶ ರಾಮಚಂದ್ರ ಅಳಲಗೇರಿ ಸಾ॥ ರಾಣೇಬೆನ್ನೂರ ಹಾಲವಸ್ತಿ ಜೋಯಿಸರ ಹರಳಹಳ್ಳಿ ತಾಲ್ಲೂಕ ರಾಣೆಬೆನ್ನೂರ

ದಿ. ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಬ್ಯಾಂಕ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾಲ ವಸ್ತ್ರ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ [illegible] ೧೦-೩೦. ಸಾಯಂಕಾಲ ೫ ರಿಂದ [illegible]

[illegible]
ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಎಂಟರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು [illegible] ಡುವದು. ಕಾಯಿಮ ಮತ್ತು ಥೇರಿ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

[illegible] ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ [illegible] ಶಾಸ್ತ್ರಿ,
ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೨ ೪-೩೭ ನೇ ಇಸ್ವಿ

ಸಕ್ತಿಯ ಶಿಕ್ಷಣ ಮತ್ತು ಲೋಕಲಫಂಡು.

ಅಸಹಕಾರದ ಚಳವಳಿಯು ದುಮುದುಮಿಸುತ್ತಿರುವಾಗ ಈ ಪ್ರಾಂತದ ಉಪಾಧ್ಯಾಯರುಗಳು ಊರೂರಿಗೆ ಸಭೆ ಮಾಡಿಸಿ, ತಮಗೆ ಸಕ್ತಿಯ ಶಿಕ್ಷಣ ಬೇಕೆಂದೂ, ಅದನ್ನು ಅಮಲಿನಲ್ಲಿ ತರುವದಕ್ಕೆ ನಿಷೇಧ ಮಾಡುತ್ತಿದ್ದ ಆಗಿನ ಮಂತ್ರಿಯಾದ ರಾವ ಬ[illegible] ರನ್ನು ಸರಕಾರವು [illegible] ಠರಾವುಗಳನ್ನು ಪಾಸ ಮಾಡಿಸುತ್ತಿದ್ದರು. ಆಗೊಂದು ಸುಟ್ಟರಗಾಳಿಯಂತೆ ಎದ್ದ ಚಳವಳಿಯು ಪೂರಾ ಆರಿಹೋಯಿತು. ಸಕ್ತಿಯ ಶಿಕ್ಷಣ, ದಿವಾನ ಬಹಾದ್ದೂರ ಕಾಮತರ ಕಾಲುವೆ, ಅವರ ಆಡಳಿತೆಯು ಕಿಡಿಗೇಡಿತನವೆಂಬುದು ಆಮೇಲೆ ತಿಳಿದಂತಾಗಿದೆ.

ಸಕ್ತಿಯ ಶಿಕ್ಷಣದ ಠರಾವು ಪಾಸಾದರೂ ಅದು ಅಮಲಿನಲ್ಲಿ ಬರುವದು ಬಹು ಕಷ್ಟವೆಂದು [illegible] ದೂಷಿಸಿದ ಮುಖಂಡರು ಯಾರಿಗೂ ಹೋಲಿಸಲಿಲ್ಲ. ಸರಕಾರದವರು ಶಿಕ್ಷಣದ ಎಲ್ಲ ಜವಾಬದಾರಿಯನ್ನು ತಮ್ಮ ಮೇಲೆ ಹಾಕಿಕೊಳ್ಳದೆ, ಅದರ ಬಹು ದೊಡ್ಡ ಜವಾಬದಾರಿಯನ್ನು ಡಿಸ್ಟ್ರಿಕ್ಟ ಲೋಕಲ ಬೋರ್ಡುಗಳ ಮೇಲೆ ಹಾಕಿದ್ದಾರೆ. ಸಿಕ್ಷಣದಲ್ಲಿ ಯಾವನೊಬ್ಬನಿಗೆ ದಂಡ ಮಾಡುವದಿದ್ದರೆ ಬಹು ಮಾನಸ ಮಂಥನದಿಂದ ನಿಗದಿಗೊಳಿಸುವರು. ಈ ಅನೀತಿಯು ಪೂರ್ಣ ಪ್ರಾಣಿಯಾಗಿದ್ದು, ಇದರಿಂದ ದುಡಿಸಿಕೊಳ್ಳುವಂತಿರುವದಿಲ್ಲ. ಹೊಟ್ಟೆಗೆ ಹಾಕುವದು ಮಾತ್ರ ತಪ್ಪಿದ್ದಲ್ಲ. ಅದೇ ಪ್ರಕಾರ ಗಾವಠಾಣದವರು ಸರಕಾರದವರು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಸಕ್ತಿಯ ಶಿಕ್ಷಣದ ಅಧಿಕಾರ ಕೊಟ್ಟರು. ಮೇಲೆ ವೆಚ್ಚದ ಭಾರ ಹೇರಿದರು. ಈ ಭಾರವನ್ನು ಹೇಗೆ ನೀಗಬೇಕೆಂಬುದು ಬಹಳೇ ಕಠಿಣ ಪ್ರಶ್ನವಾಗಿರುತ್ತದೆ.

[illegible] ಸಾಕಾರವು ತಂದೆ ತಾಯಿಯು, ಪ್ರಜೆಯು ಮಕ್ಕಳು. ಮಕ್ಕಳ ಶಿಕ್ಷಣಕ್ಕಾಗಿ ಶ್ರೀಮಂತ ತಂದೆಯು ಖಂಡೂ ಮಾಫೀ/ಕಟ್ಟುಸುವದಿಲ್ಲ. ಪಾರ ಹಚ್ಚಿಕೊಡುವದಿಲ್ಲ. ಮು ಧೂ ಕರಿಗೆ ಕಳಿಸುವದಿಲ್ಲ. ಇದೆಲ್ಲ ಬಡವನ ಕೆಲಸವು. ಶ್ರೀಮಂತವಾದ ಸರಕಾರವು ದರಿದ್ರನಂತೆ ಲೋಕಲಬೋರ್ಡಿಗೆ ಶಿಕ್ಷಣದ ವ್ಯವಸ್ಥೆ ಮಾಡಿಕೊಳ್ಳಿರೆಂದು ಹೇಳುವದು ತೀರ ಅನ್ಯಾಯವಾಗುತ್ತದೆ. ಸರಕಾರವು ಏನೊ ಒಂದು ರೀತಿಯಿಂದ ದಾರೀ ತೋರಿಸಿದ ಮಾತ್ರಕ್ಕೆ ಅದರ ಭೃತ್ಯರು ಮಿಯ್ಯಾ ಬೋಲೆ ದಾಡೀ ಹಾಲೆ ಎನ್ನುವಂತೆ ಆಚರಿಸುವದು ಸೋಜಿಗವು.

ಲೋಕಲಫಂಡನ್ನು ಹೆಚ್ಚಿಸಬೇಕೆ? ಬೇರೆ ರೀತಿಯಿಂದ ಹೆಚ್ಚು ಬಾಯಿಗೂಡಿಸಬೇಕೆ? ಎಂಬದರ ವಿಚಾರವು ಡಿಸ್ಟ್ರಿಕ್ಟ ಲೋಕಲಬೋರ್ಡಿನದು. ಕಳೆದೊಂದು ವರ್ಷದಿಂದ ಇದರ ಭವತಿ, ನಭವತಿಯು ನಡೆದದೆ. ಆದರೆ ಹಗ್ಗ ಹರಿಯಲಿಲ್ಲ; ಕೋಲು ಮುರಿಯಲಿಲ್ಲ ಎಂಬಂತೆ ಇವತ್ತಿನ ತನಕ ಅದರ ಪರಿಸ್ಥಿತಿಯಾಗಿದೆ. ಲೋಕಲಬೋರ್ಡಿನವರೇ ಇದರ ನಿರ್ಣಯ ಮಾಡಿಕೊಳ್ಳತಕ್ಕದ್ದು. ಆದರೆ ಸರಕಾರೀ ಅಮಲದಾರರು ಇದರಲ್ಲಿ ಬಾಯಿ ಹಾಕುವ ಅಗತ್ಯವುಂಟೆಂದು ನಮಗಂತೂ ತೋರುವದಿಲ್ಲ.

ಪ್ರತಿಯೊಂದು ಜಿಲ್ಲೆಯಲ್ಲಿ ಯುರೋಪಿಯನ್ನ ಮತ್ತು ಏತದ್ದೇಶೀಯ ಪ್ರಾಂತಾಧಿಕಾರಿಗಳಿರುತ್ತಾರೆ. ಯುರೋಪಿಯನ್ನ ಅಧಿಕಾರಿಗಳು ಇದರಲ್ಲಿ ಕೈ ಹಾಕುವದಿಲ್ಲ. ಏಕೆಂದರೆ ಈ ವಿಷಯವು ಅವರಿಗೆ ಸಂಬಂಧಿಸಿರುವದಿಲ್ಲ. ಏತದ್ದೇಶೀಯರು ಮಾತ್ರ ತಮ್ಮ ಮುಟ್ಟಿಗೆ ದೊಡ್ಡಸ್ತನ ಪಡಕೊಳ್ಳುವದಕ್ಕಾಗಿ ಜನ ಮರುಳು ಮಾಡುವಂತೆ ಅಧಿಕಾರದ ದುರುಪಯೋಗ ಮಾಡುತ್ತಿರುವದು ಯುಕ್ತವೂ ಸಮಂಜಸವೂ ಅನಿಸುವದಿಲ್ಲ. ಮನಬಂದ ಕುಲಕರ್ಣಿಯ ಹಕ್ಕನ್ನು, ನೇತಸನದಿಗಳ ಹಕ್ಕನ್ನು ಕಸಕೊಳ್ಳುವಾಗ ಸರಕಾರದವರು ಸ್ವದೇಶೀ ಅಮಲದಾರರನ್ನೇ ಮುಂದೆ ಮಾಡಿದ್ದರು. ಅದೇ ಪ್ರಕಾರ ಈಗಾದರೂ ~~[illegible]~~ ಕಾರ್ಯ ಸಾಧಿಸಿಕೊಳ್ಳುವರು.

ಮುಖ್ಯವಾಗಿ ರೈತರು ತಮ್ಮ ಹಿತವನ್ನು ತಾವೇ ನೋಡಿಕೊಳ್ಳತಕ್ಕದ್ದು. ಅಧಿಕಾರಿಗಳ ಮಾತಿನ ಮೋಡಿಗೆ ಬೀಳಬಾರದು. ಲೋಕಲಫಂಡನ್ನು ಹೆಚ್ಚಿಸಬೇಕೆಂಬ ಠರಾವನ್ನು ಪಾಸ ಮಾಡತಕ್ಕಂಥ ಯೋಗ್ಯ ಮತ್ತು ಜವಾಬದಾರ ಅಧಿಕಾರಿಗಳು ರೈತರ ಪ್ರತಿನಿಧಿಗಳಂತೆ ತಾಲೂಕ ಮತ್ತು ಡಿಸ್ಟ್ರಿಕ್ಟ ಲೋಕಲಬೋರ್ಡಿನ ಮೆಂಬರರಾಗಿದ್ದಾರೆ. ಇವರು ಊರೂರಿಗೆ ಸಭೆ ಮಾಡಿ, ಲೋಕಮತದ ನಿಜಾಂಶವನ್ನು ತಿಳಕೊಳ್ಳಬಹುದು. ಅಥವಾ ಇತರ ಉಪಾಯಗಳು ತೀರಿದ ಬಳಿಕ ಲೋಕಲಫಂಡನ್ನು ಹೆಚ್ಚಿಸುವ ಠರಾವು ಮಾಡಲುಬಹುದು. ಇವರ ಕಾಂಗ್ರೆಸ್ ಅನ್ನರು ವಿಶೇಷವಾಗಿ ಸರಕಾರೀ ಅಮಲದಾರರು ಬಾಯಿ ಪ್ರಸಾದವು ಉಪಯೋಗ ಮಾಡತಕ್ಕದ್ದೇ ಇರುವದಿಲ್ಲ.

ಸರಕಾರದವರು ಲೋಕಲಬೋರ್ಡುಗಳಿಗೆ ಸ್ವಾತಂತ್ರ್ಯ ಮಾಡಿದ್ದಾರೆ. ನಾಮನಿರ್ದೇಶನದಿಂದ ಕೆಲವು ಸ್ಥಳಗಳಲ್ಲಿ ಮಾತ್ರ ಒಬ್ಬಿಬ್ಬರನ್ನು ನೇಮಿಸುವರು. ಲೋಕಲಬೋರ್ಡುಗಳು ಅನ್ನದ ಬೋಗಸೆಯಿಂದ ನೀರು ಕುಡಿಯುವಂತೆ ಪರಿಗಣಿಸಬೇಕೆಂಬುದೇ ಮುಖ್ಯ ವಿಚಾರವು. ಈ ವಿಚಾರದಲ್ಲಿ ಸರಕಾರೀ ಅಮಲದಾರರು ನೇಮಿಸುವದಕ್ಕೂ, ಅವರ ಮಾತು ಕೇಳಿಕೊಳ್ಳುವದಕ್ಕೂ, ಬೋರ್ಡಿನವರು ತಮ್ಮ ಸ್ವಾತಂತ್ರ್ಯ ಕಳಕೊಂಡಂತಾಗುತ್ತದೆಂಬುದನ್ನು ಮರೆಯಲಾಗದು. ಯಾವನೊಬ್ಬ ಅಮಲದಾರನು ಹೀಗೆ ಹಸ್ತಕ್ಷೇಪ ಮಾಡಬಹುದಾದರೆ ಅವನಿಗೆ ನಿಮ್ಮ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳತಕ್ಕದ್ದು.

ಧಯಂಕರ ಅನಾಚಾರ ಮತ್ತು ಅತ್ಯಾಚಾರ.

— ೦ —

ಗುರಖಾ ಪರ ಬಂದಿವಾಸ, ಸ್ತ್ರೀಯರ ಮಾನಭಂಗ.

— ೦ —

ಆಸಾಮು ಪ್ರಾಂತಕ್ಕೆ ಸೇರಿದ ದಮಂಚಿಸಾ, ಬರ್ದೋಲಾ ಮತ್ತು ಗೆ [illegible] ಎಂಬ ಮೂರು ಗ್ರಾಮಗಳಲ್ಲಿ ಬಂಗಾಲಿ ಕೂಲಿಕಾರರು ವಾಸವಾಗಿದ್ದಾರೆ. ಇವರು ವ್ಯವಸಾಯದ ಬೆಳೆಯಿಂದ ಜೀವಿಸುವರು. ಇವರಿಗೂ ಅಲ್ಲಿಯ ನೇಪಾಳಿಗರಿಗೂ ಆದ ಆಚಾಮರೆಂಬವರಿಗೂ ನದಿಯಲ್ಲಿ ಮೀನುಗಳನ್ನು ಹಿಡಿಯುವ ವಿಷಯವಾಗಿ ಕಲಹ ಬಂದು, ಸಾಕ್ಷಾತ ಹೊಡೆದಾಟವೂ ಆಯಿತು. ಕೂಲಿಕಾರರು ಹತ್ತರವೇ ಇದ್ದ ಪೋಲೀಸ ಸ್ಟೇಶನ್ನಿಗೆ ಫಿರ್ಯಾದಿ ಕೊಟ್ಟರು. ಆ ದಿವಸ ಮೂರು ಗುರಖಾ ಸಿಪಾಯರೂ ಬಂದು, ಈ ಮೂರೂ ಗ್ರಾಮಗಳಲ್ಲಿದ್ದ ಪ್ರತಿಯೊಬ್ಬ ಪುರುಷ ಬಂಗಾಲಿಯನ್ನು ಬಂದೋಬಸ್ತ ಮಾಡಿ, ಪೋಲೀಸ ಸ್ಟೇಶನಕ್ಕೆ ಒಯ್ದರು. ಸಾಯಂಕಾಲವಾದ ಬಳಿಕ ಪೋಲೀಸರೂ ಗುರಖಾ ಸಿಪಾಯರೂ ತಮ್ಮೊಳಗೆ ಕೆಲವರನ್ನು ಕೈದಿಗಳ ಕಾವಲಿಗೆ ಇಟ್ಟು, ಉಳಿದವರು ಆ ಗ್ರಾಮಗಳಿಗೆ ಹೊಕ್ಕರು. ಪ್ರತಿಯೊಂದು ಮನೆಯ ಬಾಗಿಲು ತೆರೆ ಅಥವಾ ಬಲಾತ್ಕಾರದಿಂದ ಒಳಗೆ ಹೊಕ್ಕು ಸ್ತ್ರೀಯರ ಪಾತಿವ್ರತ್ಯವನ್ನು ಭ್ರಷ್ಟ ಮಾಡಿದರು. ಆಗ ಇವರು ಮಾಡಿದ ಅನಾಚಾರ ಮತ್ತು ಅತ್ಯಾಚಾರವು ಮೈ ಮೇಲೆ ಮುಳ್ಳು ತರುವಂತಿದೆ. ಅನಾಚಾರವು ಮಾನವನೆ ಪೂರ್ಣ ಮಾಡಿಕೊಳ್ಳುವ ಮದಾಂಧ ಮಾನವನೆ ... ಮಾಡಿದ ರೀತಿಯಲ್ಲಿ ಇವರು ಸ್ತ್ರೀಯರನ್ನು ಬಲಾತ್ಕಾರ ಮಾಡಿದರು. ಅತ್ತೆ ಸೊಸೆ, ತಾಯಿ ಮಗಳು ಇವ್ವರೂ ಒಬ್ಬರೊಬ್ಬರನ್ನು ನೋಡುವಂತೆ ಅವರ ಕಣ್ಣ ಮುಂದೆ ಪಶುತ್ವದ ಪ್ರದರ್ಶನ ಮಾಡಿದರೆಂದರು. ಎಳೆ ಮಕ್ಕಳ ಮೇಲೂ ಬಲಾತ್ಕಾರ ನಡೆಸಿದರು. ದಾಂಧಲೆಗಾರರಾದ ಪೋಲೀಸ ಮತ್ತು ಗುರಖಾ ಜನರ [illegible]

...ಸ್ತ್ರಕದ ಭೋಗದಿಂದ ಒಬ್ಬಿಬ್ಬ ಹೆಂಗಸರು ಮೃತ್ಯುಮುಖದಲ್ಲಿ ಬಿದ್ದಿರುತ್ತಾರೆ. ಇಂಥ ನೀಚ ಮತ್ತು ಅಸಹ್ಯ ಕೃತ್ಯಗಳನ್ನು ಕಾಯ್ದೆಯಿಂದಲೇ ತಡೆದು ಮಾಡಬೇಕು. ಸರಕಾರದವರು ಈ ವಿಷಯವಾಗಿ ವಿಚಾರ ಮಾಡಿ ಹೊಸ ಕಾಯ್ದೆ ಮಾಡದೆ, ಅಪರಾಧಿಗಳಿಗೆ ಯೋಗ್ಯ ಶಾಸನ ಮಾಡತಕ್ಕದ್ದು. ಇಲ್ಲವಾದರೆ ಇಂಥ ದುಷ್ಕರ್ಮಕ್ಕೆ ಅಪ್ರತ್ಯಕ್ಷವಾಗಿ ಸಹಾಯ ಮಾಡಿದಂಥ ದೋಷವೂ ಪಾಪವೂ ಬರದೆ ಹೋಗಲಾರದು.

ಕೂಲಿ ಕಡಿಮೆ ಮಾಡುವದಕ್ಕೆ
ಕಲೆಕ್ಟರರಿಗೆ ಬಿನ್ನಹ.

—೦—

ಮಹಾಯುದ್ಧದ ವೇಳೆಯಲ್ಲಿ ಪ್ರತಿಯೊಂದು ಪದಾರ್ಥದ ಬೆಲೆಯು ಅಗಾಧ ರೀತಿಯಿಂದ ಬೆಳೆದದ್ದರಿಂದ ಕೂಲಿಕಾರರ ಕೂಲಿ ಹೆಚ್ಚಾಯಿತು. ... ಬಡಿಗರು, ಉಪ್ಪಾರರು, ಸಾಲಿಗರು ... ಹೀಗೆ ಹೊಟ್ಟೆ ಪಾಡಿಗೆ ... ವ್ಯವಸಾಯದವರು ಕೂಲಿಯ ದರವನ್ನು ಇಮ್ಮಡಿ ಮುಮ್ಮಡಿ ಹೆಚ್ಚಿಸಿದರು. ಆ ಕಾಲ ಹೋಯಿತು. ಧಾರಣೆ ಇಳಿಯಿತು. ಆದರೆ ಇವರ ಕೂಲಿ ಮಾತ್ರ ಇದ್ದಕ್ಕಿದ್ದಂತಿರುತ್ತದೆ. ಕಾರಣ ಸಾಹೇಬರು ಮಧ್ಯಸ್ಥಿಕೆ ಮಾಡಿ, ಕೂಲಿಯ ದರವನ್ನು ಇಳಿಸಬೇಕೆಂದು ಅಹಮದಾಬಾದಿನ ಅನೇಕ ಜನರು ಮಿ॥ ಕಲೆಕ್ಟರ ಸಾಹೇಬರ ಕಡೆಗೆ ಅರ್ಜಿ ಮಾಡಿದ್ದಾರೆ.

ಧಾರವಾಡದ ಅಂಚೆಯ ಮೋಟಾರ.

—೦—

ಇಲ್ಲಿಯ ಕಾಟನ ಸೇಲ ಸೊಸಾಯಿಟಿಯ ಹತ್ತಿಯ ಮೋಟಾರು ಬುಧವಾರದ ದಿವಸವಾಗುವದು. ಗದಗದಲ್ಲಿ ಇದರದೊಂದು ಬ್ರಾಂಚು ತೆಗೆದ್ದಾರೆ. ನಾನಾ ಸ್ಥಳಗಳಲ್ಲಿ ನೂರು ಸಾವಿರ ಅಂಡಿಗೆಗಳ ಮೋಟಾರವಾಗುವದು. ಮತ್ತೂ ... ಎರಡು ಎಂಬ ಎರಡು ಜಾತಿಯ ಹತ್ತಿ ಇದ್ದುವಷ್ಟು. ... ಅವಲಂಬದ ಹತ್ತಿಯು ಹೋಲಿ ಮತ್ತು ಕಾರಿನಲ್ಲಿ ಎರಡು ನಾಡಿನ ಹತ್ತಿಗಿಂತ ಮೇಲ್ಪಟ್ಟದ್ದಾಗುತ್ತದೆಂದು ಅನುಭವಕ್ಕೆ ಬಂದಿದೆ. ... ಧಾರಣೆಗಳು ಇಳಿದಿದ್ದು ಹೆಚ್ಚು ಫಾಯದೆಯಾಗುತ್ತಿದ್ದವು. ಅವಲಂಬ ಹತ್ತಿಯಿಂದ ಈ ಸಲದ ದೈವ ತೆರೆಯುತ್ತಿರುವದು. ಇಂದಿನ ಅರಳೆಯ ಧಾರಣೆಯು ೧೬೬ ಖಂಡಿ.

ಅವತರಣ—

ಜಾನಗಲ್ಲದಲ್ಲಿಯು ಶಿಕ್ಷ ಸಪ್ತಾಹದ ಕಾಲಕ್ಕೆ ಧಡಕೆ ಇವರು ಅಲ್ಲಿಯೇ ಇದ್ದರು. ಈಗ ಲೋಕಲಬೋರ್ಡಿನ ಕರವನ್ನು ಶಿಕ್ಷಣದ ಖರ್ಚಿಗಾಗಿ ಇಮ್ಮಡಿ ಮಾಡಬೇಕೋ ಬಿಡಬೇಕೋ ಎಂಬದರ ಚರ್ಚೆ ಮಾಡುವದಕ್ಕಾಗಿ ಡೆಪ್ಯುಟೇಶನ್ ಬೋರ್ಡಿನ ಸಭೆಯಾಯಿತು. ಶ್ರೀ ನರಸಿಂಗರಾವ ದೇಶಾಯಿ ಇವರು ರೈತರೊಳಗೆ ಅಗ್ರಣಿಗಳಿದ್ದರು. ಕರವನ್ನು ಬೆಳೆಸದೆ ನಮಗೆ ಶಿಕ್ಷಣ ಬೇಕೆಂದು ರೈತರು ಹೇಳುವರೆಂದು ಅವರು ಸಭೆಯಲ್ಲಿ ಹೇಳಿದರು. ರೈತರ ಮತವನ್ನು ಯಥಾರ್ಥವಾಗಿ ಇದ್ದಂತೆ ಹೇಳಿದ್ದು ಸಾಹೇಬರ ಮನಸಿಗೆ ಬರಲಿಲ್ಲ. ಯಾಕೆಂದರೆ ಕರ ಹೆಚ್ಚು ಮಾಡುವದೇ ಅವರ ನಿಶ್ಚಯವಾಗಿತ್ತು. ಕಡೆಗೆ ಬಹುಮತದಿಂದ ಕರವನ್ನು ಹೆಚ್ಚಿಸಬೇಕೆಂದು ಠರಾವಾಯಿತು. ಆದರೆ ಇಷ್ಟಕ್ಕೆ ಬಿಡದೆ ದೇಸಾಯಿಯವರು ಬಾಕಿದ ಜಾಗೆಯಲ್ಲಿ ಸೇವೆ ಸಿಗಲಿಲ್ಲೆಂದು ಸಾಹೇಬರು ಜನರ ಬೆನ್ನು ಚಪ್ಪರಿಸಿದರು. ಕರವನ್ನು ಬೆಳೆಸದೆ ಲಕ್ಷ್ಮೀ ... ಮುಂತಾದ ... ವಿಷಯದ ಮಾಡಿ ಬಡಜನರ ಶಿಕ್ಷಣದಲ್ಲಿ ಹೆಚ್ಚು ವೆಚ್ಚ ಮಾಡಬೇಕೆಂದು ಹೇಳುವ ರೈತರ ಮತವನ್ನು ಜನರೆದುರಿಗಿಟ್ಟರೆ ಇವು ಬಾಳಿಗೆ ಒಪ್ಪದ್ದಾಯಿತು. ಇದರಲ್ಲಿ ಸಾಹೇಬರಿಗೆ ಬಾಳಿಗೆ ಎಲ್ಲಿ ತೋರಿತೋ ಏನೋ. ಇತ್ತ ಕಡೆಗೆ ಗಾರಕಾಯಿ ತಿನ್ನುವದನ್ನು ತಿಂದು ಬಾಳು ಹೋಗುತ್ತಿರಬೇಕು, ಬಡ ರೈತರಿಗೆ ಅನ್ನದಂತೆ ಅವಶ್ಯವಿದ್ದ ಶಿಕ್ಷಣವನ್ನು ಕೊಡಬೇಕಾದರೆ ಮತ್ತೆ ಅವರ ಮೇಲೆ ಕರ ಹೇರಬೇಕು. ಅಂದರೆ ಈ ನಮ್ಮ ಸಾಹೇಬರಿಗೆ ಸಮಾಧಾನವು.

ಲೋಕಲಬೋರ್ಡುಗಳಿಗೆ ಹೊಸದಾಗಿ ಅಧಿಕಾರಗಳು ಕೊಡಲ್ಪಟ್ಟಿವೆ. ಎಲ್ಲಿ ಉಳಿತಾಯ ಮಾಡಿಕೊಳ್ಳಲಿಕ್ಕೆ ಬರಬೇಕು ಮುಂತಾದ್ದನ್ನು ಮೊದಲು ನೋಡಿಕೊಂಡು ಆ ಮೇಲೆ ಕರ ಹೆಚ್ಚು ಮಾಡುವದಿದ್ದರೆ ಮಾಡಬೇಕು ಎಂದು ದೇಸಾಯರು ಹೇಳಿದರು. ಈ ಮಾತನ್ನೇ ಹಾಲಮತದ ಜಿಲ್ಲಾ ಪರಿಷತ್ತಿನವರೂ ಹೇಳಿರುವರು. ಹಾಗೂ ನವಲಗುಂದ ತಾಲೂಕಿನ ಶೇತಕೀ ಸಭೆಯ ೧೯ ನೇ ಠರಾವಿನಲ್ಲಿ ಇದನ್ನೇ ಹೇಳುತ್ತಾರೆ. ನರೇಗಲ್, ಬನ್ನಿಕೊಪ್ಪ ... ಮುಂತಾದ ಸ್ಥಳಗಳಲ್ಲಿ ಆದ ರೈತರ ಸಭೆಗಳಲ್ಲಿಯೂ ಇದೇ ತರದ ಠರಾವನ್ನೇ ಪಾಸು ಮಾಡಿರುವವು. ಅದರಲ್ಲಿ ಎಲ್ಲಿಯೂ ಧರ್ಮಪರ ಸಾಹೇಬರಿಗೆ ಬಾಳಿಗೆ ಕಾಣಿಸಲಿಲ್ಲ. ಆದರೆ ಅದೇ ಮಾತನ್ನು ನರಸಿಂಗರಾಯರು ಹೇಳಿದ ಕೂಡಲೆ ಅದರಲ್ಲಿ ದೊಡ್ಡ ಬಾಳಿಗೆ ಕಾಣಿಸಿತು. ಯಾಕೆ ಏನೋ ಹೇಳಲಿಕ್ಕೆ ಬರುವದಿಲ್ಲ.

—ಕರ್ಮವೀರ.

ವಿವಿಧ ವರ್ತಮಾನಗಳು.

ನೀಲಗಿರಿಯಲ್ಲಿ ಉತ್ತಕಮಂಡಲದ ಮ್ಯುನಿಸಿಪಾಲಿಟಿಯವರು ಬಡವರಿಗಾಗಿ ಇಪ್ಪತ್ತು ಮನೆಗಳನ್ನು ಕಟ್ಟಿಸುವರು. ಸರಕಾರದವರು ಅವರಿಗೆ ಇಪ್ಪತ್ತು ಸಾವಿರ ರೂಪಾಯಿಯ ಸಹಾಯ ಮಾಡಿದ್ದಾರೆ.

ಪಂಡಿತ ಮಾಲವೀಯರವರು ಮುಂಬಯಿಯಿಂದ ಅಹಮದಾಬಾದಿಗೆ ಹೋಗಿ, ಮಹಾತ್ಮರನ್ನು ಕಂಡು ಸಂಧಿಯ ಸಂಭಾಷಣೆ ಮಾಡಿ, ಜಯಪುರದಲ್ಲಿ ಕೂಡುವ ಆಯುರ್ವೇದ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಪ್ರಯಾಣ ಬೆಳೆಸಿದರು.

ಜಲಂಧರದಲ್ಲಿದ್ದ ಉಮರ ಮತ್ತು ... ನಂಬರದಾರರು ಜಬ್ಬೆಗಳು ... ಹೋಗಿ, ಪೋಲಿಸ ಮೇಲೆ ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುತ್ತಿದ್ದರು. ದರಬಾರಿನವರು ಇಬ್ಬರನ್ನೂ ಹದ್ದುಪಾರ ಮಾಡಿದರು.

ಕಲಕತ್ತೆಯಲ್ಲಾದ ದಂಗೆಯ ಸಮಯ ಸಾಧಿಸಿ, ೩೦ ಜನರು ಬಂದೂಕು, ಕತ್ತಿ, ಮತ್ತು ಬರ್ಚಿಗಳನ್ನು ತಕ್ಕೊಂಡು ... ಗ್ರಾಮಕ್ಕೆ ಹೋಗಿ, ಒಬ್ಬ ಸಾಹುಕಾರನ ಮನೆಯಲ್ಲಿ ದರೋಡೆ ಮಾಡಿ, ಮೂರು ಸಾವಿರದ ವಿಷಯ ಕದ್ದರು.

ಕಲಕತ್ತೆಯ ದಂಗೆಯ ವೇಳೆಯಲ್ಲಿ ಒಬ್ಬ ಮುಸಲಮಾನನ ... ಬಂಡಿಯನ್ನು ಹಿಡಿದು, ನೀರಡಿಯನ್ನು ಕೊಡಿಸಿ. ರಥಕ್ಕೆ ಬೆಂಕಿ ಹಚ್ಚಿ, ಚೂರಿಯಿಂದ ... ಹೊಟ್ಟೆಯನ್ನು ಸೀಳಿ ಅದನ್ನು ಯಮಲೋಕಕ್ಕೆ ಅಟ್ಟಿದರು.

ಧಾರವಾಡ—

ಇಲ್ಲಿಯ ರಾಷ್ಟ್ರೀಯ ಸಪ್ತಾಹದ ದೆಸೆಯಿಂದ ಶ್ರೀ ಗುತ್ತಲ, ಪಟವರ್ಧನ ಮತ್ತು ವಿಠ್ಠಲರಾವ ಜೋಶೀ ವಕೀಲರೂ, ಶ್ರೀನಿವಾಸರಾವ ಜೋಗ, ಎ. ರಪೆ ಮತ್ತು ಪಾಸೋಳಕರ ಮಾಸ್ತರರೂ ಖಾದಿಯನ್ನು ಹೊತ್ತು ಮನೆ ಮನೆಗೆ ಹೋಗಿ ಮಾರಾಟ ಮಾಡುತ್ತಿದ್ದಾರೆ.

ನಾಳಿನ ದಿವಸ ಯುಗಾದಿ ಹಬ್ಬದ ದೆಸೆಯಿಂದ ಮುದ್ರಣಾಲಯಕ್ಕೆ ರಜೆ ಇರುವದರಿಂದ ಬುಧವಾರದ ಸಂಚಿಕೆಯು ಪ್ರಕಟಿಸಲ್ಪಡಲಾರದು.

R. N. B 1443

ವಿಜಯ

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಳೇರಿ.

ವರ್ಷ ೭. | ಧಾರವಾಡ ಮಂಗಳವಾರ ತಾರೀಖು ೧೩ ನೇ ಎಪ್ರೇಲ ೧೯೨೬ | (ಸಂಚಿಕೆ ೧೪

ವಿಜಯ.

ಧಾರವಾಡ ತಾ- ೧೩-೪-೨೬ ನೇ ಇಸ್ವಿ

ಸಕ್ತಿಯ ಶಿಕ್ಷಣ ಮತ್ತು ಲೋಕಲಫಂಡು.

ಅಸಹಕಾರದ ಚಳವಳಿಯು ಮುಮ್ಮುಮ್ಮಿಸುತ್ತಿರುವಾಗ ಈ ಪ್ರಾಂತದ ಉಪಾಧ್ಯಾಯರುಗಳು ಊರೂರಿಗೆ ಸಭೆ ಮಾಡಿಸಿ, ತಮಗೆ ಸಕ್ತಿಯ ಶಿಕ್ಷಣ ಬೇಕೆಂದೂ, ಇದನ್ನು ಅವಶ್ಯವಾಗಿ ತಾವು ದಿನ ಪ್ರತಿ ಮಾಡುತ್ತಿದ್ದ ಆಗಿನ ಮಂತ್ರಿಯಾದ ಡಾಕ್ಟರ ಪರಾಂಜಪೆಯವರನ್ನು ಹಿಡಿಯುವಂತೆಯೂ ಠರಾವುಗಳನ್ನು ಪಾಸ ಮಾಡಿಸುತ್ತಿದ್ದರು. ಆಗಿನಿಂದ್ಯ ಸುಟ್ಟರ ಗಾಳಿಯಂತೆ ಎದ್ದ ಚಳವಳಿಯು ಪೂರಾ ಆಗಿ ಹೋಯಿತು. ಸಕ್ತಿಯ ಶಿಕ್ಷಣ, ಮಿಲಿಟರಿ ಬಾಧಕವಾದಂತ ಸಾಲುವಾದರೆ, ಅವರ ಜಾಗತೆ ಮನಿಷೇಧಕೆಂಬುದು ಆದೇ ನಿರೀ ಈಗ ತೋರಿದಾಗಿದೆ

ಸಕ್ತಿಯ ಶಿಕ್ಷಣದ ಠರಾವು ಮಾಡಿದರೆ ಇದು ಅವಶ್ಯವಲ್ಲಿ ಒಬ್ಬರು ಏನು ಕಷ್ಟ [illegible] ಡಾಕ್ಟರ ಪರಾಂಜಪೆ ಯವರನ್ನು [illegible] ಯವಗೆಲ್ಲ ಬೇಕಿದೆ [illegible] ಸರಕಾರದವರು ಶಿಕ್ಷಣದ ಎಲ್ಲ ಜವಾಬದಾರಿಯನ್ನು ತಮ್ಮ [illegible] ದ, ಆದರೆ ಸರ [illegible] ನ್ನು [illegible] ಲೋಕಲಬೋರ್ಡ ಳ ಮೇಲೆ ಹಾಕಿದ್ದಾರೆ. ಸಿಟಿಗಳು ದ್ರಾಮದಲ್ಲಿ ಯಾವನೊಬ್ಬನಿಗೆ ದಂಡ ಮಾಡುವದಿದ್ದರೆ [illegible] ಆಸನು. ಪೂಜ್ಯ ಪ್ರಾಣಿಯಾಗಿದ್ದು, ಇದರಿಂದ ಮಡಿಕೊಳ್ಳವಂತಿರುವದಿಲ್ಲ. ಹೊಟ್ಟೆಗೆ ಹಾಕುವದು ಮಾತ್ರ ತಪ್ಪಿದ್ದಲ್ಲ. ಅದೇ ಪ್ರಕಾರ ಗೌರವವೆಂದು ಸರಕಾರದವರು ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಸಕ್ತಿಯ ಶಿಕ್ಷಣದ ಅಧಿಕಾರ ಕೊಟ್ಟರು. ಮೇಲೆ ವೆಚ್ಚದ ಭಾರ ಹೇರಿದರು. ಈ ಭಾರವನ್ನು ಹೇಗೆ ನೀಗಬೇಕೆಂಬುದು ಒಳ್ಳೇ ಕೊಡಕಿನ ಪ್ರಶ್ನೆಯಾಗಿರುತ್ತದೆ.

ಸಂಸಾರವು ತಡೆತಾಯಿತು. ಪ್ರಜರು ಮಕ್ಕಳ.. ಮಕ್ಕಳ ಶಿಕ್ಷಣಕ್ಕಾಗಿ ಶ್ರೀಮಂತ ಕಂದಾಯ ಎಂದೂ ಮಾಫೀ ಇಟ್ಟಿಸುವದಿಲ್ಲ, ಭಾರ ಹಚ್ಚಿ ಕೊಡುವದಿಲ್ಲ [illegible] ಇದೆಲ್ಲ ಬಡವನ ಕೆಲಸವು. ಶ್ರೀಮಂತವಾದ ಸರಕಾರವು ದರಿದ್ರನಂತೆ ಲೋಕಲಬೋರ್ಡಿಗೆ ಶಿಕ್ಷಣದ ವ್ಯವಸ್ಥೆ ಮಾಡಿಕೊಳ್ಳೆಂದ. ಹೇಳುವದು ತೀರ ಅನ್ಯಾಯವಾಗುತ್ತದೆ. ಸರಕಾರವು ಏನೋ ಒಂದು ರೀತಿಯಿಂದ ದಾರಿ ತೋರಿಸಿದ ಮಾತ್ರಕ್ಕೆ ಅದರ ಭೃತ್ಯರು ಮಿಯ್ಯಾ ಬೋಲೆ ದಾಢೀ ಹಾಲಿ ಎನ್ನುವಂತೆ ಆಚರಿಸುವದು ಸೋಜಿಗವು.

ಲೋಕಲಫಂಡನ್ನು ಹೆಚ್ಚಿಸಬೇಕೆ? ಬೇರೆ ರೀತಿಯಿಂದ ಧೈಷ್ಟ ಏರಾಯಿಗೂಡಿಸಬೇಕೆ? ಎಂಬದರ ವಿಚಾರವು ಡಿಸ್ಟ್ರಿಕ್ಟ ಲೋಕಲಬೋರ್ಡಿನದು. ಕಳೆದೊಂದು ವರ್ಷದಿಂದ ಇದರ ಭವತಿ, ಸಭವತಿಯು ನಡೆದದೆ. ಆದರೆ ಹಗ್ಗ ಹರಿಯಲಿಲ್ಲ; ಕೋಲು ಮುರಿಯಲಿಲ್ಲ ಎಂಬಂತೆ ಇವತ್ತಿನ ತನಕ ಅದರ ಪರಿಸ್ಥಿತಿಯಾಗಿದೆ. ಲೋಕಲಬೋರ್ಡಿನವರೇ ಇದರ ನಿರ್ಣಯ ಮಾಡಿಕೊಳ್ಳತಕ್ಕದ್ದು. ಆದರೆ ಸರಕಾರೀ ಕಾಮದಾರರು ಇದರಲ್ಲಿ ಬಾಯಿ ಹಾಕುವ ಅಗತ್ಯವುಂಟೆಂದು ನಮಗಂತೂ ತೋರುವದಿಲ್ಲ.

ಪ್ರತಿಯೊಂದು ಜಿಲ್ಹೆಯಲ್ಲಿ ಯುರೋಪಿಯನ್ನ ಮತ್ತು ಏತದ್ದೇಶೀಯ ಪ್ರಾಂತಾಧಿಕಾರಿಗಳಿರುತ್ತಾರೆ. ಯುರೋಪಿಯನ್ನ ಅಧಿಕಾರಿಗಳು ಇದರಲ್ಲಿ ಕೈ ಹಾಕುವದಿಲ್ಲ. ಏಕಂದರೆ ಈ ವಿಷಯವು ಅವರಿಗೆ ಸಂಬಂಧಿಸಿರುವದಿಲ್ಲ. ಏತದ್ದೇಶೀಯರು ಮಾತ್ರ ತಮ್ಮ ಮಟ್ಟಿಗೆ ದೊಡ್ಡಿಸ್ತನ ಪಡಕೊಳ್ಳುವದಕ್ಕಾಗಿ ಜನ ಮರುಳು ಮಾಡುವಂತೆ ಅಧಿಕಾರದ ದುರುಪಯೋಗ ಮಾಡುತ್ತಿರುವದು ಯುಕ್ತವೂ ಸಮಂಜಸವೂ ಅನಿಸುವದಿಲ್ಲ. ಪ್ರಜೆಯ [illegible] ಹಕ್ಕನ್ನು, ಸ್ವತಂತ್ರಗಳ ಹಕ್ಕನ್ನೂ ಕಸಕೊಳ್ಳುವಾಗ ಸರಕಾರದವರು ಸ್ವದೇಶೀ ಕಾಮದಾರರನ್ನೇ ಮುಂದೆ ಚಾಚಿದ್ದರು. ಅದೇ ಪ್ರಕಾರ ಈಗಾದರೂ ತಂತ್ರವರಿಂದಲೇ ಕಾರ್ಯ ಸಾಧಿಸಿಕೊಳ್ಳುವರು.

ಮಬ್ಬುವಾಗಿ ದೈವ ತಮ್ಮ ಹಿತ ನ್ನ ತಾವೇ ನೋಡಿಕೊಳ್ಳತಕ್ಕದ್ದು. ಅಧಿಕಾರಿಗಳ ಮಾತಿನ ಮೋಡಿಗೆ ಬೀಳಬಾರದು. ಲೋಕಲಫಂಡನ್ನು ಹೆಚ್ಚಿಸಬೇಕೆಂಬ ಠರಾವನ್ನು ಪಾಸಮಾಡತಕ್ಕಂಥ ಯೋಗ್ಯ ಮತ್ತು ಜವಾಬದಾರ ಅಧಿಕಾರಿಗಳು ಕೃತರ ಪ್ರತಿನಿಧಿಗಳಾದ ತಾಲೂಕ ಮತ್ತು ಡಿಸ್ಟ್ರಿಕ್ಟ ಲೋಕಲಬೋರ್ಡಿನ ಮೆಂಬರರಾಗಿದ್ದಾರೆ. ಇವರು ಊರೂರಿಗೆ ಸಭೆ ಮಾಡಿ, ಲೋಕರ ಅಭಿಪ್ರಾಯವನ್ನು ತಿಳಿಕೊಳ್ಳಬಹುದು [illegible] ಉಪಾಯಗಳು ತೀರಿದ ಬಳಿಕ ಲೋಕಲಫಂಡನ್ನು ಹೆಚ್ಚಿಸುವ ಠರಾವು ಮಾಡಬಹುದು. ಇವರ ಹೊರ್ತು ಅನ್ಯರು ವಿಶೇಷವಾಗಿ ಸರಕಾರೀ ಕಾಮದಾರರು ಬಾಯಿ ಹಾಕುವದರ ಉಪಯೋಗ ಮಾಡತಕ್ಕದ್ದೇ ಇರುವದಿಲ್ಲ.

ಸರಕಾರದವರು ಲೋಕಲಬೋರ್ಡಗಳನ್ನು ಸ್ವತಂತ್ರ ಮಾಡಿದ್ದಾರೆ. ನಾಮನಿರ್ದೇಶನದಲ್ಲಿ ಕೆಲಕೆಲವು ಸ್ಥಳಗಳಲ್ಲಿ ಮಾತ್ರ ಒಬ್ಬೊಬ್ಬರನ್ನು ನೇಮಿಸುವರು. ಲೋಕಲಬೋರ್ಡಗಳು ಅನ್ಯರ ಬೊಗಸೆಯಿಂದ ನೀರು ಕುಡಿಯದಂತೆ ವರ್ತಿಸಬೇಕೆಂಬದೇ ಮುಖ್ಯ ವಿಚಾರವು. ಈ ವಿಚಾರದಲ್ಲಿ ಸರಕಾರೀ ಕಾಮದಾರರು ಸೇರುವದೂ, ಅವರ ಮತ ಕೇಳಿಕೊಳ್ಳುವದೂ, ಬೋರ್ಡಿನವರು ತಮ್ಮ ಸ್ವಾತಂತ್ರ್ಯ ಕಳಕೊಂಡಂತಾಗುತ್ತದೆಂಬದನ್ನು ಮರೆಯಲಾಗದು. ಯಾವನೊಬ್ಬ ಕಾಮದಾರನು ಅಂತುಪ್ರವೇಶ ಮಾಡಲಿಚ್ಛಿಸಿದರೆ- ಅವರಿಗೆ ನಿಮ್ಮ ಅಗತ್ಯವಿಲ್ಲೆಂದು ಸ್ಪಷ್ಟವಾಗಿ ಹೇಳತಕ್ಕದ್ದು.

ನಿಜಾಮ ಸಾಹೇಬರು
ಇಂಗ್ಲಿಷ ಸರಕಾರದ ಸಾಮಂತರೇ ಸೈ!!

—೦—

ಹೈದರಾಬಾದಿನ ನಿಜಾಮಸಾಹೇಬರು ಕಳಕೊಂಡ ವರ್ಹಾಡವನ್ನು ಮರಳಿ ಗಳಿಸುವ ಹವ್ಯಾಸದಲ್ಲಿ ತಾವು ಬ್ರಿಟಿಶ ಸರಕಾರದ ಒಬ್ಬ ಸಾಮಂತರೆಂಬ ಶಿಕ್ಷೆ ಹೊಡಿಸಿಕೊಂಡರೆಂಬ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ. ಇವರು ಹೇಗೆ ಮಾಂಡಲಿಕರಾಗಿರುತ್ತಾರೆಂಬ ಇತಿಹಾಸವನ್ನೇ ಹೇಳಿದಂಥ ಹೊತ್ತಿಗೆಯನ್ನು ಲಾರ್ಡ ರೀಡಿಂಗಸಾಹೇಬರು ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಇವರ ಅಜ್ಜ ಮುತ್ತಜ್ಜಂದಿರು ಹಗ್ಗ ಕೊಟ್ಟು ಹೇಗೆ ಕೈ ಕಟ್ಟಿಸಿಕೊಂಡಿರುತ್ತಾರೆಂಬದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಒಬ್ಬ ನಿಜಾಮರ ತನುವಾಯಾ ಇನ್ನೊಬ್ಬರು ಪಟ್ಟಕ್ಕೆ ಕೂಡುವಾಗ ಅದಕ್ಕೆ ಬ್ರಿಟಿಶ ಸರಕಾರದ ಸಮ್ಮತಿ ಬೇಕು. ಬ್ರಿಟಿಶ ಸರಕಾರದವರು ಅನುಕೂಲ ಮತ ಕೊಡದಿದ್ದರೆ ಔರಸ ಪುತ್ರನು ಕೂಡ ದೊರೆತನಕ್ಕೆ ಅನರ್ಹನಾಗುವನು. ತನ್ನ ರಾಜ್ಯದ ಉಪಯೋಗ ಮಾಡುವ ಹಕ್ಕಿನ ಪೆಸಯಿಂದಲೇ ಪರತಂತ್ರರಾದ್ದ ಬಳಿಕ, ಮಿಕ್ಕ ಕರಾರು- ಕಟ್ಟಳೆಗಳ ಪಾಡೇನು? ಬ್ರಿಟಿಶ ಸರಕಾರದವರು ಯುದ್ಧದ ವೇಳೆಯಲ್ಲಿ ಇವರಿಗೆ “ ಫೇಥಫುಲ ಅಲಾಯ ” ಅಂದರೆ ನಂಬುಗೆಯ ಮಿತ್ರನೆಂದು ಪದವಿ ಕೊಟ್ಟಿದ್ದಾರೆ. ತಾವು ಸ್ವತಂತ್ರರೆನ್ನುವದಕ್ಕೆ ನಿಜಾಮ ಸಾಹೇಬರು ಇದನ್ನು ಶಿಲಾಶಾಸನ ಮಾಡಿಕೊಂಡಿದ್ದಾರೆ. ಇದು ಗೌರವಾರ್ಥವಲ್ಲದೆ, ಬೇರೊಂದು ಬಗೆಯಿಂದ ಭಾವಿಸಲಾಗದೆಂದೂ ಲಾರ್ಡ ರೀಡಿಂಗ ಸಾಹೇಬರು ನಿಷ್ಪಕ್ಷವಾಗಿ ಹೇಳಿದ್ದಾರೆ. ಒಂದು ಕಾಲದ ಗವ್ಹರ್ನರರ ಮೇಲೆ ಓರ್ವ ಅರಬಜನನು ರಿವ್ಹಾಲ್ವರ ಹಿಡಿದಾಗ ಒಬ್ಬ ನಿಜಾಮ ಮಹಾರಾಜರು ಅವನ್ನು ಹಿಡಿದು, ಸಾಹೇಬರ ಮೇಲಿನ ಕುತ್ತು ತಪ್ಪಿಸಿದರು. ಈ ಉಪಕಾರದ ದೆಸೆಯಿಂದ ಸರಕಾರದವರು ಕೃತಜ್ಞತೆಯ ಸ್ಮಾರಕವಾಗಿ ಇವರಿಗೆ ಮಹಾರಾಜಾಧಿರಾಜನೆಂಬ ಬಿರುದು ಕೊಟ್ಟಿದ್ದಾರೆ. ಈ ವಿಷಯದಲ್ಲಿ ಇವರು [illegible] ಬೇರೆ ಸಂಸ್ಥಾನಗಳಲ್ಲಿ [illegible] ಇಂಗ್ಲೀಷ ರಾಜ್ಯದಲ್ಲಿ ಪ್ರಜೆಗಳಿಗೆ ಕೊಡತಕ್ಕ ಇರುವದಿಲ್ಲ. ಸ್ವಾತಂತ್ರ್ಯದಲ್ಲಿ ಸಂಸ್ಥಾನ ಅಥವಾ ಬಹುಮಾನ ದೊರೆಯುತ್ತಿದ್ದಂಥ ಸ್ವಾತಂತ್ರ್ಯಕ್ಕೆ ಇಂಗ್ರೇಜೀ ರಾಜ್ಯದಲ್ಲಿ ಬಿರುದುಗಳು ಸ್ಥಿರವಾಗಿರುತ್ತವೆ. ಫೇಥಫುಲ ಅಲಾಯ, ಎಗ್ಝಾಲ್ಟೆಡ ಹಾಯನೆಸ ಮೊದಲಾದವು ಉಪಚಾರದ ಮಟ್ಟಿಗೆ ಇರುತ್ತವಲ್ಲದೆ, ಅವನ್ನು ಸನದು ಮಾಡಿಕೊಂಡು ನಡೆಸುವದು ತೀರ ಹಡ್ಡತನವೆಂದು ನಿಜಾಮರು ಮಾತ್ರರಲ್ಲ, ಬೇರೆ ಸಂಸ್ಥಾನಿಕರೂ, ಪದವಿಗಳ ಬೋಳುವರೂ ತಿಳಕೊಳ್ಳುವಷ್ಟು ಜಾಣತನವಿಟ್ಟುಕೊಳ್ಳುವರೆಂದು ತಿಳಿಯುತ್ತೇವೆ

ಭಯಂಕರ ಅನಾಚಾರ ಮತ್ತು ಅತ್ಯಾಚಾರ.

—೦—

ಪುರುಷರ ಬಂದಿವಾಸ, ಸ್ತ್ರೀಯರ ಮಾನಭಂಗ.

—೦—

ಆಸಾಮ ಪ್ರಾಂತಕ್ಕೆ ಸೇರಿದ ದಮಪಿಬಾ, ಬರೋಲ ಮತ್ತು ಗೇರಜಾಬಾರಿ ಎಂಬ ಮೂರು ಗ್ರಾಮಗಳಲ್ಲಿ ಬಂಗಾಲಿ ಕೂಲಿಕಾರರು ವಾಸವಾಗಿದ್ದಾರೆ. ಇವರು ಮೈಮನಸಿಂಗ ಜಿಲ್ಹೆಯಿಂದ ಹೋದವರು. ಇವರಿಗೂ ಅಲ್ಲಿಯ ಮೂಲ ನಿವಾಸಿಗಳಾದ ಆಹಮರೆಂಬವರಿಗೂ ನದಿಯಲ್ಲಿ ಮೀನಗಳನ್ನು ಹಿಡಿಯುವ ವಿಷಯವಾಗಿ ಕಲಹ ಬಂದು, ಸಾಧಾರಣ ಕೊಸದಾಟವೂ ಆಯಿತು. ಕೂಡಲೆ ಆಹಮರು ಹತ್ತರವೇ ಇದ್ದ ಪೋಲೀಸ ಸ್ಟೇಶನಕ್ಕೆ ಫಿರ್ಯಾದಿ ಕೊಟ್ಟರು. ೫೦ ಸಿಪಾಯರೂ, ೧೬ ಗುರಖಾ ಸಿಪಾಯರೂ ಒಂದು, ಈ ಮೂರೂ ಗ್ರಾಮಗಳಲ್ಲಿದ್ದ ಪ್ರತಿಯೊಬ್ಬ ಪುರುಷ ಬಂಗಾಲಿಯನ್ನು ಚತುರ್ಭುಜ ಮಾಡಿ, ಪೋಲೀಸ ಸ್ಟೇಶನಕ್ಕೆ ಒಯ್ದರು. ಸಾಯಂಕಾಲವಾದ ಬಳಿಕ ಪೋಲೀಸರೂ ಗುರುಖಾ ಸಿಪಾಯರೂ ತಮ್ಮೊಳಗೆ ಕೆಲವರನ್ನು ಕೈದಿಗಳ ಕಾವಲಿಗೆ ಇಟ್ಟು, ಉಳಿದವರು ಊರೊಳಗೆ ಹೊಕ್ಕರು. ಪ್ರತಿಯೊಂದು ಮನೆಯ ಬಾಗಿಲ ತೆಗೆಸಿ ಅಥವಾ ಬಲಾತ್ಕಾರದಿಂದ ಒಳಗೆ ಹೊಕ್ಕು ಸ್ತ್ರೀಯರ ಪಾತಿವ್ರತ್ಯವನ್ನು ಭ್ರಷ್ಟ ಮಾಡಿದರ. ಆಗ ಇವರು ಮಾಡಿದ ಅನಾಚಾರ ಮತ್ತು ಅತ್ಯಾಚಾರವು ಮೈ ಮೇಲೆ ಮುಳ್ಳು ತರುವಂತಿದೆ. ಕಾಮವಾಸನೆ ಪೂರ್ಣ ಮಾಡಿಕೊಳ್ಳುವ ಮದಾಂಧತೆಯಲ್ಲಿ ಇವರು ಸ್ತ್ರೀಯರನ್ನು ಬತ್ತಲೆ ಮಾಡಿದರು. ಅತ್ತೆ ಸೊಸೆ, ತಾಯಿ ಮಗಳು ಇಬ್ಬರೂ ಒಬ್ಬರೊಬ್ಬರನ್ನು ನೋಡುವಂತೆ ಅವರ ಕೂಡ ಪಾಪಕರ್ಮದ ಪ್ರದರ್ಶನ ಮಾಡಿಕೊಂಡರು. ಎಳೆ ಮಕ್ಕಳ ಮೇಲೂ ಬಲಾತ್ಕಾರ ಮಾಡಿದರು. ಪಾಂಡಿಗರಾದ ಪೋಲೀಸ ಮತ್ತು ಗುರಖಾ ಜನರ ಬಲಾತ್ಕಾರದ ಭೋಗದಿಂದ ಒಬ್ಬೊಬ್ಬ ಹೆಂಗಸರು ಮೃತ್ಯುಮುಖದಲ್ಲಿ ಬಿದ್ದಿರುತ್ತಾರೆ. ಇಂಥ ನೀಚ ಮತ್ತು ಅಸಹ್ಯ ಕೃತ್ಯಗಳನ್ನು ಕಾಡು ಜನರು ಕೂಡ ಮಾಡಲಾರರು. ಸರಕಾರದವರು ಈ ವಿಷಯವಾಗಿ ವಿಚಾರಣೆಯ ಖರೇ ಫಾರ್ಸ ಮಾಡದೆ, ಅಪರಾಧಿಗಳಿಗೆ ಯೋಗ್ಯ ಶಾಸನ ಮಾಡತಕ್ಕದ್ದು. ಇಲ್ಲವಾದರೆ- ಇಂಥ ದುಷ್ಕರ್ಮಕ್ಕೆ ಅಪ್ರತ್ಯಕ್ಷವಾಗಿ ಸಹಾಯ ಮಾಡಿದಂಥ ದೋಷವೂ ಪಾಪವೂ ಬರದೆ ಹೋಗಲಾರದು.

ಕೂಲಿ ಕಡಿಮೆ ಮಾಡುವದಕ್ಕೆ
ಕಲೆಕ್ಟರರಿಗೆ ಬಿನ್ನಹ.

—೦—

ಮಹಾಯುದ್ಧದ ವೇಳೆಯಲ್ಲಿ ಪ್ರತಿಯೊಂದು ಪದಾರ್ಥದ ಬೆಲೆಯು ಆಗಡಾ ತಿಗಡಾ ಬೆಳೆದದ್ದರಿಂದ ಕೂಲಿಕಾರರ ಕೂಲಿ ಹೆಚ್ಚಾಯಿತು. ಬಡಿಗರು, ಅಕ್ಕಸಾಲಿಗರು, ನಾವಲಿಗರು, ಸಿಂಪಿಗರು ಹೀಗೆ ಕೈ ಮೇಲೆ ಹೊಟ್ಟೆ ತುಂಬಿಕೊಳ್ಳುವ ಪ್ರತಿಯೊಂದು ವ್ಯವಸಾಯದವರು ಕೂಲಿಯ ದರವನ್ನು ಇಮ್ಮಡಿ ಮುಮ್ಮಡಿ ಹೆಚ್ಚಿಸಿದರು. ಆ ಕಾಲ ಹೋಯಿತು. ಧಾರಣಿ ಇಳಿಯಿತು. ಆದರೆ ಇವರ ಕೂಲಿ ಮಾತ್ರ ಇದ್ದಕ್ಕಿದ್ದಂತಿರುತ್ತದೆ. ಕಾರಣ ಸಾಹೇಬರು ಮಧ್ಯಸ್ಥಿಕೆ ಮಾಡಿ, ಕೂಲಿಯ ದರವನ್ನು ಇಳಿಸಬೇಕೆಂದು ಅಹಮದಾಬಾದಿನ ಅನೇಕ ಜನರು ಆ ಕಲೆಕ್ಟರ ಸಾಹೇಬರ ಕಡೆಗೆ ಅರ್ಜಿ ಹಾಕಿದ್ದಾರೆ.

ಇಟಲಿಯ ಮಂತ್ರಿಯ ಮೇಲೆ ಗುಂಡಿನ ಪ್ರಯೋಗ

—೦—

ಇಂಗ್ಲಿಷ ಸ್ತ್ರೀಯಳ ದಸ್ತಗಿರಿ.

—೦—

ಇಟಲಿಯ ಮಂತ್ರಿವರ್ಯರಾದ ಮಿ. ಮುಸಲೋನಿ ಸಾಹೇಬರು ಒಂದು ವೈದ್ಯಶಾಲೆಯ ಸಮಾರಂಭವನ್ನು ತೀರಿಸಿಕೊಂಡು ಹೊರಬೀಳುವಾಗ ಇವರ ಮೇಲೆ ಹ್ಯಾಯೋಲೆಟ ಅಲಬಿನಾ ಗಿಬಸನನೆಂಬ ಇಂಗ್ಲಿಷ ಸ್ತ್ರೀಯಳು ರಿವ್ಹಾಲ್ವರದಿಂದ ಗುಂಡು ಹಾಕಿದಳು. ಗುಂಡು ಮೂಗಿನ ತುದಿಗೆ ತಾಕಿ ಹೋಯಿತು. ಮಂತ್ರಿಗಳು ಶಾಂತ ಮತ್ತು ಸಮಾಧಾನ ವೃತ್ತಿಯನ್ನು ಹಿಡಿದು, ಮುಯ್ಯ ತೀರಿಸಿಕೊಳ್ಳಲು ಅತ್ಯಾಚಾರ ಮಾಡಬಾರದೆಂದು ಫಾಸಿಸ್ಟರಿಗೆ ಉಪದೇಶ ಮಾಡಿದರು. ಗಿಬಸನಳನ್ನು ಬಹಳ ಪ್ರಯತ್ನದಿಂದ ಕಲೆತಿರುಗಿದ ಜನರ ಸಂದಣಿಯಿಂದ ಸುರಕ್ಷಿತವಾಗಿ ತುರಂಗಕ್ಕೆ ಒಯ್ದರು.

ಭಯಂಕರ ಅಗ್ನಿಪ್ರಳಯ,

—೦—

ಆರು ನೂರು ಮನೆಗಳು ಸುಟ್ಟವು; ೪೦೦೦ ಜನರು ನಿರಾಶ್ರಿತರಾದರು; ೩೨ ಜನರು ಸತ್ತರು

—೦—

ಇಜಿಪ್ತದ ರಾಜಧಾನಿಯಾದ ಕೆರೋ ಪಟ್ಟಣದಲ್ಲಿ ಭಯಂಕರ ಅಗ್ನಿಕೋಪವಾಯಿತು. ೨೪ ತಾಸುಗಳ ಪರ್ಯಂತರ ಉರಿಯು ಕಸವು ಕಡಿಮೆಯಾಗಲೇ ಇಲ್ಲ. ೬೧೨ ಮನೆಗಳು ಸುಟ್ಟವು. ೪೦೦೦ ಜನರು ಮನೆ ಇಲ್ಲದವರಾಗಿ ನಿರಾಶ್ರಿತರಾಗಿದ್ದಾರೆ. ೩೨ ಜನರು ಅಗ್ನಿ ದೇವರಿಗೆ ಆಹುತಿಯಾದರು. ದ್ರವ್ಯನಷ್ಟವಂತೂ ಭಾಗ್ಯವಂತನ ಮನೆ ಸುಡಬಾರದೆನ್ನುವಂತಾಗಿರುತ್ತದೆ.

ಇಂದೂರಿನಲ್ಲಿದ್ದ ಉಮೆರ ಮತ್ತು ಕ್ರಿಯಾಕಾರೇಬೀರ್ವರು ಜಟ್ಟಿಗಳು ಕಡು ಹಗೆಗಳಾಗಿ, ಮೇಲಿಂದ ಮೇಲೆ ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುತ್ತಿದ್ದರು. ದರಬಾರಿನವರು ಇಬ್ಬರನ್ನೂ ಹದ್ದುಪಾರ ಮಾಡಿದರು.

ಸಂಯುಕ್ತ ರಾಷ್ಟ್ರೀಯ ಸಂಘ ಸ್ಥಾಪನೆ.

ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಮುಂಬಯಿಯಲ್ಲಿ ದಿವಾನ ಬಹಾದ್ದೂರ ಚಿಂತಾಮಣಿ ಮವರ ಸಂಯುಕ್ತ ರಾಷ್ಟ್ರೀಯ ಸಂಘದ ಪ್ರತಿಷ್ಠಾಪನೆಯು ಸರ ತೇಜ ಬಹಾದ್ದೂರ ಸಪ್ರುರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು ಈ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಬರಬೇಕೆಂದು ೫೦೦ ಜನರಿಗೆ ಆಮಂತ್ರಣ ಕಳಿಸಿದ್ದರು. ಬ್ರಾಹ್ಮಣ-ಬ್ರಾಹ್ಮಣೇತರ ಮೊದಲಿನಿಂದಲೂ ರಾಜಕೀಯ ಪ್ರಶ್ನೆಯಲ್ಲಿ ಮುಂದೊಡೆದಿರುವಂಥ ಪ್ರತಿಯೊಬ್ಬರಿಗೂ ಪತ್ರ ಬರೆದಿದ್ದರು. ಇವರಲ್ಲಿ ಗತಿಸಿ ಬಂದು ಮಾತ್ರ ದಯ ಮಾಡಿಸಿದರು. ಮುಂಬಯಿಯ ಜನರ ಸಂಖ್ಯೆಯು ದೊಡ್ಡದಾಗಿತ್ತೆಂದು ಹೇಳಲವಶ್ಯವಿಲ್ಲ. ಸಭೆಯಲ್ಲಿ ನಡೆದ ಭಾಷಣಗಳೆಲ್ಲ ಗುಪ್ತವಾಗಿದ್ದವು ಪರದೆ ಹಾಕಿಕೊಂಡೇ ಮಸಲತ್ತು ಮಾಡಿದರು. ವರ್ತಮಾನ ಪತ್ರಕಾರರ ಪ್ರತಿನಿಧಿಗಳಿಗೆ ಅನುವು ಕೊಡಲಿಲ್ಲ. ಸಭೆಯಲ್ಲಿ ನಡೆದ ವಿದ್ಯಮಾನಗಳನ್ನು ಮಾತ್ರ ಸಾರಾಂಶದಿಂದಲೂ ಠರಾವುಗಳನ್ನು ಇದ್ದಕ್ಕಿದ್ದಂತೆಯೂ ಪ್ರಸಿದ್ಧ ಮಾಡಿದ್ದಾರೆ.

ಮವಾಳರೆಂಬ ಹೆಸರು ಹಿಂದೀ ಜನರಿಗೆ ಒಕರಿಗೆ ಬರುವಂತಹದಾಗಿತ್ತೆಂದು ಕಾಣದವರಿಗಿಲ್ಲ ಅನಿಸಿತು. ಗೊಖಲೆ, ಗೋಖಲೆ, ನವಣೇ ನವಣೇ ಎಂದಂತೆಯೇ ಸೈ. ಮೊದಲು ಈ ಹೆಸರಿಗೆ ತಿಲಾಂಜಲಿ ಕೊಟ್ಟು, ಸಂಯುಕ್ತ ರಾಷ್ಟ್ರೀಯ ಸಂಘವೆಂಬ ಹೊಸ ಹೆಸರಿಟ್ಟುಕೊಂಡರು. ಬ್ರಾಹ್ಮಣೇತರರು ಅಖಿಲ ಭಾರತೀಯ ಬ್ರಾಹ್ಮಣೇತರ ರಾಷ್ಟ್ರೀಯ ಸಭೆ ಎಂದು ಹೆಸರಿಟ್ಟುಕೊಂಡ ಬಳಿಕ, ಇವರೇಕೆ ಸಂಯುಕ್ತ ರಾಷ್ಟ್ರೀಯ ಸಂಘವೆಂದಿಟ್ಟುಕೊಳ್ಳಬಾರದು? ತಮ್ಮ ಮನೆಯ ಹೆಸರು ಬದಲಾಗಿ ಒತ್ತಿಯ ಮನೆಯ ಹೆಸರು ಬೇರೆಯಾದರೂ ಹುಟ್ಟುಗುಣ ಸುಟ್ಟರೂ ಹೋಗುವದುಂಟೆ? ಅದೇ ಪ್ರಕಾರ ಹೆಸರು ಬದಲಿಸಿದರೂ ಮೊದಲ ಸ್ವಭಾವ ಹೋಗಿರುವದಿಲ್ಲ. ಅಸಹಕಾರ, ಕಾಯದೆಭಂಗ, ಕೌನ್ಸಿಲ ವಿರೋಧ ಇವೆಲ್ಲ ಕಾಂಗ್ರೆಸದ ಮುಖ್ಯ ಧ್ಯೇಯಗಳಾಗಿವೆ ಇವನ್ನು ಮವಾಳರು ಹಿಂದೆ ವಿರೋಧಿಸಿದ್ದಾರೆ. ಮವಾಳರೆಂಬ ಹೆಸರಿದ್ದರೂ, ಮಂದವಾದರೂ ವಿರೋಧಿಸುತ್ತಿದ್ದರು. ಸಂಯುಕ್ತ ರಾಷ್ಟ್ರೀಯ ಸಂಘವಾದರೂ ಆ ವಿರೋಧವನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡಿದ್ದಾರೆ. ತಾವು ಸ್ವತಃ ರಾಜ್ಯಕರ್ತರೆಂಬಂಥ ದುರಭಿಮಾನವು ಇವರ ಅಂಗಾಂಗವನ್ನೆಲ್ಲ ಭೇದಿಸಿದೆ. ದಿವಾನ ಬಹಾದ್ದೂರ ಚಿಂತಾಮಣಿಯವರು "ಪಂಡಿತ ನೆಹರೂ ಅವರನ್ನು ಅಜ್ಞಾತವಾಸಕ್ಕೆ ಅಟ್ಟುವದರಲ್ಲಿ ತಮ್ಮ ಸಂಬಂಧವೇನೂ ಇದ್ದಿಲ್ಲೆಂದು" ಉಸುರಿದ್ದನ್ನು ನಿನ್ನೆ ಸಂಚಿಕೆಯಲ್ಲಿ ಓದಿರುತ್ತೇವೆ. ಇವರಿಗೆ ಸ್ಮರಣಶಕ್ತಿಯು ಬಹಳ ಕಡಿಮೆ ಎಂದು ಶ್ರೀ. ರಂಗಸ್ವಾಮಿಯವರು ಹೇಳಿ, "ಯಾವತ್ತು ಬ್ರಿಟಿಶ ಸಾಮ್ರಾಜ್ಯವನ್ನು ಪಿಚ್ಚ ಮಾಡಿ ಅಸಹಕಾರದ ಘಾತ ಮಾಡುವೆನೆಂದು ಬಾಣ ಕೊಟ್ಟು ಮಹಾತ್ಮರನ್ನೂ, ಪಂಡಿತ ನೆಹರೂರವರನ್ನೂ ನೀವು ಎದುರಿಸಲಿಲ್ಲವೇ" ಎಂಬುದಾಗಿ ಸವಾಲು ಹಾಕಿದ್ದಾರೆ. ಸಂಯುಕ್ತ ರಾಷ್ಟ್ರೀಯ ಸಭೆಯ ಇಂದಿನ ಠರಾವಾದರೂ ಇವರೀವರ ರನ್ನು ಈಗ ಚಿಗಿಸಿ ತೆಗೆದಂತಿರುತ್ತದೆ. ಆದುದರಿಂದ ಇವರ ಠರಾವು ಕಾಂಗ್ರೆಸಕ್ಕೆ ಪ್ರತಿಕೂಲವಾಗಿಯೇ ಇರುವದು. ಕಾಂಗ್ರೆಸದಲ್ಲಿ ಸೇರಿ, ಅಲ್ಲಿ ತಮ್ಮ ಬಹುಮತ ಮಾಡಿಕೊಳ್ಳಬೇಕೆಂದು ಇವರು ಹತ್ತು ಮಾತುಗಳಲ್ಲಿ ಒಂದು ಮಾತಾಡಿದ್ದಾರೆ. ಆದರೆ ಇದರಲ್ಲಿ ಶ್ರದ್ಧೆಯೆಷ್ಟು ಇರುವದಿಲ್ಲ. ಇವರ ಅಂತಿಮ ಧ್ಯೇಯವು ಶಾಂತರೀತಿಯಿಂದ ವಸಾಹತುಗಳ ಸ್ವರಾಜ್ಯ ದೊರಕಿಸುವದಾಗಿರುತ್ತದೆ.

ಅಸೆಂಬ್ಲಿಯಲ್ಲಿರುವಾಗ ಪಂಡಿತ ಮಾಲವಿಯಾಯವರು ಬ್ಯಾರಿಸ್ಟರ ಜಿನ್ನಾಸಾಹೇಬರ ಸ್ವತಂತ್ರ ಪಕ್ಷದಿಂದೊಡೆದು, ತಮ್ಮದೊಂದು ರಾಷ್ಟ್ರೀಯ ಪಕ್ಷದ ಸ್ಥಾಪಿತರಾಗಿದ್ದರು. ಇವರು ಸಹ ಮುಂಬಯಿಗೆ ಬಂದು, ಸ್ವಂತ ಪಕ್ಷದ ಅಭಿಮಾನಬಿಟ್ಟು, ದಿವಾನ ಬಹಾದ್ದೂರರ ಸಂಗಡ ... ಮತ್ತು ಶ್ರೀ. ಕೇಳಕರರ ನಡುವೆ ಐಕ್ಯವಾಗುವ ಸಂಭವವೇ ಇದ್ದಿಲ್ಲ. ಯಾವಾಗಾದರೂ ಕೂಡಿದರೆ ಎಣ್ಣೆ ನೀರು ಕೂಡಿದಂತೆ ಕಾಣಿಸುತ್ತಿದ್ದರು. ದಿವಾನ ಬಹಾದ್ದೂರರು ಇವನ್ನೂ ಕುರುಡೀಕರಣ ರಾದಂತೆ ತಮ್ಮಂತೆ ಮಾಡಿಕೊಂಡರು. ಈ ಪ್ರಕಾರ ಮವಾಳರ ಮಹಾಮಹಿಮೆಯಿಂದ ದೇಶದಲ್ಲಿ ಸಂಯುಕ್ತ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ವರಾಜ್ಯವೆಂಬಿವೇ ಬಣಗಳಾದವು. ಇವುಗಳ ನಡುವೆ ಸ್ಪರ್ಧೆಯಲ್ಲಿ ಚುನಾವಣೆಯಲ್ಲಿ ಸಹುಮತ ಮಾಡಿಕೊಳ್ಳುವ ವಿಷಯವಾಗಿ ಪ್ರಚಂಡವಾದ ಈರ್ಷೆಯೂ, ಚಳವಳಿಯೂ ನಡೆಯುವಂತಾಯಿತು. ಈ ಎರಡು ಸಂಗಮಗಳ ತುಮುಲ ಹೋರಾಟದಲ್ಲಿ ಬ್ರಾಹ್ಮಣೇತರ ಪಕ್ಷವು ತ್ರಿವೇಣಿ ಸಂಗಮದಲ್ಲಿ ಸರಸ್ವತಿಯಂತೆ ಗುಪ್ತಗಾಮಿನಿಯಾಗಬಹುದಾಗಿದೆ.

ಅಂತಃಪುರದ ಕಾರಣವು ರಣಮಂಡಲದಲ್ಲಿ ಕೆಯಲಿಲ್ಲ

ಮುಂಬಯಿಯಲ್ಲಿ ಮವಾಳರೂ ಬೇರೆ ಜನರೂ ಸೇರಿಕೊಂಡು, ಕವದಿಯಂತೆ ತಮ್ಮದೊಂದು ಹೊದಿಕೆಯನ್ನು ಗುಪ್ತ ರೀತಿಯಿಂದ ಹೊಲಿಕೊಂಡ ನಂತರ- ಅದರ ಪ್ರದರ್ಶನವನ್ನು ಗೇಟೀ ಥಿಯೇಟರದಲ್ಲಿ ಮಾಡಿಕೊಂಡರು. ಒಮ್ಮೆ ಸ್ವರಾಜಿಸ್ಟ, ಅನಂತರ ಪ್ರತಿಯೋಗಿ ಸಹಕಾರಿ, ಈಗ ಸಂಯುಕ್ತ ರಾಷ್ಟ್ರೀಯ ಪಕ್ಷದವರಾಗಿ ಬಿಸಿಲು ಬಂದತ್ತ ಕೊಡೆ ಹಿಡಿಯತೊಡಗಿದ ಬ್ಯಾರಿಸ್ಟರ ಜಯಕರರು ಈ ಥಿಯಟರದಲ್ಲಿ ಕೂಡಿದ್ದ ಸಭೆಯ ಅಧ್ಯಕ್ಷರಾಗಿದ್ದರು. ಪಂಡಿತ ಪರಿಷತ್ತಿಗೆ ಸೇರಿದ ಬಹುತೇಕ ಮೆಂಬರರು ಆಗಮಿಸಿದ್ದರು. ಭಾಷಣ ಮಾಡಿದವರು ನಾಲ್ವರು ಒಬ್ಬರು ಮಾತ್ರರಾಗಿದ್ದರು. ಪ್ರೇಕ್ಷಕರು ತಮ್ಮ ಕ್ಷೇಮ ಸಮಾಚಾರವನ್ನು ಚನ್ನಾಗಿ ತಿಳಿದುಕೊಳ್ಳುವರೆಂದು ಇವರು ಮುಂದಾಗಿ ಭಾವಿಸಿದ್ದರ ಮೇರೆಗೆ ಮತ್ತು ಸ್ಪಷ್ಟ, ಬಹಿಷ್ಟ ಸವಾಲುಗಳಿಗೆ ಕಿವಿಗೊಡಲು ಧೈರ್ಯ ತಾಳಿದ್ದರು. ಮೊದಲನೇ ಗಂಡಿನ ಬಾಯಿಗೆ ಮದ್ರಾಸದ ಸರ ಕೆ. ವ್ಹಿ ರೆಡ್ಡಿಯವರು ಸಿಕ್ಕರು. ದಾದರನಾದದಲ್ಲಿ ಇವರ ಭಾಷಣ ಮುಗಿದ ಕೂಡಲೆ, ಅನೇಕರು ಪ್ರತಿ ಸವಾಲು ಕೇಳತಕ್ಕವರಿದ್ದರು. ಆದರೆ ಹಾಗೆ ಮಾಡಗೊಡದ್ದರಿಂದ, ಮರು ದಿವಸ ಸಭೆ ಮಾಡಿ, ಅವರಿಗೆ ಉತ್ತರ ಕೊಡಬೇಕಾಯಿತು. ಇಲ್ಲಿ ಉತ್ತರ ಕೊಟ್ಟ ಏರಾಗ್ರಣಿಯಾದ ಪ್ರಸಿದ್ಧ ಬಾಬೂರಾವ ಗೋಖಲೆಯವರು ಮುಂಬಯಿಯಲ್ಲಿ ಸರ ರೆಡ್ಡಿಯವರಲ್ಲಿಯೇ ಸೇರಿಕೊಂಡರು. ಮಳಿಗಾಲದ ಕಂಬಳೀ ಹುಳವು ಚಳಿಗಾಲದಲ್ಲಿ ವಾಸರಾತ್ರಿಯಾಗುವಂತೆಯೇ ಸೈ ಇದು; ಸರ ರೆಡ್ಡಿಯವರಿಗೆ ಸವಾಲು ಹಾಕಬೇಕೆಂದು ಹೇಳುವ ಹಕ್ಕು ಅಲ್ಲಿ ಯಾರಿಗೂ ಇರಲಿಲ್ಲ. ಹೇಳಿದ್ದನ್ನು ಕೇಳಿಕೊಂಡು ಹೋಗಬೇಕೆಂದು ನೋಟೀಸಿನಲ್ಲಿ ಮುಂದಾಗಿ ಪ್ರಸಿದ್ಧ ಮಾಡಿದ್ದಿಲ್ಲ. ಅಧ್ಯಕ್ಷರೂ ಹಾಗೆ ಉಪೋದ್ಘಾತ ಮಾಡಲಿಲ್ಲ. ಆದ್ದರಿಂದ ಸರ ಸಾಹೇಬರು ಭಾಷಣ ಪ್ರಾರಂಭ ಮಾಡಿದ ಕೂಡಲೆ, ಅವರ ಪುಣ್ಯಾಂಶವೆಲ್ಲ ತೀರಿ ಹೋಗಿರುತ್ತದೆಂದು ಕಂಡು ಬಂತು. ಸರರು ಮಾತಿನ ಪ್ರಾರಂಭದಲ್ಲಿ "ನಾವು ಈಗ ಪರದೆಯಿಂದ ಹೊರ ಬಿದ್ದಿದ್ದೇವೆ. ಕೆಲವೊಂದು ಪಕ್ಷವು ದೇಶವನ್ನು ಅಡ್ಡ ದಾರಿಗೆ ಎಳೆಯುತ್ತಿರುವದರಿಂದ, ಹೊಸ ಕಾಂಗ್ರೆಸ ಸ್ಥಾಪಿಸುವ ಅಗತ್ಯ ಉಂಟಾಯಿತೆಂದ ಕೂಡಲೆ" ಪ್ರೇಕ್ಷಕರು ಇವರ ಮೇಲೆ ಶೇಮ ಶಬ್ದಗಳ ಸೂರೆಗೈದರು. ಆಗ ಅಧ್ಯಕ್ಷರು ಎದ್ದು ನಿಂತು ಮುಂಬಯಿಯ ಮರ್ಯಾದೆಯನ್ನು ಕಾಯಿರೆಂದು ಪ್ರೇಕ್ಷಕರಿಗೆ ವಿನಂತಿ ಮಾಡಿಕೊಂಡರು. ಸರರ ಆಡಿಕೆಯು ಮೂಲ ಕಾಂಗ್ರೆಸದ ಅಪಮಾನ ಮಾಡುವಂಥಾದ್ದಾಗಿರುತ್ತದೆಂದು ಪ್ರೇಕ್ಷಕರು ಸಭಾ ಮಂದಿರವು ನಡಗುವಂತೆ ಗದ್ದರಿಸಿದರು. ಪಂಡಿತ ಮಾಲವಿಯಾಯವರು ಮುಂದೆ ಬಂದು, ತಾಳ್ಮೆ ತಾಳ್ಮೆ ಎಂದು ಬಿನ್ನಹ ಮಾಡಿಕೊಂಡರು. ಬಳಿಕ ಎಂಡನೆಯವರ ಮೇಲೆ ಟೀಕೆ ಮಾಡುವದು ನನ್ನ ಉದ್ದೇಶವಿಲ್ಲ ತನಾಗುತ್ತಿತ್ತೆಂದ ಕೂಡಲೆ, ನೋ ನೋ ಎಂಬ ವೃಷ್ಟಿಯಾಯಿತು. ಪ್ರಜರಿಂದ ಆರಿಸಲ್ಪಟ್ಟ ಕೌನ್ಸಿಲಗಳ ಮೆಂಬರರು ತಮ್ಮ ಕರ್ತವ್ಯ ಮಾಡಲು ತಪ್ಪಿದರೆಂದು ಸರರು ಅಕ್ಷಮ್ಯವಾದ ಉದ್ಗಾರ ತೆಗೆದ ಕೂಡಲೆ ಇವರ ಭಾಷಣ ಕೇಳುವದು ಪ್ರಜರಿಗೆ ಅಸಹ್ಯವಾಗಿ, ಇವರನ್ನು ಕೂಡಿಸಿ ಬಿಟ್ಟರು. ಇವರ ತರುವಾಯ ಅಸೆಂಬ್ಲಿಯಲ್ಲಿನ ಸವರು ಎಷ್ಟು ನಿಂತು ಪ್ರೇಕ್ಷಕರಿಗೆ ಒಪ್ಪಿಗೆಯಾಗುವಂಥ ಭಾಷಣ ಮಾಡಲು ಸಭೆಯು ಕೆಲವು ಶಾಂತರೀತಿಯಿಂದ ನಡೆಯಿತು. ಬ್ಯಾರಿಸ್ಟರ ಜಿನ್ನಾಸಾಹೇಬರು ಹುರಿಗಟ್ಟಿ ತಮ್ಮ ಪ್ರತಾಪ ತೋರಿಸಲು ಮುಂದೊರೆದರು. ಇಂತಹವಾಗಿದ್ದ ಜನಸ್ತೋಮವು ಪುನಃ ಅಲ್ಲೋಲಕಲ್ಲೋಲವಾಯಿತು. ಆಗ ನಡೆದ ಪ್ರಶ್ನೋತ್ತರಗಳು ಕೆಳಗೆ ಕೊಟ್ಟಿರುತ್ತವೆ

ಜಿನ್ನಾ — ಕಾಂಗ್ರೆಸವನ್ನು ಮುರಿಯಬೇಕೆಂದು ನಮ್ಮ ಪಕ್ಷದ ಉದ್ದೇಶವಿಲ್ಲೆಂದು ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಇದು ಪೂರಾ ಸುಳ್ಳು

ಒಂದು ಧ್ವನಿ— ದಿವಾನಬಹಾದ್ದೂರ ಚಿಂತಾಮಣಿಯವರು ಹಾಗನ್ನುತ್ತಾರೆ.

ಜಿನ್ನಾ— ದಿವಾನರೊಬ್ಬರೇ ನಮ್ಮ ಪಕ್ಷದ ಮೆಂಬರರಾಗಿರುವದಿಲ್ಲ.

ಮತ್ತೊಂದು ಧ್ವನಿ — ಇವರು ಈ ಪಕ್ಷದ ಮೂಲ ಉತ್ಪಾದಕರಾಗಿರ ಬಾರದೇ?

ಜಿನ್ನಾ — ಹಾಗೇ ಇಲ್ಲ ಮುಂದಿನ ಸಂಗತಿಯನ್ನು ವಿವರಿಸಿ ಹೇಳುತ್ತೇನೆ

ಒಂದು ಧ್ವನಿ— ಸ್ವರಾಜ್ಯ ಪಕ್ಷೀಯರನ್ನು ಸೋಲಿಸುವದಕ್ಕೆ? ಇದೇ ನಿಮ್ಮ ಉದ್ದೇಶವಲ್ಲವೇ?

ಜಿನ್ನಾ — ಇಲ್ಲೆಂದು ಹೇಳುತ್ತೇನೆ. ಸರ್ವರಿಗೆ ... ... ನಮ್ಮ ... ಕ್ಷಿಸುವದಿಲ್ಲ. ಸ್ಪಷ್ಟ ಒಂದು ಬೇರೆ ಉದ್ದೇಶ ಮತ್ತು ಧ್ಯೇಯ ಸಾಧನೆಗಾಗಿ ಇಲ್ಲಿ ಕೂಡಿದ್ದೇವೆಂಬುದನ್ನು ಧ್ಯಾನಕ್ಕೆ ತನ್ನಿರಿ ಸ್ವರಾಜ್ಯ ಪಕ್ಷೀಯರ ವತ ನಮ್ಮ ದೇಶದ ಉತ್ಕರ್ಷಕ್ಕೆ ಹಿತದೃಷ್ಟಿಯಿಂದಿರುವದಿಲ್ಲೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ

ಒಂದು ಧ್ವನಿ ನಮಗೆ ನಿಮ್ಮ ಹೇಳಿಕೆಯು ಬೇಕಾಗಿಲ್ಲ. ಕೂತುಕೊಳ್ಳಿರಿ.

ಜಿನ್ನಾ- ಈ ವಿಷಯವಾಗಿ ನಾನು ನಿಮಗಿಂತ ಹೆಚ್ಚು ವಿಚಾರಮಾಡಿದ್ದೇನೆ. ಆದುದರಿಂದ ನನ್ನ ಮಾತುಗಳನ್ನು ಸಮಾಧಾನದಿಂದ ಕೇಳಿಕೊಳ್ಳಿರಿ

ಒಂದು ಧ್ವನಿ- ಕಾಂಗ್ರೆಸದ ಧ್ವಂಸ ಮಾಡುವದಕ್ಕೆ-

ಜಿನ್ನಾ- ಹಾಗಲ್ಲ ನಾವು ಸಂಶಯದ ಕೂಟ ಶುದ್ಧ ಮತ್ತು ಪ್ರಾಮಾಣಿಕ ರೀತಿಯಿಂದ ಹೋರಾಡುವೆವು

ಆಗ ಸಭೆಯು ತುಂಬ ಗದ್ದಲವಾಯಿತು. ಒಬ್ಬರು ವಕ್ತಾ ಸಭೆಯ ವಿಸರ್ಜನೆ ಮಾಡಬೇಕೆನ್ನುವಷ್ಟು ಗಲಭೆಯಾಯಿತು ಕೆಲ ಹೊತ್ತಿನ ಮೇಲೆ ಶಾಂತವಾಗಲು- ಪುನಃ ಜಿನ್ನಾಸಾಹೇಬರು "ಸರಕಾರದ ಕೂಡ ಶುದ್ಧ ಮತ್ತು ಪ್ರಾಮಾಣಿಕ ರೀತಿಯಿಂದ ಹೋರಾಡುವೆವು" ಎನ್ನಲು- ಕೂತುಕೊಳ್ಳಿರಪ್ಪಾ! ಕೂತುಕೊಳ್ಳಿರೆಂದು ಪುನಃ ನಾಲ್ಕೂ ಕಡೆಯಿಂದ ಧ್ವನಿಯಾಯಿತು.

ಒಂದು ಧ್ವನಿ- ಸಾಹೇಬರೇ ಕಾಂಗ್ರೆಸದ ಮೆಂಬರರಾಗಿರಿ.

ಜಿನ್ನಾ- ಕಾಂಗ್ರೆಸವು ಈ ಮೊದಲೇ ಒಂದು ಠರಾವು ಮಾಡಿದೆ ಆದರೆ ಅದು ನಿಜವಾದ ರಾಷ್ಟ್ರೀಯ ಸಭೆಯ ಠರಾವು ಆಗಿರುವದಿಲ್ಲ.

ಧ್ವನಿ- ನೀವು ತಿರುಗಿ ಹೋಗುತ್ತೀರಿ

ಜಿನ್ನಾ- ನಾನು ಹೇಳುವದಾದರೂ ಕೇಳಿಕೊಳ್ಳಿ. ನನ್ನ ಮಾತು ಕೇಳದಿದ್ದರೆ- ನಿಷೇಧದ ಠರಾವು ಪಾಸ ಮಾಡಿರಿ.

ಧ್ವನಿ- ನಮಗೆ ನಿಮ್ಮ ಭಾಷಣ ಕೇಳುವದೇ ಬೇಕಾಗಿಲ್ಲ.

... ತಮ್ಮ ಭಾಷಣ ಮುಗಿಸಿದರು. ನಂತರ ಪಂಡಿತ ಮದನ ಮೋಹನ ಮಾಲವಿಯಾಯವರ ಭಾಷಣವಾಯಿತು. ಬ್ಯಾರಿಸ್ಟರರೂ ಇವರೂ ಕಾಂಗ್ರೆಸದ ಆಜ್ಞೆಯ ಪ್ರಕಾರ ಕೌನ್ಸಿಲಗಳ ಮೆಂಬರರು ವರ್ತಿಸತಕ್ಕದ್ದಲ್ಲ; ಮತದಾರರ ಹೇಳಿಕೆಯಂತೆ ವರ್ತಿಸತಕ್ಕದ್ದೆಂದು ಉದ್ಗಾರ ತೆಗೆದಿದ್ದರು. ಕಾಂಗ್ರೆಸವೇ ಹಿಂದುಸ್ಥಾನದ ಪ್ರತಿನಿಧಿಯು. ಅದರ ಅಪ್ಪಣೆಯಂತೆ ಮೆಂಬರರು ನಡೆಯತಕ್ಕದ್ದೆಂದು ಮಿ. ಹಾರ್ನಿಮನ್ನರು ಉತ್ತರ ಕೊಟ್ಟನಂತರ ಸಭೆಯು ವಿಸರ್ಜನೆಯಾಯಿತು.

ಜಾಲಿನವಾಲಾಬಾಗ ಮತ್ತು ಲಷ್ಕರೀ ಕಾಯದೆ.

ಜಾಲಿನವಾಲಾಬಾಗ ಮತ್ತು ಪಂಜಾಬದ ಲಷ್ಕರೀ ಕಾಯದೆಯ ಅನರ್ಥ ಮತ್ತು ಅಪಮಾನಗಳನ್ನು ಹಿಂದೀ ಜನರು ಎಂದೂ ಮರೆಯುವಂತಿಲ್ಲ. ಈ ವೃಗಳ ನಿಷೇಧಸಂಬಂಧ ಸ್ಮಾರಕವೆಂದೂ ಹಿಂದುಸ್ಥಾನದ ತುಂಬ ಕಾಂಗ್ರೆಸ ಕಮಿಟಿಗಳ ವಿದ್ಯಮಾನವಾಗಿ ರಾಷ್ಟ್ರೀಯ ಸಪ್ತಾಹದ ಸಭೆಗಳಾಗುವವು. ಖಾದಿಯ ಪ್ರಸಾರ ಮಾಡಲ್ಪಡುವದು. ಆ ದಿನದ ಪ್ರಾರಂಭವು ಮೊನ್ನೆ ನಿಂದಾಗಿ ಆಯಿತು. ಲಾಹೋರಿನಲ್ಲಾದ ಸಭೆಯ ಅಧ್ಯಕ್ಷರಾಗಿದ್ದ ಸರದಾರ ಮಂಗಲಸಿಂಗರು "ಕಾಯದೆಭಂಗ ಮಾಡಿ, ಕರ ಕೊಡದಾಯ ಕೊಡದಿರುವದಿಲ್ಲೆಂದು ಸತ್ಯಾಗ್ರಹ ಮಾಡಿದ ವಿನಹ ಸ್ವರಾಜ್ಯ ದೊರೆಯಲಾರದೆಂದು" ಭಾಷಣ ಮಾಡಿದ್ದಾರೆ. ಶ್ರೀ ರಾಜಗೋಪಾಲಾಚಾರ್ಯರು ಅಹಮದಾಬಾದಿನಲ್ಲಿದ್ದು, ಇವರು "ಖಾದಿಯ ಪ್ರಸಾರ ಮಾಡಿದರೆ- ಅಂತಹ ಸುರಕ್ಷೆ ಮೊದಲು ಕೊಡುವದಾದ ತಂದಿರು ಬಾಯಿಯ ವ್ಯಾಸಂಗವನ್ನು ಹಬ್ಬಿಸಿರೆಂದು" ಉಪದೇಶ ಮಾಡಿದ್ದಾರೆ. ಮುಂಬಯಿಯಲ್ಲಾದ ಸಭೆಯಲ್ಲಿ ದೇವಿ ಸರೋಜಿನಿಯವರು ಅಧ್ಯಕ್ಷರಾಗಿದ್ದರು ಮೌಲಾನಾ ಶೌಕತಅಲಿ, ಆಸಿಫಅಲಿ, ಸರ ಕೆ. ವ್ಹಿ. ರೆಡ್ಡಿಯವರ ಭಾಷಣಗಳಾದವು ಪಂಜಾಬದ ವಿಷಯ ಹೇಳಿದ ಬಗೆದರೆ- ಪ್ರತ್ಯಕ್ಷವಾಗಿ ಗೋಚರ ... ಉದ್ಗಾರತೆಗೆದ ಅಮ್ಮನವರು ಈ ಸಪ್ತಾಹದಲ್ಲಿ ಮಾತಾಡಿದ್ದು ಆಶ್ಚರ್ಯವೇ ಸರಿ, ಸರ ಕೆ. ವ್ಹಿ. ರೆಡ್ಡಿಯವರು ರಾಷ್ಟ್ರೀಯ ಸಪ್ತಾಹಕ್ಕೆಂತ ... ಮತ ಪ್ರದರ್ಶನ ಮಾಡುವದಕ್ಕಾಗಿಯೇ ಮಾತ ಬಿಡರೆಂದು ಹೇಳಬಹುದು. "ಕಾಂಗ್ರೆಸವು ಸೂಚಿಸಿದ ಪ್ರಕಾರ ಚುನಾವಣೆಯಾಗದಂತೆ ನಾವು ಒಪ್ಪಲಿ; ನಾಳಿನ ದಿವಸವೇ ಇದೇ ಬ್ರಾಹ್ಮಣೇತರ ಪಕ್ಷವನ್ನು ಕಾಂಗ್ರೆಸದಲ್ಲಿ ಕೂಡಿಸಿ ಬಿಡುವೆನು" ಇವರೆಂದರು ಸ್ವಾಮಿ ಶ್ರದ್ಧಾನಂದರು ಕಳೆದ ನಾಲ್ಕು ವರ್ಷ ರಾಜಕೀಯ ಚಳವಳಿಯಿಂದ ಅಲಿಪ್ತರಾಗಿದ್ದರು. ಅದರ ಹೊರ್ತು ಪತಿತೋದ್ಧಾರವಾಗಲೆಂದು ಮನೋಸಾಕ್ಷಿಯಾಗಿ, ಪುನಃ ಚಳವಳಿಯಲ್ಲಿ ಸೇರುವ ಸಂಕಲ್ಪ ಮಾಡಿದ್ದಾಗೆ ಅಲ್ಲಾಹಾಬಾದಿನಲ್ಲಿ ಇವರ ನೇತೃತ್ವದಲ್ಲಿಯೇ ಸಪ್ತಾಹದ ಪ್ರಾರಂಭವಾಯಿತು. ಇವರು ರಾಷ್ಟ್ರೀಯ ನಿಶಾಣೆಯನ್ನು ಏರಿಸಿದರು. ಪಂಡಿತ ಮೋತೀಲಾಲರಂತೂ ಹೆಗಲ ಮೇಲೆ ಖಾದೀ ಹೊತ್ತು ಬೀದಿ ಬೀದಿಯಲ್ಲಿ ಮಾರುತ್ತಿದ್ದಾರೆ. ಮದ್ರಾಸದಲ್ಲಿ ಶ್ರೀ. ಸತ್ಯಮೂರ್ತಿಯವರ ಮಹತ್ವದ ಭಾಷಣವಾಯಿತು. ಇದೇ ಸಮಯದಲ್ಲಿ ಆಸ್ಟ್ರೇಲಿಯಾದಿಂದ ನಾಮದಾರ ಶಾಸ್ತ್ರಿಯವರಿಗೆ ಹಾರ್ನಬ್ರುಕರೆಂಬ ಸಾಹೇಬರ ಕಾಗದ ಬಂದಿದೆ. ಆ ಪತ್ರ ಓದಿಕೊಂಡ ಬಳಿಕ 'ಬ್ರಿಟಿಶ ಸರಕಾರವನ್ನು ಹಿಂದೀ ಜನರೊಂದಿಗೆ ಸಹಕಾರ ಮಾಡುವಂತೆ ಬಲವಂತಿಕೆ ಮಾಡಿಸಿದ ವಿನಹ, ಸರಕಾರವು ಸಹಕಾರ ಮಾಡಲಾರರೆಂದು ನಾಮದಾರ ಶಾಸ್ತ್ರಿಯವರ ಮತವಾಗಿರುತ್ತದೆಂಬ' ಸಂಗತಿಯನ್ನು ಶ್ರೀ. ಸತ್ಯಮೂರ್ತಿಯವರು ಜಾಹೀರ ಮಾಡಿದರು. ರಾಷ್ಟ್ರೀಯ ಸಪ್ತಾಹವು ಒಂದಿಲ್ಲೊಂದು ಬಗೆಯಿಂದ ಮಹತ್ವದ್ದಾಗಿದ್ದು, ಆದರಲ್ಲಿ ಸಂಯುಕ್ತ ರಾಷ್ಟ್ರೀಯ ಸಂಘದವರು ಸೇರದೆ, ದೂರ ನಿಂತಿರುವದೇ

ವಿವಿಧ ವಿಷಯಂಗಳು.

ಕರ್ನಾಟಕ ನಟ ನವಸ್ತ್ರಟರ ಸ್ಮೃತಿ-

ಮೈಸೂರ ಇಲಾಖೆಯಲ್ಲಿ ಅಥವಾ ಕರ್ನಾಟಕ ಮಂಡಲದಲ್ಲಿ ಅಥವಾ ಇಡೀ ದಕ್ಷಿಣ ದೇಶದಲ್ಲಿ ನಟ ಸಾರ್ವಭೌಮರೆಂದು ಪ್ರಸಿದ್ಧರಾಗಿದ್ದ ಶ್ರೀ ವರದಾಚಾರ್ಯರು ವೈಕುಂಠವಾಸಿಗಳಾದರೆಂಬ ಅತ್ಯಂತ ವಿಷಾದಕರವಾದ ಸುದ್ದಿಯನ್ನು ಬರೆಯುವದಕ್ಕೆ ವಿಷಾದಿಸುತ್ತೇವೆ. ಶಾಸ್ತ್ರೀಯ ಸಂಗೀತ, ಮಧುರವಾದ ಕಂಠ ಮತ್ತು ಅಭಿನಯ ನಿಪುಣತೆಯಿಂದ ಇವರನ್ನು ಸರಿಗಟ್ಟುವಂಥ ನಟರೇ ದಕ್ಷಿಣ ದೇಶದಲ್ಲಿರಲಿಲ್ಲೆಂದರೂ ಸಲ್ಲುವದು. ಮಹಾರಾಷ್ಟ್ರ ಪ್ರಾಂತದಲ್ಲಿ ಶಾಹೂ ನಗರದ ಸಿಯು ಗಣಪತರಾಯರು, ಗಂಧರ್ವ ಕಂಪನಿಯ ಬಾಲ ಗಂಧರ್ವರು ನಾಟ್ಯಕಲಾಪ್ರವೀಣತೆಯಿಂದ ಪ್ರಸಿದ್ಧರೂ ಬಹುಮಾನಾರ್ಹರೂ ಆಗಿದ್ದಂತೆ, ಕರ್ನಾಟಕ ದೇಶದಲ್ಲಿ ಶ್ರೀ ವರದಾಚಾರ್ಯರಾಗಿದ್ದರು. ಇವರು ಪುಷ್ಟ ನಟರಾಗಿದ್ದರು ದೇವರ ವರವು ಆಗಿತ್ತು. ಇವರ ವೃಕ್ಷ್ಯವಿನಿಂದ ಕರ್ನಾಟಕದ ಅಪಾರ ಹಾನಿಯಾಯಿತು. [illegible] ಪರೀಕ್ಷಕ ಸಂಘ ಒಳ್ಳೆ ರತ್ನಾವಳಿ ಕಂಪನಿಯನ್ನು ನಿಂದ್ರರು ಇವರಿಗೆ ನಾಟಕ ಶಿರೋಮಣಿ ಎಂಬ ಬಿರುದು ಕೊಟ್ಟಿದ್ದಾರೆ. ಇವರು ಉದಾರರು; ಅನೇಕ ದಾನ ಧರ್ಮಗಳನ್ನು ಮಾಡಿ, ಲೋಕಪ್ರಿಯರಾಗಿದ್ದರು.

ಮಹಾರಾಜರ ಮಾಗಿದ ಸ್ಥಾನ

ಮೈಸೂರಿನ ಶ್ರೀಮನ್ಮಹಾರಾಜರು [illegible] ದಿನಾಲು ನೂರು ನೂರು [illegible] ಸಂಗತಿಯನ್ನು ಈಗೊಮ್ಮೆ ಓದಿ [illegible] ಮಹಾರಾಜರ ಅಂಗರಕ್ಷಕರಿಗೆ [illegible] ದಿಂದ [illegible] ಮಹಾರಾಜರು ಇವರಿಗೆ [illegible] ಮನೆಯ [illegible] ಬಿಡಿಸಿದ್ದಾರೆ. ಮಹಾರಾಜರು [illegible] ಸ್ಥಾನ ಮಾಡಿ [illegible] ಪೂಜೆ [illegible] ಉಡುವ ಮಡಿ [illegible] ಮತ್ತು ಪವಿತ್ರ [illegible] ದಿಂದ ಮಹಾರಾಜರಿಗೆ ಆದರವಿರುವಂತೆ ಅಭಿಮಾನವೂ ಉಂಟು. ಪ್ರಜೆಗಳು ಮಹಾರಾಜರ ಅನುಕರಣ ಮಾಡುವದು ರಾಜಭಕ್ತಿಯ ಆದರ್ಶವಾಗುತ್ತದೆ.

ಒಂದು ದಿವಸದ ಜೀವದಾನ-

[illegible] ಮುಂಬಯಿ ಪಟ್ಟಣಕ್ಕೆ ನಿತ್ಯ ಮಾಂಸ [illegible] ದೈಸುವದಕ್ಕಾಗಿ [illegible] ಕೋಳಿ [illegible] ಎತ್ತು, ಆಕಳು, ಕುರಿಗಳನ್ನು ನೇರಿ ದಿನಾಲು ಸಾವಿರಕ್ಕಿಂತ ಹೆಚ್ಚು ಪಶುಗಳ ವಧ ಮಾಡುವರು. ಆಟಕರಿಗೂ ಮ್ಯುನಿಸಿಪಾಲಿಟಿಗೂ ಬಾಡಿಗೆ ಮತ್ತು ದರದ [illegible] ವಿಷಯ [illegible] ಬಂದದ್ದರಿಂದ ಕಟುಕರು ಸಂಪು ಮಾಡಿ ಕೊಳ್ಳಿಸಿದರು. ಅಂದು ಸಾಯಂಕಾಲದೊಳಗಾಗಿ ಮ್ಯುನಿಸಿಪಾಲಿಟಿಯವರು ಇವರ ಕೂಡ ರಾಜೀ ಮಾಡಿಕೊಂಡರು. ವಿರೋಧ ಭಕ್ತಿಯಂತೆ ಕಟುಕರಿಂದ ಒಂದು ದಿವಸದ ಮಟ್ಟಿಗೆ ಸಾವಿರಾರು ಪ್ರಾಣಿಗಳಿಗೆ ಜೀವದಾನ ಕೊಟ್ಟಂತಾಯಿತು.

ಹುಲಿಯು ಸಾಹೇಬರನ್ನು ಕೊಂದಿತು-

[illegible] ಸಂಡೂರ ರಾಜ್ಯಕ್ಕೆ ನೇರಿದ ಮುಹೂವಲ್ಲಿರುವ ಇಂಗ್ಲಿಷ ದಂಡಿನಲ್ಲಿ ಮೇಜರರಾಗಿದ್ದ ಟೇಲರೆಂಬವರು, ಹೆಂಡತಿ ಮತ್ತು ಕೆಲ ಗೃಹಸ್ಥರನ್ನು ಕರಕೊಂಡು ಬ್ರಾತಗೋಳಿಯ ಬೇಟೆಗಾಗಿ ಬಿಜಾಪುರೋಪವನಕ್ಕೆ ಹೋದರು. ಸಾಹೇಬರು ಕೆಲವು ಬ್ರಾತಗೋಳಿಗಳನ್ನು ಹೊಡೆದ ಬಳಿಕ, ಅಡವಿಯಲ್ಲಿ ಹೊಕ್ಕರು. ಸಾಹೇಬರ ಮರಣವೇ ಕೂಗಿ ಬಂದಿತ್ತು. ಅಲ್ಲಿ ಒಂದು ಹುಲಿಯು ಇವರ ಮೇಲೆ ಹಾರಿ, ಮೈ ತುಂಬ ಗಾಯ ಮಾಡಿ, ಕೊಂದಿತು.

ಇವರು ಲಂಡನಗೋಳಿಗಳು. ಮಿ. ದುರ್ಲಭಭಾಯಿ ಎಂಬ ಮಾಮಲೇದಾರರೇ ಗಟ್ಟಿಯಾಗಿ ನಿಂತು, ಇವರ ಲಂಡನ ಗೊಂದಲವನ್ನು ಇದ್ದಿಗೆ ತಂದರು. ನಿಜಾರ್ಥೆಗ್ಗಾಗಿ ಮಿ. ಪಲಿಸಾಯಬರನ್ನು ಸ್ಪೇಶಲ ಮ್ಯಾಜಿಸ್ಟ್ರೇಟರಾಗಿ ನೇಮಿಸಿದರು. ಈಮಾ ಸಾಹೇಬರ ಮೇಲಿನ ಆಪಾದನೆಗಳಲ್ಲಿ ಆರೋಪವು ಸಿದ್ಧವಾಗುತ್ತದೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟು, ಆರು ತಿಂಗಳ ಸಾದಾ ಕೈದು ಮತ್ತು ಎರಡು ಸಾವಿರ ರೂಪಾಯಿ ದಂಡ ವಿಧಿಸಿದರು.

ಫ್ರಾನ್ಸದಲ್ಲಿ ಅರಸೊತ್ತಿಗೆಯ ಕಿಡಿಯು-

ಫ್ರಾನ್ಸ ದೇಶವು ಪ್ರಜಾಸತ್ತಾತ್ಮಕವಾಗಿ ೫೦ ವರ್ಷವಾಯಿತು. ಡಕ ಡಿ. ಗುಯಿಜನೆಂಬ ಸಾಹೇಬನು ತಾನು ಫ್ರಾನ್ಸ ದೇಶದ ಅರಸೊತ್ತಿಗೆಯ ಬಾಧ್ಯಸ್ಥನೆಂದೂ ದೊರೆತನದ ಜವಾಬದಾರಿಯನ್ನೂ [illegible] ಕರ್ತವ್ಯಗಳನ್ನೂ ತಾನು ಮಾಡಬಲ್ಲ [illegible] ಮಹಾಜನರು [illegible] ತನಗೆ [illegible] ಪಟ್ಟಕ್ಕೆ ಕೂಡಿಸಬೇಕೆಂದು ಸಾರಿದ್ದಾನೆ.

ಮೋಟಾರಗಳ ಪ್ರಸಾರ-

ಇಂಗ್ಲಂಡದಲ್ಲಿ ಪ್ರತಿ ವರ್ಷ [illegible] ಮೋಟಾರಗಳು [illegible] ಜನರಲ್ಲಿ [illegible] ದ ಸಂಖ್ಯೆಯು [illegible] ಅಮೇರಿಕೆಯ ಯುನಾಯಿಟೆಡ ಸ್ಟೇಟ್ಸ [illegible]

ಅಮ್ಮನವರ ಗುಪ್ತ ಸಹಾಯ-

ಆಪ್ರಿಯಂಟ [illegible] ಮಹಮ್ಮದ [illegible] ಮೋಕ್ಷರ [illegible] ಮನೆತನ [illegible] ತನ್ನ ಆಪ್ತರ [illegible] ಕೂಡಿಸಿದ್ದರು. [illegible] ಈ ರಹಸ್ಯದಲ್ಲಿ ನೇರಿದ್ದ ಮಹಾಳರು ತಮ್ಮ ವಿಪತ್ತಿನಲ್ಲಿ ಕಾಮನವರು ಬಿಲ್ಲಿಗೆ ಹೇಗೆ ಸಹಾಯ ಮಾಡುವರೆಂಬದನ್ನು ನೋಡಿಕೊಂಡು, ಕುದುರೆಗೆ ಹಣೆ ಪಟ್ಟಿ ಕಟ್ಟಿ ಏಯಿಸುತ್ತಿದ್ದರ, ಜಯಿಂದರೆಂದು ಹಸರಿಗೆ ಬಿಡುವರು.

ರಾಜ್ಯಕಾರಭಾರದಲ್ಲಿ ಸುಧಾರಣೆ

ಒಡೇಯರ ರಾಜ್ಯಕಾರಭಾರವನ್ನ ಇಂಗ್ಲಿಷ ಪದ್ಧತಿಯಂತೆ ಪಟ್ಟ ಮಂತ್ರಿ ಮಂಡಲ [illegible] ದ್ದು ಸಾಧಾರಣ ಪ್ರಜೆಗಳ [illegible] ಪ್ರಜಾ ಸತ್ತಾ [illegible] ಮಹಾರಾಜರು ಆಜ್ಞೆ ಮಾಡಿದ್ದಾರೆ. ಈ ದಿವಾನರಾದ ಸರ ಮನುಭಾಯಿಯವರು ಗವರ್ನರನಂಥ ಅಧಿಕಾರಿಯಾಗಿ, ಮಂತ್ರಿಮಂಡಲದ ಅಧ್ಯಕ್ಷರಾಗುವದು ಕಾರಭಾರದಲ್ಲಿ ಸುಧಾರಣೆಯಾದಂತೆ ಆದ ಕಂಗಾಯದಲ್ಲಿ ಸುಧಾರಣೆಯಾಗಿದ್ದರೆ ಪ್ರಜರು [illegible] ರಾಗಿ ಸಂಪು, ಹರತಾಳ ಮತ್ತು ಉಪೋಷಣವೆಲ್ಲ ಮಾಡುತ್ತಿದ್ದರು.

ಕೌನ್ಸಿಲ ಉಮೇದವಾರ-

ಬಳ್ಳಾರಿಯ ಸುಪ್ರಸಿದ್ಧ ವಕೀಲರಾದ ಶ್ರೀ. ಬೆಲ್ಲೋಣಿ ಭೀಮರಾಯರು ಕೌನ್ಸಿಲ ಚುನಾವಣೆಯಲ್ಲಿ ಆ ಜಿಲ್ಹೆಯ ಪರಿಯಿಂದ ಉಮೇದವಾರರಾಗಿದ್ದಾರೆ. ಇವರ ಪ್ರೋತ್ಸಾಹನ ಮತ್ತು ಮುಂದಾಳುತನದಿಂದಲೇ ಬಳ್ಳಾರಿಯಲ್ಲಿ ಜರುಗಿದ ತಿಂಗಳಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು, ಸಾಹಿತ್ಯ ಪರಿಷತ್ತು, ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತುಗಳು ಕೂಡುವವು. ಕನ್ನಡಿಗರು ಇವರನ್ನು ಆರಿಸಿ ಕೊಡುವರೆಂದು ಪೂರಾ ನಂಬಿದ್ದೇವೆ.

ಕಾಗಲ ಸಂಸ್ಥಾನದ ಮೇಲೆ ಕೋಪ-

ಕಾಗಲ ಸಂಸ್ಥಾನದ [illegible]

ಕರಗೊಂಡು, ಮೇಸ್ತ್ರಿವಾಗಿರುವನ್ನು ತಮ್ಮ ಕಡೆಗೆ ಕಕ್ಕೊಂಡಂತೆ ಬಾತೀದಾರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಕಂದ— [illegible] ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಹಾಡುವಿ ಕಿಮ್ಮತ್ತು ತೀರ ಕಮ್ಮಿ, ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ [illegible] ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— [illegible] ಕೃಷ್ಣಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, [illegible] ಹುಬ್ಬಳ್ಳಿ



ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣ [illegible], ಗರ್ಮಿ ಯಿಂದ ಹುಟ್ಟಿ, ಭಗೇಂದ್ರ ಮುಂತಾದವುಗಳ ಮೇಲೆ [illegible] ಉಪಯುಕ್ತವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ ಪರಸ್ಥಳದವರಿಗೆ [illegible]

[illegible] ಮತ್ತು ಕೆಮಿಸ್ಟರಿಂದ ದೊರೆಯುವದು | ಎಸ ಎಫ. [illegible] [illegible] ಬೆಳಗಾವಿ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂಬಳ	೧೦ ಆಣೆ
ವಿಚಿತ್ರ ಸಂಶಯ	೫ „
ಲೋ. ಟಿಳಕರ ಚರಿತ್ರ	೪ „
ದೇಶಬಂಧು ದಾಸರ ಚರಿತ್ರ	೨ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕಗಳನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ವ್ಯವಸ್ಥಾಪಕರ ವಿಜಯ ಪುಸ್ತಕಾಲಯ

ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಮಾತೃಭೂಮಿ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ವಿಜಯ

ಸಿಕ್ತ್ರ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ [illegible] ಧಾರವಾಡ ಶುಕ್ರವಾರ ತಾರೀಖು [illegible]ನೇ ಎಪ್ರೀಲ [illegible] ([illegible]ಂಚಿಕೆ [illegible]

ಸರಕಾರದಿಂದ ಪೆಟಂಟ ದೊರಕಿದ



ಮುಲ್ಲಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು [illegible] ತಗಡಿನಿಂದ ಮಾಡಲ್ಪಟ್ಟದ್ದು. ಕಪ್ಪಲಿಯು ನೀರನ್ನು ಮುಟ್ಟು[illegible] ಕೆಳಭಾಗದಲ್ಲಿಯ ಜಾಳಿಗೆಯಿಂತ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯು ಸೆಟೆದು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	[illegible] ಗ್ಯಾಲನ್.	ಬೆಲೆ ೨೦ರೂ.
ನಂ ೨	[illegible] ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ
ಜಿಲ್ಹಾ, ಸಾತಾರಾ

ದಿ ಅಂಗಡಿಗ ಬ್ಯಾಂಕ ಲಿಮಿಟೆಡ್
ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲು ಖಾತೆ, ಠೇವು, ಸೇವಿಂಗ್ಸ್ ಡಿಪಾಜಿಟ, ಸಾಲ ಪತ್ರ, ಹುಂಡಿ, ಮುಂತಾದ ಬ್ಯಾಂಕಿನ ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು [illegible] ಸಮಕ್ಷಮ [illegible] ಬೇಕು.

ಈ ಬ್ಯಾಂಕಿನ ಕೆಲಸವು [illegible] ೧೦-೩೦. [illegible] ಸಾಯಂಕಾಲ [illegible] ವರೆಗೆ ನಡೆಯುವದು.

[illegible] angaligi
[illegible]

ವಿಜಯದ ವರ್ಗಣಿ ದರ

ಸಿಕ್ತಪತ್ರಕ್ಕೆ

೧೨ ತಿಂಗಳಿಗೆ	,,	೧೨ —[illegible] ರೂ
೬	,,	[illegible] —[illegible]— [illegible] ರೂ
೩	,,	೪ —[illegible]— [illegible] ರೂ
[illegible]ಪತ್ರಕ್ಕೆ ೧ ವರ್ಷಕ್ಕೆ		[illegible]—೧೨—[illegible]

ವಿಶೇಷ ಸೂಚಿತ [illegible]

ಮ್ಯಾನೇಜರ ವಿಜಯ, ಧಾರವಾಡ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ [illegible]

ಪ್ರಾರಂಭ [illegible]

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯು [illegible] ಲಕ್ಷ [illegible]. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು [illegible]ಯುವವು. ಕಾಯಮ ಮತ್ತು ಚಾಲ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು [illegible] ಮಾಡುವದರಿಂದ ತಿಳಕೊಳ್ಳಬೇಕು.

ಮಾಧ್ವವರಾವ [illegible]
[illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಆಗುತ್ತದೆ

ಎ. ಕೆ. ಕಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ಹೊಸ ಮೋಸಿನ ದಂಗಳು.

ತಿಂಗಳು ಕಾಲಮಿನ ಪತ್ರ [illegible] [illegible]

[illegible]

ಪತ್ರಕ್ಕೆ ಪತ್ರವ್ಯವಹಾರ [illegible]

[illegible] ಧಾರವಾಡ

ವಿಜಯ.

ಧಾರವಾಡ ತಾ- ೧೬ ೪-೨೬ ನೇ ಇಸ್ವಿ

ಸಂಯುಕ್ತ ರಾಷ್ಟ್ರೀಯರು

ಪಶ್ಚಾತ್ತಾಪಪಟ್ಟರೇ ಒಡಂಬಡಿಕೆ !!

ಪಂಡಿತ ಮಾಲವೀಯಾಯವರ ಪರಿಶ್ರಮದಿಂದ ಸ್ವರಾಜ್ಯ ಮತ್ತು ಸಂಯುಕ್ತ ರಾಷ್ಟ್ರೀಯ ಮಂಡಳದ ನಡುವೆ ರಾಜೀ ಮಾಡಿಸುವ ಪೂರ್ಣ ಸಿದ್ಧತೆ ಯುಂಟೂ ನಡೆಯಿತು. ಕಾಂಗ್ರೆಸವು ಕೈಕೊಂಡ ಕಾರ್ಯವನ್ನು ಮುಂದೆ ನಡಿಸದೆ, ಅದನ್ನು ಹಿಂದ ಹಿಂದಕ್ಕೆ ಜಗ್ಗುತ್ತಾ ಈ ಮಂಡಳದವರು ತೋರಿಸಿದ ಹೇಡಿತನವು ತಿಳಿದ ಸಂಗತಿಯಾಗಿದೆ. ಇವರ ದೆಸೆಯಿಂದಲೇ ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿಯಲ್ಲಿಯ ಕರಾವಿನ ಆಶಯವನ್ನು ಕಡಿಮೆ ಮಾಡಿದರು. ಸ್ವರಾಜ್ಯ ಪಕ್ಷೀಯರು ಕಮಗೆ ಅನುಕೂಲವಾದರೂ, ಆಳರಸರು ಮಾತ್ರ ಅನುಕೂಲವಾಗದೆ, ಬರಬರುತ್ತಾ ಹೆಚ್ಚೆಚ್ಚು ಪ್ರತಿಕೂಲರಾಗುತ್ತಾರೆಂಬದನ್ನು ನೋಡಿಯೂ ಅವರ ಛಾಯಾನುವರ್ತಿಯಾಗಿ, ಅವರು ಯಾವಾಗ ತಮಗೆ ರೊಟ್ಟಿಯನ್ನು ಚಲ್ಲುವರು; ಅದನ್ನು ಮಹಾಪ್ರಸಾದವೆಂದು ತಕ್ಕೊಳ್ಳುವೆವೆಂದು ಮಾರ್ಗ ನಿರೀಕ್ಷಿಸುತ್ತಿದ್ದಾರೆ ಮತ್ತು ಅವರು ನವನವೀನ ಪದವಿಗಳನ್ನು ಪಡೆಯಲುಜ್ಜುಗಿಸಿದ್ದಾರೆ. ಇವರ ಸೇವೆಯನ್ನು ಮನ್ನಣೆ ಮಾಡಿದರೂ, ಅದರ ಪ್ರತಿಫಲವು ಏನೂ ದೊರೆಯುವದಿಲ್ಲೆಂದೂ, ಬೇಕಾದರೆ ಪದವಿಗಳನ್ನು ಸೂರೆಮಾಡುವರೆಂಬದೂ ಜಗತ್ಪ್ರಸಿದ್ಧವಾದ ಮಾತಾಗಿದೆ. ಆಳರಸರು ಮನಸ್ಸು ಮಾಡಿದರೆ ಅವರ ಕಣ್ಣಿನಲ್ಲಿ ಅಂಥ ಅಂಜನವನ್ನೇ ಹಾಕಬೇಕು. ಬೆಣ್ಣೆ ತಿಕ್ಕಿದರೆ ಮುಳ್ಳು ಹೋಗುವದುಂಟೇ?

ಮುಖ್ಯವಾಗಿ ಮಹನೀಯರು ಆಳರಸರ ಮೊಷ್ಟಿಗೆ ಬಿದ್ದು ಹಿಂದುಸ್ಥಾನದ ಅಪರಿಮಿತ ಹಾನಿ ಮಾಡುತ್ತಾರೆಂಬದನ್ನು ಇತಿಹಾಸಜ್ಞರು ಮರೆಯಲಾರರು. ಮೂರು ವರ್ಷಗಳಲ್ಲಿ ಅಂವತ್ತು ಕೋಟಿಯ ಸಾಲವನ್ನು ಹಿಂದುಸ್ಥಾನದ ಮೇಲೆ ಹೇರಿದ್ದಾರೆ. ಸ್ವಾಂಡ ಹೊರೆಯನ್ನು ಬಗಿಲ್ಲ, ಆಧಾಯ ಪೆಚ್ಚದ ಪದ್ಧತಿಯು ಸಮಾಧಾನಕರವಾಗಿದೆ, ಸರ ಫ್ಲೀಟ ಬಾಸೀಲರು ಧನ್ಯರು ಎಂದು ಸ್ತುತಿಸುತ್ತಿ ಮಾಡುವರು. ದ್ರವ್ಯ ದೃಷ್ಟಿಯಿಂದ ಈ ತೆರವಾಗಿ ಹಾನಿಗೆ ಇವರೇ ಕಾರಣರು. ಇದರಲ್ಲಿ; ದಿವಾನ ಬಹಾದ್ದೂರ ಚಿಂತಾಮಣಿಯವರು ಪಂಡಿತ ಮೋತಿಲಾಲರ ಸಾರಂಗಮಾಷಕ್ಕೆ ಕಾರಣರೆಂಬದನ್ನು ಈ ಮೊದಲು ಬರೆದಿರುತ್ತೇವೆ. ಇವರ ತರುವಾಯಾ ದೇಶಬಂಧು ಸಿ. ಆರ. ದಾಸರ ಸುರಂಗವಾಸಕ್ಕೆ ಮಿ. ವಿ.ತರರು ಕಾರಣರಾಗಿದ್ದಾರೆ. ಆಳರಸರ ಸೇವೆಗಾಗಿ ಇವರು ಎಂಥೆಂಥ ಕೃತ್ಯಗಳನ್ನು ಮಾಡಿದರೆಂಬದು ಇದರಿಂದ ಧ್ವನಿತವಾಗುತ್ತದೆ.

ತಮ್ಮ ಅಂತಃಕರಣದಲ್ಲಿ ಸ್ವಾರ್ಥದ ದೊಡ್ಡ ಮೊಟ್ಟೆಯನ್ನು ಕಟ್ಟಿಕೊಂಡು, ದೇಶೋದ್ಧಾರಕರೆಂದೂ ಸ್ವರಾಜ್ಯಪ್ರಿಯರೆಂದೂ ಹೇಳಿಕೊಳ್ಳುವ ಈ ಸಂಯುಕ್ತ ರಾಷ್ಟ್ರೀಯ ಮಂಡಳದವರು ಸ್ವಾರ್ಥದ ಬಗ್ಗೆ ಪಶ್ಚಾತ್ತಾಪಪಟ್ಟ ಹೊರತು ರಾಜಿಯು ಎಂತಹದೆಂಬ ಪ್ರಶ್ನೆಯು ಸಹಜವಾಗಿ ಹೊರಡುತ್ತದೆ. ಮದ್ರಾಸದ ಸರ ಕೆ. ವ್ಹಿ. ರೆಡ್ಡಿ ಯವರೂ ಮುಂಬಯಿಯ ಸಭೆಗೆ ಬಂದು, ಅದರಲ್ಲಿ ಸೇರಿದ್ದಾರೆ. ಇವರ ಪ್ರಮುಖರಾಗಿದ್ದ ಸರ ತ್ಯಾಗರಾಜ ಚೆಟ್ಟಿಯು ರಾಜಕೀಯ ಕೈದಿಗಳು ಕಳ್ಳ ತಸ್ಕರರ ಯೋಗ್ಯತೆಯವರೇ ಆಗಿದ್ದಾರೆ. ಅವರನ್ನು ಬಾರಕೋಲಿನಿಂದ ಹೊಡೆಯಬೇಕೆಂದು ಆಡಿ ತೋರಿಸಿದ್ದಾರೆ. ಹಿಂದೆ ಆದದ್ದು ಆಗಿ ಹೋಯಿತು ಈ ನಂತರ ಹಿಂದುಸ್ಥಾನದ ಮೇಲೆ ಹೊಸ ಸಾಲ ಹೇರಗೊಡುವದಿಲ್ಲ, ಆಳರಸರ ತಂತ್ರದಂತೆ ನಡೆಯುವದಿಲ್ಲ. ರಾಜಕೀಯ ಕೈದಿಗಳ ಸ್ಥಿತಿಯು ವಿಲಾಯತಿಯ ಕೈದಿಗಳ ಸ್ಥಿತಿಯಂತಾಗುವ ಹಾಗೆ ಮನಮುಟ್ಟಿ ಪ್ರಯತ್ನಿಸುವೆವು. ದೊಡ್ಡವರೇ ಇರಲಿ; ಸಣ್ಣವರೇ ಇರಲಿ; ರಾಜಕೀಯ ಅಪರಾಧಿಗಳೆಂಬವರನ್ನು ಸುರಂಗಕ್ಕೆ ಕಳಿಸುವ ಪಾಪ ಕಟ್ಟಿಕೊಳ್ಳುವದಿಲ್ಲೆಂದು ಇವರಿಂದ ಒಪ್ಪಿಗೆಯಲ್ಲ; ಮುಚ್ಚಳಿಕೆ ಬರೆಸಿಕೊಂಡು, ವಚನ ತಕ್ಕೊಂಡು ರಾಜಿಯ ಪ್ರಸ್ತಾಪ ಪ್ರಾರಂಭಿಸಬೇಕೆಂದು ಹೇಳುವದು ಎಷ್ಟು ಅಪ್ರಸ್ತುತವಾಗಲಾರದು.

ಮಿ. ಹಾರ್ನಿಮನ್ನರ ವರ್ತಮಾನಪತ್ರ.—

ಮಿ. ಹಾರ್ನಿಮನ್ನರು ತೆಗೆಯುವ ವರ್ತಮಾನಪತ್ರದ ಕಂಪನಿಯು ರಜಿಸ್ಟರ ಮಾಡಲ್ಪಟ್ಟಿತು. ಬಂಡವಲ ಹತ್ತುಲಕ್ಷ ರೂಪಾಯಿ ಸೇರಿದ ಮೂವತ್ತು ಸಾವಿರ ಶೇರುಗಳ ಪೂರ್ತಿ ಲಕ್ಷ್ಮಿಬಾಯಿ ದೇವಿ ಸರೋಜಿನಿ, ಮೆಸರ್ಸ ಉಮರ ಸೋಭಾನಿ, ಬಾಲುಭಾಯಿ ದೇಸಾಯಿ, ನರಿಮನ್ನ, ಜಗನಲಾಲ ಮಾನಾವತಿ, ವೈಕುಂಠರಾವ, ದೇಸಾಯಿ ಮುಂತಾದವರು ಡಾಯರೆಕ್ಟರರಾಗಿದ್ದಾರೆ. ವರ್ತಮಾನಪತ್ರವು ಎರಡು ಮೂರು ತಿಂಗಳಲ್ಲಿ ಪ್ರಾರಂಭವಾಗುವದು.

ಮದ್ರಾಸದ ಮಂತ್ರಿಗಳ ಮೇಲೆ ಭಾವೀ ಗಂಡಾಂತರ.

—೦—

ಬ್ರಾಹ್ಮಣೇತರ ಪಕ್ಷದ ಮಂತ್ರಿಗಳು ಮದ್ರಾಸ ಇಲಾಖೆಯಲ್ಲಿ ಆರು ವರ್ಷ ದೊರೆತನ ಮಾಡಿದರು. ಆದರೆ ಸದ್ಯದ ಚುನಾವಣೆಯಲ್ಲಿ ಇವರು ಅಥವಾ ಇವರ ಪಕ್ಷದವರು ಆರಿಸಲ್ಪಡುವ ಆಶೆಯು ಲೇಶಮಾತ್ರವೂ ಇರುವದಿಲ್ಲ. ಅವರು ಒಳ್ಳೇ ಗಂಡಾಂತರದಲ್ಲಿ ಸಿಕ್ಕಿರುತ್ತಾರೆಂದು ಮುಂಬಯಿ ಟಾಯಿಮ್ಸ ಪತ್ರದ ಸುದ್ದಿಗಾರನು ಬರೆಯುತ್ತಾನೆ. ಮುಖ್ಯ ಮಂತ್ರಿಯಾದ ಪಾನಗಲ್ಲಿನ ರಾಜರು ಜಮೀನದಾರರ ಪಕ್ಷದಿಂದ ಇರುತ್ತಾರೆ. ಅಂವಕ್ಕೇ ಹೋಟುಗಳುಂಟು. ವೆಂಕಟಗಿರಿಯ ರಾಜರ ಮನೆತನದ ೧೩ ಹೋಟುಗಳಿವೆ. ಇವೆಲ್ಲ ಬ್ರಾಹ್ಮಣೇತರ ಮತ್ತು ರಾಜರೆಂದು ಇವರಿಗೇ ದೊರೆಯುವವು. ಉಳಿದ ೪೭ ಹೋಟುಗಳು ಪೂರಾ ಥಳಮಳಿಸುತ್ತವೆ. ಆಲಾದಿ ಶ್ರೀ ನರಸಿಂಹಯ್ಯಂಗಾರರೆಂಬವರು ಇವರ ಪ್ರತಿಸ್ಪರ್ಧಿಯಾಗುವರು. ಇವರು ಪ್ರತಿಷ್ಠಿತ ವಕೀಲರಿದ್ದು, ಜಮೀನದಾರರಲ್ಲಿ ದೊಡ್ಡ ವಜನವುಂಟು. ಇವರ ತರುವಾಯಾ ವಿದ್ಯಾ ಖಾತೆಯ ಮಂತ್ರಿಯಾದ ಸರ ಪೆಟ್ರೋಸಾಹೇಬರು ಎರಡು ಜಿಲ್ಲೆಗಳ ಪಕ್ಷದಿಂದ ಇವರು ಆರಿಸಲ್ಪಡುವರು. ಇವರೂ ಆಂಧ್ರರು. ಆಂಧ್ರದಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಿದ ಪ್ರತ್ಯುಪಕಾರ ಮತ್ತು ಕೃತಜ್ಞತೆಗಾಗಿ ಹೋಟಿನ ಯಾಚನೆ ಮಾಡುವರು. ಒಟ್ಟಿನಿಂದ ಇವರ ದೊರೆತನವು ಅಪ್ರಿಯವಾಗಿರುವದರಿಂದ, ಇವರೂ ಸ್ಥಾನಚ್ಯುತರಾಗುವರು. ಮೂರನೆಯವರು ಶ್ರೀ ಶಿವಜ್ಞಾನ ಪಿಳ್ಳೆಯವರು. ಹಿಂದಿನ ದಿವಾನಗಿರಿಯಲ್ಲಿ ಮೂವರೂ ಆಂಧ್ರರೇ ಆಗಿದ್ದರು. ಇವರಿಗೇ ಪ್ರಾಶಸ್ತ್ಯವೇನೆಂದು ಜಗಳ ತೆಗೆಯಲು ತಮಿಳರಾದ ಶ್ರೀ ಪಿಳ್ಳೆಯವರಿಗೆ ಈ ಸಾರೆ ದಿವಾನಗಿರಿ ಕೊಟ್ಟರು. ಇವರು ಅಭಿವೃದ್ಧಿ ಖಾತೆಯ ಮಂತ್ರಿಗಳು. ತಂಜಾವರ ಜಿಲ್ಲೆಯಲ್ಲಿ ಕಂದಾಯವನ್ನು ಹೆಚ್ಚಿಸಿದ ಬಗ್ಗೆ ರೈತರು ಅಸಂತುಷ್ಟರಾಗುವದರಿಂದ, ಇವರ ಚುನಾವಣೆಗೂ ದಾಳಿ ಬಂದಿದೆ. ಬ್ರಾಹ್ಮಣೇತರರೇ ಬಹಳ ದೊಡ್ಡ ಸಂಖ್ಯೆಯಿಂದ ಹೋಟರರಿದ್ದರೂ, ರಾಜ್ಯಕಾರಭಾರದಲ್ಲಿ ದೊರಕಿಸಿದ ಅಪಯಶ ಮತ್ತು ಅಪಕೀರ್ತಿಗಾಗಿ ಇವರಿಗೆ ಪಂಚಮ ಶನಿಯ ದೃಷ್ಟಿ ಬಿದ್ದಿರುತ್ತದೆ.

ಶ್ರೀಯುತ ಶ್ರೀನಿವಾಸರಾವ ಕೌಜಲಗಿಯವರು ಕರ್ನಾಟಕ/ಏಕೀಕರಣಕ್ಕಾಗಿ ಕೊಡಗು ಮಾಗಿನಲ್ಲಿ ಸಂಚಾರಾರ್ಥ ಪ್ರಯಾಣ ಬೆಳೆಸುವರು.

ಪೋಸ್ಟ ಖಾತೆಯ ದೇಶಾಭಿಮಾನ-

ವಿಲಾಯತಿಯ ಪೋಸ್ಟ ಖಾತೆಯವರು ಪೋಸ್ಟಿನ ಟಿಕೀಟು ರದ್ದು ಮಾಡುವ ತರಹವು ಬೇರೆಯುಂಟು. ಇಲ್ಲಿಯಂತೆ ಆ ಊರ ಮುದ್ರೆ ಹೊಡೆಯುವದಿಲ್ಲ. ಉದ್ದುದ್ದ ಗೆರೆಗಳನ್ನೆಳೆಯುವರು. ಈ ಗೆರೆಗಳ ಮಧ್ಯದಲ್ಲಿ ಇಂಗ್ಲಂಡದ ಸರಕು ಕೊಳ್ಳಿರಿ. ಅದು ಮೇಲ್ಪರದ್ದಿರುತ್ತದೆಂದು ಬರೆಯಲ್ಪಟ್ಟಿರುತ್ತದೆ. ಸ್ವದೇಶೀ ಸರಕಿಗೆ ಉತ್ತೇಜನ ಕೊಡುವ ವಿಷಯವಾಗಿ ಇಂಗ್ಲಿಷ ಜನರು ಸಾಧ್ಯವು ಶಕ್ಯವಿದ್ದ ಎಲ್ಲ ಪ್ರಯತ್ನ ಮತ್ತು ಉಪಾಯಗಳನ್ನು ಮಾಡುತ್ತಾರೆ. ಇದೇ ಪ್ರಕಾರ ಹಿಂದುಸ್ಥಾನದ ಪೋಸ್ಟ ಖಾತೆಯವರೂ ಮಾಡಬೇಕೆಂಬ ಸೂಚನೆ ಮಾಡಿದ್ದಕ್ಕೆ, ಪೋಸ್ಟ ಖಾತೆಯವರು ಅವಶ್ಯವಿಲ್ಲವೆಂದು ಉತ್ತರ ಕೊಟ್ಟಿದ್ದಾರೆ.

ಗಾಯಕವಾಡರ ಚರಿತ್ರೆ-

ಬಡೋದೆಯ ಶ್ರೀಮಂತ ಸಯಾಜಿರಾವ ಗಾಯಕವಾಡ ಮಹಾರಾಜರು ದೇಶ ಹಿತೈಷಿಗಳೂ ಸ್ವಾತಂತ್ರ್ಯಪ್ರಿಯರೂ ಎಂದು ಹೊಗಳಿಸಿಕೊಳ್ಳುವರು. ಆದರೆ ಅವರ ಇಳಿ ವಯಸ್ಸಿನಲ್ಲಿ ಇದರ ವಿರುದ್ಧ ನೋಟವು ಭಾರತೀಯರ ದೃಷ್ಟಿಗೆ ಬೀಳಲಾರಂಭಿಸಿದೆ. ಪ್ರಜೆಗಳು ಹರತಾಳ ಮಾಡಿ, ಅಂಗಡಿ ಪೇಟೆಗಳನ್ನು ಬಂದು ಮಾಡಿ, ಕರ-ಬಂದಾಯದ ವಿರುದ್ಧ ಚಳವಳಿ ನಡಿಸಿದಾಗ ಮಹಾರಾಜರು ಚಿಂತೆಯಿಂದ ವಿಲಾಯತಿಯ ದಾರೀ ಹಿಡಿದರು. ಇವರಿಗೆ ವಿಲಾಯತಿಯು ಮನೆಯೂ, ಬಡೋದೆಯು ಯಾವಾಗಾದರೊಮ್ಮೆ ನೋಡುವ ಮತ್ತು ಹೋಗಿ ಬರುವ ಸ್ಥಳವೂ ಆಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ೧೬ ತಿಂಗಳು ಮಾತ್ರ ತಮ್ಮ ರಾಜ್ಯದಲ್ಲಿದ್ದರು. ಮತ್ತು ವಿಲಾಯತಿಯ ಬಿಲ್ಲು ಪ್ರವಾಸದ ಬಂದರೆ ಉಗೆಬಂಡಿ, ಉಗಿಹಡಗದ ವೆಚ್ಚ ಒಂದು ಕೋಟಿ ರೂಪಾಯಿಯಾಗಿದೆ. ವಿಲಾಯತಿಯು ಯಾವ ರಾಜರಾದರೂ ಸ್ವರ್ಗೀಯ ವಿಷಯವಾಗಿ ಕಾತ್ಸಾರವುಳ್ಳವರಾಗಿರುವರೇ?

ನಿಜಾಮರ ಖಾದಿಯ ಅಭಿಲಾಷೆ-

ಹೈದರಾಬಾದಿನ ನಿಜಾಮರು ಮಹಾತ್ಮಾ ಗಾಂಧಿ ಅಥವಾ ಮೈಸೂರಿನ ಮಹಾರಾಜರಂಥ ಖಾದಿಯ ಭಕ್ತರಾಗದಿದ್ದರೂ, ಉಡಿಗೆ ತೊಡಿಗೆಯಲ್ಲಿ ಬಹಳ ಸಾದಾ ಇದ್ದಾರೆ. ಬೇರೆ ಜಹಾಗೀರದಾರರು ಇವರ ಅನುಕರಣ ಮಾಡುವದರಿಂದ ಹೈದರಾಬಾದಿನಲ್ಲಿ ಖಾದಿ ಸಂದೇಶಿ ಬಟ್ಟೆಗಳ ವ್ಯಾಪಾರಕ್ಕೆ [illegible] ಹಾರಿವೆ. ನಿಜಾಮ ಸರಕಾರದವರು ತಮ್ಮ ರಾಜ್ಯದಲ್ಲಿ ಹುಟ್ಟುವಂಥ ಖಾದಿಯನ್ನೇ ಧರಿಸುತ್ತಾರೆಂದು ಅವರ ದಸೆಯಿಂದ ಮತ್ತು ಅವರ ಪ್ರೇರಣೆಯಿಂದ ಹೈದರಾಬಾದಿನಲ್ಲಿ ಒಂದು ಖಾದೀ ಪತ್ರಿಕೆಯು ಪ್ರಕಟಿಸಲ್ಪಡುತ್ತದೆ.

ಪ್ರಚಂಡ ಕಾಲುವೆ-

ಪಂಜಾಬದಲ್ಲಿ ಸಟಲಜ ನದಿಗೆ ಹೊಸದಾಗಿ ಒಂದು ಪ್ರಚಂಡ ಕಾಲುವೆಯನ್ನು ಕಡಿದಿದ್ದಾರೆ. ಇದರ ಸೀಳಿನ ಕಾಲುವೆಗಳ ಉದ್ದ ೧೩೦೦ ಮೈಲಾಗಿದೆ. ೩೦ ಕೋಟಿ ರೂಪಾಯಿ ವೆಚ್ಚ ಬಂದಿದೆ. ಈ ಕಾಲುವೆಗಳಿಂದ ಅರಣ್ಯವು ಫಲಿತವಾದ ತೋಟವಾಗುವದು. ಇದನ್ನು ತೆರೆಯುವ ಸಮಾರಂಭಕ್ಕಾಗಿಯೇ ಲಾರ್ಡ ಇರ್ವಿನ ಸಾಹೇಬರು ಲಾಹೋರಿಗೆ ಹೋಗಿದ್ದರು. ಇವರ ಬಗಲಿ ಸರ ಹೇಲಿ ಸಾಹೇಬರು ಈ ಕೆಲಸವನ್ನು ನಿರ್ವಹಿಸಿದರು.

ಕುಮಟೆಯ ರಾ. ಪಾಂಡುರಂಗ ಶ್ರೀನಿವಾಸ ಶ್ಯಾನಭೋಗ ಇವರು ಕುಮಟೆಯ ಸಬ್ ಜಡ್ಜರಾದ ಮಿ. ಜಿ. ಎಚ್. [illegible] ಮುಂತಾದವರ ಮೇಲೆ ಮಾಡಿದ ಮಾನನಷ್ಟದ ದಾವೆಯು ತಿರಸ್ಕರಿಸಲ್ಪಟ್ಟಿದೆ. ವಾದಿ ಕಡೆ ಪುರಾವೆಯು ಅಗ್ರಾಹ್ಯವೆಂದೂ, ಪ್ರತಿವಾದಿಯ ಪುರಾವೆಯು ನಂಬಿಗೆಗೆ ಯೋಗ್ಯವಾದದ್ದೆಂದೂ ಜಡ್ಜರಾದ ಮಿ. ಕಿಂಡರ್ಸ್ಲೇಯವರು ಸಮರ್ಥಿಸಿ, ಖರ್ಚು ಸಹಿತ ವಾದಿಯ ದಾವೆಯನ್ನು ಕಿತ್ತೊಗೆದು ಬಿಟ್ಟಿರುವರು.

ಮೈಸೂರ ವಿಶ್ವವಿದ್ಯಾಲಯದವರು ವಿದ್ಯಾಖಾತೆಯ ಇನ್ಸಪೆಕ್ಟರರಾಗಿ ಪಿಂಚಿನ ಅನುಭವಿಸುತ್ತಿರುವ ಮಿ. ಭಾಷ್ಯಾಚಾರ್ಯರಿಗೆ ವಾಙ್ಮಯ ವಿಶಾರದ ಎಂಬ ಪದವಿ ಕೊಡುವರು.

ಬಗದಾದದಲ್ಲಾದ ಜಲ ಪ್ರಳಯದಿಂದ ಸೂಲ ಮತ್ತು ಕೋಟೆಯು ಹಾನಿಯಾಗಿರುತ್ತದೆ. ಸುಲ್ತಾನರ ಅಂತಃಪುರದ ಸ್ತ್ರೀಯರನ್ನು ನೂರು ಮೈಲಿನ ಮೇಲಿರುವ ಅವರ ಸ್ವಂತ ಆಸ್ತಿಯ ಸ್ಥಳಕ್ಕೆ ಕಳಿಸಿದ್ದು, ಸುಲ್ತಾನರು ಪಟ್ಟಣದಲ್ಲಿಯೇ ಒಂದು ಮನೆಯಲ್ಲಿ ವಾಸವಾಗಿದ್ದಾರೆ.

ಪೇಕಿಂಗ ಪಟ್ಟಣದ ಹತ್ತಿರ ನಡೆದ ಫೌಜುಗಳ ಯುದ್ಧವು ತುಸು ಶಾಂತವಾಗುತ್ತ ಬಂದಿದೆ. ವಿಮಾನಗಳ ಯುದ್ಧವು ಮುಗಿದಿದೆ. ಪ್ರತಿಪಕ್ಷೀಯರು ಚಲ್ಲಿದ ಬಾಂಬುಗಳಿಂದ ೧೨ ಜನರು ಸತ್ತರು ೧೭ ಜನರು ಗಾಯಾಳುವಾಗಿದ್ದಾರೆ.

ಕೌನ್ಸಿಲ ಚುನಾವಣಿ

ಚುನಾವಣೆಯ ಸಂಪೂರ್ಣ ವಿವೇಚನೆಯು.

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನು, ಜಾಹೀರ ಸಂದೇಶಗಳನ್ನು, ಭಾಷಣಗಳನ್ನು ಒಟ್ಟುಕಟ್ಟಾಗಿ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದೆವೆ. ವಿಜಯದ ಪೂರ್ಣ ಚುನಾವಣೆಯನ್ನು ಕುರಿತ ವಿವಿಧ ಲೇಖಗಳೂ, ಆಲೋಚಕ ಲೇಖಗಳು ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು,

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಶಕ್ಯವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಳದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಓಟು ಕೊಡುವ ಕುಶಲ ವಿವೇಕವು ತಮಗೆ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೋರುವರೆಂಬದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬಯಸುವವರು ವಿಜಯವನ್ನು ಸ್ವತಃ ಓದಬೇಕು. ಬರದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿತವೆಂದುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಚಂದಾ ದರಗಳು- ಅಂಚೆ ಸಹಿತ ವರ್ಷಕ್ಕೆ ದಿನ ಪತ್ರಕ್ಕೆ ೧೩-೮-೦. ವಾರ ಪತ್ರಕ್ಕೆ ೩-೧೨-೦

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ ನಿವೇದನವು

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನೂ, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನು ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ ಹೊರ್ತು ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಶಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಶಕ್ಯವಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಮತ ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕೌನ್ಸಿಲ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಅದೇಥ ಕರ್ತೃತ್ವ ಮಾಡುವ ಹಂಬಲ ತೋರುವದೆಂಬದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬರಹ ಬಲ್ಲವರು ವಿಜಯವನ್ನು ಸ್ವತಃ ಓದಬೇಕು. ಬರದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿತವೆಂದು ತಿಳಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ವಂದಾ ನಿರ್ಣಯ- ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಯೋ? ಮಯ್ಯಲ್ಲಿ ನೋಯುತ್ತದೆಯೋ? ಒಳಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮಯ್ಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ತೀರ ಕುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿಕೊಡುವವು.

ವಿಳಾಸ— ನಾರಾಯಣ ಕಂಪನಿ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಬಜ್ಜಿ, ಗಮ್ಮಿಯ ಚಟ್ಟೆ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು- ದಿ ಕರ್ನಾಟಕ ಮೆಡಿಕಲಸ್ಟೋರ್ಸ- ಸ್ಟೇಶನ ರೋಡ ಹುಬ್ಬಳ್ಳಿ ತೋಕ ಮತ್ತು ಕಿರುಕಳದಿಂದ ದೊರೆಯುವದು.

ಎನ. ಎಮ. ಪೆಂಟರ
ಖಡೇಬಝಾರ ಬೆಳಗಾವಿ

ನೋಟೀಸು

ಹಣಮಂತಪ್ಪಾ ಗೋವಿಂದಪ್ಪಾ ಕುಲಕರ್ಣಿ ಸಾ|| ಸಂದಿಕುರಬೇಟ ಜಿಲ್ಲಾ ಬೆಳಗಾವ ಇವರಿಗೆ—

ನೋಟೀಸು ಕೊಡುವ ಲಕ್ಷ್ಮಣ ಮಹಾದೇವಪ್ಪ ಫಡಕೆ ಸಾ|| ಸಂದಿಕುರಬೇಟ ಜಿಲ್ಲಾ ಬೆಳಗಾವ ಇವರು ಈ ನೋಟೀಸಿನ ದ್ವಾರ ನಿಮಗೆ ತಿಳಿಸುವದೇನಂದರೆ- ಈಗ ಎಂಟು ವರುಷದ ಹಿಂದೆ ನಿನಗೆ ಜಮೀನ ಬರಕೊಟ್ಟು ನಾನು ಹದಿನೈದು ನೂರು ರುಪಾಯಿ (೧೫೦೦) ತೆಗೆದುಕೊಂಡಿದ್ದೇನೆ ಈಗ ನಿನಗೆ ಬರಕೊಟ್ಟ ಜಮೀನ ರಾಚಪ್ಪಾ ಹುಣಚ್ಯಾಳ ಸಾ| ಸಂದಿಕುರಬೇಟ ಇವನಿಗೆ ವಿಕ್ರಿ ಮಾಡುತ್ತೇವೆ. ವಿಕ್ರಿ ಮಾಡಿ ನಿನ್ನ ಹಣದ ಬಾಬತ ಹದಿನೈದು ನೂರು ರೂಪಾಯಿ ವ ಅದರ ಬಡ್ಡಿ ಅವನ ಹತ್ತರ ಇಟ್ಟಿರುತ್ತೇವೆ. ಕಾರಣ ನೀನು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ರಾಚಪ್ಪಾ ಹುಣಚ್ಯಾಳ ಇವನ ಹತ್ತರ ಬಂದು ನಿನ್ನ ಅಸಲುವ ಬಡ್ಡಿ ತೆಗೆದುಕೊಂಡು ಹೋಗಬೇಕು ಬರಬಂದು ವಯ್ಯದಿದ್ದರೆ ಮುಂದಿನ ಮಿತಿಗೆ ಆಗುವ ಬಡ್ಡಿಗೆ ನಾವು ಬಾಧ್ಯಸ್ಥರು ಅಲ್ಲ. ಮತ್ತು ಯಾವ ತರದ ಜವಾಬದಾರಿ ನಮ್ಮ ಮೇಲೆ ಇರುವದಿಲ್ಲ. ಅಂತಾ ಕೊಟ್ಟ ನೋಟೀಸು ತಾ|| ೧೫-೪-೨೬ ನೇ ಇಸ್ವಿ

ಸಹಿ- ಲಕ್ಷ್ಮಣ ಮಹಾದೇವ ಫಡಕೆ ಸಾ|| ಸಂದಿಕುರಬೇಟ ಜಿಲ್ಲಾ ಬೆಳಗಾವ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ		
೧೨ ತಿಂಗಳಿಗೆ	೧೨—೮—೦	ರೂ
೬ ,,	೭—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N.-B 1444

ವಿಜಯ

ಸಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಶನಿವಾರ ತಾರೀಖು ೭ನೇ ಎಪ್ರೀಲು ೧೯೨೮ (ಸಂಚಿಕೆ ೮೭

ಸರಕಾರದಿಂದ ಪೇಟಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಹಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಹಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಿದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸು.

ಹಾನಗಲ್ಲ ತಾಲೂಕ ಮಾಮಲೇದಾರ ಸಾ॥ ರವರ ಕಡಿಂದಾ ಯಾವತ್ತು ಜನರಿಗೆ ತಿಳಿಸುವದೇನಂದರೆ—

ಹಾನಗಲ್ಲ ತಾಲೂಕ ಕೂಡಲಗ್ರಾಮದಲ್ಲಿ ಶ್ರೀ ಸಂಗಮೇಶ್ವರ ದೇವರ ಜಾತ್ರಿ ಪರಸಾಲಿಗೆ ಆಗುವಂತೆ ಈ ವರ್ಷವಾದರೂ ೬ಜ ಚೈತ್ರಮಾಸದಲ್ಲಿ ಆಗುವದು. ಆದರೆ ಅದು ಪೂರ್ವದಲಿನಂತೆ ತಿಂಗಳಗಟ್ಲೆ ಆಗುವದಿಲ್ಲ; ಯಾಕಂದರೆ ಮೆ॥ ಡಿ॥ ಮ್ಯಾ॥ ಸಾ॥ ಬಾ॥ ಜಿಲ್ಹಾ॥ ಧಾರವಾಡ ಇವರ ಹುಕುಮ ನಂ, POL 54 ಃ 11 ತಾ. ೧೪-೬-೧೯೨೫ನೇದ್ದರಲ್ಲಿ ಸದರ ಜಾತ್ರೆಯು ಒಂದೇ ಅಠವಡೆದಲ್ಲಿ ಆಗತಕ್ಕದ್ದಂತಾ ಡಿ॥ ಪೊ. ಆಕ್ಟ ಕಲ್ಮ ೪೫ (೧) ಪ್ರಕಾರಕ್ಕೆ ಬರೆದು ಬಂದಿರುವದು. ಆ ಪ್ರಕಾರಕ್ಕೆ ಸದರ ಜಾತ್ರೆಯು ತಾ॥ ೨೭-೪-೨೮ ರಿಂದಾ ತಾ॥ ೬-೫-೨೮ ಸಂಜೆಯ ವರೆಗೆ ನೆರೆಯುವದು. ಮೆ॥ ಡಿ॥ ಮ್ಯಾ॥ ಸಾ॥ ಬಾ॥ ರವರ ಈ ಹುಕುಂ ವಿರುದ್ಧ ವರ್ತಿಸಿದವರ ಮೇಲೆ ಡಿ॥ ಪೊ॥ ಆಕ್ಟ ಕಲ್ಮ ೬೯ ನೇ ಪ್ರಕಾರಕ್ಕೆ ಖಟ್ಲೆ ಮಾಡಲ್ಪಡುವದು. ತಿಳಿಯುವದು. ತಾ॥ ೧೨-೮-೧೯೨೮

Sd/- S. H KOULGI.
Mamlatdar Hangal

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು [illegible]ಲ್ಪಡುವದು. ಕಾಯಂ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ತಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವವರಾವ ಬಿ. ಪಟ್ಟಾಶೆ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ [illegible] ಕನ್ನಡದಲ್ಲಿ ಹಾಕುವದಾದ್ದರೆ [illegible] ಡಬಲ್ ಕಾಲಮಿನ ಓಳಿಗಳಿಗೆ [illegible] ಕೊಡುವವರು [illegible] ವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೭-೪-೨೬ ನೇ ಇಸ್ವಿ

ಚೀನದ ರಾಜಕಾರಣಗಳು.

ಚೀನದ ರಾಜಧಾನಿಯಾದ ಪೇಕಿಂಗ ಪಟ್ಟಣದ ಸೆರೆಯಲ್ಲಿ ತುಮುಲ ಕಾಳಗ ನಡೆದ ವರ್ತಮಾನವನ್ನು, ಪಟ್ಟಣದಲ್ಲಿ ವಿಮಾನಗಳಿಂದ ಬಾಂಬು ಬೀಳುತ್ತಿರುವದನ್ನು ಓದುತ್ತ ಬಂದಿದ್ದೇವೆ. ಈ ಯುದ್ಧವು ಯಾದವ ಕಲಹದಂತೆ ಅವರೊಳಗೇ ನಡೆದದ್ದರಿಂದ, ಪರಕೀಯರು ಕೇವಲ ಪ್ರೇಕ್ಷಕರಾಗಿದ್ದಾರೆ. ಪ್ರೇಕ್ಷಕರಾದರೂ ಸ್ವಾರ್ಥಲಾಭ ಅಹಂಕಾರದ ದೆಸೆಯಿಂದ ಯುದ್ಧ ಸಮಾಪ್ತಿಗೆ ವಿಘ್ನವಾಗಿದ್ದಾರೆ. ಇಲ್ಲವಾದರೆ- ಯುದ್ಧ ಮುಗಿದು ಸಮಾಧಾನ ಹಳಿಯುದಾಗುತ್ತಿತ್ತು. ರಾಜಧಾನಿಯ ಮೇಲೆ ದಂಡೆತ್ತಿ ಬಂದವನು ಚಾಂಗ ಸುಲೀನನು. ದೊರೆತನ ಮಾಡುತ್ತಿದ್ದ ಅಧ್ಯಕ್ಷನು ತೂ-ವೆ-ಫೇನು. ಈತನೂ ಇಷ್ಟಿದ್ದು ಮಂತ್ರಿಗಳೂ ಪರರಾಷ್ಟ್ರದವರು ವಾಸವಾಗಿರುವಂಥ ಟೆಂಟಶೇನ ಬಂದರದಲ್ಲಿ ಪರರಾಷ್ಟ್ರಗಳ ವಕೀಲರ ಆಶ್ರಯವನ್ನು ಪಡೆದುಕೊಂಡಿದ್ದಾರೆ. ಆದರೆ ಅಧಿಕಾರ ಬಿಡಲಿಕ್ಕೆ ಸಿದ್ಧವಿಲ್ಲ. ಮೋಹರು ಮತ್ತು ರಾಜದಂಡವನ್ನು ಹತ್ತರವೇ ಇಟ್ಟುಕೊಂಡಿದ್ದಾರೆ. ವಾಸ್ತವಿಕವಾಗಿ ಪರರಾಷ್ಟ್ರದವರು ಇವರಿಗೆ ಆಶ್ರಯ ಕೊಡತಕ್ಕದ್ದಲ್ಲ. ಈ ಒಂದರವು ಬಾಬೂ ಅರವಿಂದ ಘೋಷರಿಗೆ ಆಶ್ರಯ ಕೊಟ್ಟಂಥ ಫ್ರೇಂಚರ ಫಾಂಡಿಚೇರಿಯಂಥ ವಸಾಹತುವಲ್ಲ. ಅಥವಾ ಜರ್ಮನಿಯ ಪದಚ್ಯುತ ಬಾದಶಹರಿಗೆ ಜೀವದಾನ ಕೊಟ್ಟಂಥ ಸ್ವತಂತ್ರವಾದ ಹಾಲಂಡವಲ್ಲ. ಮುಂಬಯಿಯಲ್ಲಿ ಅನೇಕ ದೇಶಗಳ ವಕೀಲರಿದ್ದಾರೆ. ಅದೇ ಪ್ರಕಾರ ಟೆಂಟಶೇನದಲ್ಲಿರುವರು. ಮುಂಬಯಿಯಲ್ಲಿರುವ ಪರದೇಶದ ಯಾವನೊಬ್ಬ ವಕೀಲ ಅಥವಾ ರಾಜ್ಯಭಾರಿಯು ರಾಜಕೀಯ ಕೈದಿಗೆ ನೆರಳು ಕೊಟ್ಟು ಅದನ್ನು ರಕ್ಷಿಸಿಕೊಳ್ಳಲಾರನು. ಆದರೆ ಇಂಥ ಗಟ್ಟಿಗತನದ ಜವಾಬದಾರಿಯನ್ನು ಹೊರಲು ಟೆಂಟಶೇನದ ವಕೀಲ ರಾಜ್ಯಭಾರಿಗಳಿಗೆ ಬಂದಿದೆ. ಇದಕ್ಕೆ ರಾಜನೀತಿ ಶಾಸ್ತ್ರವು ಕಾರಣವಲ್ಲ; ಚೀನದ ಬಲಹೀನತೆಯೂ, ಇಂಗ್ಲಂಡ, ಜಪಾನ, ಅಮೇರಿಕಾ ಮುಂತಾದ ದೇಶಗಳ ಬಲಿಷ್ಠತನವೂ ಕಾರಣವಾಗಿರುತ್ತದೆ. ಹೊತ್ತು ಎಲ್ಲರಿಗೂ ಸರಿಯಾಗಿರುವದಿಲ್ಲ. ಈ ಮೊದಲು ಇವರು ಪೌಳ್ವಿದ್ವತ್ತಿ ದೌಳತಿಯಿಂದ ಅಗಿದಿದ್ದರೂ, ಪ್ರಸ್ತುತದಲ್ಲಿ ಅದನ್ನೇ ಗಟ್ಟಿಯಾಗಿ ಹಿಡಕೊಳ್ಳುವದು ಕಠಿಣವಾಗಿರುತ್ತದೆ. ಅದಗಿಕೊಂಡ ಅಧ್ಯಕ್ಷ ಮೊದಲಾದವರನ್ನು ಹೊರಗೆ ಹಾಕಬೇಕು. ಅಥವಾ ತಾವೇ ಚೀನ ದೇಶದ ನಿಜವಾದ ಪ್ರಭುಗಳು; ರಾಜ್ಯವಾಳತಕ್ಕವರು ಮಾಂಡಲಿಕರು; ಎಂದು ಸ್ಪಷ್ಟವಾಗಿ ಹೇಳುವ ಸಮಯ ಒದಗಿದೆ. ಪರಕೀಯರ ವ್ಯಾಪಾರ, ಆಡಳಿತೆಯಲ್ಲಿ ಅಂಚು ಪ್ರವೇಶ-ಮುಸಲ ಪ್ರವೇಶ, ಜಗಳಗಂಟತನ ಇವೇ ಮೊದಲಾದ ಕೃತ್ಯಗಳ ದೆಸೆಯಿಂದಲೇ ವಿದ್ಯಾರ್ಥಿ ಮತ್ತು ಕೂಲಿಕಾರರ ಸಂಪು ಮತ್ತು ಬಹಿಷ್ಕಾರದ ಉರಿಯು ಎದ್ದಿದೆ. ಪರಕೀಯರು ಅಧ್ಯಕ್ಷರಿಗೆ ಆಶ್ರಯ ಕೊಟ್ಟರೆ- ಇದನ್ನು ಆರಿಸುವದರ ಬದಲು- ಉರವಲ ಹಾಕಿ ಕಾಡ್ಗಿಚ್ಚು ನಂತೆ ಹಬ್ಬಿಸಿದಂತಾಗುತ್ತದೆ

ಸ್ವರಾಜ್ಯಕ್ಕಾಗಿ ಕ್ಷಣ ಕೂಡ ತಡೆಯುವದಿಲ್ಲ.

ಸ್ವರಾಜ್ಯ ಅಥವಾ ಗಲ್ಲಿನ ಸಿದ್ಧತೆ.

ಮುಂಬಯಿಯಲ್ಲಾದ ರಾಷ್ಟ್ರೀಯ ಸಪ್ತಾಹದಲ್ಲಿ ಮೌಲಾನಾ ಶೌಕತಲ್ಲಿಯವರು ಕೆಳಗೆ ಕೊಟ್ಟಂತೆ ಭಾಷಣ ಮಾಡಿದ್ದಾರೆ

ಸ್ವರಾಜ್ಯ ವಿಷಯವಾಗಿ ಸರಕಾರದ ಧೋರಣವು ಅಸಹಿಷ್ಣುವಾಗಿರುತ್ತದೆ. ಆತ್ಮತ್ಯಾಗದಿಂದಲೇ ಸ್ವರಾಜ್ಯ ದೊರೆಯುವದುಂಟು. ಸ್ವರಾಜ್ಯ ವಿಷಯವಾಗಿ ನಾನು ಈ ನಂತರ ತಡೆದು, ಮಾರ್ಗ ನಿರೀಕ್ಷಣ ಮಾಡತಕ್ಕವನಲ್ಲ. ನಮಗೆ ಈ ಕ್ಷಣವೇ ಸ್ವರಾಜ್ಯಬೇಕಾಗಿದೆ. ಏಕಂದರೆ- ಸರಕಾರದ ಆಡಳಿತೆಯು ಹಿಂದೂ ಮುಸಲಮಾನರ ರಕ್ತದಲ್ಲಿ ವಿಷಭೇದಿಸಿ, ಉಭಯತರ ಸ್ವದೇಶಾಭಿಮಾನವನ್ನೂ ಸಹೋದರಭಾವವನ್ನೂ ಕೊಂದು, ಇಬ್ಬರೂ ಹೊಡದಾಡಿ ಒಬ್ಬರನ್ನೊಬ್ಬರು ಕೊಲ್ಲುವಂತೆ ಮಾಡುತ್ತಿರುವದು, ಗುಲಾಮಗಿರಿ ಮತ್ತು ಪರಕೀಯ ಪ್ರಭುತ್ವಕ್ಕಿಂತ ಘನ ರೋಗವು ಬೇರೊಂದಿರುವದಿಲ್ಲ. ನಾನು ದೇವರಲ್ಲಿ ನಂಬಿಗೆಯುಳ್ಳವನಾಗಿದ್ದೇನೆ. ಆತನ ಆಜ್ಞೆಯಿಂದ ಒಂದೇ ಕ್ಷಣದಲ್ಲಿ ಅದಲು ಬದಲಾಗಿ ಹೋಗುವದು. ಮಹಾ ಯುದ್ಧದಲ್ಲಿ ನಾವು ಒಂದು ದೊಡ್ಡ ಯೋಗವನ್ನು ಕಳಕೊಂಡೆವು. ಆಗ ನಾವು ರಕ್ತ ಸುರಿಸಿದಿವಿ. ಮನುಷ್ಯರನ್ನೂ ದ್ರವ್ಯವನ್ನೂ ಕಳೆದೆವು. ಅದರ ಪ್ರಾಯಶ್ಚಿತ್ತವನ್ನು ಈಗ ಭೋಗಿಸುತ್ತಿದ್ದೇವೆ. ಒಂದು ಕ್ಷಣವನ್ನಾದರೂ ವ್ಯರ್ಥ ಕಳೆಯಬಾರದೆಂದು ನಾನು ಈಗ ನಿಶ್ಚಯಿಸಿದ್ದೇನೆ. ಸ್ವರಾಜ್ಯದ ದೆಸೆಯಿಂದ ತುರಂಗಕ್ಕಾಗಲಿ, ಗಲ್ಲಿಗಾಗಲಿ, ಹೋಗುವದಕ್ಕೆ ಪೂರ್ಣ ಸಿದ್ಧನಾಗಿದ್ದೇನೆ. ಗಲ್ಲಿಗೆ ಹೋಗುವದರಿಂದ ದೇಶ ಹಿತವಾಗುತ್ತದೆಂದು ಕಂಡು ಬಂದರೆ- ಅದಕ್ಕಿಂತ ಶ್ರೇಷ್ಠವಾದ ದೇಶ ಸೇವೆಯು ಇನ್ನೊಂದಿರುವದಿಲ್ಲ. ಇಂಗ್ಲಿಷ ಜನರು ಹಿಂದೂ ಮುಸಲಮಾನರಿಗೆ ಜಗಳ ಹಚ್ಚಿ, ತಾವೊಂದು ಮೂಲೆಯಲ್ಲಿ ಕೂತು ಮೊಸಳೆಯಂತೆ ಕಣ್ಣೀರು ಹಾಕುವರು. ಹಿಂದೂ ಮುಸಲಮಾನರು ತಂತಮ್ಮೊಳಗೆ ಹೊಡೆದಾಡುವದಕ್ಕಿಂತ, ಕುಸು ನೂಲಬೇಕು. ಮತ್ತು ಪರದೇಶದ ಬಟ್ಟೆಗಳನ್ನು ತ್ಯಜಿಸಬೇಕೆಂದು ನಾನು ಹೇಳುತ್ತೇನೆ. ಈ ನಂತರ ಆಗುವ ಚುನಾವಣೆಯು ಸ್ವರಾಜ್ಯ ಪಕ್ಷದ ಸಾಮರ್ಥ್ಯದ ಪರೀಕ್ಷೆಯ ಕಾಲವಾಗಿರುತ್ತದೆ. ಕಾಂಗ್ರೆಸವು ಒಪ್ಪಿದಂಥ ಉಮೇದವಾರರನ್ನು ಆರಿಸಿ ಸ್ವರಾಜ್ಯ ಪಕ್ಷೀಯರನ್ನು ಬಹು ಸಂಖ್ಯೆಯಿಂದ ಕೌನ್ಸಿಲುಗಳಿಗೆ ಕಳಿಸಬೇಕು. ಅನಂತರ ಸರಕಾರಕ್ಕೆ ಸಂಪೂರ್ಣ ಸ್ವರಾಜ್ಯ ಕೊಡಲು ಕೇಳಬೇಕು. ಸರಕಾರವು ಒಪ್ಪದಿದ್ದರೆ- ಸಾರ್ವತ್ರಿಕ ಕಾಯದೆ ಭಂಗವನ್ನು ಪ್ರಾರಂಭಿಸತಕ್ಕದ್ದು. ಹಿಂದೂ ಮುಸಲಮಾನರು ಒಂದಾಗಿ ಉಭಯತರಿಗೂ ಸಮನಾಗಿ ವೈರಿಯಾದ ಸರಕಾರದ ಕೂಡ ಹೋರಾಡುವದಕ್ಕೆ ಕಾಯದೆಭಂಗವೊಂದೇ ಉಪಯುಕ್ತ ಶಸ್ತ್ರವಾಗಿರುತ್ತದೆ.

ಸರ ಕೆ. ವ್ಹಿ. ರಡ್ಡಿಯವರ ಪಾಂಡಿತ್ಯ.

ಕಲಕತ್ತೆಯಲ್ಲಾದ ಹಿಂದೂ ಮುಸಲಮಾನ ದಂಗೆಗೆ ರಾಜ್ಯಕರ್ತರ ಈಗಿನ ಪದ್ಧತಿಯೇ ಕಾರಣವೆಂದು ಮೌಲಾನಾ ಶೌಕತಲ್ಲಿಯವರಂಥ ಧರ್ಮಾಭಿಮಾನಿ ಮುಸಲಮಾನ ಗೃಹಸ್ಥರು ಹೇಳುತ್ತಿರುವಾಗ, ಮದ್ರಾಸದ ಕೆ. ವ್ಹಿ. ರಡ್ಡಿಯವರು ಇದರ ಉಪಶಮನಕ್ಕಾಗಿ ವಿಚಿತ್ರ ವಿಚಾರವನ್ನು ಪ್ರಕಟ ಮಾಡಿದ್ದಾರೆ. ಹಿಂದೂ ಮುಸಲಮಾನರಲ್ಲಿ ಮತ ಸಹಿಷ್ಣುತೆಯುಂಟಾಗಬೇಕಾದರೆ- ಅಕಬರ ಬಾದಶಹನಂತೆ ಮುಸಲಮಾನರ ಕೂಡ ಬೀಗತನ ಪ್ರಾರಂಭಿಸಬೇಕೆಂದು ಇವರ ಹೇಳಿಕೆಯು. ಅಕಬರನು ರಜಪೂತ ಸ್ತ್ರೀಯರನ್ನು ವಿವಾಹ ವಿಧಿಯಿಂದ ಮುಸಲಮಾನರಲ್ಲಿ ಸೇರಿಸಿಕೊಂಡನೇ ಹೊರ್ತು, ತನ್ನ ಸ್ತ್ರೀಯರನ್ನ ಹಿಂದೂ ಜನರಿಗೆ ಮದುವೆ ಮಾಡಿಕೊಡಲಿಲ್ಲ. ಈ ವಿವಾಹಕ್ಕಿಂತಲು ಧರ್ಮ ಸಹಿಷ್ಣುತೆಯಿಂದಲೇ ಆತನ ಕಾಲದಲ್ಲಿ ಹಿಂದೂ ಮುಸಲಮಾನವೆಂಬ ದ್ವೇಷವು ಬೂದಿ ಮುಚ್ಚಿದ ಕೆಂಡವಾಗಿತ್ತು. ಅಕಬರನಂತೆ ಕಲಕತ್ತೆ

ಶ್ರೀ ಉಮೇಶಚಂದ್ರ ಬ್ಯಾನರಜಿಯವರು ಯುರೋಪಿಯನ್ನರ ಕೂಡ ಬೀಗತನ ಮಾಡಿದರು. ಗಂಡು ಮಕ್ಕಳಿಗೆ ಆಂಗ್ಲ ಕುಮಾರಿಯರನ್ನು ತಕ್ಕೊಂಡರು. ರಾಜ್ಯಕಾರಭಾರದಲ್ಲಿ ಸರಿಸಮಾನಸ್ಕಂದರೆನಿಸಬೇಕೆಂಬೇ ಅವರ ಉದ್ದೇಶವಾಗಿತ್ತು. ಆದರೆ ಇದು ರಾಷ್ಟ್ರ ಸಮ್ಮತವಾಗಿರಲಿಲ್ಲ. ಆದರಿಂದ ಫಲಿತಾಂಶವೂ ಕಂಡುಬರಲಿಲ್ಲ. ಅದೇ ಪ್ರಕಾರ ರಾಷ್ಟ್ರ ಸಮ್ಮತವಾಗದಂಥ ಅವಿಚಾರವನ್ನು ಸರ ರೆಡ್ಡಿಯವರು ಹೇಳುತ್ತಿದ್ದಾರೆ. ಇದರಲ್ಲಿಯೇ ಸರಳ ನಂಬಿಗೆಯಿದ್ದರೆ- ತಾವು ಆಡಿದಂತೆ ಮುಸಲಮಾನರ ಕೂಡ ಬೀಗತನ ಪ್ರಾರಂಭ ಮಾಡಿ, ತಾವು ಶರೀರ ಸಂಬಂಧದ ಮಟ್ಟಿಗೆ ೨೦ ನೇ ಶತಮಾನದ ಅಕಬರನ ಪುನರ್ಜನ್ಮವೆಂದು ತೋರಿಸಿದರೇ ಅವರುಕ್ತಿಗೆ ನುಡಿಯಾಗುತ್ತದೆ.

— —

ಬೋರಿಬಂದರದ ಸ್ಟೇಶನ ಮಾಸ್ತರನ ಮೇಲೆ ಫಿರ್ಯಾದಿಯು.

—೦—

ಪ್ರಭುದಾಸ ವಲ್ಲಭದಾಸರೆಂಬವರು ಮುಂಬಯಿಯ ಬೋರಿಬಂದರ ಸ್ಟೇಶನದಲ್ಲಿ ಒಂದು ಕಂಪಾರ್ಟಮೆಂಟನ್ನು ಮುಂದಾಗಿ ರಿಝರ್ವ ಮಾಡಿ, ಪರಿವಾರ ಸಹಿತ ಅದರಲ್ಲಿ ಹೋಗಿ ಕೂತರು. ಮುಂದೆ ಇಬ್ಬರು ಯುರೋಪಿಯನ್ನರಿಗೆ ಆ ಸ್ಥಳ ಬೇಕಾಯಿತು. ಸ್ಟೇಶನ ಮಾಸ್ತರರು, ಟಿಕೀಟ ಕಲೆಕ್ಟರರು ಮತ್ತು ಇಬ್ಬರು ಸಾರ್ಜಂಟರು ಬಂದು ಇವರಿಗೆ ಕೆಳಗೆ ಇಳಿಯ ಹೇಳಿದರು. ಇದು ರಿಝರ್ವ ಕಂಪಾರ್ಟಮೆಂಟ, ಇಳಿಯುವದಿಲ್ಲೆಂದು ಪ್ರಭುದಾಸರು ಹೇಳಲು- ಸ್ಥಳ ಬೇಕಾಗಿದ್ದ ಸಾಹೇಬದ್ವಯರು ಬಲವಂತಿಕೆಯಿಂದ ಒಳಗೆ ಹೊಕ್ಕು ಅವರನ್ನು ದಬ್ಬಿದರು. ಬಳಿಕ ಸ್ಟೇಶನ ಮಾಸ್ತರರೂ ಪೋಲೀಸರೂ ಇವರನ್ನು ಎಳಕೊಂಡು ಹೋಗಿ, ಲಾಕಪ್ಪಿನಲ್ಲಿ ಹಾಕಿ, ದಾಸರಿಗೆ ತಪರಾಕಿ ಕೊಟ್ಟರು. ಮುಂದೆ ಎಷ್ಟೋ ಹೊತ್ತಿನ ನಂತರ ಇವರನ್ನು ರಾತ್ರಿಯಲ್ಲಿ ಬಂಧಮುಕ್ತ ಮಾಡಿದರು. ಈ ಅಪರಾಧದ ದೆಸೆಯಿಂದ ಪ್ರಭುದಾಸರು ಇವರೆಲ್ಲರ ಮೇಲೆ ಫಿರ್ಯಾದಿ ಮಾಡಿದ್ದಾರೆ.

———

ಪ್ರೊಫೇಸರರ ರಾಜೀನಾಮೆ-

ಗುಜರಾಥದ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿದ್ದ ಇಬ್ಬರು ಪ್ರೊಫೇಸರರು ರಾಜೀನಾಮೆ ಕೊಟ್ಟಿದ್ದು ಇನ್ನು ಕೆಲವರು ರಾಜೀನಾಮೆ ಕೊಡತಕ್ಕವರಿದ್ದಾರೆ. ಅಸಹಕಾರದ ಪ್ರಾರಂಭದಲ್ಲಿ ಮಾಡಿದ ಕೆಲವು ನಿಯಮಗಳು ಪರಿಸ್ಥಿತ್ಯನುಸಾರ ಸದ್ಯದಲ್ಲಿ ಅನವಶ್ಯಕವಾಗಿರುವವು. ಈ ಬಗ್ಗೆ ಮಹಾತ್ಮರಿಗೂ ಇವರಿಗೂ ಮತಭೇದವಾಗಿ ರಾಜೀನಾಮೆಗೆ ಕಾರಣವಾಯಿತು. ಮತಭೇದದ ಸಂಗತಿಗಳನ್ನು ಅಂಗೋಪಾಂಗವಾಗಿ ವಿಚಾರ ಮಾಡಲು ಮಹಾತ್ಮರು ಒಂದು ಕಮಿಟಿ ನೇಮಿಸಿದ್ದಾರೆ.

———

ಜಾಲಿಯನವಾಲಾದಂಥ ಅಪಮಾನವೇ-

ದಕ್ಷಿಣ ಆಫ್ರಿಕೆಯಲ್ಲಿ ಹಿಂದೀ ಜನರು ಅನುಭವಿಸುತ್ತಿರುವ ಅನ್ಯಾಯ ಮತ್ತು ತಾಪಗಳು ಜಾಲಿಯನವಾಲಾ ಬಾಗದ ಅನ್ಯಾಯದಂತೆ ಅಪಮಾನಕಾರಕವಾಗಿರುತ್ತವೆ. ಹಿಂದೀ ಜನರು ಅಲ್ಲಿ ಬಂಟತನದಿಂದ ಕಾದುತ್ತಿದ್ದಾರೆ. ಅಪಮಾನವು ಮರಣಕ್ಕಿಂತ ಕೆಟ್ಟ ಇರುತ್ತದೆ. ಯುರೋಪಿಯನ್ನರ ಸಂಗಡ ಹೋರಾಡಲಿಕ್ಕೆ ಮುಖ್ಯವಾಗಿ ದ್ರವ್ಯಬಲ ಬೇಕು. ದ್ರವ್ಯ ಸಹಾಯ ಮಾಡಿರೆಂದು ಮಿ॥ ಅಂಡ್ರ್ಯುಜ ಸಾಹೇಬರು ಹಿಂದುಸ್ಥಾನಕ್ಕೆ ಹೊರಡುವ ಮುಂಚೆ ಹಿಂದೀ ಜನರಿಗೆ ತಾರಿನಿಂದ ತಿಳಿಸಿದ್ದಾರೆ.

———

ಶೀಖರ ಸತ್ಯಾಗ್ರಹ-

ಕಲಕತ್ತೆಯಲ್ಲಿ ದಂಗೆಯಾದ ನಂತರ ಪೋಲೀಸ ಕಮಿಶನರ ಸಾಹೇಬರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿ, ಹಿಂದೀ ಜನರು ಮೆರವಣಿಗೆ ತೆಗೆಯದಂತೆ ಪ್ರತಿಬಂಧ ಮಾಡಿದ್ದಾರೆ. ಈ ಜಾಹೀರನಾಮೆಯು ಅನ್ಯಾಯ ಮತ್ತು ಅಪಮಾನಕಾರಕವಿದ್ದು ಕಾಯದೆ ಭಂಗ ಮಾಡಿ, ತುರಂಗಕ್ಕೆ ಹೋಗಬೇಕೆಂದರು. ಆದರೆ ಗುರುದ್ವಾರ ಕಮೀಟಿಯವರ ಮತ ಕೇಳಿಕೊಂಡು ಆನಂತರ ಕಾಯದೆ ಭಂಗ ಮಾಡಬೇಕೆಂಬದಾಗಿ ನಿರ್ಣಯಿಸಿದ್ದಾರೆ.

———

ಹಿಂದೂ ಜನರ ಕ್ರೋಧ-

ಕಲಕತ್ತೆಯ ದಂಗೆಯ ವೇಳೆಯಲ್ಲಿ ಡಿಪುಟಿ ಕಮಿಶನರರಾದ ಲಾಹಿರಿಯವರು ಒಂದು ಮಸೀದೆಯ ಸಂರಕ್ಷಣೆಯ ಪ್ರಸಂಗದಲ್ಲಿ ಯೋಗ್ಯವಾದ ಕರ್ತವ್ಯ ಮಾಡಲಿಲ್ಲೆಂಬ ಆರೋಪದಿಂದ ಅವರನ್ನು ಸ್ಥಳಾಂತರ ಮಾಡಿದ್ದಾರೆ. ಇವರು ಎಷ್ಟು ಕರ್ತವ್ಯ ಪರಾಙ್ಮುಖರಾಗಲಿಲ್ಲ. ಇವರ ಮೇಲಿನ ಆರೋಪವು ಪೂರಾ ಸುಳ್ಳಿರುತ್ತದೆ. ಇವರ ಹಿಂಬಡತಿಯು ಹಿಂದೂ ಜನರ ಘಾಯದ ಮೇಲೆ ಉಪ್ಪು ಸವರಿದಂತಾಗಿದೆಂದು ಪ್ರಮುಖರ ಸರಕಾರಕ್ಕೆ ಅರ್ಜಿ ಮಾಡಿದ್ದಾರೆ

———

ಮುಸಲಮಾನ ಸ್ತ್ರೀಯರಲ್ಲಿ ಜ್ಞಾನಾರ್ಜನೆ-

ಮುಂಬಯಿ ಮ್ಯುನಸಿಪಾಲಿಟಿಯವರು ಮುಸಲಮಾನ ಸ್ತ್ರೀಯರಲ್ಲಿ ಶಿಕ್ಷಣ ಪ್ರಸಾರ ಮಾಡುವದಕ್ಕಾಗಿ ಮದನಪುರಾ, ಪರೇಳರೋಡ, ನಾಗಪಾಡಾ ಮತ್ತು ಫೂಲಗಲ್ಲಿ ಎಂಬ ನಾಲ್ಕು ಸ್ಥಳಗಳಲ್ಲಿ ಸರಕ್ಯುಲೇಟಿಂಗ ಲಾಯಬ್ರರಿಯ ಪದ್ಧತಿಯಿಂದ ಪುಸ್ತಕಾಲಯ ತೆಗೆದಿದ್ದಾರೆ. ಪೋಣಾ ಸ್ತ್ರೀಯರೇ ವ್ಯವಸ್ಥಾಪಕರಾಗಿದ್ದಾರೆ. ಸ್ತ್ರೀಯರ ಇವರಿಂದ ಪುಸ್ತಕಗಳನ್ನು ತರಿಸಿಕೊಂಡು ಓದಿ, ಜ್ಞಾನಾರ್ಜನೆ ಮಾಡಿಕೊಳ್ಳತಕ್ಕದ್ದು.

———

ವಿವಿಧ ವರ್ತಮಾನಗಳು

—೦—

ಉಡಪಿಯ ಎಂಟು ಮಠದವರೂ ದೇವಾದಾಯ ಧರ್ಮಾದಾಯ ಕಾಯದೆಯ ವಿರುದ್ಧ ತಮ್ಮ ವತಿಯಿಂದ ಕೇಸ ನಡಿಸಲು ಶ್ರೀ ಹೊಸಕೊಪ್ಪದ ಕೃಷ್ಣರಾಯರಿಗೆ ಮುಖತ್ಯಾರ ಪತ್ರ ಕೊಟ್ಟಿದ್ದಾರೆ. ಶ್ರೀ ಎಸ. ಶ್ರೀನಿವಾಸಯ್ಯಂಗಾರರು ಇವರ ವಕೀಲರಾಗಿ ಮದ್ರಾಸ ಹಾಯಕೋರ್ಟಿನಲ್ಲಿ ವಾದಿಸುವರು.

———

ಶ್ರೀ ಬಾಲುಭಾಯಿ ದೇಸಾಯಿಯವರು ಮುಂಬಯಿ ಹಾಯಕೋರ್ಟಿನ ಆಕ್ಟಿಂಗ ಆಡ್ವೋಕೇಟ ಜನರಲರಾಗಿ ನೇಮಿಸಲ್ಪಟ್ಟಿದ್ದಾರೆ.

———

ಮುಂಬಯಿಯ ಗವ್ಹರ್ನರ ಸಾಹೇಬರ ಪತ್ನಿಯವರ ಪ್ರಕೃತಿಯು ಸುಧಾರಿಸುತ್ತಿದ್ದು, ನಾಮದಾರ ಗವ್ಹರ್ನರ ಸಾಹೇಬರು ಮೇ ತಿಂಗಳಲ್ಲಿ ಕರ್ಯಾತಿನ ವೇಳೆಗೆ ಮರಳಿ ಮುಂಬಯಿಗೆ ಬರುವರು.

———

ಕಲಕತ್ತೆಯ ಸಾರ್ಜಂಟ ಸಿಂಪಸನನೆಂಬ ಪೋಲೀಸನು, ಇಜಿಪ್ತದಲ್ಲಿ ಕೆಲಸ ಮಾಡಿ, ಪೋರೆ ತಪ್ಪಿಸಿದ ಒಬ್ಬ ಜರ್ಮನನನ್ನು ಹಿಡಿದುಕೊಟ್ಟ ಬಹಾದ್ದೂರಿಗಾಗಿ, ಇಜಿಪ್ತ ಸರಕಾರದವರು ಈತನಿಗೆ ನೂರು ಪೌಂಡುಗಳ ಇನಾಮು ಕಳಿಸಿದ್ದಾರೆ.

———

ಪಂಡಿತ ಮದನ ಮೋಹನ ಮಾಲವಿಯಾಯವರು ರಾಜಿಯ ಸಂಧಾನದ ಪೂರ್ವ ಪೀಠಿಕೆಯನ್ನು ಸಿದ್ಧಮಾಡಲೋಸುಗ ಲಖನೌಕ್ಕೆ ಹೋಗಿ ಅಲ್ಲಿಂದ ಕಲಕತ್ತೆಗೆ ಪ್ರಯಾಣ ಬೆಳೆಸುವರು.

———

ದಕ್ಷಿಣ ಆಫ್ರಿಕೆಗೆ ಹಿಂದೀ ಜನರ ದುಃಖ ತಾಪಗಳನ್ನು ವಿಚಾರ ಮಾಡುವದಕ್ಕಾಗಿ ಹೋಗಿದ್ದ ಪ್ಯಾಡಿಸನ್ನ ಕಮೀಟಿಯು ಇಂದಿನ ದಿವಸ [illegible] ಹೊರಡುವದು.

ಜಾಹೀರಾತು.

ಕೆಳಗೆ ಸಹಿ ಮಾಡುವವರು ಈ ನೋಟೀಸಿನಿಂದ ತಿಳಿಸುವದೇನಂದರೆ- ಧಾರವಾಡ ಶಹರ ಮ್ಯುನಸಿಪಾಲಿಟಿ ಹದ್ದಿ ಕೆಳಗಿನ ಓಣಿಯಲ್ಲಿ ಇರುವ ಮನಿ ಮ್ಯು.ನಸಿಪಾಲಿಟಿ ನಂಬರ ೧೯೪೯ ಮನಿ ಹಂಚಿಂದು ಸದರಿ ಮನಿ ನನ್ನ ಮಾಲ್ಕಿಯು ಇದ್ದು ಅದನ್ನು ಈಗ ಅಜಮಾಸ ೪ ವರ್ಷದ ಕೆಳಗೆ ನನ್ನ ಮಗಳಾದ ಚೇವಕ್ಕಾ ಈಕೆಗೆ ಬಕ್ಷೀಸ ಕೊಟ್ಟದ್ದು ಆಕೆಯ ಹೆಸರಿಗೆ ಬಕ್ಷೀಸ ಆಗಿರುತ್ತದೆ ಮುಂದೆ ಆ ಕ ಯ ಗಂ ಡ ನ ಹೆ ಸ ರ ಲೆ ಖರೀದಿ ಪತ್ರಾ ಆಗಿ ನೊಂದಣಿ ಆಗಿರುತ್ತದೆ ಖರೀದಿ ಮಾಡಿಕೊಟ್ಟದ್ದು ಸುಳ್ಳು ಪ ಪ್ರೋಕಳ ಇರುತ್ತದ ಅಷ್ಟು ನಿಷೇಬಾಜಿ ಹಾಂಗು ಜಿ ವ್ಯಾಯೋನು ಇರುತ್ತಾನೆ ಆತನು ನನ್ನ ಹೆಂಡರು ಮಕ್ಕಳನ್ನು ಬಿಟ್ಟು ವನಸಿಗೆ ಬಂದಲ್ಲಿ ಇರುತ್ತಾನೆ ಆತನು ಖರೀದಿ ಬರಕೊಟ್ಟರೆ ಸದರಿ ಆಸ್ತಿ ಮೇಲೆ ಖರೀದಿದಾರನದು ಯಾವ ಪ್ರಕಾರದ್ದು ಹಕ್ಕು ನಡಿಯಲಾರದು ಹಾಂಗು ಸದರಿ ಆಸ್ತಿ ಮೇಲೆ ಯಾವ ಪ್ರಕಾರದ್ದು ಬೋಜಾ ಬರಲಾರದು ಸದರಿ ಕಾಗದ ಪತ್ರ ಆಗಲಿಕ್ಕೆ ಕಾರಣ ನನ್ನ ಖಾಸ ಮಗನಾದ ರಾಮಚಂದ್ರ ತಿಪ್ಪಣ್ಣಾ ಹೊಡಗೆ ಇವನು ದಾರುಬಾಜಿ ಕೆಟ್ಟವೆಸನದಲ್ಲಿ ಇರುವದರಿಂದ ಮೇಲೆ ಕಾಣಿಸಿದ ಆಸ್ತಿಯು ಹಾಳು ಮಾಡತಾನೆ ನನ್ನ ಹೆಸರು ಉಳಿಯುವದಿಲ್ಲಾ ಆದಕಾರಣ ನಾನು ಹಿರೆ ಮಗಳಾದ ಚೇವಕ್ಕಾ ಈಕೆಗೆ ಬಕ್ಷೀಸ ಕೊಟ್ಟಿರುತ್ತೇನೆ ಸದರಿ ಆಸ್ತಿಯು ಬಕ್ಷೀಸ ಆದೆ.

ತಾ॥ ೧೬-೪-೧೯೩೬

ಸಹಿ ತಿಪ್ಪಣ್ಣಾ ಅಪ್ಪಾಜಿ ಹೊಡಗೆ ಸಾಕೀನ ಧಾರವಾಡ ಈತನ ಕೈಯು ಆದೆ.

ನೋಟೀಸು

—o—

ಗರಗ ಗ್ರಾಮದಲ್ಲಿರುವ ಸರದಾರ ಟೋನ ಪಠಾಣಸಾಹೇಬ ವಗೈರೆ ಇವರಿಗೆ-

ಕೆಳಗೆ ಸಹೀ ಮಾಡುವ ಬಸಯ್ಯಾ ತಂದಿ ಶಿವಯ್ಯಾ ಹಂಗರಕಿ ಸಾಕೀನ ಗರಗ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ನಿಮ್ಮಲ್ಲಿ ೧೨೫ ರೂಪಾಯಿ ಸಾಲಾ ತಕ್ಕೊಂಡೆನು ಅದಕ್ಕೆ ದರ ತಿಂಗಳಿಗೆ ಎರಡು ಪೈ ಪ್ರಕಾರ ಬಡ್ಡೀ ಕರಾರ ಮಾಡಿ ನಿಮ್ಮ ಖಾತೆದ ವಹಿಯ ಮೇಲೆ ಸಹೀ ಮಾಡಿರುತ್ತೇನೆ ಮತ್ತು ದರ ತಿಂಗಳಿಗೆ ೧೪ ರೂಪಾಯಿಯಂತೆ ನಾಲ್ಕು ತಿಂಗಳು ಕಂತ ಮುಟ್ಟಿಸಿರುತ್ತೇನೆ ಎರಡನೇ ಕಂತ ತಕ್ಕೊಂಡು ಬಂದು, ಅದರ ಬಾಬತು ಮತ್ತು ಹಿಂದಿನ ಕಂತುಗಳ ಬಾ॥ ಒಟ್ಟು ೯೦ ರೂಪಾಯಿಕ್ಕೆ ಪಾವತಿ ಬೇಡಿದರೆ- ಕೊಡಲಿಲ್ಲ ಮತ್ತು ದೈವದವರ ಮುಂದೆ ಹೇಳಿದರೆ- ನಾವೇನು ಒಪ್ಪಂಗಿಯುವರೇ ಎಂದು ಹೇಳಿಕೊಂಡಿರಿ ಆದರೆ ಈಗ ನೀವು ಸದರ ೭೫ ರೂಪಾಯಿ ನಿಮ್ಮ ಪುಸ್ತಕದಲ್ಲಿ ಜಮಾ ಹಚ್ಚಿಕೊಂಡಿಲ್ಲೆಂದು ನಿಮ್ಮ ಬಾಯಿಯಿಂದಲೇ ಹೊರಬಿತ್ತು. ಆದ್ದರಿಂದ ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನಾನು ಕೊಡಬೇಕಾಗಿದ್ದ ಉಳಿದ ರಕಮು ವ ಬಡ್ಡೀ ತಕ್ಕೊಂಡು ಎಲ್ಲಾ ರಕಮು ಮುಟ್ಟಿದ ಬಗ್ಗೆ ಪಾವತಿ ಕೊಡಬೇಕು ಇಲ್ಲವಾದರೆ- ಉಳಿದ ಹಣಾ ಕೋರ್ಟಿನಲ್ಲಿ ಹಾಜರ ಮಾಡುವೆನು ಇದರ ಶಿವಾಯಿ ನೀವು ಧಮಕೀ ವಗೈರೆ ಕೊಟ್ಟು, ಬೇಲಬ್ರು ಅಥವಾ ಅಗಳಿಕ ವಗೈರೆ ಕೃತ್ಯಮಾಡಿದರೆ- ನಿಮ್ಮ ಮೇಲೆ ಕಾಯದೇಶೀರ ಇಲಾಜು ಮಾಡುವೆನು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲುಂಟು ತಿಳಿಯುವದು. ತಾ॥ ೧೫ ಎಪ್ರಿಲ ೧೯೩೬ ನೇ ಇಸವಿ—

ಸಹಿ ಬಸಯ್ಯಾ ಶಿವಯ್ಯಾ ಹಂಗರಕಿ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ಗಲ್ಲಕ್ಕೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮಯ್ಯೆಲ್ಲಾ ನೋಯುತ್ತದೆ.

ಕಂದ— ಜಾಗಾದರೆ ಮೊಮೆಂಟ ಆಯ್ಯಯಲ ಹಚ್ಚಿಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ಶೀಶೆಗೆ ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧಗಳನ್ನು ೩೦ ಮಿ. ಮಾಡಿ ಕೊಡುವೆವು.

ಹೋಲಸೇಲ ಮತ್ತು ರಿಟೇಲ ಕೆಮಿಕಲ ಸಪ್ಲಾಯರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ್ಸ ಮತ್ತು ಡ್ರಗಿಸ್ಟ್ಸ, ಸ್ಟೇಶನ ರೋಡ ಹುಬ್ಬಳ್ಳಿ



ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗಿರುತ್ತದೆ. ಹುಣ್ಣು ಮತ್ತು ಬಿಸಿಹಚ್ಚಿ, ಗರ್ಮಿಯ ಚಟ್ಟೆ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ.

ಮುಖ್ಯ ಏಜಂಟರು- ದಿ ಕರ್ನಾಟಕ ಮೆಡಿಕಲಸ್ಟೋರ್ಸ- ಸ್ಟೇಶನ ರೋಡ ಹುಬ್ಬಳ್ಳಿ ರೋಕ ಮತ್ತು ಕಿರುಕೋಳದಿಂದ ದೊರೆಯುವದು.

ಎನ. ಎಸ. ವೆಂಕಟೇಶ
ಪಾಟೀಲಬಝಾರ ಬೆಳಗಾವಿ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕಟ	೫„
ಲೋ. ಟಿಳಕರ ಚರಿತ್ರ	೪ „
ದೇಶಬಂಧು ದಾಸರ ಚರಿತ್ರ	೩ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ವ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭। ಧಾರವಾಡ ರವಿವಾರ ತಾರೀಖು ೧೮ನೇ ಏಪ್ರೀಲ ೧೯೨೬ (ಸಂಚಿಕೆ ೮೪

ಸರಕಾರದಿಂದ ಪೇಟೆಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗಾರರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೫ ,,	,,	೪೫ ರೂ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿವಿಧ ವರ್ತಮಾನಗಳು

— ೧ —

ಮಿ. ದಳವಿ (ಮರಾಠಾ) ಯವರು ಬೆಳಗಾವ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

— ೨ —

ಮಧುರೆಯಲ್ಲಿ ಹತ್ತು ವರ್ಷದ ಒಂದು ಹುಡಿಗೆಯು ಒಂದು ತೂಕಿನ ವೈರೋಲಿನ ಒಡವೆಗಳನ್ನು ತಕ್ಕೊಂಡು, ಅದನ್ನು ಬಾವಿಯಲ್ಲಿ ಹಾರಿಕೊಂಡಿತು. ಅಲ್ಲಿಯ ಕಲೆಕ್ಟರರು ಇವಳನ್ನು ರಿಫಾರ್ಮೆಟರಿ ಸ್ಕೂಲಿಗೆ ಕಳಿಸುವರು.

—

ಶ್ರೀ ಗಿಡವಾನಿಯವರು ಮುಂಬಯಿಯ ವಿಶ್ವವಿದ್ಯಾಲಯದ ಪರಿಯಿಂದ ಚುನಾವಣೆಯಲ್ಲಿ ಉಮೇದವಾರರಾಗಿ ರ್ಕವಣದ್ವಾರಾ ಶಾಸನ ಕೌನ್ಸಿಲ ಪ್ರವೇಶ ಮಾಡುವದರಿಂದ ಅಸಹಕಾರಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬಾಧೆ ಬರುವದೆಂಬು ಕಂಡು, ಆ ವಿಚಾರವನ್ನು ಹೊರಪಡಿಸಿದರು.

—

ಬೆಳಗಾವಿಯಲ್ಲಿ ಭೋಯಿ ಕುಲದವರಾದ ಕೈಲಾಸವಾಸಿ ರುದ್ರಪ್ಪಾ ಚವ್ಹಾಣ ಇವರ ಸ್ಮರಣೆಗಾಗಿ ಇವರ ಚಿರಂಜೀವರು ಧಾರವಾಡ, ಬೆಳಗಾವಿ ಮತ್ತು ವಿಜಾಪೂರದ ಭೋಯಿಕುಲದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಐದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

—

ರಂಗೂನದ ಒಬ್ಬ ಶ್ರೀಕೃಷ್ಣ ಡಾಕ್ಟರರು ಏಳು ವರ್ಷದ ಬಾಲಗನ ಕಣ್ಣಿನ ಶಸ್ತ್ರಕ್ರಿಯೆಯಲ್ಲಿ ಪ್ರವಾಸ ಮಾಡುತ್ತಿದ್ದಾಗ ... ಬಂದಿಯಿಂದ ... ಗೆ ವಿದ್ದು ...

—

... ವೆಂಕಟೇಶಾಚಾರ್ಯರು ... ಶಾಸ್ತ್ರೀ ... ಬಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಖಾಯಂ ಎರಡು ಲಕ್ಷದ ಮೇಲಿರುವವು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ... ನಡೆಯುವದು. ಖಾಯಿಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

... ಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟ್ಟ ರಾವ ಬಿ. ಜಕಾತಿ,

ಮಾನೆಜಿಂಗ ಡೈರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

— ೦ —

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ

ಎ. ಕೆ. ಕಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೨೮ ೪-೩೪ ನೇ ಇಸ್ವಿ

ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ ಎರಡು ಪಕ್ಷಗಳಾವವು?

ಕೌನ್ಸಿಲ ಮತ್ತು ಅಸೆಂಬ್ಲಿಯ ಚುನಾವಣೆಯಲ್ಲಿ ಈ ನಂತರ ಎರಡೇ ಪಕ್ಷಗಳಾಗುವವೆಂದು ಸಂಯುಕ್ತ ರಾಷ್ಟ್ರೀಯ ಪಕ್ಷದ ಘಟನೆಯನ್ನು ಮಾಡಿಕೊಂಡ ಮಹಾಳ ಧುರೀಣರು ಸಾರುತ್ತಾ ನಡೆದಿದ್ದಾರೆ. ಈ ಸಾರುವಿಕೆಯಲ್ಲಿ ಪಂಡಿತ ಮದನ ಮೋಹನ ಮಾಲವಿಯಾಯವರೂ ಸೇರಿದ್ದನ್ನು ಕಂಡು ಆಶ್ಚರ್ಯವೆನಿಸುತ್ತದೆ. ಪಂಡಿತರು ಇವೆರಡೂ ಪಂಗಡಗಳಲ್ಲಿ ಒಡಂಬಡಿಕೆ ಮಾಡಿಸಿ, ಹಿಂದುಸ್ಥಾನದಲ್ಲಿ ಸರಕಾರವು ಒಂದು ನಿಟ್ಟು, ಪ್ರಜಾಪ್ರತಿನಿಧಿಗಳು ಎರಡನೆಯ ನಿಟ್ಟು, ಎಂದು ತೋರಿಸಬೇಕೆಂಬದಾಗಿ ಕಷ್ಟ ಶಿಷ್ಟಾಯಿ ನಡೆಸಿರುವಾಗ, ಕಾಂಗ್ರೆಸದ ಮೇಲೆ ಹರಿ ಹಾಯ್ದು, ಸಂಯುಕ್ತ ರಾಷ್ಟ್ರೀಯರ ಸ್ತುತಿ ಮಾಡುವದು ಸಖೇದಾಶ್ಚರ್ಯವಾದದ್ದೇ ಸರಿ. ಸಂಯುಕ್ತ ರಾಷ್ಟ್ರೀಯರಲ್ಲಿ ತಂತಮ್ಮ ಮತಿಯಿಂದ ಕಾಂಗ್ರೆಸವನ್ನು ಕೆಣಕುತ್ತಿರುವಂಥ ಎಲ್ಲ ಜನರು ಸಮುದಾಯಿಗಳಾಗಿ ಸೇರಿದ್ದಾರಷ್ಟೇ; ಈ ದುಃಖವು ಸ್ವರಾಜ್ಯ ಪ್ರಾಪ್ತಿಯಂತಿದ್ದು ಉದ್ದೇಶ ಸಫಲವಾದ ಕೂಡಲೆ ಸ್ವಕೀಯರ ಸಾಧನೆಗಾಗಿ ತಮಗೆ ತೋರಿದ ದಾರಿ ಹಿಡಿಯುವರು. ಇದರ ದೃಷ್ಟಾಂತವು ಈಗಾಗಲೇ ತೋರಿದೆ. ಮುಂಬಯಿಯಲ್ಲಿ ಭಾಗವಹಿಸಿಕೊಂಡು ಆ ದಿವ ಸಭೆಗೆ ಬ್ಯಾರಿಸ್ಟರ ಜಾಪ್ಡಿಯವರು ಸಾಹೇಬರೂ ಹೋಗಿದ್ದರು. ಸರ ತೇಜಬಹಾದ್ದೂರ ಸಪ್ರು ಮತ್ತು ಇವರಿಗೆ ಕೆಲವೊಂದು ವ್ಯಕ್ತಿಗಳಲ್ಲಿ ಮತಭೇದವಾಯಿತು. ಅದನ್ನು ಸರಲು ತಿಬ್ಬ್ಯಜಾರಕ್ಕೆ ವಿರುದ್ಧವಾಗಿ ಬೈಲಿಗೆ ತಂದಿದ್ದಾರೆ. ಇವರಿಗೆ ಬ್ಯಾರಿಸ್ಟರ ಸಾಹೇಬರು ಉತ್ತರ ಕೊಟ್ಟು, ಮನಾಳಂ ಅಂತಃಕರಣದಲ್ಲಿ ಎಷ್ಟೇ ಬಂಡವಾಗಿ ಕಿಡಿಗೇಡಿತನವೂ ವಿಷವೂ ಉಂಟೆಂದು ಪ್ರಸಿದ್ಧ ಮಾಡಿದ್ದಾರೆ. ಈ ಸಂಗತಿಯಿಂದ ಮತ್ತು ಸರ ಕೆ. ವಿ. ರಡ್ಡಿಯವರಿಗೆ ಕಾಲಭೇದ ಪ್ರಕಾರ ಚುನಾವಣೆಯ ಸ್ವತಂತ್ರ ಅಧಿಕಾರ ಕೊಡಬೇಕೆಂಬ ವಚನದಿಂದ ಸಂಯುಕ್ತ ರಾಷ್ಟ್ರೀಯ ಸಂಘವೆಂಬದು ಹದಿನೆಂಟು ಮಂದಿ ಹವಾಲ ದಾರರ ಚಾವಡಿಯ ಕವಿಮಟಿ ಎಂದು ಸ್ಪಷ್ಟವಾಗುತ್ತದೆ. ಆದರೂ ಈ ನಂತರ ಆಗುವ ಚುನಾವಣೆಯಲ್ಲಿ ಸಂಯುಕ್ತರು ಒಂದು ಬಣ, ರಾಷ್ಟ್ರೀಯ ಸಭೆಯು ಎರಡನೇ ಬಣವೆಂದು ಹೇಳಿಕೊಳ್ಳುವರು. ಈ ಪ್ರಕಾರ ಅತ್ಮಸ್ತುತಿಯು ನೇಚ್ಚಿನಲ್ಲಿರುವಾಗ ನಾವು ಕಾಂಗ್ರೆಸದ ದ್ವೇಷ ಮಾಡುವದಿಲ್ಲ; ಕಾಂಗ್ರೆಸವನ್ನು ಜರಿಯುವದಿಲ್ಲ. ಆದರೆ ಹಿತೈಷಿಗಳೇ ಎಂದು ತುದಿನಾಲಿಗೆಯಿಂದ ಅನ್ನುತ್ತಿದ್ದಾರೆ. ಕಾಂಗ್ರೆಸದ ದ್ವೇಷವೆಂದರೇನು? ಅದರ ಪ್ರತಿನಿಧಿಗಳು ಚುನಾವಣೆಯು ಆರಿಸಲ್ಪಡಬಾರದೆಂಬ ದುರಾಗ್ರಹವು ಕಾಂಗ್ರೆಸದ ದ್ವೇಷವಲ್ಲವೇ? ಕಾಂಗ್ರೆಸದ ವಿರುದ್ಧ ಸಡ್ಡು ಹೊಡೆದು ನಿಂತು, ಚುನಾವಣೆಯಲ್ಲಿ ಯಶ ಸಂಪಾದನೆ ಮಾಡುವೆವೆಂದು ಬಾರಿಸ ರ ಜಿನ್ನಾಸಾಹೇಬರು ಪಂಡಿತರ ಸಭೆಯ ಮರು ದಿವಸವೇ ಗೆಯಟಿ ಥಿಯೇಟರದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಸಾರಿ ಸಾರಿ ಹೇಳಿದ್ದಾರಲ್ಲ! ಇವರಂತೆ ಚುನಾವಣೆಯಾದರೂ ರಾಜ್ಯಕಾರಭಾರದಲ್ಲಿ ಮೂರು ಪಕ್ಷಗಳಾಗುವವು. ೧ ಸರಕಾರ ೨ ಸಂಯುಕ್ತ ರಾಷ್ಟ್ರೀಯ ಪಕ್ಷ ೩ ಸ್ವರಾಜ್ಯ ಪಕ್ಷ. ಸ್ವರಾಜ್ಯ ಪಕ್ಷದವರ ಉದ್ದೇಶವು ಬಹುಮತ ಮಾಡಿಕೊಳ್ಳುವದುಂಟು. ಇದು ಸಫಲವಾಗದಿದ್ದರೆ ಅವರು ನಾಗಪೂರದಂಥ ಸತ್ಯಾಗ್ರಹ ಮತ್ತು ಕಾಯದೆಭಂಗವನ್ನು ಪ್ರಾರಂಭಿಸುವರು. ಕೊನೆಯಲ್ಲಿ ಸರಕಾರವು ಸೋಲು ಒಪ್ಪುವದು. ಆಗ ಕಾಯದೆಭಂಗವನ್ನು ಜರಿಯುವ ಸಂಯುಕ್ತರ ಘಜೀತಿಯಾಗುವದು ನಿಶ್ಚಯ. ಮರಾಳರು ಹೇಳುವಂತೆ ಅಳಪಕ್ಷಿಯು ಎಂದು ಪಕ್ಷಗಳಾಗಡೆ- ಕಾಂಗ್ರೆಸ ಸಭೆಯು ಸಾರುವಂತೆ ಸರಕಾರ ಮತ್ತು ಸ್ವರಾಜ್ಯವೆಂಬೆರಡೇ ಪಕ್ಷಗಳಾಗುವವು.

ತುರ್ಕಸ್ಥಾನದ ಮೇಲೆ ಇಟಲಿಯ ಯುದ್ಧದ ಸಿದ್ಧತೆ.

—೦—

ಗ್ರೀಸ ಮತ್ತು ಇಟಲಿಯ ಸಂಗನಮತ.

—೦—

ಇಟಲಿಯ ಮಂತ್ರಿಯಾದ ಮುಸೊಲೋನಿಸಾಹೇಬರು ಗುಂಡಿನ ಗಂಡಾಂತರದಿಂದ ಪಾರಾದ ಬಳಿಕ ಗೆಡುಗಲಿಯಂತೆ ತ್ರಿಪೋಲಿಯ ಪ್ರವಾಸಕ್ಕೆ ಹೊರಟರು. ಈ ದೇಶವು ಮೊದಲು ತುರಕರಿಗೆ ಸೇರಿತ್ತು. ಯುದ್ಧ ಮಾಡಿ, ತುರಕರಿಂದ ಗೆದ್ದು ಆ ಕಾನೂನು ಇಟಲಿ ಇರುವದು. ಇದರಲ್ಲಿ ಕ್ರಿಶ್ಚನ ರಾಷ್ಟ್ರವಾಗಿ ತಮ್ಮಂತೆ ಮುಂಚೆ ಬಲದಿಂದ ರಾಜ್ಯವಾಳುತ್ತಿದ್ದ ಗ್ರೀಸವು ತುರಕರಿಗೆ ಸೋತದ್ದು, ಇಟಲಿಯ ಎದೆಯ ಮೇಲೆ ಕೆಚ್ಚು ಇಟ್ಟಂತಾಗಿರುತ್ತದೆ. ತುರಕರ ಕೂಡ ಯುದ್ಧ ಮಾಡುವದು ಗ್ರೀಸದ ಯೋಗ್ಯತೆಯಲ್ಲ. ಗ್ರೀಸಕ್ಕೆ ಸಹಾಯವಾಯಿತು; ತುರಕರನ್ನು ಸೋಲಿಸಿ ಇಟಲಿಗಾಗಿ ತುರುಕರ ಯಾವದೊಂದು ಪ್ರಾಂತವನ್ನು ಗೆದ್ದಂತಾಯಿತು; ಎಂಬ ದೂರ ದೃಷ್ಟಿಯಿಂದ ತುರ್ಕಸ್ಥಾನದ ಕೂಡ ಯುದ್ಧ ಹೂಡಲು ಪೂರ್ವ ಸಿದ್ಧತೆ ಮಾಡಿ, ತ್ರಿಪೋಲಿಯನ್ನು ಭೂಜಲ ಸೇನೆಗಳ ಪಾಳಯ ಮಾಡುವದರ ದೆಸೆಯಿಂದಲೇ ಅಲ್ಲಿಗೆ ಇವರ ಪ್ರಯಾಣದ ಅಂತರಂಗದ ಉದ್ದೇಶವಾಗಿರುತ್ತದೆಂದು ರಾಜಕಾರಣದಲ್ಲಿ ನುರಿತ ಪಾಶ್ಚಿಮಾತ್ಯರ ಪತ್ರಗಳು ಅಂದಿರುತ್ತವೆ. ಇಲ್ಲವಾದರೆ ಗುಂಡು ಒಡಸಿಕೊಂಡ ಎರಡು ಮೂರು ದಿವಸಗಳಲ್ಲಿಯೇ ಪ್ರಧಾನರು ಟ್ರಿಪೋಲಿಯ ಪ್ರವಾಸಕ್ಕೆ ಹೊರಡುತ್ತಿದ್ದಿಲ್ಲ. ತುರ್ಕಸ್ಥಾನವು ರಾಷ್ಟ್ರಸಂಘದಲ್ಲಿಂದ್ದರಿಂದ, ಅದನ್ನು ಕೆಣಕಲು ಬೇಕಾದವರಿಗೆ ಅನಿರ್ಬಂಧವುಂಟು. ತುರ್ಕಸ್ಥಾನವನ್ನು ಯಾರೇ ಕೊಳ್ಳಸ್ಥಾನಕ್ಕೆ ಸಾಹಸ; ಅದರಿಂದ ಪಾಶ್ಚಿಮಾತ್ಯರಿಗೆಲ್ಲ ಆನಂದವಾಗುತ್ತದೆ.

ಗುರುವಿನ ತಪ್ಪಿಗಾಗಿ ಶಿಷ್ಯನಿಗೆ ಶಿಕ್ಷೆ.

—೦—

ತ್ರಾವಣಕೋರದಲ್ಲಿ ರಾಜಪಿಂಡೆಯರು ಪ್ರವಾಸ ಮಾಡುವಾಗ ಅವರು ಹೋಗುವ ಸ್ಥಳದವರೆಗೂ ಅಸ್ಪೃಶ್ಯರು ದಾರಿಯಲ್ಲಿ ಓಡಾಡದಂತೆ ಬಂದೋಬಸ್ತು ಮಾಡುವ ಪದ್ಧತಿಯುಂಟು. ಮಹಾರಾಣಿ ರೀಜಂಟರವರು ಗಿರ್ಯಾರೋಹಣಕ್ಕೆ ಹೋಗುವಾಗ ಪೋಲೀಸರು ದಾರೀ ಬಂದು ಮಾಡಿದರು. ಆರ್ಯ ಧರ್ಮ ಸಂಯೋಗದಿಂದ ಇಜುಲಾ ಜನರ ಗುರುಗಳಾದ ನಾರಾಯಣಸ್ವಾಮಿಯವರು ಮೋಟಾರದಲ್ಲಿ ಬಂದರು. ಪೋಲೀಸರ ಪ್ರತಿಬಂಧದ ಹುಕುಮನ್ನು ಮನ್ನಿಸದೆ ಧೈರ್ಯದಿಂದ ಮೋಟಾರ ಬಿಟ್ಟರು. ಪೋಲೀಸ ಹುಕುಮು ಅವಮಾನ್ಯ ಮಾಡಿದ್ದಕ್ಕಾಗಿ ಗುರುವಿನ ಮೇಲೂ, ಅವಿಚಾರ ಮತ್ತು ಅಲಕ್ಷ್ಯದಿಂದ ಮೋಟಾರ ನಡಿಸಿದ ಬಗ್ಗೆ ಡ್ರೈವರನ ಮೇಲೂ ಪೋಲೀಸರು ಖಟ್ಲೆ ಹಾಕಿದರು. ಗುರುವಿನ ಮೇಲೆ ಫೌಜದಾರಿ ಪ್ರಕರಣ ಬಂದುದಕ್ಕಾಗಿ ಶಿಷ್ಯರಲ್ಲಿ ಚಳವಳಿಯಾಯಿತು. ಪ್ರಮುಖ ಜನರು ಪೋಲೀಸ ಕಮಿಶನರರನ್ನು ಕಾಣಲಿಕ್ಕೆ ಹೋದರು. ಉಭಯತರ ವಿಚಾರದಿಂದ ಸಾಹೇಬರು ಗುರುವಿನ ಮೇಲಿನ ಫಿರ್ಯಾದಿ ತೆಗೆದುಕೊಂಡರು. ಡ್ರೈವರನಿಗೆ ಒಂದೊಂದು ಆರೋಪಕ್ಕಾಗಿ ಒಂದೊಂದು ರೂಪಾಯಿ ದಂಡ ವಿಧಿಸಿದರು. ॥

ಮೈಸೂರ ವಿಶ್ವವಿದ್ಯಾಲಯದವರು ಸರ ವಿಶ್ವೇಶ್ವರಯ್ಯನವರಿಗೆ ಶಿಲ್ಪಕಲಾ ಪಾರಂಗತನೆಂಬ ಪದವಿ ಕೊಡುವರು.

ಪಾರ್ಲಮೆಂಟದ ೧೩ ಜನ ಮೆಂಬರರಿಗೆ ಸಸ್ಪೆಂಡು.

—೦—

ಒಂದು ತಿಂಗಳ ಹಿಂದೆ ಫ್ರಾನ್ಸದ ಪಾರ್ಲಮೆಂಟ ಸಭೆಯಲ್ಲಿ ಕೂಲಿಕಾರ ಪಕ್ಷದ ಮೆಂಬರರು ಹಾಡುತ್ತಾ ಕುಣಿಯುತ್ತಾ, ಗಲಭೆ ಮಾಡಿ, ಪಾರ್ಲಮೆಂಟದ ಕೆಲಸಕ್ಕೆ ವಿಘ್ನ ತಂದಿದ್ದರು. ವಾಚಕಮಾತ್ರರಲ್ಲಿ ಹೆಚ್ಚು ಸುಧಾರಿಸಿದವರಾದ ಇಂಗ್ಲೀಷ ಕೂಲಿಕಾರರಲ್ಲಿ ಸ್ವತಂತ್ರ ಪಕ್ಷೀಯರಾದ ಮೆಕ್ಸ್ಟನ್, ವ್ಹೀಟಲೆ ಮೊದಲಾದ ೧೩ ಜನರು ಎಕಾನಮಿಸ ಬಿಲ್ಲಿನ ವಿಚಾರಣೆಯು ಮುಂದೆ ಬೀಳಬೇಕೆಂಬ ವಿಚಾರದಿಂದ, ಅದಕ್ಕೆ ಅದಷ್ಟು ವಿಘ್ನ ತರತೊಡಗಿದರು. ಇವರು ಬಿಲ್ಲಿಗೆ ಸಮ್ಮತಿ ಕೊಡಲು ಹೋಟು ಹಾಕುವಂಥ ಸ್ಥಳಗಳಲ್ಲಿ ಕೂತು, ಹಾಡುವದನ್ನು ಕುಚೇಷ್ಟೆ ಮಾಡುವದನ್ನು ನಡಿಸಿದರು. ಇದರಿಂದ ಕೆಲಸ ಸಾಗದಾಯಿತು. ಪಾರ್ಲಮೆಂಟದ ಕೆಲಸವು ರಾತ್ರಿಯಲ್ಲಿ ನಡೆಯುತ್ತದೆ. ಸ್ಪೀಕರರೆಂಬ ಮುಖ್ಯ ಅಧ್ಯಕ್ಷರು ತಮ್ಮ ಕೋಣೆಯಲ್ಲಿ ಮಲಗಿದ್ದರು. ಇವರನ್ನು ಎಬ್ಬಿಸಿಕೊಂಡು ಬಂದು, ನಡೆದ ವಿದ್ಯಮಾನವನ್ನು ಅರುಹಿದರು. ಇವರು ೧೩ ಜನರನ್ನು ಸಸ್ಪೆಂಡ ಮಾಡಿದಂತೆ ಸಾರಲು, ಕೂಲಿಕಾರ ಮೆಂಬರರೆಲ್ಲರು ಅಕಾಂಡತಾಂಡವ ಮಾಡಿದರು. ಅರ್ಧ ತಾಸಿನ ವೇಳೆ ಉಳಿದವರು ಪುನಃ ಘನಗರ್ಜನೆ ಮಾಡಿ, ಕೆಲಸಕ್ಕೆ ಅಡ್ಡಿ ಮಾಡಿದರು. ಅಧ್ಯಕ್ಷರು ಮುಖ್ಯ ಪ್ರಧಾನರ ಕೂಡ ವಿಚಾರ ಮಾಡಿ, ಈ ಬಗ್ಗೆ ಕಡುತರ ಮತ್ತು ಕಟುತರ ಉಪಾಯ ಕೈಕೊಳ್ಳತಕ್ಕವರಿದ್ದಾರೆ.

—

ಮೈಸೂರ ಕೌನ್ಸಿಲ ಸುಧಾರಣೆ-

೧೯೨೩ನೆಯ ಇಸವಿಯಲ್ಲಿ ಮೈಸೂರ ದರಬಾರದಿಂದ ದೊರೆತ ಸುಧಾರಣೆಯು ಹಕ್ಕು ಮತ್ತು ಅಧಿಕಾರಗಳು ಹಿಂದುಸ್ಥಾನದ ಸುಧಾರಣೆಯಂತೆ ಅಪೂರ್ಣವಾಗಿರುತ್ತವೆ. ಆದುದರಿಂದ ಈ ಸುಧಾರಣೆಗಳ ಪುನರ್ವಿಚಾರಣೆ ಮಾಡಬೇಕು; ಕಾಯದೆ ಮತ್ತು ಹಣದ ಮಂಜೂರಿಯ ವಿಷಯವಾಗಿ ಹೆಚ್ಚು ಅಧಿಕಾರ ಕೊಟ್ಟು, ದಿವಾನ ಮತ್ತು ಕೌನ್ಸಿಲರ ಆಡಳಿತೆಯ ಮೇಲ್ವಿಚಾರಣೆಯಲ್ಲಿ ಅಸೆಂಬ್ಲಿಗೆ ಅಧಿಕಾರವಿರಬೇಕೆಂಬದಾಗಿ ಒದಗುವ ಅಸೆಂಬ್ಲಿಯಲ್ಲಿ ಠರಾವು ತರುವಂತೆ ಚಿಕ್ಕಮಗಳೂರ ಜಿಲ್ಹೆಯ ಸಭೆಯಲ್ಲಿ ಠರಾವು ಪಾಸಾಗಿರುತ್ತದೆ. ಇದೇ ಪ್ರಕಾರ ಪ್ರತಿಯೊಂದು ಜಿಲ್ಹೆಯವರೂ ತಂತಮ್ಮ ಮೆಂಬರರನ್ನು ಎಚ್ಚರಿಸುವದು ಅವಶ್ಯಕ.

ಕುಲಭೇದದ ಪ್ರಕಾರ ಚುನಾವಣೆಯು-

ಸರ ಕೆ. ವ್ಹಿ. ರಡ್ಡಿಯವರು ಮುಂಬಯಿಯ ಸಂಯುಕ್ತ ರಾಷ್ಟ್ರೀಯ ಸಭೆಗೆ ಹೋಗಿದ್ದರಷ್ಟೇ; ಇವರಿಗೆ ಲಿಬರಲರೆಂಬ ಉದಾರರು ಉದಾರಾಂತಃಕರಣದಿಂದ ಕುಲಭೇದದ ಪ್ರಕಾರ ಸ್ವತಂತ್ರವಾದ ಚುನಾವಣೆಯ ಅಧಿಕಾರ ಸಂಪಾದನೆಗಾಗಿ ಬೇಕಾದಷ್ಟು ಚಳವಳಿ ಮಾಡಿಕೊಂಡು, ತಮ್ಮೊಳಗೆ ಸೇರಿರೆಂದು ಆಶ್ವಾಸನ ಕೊಟ್ಟಿದ್ದಾರೆಂಬ [illegible] ಹೊರಬಿದ್ದದೆ. ಹಿಂದೂ ಮುಸಲಮಾನರಲ್ಲಿ ಸಹ ಸ್ವತಂತ್ರ ಚುನಾವಣೆ ಇರಬಾರದೆಂದು ಹೇಳುತ್ತಿರುವಾಗ ಹಿಂದೂ ಜನರಲ್ಲಿಯೇ ಬೇರೆ ಬೇರೆ ಕುಲಗಳ ಸ್ವತಂತ್ರ ಚುನಾವಣೆ ಇರಬೇಕೆಂದು ಉತ್ತೇಜನ ಕೊಡುವ ಮವಾಳರು ಧನ್ಯರೇ ಸರಿ.

—

ಸರ ಮುಳೀಕರ ವಿಚಾರ-

ಕಲಕತ್ತೆಯ ಸರ ಮುಳೀಕರು ಸ್ಟೇಟ ಸೇಕ್ರೆಟರಿಯವರ ಕೌನ್ಸಿಲದ ಮೆಂಬರರಾಗಿ ಹೋಗುವರು. ಹಿಂದುಸ್ಥಾನದ ಮತವನ್ನು ಸ್ಟೇಟ ಸೇಕ್ರೆಟರಿಯವರ ಮುಂದೆ ಹೇಳಬೇಕಾಗುತ್ತದೆ. ಆದ್ದರಿಂದ ನಿಮ್ಮ ನಿಮ್ಮ ಮತ ಹೇಳಿರೆಂದು ಕಲಕತ್ತೆಯ ಹಿಂದೂ ಮುಸಲಮಾನ ಪ್ರಮುಖರನ್ನು ಕರೆಸಿದ್ದರು. ಈ ಸಮಯದಲ್ಲಿ ಇವರು ಎರಡೂ ಜನಾಂಗಗಳ ಮುಂದೆ ಜಾತಿಭೇದದ ಪ್ರಕಾರ ಆಗುವ ಚುನಾವಣೆಯಿಂದ ಪರಸ್ಪರ ಸಂಬಂಧವು ದೂರಾಗುತ್ತಾ ಸಹಾನುಭೂತಿಯು ಕಡಿಮೆಯಾಗುತ್ತದೆಂದ ಅಭಿಪ್ರಾಯ ಹೇಳಿದ್ದಾರೆ. ಸರ ಕೆ. ವ್ಹಿ. ರಡ್ಡಿಯವರು ತಿಳಿದು ನೋಡುವಂಥ ವಿಷಯವು.

—

ಕನೋಜ ಬ್ರಾಹ್ಮಣರು ಮತ್ತು ದಂಡು-

ಕಾನಕುಬ್ಜ ಬ್ರಾಹ್ಮಣರು ಈ ವರೆಗೆ ದಂಡಿನಲ್ಲಿ ಸೇರುತ್ತಾ ಬಂದಿದ್ದಾರೆ. ಇವರ ದಂಡಿಗೆ ಬ್ರಾಹ್ಮಣರ ಸೇನೆಯ ಪಲಟಣವೆಂಬ ಹೆಸರು. ಹಿಂದುಸ್ಥಾನ ಸರಕಾರದವರು ಈಗ ಈ ಪಲಟಣವನ್ನು ಮುರಿಯಬೇಕೆಂದಿದ್ದಾರೆ. ಈ ಬಗ್ಗೆ ಲಾರ್ಡ ಆಯರ್ವಿನ ಮತ್ತು ಸೇನಾಧಿಪತಿ ಲಾರ್ಡ ಬರ್ಡವುಡ್ಡ ಸಾಹೇಬರ ಕಡೆಗೆ ಡೆಪ್ಯುಟೇಶನ ಕಳಿಸುವರು. ಇದರಲ್ಲಿ ನ್ಯಾಯಮೂರ್ತಿ ಗೋಕರನಾಥ ಮಿಶ್ರ, ರಾಯಬಹಾದ್ದೂರ ಮೇಜರ ರಾಮಪ್ರಸಾದ ದುಬೆ, ಪಂಡಿತ ರಾಮಬಿಹಾರಿ ಮಿಶ್ರ, ಮತ್ತು ಸುಭೇದಾರ ಮೇಜರ ಗೌರೀಶಂಕರದೀಕ್ಷಿತರು ಪ್ರಮುಖ ಮೆಂಬರರಾಗಿದ್ದಾರೆ.

—

ನಾಡಗುಡಿಯ ಮೆರವಣಿಗೆ-

ಕಾನ್ಪೂರಿನಲ್ಲಿ ರಾಷ್ಟ್ರೀಯ ಸಪ್ತಾಹದ ವೇಳೆಯಲ್ಲಿ ಖಾದಿಯ ಪ್ರಸಾರವಾಯಿತು. ಸ್ವರಾಜ್ಯಪಕ್ಷೀಯರಿಗೆ ಚುನಾವಣೆಯಲ್ಲಿ ಹೋಟು ಕೊಡಬೇಕೆಂಬ ಠರಾವು ಪಾಸಾಯಿತು. ಮತ್ತು ಊರಲ್ಲಿಯೂ, ಯುರೋಪಿಯನ್ನರು ವಾಸವಾಗಿರುವ ಬೀದಿಗಳಲ್ಲಿಯೂ ನಾಡಗುಡಿಯ ಮೆರವಣಿಗೆಯಾಯಿತು. ಯಾರೂ ಇದಕ್ಕೆ ವಿಘ್ನ ತರಲಿಲ್ಲ. ಹಿಂದೆ ಇದಕ್ಕಾಗಿಯೇ ಸಾವಿರಾರು ಜನರು ತುರಂಗ ಕಂಡರು. ಇದೇ ಪ್ರಕಾರ ಸತ್ಯಾಗ್ರಹ ಮತ್ತು ಕಾಯದೆಭಂಗದಿಂದ ಬೇಕಾದಂಥ ಜಯವು ಗೆಲಿಯಬಹುದು.

—

ಮದ್ಯಪಾನಕ್ಕೆ ನಿರ್ಬಂಧ-

ಪುದುಕೋಟೆ ಸಂಸ್ಥಾನದವರು ಮದ್ಯಪಾನಕ್ಕೆ ಪುಷ್ಕಳವಾಗಿ ಬಿಗಿ ಹಾಕಿದ್ದಾರೆ. ಹೆಂಗಸರಿಗೆ ಸರೆ ಮಾರಬಾರದು. ೧೮ ವರ್ಷದೊಳಗಿನ ಹುಡುಗರಿಗೆ ಕೊಡಬಾರದು, ಅಂಗಡಿಗಳನ್ನು ಮುಂಜಾನೆ ಹತ್ತಕ್ಕೆ ಪ್ರಾರಂಭ ಮಾಡಿ, ಸಾಯಂಕಾಲದ ಆರಕ್ಕೆ ಬಂದು ಮಾಡಲಿಕ್ಕೇಬೇಕು. ಈ ನಿಯಮದ ವಿರುದ್ಧ ನಡೆಯುವ ಗುತ್ತಿಗೆದಾರರಿಗೆ ೫೦ ರೂಪಾಯಿ ದಂಡ ಮಾಡುವದಲ್ಲದೆ, ಅವರ ಕಾರಣದ ಹಣವು ಜಪ್ತ ಮಾಡಲ್ಪಡುವದೆಂದು ದರಬಾರಿನವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

—

ಶ್ರೀ ಶಿರಸಂಗೀಕರರ ಶಿಲಾಮೂರ್ತಿ-

ಕರ್ನಾಟಕ ಸಂಭೂತರೆಂದೆನಿಸಿಕೊಂಡು ವೀರಶೈವ ಜನಾಂಗದ ಉನ್ನತಿಗೆ ಅಭೂತಪೂರ್ವ ಸಹಾಯ ಮಾಡಿದಂಥ ಕೈ. ಶಿರಸಂಗಿ ದೇಸಾಯರ ಒಂದು ಭವ್ಯವಾದ ಶಿಲಾಮೂರ್ತಿಯನ್ನು ಮಾಡಿಸಬೇಕೆಂಬ ವಿಚಾರವು ವೀರಶೈವ ಪ್ರಮುಖರಲ್ಲಿ ತಲೆದೋರಿದೆ. ಇದಕ್ಕೆ ಹತ್ತು ಸಾವಿರ ರೂಪಾಯಿಗಳ ವೆಚ್ಚ ಬೀಳುವದು. ವರ್ಗಣಿಯಿಂದಲೇ ಕೂಡಿಸುವರು. ಪ್ರತಿಯೊಬ್ಬ ವೀರಶೈವ ಗೃಹಸ್ಥರು ಶಕ್ತ್ಯನುಸಾರ ಫಂಡು ಕೊಟ್ಟು, ಈ ಸ್ಮಾರಕ ಕಾರ್ಯವನ್ನು ಪೂರ್ಣಗೊಳಿಸುವದು ಅವಶ್ಯವಾದ ಕರ್ತವ್ಯ ಕರ್ಮವಾಗಿರುತ್ತದೆ.

—

ಧಾರವಾಡ-

ಈ ವಾರದಲ್ಲಿ ಮೋಡ ಹಾಕುತ್ತಿರುವದು. ಅದರಿಂದ ರಾತ್ರಿಯಲ್ಲಿ ಬೀಳುತ್ತಿದ್ದ ಚಳಿಯ ರಭಸವು ಹಿಮ್ಮೆಟ್ಟಿದೆ.

—

ನಾಳೆಯಿಂದ ಇಲ್ಲಿ ಮ್ಯಾಟ್ರಿಕ್ಯುಲೇಶನ ಮತ್ತು ಸ್ಕೂಲ ಫಾಯನಲ (ಮುಲ್ಕಿ) ಪರೀಕ್ಷೆಗೆ ಪ್ರಾರಂಭವಾಗುವದು.

—

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ

ವಿವೇಚನೆಯು

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮೊದಲಾದ ಪಕ್ಷಗಳ ವಿಚಾರಗಳನ್ನು, ಜಾಹೀರ ಸಂದೇಶಗಳನ್ನು, ಭಾಷಣಗಳನ್ನು ಆಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯ ಮಾಡಿದ್ದೇನೆ. ವಿಜಯದ ಹೊಸ ಚುನಾವಣೆಯ ಮ್ಮ ಕುರಿತು ವಿವಿಧ ಲೇಖನಗಳೂ, ಕಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಪಕ್ಕೆಯಿದ್ದವರು ದಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖನಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಮತ ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಪ್ರತಿನಿಧಿಯಾಗಿ ಆದೆಂಥ ಕರ್ತೃತ್ವ ಮಾಡು ವ ಹಂಬಲ ತೋರುವದೆಂಬುದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬರುವ ಎಲ್ಲರೂ ವಿಜಯವನ್ನು ಸ್ವತಃ ಓದಬೇಕು. ಬರದವರು ಇತರರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿಡಿದಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ವರ್ಗಣಿ ನಿರ್ಣಯ:- ಅಂಚೆವೆಚ್ಚ ಸೇರಿ ವರ್ಷಕ್ಕೆ ದೈನಿಕ ಪತ್ರಕ್ಕೆ ೧೨-೮-೦, ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಣ್ಣಾ! ಮಾತಾಡುವುದಿಲ್ಲೇಕೆ? ... ಯಾವ ಔಷಧ ... ಹೊಟ್ಟೆಯಲ್ಲಿ ನೋವು ತಲೆಯೊಳಗೆ ... ಏನು?

ಅಣ್ಣನು— ತಂದಾ— ಹೌದು ಮೈಯಲ್ಲಾ ನೋಯುತ್ತದೆ

ತಂದೆ— ... ಪೋಹೊಂಟಿ ಗ್ಯುರಿಯರ ... ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳು ಪರಿಹಾರವಾಗಿ ಮಾತಾಡುವಿ ಮತ್ತು ಓಡಾಡುವಿ ... ಹುಡುಗ ಎಂದೇ ಆಡೆ.

ನಮ್ಮಲ್ಲಿ ಬೇರೆದ ... ಔಷಧವನ್ನು ... ಕೇಳಿರಿ.

... ಪ್ರಕಟಿಸಿ ...

ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಬಿಚ್ಚಿ, ಗರ್ಮಿ ಯಬಟ್ಟೆ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಿಯ ... ಬೆಲೆ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ ... ಕರ್ನಾಟಕ ಆಯುರ್ವೇದ ಮೆಡಿಕಲ್ ಹಾಲ್ ... ಮತ್ತು ... ದಿಂದ ದೊರೆಯುವದು.

ಎನ್. ಎಫ್. ಪಂಡಿತ
ಖಡೇಬಝಾರ ಬೆಳಗಾವಿ

ವಿಜಯದ ದರಗಳು

—೦—

ದೈನಿಕಪತ್ರಕ್ಕೆ	
೧ ವರ್ಷಕ್ಕೆ	೧೨—೮—೦
	೭—೦—೦
	೪—೦—೦
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦
... ವಾರಪತ್ರಕ್ಕೆ	

ವ್ಯವಸ್ಥಾಪಕ ವಿಜಯ, ಧಾರವಾಡ.

ನೋಟೀಸಿನ ದರಗಳು.

—೦—

ಸಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ. ಇಂಗ್ಲಿಷ ಪ್ರತಿಯೊಂದು ಪಂಕ್ತಿಗೆ ಐದು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಪಂಕ್ತಿಗಳಿಗೆ ಇಮ್ಮಡಿ. ಖಾಯಂ ಜಾಹೀರಾತುಗಳನ್ನು ಕೊಡುವವರು ಬೆಲೆಗಾಗಿ ಪತ್ರವ್ಯವಹಾರ ಮಾಡಬಹುದು.

ವ್ಯವಸ್ಥಾಪಕ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂದಲು	೧೦ ಆ
ವಿಚಿತ್ರ ಸಂಕಟ	೫
ಲೋ. ಟಿಳಕರ ಚರಿತ್ರ	೪
ದೇಶಬಂಧು ದಾಸರ ಚರಿತ್ರ	೩
ದೇಶಭಕ್ತರ ಸಂದೇಶಗಳು	೧

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಟ. ಹ. ಮತ್ತು ಟಪಾಲ ಖರ್ಚು ಬೇರೆ.

ವ್ಯವಸ್ಥಾಪಕ ವಿಜಯ ಪುಸ್ತಕಾಲಯ

ಧಾರವಾಡ.

ಈ ಪತ್ರವನ್ನು ... ಹೊಸಕೇರಿ ಇವರು ಧಾರವಾಡದಲ್ಲಿರುವ ... ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

K. N. B. 144

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ ಧಾರವಾಡ ಸೋಮವಾರ ತಾ [illegible]ನೇ ಎಪ್ರೀಲ [illegible] (ಸಂಚಿಕೆ ೮೯

ಸರಕಾರದಿಂದ ಪೇಟೆಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿ ತ್ತಲೇ ಅದರ ಕೆಳಭಾಗದಲ್ಲಿಯ ಬಾಗಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಏಳ್ತಲೇ ಬಾಗಿಗೆಯು ಹಿಂದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೨೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿನೋದಲಹರಿ.

ಮಾಸ್ತರ- ಶಿಷ್ಯನಿಗೆ- ನಿನಗೆ ವ್ಯಾಕರಣ ಬರುವದಿಲ್ಲ. ಭೂಗೋಲ ಬರುವದಿಲ್ಲ. ಗಣಿತ ಬರುವದಿಲ್ಲ. ಬಾಯಿಲೆಕ್ಕ ಬರುವದಿಲ್ಲ. ನಿನಗೆ ತಿಳಿ ಇರುವದಾದರೂ ಏನು?

ಶಿಷ್ಯ- ಟೋಪ್ಪಿಗೆ ಹಾಕುವದಕ್ಕೆ ಸರ.

ಹೆಂಡತಿ- ಕಾಲದ ಭಾರವಾಗಿದೆಂದು ಚಿಂತಿಸಬೇಡಿರಿ. ದೇವರು ಹೇಗಾದರು ಹಗುರ ಮಾಡ್ಯಾನು.

ಗಂಡ- ಬ್ಯಾಂಕಿನ ಪಟ್ಟಿ ಬಂದ ಕೂಡಲೆ ಅದನ್ನು ಸುಟ್ಟೇ ಹಾಕುತ್ತೇನಲ್ಲ, ಇದರಷ್ಟು ಇನ್ನೆಷ್ಟು ಹಗುರು ಮಾಡಬೇಕು.

ಪರೀಕ್ಷಕ- (ಸ್ತ್ರೀ ವಿದ್ಯಾರ್ಥಿಯನ್ನು ಕುರಿತು) ಕ್ಲೋರೋಫಾರ್ಮ ಸ ಗುಣಗಳನ್ನು ಈಗ ಹೇಳಿದೆಯಲ್ಲ. ಅದು ಸರಿ. ಆದರೆ ಅದರ ವಿನಹ ಮನುಷ್ಯನ ಸ್ಮೃತಿ ತಪ್ಪಿಸಲು ಮತ್ತಾವ ವದಾರ್ಥಗಳು ಸಾಧನಗಳಿವೆಯೋ?

ವಿದ್ಯಾರ್ಥಿ- ಇದೆ. ಡಾಕ್ಟರರು ಮತ್ತು ವಕೀಲರ ಬಿಲ್ಲುಗಳು.

ಕೊಲ್ಹಾಪೂರ ಸಂಸ್ಥಾನದ ಪ್ರಚಾರ ಸ್ಥಾಂಪತ್ತಿಕ ಸ್ಥಿತಿಯ ವಿಚಾರ ಮಾಡುವದಕ್ಕಾಗಿ ಮಹಾರಾಜರು ಪ್ರೊಫೇಸರ ಬಾಳಕೃಷ್ಣರವರನ್ನು ನೇಮಿಸಿ, ಇವರಿಗೆ ಅವಶ್ಯವಾದ ಸಹಾಯ ಮಾಡಬೇಕೆಂದು ಮಾಮುಲೇದಾರ ಮಹಾಲಕರಿಯವರಿಗೆ ಹುಕುಮು ಮಾಡಿದ್ದಾರೆ.

ಪೋಲಂಡದ ಒಬ್ಬ ಪ್ರೋಫೇಸರು ಖಾದಿಯ ಭಕ್ತರಾಗಿದ್ದು, ಅಲ್ಲಿ ಇದರ ಪ್ರಚಾರ ಮಾಡುವದಕ್ಕಾಗಿ ಚರಕವನ್ನು ಕಳಿಸಬೇಕೆಂದು ಮಹಾತ್ಮರಿಗೆ ಪತ್ರ ಬರೆದಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಒಂದು ಲಕ್ಷದ ಮೇಲಿಂಯು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಲ್ಪಡುವವು. ಕಾಯಮು ಮತ್ತು ಚಿಕ್ಕ ಕರಾರು ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಪಾಟೀಲ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದು ಆಣೆಯಿಂತಿರುತ್ತದೆ

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೯-೪-೧೯೨೬ ನೇ ಇಸ್ವಿ

ಕಲಕತ್ತೆಯ ದಂಗೆ.

—೦—

ಸ್ವರಾಜ್ಯ ಪಕ್ಷ ಮತ್ತು ಸರಕಾರ ಪಕ್ಷ.

ಕಲಕತ್ತೆಯ ದಂಗೆ ಮಾಡಿದವರು ಹಿಂದೂ-ಮುಸಲಮಾನರ ಗುಂಡ ಮತ್ತು ಪುಂಡರೇ ಇರುವರೆಂದು ಜಗತ್ತಿಗೆ ತಿಳಿದು ಹೋಯಿತು. ನೀವು ಸ್ವರಾಜ್ಯ ಬೇಡುತ್ತೀರಿ. ನಿಮ್ಮ ಜಿವ್ಹೆಗಳ ಹೋಡೆದಾಟ ನೋಡಿರಿ; ನೀವೆಷ್ಟು ಸ್ವರಾಜ್ಯಕ್ಕೆ ಪಾತ್ರರಿಲ್ಲೆಂದು ಹಿಂದುಮುಂದಿನ ವಿಚಾರವಿಲ್ಲದೆ ಕುಡಿದ ಇಂಗ್ರೇಜೀ ಪತ್ರಕಾರರ ಮೋರೆಗೆ ಕಾಡಿಗೆ ಹತ್ತಿದಂತಾಯಿತು. ದಂಗೆಯು ಭಯಂಕರ ರೀತಿ ಟಕ ನಡೆಯುವಾಗ ಹಿಂದೂ ಸ್ವಯಂಸೇವಕರು ... ಸೇವಾ ಮತ್ತು ಮುಸಲಮಾನ ಹಕ್ಕಾಲಂಬಿಯರು ಗುಡಿಗಳ ರಕ್ಷಣೆಯಲ್ಲಿ ದಕ್ಷರಾಗಿದ್ದರು. ಸ್ವರಾಜ್ಯ ಪಕ್ಷದ ಪುಢಾರಿಗಳಾದ ಬ್ಯಾರಿಸ್ಟರ ಸೇನಗುಪ್ತ, [illegible] ಮುಖಂಡರಾದ ವ್ಯೋಮಕೇಶ ಚಕ್ರವರ್ತಿ ಮೊದಲಾದವರು ಹಗಲಿರುಳು ದಂಗೆ ನಡೆದ ಬೀದಿ ಬೀದಿಗೆ ಹೋಗಿ, ಜೀವಕ್ಕೆ ಹೆದರದೆ, ಜಡಿದಿರುವವರಿಗೆ ಬುದ್ಧಿ ಹೇಳುತ್ತ ಬಂದರು. ದಂಗೆಯು ಶಾಂತವಾಗಲಿಕ್ಕೆ ಪೋಲೀಸರೂ, ದಂಡಿನವರೂ ಬಂದು ನಿಂತದ್ದು ಕಾರಣವಾದದ್ದು ನಿಜ. ಆದರೆ ಜನರಲ್ಲಿ ವಿವೇಕವನ್ನು ಹುಟ್ಟಿಸಿ, ಉರಿಯನ್ನು ಆರಿಸುವ ಕೆಲಸದಲ್ಲಿ ಸೇನಗುಪ್ತರೂ ಬೇರೆ ಮುಂದಾಳುಗಳೂ ಮಾಡಿದ ಪ್ರಯತ್ನವು ಪ್ರಶಂಸನೀಯವಾಗಿರುತ್ತದೆ. ಆದರೆ ಈ ಕಲಹದಲ್ಲಿ ಪೋಲೀಸರು ಯಾವತ್ತೂ ಜವಾಬದಾರಿಯನ್ನು ತಮ್ಮ ಮೇಲೆ ಹೊತ್ತು, ಸ್ವರಾಜ್ಯ ಪಕ್ಷದ ಸಂಬಂಧವನ್ನು ಕಟ್ಟಬೇಕೆಂದು ನಡೆಸಿದ ಕೃತಿಯು ಮಾತ್ರ ಆಶ್ಚರ್ಯಕಾರಕವಾದದ್ದು. ದಂಗೆಯು ಮಧ್ಯದಲ್ಲಿ ಗಾಡಿ ಸ್ವಯಂಸೇವಕರ ಸಂರಕ್ಷಣಾರ್ಥ ಹಾಸ್ಪಿಟಲ ಬಯಲಿಗೆ ನಿಮ್ಮ ಕೆಲಸ ತೀರಿತೆಂದು ಹೇಳಿ, ಅವರನ್ನ ಮನೆಗೆ ಕಳಿಸಿದ್ದು ಪೋಲೀಸರ ತಪ್ಪು. ದೇಶಹಿತಕಾರ್ಯದಲ್ಲಿ ಸರಕಾರದ ಪೋಲೀಸರ ಸಂಬಂಧವಿರುವಷ್ಟೇ, ಸ್ವದೇಶೀಯರ ಸಂಬಂಧವೂ ಇರುವದು. ಹೀಗಿದ್ದು ಪುಣೆಯಲ್ಲಿ ಗಡಂಗಗಳ ಬಳಿ ಪಿಕೆಟಿಂಗ ನಡೆದಾಗ ಸಾರ್ವಜನಿಕ ಶಾಂತತೆಯು ಭಂಗವಾಗುವದೆಂಬ ನೆವನ ಹೇಳಿ, ಪೋಲಿಸರು ಪಿಕೆಟಿಂಗಕ್ಕೆ ಅಡ್ಡ ಬಂದರು. ಲೋಕಮಾನ್ಯರು ಇದರ ಜವಾಬದಾರಿಯನ್ನು ಹೊತ್ತರೂ ಪೋಲಿಸರು ಕೇಳದೆ, ಪಿಕೆಟಿಂಗವನ್ನು ನಿಲ್ಲಿಸಿದರು. ತಮ್ಮ ಅಧಿಕಾರವು ಅನ್ಯರ ಕೈಸೇರಬಾರದೆಂದೇ ಇದರ ರಹಸ್ಯವು. ಪುಣೆಯಂತೆ ಕಲಕತ್ತೆಯಲ್ಲಿಯೂ ಪೋಲಿಸರು ಇದೇ ರೀತಿಯಾಗಿ ನಡಿಸಿದ್ದಾರೆ. ಕಿಲಾಫತ ಫಂಡು ಕೂಡಿಸಿ, ಹಿಂದೂ ಮುಸಲಮಾನ ಪುಢಾರಿಗಳೂ ಶಿರಾಸ್ತಿಗಳೂ ದ್ರವ್ಯ ಸಹಾಯ ಮಾಡಿದರು ಅವರ ಅಡ್ಡಿಯಿರುವದಿಲ್ಲ. ಹಿಂದೂ ಮುಸಲಮಾನ ವರ್ತಮಾನ ಪತ್ರಕಾರರು ಕಮೀಟಿ ಕೂಡಿ, ಯಾವ ಜಾತಿಯ ಮೇಲೂ ಆಕ್ಷೇಪ ಹೊರಿಸದೆ, ತಟಸ್ಥರಾಗಿ ಲೇಖಗಳನ್ನು ಬರೆಯಬೇಕೆಂದು ಮಾಡಿದ ಠರಾವಿಗೆ ಇನ್ನೂ ಪ್ರತಿಬಂಧವಿಲ್ಲ. ಮತ್ತು ಅಧಿಕಾರ ಮಾತ್ರ ಬಿಡಬಾರದೆಂಬೇ ಅವರ ಮನೀಷೆ. ಪರಕೀಯ ಸರಕಾರದಲ್ಲಿ ಹೀಗಾಗುವದು ಸಹಜ. ಸ್ವದೇಶಿ ಸರಕಾರದಲ್ಲಿ ಸ್ವದೇಶಿಯರಿಗೇ ಹೀಗೆ ಅರ್ಧಚಂದ್ರ ದೊರೆಯಲಾರದು. ಚೀನದಲ್ಲಿ ಇದೇ ಸಮಯದಲ್ಲಿ ಸಂಭವಿಸಿದ ಸಂಗತಿಯು ಪ್ರತ್ಯಕ್ಷ ಪ್ರಮಾಣವಾಗಿ ಇರುತ್ತದೆ. ಪೆಕಿಂಗದ ಹತ್ತರ ನಡೆದ ಯುದ್ಧದಲ್ಲಿ ರಾಷ್ಟ್ರೀಯರ ಪರವಾಗಿ ಯುದ್ಧ ಮಾಡುತ್ತಿದ್ದ ಕ್ರಿಶ್ಚನ್ ಜನರಲನು ಯುದ್ಧ ಬಿಟ್ಟು, ಪಟ್ಟಣ ತ್ಯಾಗ ಮಾಡಿ ಹೋಗುವನು ಮತ್ತು ಚಾಂಗ ಜಲಿನನು ಅದನ್ನು ಆಕ್ರಮಿಸುವನು. ಈ ಮಧ್ಯದಲ್ಲಿ ಅಲ್ಲಿ ಸುಲಿಗೆ ಅನ್ಯಾಯಕರ, ಪುಂಡಾಟಿಕೆ ಆಗಬಾರದೆಂದು ಪುರ ಪ್ರಮುಖರು ಕಮೀಟಿ ನೇಮಿಸಿ, ಕೂಟ ಕೂಟಿಗೆ ವ್ಹಾಲಂಟಿಯರರನ್ನು ನೇಮಿಸಿದ್ದಾರೆ. ಇವರಿಗೆ ಸಹಾಯವಾಗಿ ಪೋಲೀಸರು ನಾಗರಿಕರನ್ನು ಕೂಡಿ, ಸಜ್ಜಾಗಿ ನಿಂತಿದ್ದಾರೆ. ಈ ಸಂಗತಿಯಿಂದ ನಗರಶಾಂತಿ ಮತ್ತು ರಕ್ಷಣೆಯ ಮೇಲೆ ಪಟ್ಟಣಿಗರು, ಜನಾಂಗ ಭ್ರಾತೃಭಾವದಿಂದ ಪೋಷಿಸುವರು ಎಂಬುದು ಸ್ಪಷ್ಟವಾಗುತ್ತದೆ. ಇದರ ವಿರುದ್ಧ ಕಲಕತ್ತೆಯಲ್ಲಿ ನಡೆಯಿತು. ಸ್ವರಾಜ್ಯ ಪಕ್ಷವಿದ್ದು, ಪುರ ಪ್ರಮುಖರು ಶಾಂತತಾರಕ್ಷಣೆಯ ಕರ್ತವ್ಯದ ಜವಾಬದಾರಿಯನ್ನು ಹೊತ್ತಿದ್ದರೆ ಸ್ವರಾಜ್ಯ ಪಕ್ಷೀಯರ ಅವಮಾನವೆನಿಸುವಂಥ ಪ್ರಸಂಗವೇ ಬರುತ್ತಿದ್ದಿಲ್ಲ.

ಪುಣೆಯ ಆರೋಗ್ಯ ಮಂಡಳದವರು ಬಡ ಪಂ ಕೂಸುಗಳಿಗೆ ಧರ್ಮಾರ್ಥ ಹಾಲನ್ನು ಪೂರೈಸುವ ವ್ಯವಸ್ಥೆ ಮಾಡುತ್ತಲಿದ್ದಾರೆ.

ಕಾಂಧಕರ ದಿವಾನರಾಗಿದ್ದ ಮಿ. [illegible] ಧಾರವಾಡ ಮುದ್ದತಿಗೆ ಹಿಂದಿದ್ದಾರೆ.

ಉಂಡವರನ್ನು ಹರಿಸುವದೇ ಸರಕಾರದ ಕೆಲಸ.

—೦—

ಮುಂಬಯಿ ಸರಕಾರದ ಪ್ರಾಯವ್ಹೇಟ ಸೇಕ್ರೆಟರಿಯವರು ಸಿಂಧದ ಹಿಂದೂ ಸಭೆಯವರಿಗೆ ಕೌನ್ಸಿಲ ಚುನಾವಣೆಯ ವಿಷಯವಾಗಿ ಬರೆದ ಪತ್ರದ ಸಂಗತಿಯನ್ನು ನಾವು ಮೊದಲು ಪ್ರಸಿದ್ಧ ಮಾಡಿದ್ದೇವೆ. ಇದೇ ವಿಷಯವನ್ನು ಮಿ. ಲ್ಯಾನ್ಸಬರಿ ಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಎತ್ತಿದರು. ಸರಕಾರಕ್ಕೆ ಅನುಕೂಲವಾಗಿ ಹೋಟು ಕೊಡುವಂಥವರ ಮೇಲೆ ಅಳಿಯನ ಅನುಗ್ರಹ; ಕೊಡದವರ ಮೇಲೆ ವಕ್ರದೃಷ್ಟಿ; ಇದೆಂಥ ನ್ಯಾಯವೆಂದು ಮಿ. ಲ್ಯಾನ್ಸಬರಿಯವರು ನಿಷ್ಠುರವಾಗಿ ಸರಕಾರದ ಮೇಲೆ ಆರೋಪಿಸಿದರು. ಇದು ಹಿಂದಿನ ಸ್ಥಾನ ಅಥವಾ ಮುಂಬಯಿ ಸರಕಾರದ ಕೃತ್ಯವಲ್ಲ. ಗವ್ಹರ್ನರ ಸಾಹೇಬರ ಪ್ರಾಯವ್ಹೇಟ ಸೆಕ್ರೆಟರಿಯವರು ಬರೆದ ಪತ್ರವೆಂದು ಅರ್ಲ ವಿಂಟರಟನ್ನ ಸಾಹೇಬರು ಉಸುರಿ, ಯಾವ ನಿಷ್ಕರ್ಷೆಯಾಗದಂತೆ ಪ್ರಶ್ನೋತ್ತರವನ್ನು ಮುಗಿಸಿದರು. ಸಿಂಧದ ಹಿಂದೂ ಮಂಡಳದವರು ಕೌನ್ಸಿಲದಲ್ಲಿ ಸರಕಾರವನ್ನು ಹೆಜ್ಜೆಹೆಜ್ಜೆಗೆ, ಹಣಕು ಮಾತಿಗೆ ವಿರೋಧಿಸುವರು. ಸರಕಾರದಿಂದಲು ಪಕ್ಷಪಾತವಾಗಬೇಕೆಂದಿದ್ದರೆ, ಸರಕಾರಕ್ಕೆ ಅನುಕೂಲವಾಗಿ ಮತಕೊಡಿರೆಂದು ಹೇಳುವದು ವಿಚಿತ್ರ ವಿಚಾರವೇ ಸೈ. ಸರಕಾರದಲ್ಲಿ ನ್ಯಾಯ ಬುದ್ಧಿ ಎಲ್ಲಿಯದು? ಪ್ರಾಯವ್ಹೇಟ ಸೇಕ್ರೆಟರಿಯು ಗವ್ಹರ್ನರರಿಗೆ ತಿಳಿಯದೆ ಪತ್ರ ಬರೆದಿರುವನೇ? ಇವರದೇ ತಪ್ಪಿದ್ದರೆ ಇವರನ್ನೇಕೆ ಶಿಕ್ಷಿಸುವದಿಲ್ಲ?

ಎರಡು ಲಕ್ಷದ ದಾನ ಧರ್ಮ.

—೦—

ಸ್ವರಾಜ್ಯ ಪಕ್ಷೀಯರೂ ಕೌನ್ಸಿಲದ ಮೆಂಬರರೂ ಆದ ಕುಂಭಕೋಣದ ಪ್ರಸಿದ್ಧರಾದ ಶ್ರೀ. ವೆಂಕಟರಮಣ ಅಯ್ಯಂಗಾರರು ತಮ್ಮ ಗಳಿಕೆಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಲೋಕೋಪಯೋಗಿ ಸತ್ಕಾರ್ಯಗಳಿಗಾಗಿ ತೆಗೆದಿಟ್ಟು, ಅದರ ಮೇಲ್ವಿಚಾರಣೆಗಾಗಿ ಒಂದು ಕಮಿಟಿ ನೇಮಿಸಿ, ಟ್ರಸ್ಟ ಪತ್ರವನ್ನು ಕಮಿಟಿಗೆ ಒಪ್ಪಿಸುವ ಸಮಾರಂಭವನ್ನು ಶ್ರೀ. ಶ್ರೀನಿವಾಸಯ್ಯಂಗಾರರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಮೇಲಿನ ಫಂಡಿನಲ್ಲಿ ಕೆಲಭಾಗವನ್ನು ದೇವಾಲಯ ಮತ್ತು ಧರ್ಮಶಾಲೆಗಳಿಗೂ, ಕೆಲಭಾಗವನ್ನು ಅನಾಥರ ಸಹಾಯಕ್ಕಾಗಿಯೂ, ಕೆಲಭಾಗವನ್ನು ಹಳ್ಳಿಗಳಲ್ಲಿ ಆರೋಗ್ಯ ಪ್ರಸಾರ ಮಾಡುವದಕ್ಕೂ, ಉಳಿದ ಕೆಲಭಾಗವನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿಯೂ ಉಪಯೋಗಿಸುವರು.

ಹಿಂದುಸ್ಥಾನದವರು ಖಾದಿಯ ಭಕ್ತರಿದ್ದು, ಹಳ್ಳಿಗಳಲ್ಲಿ ಲೋಕೋಪಯೋಗದ ಕೆಲಸಗಳನ್ನು ಮಾಡುವಂತೆ ಬಂಗಾಳದವರ ಪ್ರಸಿದ್ಧ ಖಾದೀ ಪ್ರಸಾರಕರಾದ ಶ್ರೀ. ಸುಬ್ರಹ್ಮಣ್ಯಯ್ಯರ ಸಹಾಯ ತಕ್ಕೊಂಡಿದ್ದಾರೆ. ಇದರಂತೆ ಇನ್ನು ಕೆಲವರ ನೆರವು ತಕ್ಕೊಂಡು, ಅವರ ಕೂಡ ತಾವೂ ಕೆಲಸ ಮಾಡುವರು. ಮೇಲಿನ ದಾನಧರ್ಮವಲ್ಲದೆ, ರಾಷ್ಟ್ರಕಾರ್ಯವನ್ನು ಮಾಡಿ ಕರ್ತವ್ಯಭ್ರಷ್ಟರೆನಿಸಿಕೊಂಡಿರುವ ಒಂದು ಕಾಲಕ್ಕೆ ಸಿಕ್ಕಸಿಕ್ಕವರಿಗೆ ದ್ರವ್ಯ ಸಹಾಯ ಮಾಡಬೇಕಾದದ್ದಾಗಿದೆ.

ಕಾಂಗ್ರೆಸ ಮತ್ತು ಹಿಂದೂ ಮಹಾಸಭೆ.

ಕಾಂಗ್ರೆಸ ಪಕ್ಷದಿಂದ ಚುನಾಯಿಸಲ್ಪಟ್ಟ ವಿಶಲ್ಪನೀಕ್ಷನರು. ಹಿಂದೂ ಮುಸಲಮಾನರೆಂಬ ಭೇದವಿಲ್ಲದವರಾಗಿರಬೇಕು ... ಯವನೂ ಅಲ್ಲ; ... ಹಿಂದೂ ... ಪ್ರತಿನಿಧಿಯು ಸಂಘದವರಾಗುತ್ತಾರೆ. ಕಾಂಗ್ರೆಸದ ಪಕ್ಷದಿಂದ ಅಸೆಂಬ್ಲಿಯಲ್ಲಿ ... ಹಿಂದೂ ಮೆಂಬರರು ... ಯನ್ನು ಸರಿಪಡಿಸಲಾರದ ಹಿಂದೂ ಪ್ರಜರ ಹಿತದೃಷ್ಟಿ ನೋಡಲಿಕ್ಕಿಲ್ಲೆಂದು ಭಾಯಿ ಪರಮಾನಂದ, ಡಾ. ಮುಂಜೆ ಮುಂತಾದವರು ಆಕ್ಷೇಪಿಸ್ಸಾರಂಭಿಸಿ ... ಪ್ರಾಂತಿಕ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಕಾಂಗ್ರೆಸ ಮತ್ತು ಆದರ ಪಕ್ಷದ ಮೆಂಬರರನ್ನು ಹಿಂದುವಾಗಿ ಧಿಃಕರಿಸುತ್ತಾರೆ. ಹಿಂದೂ ಮಹಾಸಭೆಯವರು ತಮ್ಮ ಪಕ್ಷದಿಂದ ಸ್ವತಂತ್ರವಾಗಿ ಚುನಾಯಿಸಲಿಕ್ಕೆ ... ಹಿಂದೂ ಜನರ ರಕ್ಷಣೆಯಲ್ಲಿ ... ಮುಸ್ಲಿಮ್ ದೃಷ್ಟಿಯಿಂದ ಹೋರುವಂಥವರಿಗೆ ಓಟು ಕೊಡಬೇಕೆಂದು ಕೊನೆಯಲ್ಲಿ ತಮ್ಮ ಮಾತು ಮುಗಿಸಿದರು.

ಖೈರಪೂರ ಸಂಸ್ಥಾನದ ಕ್ಷೇತ್ರದಲ್ಲಿ ಅತ್ಯಾಚಾರ!!

ಸಿಂಧ ಪ್ರಾಂತದಲ್ಲಿರುವ ಖೈರಪೂರವೆಂಬ ಮುಸಲಮಾನ ಸಂಸ್ಥಾನದ ಅಧಿಕಾರಿಯು ಘಟ್ಟಿಯಾಗಿ ಕೂತಿದ್ದಾನೆ. ಅಲ್ಲಿಯ ದಿವಾನರ ಜೀವ ತೆಗೆದುಕೊಳ್ಳಬೇಕೆಂದು ಸಂಚು ಮಾಡಿದ್ದರು. ಆದರೆ ಆಗಲಿಲ್ಲ. ದರಬಾರದ ವಿರೋಧದಿಂದ ... ಯುವಕರು ದುಷ್ಟರಿದ್ದಾರೆಂದು, ರೆಸಿಡೆಂಟ ಮತ್ತು ಪೊಲಿಟಿಕಲ್ ... ರಾಜೀನಾಮೆ ಕೊಡುವರು. ... ಸಾಸು ಕೊಡದ ಇರುವದಿಲ್ಲ. ಸರ್ಕಾರದ ಕಲೆಕ್ಟರರು. ಸಂಸ್ಥಾನದ ಪೊಲಿಟಿಕಲ್ ಏಜಂಟರಾಗಿದ್ದಾರೆ. ಇವರು ಬೇಬಂದಶಾಹಿಯ ವರ್ತಮಾನ ಕೇಳಿ, ಅಲ್ಲಿಗೆ ಹೋಗಿ. ವಿಚಾರಣೆಗಳನ್ನೆಲ್ಲ ತಿಳಿಕೊಂಡು ಬಂದರು.

ನೀವು ಆಸಾಮಕ್ಕೆ ಬರತಕ್ಕವರೇನು?

—೦—

ಹಾಗಿದ್ದರೆ ಕೆಳಗೆ ಕಾಣಿಸಿದ ಕಾರ್ಯಕ್ರಮದಲ್ಲಿ ಯಾವದಾದರೊಂದನ್ನು ಕೊನೆಗಾಣಿಸಿ ಯೋಗ್ಯತೆಯನ್ನು ಪಡೆಯಿರಿ

ಹೋದ ವರ್ಷ ಆಸಾಮಕ್ಕೆ ನಾವು ಶಿಕ್ಷಿತ ಸ್ವಯಂಸೇವಕರ ಒಂದು ಗುಂಪನ್ನು ಒಯ್ದಿದ್ದೆ ಈ ವರ್ಷ ಅಸಾಮಕ್ಕೆ ಎರಡು ಗುಂಪುಗಳನ್ನು ಒಯ್ಯಬೇಕೆನ್ನುತ್ತೇವೆ. ಆದರೆ ಈ ಸಾರೆ ಒಯ್ಯುವ ... ಪ್ರಾಂತಗಳಿಂದಲೂ ಒಯ್ಯಬೇಕೆನ್ನುತ್ತೇವೆ. ಆದರೆ ಆಸಾಮಕ್ಕೆ ಹೋಗುವ ಸ್ವಯಂಸೇವಕರಲ್ಲಿ ಒಬ್ಬರಾಗಬೇಕಾದರೆ ನೀವು ಈ ಕೆಳಗಿನ ಕಾರ್ಯಗಳಲ್ಲಿ ಯಾವದಾದರೊಂದನ್ನು ಮಾಡಲಿಕ್ಕೇ ಬೇಕು.

ಇದನ್ನು ಮಾಡುವದಕ್ಕೆ ಮೊದಲು ಪ್ರತಿಯೊಬ್ಬನು ಸ್ವಯಂಸೇವಕರ ಒಂದು ಗುಂಪನ್ನು ದಳದ ನಿಯಮಗಳನ್ನನುಸರಿಸಿ ತಯಾರು ಮಾಡಬೇಕಾದೀತು. ಈ ಸ್ವಯಂಸೇವಕರು ಕೈಕೊಂಡ ಕಾರ್ಯಕ್ಕೆ ಸಹಾಯಕರಾಗುವರು. ಈ ಕಾರ್ಯವನ್ನು ಜೂನ, ಜುಲೈ, ಅಗಸ್ಟ ಈ ಮೂರು ತಿಂಗಳೊಳಗೆ ಮುಗಿಸಿ, ೧೫ ನೇ ಸಪ್ಟಂಬರದೊಳಗಾಗಿ ಜಿ. ಕಾ. ಕ. ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳ ಸರ್ಟಿಫಿಕೇಟಿನ ಸಹಿತ ದಳದ ಮುಖ್ಯ ಕಾರ್ಯಾಲಯಕ್ಕೆ ಕಳಿಸಿಕೊಡಬೇಕು. ಹೀಗೆ ಬರಲಿಚ್ಛಿಸುವವರು ಸೇವಾದಳದ ಪ್ರತಿಜ್ಞಾ ಮಾಡಿದ ಸಭಾಸದರಿರಲಿಕ್ಕೆ ಬೇಕು.

ಕಾರ್ಯಕ್ರಮದಲ್ಲಿಯ ಕಲಮುಗಳು —

(೧) ತನ್ನ ಜಿಲ್ಲೆಯಲ್ಲಿ ನಿದಾನ ಪಕ್ಷಕ್ಕೆ ೧೨೦೦ ಕಾಂಗ್ರೆಸ ಸಭಾಸದರನ್ನು ಕೂಡಿಸತಕ್ಕದ್ದು. (೨) ತನ್ನ ಜಿಲ್ಲೆಯಲ್ಲಿ ನಿದಾನ ೧೦೦೦ ರೂ. ಖಾದೀ ಮಾರಾಟ ಮಾಡತಕ್ಕದ್ದು. (೩) ತನ್ನ ಜಿಲ್ಲೆಯಲ್ಲಿ ನಿದಾನ ದಳಕ್ಕೆ ೨೦೦ ಸಭಾಸದರನ್ನು ಅಥವಾ ಸಹಾಯಕರನ್ನು ಕೂಡಿಸಿ ಕೊಡತಕ್ಕದ್ದು. ಹಾಗೂ ಅದರಲ್ಲಿ ೧೧ ಜನರಿಗೆ ದಲದ ಶಿಕ್ಷಣ ಕೊಡತಕ್ಕದ್ದು. (೪) ಪ್ರಾಂತದಲ್ಲಿಯ ವ್ಯಾಯಾಮ ಶಾಲೆಗಳ ಸುಧಾರಣೆ ಮಾಡತಕ್ಕದ್ದು, ಹಾಗೂ ನಿದಾನ ೫ ಹೊಸ ವ್ಯಾಯಾಮಶಾಲೆಗಳನ್ನಾದರೂ ಸ್ಥಾಪಿಸಬೇಕು. ಹಾಗೂ ಅವರಲ್ಲಿಂದ ೧೧ ಜನರನ್ನಾದರೂ ಶಿಕ್ಷಣ ಕೊಟ್ಟು ತಯಾರ ಮಾಡತಕ್ಕದ್ದು. (೫) ತನ್ನ ನೆರೆಯ ಪ್ರಾಂತದಲ್ಲಿ ದಲದ ೧೦೦ ಸಭಾಸದರನ್ನಾದರೂ ಮಾಡಬೇಕು. ಹಾಗೂ ಅವರಲ್ಲಿಂದ ೧೧ ಜನರಿಗೆ ದಲದ ಶಿಕ್ಷಣ ಕೊಡತಕ್ಕದ್ದು.

ಕಾಂಗ್ರೆಸ ಸಭಾಸದತ್ವದ ನಮೂನೆಗಳು ಅಥವಾ ಖಾದೀ ಇವು ಬೇಕಾದರೆ ಆಯಾ ಕಾಂಗ್ರೆಸ ಕಮಿಟಿಯವರು ಕೊಡುವರು. ಈ ಪ್ರಕಾರ ಕೆಲಸ ಮಾಡಲಿಕ್ಕೆ ಸಿದ್ಧರಿದ್ದವರು ನಮ್ಮ ಕಡೆಗೆ ಒಪ್ಪಿಗೆಯನ್ನು ಬರೆಯಬೇಕು. ಅಂದರೆ ಎಲ್ಲ ವ್ಯವಸ್ಥೆ ಮಾಡಿಕೊಡುವೆವು.

ಇವುಗಳಲ್ಲಿ ಒಂದನ್ನಾದರೂ ಮಾಡುವವನು ದಲದ ಸಂಯೋಜಕನೆಂದು ಆಸಾಮಕ್ಕೆ ದಲದ ವೆಚ್ಚದಿಂದ ಒಯ್ಯಲ್ಪಡುವನು! ದಲದ ಯುನಿಫಾರ್ಮ್ ಅವನಿಗೆ ಕೊಡಲ್ಪಡುವದು. ಇತರ ಅವನು ಆಸಾಮದಲ್ಲಿ ನೊವ್ಹೆಂಬರ ೧ ರಿಂದ ೩ ತಿಂಗಳು ವರೆಗೆ ಇರಬೇಕಾದೀತು. ಆ ಮುದತಿನಲ್ಲಿ ಆಸಾಮ ಬಿಟ್ಟು ಹೋಗಲಿಕ್ಕೆ ಬರಲಿಕ್ಕಿಲ್ಲ. ಆಸಾಮದಲ್ಲಿ ಒಳ್ಳೇ ರೀತಿಯಿಂದ ಕೆಲಸ ಮಾಡಿದವರಿಗೆ ಯೋಗ್ಯತಾ ಪತ್ರಗಳು ದೊರೆಯುವವಲ್ಲದೆ ಮುಂದಿನ ವರ್ಷ ತನ್ನ ಪ್ರಾಂತದಲ್ಲಿ ಕೆಲಸ ಮಾಡುವದರ ಸಲುವಾಗಿ ಗೌರವ ಧನವು (ಆನರೇರಿಯಮ) ಕೊಡಲ್ಪಡುವದು.

ನಾ. ಸು. ಹರ್ಡೀಕರ

ಕಾರ್ಯದರ್ಶಿ

ಹಿಂದುಸ್ಥಾನೀ ಸೇವಾದಲ

ಹುಬ್ಬಳ್ಳಿ

ಕ್ರಾಂತಿಕಾರರ ಮೊಕದ್ದಮೆ ಮತ್ತು ಅಲ್ಲಿಯ ಒಡೆತನದ ವಿರುದ್ಧವಾಗಿ ಬಹುವಾಗಿ ದೂರಿಕೊಂಡಂಥ ಒಂದು ಅರ್ಜಿಯು ಹಿಂದುಸ್ಥಾನ ಸರಕಾರಕ್ಕೆ ಕಳಿಸುವದಕ್ಕಾಗಿ ಬಂಗಾಲ ಸರಕಾರದ ಕಡೆಗೆ ಬಂತು. ಇದರ ಮೇಲಿನ ಸಹಿಗಳು ನಿಜವೇ ಎಂದು ಪರೀಕ್ಷಿಸಬೇಕೆಂದು ಅರ್ಜಿಯು ಪೊಲಿಟಿಕಲ ಏಜಂಟರ ಕಡೆಗೆ ಬಂತು. ತಪಾಸು ಮಾಡಲಾಗಿ ಇದೆಲ್ಲ ಮೊದಲಿನಿಂದ ಕಡೆತನಕ ಕೃತಕವೆಂದು ಗೊತ್ತಾಯಿತು.

ಅಣ್ಣಾ! ಮಾತಾಡುವದಿಲ್ಲೇಕೆ? ಬರಿಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ಕಲಿಯೋಣವೇ! [illegible] ಮುಖದಲ್ಲಿ ನೋಯುತ್ತಿದೆಯೋ? ಆಗಿರುವದಾದರೂ ಏನು?

ಅಣ್ಣನು— ಕಂದಾ— ಹಲ್ಲು ಮಯ್ಯೆಲ್ಲಾ ನೋಯುತ್ತದೆ

ಕಂದ— ಹಾಗಾದರೆ ನೋವಿನ ಮುಲಾಮು ಹಚ್ಚು. ಒಂದೇ ಕ್ಷಣದಲ್ಲಿ ನಿನ್ನ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಉತ್ಸಾಹವ ಕಿಮ್ಮತ್ತು ತೀರ ಕಡಿಮೆ. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್‌ಕ್ರಿಪ್ಶನ್ ಪ್ರಕಾರ ಔಷಧಗಳನ್ನು ತಯಾರ ಮಾಡಿಕೊಡುವೆವು.

[illegible] ಔಷಧ ಮಾರುವ ದುಕಾನಗಳು [illegible]

ಧನ್ವಂತರಿ ಫಾರ್ಮಸಿ

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ಹಸಿ ಮತ್ತು ಒಣಗಾಯ, ಗರ್ಮಿ ಯಹಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿಡಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ ಸಂಸ್ಥಳದವರಿಗೆ ಅಂಚೇವೆಚ್ಚ ಬೇರೆ ಹುಬ್ಬಳ್ಳಿಯ ಏಜಂಟರು- ದಿ ಕರ್ನಾಟಕ ಮೆಡಿಕಲ ಸ್ಟೋರ ಸ್ಟೇಶನ ರೋಡ ಹುಬ್ಬಳ್ಳಿ, ಕೊಪ್ಪಳ ಮತ್ತು ಕಿರುಕಳದಿಂದ ದೊರೆಯುವದು.

ಎಸ ಎಫ. ಶೆಂಟರ
ಮಡೇಬಯ್ಯಾರ ಬೆಳಗಾವಿ

ನೋಟೀಸು

ಮಕ್ತುಮಬಿ ಕಾಸಿಮ ಸಾಹೇಬ ತಾಸಿಲದಾರ ಗಂಡ ಮಲ್ಲಿನಪ್ಪ ಬೌದಿ ಇವರಿಗೆ—

ಕೆಳಗೆ ಸಹಿ ಮಾಡಿದ ನಾನು ನೋಟೀಸು ಕೊಡುವದೇನೆಂದರೆ— ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನವಾಗಿ ೭ ತಿಂಗಳವಾಯಿತು ಆದರೆ ನೀನು ನನ್ನ ಕೂಡ ಪ್ರಪಂಚದಲ್ಲಿ ಬಂದಿಲ್ಲ ನಮ್ಮ ನಿಮ್ಮ ವ್ಯವಹಾರವಿಲ್ಲ. ಮತ್ತು ನೀನು ದುರಾಚಾರದಿಂದ ಬಸರು ಆಗಿರುತ್ತೀ ಅಂತ ಕೇಳಿದ್ದೇನೆ ಕಾರಣ ನಿನ್ನ ಈ ತರದ ದುರಾಚಾರದಿಂದ ನನಗೆ ಈ ನೋಟೀಸು ಕೊಡುವ ಭಾಗ ಬಿತ್ತು. ನನ್ನ ನಿನ್ನ ಲಗ್ನದ ಯಾವ ತರದ ನಾತೆ ಇಲ್ಲ ನೀನು ಕೂಡ [illegible] ಮುಂದೆ ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಯಾವ ತರದ ಹಕ್ಕ ಇಲ್ಲ. ಏನು ಇದೇ ನೋಟೀಸು ನನ್ನ ನೋಡಬೇಕೆಂದು ತಿಳಿಸುತ್ತಿದ್ದೇನೆ ತಿಳಿಯುವದು ತಾರೀಖು ೧೬-೪-೧೯೩೭ ನೇ ಇಸ್ವಿ

ಈ ಪಟ್ಟಿ ಮಲ್ಲಿಕ ಗುರಕಾಸ ಕಾಸೀಮ ಸಾಬ ಹಕ್ಕೀಮಸಾಹೇಬ ತಾಸಿಲದಾರ ಹಳ್ಳಿ ಮತ್ತು ಕಳವಡಿ ತಾಲೂಕ ರೋಣ ಇವನನು ಇರುತ್ತೇನೆ.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವನು ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ ನನ್ನ ಲಗ್ನದ ಹೆಂಡತಿಯಾದ ಮಕ್ತುಮಬಿ ಎಂಬವಳು ದುರಾಚಾರದಿಂದ ಬಸರಾಗಿರುತ್ತಾಳೆ ಕಾರಣ ಆವಳು ವ ಅವಳಿಂದ ಹುಟ್ಟುವ ಸಂತತಿ ನನ್ನ ಯಾವದೇ ಆಸ್ತಿಗೆ ಸಂಬಂಧವಿಲ್ಲ. ಯಾರಾದರು ಸಾಲ ವಗೈರೆ ಬಾಬತ ವ್ಯವಹಾರ ಮಾಡಿದಲ್ಲಿ ನಾನು ಅದಕ್ಕೆ ಜವಾಬದಾರನಲ್ಲ ಅಂತಾ ಕೊಟ್ಟ ಈ ಜಾಹೀರ ನೋಟೀಸು ತಾ॥ ೧೬-೪-೧೯೩೭ ನೇ ಇಸ್ವಿ

ಈ ಪಟ್ಟಿ ಮಲ್ಲಿಕ ಗುರಕಾಸ ಕಾಸೀಮಸಾಬ ವ॥ ಹಕ್ಕೀಮಸಾಬ ತಾಸೀಲದಾರ ಮು॥ ಕಳವಡಿ ತಾಲೂಕ ರೋಣ ಇವನು ಆದೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B. 1443

ಸಾಪ್ತಾಹಿಕ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಬುಧವಾರ ತಾರೀಖು ೨೧ನೇ ಎಪ್ರೀಲ ೧೯೨೬ (ಅಂಚಿಕೆ ೪೦

ಸರಕಾರದಿಂದ ಪೇಟಂಟ ಹೊಂದಿದ



ಮಲ್ಹಾರ ಕಪ್ಪಲಿ.

ತೋಟಗಾರರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ದಾರಿಗಳಿಂದ ನೀರು ಒಳ ಸೇರುವದು. ಕಪ್ಪಲಿಯು ಬಗ್ಗುತ್ತಲೇ ದಾರಿಗಳು ಮುಚ್ಚಿ ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ದರ	೩೦ ರೂ.
ನಂ ೨	೫೦ ,,	,,	೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಖಾತೆಯ ಸರಕಾರದವರು ಆಡಿಟ್ ಮಾಡಿದ್ದಿರುತ್ತದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಲು ಒಂದು ಲಕ್ಷದ ಮೇಲೆ ಉಂಟು. ಚಾಲು ಖಾತೆಯಿಂದ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾರ್ಯಮ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಹೆಚ್ಚು ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜಕಾತಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒನ್ನೆರಡು ಆಣೆಯಂತಿರುತ್ತದೆ

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

—

ನೋಟೀಸು.

ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕಿನ ವಾರ್ಷಿಕ ಜನರಲ ಸಭೆಯು ತಾರೀಖು ೨ ನೇ ಮೇ ಸನ್ ೧೯೨೬ ನೇ ಇಸ್ವಿ ಆದಿತ್ಯವಾರ ದಿವಸ ಸಾಯಂಕಾಲ ೪ ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಕೆಳಗೆ ತೋರಿಸಿದ ವಿಷಯಗಳ ಬಗ್ಗೆ ವಿಚಾರ ಮಾಡುವಗೋಸ್ಕರ ಕೂಡುವದು.

(೧) ಸನ್ ೧೯೨೬ ನೇ ಇಸ್ವಿಯ ಮಾರ್ಚ ೩೧ ಕ್ಕೆ ಮುಗಿಯುವ ವರ್ಷದ ಸಂಬಂಧವಾಗಿ ಬ್ಯಾಂಕಿನ ಡಾಯರೆಕ್ಟರರ ರಿಪೋರ್ಟನ್ನೂ ಆಢಾವೆ ಪತ್ರಿಕೆಯನ್ನೂ ಅಂಗೀಕರಿಸಲಿಕ್ಕೆ.

(೨) ಡಿವ್ಹಿಡೆಂಡ ಠರಾಯಿಸಲಿಕ್ಕೆ

(೩) ಸನ್ ೧೯೨೬–೨೭ ಸಾಲಿನ ಬಾಬತ ಮ್ಯಾನೇಜಿಂಗ ಕಮಿಟಿಯ ಮೆಂಬರರನ್ನೂ ವ ಮ್ಯಾನೇಜಿಂಗ ಡಾಯರೆಕ್ಟರರನ್ನೂ ಆರಿಸಲಿಕ್ಕೆ.

(೪) ಸನ್ ೧೯೨೬–೨೭ ಸಾಲಿನ ಬಾಬತ ಸುಪರವಾಯಿಜಿಂಗ ಬೋರ್ಡಿನ ಮೆಂಬರರನ್ನೂ ಆರಿಸಲಿಕ್ಕೆ.

(೫) ಸನ್ ೧೯೨೬–೨೭ ಸಾಲಿನ ಬಾಬತ ಆಡಿಟರರನ್ನು ನೇಮಿಸಲಿಕ್ಕೆ ಹಾಗೂ ಅವರ ಮುಶಾಹರೆ ಠರಾಯಿಸಲಿಕ್ಕೆ

(೬) ಚೇರಮನ್‌ರು ಸೂಚಿಸಿದ ಇತರ ವಿಷಯಗಳನ್ನು ಕುರಿತು ವಿಚಾರ ಮಾಡಲಿಕ್ಕೆ.

ಧಾರವಾಡ } M. B. JAKATI.
೧೯–೪–೨೬ } ಮ್ಯಾನೇಜಿಂಗ ಡಾಯರೆಕ್ಟರ.

ವಿಜಯ.

ಧಾರವಾಡ ತಾ- ೨೧ ೪-೨೮ ನೇ ಇಸ್ವಿ

ಖೈರಪೂರ ಸಂಸ್ಥಾನದ ಜೀರ್ಣಾವಸ್ಥ ಸ್ಥಿತಿಯು.

ಖೈರಪೂರ ಸಂಸ್ಥಾನದಲ್ಲಿ ಅನಾಯಕತನ ಮಾಡಿದ್ದು, ಅಲ್ಲಿಯ ಪ್ರಜೆಗಳಲ್ಲಿ ಇಲಿಯು ಓಡುತ್ತಿರುವದೆಂಬ ಸಮಾಚಾರವನ್ನು ಈ ಮೊದಲು ಬರೆದಿರುತ್ತೇವೆ. ಇದು ಸಣ್ಣ ಪುಟ್ಟ ಸಂಸ್ಥಾನವಲ್ಲ. ಕೊಲ್ಹಾಪೂರದಷ್ಟು ದೊಡ್ಡದು. ಎಪ್ಪತ್ತು ಲಕ್ಷದ ಆದಾಯವುಳ್ಳದ್ದು. ಹೋದ ವರ್ಷ ೩೮,೨೨,೯೯೯ ರೂಪಾಯಿ ಜಮೆ ಮತ್ತು ೩೯೬೭,೭೧೯ ರೂಪಾಯಿ ವೆಚ್ಚವೆಂದು ತೋರಿಸಿದ್ದಾರೆ. ಇದರಲ್ಲಿ ನವಾಬರ ವೆಚ್ಚವನ್ನು ಬಹಳ ಕಡಿಮೆ ತೋರಿಸಿದ್ದಾರೆ. ಅವುಗಳ ವಿವರ-

ರಾಜಪಿಂಚಣಿಯ ಪೋಷಣೆ- ೯೦,೩೭೪

ದರಬಾರದ ಪ್ರತಿಷ್ಠೆಗಾಗಿ- ೫೦,೨೧೩

ನವಾಬರ ಸ್ವಂತ ವೆಚ್ಚ- ೩೭,೮೯೮

ಈ ಸಂಸ್ಥಾನದ ಕಾರಭಾರದ ವೆಚ್ಚವು ಹತ್ತು ಲಕ್ಷಕ್ಕಿಂತ ಹೆಚ್ಚಾಗುವದಿಲ್ಲ. ವಾಸ್ತವಿಕವಾಗಿ ವೆಚ್ಚ ಹೋಗಿ ಇಪ್ಪತ್ತು ಲಕ್ಷದ ಉಳಿತಾಯವಾಗಬೇಕು. ಆದರೆ ಒಂದು ಕಾಸು ಕೂಡ ಉಳಿಯುವದಿಲ್ಲ. ನವಾಬರು ನೋಡಲಿಕ್ಕೆ ಸುಂದರರಿದ್ದರೂ, ವಿಲಾಸದಲ್ಲಿಯೇ ಕಾಲ ಕಳೆಯುವರು. ಹೋದ ವರ್ಷ ಪುಣೆಗೆ ಬಂದಾಗ, ನಾಗಲಿಂಗಪ್ಪನಂತೆ ದುಡ್ಡು ಸೂರೆ ಮಾಡಿದರು. ಅಗ್ಗೀ ಟೀಕಮ್ಮಾಯಿ ... ಇವರಿಗೊಪ್ಪಿ ತಮ್ಮ ಪಿಡ್ಡಾನೆ ... ಹೆಸರು ಗುಲಾಮನಲ್ಲಿಯೂ. ಈತನು ನವಾಬಸಾಹೇಬರ ... ಮತ್ತು ಪೊಲಿಟಿಕಲ್ ಸೆಕ್ರೆಟರಿಯಾಗಿದ್ದವನೇ ಯುವರಾಜನೇ ಆಗಿದ್ದನು. ಇತ್ತಲಾಗಿ ನವಾಬರಿಗೆ ಮಗನು ಹುಟ್ಟಿದ್ದರಿಂದ ನವಾಬಗಿರಿ ... ತಪ್ಪಿದೆ. ಈತನು ಹೇಳಿದನ್ನು ನವಾಬರು ಕೇಳುವದು ತಮ್ಮ ಮೇಲಾಗಿ ... ಮತ್ತು ಪೊಲಿಟಿಕಲ್ ಸೆಕ್ರೆಟರಿಯು. ... ಯಾವನೊಬ್ಬ ಪತ್ರ ... ಜನರ ಪ್ರಾಣವನ್ನು ... ಜನರಿಗೆ ... ಆಗಿದ್ದನೆ. ಈ ... ಹೆಗ್ಗಿದ್ದರೂ, ಸಂಸ್ಥಾನದ ಆಡಳಿತವು ಸರಿಯಾಗಿ ನಡೆಯಬೇಕೆಂದು ಮುಂಬಯಿ ಸರಕಾರದವರು ಒರಿಯೆಂಟಲ ಟ್ರಾನ್ಸಲೇಟರರಾಗಿದ್ದ ಮಿ. ಶೇಖ ಯಾಕುಬ ವಜೀರ ಮಹಮ್ಮದ ಸಾಹೇಬರನ್ನು ದಿವಾನರಾಗಿ ಕಳಿಸಿದರು. ಎರಡನೆಯ ಬಾಜೀರಾಯನ ಕಾಲದಲ್ಲಿ ನಾನಾ ಫಡನವೀಸನಂಥ ಚತುರ ಮಂತ್ರಿ ಇದನಲ್ಲಿ? ಅದೇ ತರಹದ ದುರವಸ್ಥೆಯು ಈ ವಜೀರರಿಗೆ ಪ್ರಾಪ್ತವಾಯಿತು. ಯಾವದೊಂದು ಸಂಸ್ಥಾನದ ಕಾರಭಾರದಲ್ಲಿ ಕೈ ಹಾಕಬಾರದೆಂದು ಹಿಂದುಸ್ಥಾನ ಸರಕಾರದ ಪ್ರಸ್ತುತ ಮತವು. ಈ ಪ್ರಕಾರ ಅವರು ಅಲ್ಲಿ ನಡೆದ ದುಂದುಗಾರಿಕೆ ಮತ್ತು ಅನಾಯಕತನದ ವರ್ತಮಾನ ಕೇಳುತ್ತಿದ್ದರೂ, ತೂಷ್ಣೀಭಾವದಲ್ಲಿದ್ದರು. ಅನಾಯಕತನದ ಅತಿರೇಕವಾಗಿ ದಿವಾನರ ಜೀವದ ಮೇಲೆ ಸಂಕಟ ಬಂದ ವರ್ತಮಾನ ಕೇಳಿ, ಸರಕಾರದವರು ಎಚ್ಚತ್ತಿದ್ದಾರೆ. ಸಂಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಸರಿಪಡಿಸಬೇಕೆಂದು ಒಬ್ಬ ಯುರೋಪಿಯನ್ನ ಅಮಲದಾರನನ್ನು ನೇಮಿಸಿ, ದುಂದುಗಾರಿಕೆಯಿಂದ ದ್ರವ್ಯಹಾನಿ ಮಾಡುವ ನವಾಬ ಮತ್ತು ಅವರ ತಮ್ಮನ ಕೈ ಕಟ್ಟುವರು. ಸಾಹೇಬಜಾದನು ಇದೇ ಅವಿವೇಕ ವಾತಾವರಣದಲ್ಲಿ ಬೆಳೆದರೆ ಅವನೂ ಕೆಟ್ಟು ಹೋಗುವನೆಂಬ ಹೆದರಿಕೆಯಿಂದ ಶಿಕ್ಷಣಕ್ಕಾಗಿ ಒಬ್ಬ ಸಾಹೇಬನನ್ನು ನೇಮಿಸಿ, ಇವನನ್ನು ವಿಲಾಯತಿಯ ಶುದ್ಧ ಹವೆಗೆ ಕಳಿಸುವರು.

ರಾಶಿಯ ದೆಸೆಯಿಂದ ರೈತರ ದಂಗೆ!

ಪೋಲೀಸ ಸಬ್ ಇನ್ಸಪೇಕ್ಟರರಿಗೆ ಪೈಕುರಿ ಹೊಡೆದರು.

ಮದ್ರಾಸ ಇಲಾಖೆಗೆ ಸೇರಿದ ಸತ್ಯಮಂಗಳ ತಾಲೂಕ ಗ್ರಾಮದಲ್ಲಿ ಹೊಲದಲ್ಲಿ ಮಾಡಿದ ರಾಶಿಯ ದೆಸೆಯಿಂದ ರೈತರೊಳಗೆ ಜಗಳ ಹತ್ತಿತು. ಎರಡು ಪಂಗಡಗಳಾದವು. ದಂಗೆಯಾಗುವ ಸಂಭವ ತಿಳಿದು ಸಬ್ ಇನ್ಸಪೇಕ್ಟರರು ಶಸ್ತ್ರಧಾರಿಗಳಾದ ಸಿಪಾಯರನ್ನು ಕರಕೊಂಡು ಹೋದರು. ರೈತರು ಮತ್ತಷ್ಟು ಕೋಪಗೊಂಡು, ಇನ್ಸಪೇಕ್ಟರರನ್ನು ಸಿಪಾಯರನ್ನೂ ಪೈಪೋಟಿ ಥಳಿಸಿದರು. ಈ ವರ್ತಮಾನ ಕೇಳಿ, ಸಬ್ ಡಿವಿಜನಲ ಮ್ಯಾಜಿಸ್ಟ್ರೇಟರು ಮೋಟಾರದಲ್ಲಿ ಬಂದರು. ದಾರಿಯಲ್ಲಿಯೇ ಮೋಟಾರನ್ನು ಅಡ್ಡಗಟ್ಟಿದರು. ಮ್ಯಾಜಿಸ್ಟ್ರೇಟರು ಯುಕ್ತಿಯಿಂದ ಪಾರಾಗಿ, ಶಸ್ತ್ರಧಾರಿ ಪೋಲೀಸರ ಸಹಾಯದಿಂದ ಅನೇಕರನ್ನು ದಸ್ತಗಿರ ಮಾಡಿದರು. ಒಂದು ಸ್ಥಳದಲ್ಲಿ ನಾಲ್ವರಿಗಿಂತ ಹೆಚ್ಚು ಜನರು ಸೇರಬಾರದೆಂದು ಊರೊಳಗೆ ಡಂಗುರ ಹೊಡಿಸಿ, ಪೋಲೀಸ ಕಾವಲಿಟ್ಟಿದ್ದಾರೆ.

ಸಭೆಯ ಹೆದರಿಕೆ ಹೋಗಿಲ್ಲ-

ಲಾರ್ಡ ರೀಡಿಂಗಸಾಹೇಬರು ಶಾಸ್ತ್ರೀಯವರಿಂದ ಕನ್ಯಾಕುಮಾರಿಯ ತನಕ ಹಬ್ಬಿದ್ದ ಅಸಹಕಾರದ ಆಂದೋಲನವನ್ನು ಅಡಗಿಸಿ ಬಿಟ್ಟರೆಂದು ಅವರ ಸ್ತುತಿಯು ನಡೆಯಿತು. ಆದರೂ ಬೆಂಗಳೂರಿನ ಪೋಲೀಸರಿಗೆ ಇದರ ಹೆದರಿಕೆಯು ಇನ್ನೂ ಹೋಗಿಲ್ಲ. ರಾಷ್ಟ್ರೀಯ ಸಪ್ತಾಹದಲ್ಲಿ ಸ್ವರಾಜ್ಯ ಪಕ್ಷೀಯರದೊಂದು ದೊಡ್ಡ ಸಭೆಯು ಲಾಲಬಾಗಿನಲ್ಲಿ ಕೂಡುವಂತೆ ಜಾಹೀರ ಪತ್ರಿಕೆಗಳು ಹಂಚಲ್ಪಟ್ಟವು. ಸಾವಿರಾರು ಜನರು ವೇಳೆಗೆ ಸರಿಯಾಗಿ ಸಭಾಸ್ಥಾನಕ್ಕೆ ಬಂದರು. ಪ್ರಚಂಡ ಜನಸ್ತೋಮ ಸೇರಿತು. ಸಭೆಯ ಪ್ರಾರಂಭದ ಕಾಲ. ಆಗ ಪೋಲೀಸರು ಸಾರ್ವಜನಿಕ ಶಾಂತತೆಯ ಭಂಗವಾಗುತ್ತದೆಂದು ಜಾಹೀರ ... ಯಿಂದಲೇ ಹೇಳಿ, ಸಭೆಯನ್ನು ಮುರಿದರು!!

ನಾಲ್ವರು ಪೋಲೀಸರಿಗೆ ಬರತರ್ಫ-

ಮುಂಬಯಿಯಲ್ಲಿ ಒಬ್ಬ ಪುಂಡನು ಪೋಲೀಸರ ಲಾಕಪ್ಪಿನ ... ಳಗಿನ ಕಿಟಕಿಗಳ ಕಬ್ಬಿಣದ ಸಳಿಗಳನ್ನು ಮುರಿದು, ಅದರೊಳಗಿಂದ ಹಾರಿ, ಓಡಿಹೋಗಿದ್ದನು. ಆಗ ಕಾವಲಗಾರರ ತಪ್ಪಿರುತ್ತದೆಂದು ಪೋಲೀಸ ಕಮಿಶನರರು ನಿರ್ಧರಿಸಿ, ಒಬ್ಬ ಹವಾಲದಾರ ಮತ್ತು ಮೂವರು ಸಿಪಾಯರಿಗೆ ಬರತರ್ಫ ಮಾಡಿದ್ದಾರೆ. ಈ ಮೂವರೂ ಸಶಸ್ತ್ರ ಶಾಖೆಗೆ ಸೇರಿದವರು

ಅಧ್ಯಕ್ಷರು ಎಚ್ಚರದಪ್ಪಿದರು-

ಬಂಗಾಲದಲ್ಲಿ ಮೈಮನಸಿಂಗ ಜಿಲ್ಹೆಗೆ ಸೇರಿದ ಟಾಂಗೇಲ ಪೋಬಲಿ ಜಿಲ್ಹಾ ಸಭೆಯು ಕೂಡಿತ್ತು. ಅಧ್ಯಕ್ಷರಾದ ಕುಮಾರ ವಿಶ್ವನಾಥ ಪಿ... ಮೂರು ಮೈಲಿನ ತನಕ ಆಯಿತು. ಇದೇ ದಿ... ಇವರು ಅಧ್ಯಕ್ಷ ಪದಾರೋಹಣರಾಗಿ ಭಾಷಣವನ್ನು ಓದಲಾರಂಭಿಸಿದರು. ಎರಡು ಪಾನು ಓದುವದರೊಳಗಾಗಿ ಎಚ್ಚರದಪ್ಪಿ ಬಿದ್ದರು. ಡಾಕ್ಟರರು ಕೂಡಲೆ ಉಪಚಾರ ಮಾಡಿದರು. ೨೪ ತಾಸುಗಳ ನಂತರ ಎಚ್ಚರಿಕೆ ಬಂತು.

ಹೈದರಾಬಾದಿನಲ್ಲಿ ಎರಡು ತಾಸುಗಳ ವರೆಗೆ ಆನೆಕಲ್ಲಿನ ಅದ್ಭುತ ವೃಷ್ಟಿಯಾಗಿ, ನಿಜಾಮ ಸಾಹೇಬರ ಫಲಕನಾಮಾ ಎಂಬ ಸುಂದರ ಅರಮನೆಯ ಕಿಟಕಿಗಳ ಕನ್ನಡಿಗಳು ಒಡೆದು, ನುಚ್ಚುನೂರಿಯಾಗಿ ನೆಲದ ತುಂಬ ಹಾಸಿ, ೩೫೦೦೦ ರೂಪಾಯಿಗಳ ನಷ್ಟವಾಗಿರುತ್ತದೆ.

ಆನಿಬೆಝಂಟಮ್ಮನವರು ತಾವು ನವೆಂಬರ ... ದಿನದಿಂದ ಮೇ ತಿಂಗಳ ಆರನೇ ತಾರೀಖಿನ ದಿನ ಇಂಗ್ಲಂಡಕ್ಕೆ ಪ್ರಯಾಣ ಬೆಳೆಸುವರು.

ನರಿಯು ಕೂಗು ಸ್ವರ್ಗಕ್ಕೆ ಕೇಳಿಸುವದೇ?

—೦—

ಪ್ರತಿಯೋಗಿ ಸಹಕಾರಿಗಳೆಂದು ಹೆಸರ್ಗೊಂಡ ಜಯಕರ ಕೇಳಕರರು ದೊಡ್ಡ ಕೂಗೆಬ್ಬಿಸಿದ್ದರೂ, ಅವರ ಕೂಗು ನರಿಯ ಕೂಗು ಸ್ವರ್ಗಕ್ಕೆ ಕೇಳಿಸುವದೇ ಎಂಬಂತಾಗುತ್ತದೆ. ದಿವಾನಬಹಾದ್ದೂರ ಚಿಂತಾಮಣಿಯವರ ಕೂಡ ಸಂಯುಕ್ತ ರಾಷ್ಟ್ರೀಯ ಮಂಡಲ ಸ್ಥಾಪಿಸಲು ಮುಂದೆ ಬರಿದ ಮುಂಬಯಿಯ ದೇಶಪಾಂಡೆ ಎಂಬುವರು ಸಾಕಷ್ಟು ವಿರೋಧದಿಂದ ತಮ್ಮ ಬಲದ ಪರೀಕ್ಷೆ ಮಾಡಿದ್ದಾರೆ. ಮರ್ಹಾಟರ ರಾಜ್ಯವು ಮಹಾರಾಷ್ಟ್ರದಲ್ಲಿ ಕೆಲ ಬ್ರಾಹ್ಮಣರು ಇವರ ಭಕ್ತರು. ಉಳಿದವರೆಲ್ಲ ಪ್ರತಿಯೋಗಿ ಸಹಕಾರವೆಂಬ ಹೆಸರೇ ಇಲ್ಲೆಂದು ಹೇಳಬಹುದು. ಇವರ ವಿರೋಧವು ಯಥಾರ್ಥವಾಗಿದ್ದು ಕರ್ನಾಟಕದಲ್ಲಂತೂ ಸಹಕಾರಿಗಳೆಂಬವರು ಇಲ್ಲವೇ ಇಲ್ಲ. ಒಬ್ಬಿಬ್ಬರಿದ್ದರೆ ಅವರಿಗೆ ಹಿಂಬಲವಿಲ್ಲ. ನಾನ ಪ್ರತಿಯೋಗಿ ಸಹಕಾರಿಯಾಗಿದ್ದೇನೆಂಬ ಹೆಸರಿನಿಂದ ಯಾವನಾದರೂ ಉಮೇದವಾರನಾಗಿ ನಿಂತರೆ ವ್ಯರ್ಥ ಶ್ರಮವೂ ದ್ರವ್ಯಹಾನಿಯೂ ಮಾತ್ರ ಆಗುವದುಂಟು.

ಮೂರನೇ ಕರ್ನಾಟಕ ಕೀರ್ತನ ಸಂಮೇಲನ
(ಪ್ರಕಟನೆ ೫.)

—೦—

ಕೀರ್ತನ ಸಂಮೇಲನದ ಸಹಾಯಕ ಕಾರ್ಯದರ್ಶಿಯಾದ ನನ್ನ ಹೆಸರಿಲೆ ಮೈಸೂರಿನ ಅರಸು ಮನೆತನದವರಾದ ಶ್ರೀಮಾನ ರಾಜಕುಲಭೂಷಣ ಎಚ್ ಲಿಂಗರಾಜೆ ಅರಸಿನವರ ಪತ್ರವನ್ನು ಅಖಿಲ ಕರ್ನಾಟಕಸ್ಥರ ಅವಗಾಹನೆಗಾಗಿ ಪ್ರಕಟಿಸುತ್ತೇನೆ. ಈ ಪತ್ರದ ಬಗ್ಗೆ ಹಾಗೂ ಸಮ್ಮೇಲನದ ಅಧ್ಯಕ್ಷತೆಯ ಭಾರವನ್ನು ಈ ಮನೆತನದವರು ವಹಿಸಿದುದಕ್ಕೆ ಎಲ್ಲ ಕರ್ನಾಟಕಸ್ಥರೂ ಚಿರಋಣಿ ಇರುವರೆಂದು ಬೇರೆ ಹೇಳಬೇಕಾಗಿಲ್ಲ.

ಕನಕಾರ ಕೇವಳ
ರಾಘವೇಂದ್ರರಾವ ಜಾಗಲದ್ದಿ ವಕೀಲ
ಕೊಪ್ಪಳ,

ಸಹಾಯಕ ಕಾರ್ಯದರ್ಶಿ ಮೂರನೇ ಕರ್ನಾಟಕ ಕೀರ್ತನ ಸಮ್ಮೇಲನ,

ಮಹಾಶಯರೇ,

ನೀವು ನನ್ನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಬರೆದು ಕಳಿಸಿದ ಆಹ್ವಾನ ಪತ್ರಿಕೆಯು ಬಹು ಮುಟ್ಟಿ ಮನಸ್ಸಿಗೆ ಸಮಾಧಾನವನ್ನುಂಟು ಮಾಡಿತು. ನೀವು ಇಟ್ಟುಕೊಂಡಿರುವ ಈ ಕರ್ನಾಟಕ ಕೀರ್ತನ ಸಮ್ಮೇಲನದ ಕಾರ್ಯವು ಅತಿ ಘನವಾದದರಿಂದ ನಿಮ್ಮಂತಹ ದೇಶವತ್ಸಲರಿಂದ ಸಾಧ್ಯವೇ ವಿನಹ ಮಿಕ್ಕವರಿಂದ ಆಗತಕ್ಕದ್ದಲ್ಲ. ಪರಮ ಮಿತ್ರರಾದ ನೀವು ಅತಿ ದೂರ ದೇಶದಲ್ಲಿರುವ ನನ್ನನ್ನು ಜ್ಞಾಪಕಕ್ಕೆ ತಂದುಕೊಂಡು ಸಮ್ಮೇಲನದ ಅಧ್ಯಕ್ಷತೆಯನ್ನಿತ್ತು ಬಹುಮಾನಿಸಬೇಕೆಂದು ಉದ್ದೇಶಿಸಿರುವಲ್ಲಿ ಎಂತೆಯು ಬರುವಾಗ ಕಣ್ಣನ್ನು ಮುಚ್ಚಿಕೊಂಡನೆಂಬ ಗಾದೆಯಂತೆ ಇಂತಹ ಸಮಯವನ್ನು ಕಳೆದುಕೊಂಡರೆ ಅದಿಗೆ ನಷ್ಟವೆಂಬುದನ್ನು ನಾನು ತಿಳಿದಿರುವೆನಾದುದರಿಂದ ನಿಮ್ಮ ಸಂಮೇಲನವು ನಡೆಯುವ ಕಾಲದಲ್ಲಿ ಇಲ್ಲಿ ನನಗೆ ಅನೇಕ ಕೆಲಸಗಳಿದ್ದಾಗ್ಯೂ ಅವುಗಳನ್ನೆಲ್ಲ ದೂರೀಕರಿಸಿ ನಿಮ್ಮ ಕಾರ್ಯವೇ ಮುಖ್ಯವೆಂದು ತಿಳಿದು ಆಹ್ವಾನವನ್ನು ಮನಃಪೂರ್ವಕ ಅಂಗೀಕರಿಸಿರುವೆನು. ಸಂಮೇಲನಕ್ಕೆ ಸಂಬಂಧವಾದ ಹಿಂದಿನ ನಡವಳಿಕೆಗಳಿದ್ದಲ್ಲಿ ಅವುಗಳನ್ನು ದಯವಿಟ್ಟು ಕಳುಹಿಸಿಕೊಡುವಿರೆಂದು ನಂಬುತ್ತೇನೆ.

ಪ್ರಕಟಣೆ.
ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿ,
ಗದಗ.

—೦—

ಬರುವ ಮೇ ತಿಂಗಳ ೭ ನೆಯ ತಾರೀಖು ಶುಕ್ರವಾರ ಅಪರಾಹ್ನ ೪ ಘಂಟೆಗೆ ಹುಬ್ಬಳ್ಳಿಯಲ್ಲಿ ಶ್ರೀ ವಿಶ್ವನಾಥರಾವ ಜೋಶಿ ಇವರ ಮಂದಿರದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ, ಕಾರ್ಯಕಾರೀ ಮಂಡಲದ ಸಾಧಾರಣ ಅಧಿವೇಶನವು ಜರಗುವದು. ಚರ್ಚಿಸತಕ್ಕ ವಿಷಯಗಳು ಮಹತ್ವವುಳ್ಳವುಗಳಾಗಿರುವದರಿಂದ ಯಾವತ್ತು ಸದಸ್ಯರು ದಯವಿಟ್ಟು ತಪ್ಪದೆ ಬರಬೇಕೆಂದು ಪ್ರಾರ್ಥನೆಯುಂಟು.

ಚರ್ಚಿಸತಕ್ಕ ವಿಷಯಗಳು.

(೧) ಕಾನೂನ ಮಂಡಲಗಳಿಗೆ ಕಾಂಗ್ರೆಸ ಉಮೇದವಾರರನ್ನು ಆರಿಸುವದು.

(೨) ೫೦ ನೆಯ ರಾಷ್ಟ್ರೀಯ ಮಹಾಸಭೆಯ ಸ್ವಾಗತ ಮಂಡಲದ ಲೆಕ್ಕ ತಪಾಸಿಕರು ಕಳಿಸಿದ ವರದಿಯ ವಿಚಾರಣೆ

(೩) ಕರ್ನಾಟಕದಲ್ಲಿ ಹಿಂದೂಸ್ತಾನೀ ಸೇವಾದಳದ ಕಾರ್ಯವನ್ನು ಮುಂದುವರಿಸುವ ಕುರಿತು ಅ. ಭಾ. ರಾ. ಮಂಡಲದವರ ಠರಾವಿನನ್ವಯ ನಿರ್ಧಾರಕರನ್ನು ನಿಯಮಿಸುವ ವಿಚಾರ.

(೪) ಕಳೆದ ಸಭೆಗಳಲ್ಲಿ ಚರ್ಚಿಸದೆ ಉಳಿದ ವಿಷಯಗಳ ಚರ್ಚೆ.

(೫) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ವೆಂಕಟರಾವ ಹುಯಿಲಗೋಳ
ಕಾರ್ಯದರ್ಶಿ ಕ. ಪ್ರಾ. ಕಾ. ಕ

---

೪ ನೆಯ ಕರ್ನಾಟಕ-ಪ್ರಾಂತೀಯ ಮಹಾಸಭೆಯ ಆಹ್ವಾನ ಮಂಡಳಿ, ಬಳ್ಳಾರಿ.

—೦—

ಆಯ್ಯಾ,

ಬಳ್ಳಾರಿಯಲ್ಲಿ ಇದೇ ವರುಷ ಮೇ ತಿಂಗಳ ೨೦, ೨೧ ನೇ ತಾರೀಖುಗಳಲ್ಲಿ ನಾಲ್ಕನೆಯ ಕರ್ನಾಟಕ ಪ್ರಾಂತೀಕ ಮಹಾ ಸಭೆಯೂ ಕರ್ನಾಟಕ ಏಕೀಕರಣದ ಸಭೆಯೂ ಸಹಾ ಜರಗುವವು. ತಿಳಿಯುವದು.

ಕ. ಗುರುರಾಜಾರಾವು,
ಕೃ. ತಿ. ಶ್ರೀನಿವಾಸಾಚಾರ್ಯ,
ಡಿ. ಎಸ. ಹನುಮಂತರಾಯರು,
ಕಾರ್ಯದರ್ಶಿಗಳು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಆಹ್ವಾನ ಮಂಡಲಿ, ಬಳ್ಳಾರಿ.

—೦—

ಆಯ್ಯಾ,

ಇದೇ ವರುಷ ಮೇ ತಿಂಗಳು ೨೨, ೨೩ ತಾರೀಖಿನಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಜರಗುವದು ತಿಳಿಯುವದು.

ವೆಂಕೋಬಾಚಾರ್ಯ ಪ್ಯಾಟಿ,
ಶಿದಪ್ಪ ಶಿಂದಿಗಿ,
ಕಾರ್ಯದರ್ಶಿಗಳು.

ಬಂಗಾಲದಲ್ಲಿ ಮಿದನಾಪೂರ ಜಿಲ್ಹೆಯ ಮಹಿಷಾದಿಪೂರ ಗ್ರಾಮದಲ್ಲಿ ಬಿದ್ದ ಬೆಂಕಿಯಿಂದ ೪೦ ಮನೆಗಳು ಹಾರಿ ಬಿದ್ದವು. ಪ್ರಾಣಹಾನಿಯೇನೂ ಆಗಲಿಲ್ಲ.

ವಿಜಾಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ. ಅಂಗಡಿಯವರು ಕೌನ್ಸಿಲ ಚುನಾವಣೆಯಲ್ಲಿ ಅಧ್ಯಕ್ಷರಾಗಬೇಕೆಂದು ಪ್ರಯತ್ನಿಸಿದ ವಿಷ್ಣು ಯ ವರದಿಯಾಗಿದೆ.

ಧಾರವಾಡ

ಇವತ್ತಿನ ದಿವಸ ಸಾಯಂಕಾಲದಲ್ಲಿ ಮ್ಯುನಿಸಿಪಾಲಿಟಿಯ ಜನರಲ ಕಮೀಟಿ ಸೇರಿ, ಈ ವರ್ಷದ ದೆಸೆಯಿಂದ ಮ್ಯಾನೇಜಿಂಗ, ಮತ್ತು ಸ್ಟ್ಯಾಂಡಿಂಗ ಕಮೀಟಿಗಳ ಬಗ್ಗೆ ಚೇರಮನ್ನ ಮತ್ತು ಮೆಂಬರರನ್ನು ಆರಿಸುವ ಕೆಲಸ ನಡೆಯುವದು

ನಾಳಿನ ರಜೆ —

ಇಂದು ಶ್ರೀರಾಮ ಜಯಂತಿಯ ದಿನವಾದ್ದರಿಂದಲೂ ಕೆಲಸಗಾರರಿಗೆ ರಜೆ ಇರುವದರಿಂದ ನಾಳಿನ ದಿವಸ ವಿಜಯವು ಪ್ರಕಟವಾಗಲಾರದು.

ಪ್ರಕಟನೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ,
ಗದಗ.

—೦—

ಬರುವ ಮೇ ತಿಂಗಳ ೭ ನೆಯ ತಾರೀಖು ಶುಕ್ರವಾರ ಅಪರಾಹ್ಣ ೪ ಘಂಟೆಗೆ ಹುಬ್ಬಳ್ಳಿಯಲ್ಲಿ ಶ್ರೀ ವಿಶ್ವನಾಥರಾವ ಜೋಶಿ ಇವರ ಮಂದಿರದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲದ ಸಾಧಾರಣ ಅಧಿವೇಶನವು ಜರಗುವದು. ಚರ್ಚಿಸತಕ್ಕ ವಿಷಯಗಳು ಮಹತ್ವವುಳ್ಳವುಗಳಾಗಿರುವದರಿಂದ ಯಾವತ್ತು ಸದಸ್ಯರು ದಯವಿಟ್ಟು ತಪ್ಪದೆ ಬರಬೇಕೆಂದು ಪ್ರಾರ್ಥಿಸಿದೆ.

ಚರ್ಚಿಸತಕ್ಕ ವಿಷಯಗಳು.

(೧) ಕಾನೂನು ಮಂಡಲಗಳಿಗೆ ಕಾಂಗ್ರೆಸ ಉಮೇದವಾರರನ್ನು ಆರಿಸುವದು.

(೨) ೪೯ ನೆಯ ರಾಷ್ಟ್ರೀಯ ಮಹಾಸಭೆಯ ಸ್ವಾಗತ ಮಂಡಲದ ಲೆಕ್ಕ ತಪಾಸಿಕರು ಕಳಿಸಿದ ವರದಿಯ ವಿಚಾರಣೆ

(೩) ಕರ್ನಾಟಕದಲ್ಲಿ ಹಿಂದುಸ್ಥಾನೀ ಸೇವಾದಲದ ಕಾರ್ಯವನ್ನು ಮುಂದುವರಿಸುವ ಕುರಿತು ಅ. ಭಾ. ರಾ. ಮಂಡಲದವರ ಠರಾವಿನನ್ವಯ ಪ್ರಚಾರಕರನ್ನು ನಿಯಮಿಸುವ ವಿಚಾರ.

(೪) ಕಳೆದ ಸಭೆಗಳಲ್ಲಿ ಚರ್ಚಿಸದೆ ಉಳಿದ ವಿಷಯಗಳ ಚರ್ಚೆ.

(೫) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ವೆಂಕಟರಾವ ಹುಯಿಲಗೋಳ
ಕಾರ್ಯದರ್ಶಿ ಕ. ಪ್ರಾ. ಕಾ. ಕ.

---

೪ ನೆಯ ಕರ್ನಾಟಕ ಪ್ರಾಂತೀಯ ಮಹಾಸಭೆಯ
ಆಹ್ವಾನ ಮಂಡಳ, ಬಳ್ಳಾರಿ.

—೦—

ಅಯ್ಯಾ,

ಬಳ್ಳಾರಿಯಲ್ಲಿ ಇದೇ ವರುಷ ಮೇ ತಿಂಗಳ ೨೦, ೨೧ ನೇ ತಾರೀಖುಗಳಲ್ಲಿ ನಾಲ್ಕನೆಯ ಕರ್ನಾಟಕ ಪ್ರಾಂತೀಯ ಮಹಾ ಸಭೆಯೂ ಕರ್ನಾಟಕ ಏಕೀಕರಣದ ಸಭೆಯೂ ಸಹಾ ಜರಗುವವು. ತಿಳಿಯುವದು.

ಕ. ಗುರುರಾಜಾರಾವ್,
ಕೃ. ತಿ. ಶ್ರೀನಿವಾಸಾಚಾರ್ಯ,
ಡಿ. ಎಸ. ಹನುಮಂತರಾಯರು
ಕಾರ್ಯದರ್ಶಿಗಳು.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ [illegible] ಹೇ! ತಲ್ಲಣಿಸಿಯೋ? ಮೈಯಲ್ಲಿ ನೋಯುತ್ತದೆಯೋ? ಆಗುವದಾದರೂ ಏನು?

ಅಪ್ಪನು— ಕಂದಾ— ಹೌದು ಮೈಯಲ್ಲಾ ನೋಯುತ್ತದೆ

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕ್ಕೊಳ್ಳಿ, [illegible] ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು [illegible] ಕೀಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ [illegible] ಕೊಡುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, [illegible]
[illegible] ಹುಬ್ಬಳ್ಳಿ



ವ್ರಣಸಂಹಾರ
ಅಥವಾ
ಗಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣ ಇಸಬು, ಗಜಕರ್ಣ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೆವೆಚ್ಚ ಬೇರೆ.

ಹುಬ್ಬಳ್ಳಿಯ ಏಜಂಟರು— ದಿ ಕನಕಾದಿತ್ಯ ಮೆಡಿಕಲಸ್ಟೋರ್ಸ, ಸ್ಟೇಶನ ರೋಡ ಹುಬ್ಬಳ್ಳಿ. ಕೋಟ ಮತ್ತು ಕಿರುಕಳದಂದಿಂದ ದೊರೆಯುವದು.

ಎನ. ಎಫ. ಪಂಟರ
ಖಡೇಬಝಾರ ಬೆಳಗಾವಿ

ವಿಜಯದ ವರ್ಗಣೀ ದರ

—೦—

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—[illegible]—೦ ರೂ
೩ "	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಆಣೆ ದೊಡ್ಡ ಕಾಲಮಿನ ಒಳಗಳಿಗೆ [illegible] ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಸಾರ	೩ "
ಲೋ. ತಿಲಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೩ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಈ ಪತ್ರವನ್ನು ಅನ್ನಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N B. 1443

ವಿಜಯ

ಸಾಪ್ತಾಹಿಕ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಶುಕ್ರವಾರ ತಾರೀಖು ೨೩ನೇ ಎಪ್ರೀಲ ೧೯೨೬ | ಸಂಚಿಕೆ ೯೧

ಸರಕಾರದಿಂದ ಪೇಟೆಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಕಾಸ್ಟಿನ ಸಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಬಾಗಿಲಿಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಬಾಗಿಲು ಮುಚ್ಚುತ್ತದೆ; ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿ ದೊರಕುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೦ ,,	,,	೨೫ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಖಾಹೀರ ನೋಟೀಸು

ಧರಮವ್ವಾ ಕೋಂ ನಿಂಗಪ್ಪಾ ಹೊಸ್ನತ್ತಿ ಯವರ o/o ಬಸಪ್ಪ ಹಸವರ ಸಾ|| ಮೆಡ್ಲೇರಿ ತಾಲೂಕ ರಾಣೇಬೆನ್ನೂರ ಪೋಸ್ಟ ಮೆಡ್ಲೇರಿ ಇ ವರಿಗೆ—

ನಾನು ನಿಂಗಪ್ಪಾ ಬಿನ ಗದ್ದೆಲ್ಲಪ್ಪಾ ಹೊಸ್ನತ್ತಿಯವರ ಸಾ|| ಮೆಡ್ಲೇರಿ ಹಾಲಿವಸ್ತಿ ಮಣಕೂರ ತಾಲ್ಲೂಕ ರಾಣೇಬೆನ್ನೂರ ಪೋಸ್ಟ ಹಲಗೇರಿ ನಾನು ಈ ನೋಟೀಸ ಮೂಲಕ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನವಾಗಿ ಅಜಮಾಸ ೭-೮ ವರ್ಷವಾಯಿತು ಲಗ್ನವಾದ ಮೇಲೆ ೪-೫ ವರ್ಷ ನನ್ನ ಕೂಡ ಸುರಳೀತ ಬಾಳ್ವೆ ಮಾಡಿದಿ ನಂತರ ಈಗ ಅಜಮಾಸು ವರ್ಷದ ಕೆಳಗೆ ಎರಡನೇದವರ ಚಿತಾವಣಿಯಿಂದ ನಾನು ನಿನ್ನ ಮೇಲೆ ಹಾಕಿದ ದಾಗೀನೆಗಳನ್ನು ತಗೊಂಡು ನಿನ್ನ ತವರ ಮನೆಗೆ ಹೋದಿ ನಂತರ ನಾನು ಮಣಕೂರಿಗೆ ಹೋಗಿ ಅಲ್ಲೆ ಬಾಳ್ವೆ ಮಾಡಿಕೊಂಡು ಇರೋಣ ಅಂತಾ ಹೇಳಿದರೆ ಕಬೂಲ ಮಾಡಲಿಲ್ಲಾ ವ ೨-೩ ಸಾರೆ ಪಂಚರ ಸಮಕ್ಷಮ ಕರೆದರೂ ಬರಲಿಲ್ಲಾ ವ ನನ್ನ ದಾಗೀನೆಗಳು ಅಂದ್ರೆ ಬಂದಿ ಬೆಳ್ಳಿಯ ಜತಿ ೧ ಅ| ಕಿ| ೨೫ ರೂ. ಸುತ್ತೀಪಟ್ಟಿ ಅ| ಕಿ| ೪೦ ರೂ. ಬೆಂಡವಲಿ ಥಳಿಗಾಂಡ್ಲು ಅ| ಕಿ| ೧೦ ರೂ. ಈ ಪ್ರಕಾರ ಸಾಮಾನುಗಳನ್ನು ತಂದು ಕೊಡಲಿಲ್ಲ ಈ ನೋಟೀಸ ಮೂಲಕ ತಿಳಿಸುವದೇನಂದರೆ- ಈ ನೋಟೀಸ ಮುಟ್ಟಿದ ೧೫ ದಿವಸದೊಳಗಾಗಿ ನನ್ನ ದಾಗಿನೆ ತಗೊಂಡು ನನ್ನ ಹತ್ರ ಬಾಳ್ವೆ ಮಾಡಲಿಕ್ಕೆ ಬರಬೇಕು. ಇಲ್ಲದಿದ್ದರೆ ಇದೇ ನೋಟೀಸೇ ಅಂತಾ ತಿಳಿಕೊಳ್ಳುವದು ನನ್ನ ಆಸ್ತಿ ಮೇಲೆ ನಿನ್ನ ಹಕ್ಕು ಇರುವದಿಲ್ಲ ನನ್ನ ದಾಗೀನ ಬಗ್ಗೆ ಬೇರೆ ನಿನ್ನ ಮೇಲೆ ಕಲ್ಸ ಹಚ್ಚಲಿಕ್ಕೇನೆ ಈ ನೋಟೀಸಿನ ಜಾಹೀರ ನಿನ್ನ ತಿಳಿಯ ಬೇಕ ಅದೆ.

ತಾ|| ೧೯-೪-೨೬.

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ನಿಂಗಪ್ಪಾ ಬಿನ ಗದ್ದೆಲ್ಲಪ್ಪಾ ಹೊಸ್ನತ್ತಿಯವರ ಸಾ|| ಮೆಡ್ಲೇರಿ ಹಾಲಿವಸ್ತಿ ಮಣಕೂರ ದ. ಮಾಡಿದ್ದು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗಯು ಆರು ಲಕ್ಷದ ಮೇಲುಂಟು, ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕ್ಯಾಶೀಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವವರಾವ ಬಿ. ಜಹಾಗೀ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಲಾಯತಿಯಲ್ಲಿ ಯುದ್ಧದ ಬೀಜ ಬಿತ್ತುವಿಕೆ.

ಇಟಲಿಯ ಈರಾಟೆ; ತುರುಕರ ಸನ್ನಾಹಿದ್ದತೆ.

ಫ್ರೆಂಚರಿಗೂ ಚಿಂತೆ.

ವಿಲಾಯತಿಯಲ್ಲಿ ಪ್ರತಿಯೊಂದು ದೇಶದಲ್ಲಿ ಪ್ರಜಾಸತ್ತಾತ್ಮಕವಾದ ದೊರೆತನವು ನೆಲೆಗೊಂಡಿತ್ತು. ಇಟಲಿಯ ಪ್ರಸ್ತುತದ ಮಂತ್ರಿಯಾದ ಮುಸಲೋಲಿನಿಯು ಮುಂಗೈ ಬಲದಿಂದ ರಾಜ್ಯಸೂತ್ರವನ್ನು ತನ್ನಾಧೀನ ಮಾಡಿಕೊಂಡನು. ಗ್ರೀಸ ಮತ್ತು ಸ್ಪೇನವು ಇವನನ್ನು ಹಿಂಬಾಲಿಸಿದವು. ಬೊಲ್ಶೆವಿಕ ಧೋರಣವಿದ್ದಂತೆ, ಮುಸಲೋನಿಯ ಫಾಸಿಸ್ಟ ಪಂಥದ ಭೂತವೂ ಪ್ರತಿಯೊಂದು ದೇಶದಲ್ಲಿದೆ. ಮಹಾಯುದ್ಧದ ಪೂರ್ವದಲ್ಲಿ ಜರ್ಮನಿಯ ಕೇಸರರು ವಿಲಾಯತಿಗೆಲ್ಲ ಭಯೋತ್ಪಾದಕರಾಗಿದ್ದರು. ಆವರ [illegible] ಸ್ಥಾನದಲ್ಲಿ ಮುಸಲೋನಿ ಸಾಹೇಬನಿಗೆ ಬಂದಿದೆ. ಇವರು ರಾಷ್ಟ್ರಸಂಘ, ಲೋಕಕಲ್ಯಾಣದ ಒಡಂಬಡಿಕೆ, ಶಾಂತತಾ ಪರಿಷತ್ತು ಮುಂತಾದವುಗಳನ್ನು ತುಚ್ಛವಾಗಿ ಎಣಿಸಿ, ತಮ್ಮ ದರ್ಪವೇ ನಡೆಯಬೇಕೆಂದಿದ್ದಾನೆ. ಭೂಮಧ್ಯ ಸಮುದ್ರದ ಸೀಮೆ ಮತ್ತು ಅದರ ಮೇಲೆ ಬೆಳಗುವ ಸೂರ್ಯಚಂದ್ರರು ತನ್ನ ಸ್ವಾಧೀನರಾಗಬೇಕೆಂದು ಹಂಬಲಿಸುವನು. ಸಾವಿರ ಕೈಗಳಿದ್ದ ಕಾರ್ತವೀರ್ಯಾರ್ಜುನನಂತೆ ಈತನ ಕೈಗಳು ಸಳಸಳ [illegible]. ಕಾರ್ತವೀರ್ಯಾರ್ಜುನನು ನದಿಯ ಪ್ರವಾಹವನ್ನು ತಡೆದರೆ ಮುಸಲೋನಿಯು ಭೂಮಧ್ಯ ಸಮುದ್ರದ ಪ್ರವಾಹವನ್ನು ತಡೆಯಬೇಕೆಂದಿದ್ದಾನೆ.

ಮೆಸೊಪೊಟೇಮಿಯದ ಅಬ್ದುಲ ಕರೀಮನಿಗೂ ಫ್ರಾನ್ಸ ಮತ್ತು ಸ್ಪೇನಗಳಿಗೂ ಒಡಂಬಡಿಕೆಯ ಪ್ರಸ್ತಾಪ ನಡೆದದ್ದು, ಇವೆರಡೂ ದೇಶಗಳು ಆಫ್ರಿಕದ ಒಂದು ಭಾಗವನ್ನು ನುಂಗಿದರೆ ಇಟಲಿಯು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ? ಇದೆಂದೂ ಆಗದ ಮಾತು. ಅಲ್ಲಿಯೂ ಇಟಲಿಗೆ ರಾಜ್ಯಾಂಶ ದೊರೆಯಬೇಕೆಂದು ಮುಸಲೋನಿಯು ಸಂಕಲ್ಪ ಮಾಡಿದ್ದಾನೆ. [illegible] ಇಟಲಿಗೆ ಭೂಮಿ ದೊರೆಯಬೇಕೆನ್ನುವನು. [illegible] ಈ ಕೆಲಸದಲ್ಲಿ ಇಟಲಿಯನ್ನು [illegible] ನೋಡಿದ್ದೇ ಇಟಲಿಯ ಅಸೂಯೆಕ್ಕೆ ಕಾರಣವಾಗಿರುತ್ತದೆ. ಆಫ್ರಿಕೆಯ ವಾಯವ್ಯ ದಿಕ್ಕಿನಲ್ಲಿ ಫ್ರಾನ್ಸಿನ ಶ್ರೇಷ್ಠತ್ವವೇಕೆಂದು ಈತನು [illegible]ವಾಗಿ ಪ್ರಶ್ನೆ ಮಾಡಿ, ವಿಲಾಯತಿಯನ್ನು ನಡುಗಿಸಿದ್ದಾನೆ. ಇಟಲಿಯು ಫ್ರಾನ್ಸನ್ನು ಕಾಕ[illegible]ಂತೆ ನೋಡುತ್ತಿರುವಾಗ, ಫ್ರಾನ್ಸವಾದರೂ ಇಟಲಿಯನ್ನು ಹಾಕಿಸಿಯಂತೆ ನೋಡುತ್ತದೆ. ಇಟಲಿಯು ಗ್ರೀಸವನ್ನು ಪೂರಾ ತನ್ನ ಹಿಡಿತದಲ್ಲಿ ಇಟ್ಟುಕೊಂಡು, ಭಾವೀ ಯುದ್ಧದಲ್ಲಿ ಅದರಿಂದ ತನಗೆ ಸಹಾಯ ದೊರೆಯಬೇಕೆಂದು, ಅದಕ್ಕೆ ಬೇಕಾದಷ್ಟು ಮದ್ದು ಗುಂಡಿನ ಸಹಾಯ ಮಾಡುತ್ತಿರುವದು. ಗ್ರೀಸಕ್ಕಾಗಿ ಇಟಲಿಯ ಮದ್ದುಗುಂಡಿನ ಕಾರಖಾನೆಗಳು ಹಗಲಿರಳು ವಿರಾಮವಿಲ್ಲದೆ ದುಡಿಯುತ್ತಿರುವವು. ಮಹಾಯುದ್ಧದ ವೇಳೆಯಲ್ಲಿ ಕೃಪ ಕಾರಖಾನೆಯಲ್ಲಿ ತೋರಿದಂಥ ಚಟುವಟಿಕೆಯೇ ಸದ್ಯದಲ್ಲಿ ಇಟಲಿಯ ಕಾರಖಾನೆಗಳಲ್ಲಿ ತೋರುತ್ತಿರುವದು.

ಇಟಲಿಯು ಸದ್ಯಸಾಚಿಯಂತೆ ಆಫ್ರಿಕೆಯ ವಾಯವ್ಯ ಮೇರೆಯಲ್ಲಿಯೂ, ಪೂರ್ವದಲ್ಲಿ ತುರ್ಕಸ್ಥಾನದ ಮೇರೆಯಲ್ಲಿಯೂ ಒಂದೇ ವೇಳೆಯಲ್ಲಿ ಉರಿ ಎಬ್ಬಿಸಬೇಕೆಂದಿರುತ್ತದೆ. ಮುಖ್ಯವಾಗಿ ಭೂಮಧ್ಯ ಸಮುದ್ರದಲ್ಲಿ ಫ್ರಾನ್ಸದ ಗೌರವ ಪ್ರತಿಷ್ಠೆ ನಡೆಯಬೇಕಾಗಿರುವದಿಲ್ಲ. ಫ್ರಾನ್ಸವನ್ನು ಹತ್ತಿಕ್ಕುವಂತೆ ತುರುಕರನ್ನೂ ಹತ್ತಿಕ್ಕಬೇಕೆಂದು ಎರಡನೆಯ ಕುವಿಚಾರವು. ತುರುಕರ ಜಯದಿಂದ ಹೊಟ್ಟೆಯಲ್ಲಿ ಉರಿಯುತ್ತಿದ್ದ ಗ್ರೀಸವನ್ನು ಬೆನ್ನಿಗೆ ಹಾಕಿಕೊಂಡ ಕಾರಣವಾದರೂ ಇದೇ. [illegible] ದ ಯುದ್ಧದಲ್ಲಿ ಗ್ರೀಸವನ್ನು ಸೋಲಿಸಿದ ತುರ್ಕಸ್ಥಾನಕ್ಕಿಂತ ಈಗಿನ ತುರ್ಕಸ್ಥಾನದ ಸೇನಾಸಾಮರ್ಥ್ಯವು ಹೆಚ್ಚಿರುವದು. ಆದುದರಿಂದ ತೋಳ ಕುರಿಯ ಮರಿಯ ನ್ಯಾಯದಂತೆ ತಮ್ಮ ಕೂಡ ಕಲಹ ಹೂಡಲಾರದೆಂದು ತುರುಕರ ಊಹೆಯು. ರಾಜಕಾರಣವು ಹೀಗೇ ಇರುವದೆಂಬ ನಿಯಮ ಇಲ್ಲದ್ದರಿಂದ, ತುರುಕರೂ ದಂಡಿನ ಸಿದ್ಧತೆ ನಡಿಸಿ, ಹೊಸ ಸೈನ್ಯ ಭರತಿ ಮಾಡುತ್ತಿದ್ದಾರೆ. ಯುದ್ಧ ಪ್ರಾರಂಭವು ಹಳೇ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ಲಿನಲ್ಲಾಗುವದು. [illegible] ಇಲ್ಲಿಯ ಸಮುದ್ರದಲ್ಲಿ ಸುರಂಗ ಹಾಕಿ, ಮಾರ್ಮೋರಾ ಸಮುದ್ರದ ಬಾಗಿಲ ಹಾಕಬೇಕೆಂದೂ ತುರುಕರ ವಿಚಾರವಿದೆ. ಒಟ್ಟಿನಿಂದ ತುರುಕರ ಸ್ಥಿತಿಯು ವಿಲಕ್ಷಣವಾಗಿದೆ. ಖಲೀಫನನ್ನು ಕಿತ್ತಿ ಹಾಕಿದ್ದರಿಂದ, ಜಿಹಾದ ಸಾರಿ, ಧರ್ಮಯುದ್ಧದ ನಿಶಾನೆ ಹಚ್ಚುವಂತಿಲ್ಲ. ಮಹಾಯುದ್ಧದಲ್ಲಿ ಅರಬರು ಸ್ವತಂತ್ರರಾಗಿರುವದರಿಂದ, ಅವರ ನೆರವು ದೊರೆಯುವ ಲಕ್ಷಣವಿಲ್ಲ. ರಶಿಯಾದ ಸಹಾಯ ದೊರೆಯಬಹುದು. ಪ್ರಜಾಸತ್ತಾತ್ಮಕವನ್ನು ಹಾರಿಸಿ, ಪುನಃ ಸಾಕರಶಾಹಿಯನ್ನು ನೆಲೆಗೊಳಿಸಿದ ಕಾರಣದಲ್ಲಿ ಅಭಿಯೋಗ ಮಾಡಲು ತುರುಕರು ರಶಿಯಾಕ್ಕೆ ಅನುವು ಕೊಟ್ಟರೇ ರಶಿಯರು ಅವರಿಗೆ ಸಹಾಯ ಮಾಡಬಹುದು. ಹೀಗೆ ಆಪದ್ಬಾಂಧವರಾಗಿ ಬಂದರೂ ಸಹ, ರಶಿಯವು ತುರ್ಕಸ್ಥಾನವನ್ನೆಲ್ಲ ಹಾರ್ಪೊರೆಯುವದು. ಇದೊಂದು ಭಾವೀ ಗಂಡಾಂತರವೇ! ಇಟಲಿಗೆ ವಿರುದ್ಧವಾಗಿ ಜರ್ಮನರಿದ್ದಾರೆ. ಜರ್ಮನ ಸರಕಾರವು ನಿರ್ಬಲವಾದುದರಿಂದ ಯುದ್ಧ ಸಾರಲಾರದು. ಆದರೆ ಜರ್ಮನ ಯುದ್ಧ ಶಾಸ್ತ್ರ ನಿಪುಣರು ವ್ಯಕ್ತಿ ಮಾತ್ರವಾಗಿ ತುರುಕ ಸೈನ್ಯದಲ್ಲಿ ಸೇರಿ, ಇಟಲಿಗೆ ಭುಜಬಲ ಪರಾಕ್ರಮ ತೋರಿಸಬಹುದಾಗಿರುತ್ತದೆ.

ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ರಾಜಿಯ ಸಂಧಾನ.

ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ನಡುವೆ ಮಹಾತ್ಮರ ಸನ್ನಿಧಾನದಲ್ಲಿ ಕಳೆದೆರಡು ದಿವಸಗಳಿಂದ ರಾಜಿಯ ಮಾತುಕಥೆ ನಡೆದಿದೆ. ಸ್ವರಾಜ್ಯ ಪಕ್ಷದ ವತಿಯಿಂದ ಪಂಡಿತ ಮೋತೀಲಾಲರು, ಲಾಲಾ ಲಜಪತರಾಯರೂ ಇರುವರು. ಪ್ರತಿಯೋಗಿ ಸಹಕಾರಿಗಳ ವತಿಯಿಂದ ಡಾಕ್ಟರ ಮುಂಜೆ, ಶ್ರೀ ಮಾಧವರಾವ ಅಣೆ ಮತ್ತು ಮೊಸಸ್ಸಿ ಕೇಳಕರ ಜಯಕರರಿದ್ದಾರೆ. ದೇವಿ ಸರೋಜಿನಿಯವರೂ ಈ ಶಿಷ್ಟಾಯಿಗೆ ಹೋಗಿದ್ದಾರೆ. ಮೊದಲನೆಯ ದಿವಸದ ಸಭೆಗೆ ಪಂಡಿತ ಮದನಮೋಹನ ಮಾಲವಿಯಾಯವರಿಗೆ ಹೋಗುವದು [illegible]ವಾಗಲಿಲ್ಲ. ಯಾವ ಶರ್ತಿನಿಂದ ಸ್ವರಾಜ್ಯ, ರಾಷ್ಟ್ರೀಯ ಸಂಯುಕ್ತ ಸಂಘ ಮತ್ತು ಪ್ರತಿಯೋಗಿ ಸಹಕಾರಿಗಳ ನಡುವೆ ಒಡಂಬಡಿಕೆಯಾಗಬಹುದೆಂಬದೊಂದು ಕಾಗದವನ್ನು ಕಳಿಸಿದ್ದಾರೆ. ರಾಜಿಯ ವಿಚಾರವು ಬಾಗಿಲ ಹಾಕಿಕೊಂಡು ನಡೆದಿದೆ. [illegible] ನಾಯಕರು ಸಂತೋಷದಾಯಕವಾಗಿ ಆಗುವದೆಂದು ಊಹಿಸಿದ್ದಾರೆ. ವಿಶೇಷ ಸಂಗತಿಗಳನ್ನು ನಾಳಿನ ಸಂಚಿಕೆಯಲ್ಲಿ ಬರೆಯುವೆವು.

ಪ್ರಸ್ತುತದ ಚುನಾವಣೆಯಲ್ಲಿ ವಿರಾಧಕಕ್ಕೆ ಸೇರಿದವರೂ ಉಮೇದವಾರರಾಗಿ ನಿಲ್ಲಬೇಕೆಂಬ ವಿಚಾರ ನಡೆದಿದೆ. ಮಹಾತ್ಮರು ಒಂದೆರಡು ದಿವಸಗಳಲ್ಲಿ ದಿಲ್ಲಿಗೆ ಹೋಗತಕ್ಕವರಿದ್ದು, ಅವರ ವಿಚಾರದಿಂದ ಕೊನೆಯ ನಿರ್ಣಯವಾಗುವದು.

ಶ್ರೀ ಹೊನ್ನಾಪೂರಮಠ ವಕೀಲರ ಅಭಿನಂದನವು.

ಇಲ್ಲಿಯ ವಕೀಲರಾದ ಶ್ರೀ ಗದಿಗೆಯ್ಯಾ ಹೊನ್ನಾಪೂರಮಠ ಇವರು ತಾಲೂಕ ಲೋಕಲಬೋರ್ಡಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಾಗ ಅವರ ಅಭಿನಂದನ ಮಾಡಿದ ಲೇಖವನ್ನು ಪ್ರಸಿದ್ಧ ಮಾಡಿದ್ದೇವೆ. ಅನಂತರ ಪುನಃ ಇವರ ಅಭಿನಂದನದ ಎರಡನೆಯ ಲೇಖವನ್ನು ಬರೆಯುವ ಸಂಯೋಗ ಬಂದುದಕ್ಕಾಗಿ ಸಂತೋಷಪಡುತ್ತೇವೆ. ಮೊನ್ನಿನ ದಿವಸ ಈ ಊರಲ್ಲಿ ಜರುಗಿದ ಮ್ಯುನಿಸಿಪಾಲಿಟಿಯ ಚೇರ್ಮನ ಚುನಾವಣೆಯಲ್ಲಿ ಇವರು ವ್ಹಾಯಿಸ್ ಚೇರ್ಮನರಾಗಿ ಆರಿಸಲ್ಪಟ್ಟದ್ದೇ ಆ ಸುಯೋಗವು. ಕಳೆದ ಆರು ವರ್ಷಗಳಲ್ಲಿ ಮ್ಯುನಿಸಿಪಾಲಿಟಿಯು ಕಲೆಕ್ಟರ ಮತ್ತು ಕಂಪನಿಯ ಕೈಯಲ್ಲಿ ಸಿಕ್ಕು ಒದ್ದಾಡುತ್ತಿತ್ತು. ಇದೇ ತಿಂಗಳಲ್ಲಿ ತ್ರೈವಾರ್ಷಿಕ ಚುನಾವಣೆಯಾಗಿದ್ದರೆ ಅದರ ಅವಧಿಯ ಸಮಾಪ್ತಿಯಾಗುತ್ತಿತ್ತು. ಮಿ. ಕಮಿಶನರ ಸಾಹೇಬರ ಅಪ್ಪಣೆಯಿಂದ ಈ ಚುನಾವಣೆಯು ಒಂದು ವರ್ಷ ಮುಂದೆ ಬಿದ್ದಿದೆ. ಆದರೂ ನಡೆಯುವ ಸಮಯದ ವರೆಗೆ ವ್ಹಾಯಿಸ್ ಚೇರ್ಮನ ಜಾಗೆಗೆ ಶ್ರೀ ಹೊನ್ನಾಪೂರಮಠ ಇವರನ್ನು ಬಹುಮತದಿಂದ ಆರಿಸಿದ್ದು ಲೋಕರೆಲ್ಲರಿಗೂ ಸಂತೋಷವೇ ಆಗಿರುತ್ತದೆ. ನಮ್ಮ ಹೊನ್ನಾಪೂರರು ಯಾರ ಗುಂಪಿನೊಳಗೂ ಸೇರಿಕೊಳ್ಳುವವರಲ್ಲ. ಯಾವ ಪಂಗಡದೊಳಗೂ ಸೇರತಕ್ಕವರಲ್ಲ. ಪಕ್ಷಪಾತದಿಂದ ಕೆಲಸ ಮಾಡತಕ್ಕವರಲ್ಲ. ಬ್ರಾಹ್ಮಣ-ಅಬ್ರಾಹ್ಮಣ, ಲಿಂಗಾಯತ, ಪಾರ್ಸಿ, ಕಿರಿಸ್ತಾನ, ಮುಸಲಮಾನರೆಲ್ಲರ ಕಡೆಗೆ ಸಮದೃಷ್ಟಿಯಿಂದ ನೋಡುವಂಥವರು. ಆ ಮುದದಿಂದಲೇ ಅರು ನಿಷ್ಪಕ್ಷಪಾತದಿಂದ ಆಡಳಿತೆ ಮಾಡುತ್ತಿದ್ದವರು. ಇವರ ವಿರುದ್ಧ ಉಮೇದವಾರರನ್ನು ನಿಲ್ಲಿಸುವ ಎದೆಯಾಗದೆ, ಇವರಿಗೇ ಓಟು ಕೊಟ್ಟರು. ಊರೊಳಗೆ ಮನೆಪಟ್ಟಿಯ ಕಿಚ್ಚಿನ ಸುದ್ದಿ. ಇಂಥ ಸಮಯದಲ್ಲಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ವಿಚಾರದಿಂದ ಕೆಲಸ ಮಾಡುವವರಾದ ಮಿ. ಹೊನ್ನಾಪೂರಮಠ ಇವರು ಚೇರಮನ್ನರಾದದ್ದು ವಿಶೇಷವಾಗಿ ಆನಂದದ ಸಂಗತಿಯಾಗಿರುತ್ತದೆ.

ತುಮಕೂರಲ್ಲಿ ಮೈಸೂರ ಇಲಾಖೆಯ ವಕೀಲರ ಪರಿಷತ್ತು ಕೂಡಿತ್ತು. ವಕೀಲರು ಖಾದಿಯನ್ನು ಧರಿಸಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಸವದತ್ತಿಯಲ್ಲಿ ಆಶ್ಚರ್ಯ.

—o—

ಕುರುಡನಿಗೆ ಕಣ್ಣು ಬಂದವು.

—o—

ಸವದತ್ತಿಯಲ್ಲಿ ಒಬ್ಬ ಬಡಿಗೇರ ಹೆಣ್ಣುಮಗಳಿಗೆ ಎರಡು ಮೂರು ತಿಂಗಳ ಹಿಂದೆ ಒಂದು ಗಂಡು ಕೂಸು ಹುಟ್ಟಿತು. ಅದರ ಕಣ್ಣೇ ಕಾಣಿಸುತ್ತಿದ್ದಿಲ್ಲ. ಕಣ್ಣು ಹೋಗಿದ್ದವು. ತಾಯಿಯು ಕೆಲವು ದಿವಸಗಳ ಹಿಂದೆ ಮೃತಪಟ್ಟಳು. ತಾಯಿಯು ದೈವಾಧೀನವಾದನಂತರ ಅದಕ್ಕೆ ಕಣ್ಣು ಬಂದಿರುತ್ತವೆ. ದೈವದಾಟವು ವಿಚಿತ್ರವಾದದ್ದು.

ಸಿಂದೂರ ಲಕ್ಷ್ಮಣನ ಸೋದರಳಿಯನ ಪುಂಡಾಟಿಕೆ

—o—

ವಿಜಾಪೂರ ಜಿಲ್ಹೆಯಲ್ಲಿ ಕಟ್ಟೀಚನ್ನನಂತೆ ಪುಂಡಾಟಿಕೆ ಹಾಕಿದ್ದ ಸಿಂದೂರ ಲಕ್ಷ್ಮಣನನ್ನು ಕೊಂದದ್ದರ ಸೇಡು ತೀರಿಸಿಕೊಳ್ಳುವದಕ್ಕಾಗಿ, ಆತನ ಸೋದರಳಿಯನಾದ ನರಸ್ಯಾ ಎಂಬವನು ಪುಂಡಾಟಿಕೆಯ ನಿಶಾನೆ ಹಚ್ಚಿರುತ್ತಾನೆ. ಈತನ ಬರೋಣದ ಮೇಲೆ ಪೂರಾ ಲಕ್ಷ್ಯವಿಡಬೇಕೆಂದೂ, ಈತನ ಸುದ್ದಿ ಹತ್ತಲಿ; ಹತ್ತದಿರಲಿ; ಪ್ರತಿಯೊಂದು ಗ್ರಾಮದವರು ಪೋಲೀಸ ಸ್ಟೇಶನಕ್ಕೆ ನಿತ್ಯ ವರದೀ ಕೊಡಬೇಕೆಂದೂ ವಿಜಾಪೂರದ ಪೋಲೀಸ ಅಧಿಕಾರಿಗಳು ಹಳ್ಳಿಗಳ ಮೇಲಿನ ಗ್ರಾಮಗಳಿಗೆ ಹುಕುಮು ಮಾಡಿದ್ದಾರೆ.

ಮಿ. ಕಂಚಿಯವರಿಗೆ ಕಾಳೆ ಮೋಕ್ಷವಾಯಿತು.

—o—

ಕಾರವಾರ ಜಿಲ್ಹೆಯ ಪರಿಯಿಂದ ಕೌನ್ಸಿಲದ ಮೆಂಬರರಾಗಿದ್ದ ಮಿ. ಕರಕಿಯವರು ಉಳಿದ ಸ್ವರಾಜ್ಯ ಪಕ್ಷೀಯರಂತೆ ಕೌನ್ಸಿಲಕ್ಕೆ ಕಲಬು ಹೊಡೆಯಲಿಲ್ಲ. ಇದರ ನಂತರ ಕಾರವಾರ ಜಿಲ್ಹೆಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಚುನಾವಣೆಯಾಯಿತು. ಈ ಸಮಯದಲ್ಲಿ ಹೋಟರರು ಪೂರಾ ಸೇಡು ತೀರಿಸಿಕೊಂಡರು. ಮಿ. ಕರ್ಕಿಯವರು ತಮ್ಮ ಮತವೇ ಸಕಲ ಸಮ್ಮತವೆಂದು ಅಹಂಕಾರಪಟ್ಟಿದ್ದರು. ಮಿ ಕರ್ಕಿಯವರಿಗೆ ದೊರೆತ ಪ್ರಾಯಶ್ಚಿತ್ತದಿಂದ ಪ್ರತಿಯೋಗಿ ಸಹಕಾರಿಗಳೆಂಬ ಬಂಡ ... ತಕ್ಕವರು ಎಚ್ಚರಾಗುವರೆಂದು ತಿಳಿಯುತ್ತೇವೆ.

ವಿವಿಧ ವರ್ತಮಾನಗಳು.

—o—

ಗ್ವಾಲೇರದ ಮಹಾರಾಣಿಯವರು ತಮ್ಮ ರಾಜ್ಯದಲ್ಲಿ ಕುದುರೆಗಳ ಪಂದ್ಯ ನಡೆಯಕೂಡದೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾಗ ಸಾಹೇಬ ಜನರ ಸೊಗಸಿಗೇ ಅರಿದಾಳ ಬಡಿದಂತಾಯಿತು.

ಕೋಲಾರ ದೆಸೆಯಿಂದ ಕಲಕತ್ತೆಯ ಪಾರಿನ ಗಿರಣಿಗಳಲ್ಲಿ ಕೆಲಸ ಮಾಡುವ ಮೂವತ್ತು ಸಾವಿರ ಕೂಲಿಕಾರರು ಸಂಪು ಮಾಡಿ ಕೆಲಸಬಿಟ್ಟಿದ್ದಾರೆ.

ಅಲ್ಹಾಬಾದಿನಲ್ಲಿದ್ದ ಕಾಂಗ್ರೆಸ ಕಚೇರಿಯು ಮದ್ರಾಸಕ್ಕೆ ಬಂತು. ಏಕೆಂದರೆ- ಸೇಕ್ರೆಟರಿಯವರು ಅಲ್ಲಿಯವರಾಗಿದ್ದಾರೆ.

ಮದ್ರಾಸದ ಸುಪ್ರಸಿದ್ಧ ಸ್ವರಾಜ್ಯವಾದಿಯಾದ ಶ್ರೀ. ಶ್ರೀನಿವಾಸ ಅಯ್ಯಂಗಾರರು ಚುನಾವಣೆಯಲ್ಲಿ ಮದ್ರಾಸದ ಪರಿಯಿಂದ ಉಮೇದವಾರರಾಗಿದ್ದಾರೆ.

ನೀಲಗಿರಿಯಲ್ಲಿಯ ಪಾಯಕಾರಾ ತಡಸಲದಲ್ಲಿ ಹುಟ್ಟಿಸುವ ವಿದ್ಯುತ್ತಿನ ಕಾರಖಾನೆಯನ್ನು ತೆರೆಯುವ ಸಮಾರಂಭವಾಯಿತು. ಇಲ್ಲಿ ಹುಟ್ಟುವ ವಿದ್ಯುತ್ತನ್ನು ನೂರು ಮೈಲುಗಳ ದೂರದ ತಂತಿಗಳಿಂದ ಮದ್ರಾಸದ ಕಡೆಗೆ ಇರುವ ಮ್ಯುನಿಸಿಪಾಲಿಟಿಗಳಿಗೂ ಕಾರಖಾನೆಗಳಿಗೂ ಪೂರೈಸುವರು. ಮೈಸೂರಿನ ತರುವಾಯ ಎರಡನೆಯ ದೊಡ್ಡ ಸಾಹಸ.

ಧಾರವಾಡ—

ಇಲ್ಲಾದ ವ್ಹರ್ನಾಕ್ಯುಲರ ಸ್ಕೂಲ ಫಾಯನಲ ಪರೀಕ್ಷೆಗಾಗಿ ೬೪೭ ಅರ್ಜಿಗಳು ಬಂದಿದ್ದವು ಈಗ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

ಇವತ್ತಿನ ದಿವಸ ಸಾಯಂಕಾಲದಲ್ಲಿ ಆರು ಗಂಟೆಗೆ ಸರಿಯಾಗಿ ಇಲ್ಲಿಯ ಶ್ರೀ. ಜಗದ್ಗುರು ಸಂಸ್ಕೃತಶಾಲೆಯಲ್ಲಿ ಶ್ರೀ. ಗೋಕರ್ಣ ಕ್ಷೇತ್ರದಲ್ಲಿರುವ ಬ್ರಹ್ಮಚರ್ಯಾಶ್ರಮದ ಮುಖ್ಯಾಧ್ಯಾಪಕರಾದ ವೇ|| ದೈವಜ್ಞ ರಾಜರಾಮಶರ್ಮ ಇವರ " ಆರ್ಯಧರ್ಮ ಮತ್ತು ಗೋರಕ್ಷಣೆ " ಎಂಬ ವಿಷಯದ ಮೇಲೆ ಜಾಹೀರ ಪ್ರವಚನವಾಗುವದು.

ಕೌನ್ಸಿಲ ಚುನಾವಣಿ

ಚುನಾವಣೆಯ ಸಂಪೂರ್ಣ ವಿವೇಚನೆಯು

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನೂ, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನೂ ಒಟ್ಟಿಗೆ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯ ಮಾಡಿದ್ದೇವೆ. ವಿಜಯದ ಹೊರ್ತು ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಟಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ವೋಟಿನ ಹಕ್ಕವಿದ್ದವರು ವಿನಾಲು, ಇಲ್ಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರು ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಸಿಕ್ಕದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವ[illegible]ಗಿಯುವ ತನಕ ವಿಜಯವನ್ನು ಓದಿರಿ. ಮತ್ತು [illegible] ನಂತರ ಯಾವ ಪಕ್ಷದ ಮೇಲ್ಮೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೋರುವದೆಂಬುದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬೇಕು ಒಲ್ಲವರು ವಿಜಯವನ್ನು ಕೈಕೊಂಡು ಓದಬೇಕು. ಬರದವರು ಆಸ್ಥರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮುಖ್ಯ ಹಿಡಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ವಂದಾ ನಿರ್ಣಯ- ಅಂಚೆವೆಚ್ಚ ಸೇರಿ ವರ್ಷಕ್ಕೆ ನಿತ್ಯ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ಎಲಿಗೆ ಕೈ ಹಚ್ಚಿಕೊಂಡು [illegible] ಕುಳಿತೀರಿ! ತಲೆನೋವೋ! ಹಲ್ಲುಕೂಳಿಯೋ! ಮುಖ್ಯಲ್ಲಿ ನೋಯುತ್ತದೆಯೋ! ಆಗದುವದ[illegible]

ಅಜ್ಜನು— ಕಂದಾ— ಹಾದು ಮುಖ್ಯಲ್ಲಿ ನೋ[illegible]

ಕಂದ— ಹಾಗಾದರೆ ಪೋಮೆಂಟ ಕ್ಯಾಯರ ತಕ್ಕೊ[illegible] [illegible] ಪ್ರ[illegible] ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ [illegible] [illegible] ನಿಮ್ಮಷ್ಟು ಕಿರಿ ತುಸು. ಎರಡೇ ಆಣೆ.

ನಮ್ಮಕ್ಕೆ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ [illegible] [illegible] [illegible] ಕೊಡುವೆವು.

ವಿಳಾಸ— [illegible] [illegible] ಸ್ಟೋರ್ಸ್, [illegible] [illegible] [illegible] ಡ್ರಗಿಸ್ಟ, [illegible] ಹುಬ್ಬಳ್ಳಿ



ವ್ರಣಾ[illegible]

ಅಥವಾ

ಘಾಯದ ಮೇಲಿನ ಮುಲಮು

ಈ ಮುಲಮು ಮನುಷ್ಯ ಮತ್ತು ದನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಯಸಿ ಮತ್ತು ಬಾವು, ಗಮಿರಯಚಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ

ಹುಬ್ಬಳ್ಳಿಯ ಏಜಂಟರು- ದಿ ಕನಕಾದಿತ್ಯ ಮೆಡಿಕಲಸ್ಟೋರ್ಸ- ನೈಶನ ರೋಡ ಹುಬ್ಬಳ್ಳಿ ಕೋಕ ಮತ್ತು ಕಿರುಕೋಳದಿಂದ ದೊರೆಯುವದು.

ಎನ. ಎಫ. ಹಂಟರ
ಖಡೇಬಝಾರ ಬೆಳಗಾವಿ

ವಿಜಯದ ವರ್ಗಣೀ ದರ

—o—

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೮—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

—o—

ತಿಂಗಳ ಕಾಲಮಿನ ಹತ್ತು ವೋಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವೋಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ದಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಹೆಚ್ಚಾಯಿ ಜಾಹೀರಾತುಗಳನ್ನು ಕೊಡುವವರು ಕೆಳಗಿನವರೊಡನೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂತಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಕ್ಟಾ. ಹಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R N B. 1448

ಸ್ಥಾಪನೆ .... ವಾ ಅರ್ಧ ೯ ಆ ೬

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಶನಿವಾರ | ತಾ|| ೩೧ನೇ ಎಪ್ರೀಲ ೧೯೩೭ | ಸಂಚಿಕೆ ೯೩

ಸರಕಾರದಿಂದ ಪೇಟಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಬಾಳಿಗೆಯಿಂದ ನೀರು ಒಳ ಹೋಗುವದು. ಕಪ್ಪಲಿಯು ಎಗ್ಗ ತ್ತುತ್ತಲೇ ಬಾಳಿಗೆಯು ಹರಿದು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದೇ ಹನಿ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಲ್ಲಿ ದೊರೆಯುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೫	,,	೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಧಾರವಾಡ.

—೦—

ಕಳೆದ ವಾರದಲ್ಲಿ ಎರಡು ದಿವಸ ಗೊಡ್ಡ ಮೋಡ ಹಾಕಿ, ಕುಂತುರ ಹನಿಗಳು ಉದುರಿದವು ಈಗ ಹವೆಯು ಸ್ವಚ್ಛವಾಗಿ ಕಾಲಮಾನಕ್ಕನುಸರಿಸಿ ಬಿಸಲಿನ ತಾಪವುಂಟಾಗಿರುತ್ತದೆ.

ಮೊನ್ನಿನ ದಿವಸ ಕಾಂಗ್ರೆಸ ಕಮಿಟಿಯ ಸಭೆಯಾಗಿ, ಬಳ್ಳಾರಿಯಲ್ಲಿ ಕೂಡುವ ಕರ್ನಾಟಕ ಪ್ರಾಂತಿಕ ಸಭೆಯ ಅಧ್ಯಕ್ಷಪದಕ್ಕಾಗಿ ಮದ್ರಾಸದ ಶ್ರೀ ಶ್ರೀನಿವಾಸ ಅಯ್ಯಂಗಾರರ ಹೆಸರು ಸರ್ವಾನುಮತದಿಂದ ಸೂಚಿಸಲ್ಪಟ್ಟಿತು.

ಶ್ರೀ ರಾಮನವಮಿಯ ಶುಭ ಮುಹೂರ್ತದಲ್ಲಿ ಹಳೇಹುಬ್ಬಳ್ಳಿಯಲ್ಲಿ ಒಂದು ಧರ್ಮಾರ್ಥ ಸ್ವದೇಶೀ ಔಷಧಾಲಯವು ಸ್ಥಾಪಿಸಲ್ಪಟ್ಟಿತು.

ಹೊಸಹುಬ್ಬಳ್ಳಿಯಲ್ಲಿ ಮಿ. ಇಂಡಿಯವರ ಮನೆಯಲ್ಲಿ ಒಂದು ಆಕಳಿಗೆ ಮೂರು ಕರಗಳು ಹುಟ್ಟಿದವು. ಒಂದು ಸತ್ತಿತು. ಉಳಿದವು ಚನ್ನಾಗಿವೆಯೆಂದು ಲೋಕಮತದಲ್ಲಿ ಬರೆದಿದೆ.

ಮೊನ್ನಿನ ದಿವಸ ಬ್ಯಾಡಗಿ ಮ್ಯುನಿಸಿಪಾಲಿಟಿಯ ಜನರಲ ಕಮಿಟಿಯಾಗಿ ಮಿ. ದೇವಗಿರಿಯ ಶಾನಭೋಗರು ಮ್ಯಾನೇಜಿಂಗ ಮತ್ತು ಮಿ. ಶಿವ್ಯಪ್ಪ ಶೆಟ್ಟಿಯವರು ಸ್ಕೂಲಬೋರ್ಡಿನ ಚೇರಮನ್ನರಾಗಿ ಆರಿಸಲ್ಪಟ್ಟರು. ತಾಲೂಕ ಬೋರ್ಡಿನವರು ಕಮಿಟಿಗೆ ಬಂದಿದ್ದರೂ, ಯಾವ ಪಕ್ಷಕ್ಕೂ ಓಟು ಕೊಡಲಿಲ್ಲೆಂದು ಒಬ್ಬ ಸುದ್ದಿದಾರರು ಬರೆಯುತ್ತಾರೆ.

ಧಾರವಾಡ ಜಿಲ್ಹೆಯಲ್ಲಿ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಚುನಾವಣೆಯಲ್ಲಿ ಒಂಭತ್ತು ಜನ ಅಸ್ಪೃಶ್ಯರು, ಇಬ್ಬರು ಲಿಂಗಾಯತರು ಮತ್ತು ಇಬ್ಬರು ಹೀಗೆ ಜನರು ಆರಿಸಲ್ಪಟ್ಟಿದ್ದಾರೆ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯಲ್ಪಡುವದು. ಕ್ಯಾಶ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಒಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಗೋವಿಂದರಾವ ಬಿ. ಜಹಾಗೀ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಝಿಟ ಇಟ್ಟುಕೊಳ್ಳಲಾಗುವದು. ದರವನ್ನು ನಮ್ಮಿಂದ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೨೪-೪-೩೭ ನೇ ಇಸ್ವಿ

ಇಪ್ಪತ್ತು ಸಾವಿರ ಸ್ತ್ರೀಯರು ಪ್ರಚಂಡ ಮೆರವಣಿಗೆ.

ಇಂಗ್ಲಂಡದಲ್ಲಿರುವ ಕಲ್ಲಿದ್ದಲಿಯ ಖಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರು ದುಡಿತ ಕಡಿಮೆಯಾಗಿ, ಕೂಲಿ ಹೆಚ್ಚಾಗಬೇಕೆಂದು ಮೇಲಿಂದ ಮೇಲೆ ಜಗಳ ತೆಗೆಯುತ್ತಾ ಬಂದಿದ್ದಾರೆ. ಕೂಲಿಕಾರರ ದಿವಾನಗಿರಿಯಲ್ಲಿ ಜಗಳವು ಹಾಗೂ ಹೀಗೂ ನಿಂತಿತು. ಅವರ ದಿವಾನಗಿರಿಯು ಹೋದ ಕೂಡಲೆ, ಜಗಳವು ಪುನಃ ಎದ್ದು, ವಿಕೋಪಕ್ಕೆ ಬಂದಿದೆ. ಮಂತ್ರಿಗಳು ಸದ್ಯದಲ್ಲಿ ಸರಕಾರದ ಖಜೀನಿಯಿಂದ ಕೂಲಿಗೆ ಭರತಿ ಹಾಕಿ, ಇವರನ್ನು ಸಮಾಧಾನ ಪಡಿಸಿದ್ದಾರೆ. ಇದು ಕಡೆತನಕ ಸಾಗದ ಮಾತು. ಆದುದರಿಂದ ಖನಿಗಳ ಒಡೆಯರಿಗೂ ಇವರಿಗೂ ಒಡಂಬಡಿಕೆ ಮಾಡಿಸಬೇಕೆಂದು ಮಂತ್ರಿಗಳು ಸದ್ಯದಲ್ಲಿ ತೊಡಗಿದ್ದಾರೆ. ಇಂಗ್ಲಂಡದ ಜನರಿಗೆ ಇದು ಹೊರತು ಬೇರೊಂದು ವಿಷಯವೇ ಸೂಚಿಸಲೊಲ್ಲದು. ಕೂಲಿಕಾರರ ಕೇಳಿಕೆಯಂತೆ ಕರಾರಗಳಾಗದಿದ್ದರೆ- ಕೂಲಿಕಾರರು ಸಂಪು ಮಾಡಿ ಕರತಾಳದ ಕಹಳೆ ಹಿಡಿಯುವರು. ಇವರಿಗೆ ಅನುಕೂಲವಾಗಿ ಬೇರೆ ಬೇರೆ ಕಾರಖಾನೆಗಳಲ್ಲಿ ದುಡಿಯುವ ಕೂಲಿಕಾರರೂ ಸಂಪು ಮಾಡುವರು. ಇಷ್ಟೇ ಅಲ್ಲದೆ, ಯುರೋಪದ ಬೇರೆ ಬೇರೆ ದೇಶಗಳ ಕೂಲಿಕಾರರ ಸಂಘಗಳು ಇವರಿಗೆ ಅನುಕೂಲವಾಗಿ ಸ್ವಹಸ್ತ ಪರಹಸ್ತದಿಂದ ಸಹಾಯ ಮಾಡುವವು. ರಶಿಯವಂತೂ ಎರಪುಟ ಹಾಕುತ್ತಲಿದೆ. ಈ ಸಂಪಿನ ಸಂಕ್ರಾಂತಿ ಎದ್ದರೆ- ಇಂಗ್ಲಂಡದ ತುಂಬ ಭಯಂಕರ ಅನರ್ಥ ಹೇಳವದು. ರೇಲ್ವೆಗಳು ಬಂದಾಗಿ, ಊರಿಂದೂರಿಗೆ ಅನ್ನವಸ್ತ್ರಗಳು ಮುಟ್ಟುವದು ಕಠಿಣವಾಗುವದು. ಅಂಬಿಗರು ಹಡಗಗಳನ್ನು ನಡಿಸಲಾರರು. ಪರದೇಶಗಳ ಕೂಲಿಕಾರರೂ ಸಂಪಿನಲ್ಲಿ ಸೇರುವದರಿಂದ ಹೊರಗಿನಿಂದಲೂ ಅಶನವಶನಗಳು ಬರಲಾರವು. ಈ ಅನರ್ಥ ಪರಂಪರೆಯು ಪರಿಣಾಮವು [illegible] ಭಯಂಕರವಾಗಿ ಪರಿಣಮಿಸುವದು. ಯಾದವ ಸ್ಥಳಂತೆ [illegible] ಪಡುವದೂ ಸಂಭವನೀಯವದೆ. ಇಂಥ [illegible] ಪ್ರಸಂಗ ಬರಬಾರದೆಂದೂ, ಕೂಲಿಕಾರರ ಸಂಪಿನ ವಿರುದ್ಧ ತಮ್ಮ ಮತವುಂಟೆಂದೂ ಜಾಹೀರ ರೀತಿಯಾಗಿ ವ್ಯಕ್ತಪಡಿಸಲೋಸುಗ ಲಂಡನ ಪಟ್ಟಣದಲ್ಲಿ ೨೦ ಸಾವಿರ ಸ್ತ್ರೀಯರ ಪ್ರಚಂಡ ಮೆರವಣಿಗೆ ಹೊರಟಿತ್ತು. ಈ ಮೆರವಣಿಗಾಗಿ ದೂರ ದೂರದ ಪಟ್ಟಣಗಳ ವೃದ್ಧ ಸ್ತ್ರೀಯರು ಸಹ ಬಂದಿದ್ದರು. ಕೂಲಿಕಾರರ ಅಭಿಮಾನಿಗಳಾದ ಬೋಲ್ಶೆವಿಕ ಪಕ್ಷದವರು ಇವರನ್ನು ವಿರೋಧಿಸುವದಕ್ಕಾಗಿ ಗೊಂದಲವೆಬ್ಬಿಸಿದರು. ಇಟಲಿಯಂತೆ ಈ ದೇಶದಲ್ಲಿಯೂ ಫಾಸಿಸ್ಟ ಪಂಥವು ಪ್ರಬಲವಾಗುತ್ತಾ ನಡೆದಿದೆ. ಇವರು ಬೋಲ್ಶೆವಿಕರನ್ನು ತಡೆದು, ಹೊಡೆದಾಡಿ, ಅವರ ಸ್ವಾತಂತ್ರ್ಯದ್ಯೋತಕವಾದ ಎರಡು ನಿಶಾನೆಗಳನ್ನು ಕಸಕೊಂಡರು. ಈ ಜಗಳವನ್ನು ಹೊರ್ತುಪಡಿಸಿ, ಸ್ತ್ರೀಯರ ಮೆರವಣಿಗೆಯು ಸುಸ್ವರವಾಯಿತು. ಕೂಲಿಕಾರರು ಸಂಪು ಮಾಡಿದರೆ- ಸ್ತ್ರೀಯರಂತೆ ಫಾಸಿಸ್ಟರೂ ಅವರನ್ನು ವಿರೋಧಿಸುವರು. ಈ ವಿರೋಧವೇ ರಕ್ತಪಾತಕ್ಕೆ ಕಾರಣವಾಗುವದು. ಇಂಗ್ಲಿಷ ಜನರು ಹಿಂದುಸ್ಥಾನದಲ್ಲಿ ಮಹಾತ್ಮರ ಅಹಿಂಸೆಯ ಅಸಹಕಾರದ ಸ್ತುತಿ ಮಾಡುತ್ತಾರೆ. ಇದೇ ಕಶೋಪದೇಶವನ್ನು ಇಂಗ್ಲಂಡದ ಜನರಿಗೇಕೆ ಮಾಡಬಾರದು?

ಪಾನಗಲ್ಲಿನ ರಾಜರ ಪಾಂಡಿತ್ಯವು.

ಮಣ್ಣು ತಿಂದು ಮೈ ಮೇಲೆ ಹಾಕಿಕೊಂಡರು.

ಮದ್ರಾಸದ ಮುಖ್ಯ ಮಂತ್ರಿಯಾದ ಪಾನಗಲ್ಲಿನ ರಾಜರು ಪಾಂಡಿತ್ಯದ ಪ್ರದರ್ಶನ ಮಾಡಿಕೊಂಡು ತಾವಾಗಿ ಜಗತ್ತಿನ ತುಂಬ ಅಪಹಾಸ್ಯ ಮಾಡಿಕೊಂಡಿದ್ದಾರೆ. ಮದ್ರಾಸ ಮ್ಯುನಸಿಪಾಲಿಟಿಯವರು ಮ್ಯುನಸಿಪಲ್ ಸಭಾ ಮಂದಿರದಲ್ಲಿ ಮಹಾತ್ಮರ ಭವ್ಯವಾದ ಭಾವಪಟವನ್ನಿಡಬೇಕೆಂಬ ಠರಾವು ಮಾಡಿದರು. ಇದರ ವೆಚ್ಚವನ್ನು ಮಂಜೂರ ಮಾಡುವ ಅಧಿಕಾರವು ಪಾನಗಲ್ಲಿನ ರಾಜರದಾಗಿತ್ತು. ವೆಚ್ಚವು ಸ್ವಲ್ಪದಾಗಿತ್ತು [illegible] ಒಂದೇ ನೂರು ರೂಪಾಯಿ. ಆದರೆ ರಾಜರು ವೆಚ್ಚಕ್ಕಿಂತ ಮಹಾತ್ಮರ ಅವಹೇಲನೆ ಮಾಡುವದನ್ನು ಹೆಚ್ಚಾಗಿ ಎಣಿಸಿ, ಠರಾವು ಮಂಜೂರ ಮಾಡಲಿಲ್ಲ. ಇದೆಷ್ಟು ಘನವಂತಿಕೆಯ ಕೃತ್ಯವಾಗಲಿಲ್ಲ. ರಾಜರು ತಮ್ಮ ಮೂಗು ಕೊಯ್ದುಕೊಂಡು, ತಾವೇ ಅಪಶಕುನ ಮಾಡಿಕೊಂಡಂತಾಯಿತು. ಮಹಾತ್ಮರಂಥ ಜಗದ್ವಂದ್ಯ ಗೃಹಸ್ಥರ ಭಾವಪಟವನ್ನು ವಿರೋಧಿಸುವದರಲ್ಲಿ ಅಧಿಕಾರದ ಅಹಂಕಾರದ ಹೊರ್ತು, ಸಾತ್ವಿಕ ಪ್ರೇರಣೆಯು ಎಳ್ಳಷ್ಟು ಇರುವದಿಲ್ಲ. ಮ್ಯುನಸಿಪಾಲಿಟಿಯಲ್ಲಿ ಮಹಾತ್ಮರ ಭಾವಪಟವಿಡದಿದ್ದರೆ- ಅವರ ಮಹತ್ವವೆಷ್ಟೂ ಕಡಿಮೆಯಾಗುವದಿಲ್ಲ. ದೊಡ್ಡವರ ಆದರ ಸತ್ಕಾರ ಮಾಡುವದರಿಂದ, ತಮ್ಮ ಘನವಂತಿಕೆಯನ್ನು ಮಾತ್ರ ಹೆಚ್ಚಿಸಿಕೊಂಡಂತಾಗುತ್ತದೆ. ಪಾನಗಲ್ಲಿನ ರಾಜರು ತಮಗೆ [illegible] ದೊರೆಯುತ್ತಿದ್ದ ಬಹುಮಾನವನ್ನು ಮಾತ್ರ [illegible] ಕಳಕೊಂಡು [illegible] ನ್ನು ಸಂಪಾದಿಸಿದರು. [illegible] ಮಹಾತ್ಮರ ಭಾವಪಟವನ್ನು [illegible] ಇಷ್ಟೇ ಇದಕ್ಕಿಂತವರೆಂದು [illegible] ಕಟ್ಟಿದ್ದರೆ. ಪ್ರಸಂಗ [illegible] ಮಾಡುವರು ಇವರು [illegible] ನಿಶ್ಚಯ. ಹೀಗಾಗಿ ರಾಜರ [illegible] ಜಗತ್ತಿನ [illegible]

ಒಕ್ಕಲತನ ಮತ [illegible]

[illegible] ಪ್ರಭುತ್ವದಲ್ಲಿ ಬೇಗ [illegible] ಒಕ್ಕಲತನದ ರಾಯಲ ಕಮೀಶನ [illegible] ಬೆಳವಣಿಗೆಯನ್ನು ಕುರಿತು [illegible] ಆಲೋಚನೆ ಮಾಡಿ, [illegible] ದೊರೆಕಿಸಬೇಕೆಂದು [illegible] ಇದೇ ವಿಷಯವಾಗಿ [illegible] ಮಾಡಲು ಮಹಾಬಳೇಶ್ವರಕ್ಕೆ ದಯಮಾಡಿಸಬೇಕೆಂದು ಮುಂಬಯಿಯ ಗವರ್ನರ ಸಾಹೇಬರು [illegible] ಆಮಂತ್ರಣ ಕಳಿಸಿದ್ದಾರೆ [illegible] ತಿಂಗಳಲ್ಲಿ ನಡೆಯುವದು. [illegible] ಸಾಹೇಬರು ಸಾಬರಮತಿಗೆ ಹೋಗಿ, [illegible] ಕೂಡ [illegible] ಆಲೋಚನೆ ಮಾಡಿದರು.

ರಡ್ಡೀ ಸಮಾಜದ ಮಹಾ [illegible]

ಮುಂಬಯಿ [illegible] ರಡ್ಡೀ ಸಮಾಜದ [illegible] ಬೆಳಗಾವಿ ಜಿಲ್ಹೆಗೆ ಸೇರಿದ [illegible] ತಿಂಗಳ [illegible] ಈ ಎರಡು ದಿವಸ ಕೂಡುವದು. [illegible] ಸಾಹೇಬ [illegible] ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು. ಇವರು ಮೈಸೂರ ರಡ್ಡೀ ಸಂಘದ [illegible] ಸಂಘದ [illegible] ಕೌನ್ಸಿಲ ಮೆಂಬರೂ [illegible] ಆಗಿದ್ದಾರೆ. ಇದೇ ಸಮಯದಲ್ಲಿ ರಡ್ಡೀ ಸಮಾಜದ ದ್ವಿತೀಯ ಮಹಿಳಾ ಪರಿಷತ್ತೂ ಕೂಡುವದು. ಮೈಸೂರ ವಿದ್ಯಾಖಾತೆಯಲ್ಲಿ ಶಿಕ್ಷಕಿಯರಾದ ಕುಮಾರಿ ಲಕ್ಷ್ಮಮ್ಮ ಬಿ. ಎ. ಇವರು ಅಧ್ಯಕ್ಷಸ್ಥಾನವನ್ನು ವಹಿಸುವರು. ಯರಗಟ್ಟಿಯು ದಾರವಾಡ, ಬೆಳಗಾವಿ ಮತ್ತು ಬಾಗ

ಲಕೋಟೆಯಿಂದ ನಿತ್ಯ ಮೋಟಾರ ಸರ್ವೀಸವಿಕ್ಕುತ್ತದೆ.

ಕಾಂಗ್ರೆಸದ ಜಯುಜಯಕಾರ.

—೦—

ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ಒಪ್ಪಂದ.

—೦—

ಮಹಾತ್ಮರ ಸನ್ನಿಧಾನದಲ್ಲಿ ಕೂಡಿದ ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ಪ್ರತಿನಿಧಿಗಳ ನಡುವೆ ಎರಡು ದಿವಸಗಳ ತನಕ ಪ್ರೇಮಪೂರ್ವಕವಾದ ವಾದವಿವಾದವಾದ ನಂತರ, ಉಭಯತ ನಡುವೆ ರಾಜೀ ಆದಂತೆ ಜಾಹೀರ ಮಾಡಲ್ಪಟ್ಟಿತು. ವಾದದ ಮುಖ್ಯ ಪ್ರಶ್ನವು ದಿವಾನಗಿರಿಯನ್ನು ಅಂಗೀಕರಿಸಿ, ಸರಕಾರದ ಹೊಟ್ಟೆಯೊಳಗೆ ಸೇರುತ್ತ ಬೆನ್ನಲ್ಲಿ ಚಿರಿಯಬೇಕೆಂದಿತ್ತು. ಯಾವದೊಂದು ಪಕ್ಷದ ಬಹುಮತವಾದರೆ ಅದಕ್ಕೆ ದಿವಾನಗಿರಿಯನ್ನು ಕೊಟ್ಟ ಹೊರತು ಸರಕಾರದ ಆಟ ನಡಿಯಲಿಕ್ಕಿಲ್ಲ. ಸ್ವರಾಜ್ಯ ಪಕ್ಷೀಯರ ಬಹುಮತವಿದ್ದರೂ, ಅವರು ದಿವಾನಗಿರಿಯನ್ನು ಅಂಗೀಕರಿಸಲಿಲ್ಲ. ಏಕೆಂದರೆ ದಿವಾನಗಿರಿಯು ಕುಂಟ ಸರಕಾರ ನ ಪಟ್ಟಣದ ದೊರೆತನದಂತಿರುವದು. ಅಧಿಕಾರ, ಜವಾಬದಾರಿ ಮತ್ತು ಕಾರ್ಯಕರ್ತೃತ್ವದ ಜವಾಬದಾರಿಯಿದ್ದರೇ ಮಂತ್ರಿಪದವನ್ನು ಅಂಗೀಕರಿಸತಕ್ಕದೆಂದು ಫಿರೋದಪೂರದಲ್ಲಿ ಸ್ವರ್ಗವಾಸಿ ದೇಶಬಂಧು ದಾಸರು ಜಾಹೀರ ರೀತಿಯಿಂದ ಸರಕಾರಕ್ಕೆ ತಿಳಿಸಿದ್ದಾರೆ. ಆ ಪ್ರಕಾರ ಸರಕಾರವು ವಚನ ಮತ್ತು ಅಧಿಕಾರ ಕೊಟ್ಟರೆ ಮಂತ್ರಿಯಾಗತಕ್ಕದ್ದೆಂದು ತಿಸ್ಸಾಯಿಯಲ್ಲಿ ಠರಾವಾಗಿ ಉಭಯ ಪಕ್ಷಗಳ ಐಕ್ಯವಾಯಿತು. ಇದೇ ಕಾಂಗ್ರೆಸದ ಜಯ ಜಯಕಾರವು. ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಜಯಭೇರಿ ಹೊಡೆಯುವದೆಂದು ನಿಂಚಿತವಾಯಿತು.

ಡಾಯರ್‌ಗೆ ಜ್ಞಾನದಂಟವೆ!!!

—೦—

ಹಿಂದುಸ್ಥಾನ ಸರಕಾರದವರು ಸ್ಕೇಟ ಸೇಕ್ರೆಟರಿಯವರ ಮತ ತಕ್ಕೊಂಡು ನಾಗಪೂರ ಇಲಾಖೆಯ ದ್ವಿದಳ ದೊರೆತನದ ಕಾರಭಾರವನು ಗರ್ವನರನ ಕೈಯ ಇವಿಯ ಪ್ರಾರಂಭದ ತನಕ ನಿಲ್ಲಿಸಿದ್ದಾರೆ. ಸರಕಾರದ ಈ ಕೃತ್ಯವು ಡಾಯರ್ಕಿಯನ್ನು ಧ್ವಂಸ ಮಾಡಬೇಕೆಂಬ ಕಾಂಗ್ರೆಸದ ಪ್ರತಿಜ್ಞೆಯನ್ನು ಪೂರ್ಣ ಮಾಡಿದಂತಾಯಿತು. ಹೊಸ ಚುನಾವಣೆಯಲ್ಲಾದರೂ ಮೆಂಬರರು ಮಂತ್ರಿಪದವನ್ನು ಅಂಗೀಕರಿಸುವರೆಂದು ಸರಕಾರದ ಆಶೆ. ಆದರೆ ಕಾಂಗ್ರೆಸದ ಜಯಜಯಕಾರದ ವರ್ತಮಾನ ಕೇಳಿ, ಸರಕಾರವು ನಿಟ್ಟುಸುರು ಹಾಕಿರಬೇಕೆಂದು ಸಹಜವಾದ ತರ್ಕವಾಗುತ್ತದೆ. ಒಂದೇ ದಿವಸದಲ್ಲಿ ಆಶೆ ನಿರಾಶೆಗಳ ಸುಯೋಗ ಕುಯೋಗ ಕೂಡಿ ಬಂದವಲ್ಲ!

ಸವದತ್ತಿಯ ಪತ್ರವು.

—೦—

ಇಲ್ಲಿಯ ಮ್ಯುನಸಿಪಾಲಿಟಿಯಲ್ಲಿ ಎರಡು ಪಂಗಡಗಳಾಗಿರುತ್ತವೆಂಬದು ವಿಜಯದಲ್ಲಿ ಈ ಮೊದಲೆ ಪ್ರಸಿದ್ಧವಾಗಿರುತ್ತದಷ್ಟೇ; ಪ್ರಕರಣವು ವಿಕೋಪಕ್ಕೆ ಹೋಗಿರುತ್ತದೆ. ಆಗ ಚೇರಮನ ಪಕ್ಷ, ಪ್ರೆಸಿಡೆಂಟ ಪಕ್ಷವೆಂದಿದ್ದವು. ಈಗ ಬ್ರಾಹ್ಮಣ-ಬ್ರಾಹ್ಮಣೇತರ ಪಕ್ಷ ಸೇರಿ ಬಂದು, ಮತ್ತು ಬ್ರಾಹ್ಮಣೇತರರು ಮಾತ್ರ ಬಂದು ಈ ಪ್ರಕಾರ ಎರಡು ಪಕ್ಷಗಳಾಗಿರುತ್ತವೆ.

ತ್ರೈವಾರ್ಷಿಕ ಚುನಾವಣೆಯಾಗಿ ಒಂದೇ ವರ್ಷವಾದರೂ ಮೂರು ನಾಲ್ಕು ಉಪ ಚುನಾವಣೆಗಳಾದವು. ಚೇರಮನ್ನರಾಗಿದ್ದ ಮಿ. ಕೊಟ್ರಪ್ಪ ಮಮದಾಪೂರ ಇವರು ಸ್ವರ್ಗಸ್ಥರಾದ್ದರಿಂದ ಇವರ ಜಾಗೆಯ ಚುನಾವಣೆಯಲ್ಲಿ ಮೂವರು ಉಮೇದವಾರರಿದ್ದರು. ಪ್ರೆಸಿಡೆಂಟ ಸಾಹೇಬರು ಮಿ ಮುರಿಗಯ್ಯಾ ಕೊಡ್ಲಿಮಠ ಇವರ ಅರ್ಜಿಯನ್ನು ರದ್ದು ಮಾಡಿದರು. ಇದರ ವಿರುದ್ಧ ಪ್ರಕರಣವು ಹಾಯಕೋರ್ಟಿಗೆ ಹೋಗಿದೆ.

ಉಳಿದ ಇಬ್ಬರಲ್ಲಿ ಮಿ. ಜಾಲಸ್ವಾಮಿ ಎಂಬವರು ಪ್ರೆಸಿಡೆಂಟರ ಸಹಾಯದಿಂದ ಆರಿಸಲ್ಪಟ್ಟರು. ಈ ಚುನಾವಣೆಯಿಂದ ಪ್ರೆಸಿಡೆಂಟ ಪಕ್ಷದ ಬಹುಮತವಾಗಿರುತ್ತದೆ.

ಮಿ ಚನ್ನಬಸನಗೌಡ ಪಾಟೀಲರೆಂಬ ವಿರುದ್ಧ ಪಕ್ಷದ ಮೆಂಬರರು ಯಲ್ಲಮ್ಮನ ಜಾತ್ರೆಯ ತಲೆ ಪಟ್ಟಿಯ ವಸೂಲಿಯ ಮತ್ತೆಯಲ್ಲಿ ಪಾಲುಗಾರರಿದ್ದಾರೆಂದೂ ಇದು ಕಾಯದೆಗೆ ವಿರುದ್ಧ ಕೃತ್ಯವೆಂದೂ ಹೇಳಿ, ಇವರ ಮೆಂಬರಶಿಪ್ಪನ್ನು ರದ್ದು ಮಾಡಿ, ಆ ಪ್ರಕಾರ ಅವರಿಗೆ ತಿಳಿಸಿದ್ದಾರೆ. ಹಿಸೇ ಇಟ್ಟಿಲ್ಲೆಂದೂ, ಪುರಾವೆ ತೋರಿಸಿರೆಂದು ಕೇಳಿದರೂ, ಅಧ್ಯಕ್ಷರು ಕೇಳಲಿಲ್ಲ. ಈ ಠರಾವಿನ ವಿರುದ್ಧ ಮಿ ಬಸನಗೌಡರು ಜೆ. ಕಮಿಶನರ ಸಾಹೇಬರ ಕಡೆಗೆ ಅರ್ಜಿ ಮಾಡಿದ್ದಲ್ಲದೆ ಪ್ರೆಸಿಡೆಂಟರಿಗೆ ಕೆಳಗೆ ಬರೆದ ಪ್ರಕಾರ ನೋಟೀಸು ಕೊಟ್ಟಿದ್ದಾರೆ.—

“ನಾನು ಗುತ್ತಿಗೆದಾರನಲ್ಲ ಅಫೀಸರನಿದ್ದೇನೆ. ನನ್ನನ್ನು ಸ್ವತಂತ್ರವಾಗಿ ತೆಗೆಯಲಿಕ್ಕೆ ನಿಮಗೆ ಅಧಿಕಾರವಿಲ್ಲ. ನನ್ನ ಕ್ಷಮೆ ಬೇಡಿಕೊಳ್ಳಬೇಕು. ಇಲ್ಲವಾದರೆ ನಾಲ್ಕು ನೂರು ರೂಪಾಯಿಗಳ ಮಾನಹಾನಿಯ ಫಿರ್ಯಾದಿ ಮಾಡುವೆನು.” ಮುಂದಾಗುವದನ್ನು ಬರೆಯುವೆನು.

ಯಲ್ಲಮ್ಮನ ಗುಡ್ಡದಲ್ಲಿ ಇಂದಿನ ಜಾತ್ರೆಯು ಬಹಳವಿದೆ. ಮುಳಗೋಳಿ ಬೆಳೆದು ಯಾತ್ರಿಕರಿಗೆ ಇಳಕೊಳ್ಳಲಿಕ್ಕೆ ಸ್ಥಳವಿಲ್ಲ. ಹಿಂದಿನ ಪ್ರೆಸಿಡೆಂಟರಾದ ಮಿ. ಹೊಂಪಣ್ಣನವರು ಸಳ ಕರುವ ವಿಚಾರ ಮಾಡಿ, ಸರಕಾರದ ಸಹಾಯ ಕೂಡ ಕೇಳಿದ್ದರು. ಪ್ರಸ್ತುತದ ಪ್ರೆಸಿಡೆಂಟರು ಅಲಕ್ಷ್ಯವಾಗಿ ದೊರೆತ ಅಧಿಕಾರದ ದುರುಪಯೋಗ ಮಾಡಿ, ಶ್ರೀ ಹೊಂಪಣ್ಣನವರ ಯೋಜನೆಯಂತೆ ನಡೆಯದೆ, ಮುಳಗೋಳಿಯನ್ನು ಕಡಿಸಿ, ಯಾತ್ರೆಗೆ ಅನುಕೂಲ ಮಾಡಿಕೊಡುವದು ಮೊದಲಾದ ಕರ್ತವ್ಯವಾಗುವದಿಲ್ಲವೇ? ತಲೆ ಪಟ್ಟಿಯ ವಸೂಲಿಯು ಬೇಕಾದಷ್ಟು ಬರುತ್ತದೆ. ಅದರಿಂದ ಬೇಕಾದಷ್ಟು ಲೋಕೋಪಯೋಗಿ ಕೆಲಸವನ್ನು ಮಾಡಬಹುದಾಗಿದೆ. ಆದರೆ ಅಂಥ ವಿಚಾರ ಮಾಡಬೇಕು!!

ಪೆಕಿಂಗದಲ್ಲಿ ಬೋಲ್ಶೆವಿಕರ ಸುಳಿದಾಟ

ಅಧಿಕಾರ ಪಕ್ಷೀಯರು ಗಳ ಹೇಳಿಸಿದ ನಂತರ ವಿರುದ್ಧ ಪಕ್ಷದ ದಳಪತಿಯಾದ ಲು ಪಿಫೂನು ಸದ್ಯದಲ್ಲಿ ಪಟ್ಟಣದ ನಾಯಕನಾಗಿದ್ದಾರೆ. ಕಂಸನಿಗೆ ಎತ್ತನೋಡಿದತ್ತ ಕೃಷ್ಣನೇ ಕಂಡಂತೆ, ಈತನಿಗೆ ಎತ್ತನೋಡಿದತ್ತ ಪಟ್ಟಣದ ತುಂಬ ಬೋಲ್ಶೆವಿಕ ಭೂತವು ಕಾಣುತ್ತಿರುವದು. ಬೋಲ್ಶೆವಿಕರ ಮುಲೋತ್ಪಾಟನ ಮಾಡದ ಹೊರತು ಜನದ ಸ್ವಸ್ಥ ಬಸಿಯಾಗದೆಂದು ಈತನು ಜಾಹೀರು ಮಾಡಿದ್ದಾನೆ.

ಸವದತ್ತಿ ತಾಲೂಕ ಕರೀಕಟ್ಟಿಯಲ್ಲಿ ಒಂದು ಆಕಳಿಗೆ ಒಂದು ಹೋರಿ ಹುಟ್ಟಿದೆ. ಅದಕ್ಕೆ ಮೂರು ಕಣ್ಣುಗಳಿರುವವು. ಮೂರೂ ಕಣ್ಣು ಕಾಣುತ್ತವೆ. ಅನೇಕ ಜನರು ಇದನ್ನು ನೋಡಲಿಕ್ಕೆ ಹೋಗುತ್ತಿದ್ದಾರೆ.

ಬೆಳಗಾವಿಯಲ್ಲಿ ಕಟ್ಟುವ ಗಿಲಗಂಚಿ ಆರಟಾಳ ಹಾಯಸ್ಕೂಲಿಗಾಗಿ ವಂಟಮೂರಿಯ ಶ್ರೀಮಂತ ಸರದೇಸಾಯರು ೨೦ ಸಾವಿ ಮತ್ತು ನಣದಿಯ ಶ್ರೀಮಂತ ದೇಸಾಯರು ೫ ಸಾವಿರ ರೂಪಾಯಿ ಕೊಟ್ಟಿರುತ್ತಾರೆ.

ನಾಗಪೂರದ ಓರ್ವ ಪ್ರಸಿದ್ಧ ಮರಾಠಿಯರಾದ ರಾವಬಹಾದ್ದೂರ ಬೂಟಿಯವರು ಒಮ್ಮಿಂದೊಮ್ಮೆ ಉಸುರು ಬಂದಾಗಿ ಪರಲೋಕವಾಸಿಯಾದರು.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ

ವಿವೇಚನೆಯು

ಬ್ರಾಹ್ಮಣ ಬ್ರಾಹ್ಮಣೇತರ, ಉದಾರ, ಮವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮುಂತಾದ ಪಕ್ಷಗಳ ವಿಚಾರಗಳನ್ನೂ, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನೂ ಅಚ್ಚುಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ಎಲ್ಲಿಯೂ ದೊರೆಯದ ಚುನಾವಣೆಯನ್ನು ಕುರಿತು ವಿವಿಧ ಲೇಖಗಳೂ, ಆಲೋಚಕ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ವೋಟಿನ ಹಕ್ಕಿದ್ದವರು ದಿನಾಲು. ಇಲ್ಲದವರು ವಾರ್ತಾವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಗಿ ಕೂಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಅದೆಂಥ ಕರ್ತೃತ್ವ ಮಾಡುವ ಹಂಬಲ ತೊಡುವದೆಂಬುದನ್ನು ಓದಿರಿ. ಆದರೆ ಒಂದು ವರ್ಷದ ತನಕ ಓದಬೇಕು. ಓಲ್ಲದವರು ವಿಜಯವನ್ನು ಸ್ವತಃ ಓದಬೇಕು. ಬರದವರು ಆಸ್ಥರಿಂದ ಓದಿಸಿಕೊಂಡು ತಿಳಿಕೊಳ್ಳಬೇಕು.

ದೇಶಹಿತವನ್ನೇ ಮೂಲಕ ಹಿತವೆಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಜಂಡಾ ನಿಗಾಯ- ಅಂಚೆವೆಚ್ಚ ಸೇರಿ ವರ್ಷಕ್ಕೆ ದೈನಿಕ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ನಿಮಗೆ ತ್ರಾಸ [illegible] ವಿಕೆ ಉಳಿಯುವಿ? ಹಲ್ಲನೋವೋ? ಹಲ್ಲುಕೂಲಿಯೋ? ಮತ್ತಾವಲ್ಲಿ ನೋಯುತ್ತದೆಯೋ? ಆಗಾದದ್ದಾದರೂ ಏನು?

ಅಜ್ಜನು— ಕಂದಾ— ಹಾದು ಮಹಾ [illegible] ನೋಯುತ್ತದೆ

ಕಂದ— ಹೀಗಾದರೆ ಪೋಮೆಂಟ ಆಫ್ [illegible] ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳು ಪರಿಹಾರವಾಗಿ ಮಾತಾಡುವಿ ಮತ್ತು ಕಾಡುವ [illegible] ತುಸು. ಎಲ್ಲೋ ಜರಿ.

ಸುಪ್ರಸಿದ್ಧ ದೇಶದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವವು.

ಸಿಗುವ— ನಗರದಲ್ಲಿನ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸರಿ ಕೆಮಿಸ್ಟ, ಮತ್ತು ಡ್ರಗಿಸ್ಟ

ಸ್ಪೇಶಲ [illegible]

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮುಲಾಮು

ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ಹಸಿ ಮತ್ತು ಒಣಬಿಚ್ಚಿ, ಗರ್ಮಿಯ ಬಟ್ಟೆ, ಭಗೇಂದ್ರ, ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ [illegible] ಅಂಚೆವೆಚ್ಚ ಬೇರೆ.

[illegible] ಏಜೆಂಟ [illegible] ಕಮೀಶನ [illegible] ಕೊಡುವ [illegible] ಮತ್ತು [illegible]

ಎಸ. ಎಸ. ಪೆಂಟರ

ಬಡೇಬಜಾರ ಬೆಳಗಾವಿ

ವಿಜಯದ ವರ್ಗಣೀ ದರ

ದೈನಿಕಪತ್ರಕ್ಕೆ	
[illegible] ವರ್ಷಕ್ಕೆ	೧೩—೮—೦ ರೂ
	೭—೦—೦ ರೂ
	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ [illegible] ಇಂಗ್ಲಿಷ [illegible] ಕನ್ನಡದಲ್ಲಿ [illegible] ಕಾಲಮಿನ [illegible] ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರ ವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ „
ಲೋ. ಟಿಳಕರ ಚರಿತ್ರ	೪ „
ದೇಶಬಂಧು ದಾಸರ ಚರಿತ್ರ	೨ „
ದೇಶಭಕ್ತರ ಸಂದೇಶಗಳು	೧ „

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ.

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N B. 1448

ಸಿಕ್ಕೈ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭। ಧಾರವಾಡ ರವಿವಾರ ತಾರೀಖು ೨೫ನೇ ಎಪ್ರೇಲ ೧೯೨೬ (ಸಂಚಿಕೆ ೯

ಸರಕಾರದಿಂದ ಪೆಟೆಂಟ ದೊರೆತ



ಮಲ್ಲಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಬಾಗಿಲಿನಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಬಾಗಿಲು [illegible] ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಿದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೩೫	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂದಿಗೆಯು ಆರು ಲಕ್ಷದ ಮೇಲುಂಟು. ಚಾಲು ಖಾತೆ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible]ವದು. ಕಾಯಮ ಮತ್ತು ಮುದತ ಠೇವ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಹಾರರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಒಂದೂವರೆ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿವಿಧ ವರ್ತಮಾನಗಳು.

—೦—

ಪಂಚಮ ಜಾರ್ಜ ಬಾದಶಹರ ಎರಡನೆಯ ಮಕ್ಕಳಾದ ಡ್ಯೂಕ ಆಫ ಯಾರ್ಕರಿಗೆ ಪುತ್ರರತ್ನ ಜನಿಸಿತು. ಪ್ರಿನ್ಸ ಆಫ ವೇಲ್ಸರಿಗಾಗಲಿ, ಡ್ಯೂಕ [illegible] ಗಂಡು ಸಂತತಿಯಾಗದಿದ್ದರೆ- ಈ ಶಿಶುವೇ ಮುಂದೆ ಪ್ವಿಕ್ಟೋರಿಯಾ ಮಹಾರಾಣಿಯಂತೆ ಚಕ್ರವರ್ತಿನಿಯಾಗುವದು.

———

ಗ್ವಾಲೇರದ ಮಹಾರಾಣಿಯವರು ಕುದುರೆಯ ಸಂಸ್ಥವನ್ನು ನಿಷೇಧಿಸಿದ್ದರ ಪರಿಣಾಮವು ಶೋಚನೀಯವಾದ ದರಬಾರಿನ ಮೇಲೆಷ್ಟೂ ಆಗಿರುವದಿಲ್ಲ. ದರಬಾರಿನವರು ನೀಲಗಿರಿಯ ಶರ್ಯತಿಗೆ ಏಳೆಂಟು ಕುದುರೆಗಳನ್ನು ಕಳಿಸಿದ್ದಾರೆ.

———

ಬಂಗಾಲಕ್ಕೆ ಸೇರಿದ ಕೊಮಿಲ್ಲಾದಲ್ಲಿ ಕೆಲ ಕಿಡಿಗೇಡಿಗಳು ಹಿಂದೂ ಮುಸಲಮಾನರ ದಂಗೆ ಎಬ್ಬಿಸಬೇಕೆಂದಿದ್ದರು. ಅಧಿಕಾರಸ್ಥರು ದೇವಾಲಯಗಳ ಮುಂದೆ ಪೋಲೀಸ ಕಾವಲಿಟ್ಟರು. ಹಿಂದೂ ಮುಸಲಮಾನ ಸ್ನೇಹವುಂಟು ಪೋಲೀಸ ಪಿಕೆಟಿಂಗವು ಮುಸಲಮಾನರಿಗೆ ಮನೋವ್ಯಥೆಯನ್ನುಂಟು ಮಾಡಿದೆಂದು ಅಸೆಂಬ್ಲಿಯ ಮೆಂಬರರಾದ ನಾಮದಾರ ಮೌಲ್ವಿ ಅಬ್ದುಲ ಕರೀಮರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ತಿಳಿಸಲು- ಅವರ ಪೋಲೀಸ ಕಾವಲನ್ನು ಎಬ್ಬಿಸಿದರು.

———

ಭಾವನಗರ ಸಂಸ್ಥಾನದ ಅ್ಯಡ್ಮಿನಿಸ್ಟ್ರೇಟರರಾದ ಸರ ಪಟ್ಟಾಣಿಯವರು ಸ್ಪೆಶ್ಯಾಲಿಸ್ಟ ಚಿಕಿತ್ಸೆಯಿಂದ ಗುಣ ಹೊಂದುವದಕ್ಕಾಗಿ ನೀರು ಮಾತ್ರ ಕುಡಿದು, ಉಪವಾಸ ಮಾಡುತ್ತಿದ್ದಾರೆ. ಇಂದು ಎಂಟನೇ ದಿವಸ. ಡಾ. [illegible] ಚಿಕಿತ್ಸೆ ಮಾಡುತ್ತಿದ್ದಾರೆ.

———

ಮಿ. ಮರ್ಡೇಕರರು ಬೆಳಗಾವಿಯ ಅಸಿಸ್ಟಂಟ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ

ವಿಜಯ.

ಧಾರವಾಡ ತಾ- ೨೫-೬-೨೬ ನೇ ಬುಧ[illegible]

ವೈಕುಂಠವಾಸಿ
ರಾಮರಾವ ಬಳ್ಳಾರಿ ವಕೀಲರು.

ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ. ರಾಮರಾವ ಬಳ್ಳಾರಿಯವರು ಮೊನ್ನಿನ ದಿವಸ ಸಾಯಂಕಾಲಕ್ಕೆ ವಿಷಮಜ್ವರದಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ. ಮರಣ ಸಮಯದಲ್ಲಿ ಇವರು ೬೨ ವರ್ಷದವರಾಗಿದ್ದರು. ಇವರು ಫೌಜದಾರಿ ಪ್ರಕರಣಗಳಲ್ಲಿ ಬಹಳ ಬುದ್ಧಿವಂತರೆಂದು ಕರ್ನಾಟಕ ಪ್ರಾಂತದಲ್ಲೆಲ್ಲ ಸುಪ್ರಸಿದ್ಧರಾಗಿದ್ದರು. ವಕೀಲಿಯು ಇವರ ಜೀವನದ ಮುಖ್ಯ ಧ್ಯೇಯವಾಗಿರಲಿಲ್ಲ. ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಪಾಸಾದ ಕೂಡಲೆ ಪೊಲೀಸ ಖಾತೆಯಲ್ಲಿ ಸೇರಿದರು. ಬುದ್ಧಿವಂತರೆಂದೂ, ದಕ್ಷತೆಯಲ್ಲಿ ಜಾಣರೆಂದೂ ಇವರನ್ನು ಪೊಲೀಸ ಖಾತೆಯು [illegible]ಗೆ ವರ್ಗ ಮಾಡಿದರು. ಆಗಿನ ಪೊಲೀಸ ಖಾತೆಯು ಬಹುತೇಕವಾಗಿ ನಿರಕ್ಷರಿಗಳಿಂದಲೇ ತುಂಬಿತ್ತು. ಪೊಲೀಸ ಖಾತೆಯ ಕಾರಕೂನರು ದಫ್ತರದ ಕೆಲಸವನ್ನು ನೋಡುತ್ತಿದ್ದರು. ಶ್ರೀ [illegible]ರಾಯರಂಥ ಚುರುಕ ಬುದ್ಧಿಯ ಗೃಹಸ್ಥ[illegible] ಸ್ಥರಾದದ್ದರಿಂದ, ಅದರಲ್ಲಿ ಒಂದರ ಮೇಲೆ[illegible] ಸುಧಾರಣೆಯಾದವು. ಪೊಲೀಸ ಖಾತೆ[illegible] ಇವರ ಜಾಣ್ಮೆಗೆ ಮೆಚ್ಚಿ, ಇವರ ಸೂಚನೆ[illegible] ತಕ್ಕ ಬದಲುಗಳಿಗೆ ಅನುಮೋದನ ಕೊಡಲು[illegible], ಇದು ಕೆಲವರಿಗೆ ಅಸೂಯೆ ವಿಷಯ[illegible] ಲಂಚದ ಆರೋಪ ತಂದರು, ಶ್ರೀ ರಾಮ[illegible]ರನ್ನು ನಂಬಿದ ಸಾಹೇಬರು ವರ್ಗವಾ[illegible] ಹೋದರು, ಬೇರೆಯವರು ಬಂದರು, ಲಂಚದ ಆರೋಪವನ್ನು ಸಿದ್ಧ ಮಾಡುವದಾಗದ್ದರಿಂದ [illegible]ಮೆಂಟಿನಿಂದ ಬರತರ್ಫ ಮಾಡಿದರು. ಆ ಆಕ್ಷೇಪಕ್ಕೆ ಇವರೆಷ್ಟು ಎದೆಗುಂದಲಿಲ್ಲ. ಸಾರ್ವಜನಿಕ ಸೇವೆ ಮಾಡಬೇಕೆಂದು ರಾಜಹಂಸ ಪತ್ರಿಕೆಗೆ ಜನ್ಮ ಕೊಟ್ಟರು. ಬ್ರಹ್ಮದೇವನು ಹಣೆಯ ಮೇಲೆ ಎಷ್ಟೇ ಕೋಪಿಸಿದ್ದರೂ, ಹಾಲು ಮತ್ತು ನೀರನ್ನು ಬೇರೆ ಮಾಡುವ ಅದರ ಹುಟ್ಟು ಗುಣವನ್ನು ಕಸಿದುಕೊಳ್ಳಲಾರನೆಂಬ ಕವಿಯ[illegible] ಆಳರಸರ [illegible] ಕೋಪಕ್ಕೆ ಗುರಿಯಾದರು. ನಿರಾಶ್ರ[illegible]ರಾಗಿ ಅಲ್ಲಿ ಪಡೆದ ಸಂಗತಿಯು. ಆಗ ಧಾರವಾಡ ಪ್ರಾಂತದಲ್ಲಿ ಮರಾಠೀ ರಾಮದಾಸರ ಪ್ರಾಬಲ್ಯವೇ ಹೆಚ್ಚಿತ್ತು. ಶ್ರೀ ರಾಮರಾಯರು ಅವರಿಂದ ಬರುತ್ತಿದ್ದ ಅನೇಕ ಎಡರುಗಳಿಗೆ ತಲೆಗೊಟ್ಟು, ಎಳೆನಿಷ್ಠೆಯಿಂದ ತಮ್ಮ ಕರ್ತವ್ಯ ಮಾಡಿದರು. ಎರಡು ವರ್ಷ ರಾಜಹಂಸವನ್ನು ನಡೆಸಿದ ಬಳಿಕ ವಕೀಲಿಯ ಅಭ್ಯಾಸ ಮಾಡಿ, ಒಂದೇ ವರ್ಷದಲ್ಲಿ ಪರೀಕ್ಷೆ ಪಾಸಾದರು. ಮುಲಕೀ ಮತ್ತು ಪೊಲೀಸ ಖಾತೆಗಳಲ್ಲಿ ಕೆಲಸ ಮಾಡಿ, ಅವುಗಳೊಳಗಿನ ಮರ್ಮವನ್ನು ತಿಳಿದವರಾದ್ದರಿಂದ, ವಕೀಲಿಯಲ್ಲಿ ಬೇಗನೆ ಪ್ರಸಿದ್ಧಿಗೆ ಬಂದರು. ದೊಡ್ಡ ದೊಡ್ಡ ಫೌಜದಾರಿ ಖಟ್ಲೆಗಳಲ್ಲಿ ಬಹುತೇಕವಾಗಿ ಆರೋಪಿಗಳ ಪರಿಯಾಗಿ ಇವರೇ ಇರುತ್ತಿದ್ದರು. ಪೊಲೀಸ ಪಾತ್ರವಲ್ಲ; ಮ್ಯಾಜಿಸ್ಟ್ರೇಟರ ಮುಂದೆ ಸಹ ಕಟಾಕ್ಷಿ ಅಪ್ಪಾಟನ್ನು ಕೊಟ್ಟಂಥ ಆರೋಪಿಗಳನ್ನು ಬಿಡಿಸಿಕೊಳ್ಳುವರು. ಮ್ಯಾಜಿಸ್ಟ್ರೇಟರೂ ಜಡ್ಜರೂ ಕೂಡ ವಿಸ್ಮಯಪಡುವಂಥ ಹೊಸ ಮುದ್ದೆಗಳನ್ನು ಹೂಡಿ, ಫಿರ್ಯಾದಿ ಪಕ್ಷದ ಪುರಾವೆಯನ್ನು ಕೆಡಿಸುವರು. ನೂರಾರು ಜನರ ಗಲ್ಲನ್ನು ತಪ್ಪಿಸಿ ಅವರಿಗೆ ಜೀವದಾನ ಕೊಡಿಸಿರುತ್ತಾರೆ. ವಕೀಲಿಯಲ್ಲಿ ಈ ತೆರವಾಗಿ ಪ್ರಸಿದ್ಧಿಯಾದ ಹಾಗೆ ದ್ರವ್ಯದ ರಾಶಿಯು ಬೀಳಲಾರಂಭಿಸಿತು. ಮಾಳಗುಡ್ಡದ ಒಂದು ಭಾಗವನ್ನು ಖರೀದಿಸಿ ಅಂದಗೊಳಿಸಿದರು. ವಕೀಲಿಯೊಂದಿಗೆ ಸಾರ್ವಜನಿಕ ಕೆಲಸಗಳಲ್ಲಿಯೂ ಮನಸ್ಸು ಹಾಕುವರು. ಮ್ಯುನಸಿಪಾಲಿಟಿಯ ಮೆಂಬರರಾಗಿದ್ದರು. ಅದು ಪ್ಲೇಗಿನ ಹಾಹಾಕಾರದ ಕಾಲ. ಆಗ ಪ್ಲೇಗ ಕಮಿಟಿಯು ಬಹು ಜನರ ಸ್ವರಾಜ್ಯ(?)ವನ್ನು ಕಸಿದುಕೊಂಡಿತು. ಅದನ್ನು ಪ್ರತಿರೋಧಿಸಿ, ಪ್ರತಿಭಟಿಸುವವರಲ್ಲಿ ಇವರೂ, ದೇಶಭಕ್ತ ವಿನಾಯಕರಾವ ಜೋಶಿಯವರೂ, ರಾ. ಬ. ಮೋಹರಪ್ಪನವರೂ, ಇನ್ನೀವರ್ರೂ [illegible] ಕೊಟ್ಟರು. ಇವರ ಸ್ಥಳಗಳ ಚುನಾವಣೆಯಾಯಿತು. ಸರ್ಕಾರದಿಂದ ಅನುಮೋದನವಾಗಲಿಲ್ಲ. ಚುನಾವಣೆಗೆ ಬ್ರಾಹ್ಮಣ-ಬ್ರಾಹ್ಮಣೇತರರೆಲ್ಲರೂ ಬಹಿಷ್ಕಾರ ಹಾಕಿ ಸಾಹೇಬರನ್ನು ಆಗಿಸುವದಕ್ಕಾಗಿ ಪ್ರಭು ಒಂದು ಘೋರತೆಂಬವನ್ನು ಅನುಮೋದನವಾಗದಾದಿ ತಿಳಿಸಿ, ಅದರನ್ನು ಆರಿಸಿದರು. ಮ್ಯುನಸಿಪಾಲಿಟಿಯಂತೆ ಡಿಸ್ಟ್ರಿಕ್ಟ ಲೋಕಲ ಬೋರ್ಡಿನಲ್ಲಿಯೂ ಸೇರಿ, ವ್ಯಾನೇಜ್ಮೆಂಟ(?) ಕಮಿಟಿಯ ಚೇರಮನ್ನರಾಗಿದ್ದರು. ಲೋಕಮಾನ್ಯ ಟಿಳಕರು ಇಲ್ಲಿಗೆ ಬಂದಾಗ ಅವರಂಥ ದೊಡ್ಡ ವ್ಯಕ್ತಿಗಳು [illegible] ಇಳಿದುಕೊಳ್ಳುವದಕ್ಕೆ ಬೇಕಾದಂಥ ಪ್ರಾಸಾದಗಳು ಈ ಊರಲ್ಲಿ ಬಹಳ ಕಡಿಮೆ ಇರುವವು. ಅದರ ಅವರನ್ನು ಇಳಿಸಿಕೊಳ್ಳುವದಕ್ಕೆ ಬೇರೆಯಾರೂ ಧೈರ್ಯ ಮಾಡಲಿಲ್ಲ. ಶ್ರೀ ರಾಮರಾಯರು ತಮ್ಮ ಬಂಗಲೆಯಲ್ಲಿ ಅವರನ್ನು ಕರೆದುಕೊಂಡು ಹೋಗಿ ತಾತ್ವಿಕ ವಿಚಾರದವರಾದ್ದರಿಂದ, ಸಂಕೋಚದಿಂದ ಸ್ಥಳಕೊಟ್ಟರಲ್ಲದೆ, ಸ್ವತಃ ನಿಂತು ಅವರ ಆತಿಥ್ಯ ಸತ್ಕಾರ ಮಾಡಿದರು. ನಾನ ಕೋ-ಆಪರೇಶನದ ವೇಳೆಯಲ್ಲಿಯೂ ಇವರು ಮನಃಪೂರ್ವಕವಾಗಿ ಸಹಾಯ ಮಾಡಿದರು. ಆಗಿನ ಚಳವಳಿ, ಆಗಿನ ವಿಚಾರ ಮತ್ತು ಆಗಿನ ದಿಟ್ಟತನಕ್ಕನುಸರಿಸಿ, ಇಲ್ಲಿಯ ವಿಕ್ಟೋರಿಯಾ ಹಾಯಸ್ಕೂಲನ್ನು ಮುರಿದು, ರಾಷ್ಟ್ರೀಯ ಶಾಲೆ ಮಾಡುವದರಲ್ಲಿ ಇವರೊಬ್ಬರು ಅಗ್ರಗಣ್ಯರಾಗಿದ್ದರು. ಕರ್ನಾಟಕ ಹಾಯಸ್ಕೂಲಿನ ಆಶ್ರಯದಾತರೂ ಆಗಿದ್ದರು. ನಿನ್ನಿನ ದಿವಸ ಇವರ ಸ್ಮರಣೆಗಾಗಿ ಈ ಶಾಲೆಯು ಬಂದಿಡಲ್ಪಟ್ಟಿತು. ಇಂದಿಲ್ಲೊಂದು ತರಹವಾಗಿ ಇಲ್ಲಿಯ ಸಾರ್ವಜನಿಕ ಸಂಸ್ಥೆಗಳಿಗೆ ದವ್ಯ ಸಹಾಯ ಮಾಡಿದ್ದಾರೆ. ಲಕ್ಷಾವಧಿ ರೂಪಾಯಿಗಳನ್ನು ಸಂಪಾದಿಸಿ, ಲಕ್ಷಾವಧಿ ರೂಪಾಯಿಗಳನ್ನು ಸ್ವಂತ ಸುಖಕ್ಕೂ ಪರಹಿತಕ್ಕೂ ವಿನಿಯೋಗಿಸಿದರು. ಇವರಲ್ಲಿ ಕೋಪಿಷ್ಠ ಯಾವ ಯಾಚಕನೂ ಬಿನ್ನ ಮುಖ್ಯದಿಂದ ವಿಮುಖನಾಗಿ ಹೋಗಲಿಲ್ಲ. ಧರ್ಮದಲ್ಲಿ ಶ್ರದ್ಧೆಯುಳ್ಳವರು. ಚಿಕ್ಕಂದಿನಿಂದ ಇಂಥಕೂಟಕ್ಕೆ ಸೇರಿದವರು. ಮುಖ್ಯದ್ವಾರ ಭೋಜನವಿತ್ತು. ಶ್ರೀ ರಾಮರಾಯರು ಈ ತೆರವಾಗಿ ಇಹಪರಗಳೆರಡನ್ನೂ ಸಾಧಿಸಿಕೊಂಡು ವೈಕುಂಠವಾಸಿಯಾದರು. ಇವರಿಗೊರ್ವ ಶ್ರೀ ರಘುವೀರರಾಯನೆಂಬ ಮಗನಿದ್ದು ಈತನು ಪ್ರಬುದ್ಧನೂ, ಸುಸಂಸ್ಕೃತನೂ, ವಿನಯಶಾಲಿಯೂ ಕುಟುಂಬ ವತ್ಸಲನೂ ಆಗಿದ್ದಾನೆ.

ಕಾಂಗ್ರೆಸಕ್ಕೆ ಅನುಕೂಲವಾಗಿ ಖಿಲಾಫತ.

—೦—

ಕಾಂಗ್ರೆಸ ಸಭೆಯು ಕೌನ್ಸಿಲ ಪ್ರವೇಶದ ಠರಾವಾಗಿ, ಸ್ವರಾಜ್ಯ ಪಕ್ಷವು ಕಾಂಗ್ರೆಸದ ಒಂದು ಭಾಗವಾಗಿ ಮಾತು ಹೇಳಿದಂತಾಯಿತು. ಕಾಂಗ್ರೆಸದಂತೆ ಖಿಲಾಫತ ಕಮಿಟಿ[illegible] ಠರಾವು ಆಗಿರಲಿಲ್ಲ. ಮೊನ್ನೆ ಮೊನ್ನೆ ದಿಲ್ಲಿಯಲ್ಲಿ ಆದಿದ ಖಿಲಾಫತ ಕಮಿಟಿಯು ಕಾಂಗ್ರೆಸಕ್ಕೆ [illegible] ಕೂಲವಾಗಿ ಪ್ರಾಂತಿಕ ಖಿಲಾಫತ ಕಮಿಟಿ[illegible] ಅನುಮೋದನಾ(?)ವರನ್ನು ನಿಲ್ಲಿಸಬಹುದೆಂಬ ಠ[illegible] ಪಾಸ ಮಾಡಿದ್ದಾರೆ. ಹಿಂದಿನ ಚುನಾವಣೆ[illegible] ಆಪತಕಾರಿಯಾದಂಥ ಮುಸಲಮಾನರು [illegible] [illegible]ದಾರರಾಗಿದ್ದಿಲ್ಲ. [illegible] ಸಾರಿಯ ಚುನಾವಣೆ[illegible] ಖಿಲಾಫತದವರು ಅನು[illegible] ದವಾರರಾಗುವರು[illegible] [illegible]ಮುಂಬಯಿ, ಬಂಗಾಲ ಪಂಜಾಬದ ಕಳೆ[illegible] [illegible]ಮುಸಲಮಾನ ಮತದಾರರ[illegible]ನ್ನು ಮುಂದೆ [illegible] [illegible], ಹಲ್ಲಾ ಟವಾದುವ ದು ನಿಂತು ಹೋ[illegible] [illegible] ಕಾಂಗ್ರೆಸ ಮತ್ತು ಖಿಲಾಫತ ತದ ಪ್ರತಿನಿಧಿ[illegible] [illegible] ಮತ್ತು ಅಸೆಂಬ್ಲಿಯಲ್ಲಿ

ಸೇರುವದರಿಂದ ಇವರದೇ ಬಹುಮತವಾಗಿ ಅರಸನ ಆಟವೆಲ್ಲ ನಿಂತು ಹೋಗುವದೆಂಬದು ಖಂಡಿತ.

ಅರಸರ ಆಳಾಗುವದಕ್ಕಿಂತ ಕುಲಧರ್ಮವೇ ಮೇಲಾದದ್ದು.

—o—

ಬ್ರಾಹ್ಮಣಕೋರ ಸಂಸ್ಥಾನದಲ್ಲಿ ಒಬ್ಬ ಸುಶಿಕ್ಷಿತ ಅರ್ಸಾಲಿಗನು ಸಬ್ ಮ್ಯಾಜಿಸ್ಟ್ರೇಟ ಹುದ್ದೆಯನ್ನು ನೋಡುತ್ತಿದ್ದನು. ಎಷ್ಟು ಅಧಿಕಾರವಿದ್ದರೂ, ದ್ವಿಜರು ದೂರು ನಿಂತು ಕರುಣಾ ಮಾಡುತ್ತಿದ್ದರೂ, ಪಕ್ಷಕಾರರು ಮಹಾಸ್ವಾಮಿಯೆಂದು ತಲೆವಾಗಿ ನಡೆಕೊಳ್ಳುತ್ತಿದ್ದರೂ, ಈತನಿಗೆ ತನ್ನ ಕುಲಧರ್ಮದ ಕಸಬೇ ಶ್ರೇಷ್ಠವೆಂದೂ ಆ ಅಧಿಕಾರವು ಹುರುಳಿಲ್ಲದ್ದಾಗಿ, ತನಗಿಲ್ಲದಿದ್ದರೂ, ತನ್ನ ಮಕ್ಕಳುಮರಿಗೆ ದರಿದ್ರತನ ತರುವದೆಂದೂ ಪದೇ ಪದೇ ಕಂಡು ಹತ್ತಿತು. ಕಡೆಗೆ ತನ್ನ ಕುಲಕಸಬಿನ ಬಾದಿ ಮತ್ತು ಮುಸಿಯಿಂದಲೇ ಜೀವಿಸಬೇಕೆಂಬ ನಿಶ್ಚಯ ಮಾಡಿ, ಈ ಸಂಗತಿಯನ್ನು ವಿರಳವಾಗಿ ರಾಜೀನಾಮೆಯಲ್ಲಿ ಬರೆದುದಲ್ಲದೆ, ಯಾವದೊಂದು ವಿಷಪೂರ್ಣವಾದ ಸರ್ಪವು ಪುನಃ ಸರಕಾರೀ ಕೆಲಸದಲ್ಲಿ ಸೇರಲು- ಇಚ್ಛ, ವ್ಯಕುಲ ಧೇರಿಸಲಾರದೆಂದು ಅದರಲ್ಲಿ ಮಾತ್ರೊಂದು ವಾಕ್ಯವನ್ನು ಸೇರಿಸಿದ್ದಾನೆ ವಂಶಪರಂಪರೆಯಿಂದ ಬಂದ ವ್ಯವಸಾಯವನ್ನು ಬಿಟ್ಟು, ಮೂರು ದಿವಸದ ಬಾಹ್ಯಾಡಂಬರದ ಸೋಗಿಗೆ ಮರುಳಾಗುವ ಜನರು ಈ ಅರ್ಸಾಲಿಗನ ಬರಹದಿಂದ ಪುಷ್ಕಳವಾಗಿ ಬುದ್ಧಿಗಲಿಯು ಸಂತಿದೆ,

---

ಮ[illegible]ನ ಮುಸಲಮಾನರೊಳಗೆ ದಂಗೆ.

—o—

ಇಬ್ಬ[illegible]ರ; ಅನೇಕರು ಘಾಯವಾದರು

—o—

[illegible] ಬೆಲ್ಲಿಗೆ ಸೇರಿದ ಕಟ್ಟ್ಯಾಲಮಂಟ್ಲಿ ಮ[illegible]ಕಲ್ಲಿ [illegible]ಲವು ವರ್ಷಗಳಿಂದ ಮಸಜ್ಜಾದವು [illegible] ದಿವಾಣಿಕೋರ್ಟಿನಲ್ಲಿ ದಾವೆಯೂ ನಡೆದಿ[illegible] [illegible]ಲಿದ ಸೋಮವಾರದ ದಿವಸ ಒಂದು ಪಕ್ಷದ[illegible] ಬಡವರಿಗಾಗಿ ಮಾಡಿಸಿದ ಅಡಿಗೆಯನ್ನು ಎರಡನೆಯ ಪಕ್ಷದವರು ಕೆಡಿಸಲು ಬಲ್ಲಿದ್ದರಿಂದ, ಹೊಡೆದಾಟವಾಗಿ ಇಬ್ಬರು ಸತ್ತರು. ಮತ್ತು ಅನೇಕರು ಘಾಯವಾಗಿದ್ದಾರೆ

ವ[illegible]ದಲ್ಲಿ ಅಂತ್ಯಜ ಸಭೆಯು ಕೂಡಿತ್ತು. ಸತ್ಯಶೋಧಕ ಸಮಾಜದ ದೇವಲರಿಂದ, ಧರ್ಮಲಂಡ ಪದ್ಧತಿಯನ್ನು ನಿಷೇಧಿಸಿ ಠರಾವು ಪಾಸ ಮಾಡಿದರು,

ಕಲಕತ್ತೆಯಲ್ಲಿ ಹಿಂದೂ ಮುಸಲಮಾನ ದಂಗೆಯು.

ಇಬ್ಬರು ಸತ್ತರು; ಅನೇಕರು ಘಾಯವಾದರು.

ಕಲಕತ್ತೆಯಲ್ಲಿ ಖೂರಾಬಝಾರ ಬೀದಿಯಲ್ಲಿ ಮುಸಲಮಾನರು ಒಮ್ಮಿಂದೊಮ್ಮೆ ದಂಗೆಗೆ ಪ್ರಾರಂಭ ಮಾಡಿದರು. ಟ್ರಾಮ ಮೋಟಾರಗಳ ಹಾದಾಟ ಬಂದಾಯಿತು. ಅಂಗಡಿಗಳು ಬಾಗಿಲ ಹಾಕಿದವು. ಪೋಲೀಸರು ಬಂದರು. ಮುಸಲಮಾನರು ರೇಗಿ, ಅಸಿಸ್ಟಂಟ ಪೋಲೀಸ ಕಮಿಶನರ ಸಾಹೇಬರ ಮೇಲೆ ಸೋಡಾವಾಟರದ ಬಾಟ್ಲಿಯನ್ನು ಬಿಸಾಡಿದರು. ಅದೇ ಹೊತ್ತಿನಲ್ಲಿ ಒಬ್ಬ ಹಿಂದುವಿನನ್ನು ಚೂರಿಯಿಂದ ಇರಿದು ಕೊಂದರು. ಇನ್ನೊಬ್ಬನನ್ನು ನಿರ್ದಯದಿಂದ ಹೊಡೆದರು. ಸಾಹೇಬರು ಫಾಯರ ಮಾಡಲಿಕ್ಕೆ ಹುಕುಮು ಮಾಡಿದರು. ಅನೇಕರು ಘಾಯವಾದರು. ದಂಗೆಯಲ್ಲಿ ಇಬ್ಬರು ಸತ್ತರು ಮತ್ತು ೧೬ ಜನರು ಘಾಯವಾದರೆಂದು ತಾರಿನ ವರ್ತಮಾನ ಬಂದಿದೆ.

[illegible] ಜನರು ಸೈನಿಕರನ್ನು ಗುಂಡಿನ ಬಾಯಿಗೆ ಕೊಟ್ಟರು.

—o—

ಪೆಕಿಂಗ ಪಟ್ಟಣದಿಂದ ಹೊರಬೀಳುವಾಗ- ಕೋ- ಚಿನ್ನ- ಜನ್ನನು ಮಂತ್ರಿಗಳ ಓಲಗದ ರಕ್ಷಕರಾದ ನಾಲ್ಕು ನೂರು ಸೈನಿಕರನ್ನು ಹಿಡಿದು, ಅವರನ್ನು ಊರ ಹೊರಗೆ ವೈದು ತೋಫಿನ ಬಾಯಿಗೆ ಕೊಟ್ಟರು. ವಿದ್ಯಾರ್ಥಿಗಳು ಮಂತ್ರಿಗಳ ಸನ್ನಿಧಾನದಲ್ಲಿ ಪಿಟಿಶನ ತಕ್ಕೊಂಡು ಹೋದಾಗ, ಸೈನಿಕರು ಇವರ ಮೇಲೆ ಗುಂಡು ಹಾಕಿದ್ದರು. ಅದರ ಶಿಕ್ಷೆ ಮತ್ತು ದೇಹಾಂತ ಪ್ರಾಯಶ್ಚಿತ್ತವೆಂದು ಇವರನ್ನು ಯಮಸದನಕ್ಕೆ ಅಟ್ಟಿದರು

ದ್ರೂಜರು ದುರ್ಜಯರು.

ಸ್ತ್ರೀಯರ ಸೈನ್ಯದ ಸಿದ್ಧತೆ.

ದಮಾಸ್ಕಸದಲ್ಲಿ ದ್ರೂಜರ ಬಂಡಾಯವು ರಾಜಿಯ ಕಡೆಯಿಂದ ಬಹಳ ಬಿಕ್ಕಟ್ಟಿನ ಕೆಲಸವಾಗಿತ್ತು. ಫ್ರೆಂಚ ಸೇನಾಧಿಪತಿಯೋರ್ವನು ದ್ರೂಜರಿಗೆ ಅವಮಾನವೆನಿಸುವಂಥ ಕೃತ್ಯ ಮಾಡಿದ್ದರಿಂದ, ದ್ರೂಜರು ಬಂಡಾಯವೆಬ್ಬಿಸಿ, ಅನೇಕ ಫ್ರೆಂಚ ಸೈನಿಕರ ಸಂಹಾರ ಮಾಡಿ, ಫ್ರೆಂಚರ ಮದ್ದು, ಗುಂಡು ತೋಫು ಬಂದೂಕಿಗಳನ್ನು ಒಂಟೆಗಳ ಮೇಲೆ ಹೇರಿಕೊಂಡು ಹೋದರು. ಫ್ರೆಂಚರು ಇವರನ್ನು ಎದುರಿಸುವದಕ್ಕಾಗಿ ಸ್ತ್ರೀಯರದೊಂದು ಪಡೆ ಕಟ್ಟುವರು.

ವಿನೋದ ಲಹರಿ.

ಪ್ರ- ನಾನು ಹದ್ದಿಗಿನ ಆಳು ನೋಡಲಿಲ್ಲ?

ಉ- ಎಂದೂ ನೋಡುವದು ಶಕ್ಯವಿಲ್ಲ.

ಪ್ರತ್ಯುತ್ತರ- ಇಂದು ನೀನು ಹಾಲು ಕೊಟ್ಟ ಹಾಲಿನಿಂದ ಹಸಳು ಆಳು ಇರಬೇಕೆಂದು ಕೇಳಿತು.

ಗುರು- ಮಿಥ್ಯಾ ಎಂಬ ಶಬ್ದದ ಅರ್ಥವೇನು?

ಶಿಷ್ಯಳು- ನಮ್ಮವ್ವನು ಮಸಾಲಿಗೆ ಹಾಕುವ ಮೆಂಥ್ಯಾ ಅಲ್ಲವೇ?

ಪ್ರಶ್ನೆ- ನಿನ್ನೆ ರಾತ್ರಿ ದುಷ್ಟನ ದೆಸೆಯಿಂದಲೇ ಕೊಲೆಯಾಯಿತೋ?

ಆರೋಪಿ- ದುರ್ದೈವ- ಕೊಂದಾಗ ಆತನ ಹತ್ತರ ಕಾಸು ಕೂಡ ಇದ್ದಿಲ್ಲ.

ಡಾಕ್ಟರ- ರೋಗಿಗೆ- ದಿನಾಲು ಒಮ್ಮೆ ಔಷಧ ಕುಡಿಯುವದಕ್ಕೆ ಹೇಳಿದ್ದೆನಲ್ಲ. ಆದರೆ ಮೂರು ಸಾರೆ ಏಕೆ ಕುಡಿಯುವದು?

ರೋಗಿ- ನಾನು ಒಬ್ಬೊಬ್ಬನಂತೆ ಮೂವರು ಡಾಕ್ಟರರನ್ನು ಕರೆಸಿದೆನು. ಒಬ್ಬೊಬ್ಬನು ಒಂದು ಗ್ಲಾಸ ಹೇಳಿದನು. ಅಂತೂ ಅದು ಮೂರು ಸಾರೆಯಾಯಿತು. ನನ್ನದೇನು ತಪ್ಪು!

ನಾಯಿಯು ಯಾರದೆಂದು ನಿರ್ಣಯಿಸುವದಕ್ಕಾಗಿ ಮ್ಯಾಜಿಸ್ಟ್ರೇಟರು ಅದನ್ನು ಕೋರ್ಟಿಗೆ ತರಿಸಿದರು. ಅದು ಮ್ಯಾಜಿಸ್ಟ್ರೇಟರನ್ನೇ ಕಚ್ಚಿತು, ಕೋರ್ಟಿನ ಅಪಮಾನವೇ ಸೈ.

ತುರಂಗದಲ್ಲಿ ಧರ್ಮೋಪದೇಶ-

ಕೈದಿಗಳೇ- ಇಂದು ಬಂಧನದಲ್ಲಿದ್ದರೂ ನಾಳೆ ಬಿಡುಗಡೆ ಹೊಂದಿ ಊರು ಸೇರುವಿರಿ. ಆದಕಾರಣ ಸನ್ಮಾರ್ಗ ಬಿಡಬೇಡಿರಿ.

ಒಂದು ಉತ್ತರ- ಉಪದೇಶಿಯೇ ನನಗೆ ಇನ್ನೂ ೧೮ ವರ್ಷ ಕಳೆಯಬೇಕಾಗಿದೆ.

ಸಾಕ್ಷೀದಾರನಿಗೆ ವಕೀಲನ ಸವಾಲು-

ನೀನು ತುರಂಗ ಕಂಡು ಬಂದಿರುವಿಯೋ?

ಹೌದು- ಎರಡು ಸಾರೆ.

ಮೊದಲನೆಯ ಸಾರೆ ಎಷ್ಟು ಕಾಲ?

ಒಂದು ಮಧ್ಯಾಹ್ನ-

ಎರಡನೆಯ ಸಾರೆ- ಒಪ್ಪತ್ತು.

ಅಪರಾಧವೇನು?

ಒಬ್ಬ ವಕೀಲರು ಪಕ್ಷಕಾರನನ್ನು ಮೋಸ ಮಾಡಿದ್ದರು. ಆತನನ್ನು ಇಡುವ ಕೋಣೆಗೆ ಸುಣ್ಣ ಹಚ್ಚುವದಕ್ಕಾಗಿ.

ಚುನಾವಣೆ

ಚುನಾವಣೆಯ ಸಂಪೂರ್ಣ ವಿವರಗಳು

ಬ್ರಾಹ್ಮಣ-ಬ್ರಾಹ್ಮಣೇತರ, ಉದಾರ್‍ಮತವಾಳ, ರಾಷ್ಟ್ರೀಯ, ಸಂಯುಕ್ತ ರಾಷ್ಟ್ರೀಯ ಮೊದಲಾದ ಪಕ್ಷಗಳ ಪ್ರಚಾರಗಳನ್ನು, ಜಾಹೀರ ಸಂದೇಶಗಳನ್ನೂ, ಭಾಷಣಗಳನ್ನೂ ಪ್ರಕಟಿಸುವುದಕ್ಕೆ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಥಳದ ವ್ಯವಸ್ಥೆಯನ್ನು ಮಾಡಿದ್ದೇವೆ. ವಿಜಯದ ಹೊರ್ ಚುನಾವಣೆಯನ್ನು ಕುರಿತು ವಿವಿಧ ಲೇಖನಗಳೂ, ಆಲೋಚನೆಗಳೂ ಯಾವ ಕನ್ನಡ ಪತ್ರದಲ್ಲಿಯೂ ಬರಲಾರವು.

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಕರ್ಚುಬದ್ದವರು ವಿಸಾಲು, ಇಲ್ಲವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದುವವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕಾಲಿದವರೂ ಪ್ರಸಿದ್ಧ ಮಾಡುವ ಲೇಖನಗಳನ್ನು ಓದಿಕೊಂಡ ನಂತರ ಸ್ವಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕೆಯನ್ನು ಬಿಡದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಯ ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಆದೇಥ ಕರ್ತೃತ್ವ ನಾಡಿನ ಹಟಿಲ ಕೊಡುವದೆಂಬದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದಿ ಬರೆದ ಒಲ್ಲವರು ವಿಜಯವನ್ನು ಸ್ವತಃ ಓದಬೇಕು. ಬರೆದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿಡಿದವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಚಂದಾ ಭರಿಯದೆ ಅಂಚೆವೆಚ್ಚ ಸೇರಿ ವರ್ಷಕ್ಕೆ ಕೃಷ್ಣ ಪತ್ರಕ್ಕೆ ೧೨-೮-೦ ವಾರ ಪತ್ರಕ್ಕೆ ೩-೦-೦

ನಾತೊಡುವ ಔಷಧವು.

ಅಬ್ಬಾ! ತುರಿಕಜ್ಜಿಗೆ ಕೆಲಗ ಕೈಯಿಂದ ಬಡಿಯುತ್ತಿರುವಿರಿ. ತರೆಸೋಣವೋ! ಜನರಿಯರೋ! ನನ್ನಲ್ಲಿ ಕೂಡುತ್ತದೆಯೋ! ಜಗದು ಇದಾದವನ್ನ ಏನು!

ಹಳದು ಮಾತ್ರ ಉಪಯೋಗಿಸುತ್ತದೆ.

ಕಾರಣ ನಾಗದರಿ ನೊಮೆಂಟ ಲ್ಯಾದ್ನುರ ತರೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ರೋಗಗಳ ಪರಿಹಾರವಾಗಿ ಉಪಶಮನ ಮತ್ತು ಆಶ್ಚರ್ಯವು ಕಿಮ್ಮತ್ತು ಶೀರ ತಾಜು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ಹುಬ್ಬಳ್ಳಿ ಕೆಮಿಸ್ಟ್ಸ ಅಂಡ ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ



ವ್ರಣಸಂಹಾರ

ಅಥವಾ

ಘಾಯದ ಮೇಲಿನ ಮಲಮು

ಈ ಮಲಮು ಮನುಷ್ಯ ಮತ್ತು ಧನದ ಪ್ರತಿಯೊಂದು ಘಾಯದ ಮೇಲೆ ಉಪಯೋಗವಾಗಿರುತ್ತದೆ. ಹಸಿ ಮತ್ತು ಒಣಕಜ್ಜಿ, ಗಮೀಯಜಟ್ಟಿ, ಭಗೇಂದ್ರ ಮುಂತಾದವುಗಳ ಮೇಲೂ ರಾಮಬಾಣ ಉಪಾಯವಾಗಿರುತ್ತದೆ. ಪ್ರತಿಯೊಬ್ಬರೂ ಸಂಗ್ರಹಿಸಬೇಕೆಂದು ಕ್ರಯ ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ಆರೇ ಆಣೆ. ಪರಸ್ಥಳದವರಿಗೆ ಅಂಚೇವೆಚ್ಚ ಬೇರೆ.

ಹುಬ್ಬಳ್ಳಿಯ ಏಜಂಟರು:— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ್‌ ಗೋಕುಲ ರೋಡ ಹುಬ್ಬಳ್ಳಿ, ಕೆ.ಆರ್. ಮತ್ತು ಸಿಟಿ ಕಮಿಷನದಿಂದ ದೊರೆಯುವದು.

ಎಸ್. ಎಫ್. ಪೆಂಟರ
ಖಡೇಬಜಾರ ಬೆಳಗಾವಿ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೦—೦	ರೂ
	೬—೦—೦	ರೂ
	೪—೦—೦	ರೂ
ವಾರಪತ್ರಿಕೆಗೆ ೧ ವರ್ಷಕ್ಕೆ	೩—೧೨—೦	ರೂ

ಕೇಸ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ನಿಂಗಲ ಕಾಲಮಿನ ಪತ್ರ ಪಂಕ್ತಿಗಳಿಗೆ ಒಂದ ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಗೆ ಐದು ಆಣೆ ಇಂಗ್ಲಿಷದಿಂದ ಅಕ್ಷರಗಳು ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ. ಹೆಚ್ಚಿನ ಕಾಲ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ್ ವಿಜಯ, ಧಾರವಾಡ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫
ಲೋ. ಟಿಳಕರ ಚರಿತ್ರ	೪
ದೇಶಬಂಧು ದಾಸರ ಚರಿತ್ರ	೩
ದೇಶಭಕ್ತರ ಸಂದೇಶಗಳು	೧

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಅಂ. ಖ. ಮತ್ತು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಈ ಪತ್ರವನ್ನು ಆಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ವಾಗ್ಭೂಷಣ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

R. N. B. 1448

ಸ್ವಧರ್ಮ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಸೋಮವಾರ [illegible] ನೇ ಏಪ್ರೀಲ ೧೯೨೮ | (ಸಂಚಿಕೆ [illegible]

ಸರಕಾರದಿಂದ ಪೇಟೆಂಟ ದೊರೆತಿದೆ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿ [illegible] ಭಾಗದಲ್ಲಿಯು ಬಾಳಿಗೆಯುಂ[illegible] ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡಹತ್ತಲೇ ಬಾಳಿಗೆಯ ಪರದೆಯು [illegible] ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ತೊಟ್ಟು ಸಹ ನೀರನ್ನು ಹೊರ ಚೆಲ್ಲಿ ಕೊಡುವದಿಲ್ಲ.

ಎರಡು ಪ್ರಕಾರಗಳಿದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೩೦ ರೂ.
ನಂ ೨	೫೫	,,	೫೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಬಿನ್ನಹ.

ಈ ವರ್ಷದಿಂದ ನಾವು 'ಸ್ವಧರ್ಮ' ಪತ್ರಿಯನ್ನು ಮುಂದೆ ಸಾಗಿಸುವ ಕಾರ್ಯವನ್ನು ಕೈಕೊಂಡಿರುವೆವು. ಸಮಾಜದ ಶಾಂತಿ ತುಷ್ಟಿ ಪುಷ್ಟಿಗಳಿಗೆ ಅನುಕೂಲವಾಗುವ ವಿವಿಧ ವಿಷಯಗಳನ್ನು ಎಂಟಿಸಂತೆ ಸುಲಭವಾದ ಬಳಕೆಯ ಭಾಷೆಯಲ್ಲಿಯೇ ಸಲ್ಲಿಸುವ ಪ್ರಯತ್ನವನ್ನು ಮಾಡುವೆವು. ಈ ವರ್ಷದ ಮೊದಲನೆಯ ಸಂಚಿಕೆಯು ಅಲ್ಪ ಯಾತ್ರೆಯಾಗಿ ಹೊರಡುವದು. ಆಯಾ ತಿಂಗಳ ಸಂಚಿಕೆಯು ಆಯಾ ತಿಂಗಳ ಕಡೆಗೆ ವಾಚಕರಿಗೆ ಸಮರ್ಪಿಸಲ್ಪಡುವದು. ನಮ್ಮ ಸಹಾಯಕರೆಲ್ಲರೂ ಮೊದಲನೆಯ ವ್ಹಿ. ಪಿ. ಸಂಚಿಕೆಯನ್ನು ಸ್ವೀಕರಿಸುವರೆಂದು ನಂಬಿದ್ದೇವೆ.

ತಮ್ಮ ವಿಧೇಯ

ದತ್ತಾತ್ರಯ ಬೇಂದ್ರೆ ಬಿ. ಎ.

ಸಂಪಾದಕ ಸ್ವಧರ್ಮ, ಗೆಳೆಯರ ಗುಂಪು

ಧಾರವಾಡ.

ನೋಟೀಸು.

ಕಿತ್ತೂರ ವೀವ್ಹರ ಸೊಸಾಯಟಿಯ ಮಾಜಿ ಸೆಕ್ರೆಟರಿ ನಾಗಪ್ಪಾ ಶಿದ್ಧಲಿಂಗಪ್ಪಾ [illegible] ಈತನಿಗೆ ಸೊಸಾಯಟಿಯ ದೇಣೆ ಅದೆ. ಅದಕ್ಕಾಗಿ ಈತನ ಆಸ್ತಿಯನ್ನು ಯಾರೂ ಯಾವ ಕಾರಣದಿಂದಲೂ ತಕ್ಕೊಳ್ಳಕೂಡದು. ಇಲ್ಲದಿದ್ದರೆ ಲುಕಸಾನಕ್ಕೆ ಪಾತ್ರರಾಗುವರು.

ಕಿತ್ತೂರ, ತಾ॥ ೧೮-೪-೨೮

ಎ. ಎಸ್. ಸವದತ್ತಿ

ಸೆಕ್ರೆಟರಿ

ಧಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬೇಕು. [illegible] ಬ್ಯಾಂಕಿನ ಎಲ್ಲ [illegible] ಬೇಕಾದಷ್ಟು [illegible] ಸಂಗತಿಗಳನ್ನು ಕೆಳಗೆ [illegible] ತಿಳಕೊಳ್ಳಬೇಕು.

[illegible] ನಾರ್ಗುವರಾವ [illegible]

ಮ್ಯಾನೇಜರ [illegible]

ಧಿ ಧಾರವಾಡ ಬ್ಯಾಂಕ ಲಿಮಿಟೆಡ್,

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಬಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ, ಬಡ್ಡಿಯ ದರವು ನೂರಕ್ಕೆ ತಿಂಗಳ [illegible] ಆಗುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ಹುಬ್ಬಳ್ಳಿಯಲ್ಲಿ [illegible] ಮ. [illegible] ಧರ್ಮಾರ್ಥ [illegible] ಉತ್ಸವವನ್ನು [illegible] ಇರುವರು.

ವಿಜಯ.

ಧಾರವಾಡ ತಾ- ೨೬-೪-೨೬ ನೇ ಇಸ್ವಿ

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಆದಾಯ ವೆಚ್ಚ.

ಡಿಸ್ಟ್ರಿಕ್ಟ ಲೋಕಲಬೋರ್ಡುಗಳು ಪ್ರಜಾಸತ್ತಾವಾದಿಗಳಾಗಿವೆಂದರೂ ಸಲ್ಲುವದು. ಬೋರ್ಡಿನಲ್ಲಿಯ ನಡೆದಿದ್ದುದು ಜಿಲ್ಹೆಯ ಜನರಿಗೆ ತಿಳಿಯುವದೂ ಅವಶ್ಯಕ. ಮುಖ್ಯ ಬಾಬು ಸರ್ವಾರಂಭದಲ್ಲಿ ಕಂಡಲವು ಮೂಲವೆಂಬಂತೆ ಆದಾಯ ವೆಚ್ಚವಾಗಿರುತ್ತದೆ. ಇದನ್ನು ಸಾರ್ವಜನಿಕ ಅವಲೋಕನೆಗಾಗಿ ಅಧ್ಯಕ್ಷರಾದ ಶ್ರೀ ಹುಲಕೋಟಿಯವರು ವರ್ತಮಾನಪತ್ರಗಳ ದ್ವಾರದಿಂದ ಪ್ರಸಿದ್ಧ ಮಾಡಿದ್ದಾರೆ. ಈ ಹೊಸ ಉಪಕ್ರಮಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇದರ ಮೇಲೆ ಕಾರ್ಟರ ಟಾಯಿಮ್ಸ ಕರ್ತರು ಎರಡು ಮೂರು ಲೇಖಗಳನ್ನು ಬರೆದಿರುತ್ತಾರೆ. ಮತ್ತು ನೀವೇಕೆ ಸುಮ್ಮನಿದ್ದೀರೆಂದು ನಮಗೆ ಚೀಟಿ ಬರೆದು ಕೇಳಿದ್ದಾರೆ.

ಉತ್ಪನ್ನದ ಮಾನದಿಂದ ಆಫೀಸಿನ ವೆಚ್ಚವು ಬಹಳವಿದ್ದು, ಅದನ್ನು ಕಡಿಮೆ ಮಾಡಬೇಕೆಂಬದು ಟಾಯಿಮ್ಸಕರ್ತರ ಮೊದಲನೇ ಮುಖ್ಯ ಟೀಕೆ ಇರುತ್ತದೆ. ಹೇಗೆ ಕಡಿಮೆ ಮಾಡಬೇಕೆಂಬದನ್ನು ಮಾತ್ರ ಹೇಳುವದಿಲ್ಲ. ಯುದ್ಧದ ವೇಳೆಯಲ್ಲಿ ಪಡಿಯು ಬರ ಬಂತಷ್ಟೇ; ಆಗ ಸರಕಾರದವರು ಪ್ರತಿಯೊಂದು ಖಾತೆಯ ಕೆಲಸಗಾರರ ಸಂಬಳವನ್ನು ಹೆಚ್ಚು ಮಾಡಿದ್ದಲ್ಲದೆ, ಸ್ಕೇಲ ಬಡತಿಯ ಪದ್ಧತಿ ಹಾಕಿದರು. ಲೋಕಲಬೋರ್ಡೂ ಈ ಸಂಬಳ ಮತ್ತು ಬಡತಿ ಕೊಡುತ್ತಿರುವದು. ಆದುದರಿಂದ ಈ ಖರ್ಚನ್ನು ಒಮ್ಮೆಲೆ ಕಡಿಮೆ ಮಾಡಲಿಕ್ಕೆ ಬರಲಾರದು. ಮೊದಲಿನ ಸಂಬಳವು ೧೬ ಕ್ಕೇರಿ ಬೋಳ, ಆ ಕೇಲು ಆಸ್ಕೆಯು ಮಾನದಿಂದಿದ್ದು, ಈಗಿನ ಮಾನದಿಂದ ಸಂಬಳವನ್ನೂ ಸ್ಕೇಲ ಬಡತಿಯನ್ನೂ ಗೊತ್ತು ಮಾಡಿ, ಹೊಸದಾಗಿ ನೇಮಿಸಿಕೊಳ್ಳುವಂಥವರನ್ನು ಈ ಶರ್ತಿಗೆ ಒಳಪಡಿಸಿದರೆ- ವೆಚ್ಚವು ಕ್ರಮೇಣ ಕಡಿಮೆಯಾಗುತ್ತಾ ಹೋಗುವದು. ಇದು ಒಂದು ವರ್ಷದ ಕೆಲಸವಲ್ಲ. ಒಂದು ಕ್ರಮಸರದ ಕೆಲಸವು.

ನಡೆಯುವ ವರ್ಷದಲ್ಲಿ ೧,೬೩೦೦೦ ರೂ ಕಾಮುಗಳ ಕಾಮಗಾರಿಯಾಗತಕ್ಕವಿದ್ದು, ಅದರ ಮೇಲ್ವಿಚಾರಣೆಗಾಗಿ ೫೦ ಸಾವಿರ ವೆಚ್ಚ ಬರುವದು. ಈ ವೆಚ್ಚವಾದರೂ ಮೇಲೆ ಹೇಳಿದ ಕಾರಣದ ಮೂಲದಿಂದಲೇ ಬರುವದು. ಸಾಧಾರಣ ಕೆಲಸಗಳನ್ನು ಕಾಂಟ್ರ್ಯಾಕ್ಟಿನಿಂದಲೂ, ಹಳ್ಳಿಗಳಲ್ಲಿ ಕಟ್ಟಿಸುವ ಬಾವಿ, ಶಾಲೆಗಳ ಮೇಲ್ವಿಚಾರಣೆಯನ್ನು ಸಂಬಳ ಕಡಿಗೂ ಕೊಟ್ಟರೆ ಈ ವೆಚ್ಚವು ಕೆಲವಂಶದಿಂದಾದರೂ ಕಡಿಮೆಯಾಗುವದು. ಚೀಫ ಆಫೀಸರ ಬೇರೆ; ಇಂಜನಿಯರ ಬೇರೆ; ಈ ಪ್ರಕಾರ ಎರಡು ಬಾಬುಗಳನ್ನು ಮಾಡಿ, ವೆಚ್ಚ ಬೆಳಸದೆ, ಇಂಜನಿಯರರನ್ನೇ ಚೀಫ ಆಫೀಸರ ಮಾಡಿ, ಎರಡೂ ಕೆಲಸಗಳನ್ನು ಇವರಿಗೇ ಒಪ್ಪಿಸಿದರೆ, ದೊಡ್ಡ ಉಳಿತಾಯವಾಗುವದು. ಟಾಯಿಮ್ಸಕಾರರ ಈ ಸೂಚನೆಯು ಸ್ತುತ್ಯವದೆ.

ಅಬಕಾರಿ ಪತ್ರಕರ್ತರು ಬೋರ್ಡಿನ ಉತ್ಪನ್ನವನ್ನು ಹೆಚ್ಚಿಸುವ ಉಪಾಯವಾಗಿ ಅಬಕಾರಿ ಖಾತೆಯನ್ನು ಸೂಚಿಸಿ ತೋರಿಸಿದ್ದು ನಮಗೆ ಸಮ್ಮತವಿಲ್ಲ. ಶರೆ ಸಿಂದಿಯ ವ್ಯಾಪಾರವು ಪೂರಾ ನಿಂತು ಹೋಗಬೇಕೆಂದು ಸರಕಾರದ ಧೋರಣವು. ಅದೇ ಧೋರಣವನ್ನು ಪ್ರಜಾ ಹಿತೈಷಿಗಳಾದ ಬೋರ್ಡಿನವರು ಮುಂಗುರಿ ಮಾಡಿಕೊಂಡು, ಕುಡಿತವನ್ನೇ ನಿಲ್ಲಿಸಬೇಕು. ಸುಧಾರಣೆಯ ಮನೆಯು ಗೆಳವೆಂದು ಸದ್ಯದಲ್ಲಿ ಬರುವಷ್ಟು ಎಳಕೊಳ್ಳಲಿಕ್ಕೆ ಪ್ರತ್ಯವಾಯವಿರುವದಿಲ್ಲ.

ಬೋರ್ಡಿಗೆ ಕೊಂಡವಾಡೆಯ ದೊಡ್ಡ ಉತ್ಪನ್ನ ಬರುವಂತಿದೆ. ಇದು ಜಿಲ್ಹೆಯಲ್ಲಿ ಏನೂರಕ್ಕಿಂತ ಹೆಚ್ಚಿಟು. ಉತ್ಪನ್ನ ೮೦೦೦ ಮತ್ತು ವೆಚ್ಚ ಮೂರು ಸಾವಿರವೆಂದು ತೋರಿಸಿದ್ದಾರೆ ಅನ್ನಕ್ಕೀತ ತಪ್ಪಿ ಚಿಟ್ಟು!! ಬೋರ್ಡಿನವರು ದಕ್ಷತೆಯಿಂದ ಕೆಲಸ ಮಾಡಿದರೆ ಈ ಉತ್ಪನ್ನವು ಕನಿಷ್ಠ ೫೦ ಸಾವಿರ ತನಕ ಬೆಳೆಯುವದೆಂದು ನಮ್ಮ ಮತವುಂಟು. ಉತ್ಪನ್ನ ಹೆಚ್ಚಾಗದೇ ಇರುವದಕ್ಕೆ- ಎರಡು ಉಪಾಯಗಳುಂಟು. ಒಂದು ಕೊಂಡವಾಡೆಗಳನ್ನು ಜಕಾತಿ ಕಟ್ಟೆಗಳಂತೆ ಗುತ್ತಿಗೆಯಿಂದ ಕೊಡುವದು. ಎರಡನೆಯದು ಅಬಕಾರಿ ಖಾತೆಯಂತೆ ತಪಾಸಣೆಯ ಬಂದೋಬಸ್ತು ಇಡುವದು. ಪ್ರಾರಂಭದಲ್ಲಿ ಈ ತರದ ಯೋಜನೆಯಿಂದ ಕೆಲ ಜನರು ಅನ್ಯಾಯ ಅಕ್ರಮಗಳನ್ನು ಮಾಡಬಹುದು. ಹೊಳೆಯು ನೀರು ಮೊದಲು ರಾಡಿ ಇದ್ದರೂ, ಮುಂದೆ ತಿಳಿಯಾಗುತ್ತದೆಂಬಂತೆ ಬರಬರುತ್ತಾ ವ್ಯವಸ್ಥೆಯು ಸ್ವಚ್ಛವಾಗಿ, ಆದಾಯ ಹೆಚ್ಚುವದು. ಐವತ್ತು ಕೊಂಡವಾಡೆಗಳಿಂದ ಐದೇ ಸಾವಿರ ಉತ್ಪನ್ನವೆಂಬದು ತೀರ ಹಾಸ್ಯಾಸ್ಪದವಾಗುತ್ತದೆ. ಅದಕಾರಣ ಇದರಲ್ಲಿ ನಾವು ಹೇಳುವಂತೆ ಹೊಸ ವ್ಯವಸ್ಥೆಯಾಗಬೇಕಾದುದು ಅವಶ್ಯ. ಒಂದು ತಾಲೂಕನ್ನು ಲಿಲಾವಿನಿಂದ ಮತ್ತು ಒಂದು ತಾಲೂಕನ್ನು ಅಬಕಾರಿ ಖಾತೆಯಂತೆ ತಪಾಸಣೆಯಿಂದ ಅಮಲಿನಲ್ಲಿ ತಂದು ನೋಡಬೇಕು. ಈ ಪ್ರಕಾರ ಪ್ರಯೋಗ ಮಾಡಿ, ಅನುಭವ ನೋಡಿದ ಬಳಿಕ, ಯೋಗ್ಯ ತೋರಿದ್ದನ್ನು ಮಾಡಬಹುದು.

ಲೋಕಲ ಫಂಡನ್ನು ಹೆಚ್ಚಿಸಬಾರದೆಂದು ಟಾಯಿಮ್ಸಕಾರರು ಬರೆದದ್ದು ವಿಹಿತವದೆ. ಎಲ್ಲಾ ಉಪಾಯಗಳು ಮೀರಿದ ಬಳಿಕ, ಇದನ್ನು ಕೊನೆಯ ಉಪಾಯ ಮಾಡಬೇಕೆಂದು ನಾವು ಈ ಮೊದಲು ಎಷ್ಟೋ ಸಾರೆ ಹೇಳಿದ್ದೇವೆ. ಕೆಲ ಅಧಿಕಾರಿಗಳು ತಮಗೆ ದೊಡ್ಡಸ್ತನ ಬರಬೇಕೆಂದು ಲೋಕಲ ಫಂಡನ್ನು ಹೆಚ್ಚಿಸಬೇಕೆಂದು ಹೆಣಗಾಡುತ್ತಿದ್ದಾರೆ, ಟಾಯಿಮ್ಸಕಾರರು ಇಂಥವರ ಕೃತ್ಯವನ್ನು ನಿಷೇಧಿಸಲಿಕ್ಕಿದ್ದು. ರೈತರ ಸ್ವತಂತ್ರ ಅಭಿಪ್ರಾಯ ಬೇಕಾಗಿದ್ದರೆ- ರೈತರ ಸಭೆಯೇ ಕೂಡತಕ್ಕದ್ದಲ್ಲದೆ, ಅಧಿಕಾರಸ್ಥರ ಏತಾವಾನಸ್ಯ ಬೇಕಾಗಿಲ್ಲೆಂದು ಸ್ಪಷ್ಟವಾಗಿ ಸಾರಬೇಕು.

ರಾಜಿಯು ಎರಡನೆಯ ಸಂಪಾದನ.

— ೦ —

ಕಾಂಗ್ರೆಸದ ಎರಡು ಅಂಗಗಳಾದ ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ನಡುವೆ ರಾಜಿಯಾಯಿತಷ್ಟೇ; ಇಂಗ್ರೇಜಿ ಪತ್ರಕಾರರು ಈ ರಾಜಿಯ ಕುಚೇಷ್ಟೆ ಮಾಡುತ್ತಲಿದ್ದಾರೆ. ದೇಶದಲ್ಲಿ ಬಲಗಳು ಹುಟ್ಟಿದನ್ನು ಇವರಿಗೆ ಆನಂದ ಒದಗುವಷ್ಟು ದುಃಖ. ಒದಗುವದನ್ನು ಕಂಡು, ಸಂತಾಪದಿಂದ ಹೀಯಾಳಿಸುವ ಟೀಕೆ ಮಾಡುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಲಾಲಾ ಲಜಪತರಾಯರು ರಾಜಿಯನ್ನು ಅಂತಃಕರಣಪೂರ್ವಕವಾಗಿ ಆದರಿಸಿದ್ದಲ್ಲದೆ, ನಿಜವಾದದಿ ರುಕ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ರಾಜಿಯ ನಂತರ ಸಂಯುಕ್ತ ರಾಷ್ಟ್ರೀಯ ಸಂಘ ಮತ್ತು ಕಾಂಗ್ರೆಸದ ನಡುವೆ ರಾಜೀ ಮಾಡಿಸಬೇಕೆಂದು ದೇವೀ ಸರೋಜಿನಿಯವರು ವಿಚಾರ ಮಾಡಿ, ಆ ಪ್ರಕಾರ ಸಂಯುಕ್ತ ರಾಷ್ಟ್ರೀಯ ಮಂಡಲದ ಪ್ರಮುಖ ನೇತೃಗಳಿಗೆ ಅಹಮದಾಬಾದದಲ್ಲಿ ಮೇ ತಿಂಗಳ ೫ ನೆಯ ತಾರೀಖಿನ ದಿವಸ ಕೂಡುವ ಅಖಿಲ ಇಂಡಿಯಾ ಕಾಂಗ್ರೆಸ ಕಮೀಟಿಗೆ ಬರಬೇಕೆಂದು ಆಮಂತ್ರಣ ಕಳಿಸಿದ್ದಾರೆ. ಈ ರಾಜಿಯಾದರಂತೂ ಇಂಗ್ರೇಜಿ ಪತ್ರಕಾರರು ಅಂಗಾಲಿನಿಂದ ನಡುನೆತ್ತಿಯ ತನಕ ಉರಿಯುವರು.

ಬೆಳಗಾವಿಯ ವಕೀಲರಾದ ಶ್ರೀ. ನರಸಿಂಗರಾವ ಬಾಳೇಕುಂದ್ರಿಯವರು ಸ್ವರ್ಗಸ್ಥರಾದರೆಂಬ ಬಗ್ಗೆ ದುಃಖದಿಂದ ತಿಳಿಸುತ್ತೇವೆ.

ಗದಗಿನ ಒಂದು ವೃತ್ತಾಂತವು.

—೦—

ಗದಗಿನ ಶಿಸು ಸಪ್ತಾಹದಲ್ಲಿ ಆದ ಒಂದು ಮನೋರಂಜಕ ಸಂಗತಿ! ಎಲ್ಲ ಕಡೆಗೂ ಶಿಸು ಸಪ್ತಾಹಗಳು ನಡೆಯುತ್ತಿರುವವು. ಆದರೆ ಎಲ್ಲವೂ ಅಧಿಕಾರಿಗಳ ತಂತ್ರದಿಂದಲೇ ನಡೆಯುತ್ತಿರುವವು. ಅಧಿಕಾರಿಗಳು ತಮ್ಮ ತಮ್ಮ ನೋಕರಿಗಳ ಅಂಜಿಕೆಯಿಂದ ಈ ಶಿಸು ಸಪ್ತಾಹದಲ್ಲಿ ರಾಷ್ಟ್ರೀಯ ಭಾವನೆಯ ಗಾಳಿ ತಟ್ಟದಂತೆಯೇ ವರ್ತಿಸುವರು. ಇದರವೇ ಒಂದು ಉದಾಹರಣೆಯು ಗದಗಿನಲ್ಲಿ ಸಂಭವಿಸಿತು. ಗದಗಿನ ಶಿಸು ಸಪ್ತಾಹದಲ್ಲಿ ನಾನಾ ವಸ್ತುಗಳ ಪ್ರದರ್ಶನವಾಯಿತು. ಶಿಸು ಸಪ್ತಾಹದ ಕಾರ್ಯದಲ್ಲಿ ವಿಶೇಷ ಸಹಾಯ ಮಾಡಿದ ಖಾದೀ ಭಕ್ತರೊಬ್ಬರು ಚಿಕ್ಕಮಕ್ಕಳಿಗಾಗಿ ಖಾದೀ ಒಟ್ಟಿಗಳನ್ನು ಹೊಲಿಸಿ ಅವುಗಳನ್ನು ಆ ಪ್ರದರ್ಶನದಲ್ಲಿಟ್ಟರು. ಖಾದೀ ಭಕ್ತರಾದ ಎಷ್ಟೋ ಸ್ವಯಂಸೇವಕರು ಸಹ ಈ ಕಾರ್ಯದಲ್ಲಿ ವಿಶೇಷ ಸಹಾಯ ಮಾಡಿದ್ದರಿಂದ ಅವರೂ ಖಾದಿಯನ್ನು ಆ ಪ್ರದರ್ಶನದಲ್ಲಿ ಬಹಳೇ ಸುಂದರವಾಗಿ ರಚಿಸಿ ಇಟ್ಟರು. ಆದರೆ ಇದು ಮಾಮಲೇದಾರ ಸಾಹೇಬರ ಮನಸಿಗೆ ಹೇಗೆ ಬರಬೇಕು! ಖಾದಿಯಲ್ಲಿ ಇವರಿಗೆ ಏನೋ ಒಂದು ಭಯಂಕರವಾದ ರಾಜ್ಯಕ್ರಾಂತಿಯೇ ತೋರಿತು. ಅವರು ಅದನ್ನು ಅಲ್ಲಿಂದ ಸಪ್ಪಳವಿಲ್ಲದೆ ತೆಗೆಸಿಬಿಟ್ಟರು. ಈ ರೀತಿಯಾಗಿ ಖಾದಿಯಂಥ ರಾಷ್ಟ್ರೀಯ ವಸ್ತುವಿಗೆ ಅಪಮಾನ ಮಾಡಿದರು. ೧೯೨೧ ರಲ್ಲಿ ಅಥವಾ ಮುಂದೆ ೩-೪ ವರ್ಷಗಳ ವರೆಗೆ ಅವರ ಮನಸ್ಸಿನಲ್ಲಿ ಈ ಕಲ್ಪನೆಯು ಬಂದಿದ್ದರೆ ಅದು ಕ್ಷಮ್ಯವಿತ್ತು. ಆದರೆ ಈಗ ಈ ಕಲ್ಪನೆಯು ಬರುವದೆಂದರೆ ಮನಸ್ಸಿನ ಅತ್ಯಂತ ದೌರ್ಬಲ್ಯವನ್ನೇ ವ್ಯಕ್ತಮಾಡುತ್ತದೆ.

ಇನ್ನೊಂದು ಸಂಗತಿ! ಈ ಶಿಸು ಸಪ್ತಾಹಕ್ಕೆ ೨೦೦ ರೂಪಾಯಿ ಕೊಡುವೆನೆಂದು ಒಬ್ಬರ ಖಾದೀ ಭಕ್ತರು ಒಪ್ಪಿಕೊಂಡಿದ್ದರು. ಅದಕ್ಕನುಸರಿಸಿ ಅವರು ೨೦೦ ರೂಪಾಯದ ಖಾದೀ ಕೊಂಡು ಚಿಕ್ಕಮಕ್ಕಳಿಗಾಗಿ ಅಂಗಿ ಒಟ್ಟಿಗಳನ್ನು ಹೊಲಿಸಿ ಅವುಗಳನ್ನು ಶಿಸುಸಪ್ತಾಹದ ಸೂತ್ರಧಾರರಿಗೆ ಕೊಟ್ಟರು. ಇವುಗಳನ್ನು ಬಡವರ ಮಕ್ಕಳಿಗೆ ಉಚಿತವಾಗಿ ಕೊಡಬೇಕೆಂದು ಹೇಳಿದರು. ಇದು ಸಹ ಸಹನವಾಗದೆ ಹಾಗೆ ಮಾಡುವದಕ್ಕಿಂತಲೂ ೨೦೦ ರೂಪಾಯಿಗಳನ್ನೇ ಕೊಟ್ಟುಬಿಡಿರಿ ಎಂದು ಅಧಿಕಾರಿಗಳು ಹೇಳಿದರಂತೆ! ಕೂಡಲೆ ಕೆಲವು ಈ ಖಾದೀ ಒಟ್ಟಿಗಳನ್ನು ತೆಗೆದುಕೊಳ್ಳುತ್ತಿದ್ದರೆ ತೆಗೆದುಕೊಳ್ಳಿರಿ. ಇಲ್ಲದಿದ್ದರೆ ನಾನು ಅವುಗಳನ್ನು ಬೀದಿಯಲ್ಲಿ ಒಗೆದು ಹಂಚುವೆನೆಂದು ಹೊಕ್ಕಟವಾದ ಉತ್ತರ ಕೊಟ್ಟರು. ಬಡಬಡಕ ಅಧಿಕಾರಿಗಳಿಗೆ ಇಂಥ ಮಾನೀ ಸ್ವಭಾವದ ಖಾದೀ ಭಕ್ತನೇ ಮದ್ದು. ಕರ್ಮವೀರ.

ಆರೋಪಿಗೂ ಮ್ಯಾಜಿಸ್ಟ್ರೇಟರಿಗೂ ಸಂವಾದ.

—೦—

ಬಡವನಾದ ಮತ್ತು ಮುಂಬಯಿಯಲ್ಲಿರಲಿಕ್ಕೆ ಅಯೋಗ್ಯನೆಂದು ಒಬ್ಬನನ್ನು ಪೋಲೀಸ ಕಮಿಶನರ ಸಾಹೇಬರು ಕಾಯದೆಯ ಪ್ರಕಾರ ಮುಂಬಯಿ ಬಿಟ್ಟು ಹೊರಗೆ ಹಾಕಿದ್ದರು. ಆತನು ಮರೆ ಮೋಸದಿಂದ ಪುನಃ ಮುಂಬಯಿಗೆ ಬಂದನು. ಆತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆಗ ನಡೆದ ಪ್ರಶ್ನೋತ್ತರಗಳು—

ಆರೋಪಿ- ನಾನು ಮರಳಿ ಮುಂಬಯಿಗೆ ಏಕೆ ಬರಬಾರದು? ನನಗೆ ಹೊಟ್ಟೆ ಇಲ್ಲವೇ?

ಮ್ಯಾಜಿ- ನೀನು ಬರಬಾರದೆಂದು ಕಾಯದೆಯುಂಟಲ್ಲ? ನನ್ನ ಯುಕ್ತವಿಲ್ಲ.

ಆ- ಅದು ನ್ಯಾಯವಾದ ಕಾಯದೆಯೋ?

ಮ್ಯಾ- ನ್ಯಾಯವಿರಲಿ; ಅನ್ಯಾಯವಿರಲಿ; ಹಾಗೆ ಮಾತ್ರ ಕಾಯದೆಯುಂಟು.

ಆ- ಇಂಥ ಕಾಯದೆಯನ್ನು ನೀವೇಕೆ ತಿರಸ್ಕರಿಸಬಾರದು?

ಮ್ಯಾ- ಅದು ನನ್ನ ಕೆಲಸವಲ್ಲ.

ಆ- ನಾನು ಸಜ್ಜನನಾಗಿದ್ದೇನೆ. ಮತ್ತು ಸಂಭಾವಿತತನದಿಂದ ಮುಂಬಯಿಯಲ್ಲಿ ಜೀವಿಸಬೇಕೆಂದಿದ್ದೇನೆ.

ಪೋಲೀಸರು- ಈತನಿಗೆ ಇಪ್ಪತ್ತು ಸಾರೆ ಶಿಕ್ಷೆ ಆಗಿದೆ.

ಮ್ಯಾ- ಆರೋಪಿಗೆ ಇದು ನಿಜವೇ?

ಆ- ಹೌದು. ಆಗ ನಾನು ಕೆಟ್ಟ ಮನುಷ್ಯನಿದ್ದೆನು. ಈಗ ಸಂಭಾವಿತನಾಗಿದ್ದೇನೆ

ಮ್ಯಾ- ಬಹಳ ಸಂತೋಷ. ಆದರೂ ಕಾಯದೆ ಪ್ರಕಾರ ಕರಾವು ಮಾಡಬೇಕಾಗಿದೆ. ಒಂದು ವರ್ಷದ ಕೈದು ಸಜೆ.

ಮಹಾತ್ಮರಿಗೆ ಫಿನಲಂಡಕ್ಕೆ ಆಮಂತ್ರಣ.

ಯುರೋಪಕ್ಕೆ ಸೇರಿದ ಫಿನಲಂಡದ ವಿದ್ಯಾರ್ಥಿಗಳ ಸರ್ವ ರಾಷ್ಟ್ರೀಯ ಪರಿಷತ್ತು ಕೂಡುವದದೆ ಇದಕ್ಕಾಗಿ ಮಹಾತ್ಮರಿಗೆ ಆಮಂತ್ರಣ ಬಂದಿದೆ. "ನಾನು ನನ್ನ ಲಂಗೋಟಿ ಮತ್ತು ಪಂಜೆ ಬಿಡತಕ್ಕವನಲ್ಲ. ಅದೇ ಪ್ರಕಾರ ನನ್ನ ಊಟದಲ್ಲಿಯೂ ಬದಲಾಗಲಾರದು. ಭಾಷಣ ಮಾಡುವೆನೆಂದು ಖಂಡಿತವಾಗಿ ಹೇಳಲಾರೆನು" ಎಂಬದಾಗಿ ಉತ್ತರ ಬರೆದಿದ್ದಾರೆ. ಅಲ್ಲಿಗೆ ಹೋಗುವ ಅಥವಾ ಬಿಡುವ ನಿರ್ಣಯವನ್ನು ಆಗಸ್ಟ ತಿಂಗಳಲ್ಲಿ ಮಾಡುವರು.

ಕುದಿಯುವಾಗ ಹಳಸಿತು.

—೦—

ಮೊರೋಕೊದ ಸುಲ್ತಾನ ಅಬ್ದುಲಕರೀಮನಿಗೂ, ಫ್ರಾನ್ಸ ಮತ್ತು ಸ್ಪೇನದವರಿಗೂ ಒಡಂಬಡಿಕೆ ಪ್ರಾರಂಭವಾಗಿತೆಂದು ಈ ಮೊದಲು ಬರೆದಿದ್ದೇವೆ. ಆದರೆ ಈ ಒಡಂಬಡಿಕೆಯು ಕುದಿಯುವಾಗಲೇ ಹಳಸಿತು. ಸುಲ್ತಾನ ಅಬ್ದುಲ ಕರೀಮನು ಸೋತೆನೆಂದು ಒಪ್ಪಬೇಕು. ಆಯಕಟ್ಟಿನ ಸ್ಥಳಗಳನ್ನು ಬಿಟ್ಟು ಹಿಂದಕ್ಕೆ ಸರಿಯಬೇಕು; ಎಂಬೆರಡು ಅತ್ಯಾಚಾರ ಮಾಡುವ ಶರ್ತುಗಳನ್ನು ಹಾಕಿದ್ದರು. ಅಬ್ದುಲ ಕರೀಮಸಾಹೇಬರು ಈ ಕರಾರುಗಳನ್ನು ಒಪ್ಪದ್ದರಿಂದ ಒಡಂಬಡಿಕೆಯು ಪ್ರಸ್ತಾಪದ ಪ್ರಾರಂಭದಲ್ಲಿ ಮುರಿಯಿತು.

ರಾವುಂಡ ಟೇಬಲ ಪರಿಷತ್ತು.

ದಕ್ಷಿಣ ಆಫ್ರಿಕಾ ಸರಕಾರದವರು ಹಿಂದೀ ಜನರ ಅಪೇಕ್ಷೆಯ ಪ್ರಕಾರ ರಾವುಂಡ ಟೇಬಲ ಪರಿಷತ್ತು ಕೂಡಿಸಲಿಕ್ಕೆ ಒಪ್ಪಿದ್ದಾರೆ. ಇದು ಸದ್ಯದಲ್ಲಿ ಹಿಂದೀ ಲೋಕದ ಜಯವು. ಪರಿಷತ್ತು ಈ ವರ್ಷದ ಕೊನೆಯಲ್ಲಿ ಲಂಡನದಲ್ಲಿ ಕೂಡಬಹುದು.

ಮೈಸೂರ ವಿಶ್ವವಿದ್ಯಾಲಯದವರು ಸರ ವಿಶ್ವೇಶ್ವರಯ್ಯನವರಿಗೆ ಆದಿಭೌತಿಕ ಶಾಸ್ತ್ರ ಕಲಾನಿಪುಣನೆಂಬ ಬಿರುದು ಕೊಡತಕ್ಕವರಿದ್ದರು; ಈ ಬಿರುದು ತಮಗೆ ಬೇಕಾಗಿಲ್ಲೆಂದು ಇವರು ಉತ್ತರ ಬರೆದಿರುತ್ತಾರೆ.

ದಕ್ಷಿಣಭಾಗದ ಕಮೀಶನರರಾದ ಮಿ. ಮಾಂಟಫರ್ಡಸಾಹೇಬರು ರಜೆಯ ಮೇಲೆ ಹೋಗುವದರಿಂದ, ಮಿ. ಮಾಂಟೇಥಸಾಹೇಬರು ಆಕ್ಟಿಂಗ ಕಮೀಶನರರಾಗುವರು. ಮತ್ತು ಮಿ. ಮಂಡೇಲರು ಬೆಳಗಾವಿಯ ಕಲೆಕ್ಟರರಾಗುವರು.

ಲಾಹೋರ ಮ್ಯುನಿಸಿಪಾಲಿಟಿಯವರು ಹಾಟೆಲ, ಸಿನೇಮಾ, ಸರಕಸ ಮುಂತಾದವುಗಳ ಮೇಲೆ ಕರ ಕೂಡ್ರಿಸುವರು. ಇದರಿಂದ ಮ್ಯುನಿಸಿಪಾಲಿಟಿಗೆ ವರ್ಷಕ್ಕೆ ೫॥ ಲಕ್ಷದ ಪ್ರಾಪ್ತಿಯಾಗುವದು.

ಧಾರವಾಡ—

[illegible] ಸ್ಕೂಲ ಫಾಯನಲ ಪರೀಕ್ಷೆಯ ಪರಿಣಾಮವು ಮೇ ತಿಂಗಳ ೧೧ ನೆಯ ತಾರೀಖಿನ ದಿವಸ ಆಗುವದೆಂದು ತಿಳಿಯುತ್ತದೆ.

R N B. 1443

ವಿಜಯ

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಮಂಗಳವಾರ ತಾರೀಖು ೨೭ನೇ ಎಪ್ರೀಲ ೧೯೨೬ (ಸಂಚಿಕೆ ೧೬

ವಿಜಯ.

ಧಾರವಾಡ ತಾ- ೨೭-೪-೨೬ ನೇ ಇಸ್ವಿ

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಆದಾಯ ವೆಚ್ಚ

ಡಿಸ್ಟ್ರಿಕ್ಟ ಲೋಕಲಬೋರ್ಡುಗಳು ಪ್ರಜಾಸತ್ತಾವಾದಿಗಳಾಗಿವೆಂದರೂ ಸಲ್ಲುವದು. ಬೋರ್ಡಿನಕೆಲಸಗಳು ನಡೆದಿದೆಂಬುದು ಜಿಲ್ಹೆಯ ಜನರಿಗೆ ತಿಳಿಯುವದೂ ಅವಶ್ಯಕ. ಮುಖ್ಯ ಬಾಬು ಸರ್ವಾರಂಭದಲ್ಲಿ ಕಂಡುಬರುವ ಮೂಲವೆಂಬಂತೆ ಆದಾಯ ವೆಚ್ಚವಾಗಿರುತ್ತದೆ. ಇದನ್ನು ಸಾರ್ವಜನಿಕ ಅವಲೋಕನೆಗಾಗಿ ಅಧ್ಯಕ್ಷರಾದ ಶ್ರೀ ಮುಳಕೋಟಿಯವರು ವರ್ತಮಾನಪತ್ರಗಳ ದ್ವಾರದಿಂದ ಪ್ರಸಿದ್ಧ ಮಾಡಿದ್ದಾರೆ. ಈ ಹೊಸ ಉಪಕ್ರಮಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇದರ ಮೇಲೆ ಕರ್ನಾಟಕ ಟಾಯಿಮ್ಸ ಕರ್ತರು ಎರಡು ಮೂರು ಲೇಖಗಳನ್ನು ಬರೆದಿರುತ್ತಾರೆ. ಮತ್ತು ನೀವೇಕೆ ಸುಮ್ಮನಿದ್ದೀರೆಂದು ನಮಗೆ ಚೀಟೀ ಬರೆದು ಕೇಳಿದ್ದಾರೆ.

ಉತ್ಪನ್ನದ ಮಾನದಿಂದ ಆಫೀಸಿನ ವೆಚ್ಚವು ಬಹಳವಿದ್ದು, ಅದನ್ನು ಕಡಿಮೆ ಮಾಡಬೇಕೆಂದು ಟಾಯಿಮ್ಸ ಕರ್ತರ ಮೊದಲನೇ ಮುಖ್ಯ ಟೀಕೆ ಇರುತ್ತದೆ. ಹೇಗೆ ಕಡಿಮೆ ಮಾಡಬೇಕೆಂಬದನ್ನು ಮಾತ್ರ ಹೇಳುವದಿಲ್ಲ. ಯುದ್ಧದ ವೇಳೆಯಲ್ಲಿ ಪಡಿಯ ದರ ಬಂತಷ್ಟೇ. ಆಗ ಸರಕಾರದವರು ಪ್ರತಿಯೊಂದು ಖಾತೆಯ ಕೆಲಸಗಾರರ ಸಂಬಳವನ್ನು ಹೆಚ್ಚು ಮಾಡಿದ್ದಲ್ಲದೆ, ಸ್ಕೇಲ ಬಡತಿಯ ಪದ್ಧತಿ ಹಾಕಿದರು. ಲೋಕಲಬೋರ್ಡ ಈ ಸಂಬಳ ಮತ್ತು ಬಡತಿ ಕೊಡುತ್ತಿರುವದು. ಆದುದರಿಂದ ಈ ಬಾಬನ್ನು ಒಮ್ಮೆಯಲೆ ಕಡಿಮೆ ಮಾಡಲಿಕ್ಕೆ ಬರಲಾರದು. ಮೊದಲಿನ ಸಂಬಳವು ೧೬ ಶೇರು ಜೋಳ, ೮ ಶೇರು ಅಕ್ಕಿಯ ಮಾನದಿಂದಿತ್ತು. ಈಗಿನ ಮಾನದಿಂದ ಸಂಬಳವನ್ನು ಸ್ಕೇಲ ಬಡತಿಯನ್ನು ಗೊತ್ತು ಮಾಡಿ, ಹೊಸದಾಗಿ ನೇಮಿಸಿಕೊಳ್ಳುವದವರನ್ನು ಈ ಶರ್ತಿಗೆ ಒಡಂಬಡಿಸಿದರೆ ವೆಚ್ಚವು ಕ್ರಮೇಣ ಕಡಿಮೆಯಾಗುತ್ತಾ ಹೋಗುವದು. ಇದು ಒಂದು ವರ್ಷದ ಮಾತಲ್ಲ. ಒಂದು ಕಾಲ್ಯಾಗತದ ಕೆಲಸವು.

ಪಡೆಯುವ ವರ್ಷದಲ್ಲಿ ೧,೩೩೦೦೦ ರೂಪಾಯಿಗಳ ಕಾಮಗಾರಿಕೆಯಾಗತಕ್ಕದಿದ್ದು, ಅದರ ಮೇಲ್ವಿಚಾರಣೆಗಾಗಿ ೫೦ ಸಾವಿರದ ವೆಚ್ಚ ಬರುವದು. ಈ ವೆಚ್ಚವ ದುಃ ಮೇಲೆ ಹೇಳಿದ ಕಾರಣಕ ಬಿನೆಯಿಂದಲೇ ಬರುವದು. ಸಾಧಾರಣ ಕೆಲಸಗಳನ್ನು ಕಾಂಟ್ರ್ಯಾಕ್ಟಿನ ದರೂ, ಹಳ್ಳಿಗಳಲ್ಲಿ ಕಟ್ಟಿಸುವ ಬಾವಿ, ಶಾಲೆಗಳ ಮೇಲ್ವಿಚಾರಣೆಯನ್ನು ಪಂಚರ ಕಡಿಗೆ ಕೊಟ್ಟರೆ ಈ ವೆಚ್ಚವು ಕೆಲವಂಶದಿಂದಾದರೂ ಕಡಿಮೆಯಾಗುವದು. ಚೀಫ ಆಫೀಸರ ಬೇರೆ; ಇಂಜಿನಿಯರ ಬೇರೆ; ಈ ಪ್ರಕಾರ ಎರಡು ಬಾಬುಗಳನ್ನು ಮಾಡಿ, ವೆಚ್ಚ ಬೆಳಸದೆ, ಇಂಜಿನಿಯರರನ್ನೇ ಚೀಫ ಆಫೀಸರ ಮಾಡಿ, ಎರಡೂ ಕೆಲಸಗಳನ್ನು ಇವರಿಗೇ ಒಪ್ಪಿಸಿದರೆ, ದೊಡ್ಡ ಉಳಿತಾಯವಾಗುವದು. ಟಾಯಿಮ್ಸಕಾರರ ಈ ಸೂಚನೆಯು ಸ್ತುತ್ಯವದೆ.

ಆದರೆ ಪತ್ರಕರ್ತರು ಬೋರ್ಡಿನ ಉತ್ಪನ್ನವನ್ನು ಹೆಚ್ಚಿಸುವ ವಿಷಯವಾಗಿ ಅಬಕಾರಿ ಖಾತೆಯನ್ನು ಮುಂದೆ ತೋರಿಸಿದ್ದು ನಮಗೆ ಸಮ್ಮತವಿಲ್ಲ. ಶರೆ ಸಿಂದಿಯ ವ್ಯಾಪಾರವು ಪೂರ್ಣ ನಿಂತು ಹೋಗಬೇಕೆಂದು ಸರಕಾರದ ಧೋರಣವು. ಅದೇ ಧೋರಣವನ್ನು ಪ್ರಜಾಪ್ರತಿನಿಧಿಗಳಾದ ಬೋರ್ಡಿನವರು ಮುಂದರಿಸಿ ನಡಿಸತಕ್ಕದು, ಕಡಿತವನ್ನೇ ನಿಲ್ಲಿಸಬೇಕು ಸರಕಾರವನ್ನು ಕೇಳಿಕೊಳ್ಳುವದೆಂದು ಸದ್ಯಕ್ಕಿಲ್ಲ ಬರುವ ಸ್ಪಷ್ಟ ಏಳಿಕೊಳ್ಳಲಿಕ್ಕೆ ಪ್ರಶ್ನೆ ಕಾಯಿದಿರುವದಿಲ್ಲ.

ಬೋರ್ಡಿಗೆ ಕಾಡಿನದ ಹೊಸ ದೊಡ್ಡ ಉತ್ಪನ್ನ ಬರುವದು ... ಜೋರ್ಡ ನವರು ದಕ್ಷತೆಯಿಂದ ಕೆಲಸ ಮಾಡಿದರೆ ಈ ಉತ್ಪನ್ನವು ... ಒಳೆಯದಾಗುವದು. ಸದ್ಯ ಮತವುಂಟು. ಉತ್ಪನ್ನ ಹೆಚ್ಚುಗೊಳಿಸುವದಾದರೆ ಎರಡು ಉಪಾಯಗಳುಂಟು. ಒಂದು ಕೊಂಡವಾಡೆಗಳನ್ನು ಜಕಾತಿ ಕಟ್ಟೆಗಳಂತೆ ಗುತ್ತಿಗೆಯಿಂದ ಕೊಡುವದು. ಎರಡನೆಯದು ಅಬಕಾರಿ ಖಾತೆಯ ತೆರವಾದ ... ಈ ತರದ ಯೋಜನೆಯಿಂದ ಕೆಲ ಜನರು ಅನ್ಯಾಯ ಅಕ್ರಮಗಳನ್ನು ಮಾಡಬಹುದು. ಹೊಳೆಯ ನೀರು ಮೊದಲು ರಾಡಿ ಇದ್ದರೂ, ಮುಂದೆ ತಿಳಿಯಾಗುತ್ತದೆಂಬಂತೆ ಬರಬರುತ್ತಾ ವ್ಯವಸ್ಥೆಯೂ ಸ್ವಚ್ಛವಾಗಿ, ಆದಾಯ ಹೆಚ್ಚುವದು. ಐನೂರು ಕೊಂಡವಾಡೆಗಳಿಂದ ಐದೇ ಸಾವಿರ ಉತ್ಪನ್ನವೆಂಬದು ತೀರ ಹಾಸ್ಯಾಸ್ಪದವಾಗುತ್ತದೆ. ಆದಕಾರಣ ಇದರಲ್ಲಿ ನಾವು ಹೇಳುವಂತೆ ಹೊಸ ವ್ಯವಸ್ಥೆಯಾಗಬೇಕಾದುದು ಅವಶ್ಯ. ಒಂದು ತಾಲೂಕನ್ನು ಲಿಲಾವಿನಿಂದ ಮತ್ತು ಒಂದು ತಾಲೂಕನ್ನು ಅಬಕಾರಿ ಖಾತೆಯಂತೆ ತಪಾಸಣೆಯಿಂದ ಅನುಭವದಲ್ಲಿ ತಂದು ನೋಡಬೇಕು. ಈ ಪ್ರಕಾರ ಪ್ರಯೋಗ ಮಾಡಿ, ಅನುಭವ ನೋಡಿದ ಬಳಿಕ, ಯೋಗ್ಯ ತೋರಿದ್ದನ್ನು ಮಾಡಬಹುದು.

ಲೋಕಲ ಫಂಡನ್ನು ಹೆಚ್ಚಿಸಬಾರದೆಂದು ಟಾಯಿಮ್ಸ ಕಾರರು ಬರೆದದ್ದು ಸರಿಯಾದದೆ. ಎಲ್ಲ ಉಪಾಯಗಳು ಮೀರಿದ ಬಳಿಕ, ಇದನ್ನು ಕೊನೆಯ ಉಪಾಯ ಮಾಡಬೇಕೆಂದು ನಾವು ಈ ಮೊದಲು ಎಷ್ಟೋ ಸಾರೆ ಹೇಳಿದ್ದೇವೆ. ಕೆಲ ಅಧಿಕಾರಿಗಳು ಅವರಿಗೆ ದೊಡ್ಡಸ್ತಿಕೆ ಬರಬೇಕೆಂದು ಲೋಕಲ ಫಂಡನ್ನು ಹೆಚ್ಚಿಸಬೇಕೆಂದು ಹೆಣಗಾಡುತ್ತಿದ್ದಾರೆ. ಟಾಯಿಮ್ಸಕಾರರು ಇಂಥವರ ಕೃತ್ಯವನ್ನು ನಿಷೇಧಿಸತಕ್ಕದ್ದು. ರೈತರ ಸ್ವತಂತ್ರ ಅಭಿಪ್ರಾಯ ಬೇಕಾಗಿದ್ದರೆ ರೈತ ಸಭೆಯೇ ಕೂಡತಕ್ಕದ್ದಲ್ಲದೆ, ಅಧಿಕಾರಿಗಳ ದ್ವಾರ ವಿಚಾರವು ಸ್ವ ಬೇಕಾಗಿಲ್ಲೆಂದು ಸ್ಪಷ್ಟವಾಗಿ ಸಾರಬೇಕು.

ಕುದುರೆ ಕಾಳಗ ಹಳಸಿತು.

— o —

ಮೊರಾಕೋದ ಸುಲ್ತಾನ ಅಬ್ದುಲಕರೀಮನಿಗೂ, ಫ್ರಾನ್ಸ ಮತ್ತು ಸ್ಪೇನದವರಿಗೂ ಒಡಂಬಡಿಕೆ ಪ್ರಾರಂಭವ ಗಿದೆದು. ಈ ದೂರು ... ಆದರೆ ಈ ಒಡಂಬಡಿಕೆಯು ... ಸುಲ್ತಾನ ಅಬ್ದುಲಕರಿಮನು ಶರಣಾಗತನಾಗಬೇಕು. ಆಕ್ರಮಿಸಿದ ಸ್ಥಳಗಳನ್ನು ಬಿಟ್ಟು ಹಿಂದಕ್ಕೆ ಸರಿಯಬೇಕ, ಎಂಬೆರಡು ಆತ್ಮಘಾತ ಮಾಡುವ ಶರ್ತುಗಳನ್ನು ಹಾಕಿದ್ದರು. ಅಬ್ದುಲ ಕರೀಮನು ಹೇಳುವ ಈ ಶರತ್ತುಗಳನ್ನು ಒಪ್ಪದ್ದರಿಂದ ಒಡಂಬಡಿಕೆಯು ಪ್ರಸ್ತಾಪದ ಪ್ರಾರಂಭದಲ್ಲಿ ಮುರಿಯಿತು.

ವೈಕುಂಠವಾಸಿ ರಾಮರಾವ ಬಳ್ಳಾರಿ ವಕೀಲರು.

ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ. ರಾಮರಾವ ಬಳ್ಳಾರಿಯವರು ಮೊನ್ನೆ ನ ದಿವಸ ಸಾಯಂಕಾಲದಲ್ಲಿ ವಿಷಮಜ್ವರದಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇನೆ. ಮರಣ ಸಮಯದಲ್ಲಿ ಇವರು ೬೨ ವರ್ಷದವರಾಗಿದ್ದರು. ಇವರು ಫೌಜದಾರಿ ಪ್ರಕರಣಗಳಲ್ಲಿ ಬಹಳ ಒಳ್ಳೆಯವರೆಂದು ಕರ್ನಾಟಕ ಪ್ರಾಂತದಲ್ಲೆಲ್ಲ ಸುಪ್ರಸಿದ್ಧರಾಗಿದ್ದರು. ವಕೀಲಿಯು ಇವರ ಜೀವನದ ಮುಖ್ಯ ಧ್ಯೇಯವಾಗಿರಲಿಲ್ಲ. ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಪಾಸಾದ ಕೂಡಲೆ ಪೋಲೀಸ ಖಾತೆಯಲ್ಲಿ ಸೇರಿದರು. ಒಳ್ಳೆಯವರೆಂದೂ, ಲೆಕ್ಕಾಣಿಕೆಯಲ್ಲಿ ಜಾಣರೆಂದೂ ಇವರನ್ನು ಪೋಲೀಸ ಖಾತೆಯ ಇನಸ್ಪೆಕ್ಟರಿಗೆ ವರ್ಗ ಮಾಡಿದರು. ಆಗಿನ ಪೋಲೀಸ ಖಾತೆಯು ಬಹುತೇಕವಾಗಿ ನಿರಕ್ಷರಿಗಳಿಂದಲೇ ತುಂಬಿತ್ತು. ಮುಲಕೀ ಖಾತೆಯ ಕಾರಕೂನರು ದಫ್ತರದ ಕೆಲಸವನ್ನು ನೋಡುತ್ತಿದ್ದರು. ಶ್ರೀ ರಾಮರಾಯರಂಥ ಚುರುಕ ಬುದ್ಧಿಯ ಗೃಹಸ್ಥರು ಸಿಕ್ಕಿದ್ದಾರರಾದ್ದರಿಂದ, ಅದರಲ್ಲಿ ಒಂದರ ಮೇಲೊಂದು ಸುಧಾರಣೆಯಾದವು. ಪೋಲೀಸ ಸಾಹೇಬರು ಇವರ ಜಾಣ್ಮೆಗೆ ಮೆಚ್ಚಿ, ಇವರ ಸೂಚನೆ ಮತ್ತು ತಿದ್ದುಪಡೆಗಳಿಗೆ ಅನುಮೋದನ ಕೊಡಲಾರಂಭಿಸಿದರು. ಇದು ಕೆಲವರಿಗೆ ಅಸೂಯವಾಯಿತು. ಲಂಚದ ಆರೋಪ ತಂದರು. ಶ್ರೀ ರಾಮರಾಯರನ್ನು ನಂಬಿದ ಸಾಹೇಬರು ವರ್ಗವಾಗಿ ಹೋದರು. ಬೇರೊಬ್ಬರು ಬಂದರು. ಲಂಚದ ಆರೋಪವನ್ನು ಸಿದ್ಧ ಮಾಡುವದಾಗದ್ದರಿಂದ ಡಿಪಾರ್ಟಮೆಂಟದಿಂದ ಬರತರ್ಫ ಮಾಡಿದರು. ಬರತರ್ಫಿಗೆ ಇವರೆಷ್ಟೂ ಎದೆಗುಂದಲಿಲ್ಲ. ಸಾರ್ವಜನಿಕ ಸೇವೆ ಮಾಡಬೇಕೆಂದು ರಾಜಹಂಸ ಪತ್ರಕ್ಕೆ ಜನ್ಮ ಕೊಟ್ಟರು. ಬ್ರಹ್ಮದೇವನು ಹಂಸದ ಮೇಲೆ ಎಷ್ಟೇ ಕೋಪಿಸಿದರೂ, ಹಾಲು ಮತ್ತು ನೀರನ್ನು ಬೇರೆ ಮಾಡುವ ಅದರ ಹುಟ್ಟುಗುಣವನ್ನು ಕಸಕೊಳ್ಳಲಾರನೆಂಬ ಶ್ಲೋಕದಿಂದಲೇ ಆಗಿನ ಅಳರಸರ ಕೂಡ ಹೋರಾಡಿದರು. ೧೮೯೩ ೧೮೯೪ ರಲ್ಲಿ ನಡೆದ ಸಂಗತಿಯು. ಆಗ ಧಾರವಾಡ ಪ್ರಾಂತದಲ್ಲಿ ಮರಾಠಿ ಕಾಮದಾರರ ಪ್ರಾಬಲ್ಯವೇ ಹೆಚ್ಚಿತ್ತು. ಶ್ರೀ ರಾಮರಾಯರು ಅವರಿಂದ ಬರುತ್ತಿದ್ದ ಅನೇಕ ಎಡರುಗಳಿಗೆ ತಲೆಗೊಟ್ಟು, ಏಕನಿಷ್ಠೆಯಿಂದ ತಮ್ಮ ಕರ್ತವ್ಯ ಮಾಡಿದರು. ಎರಡು ವರ್ಷ ರಾಜಹಂಸವನ್ನು ನಡೆಸಿದ ಬಳಿಕ ವಕೀಲಿಯ ಅಭ್ಯಾಸ ಮಾಡಿ, ಒಂದೇ ವರ್ಷದಲ್ಲಿ ಪರೀಕ್ಷೆ ಪಾಸಾದರು. ವಕೀಲಿ ಪಾಸಾದರೂ ಬರತರ್ಫದವರಿಗೆ ಸನದು ದೊರೆಯಬಾರದೆಂದು ನ್ಯಾಯ ಕೂಡಿತು. ಲೋಕಮಾನ್ಯ ಟಿಳಕ ಮತ್ತು ನಾಮಜೋಶಿ ರಾನಡೆಯವರ ಸಹಾಯದಿಂದ ಸನದು ದೊರೆಯಿತು. ಮುಲಕೀ ಮತ್ತು ಪೋಲೀಸ ಖಾತೆಗಳಲ್ಲಿ ಕೆಲಸ ಮಾಡಿ, ಅವುಗಳೊಳಗಿನ ಮರ್ಮವನ್ನು ತಿಳಿದವರಾದ್ದರಿಂದ, ವಕೀಲಿಯಲ್ಲಿ ಬೇಗನೆ ಪ್ರಸಿದ್ಧಿಗೆ ಬಂದರು. ದೊಡ್ಡ ದೊಡ್ಡ ಫೌಜದಾರಿ ಪ್ರಕರಣಗಳಲ್ಲಿ ಬಹುತೇಕವಾಗಿ ಆರೋಪಿಗಳ ಪರವಾಗಿ ಇವರೇ ಇರುತ್ತಿದ್ದರು. ಪೋಲೀಸ ಮಾತ್ರವಲ್ಲ; ಮ್ಯಾಜಿಸ್ಟ್ರೇಟರ ಮುಂದೆ ಸಹ ಕಬೂಲಿ ಜವಾಬನ್ನು ಕೊಟ್ಟಂಥ ಆರೋಪಿಗಳನ್ನು ಬಿಡಿಸಿಕೊಳ್ಳುವರು. ಮ್ಯಾಜಿಸ್ಟ್ರೇಟರೂ ಜಡ್ಜರೂ ಕೂಡ ವಿಸ್ಮಯಪಡುವಂಥ ಹೊಸ ಮುದ್ದೆಗಳನ್ನು ಹೂಡಿ, ಫಿರ್ಯಾದಿ ಪಕ್ಷದ ಪುರಾವೆಯನ್ನು ಕೆಡಿಸುವರು. ನೂರಾರು ಜನರ ಗಲ್ಲನ್ನು ತಪ್ಪಿಸಿ ಅವರಿಗೆ ಜೀವದಾನ ಕೊಡಿಸಿರುತ್ತಾರೆ. ವಕೀಲಿಯಲ್ಲಿ ಈ ತೆರವಾಗಿ ಪ್ರಸಿದ್ಧಿಯನ್ನು ಪಡೆದ್ದುದರಿಂದ ... ಬೆಳಗಾಂವಿಗೆ ... ವಕೀಲಿಯಂತೆ ಸಾರ್ವಜನಿಕ ಕೆಲಸಗಳಲ್ಲಿಯೂ ಮನಸ್ಸು ಹಾಕುವರು. ಮ್ಯುನಸಿಪಾಲಿಟಿಯ ಮೆಂಬರಾಗಿದ್ದರು. ಅದು ಪ್ಲೇಗಿನ ಹಾಹಾಕಾರದ ಕಾಲ. ಕ್ಯಾಪಿಟಲಸಾಹೆಯು ಬಹು ಜನರ ಸ್ಥಳದಲ್ಲಿ ... ಅದನ್ನು ವಿರೋಧಿಸಿ, ನಿಷೇಧ ಸ್ವಪ್ರಕ್ಕಾಗಿ ಇವರು, ದೀವಾನ ಬಹಾದ್ದೂರ ಜೋಶಿಯವರೂ, ರಾ. ಬ. ವೆಂಕಟರಪ್ಪನವರೂ, ಇನ್ನೂ ಕೆಲವರೂ ... ಇವರ ಕೈಗಳ ... ಸದ್ಗೃಹಸ್ಥರಾದ ಉಮೇದವಾರರಾಗದಿದ್ದ ... ಬರುತ್ತಿದ್ದ ... ಸಾಹೇಬನ್ನು ಆಗಲವದಕ್ಕಾಗಿ ಸಭೆ ... ಧೋರಣವನ್ನು ಉಮೇದವಾರರಾಗಿ ನಿಲ್ಲಿಸಿ, ಅವರನ್ನು ಆರಿಸಿದರು. ಮ್ಯುನಸಿಪಾಲಿಟಿಯಂತೆ ಡಿಸ್ಟ್ರಿಕ್ಟ ಲೋಕಲ ಬೋರ್ಡಿನಲ್ಲಿಯೂ ಸೇರಿ, ಮ್ಯಾನೇಜಿಂಗ ಕಮಿಟಿಯ ಚೇರಮನ್ನರಾಗಿದ್ದರು. ಲೋಕಮಾನ್ಯ ಟಿಳಕರು ಇಲ್ಲಿಗೆ ಬಂದಾಗ ಅವರಂಥ ದೊಡ್ಡ ಮನುಷ್ಯರು ಇಳಿದುಕೊಳ್ಳುವದಕ್ಕೆ ಬೇಕಾದಂಥ ಪ್ರಾಸಾದಗಳು ಈ ಊರಲ್ಲಿ ಬಹಳ ತುಸು ಇರುವವು. ಆದರೆ ಅವರನ್ನು ಇಳಿಸಿಕೊಳ್ಳುವದಕ್ಕೆ ಒಬ್ಬರಿಗೂ ಧೈರ್ಯವಾಗಲಿಲ್ಲ. ಶ್ರೀ ರಾಮರಾಯರು ಮೊದಲಿನಿಂದ ರಾಷ್ಟ್ರೀಯ ವಿಚಾರದವರಾದ್ದರಿಂದ, ಸಂತೋಷದಿಂದ ಸ್ಥಳಕೊಟ್ಟದ್ದಲ್ಲದೆ, ಸ್ವತಃ ನಿಂತು ಅವರ ಆತಿಥ್ಯ ಸತ್ಕಾರ ಮಾಡಿದರು. ನಾಫೆಕೋ-ಆಪರೇಶನದ ವೇಳೆಯಲ್ಲಿಯೂ ಇವರು ಮನಃಪೂರ್ವಕವಾಗಿ ಸಹಾಯ ಮಾಡಿದರು. ಆಗಿನ ಚಳವಳಿ, ಆಗಿನ ವಿಚಾರ ಮತ್ತು ಆಗಿನ 'ದಿಟ್ಟತನ'ಕ್ಕನುಸರಿಸಿ, ಇಲ್ಲಿಯ ವಿಕ್ಟೋರಿಯಾ ಹಾಯಸ್ಕೂಲನ್ನು ಮುರಿದು, ರಾಷ್ಟ್ರೀಯ ಶಾಲೆ ಮಾಡುವದರಲ್ಲಿ ಇವರೊಬ್ಬರು ಅಗ್ರಗಣ್ಯರಾಗಿದ್ದರು. ಕರ್ನಾಟಕ ಹಾಯಸ್ಕೂಲಿನ ಆಶ್ರಯದಾತರೂ ಆಗಿದ್ದರು. ನಿನ್ನಿನ ದಿವಸ ಇವರ ಸ್ಮರಣೆಗಾಗಿ ಈ ಶಾಲೆಯು ಬಂದಿಡಲ್ಪಟ್ಟಿತು. ಒಂದಿಲ್ಲೊಂದು ತರಹವಾಗಿ ಇಲ್ಲಿಯ ಸಾರ್ವಜನಿಕ ಸಂಸ್ಥೆಗಳಿಗೆ ದ್ರವ್ಯ ಸಹಾಯ ಮಾಡಿದ್ದಾರೆ. ಲಕ್ಷಾವಧಿ ರೂಪಾಯಿಗಳನ್ನು ಸಂಪಾದಿಸಿ, ಲಕ್ಷಾವಧಿ ರೂಪಾಯಿಗಳನ್ನು ಸ್ವಂತ ಸುಖಕ್ಕೂ ಪರಹಿತಕ್ಕೂ ವಿನಿಯೋಗಿಸಿದರು. ಇವರಲ್ಲಿ ಹೋದಂಥ ಯಾವ ಯಾಚಕನೂ ಖಿನ್ನ ಮುದ್ರೆಯಿಂದ ವಿಮುಖನಾಗಿ ಹೋಗಲಿಲ್ಲ. ಧರ್ಮದಲ್ಲಿ ಶ್ರದ್ಧೆಯುಳ್ಳವರು. ಚಿಕ್ಕಂದಿನಿಂದ ದಾಸಕೂಟಕ್ಕೆ ಸೇರಿದವರು. ಮುಖದ್ವಾರ ಭಜಿಸುತ್ತ ಶ್ರೀ ರಾಮರಾಯರು ಈ ತೆರವಾಗಿ ಇಹಪರಗಳೆರಡನ್ನೂ ಸಾಧಿಸಿಕೊಂಡು ವೈಕುಂಠವಾಸಿಯಾದರು. ಇವರಿಗೊಬ್ಬ ಶ್ರೀ ನಿವಾಸರಾಯನೆಂಬ ಮಗನಿದ್ದು, ಈತನು ಪ್ರಬುದ್ಧನೂ, ಸುಸಂಸ್ಕೃತನೂ, ವಿನಯಶಾಲಿಯೂ ಕುಟುಂಬ ವತ್ಸಲನೂ ಆಗಿದ್ದಾನೆ.

ಹುಬ್ಬಳ್ಳಿಯಲ್ಲಿ ಗತ ವಿಶಾರದರಾದ ಮೆ. ಅಬ್ದುಲ ಕರೀಮಖಾನರು ಒಂದು ಧರ್ಮಾರ್ಥ ಜಲಸಾ ಮಾಡಿ, ಅದರಿಂದ ಬಂದ ಉತ್ಪನ್ನವನ್ನು ಅಲ್ಲಿಯ ಅಂಜುಮನ್ನಕ್ಕೆ ಕೊಟ್ಟರು.

ಮರಾಠ್ವಾಡದಲ್ಲಿ ಅಂತ್ಯಜರ ಸಭೆಯು ಕೂಡಿತ್ತು. ಸತ್ಯಶೋಧಕ ಸಮಾಜದ ದೇವಮುಂದ, ಧರ್ಮಾಲಂಡ ಪದ್ಧತಿಯನ್ನು ನಿಷೇಧಿಸಿದ ಠರಾವು ಪಾಸ ಮಾಡಿದರು.

ಮಿ. ಮರ್ಡೇಕರರು ಬೆಳಗಾವಿಯ ಅಕ್ಟಿಂಗ ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ವಿಲಾಯತಿಯಲ್ಲಿ ಯುದ್ಧದ ಬೀಜ ಬಿತ್ತುವಿಕೆ.

ಇಟಲಿಯ ಉಪಟಳಕ್ಕೆ ತುರುಕರ ಸೇನಾಸಿದ್ಧತೆ.

ಫ್ರೇಂಚರಿಗೂ ಚಿಂತೆ.

ವಿಲಾಯತಿಯಲ್ಲಿ ಪ್ರತಿಯೊಂದು ದೇಶದಲ್ಲಿ ಪ್ರಚಂಡವಾದ ದೊರೆತನವು ನೆಲೆಗೊಂಡಿತ್ತು. ಇಟಲಿಯ ಪ್ರಸ್ತುತದ ಮಂತ್ರಿಯಾದ ಮುಸಿಲೋಲಿನಿಯು ಮುಂಗೈ ಬಲದಿಂದ ರಾಜ್ಯಸೂತ್ರವನ್ನು ತನ್ನಾಧೀನ ಮಾಡಿಕೊಂಡನು. ಗ್ರೀಸ ಮತ್ತು ಸ್ಪೇನವು ಇವನನ್ನು ಹಿಂಬಾಲಿಸಿದವು. ಬೊಲ್ಸೆವಿಕ ಭೂತವಿದ್ದಂತೆ, ಮುಸಿಲೋನಿಯ ಫಾಸಿಸ್ಟ ಪಂಥದ ಭೂತವೂ ಪ್ರತಿಯೊಂದು ದೇಶದಲ್ಲೆದ್ದಿದೆ. ಮಹಾಯುದ್ಧದ ಪೂರ್ವದಲ್ಲಿ ಜರ್ಮನಿಯ ಕೇಸರರು ವಿಲಾಯತಿಗೆಲ್ಲ ಭಯೋತ್ಪಾದಕರಾಗಿದ್ದರು. ಅವರ ಚಾರ್ಜು ಸದ್ಯದಲ್ಲಿ ಮುಸಿಲೋನಿಸಾಹೇಬನಿಗೆ ಬಂದಿದೆ. ಇವನು ರಾಷ್ಟ್ರಸಂಘ, ಲೋಕಾರ್ನೋದ ಒಡಂಬಡಿಕೆ, ಶಾಂತತಾ ಸಂಧಿ ಮತ್ತು ಮುಂತಾದವುಗಳನ್ನು ತುಚ್ಛವಾಗಿ ಎಣಿಸಿ, ತಮ್ಮ ದರ್ಪವೇ ನಡೆಯಬೇಕೆಂದಿದ್ದಾನೆ. ಭೂಮಧ್ಯ ಸಮುದ್ರದ ನೀರು ಮತ್ತು ಅದರ ಮೇಲೆ ಬೆಳಗುವ ಸೂರ್ಯಚಂದ್ರರು ಸಹ ತನ್ನಾಧೀನರಾಗಬೇಕೆಂದು ಹಂಬಲಿಸುವನು. ಸಾವಿರ ಕೈಗಳಿದ್ದ ಕಾರ್ತವೀರ್ಯಾರ್ಜುನನಂತೆ ಈತನ ಕೈಗಳು ಸಳಸಳ ಅನ್ನುತ್ತವೆ. ಕಾರ್ತವೀರ್ಯಾರ್ಜುನನು ನದಿಯ ಪ್ರವಾಹವನ್ನು ತಡೆದರೆ, ಮುಸಿಲೋನಿಯು ಭೂಮಧ್ಯ ಸಮುದ್ರದ ಪ್ರವಾಹವನ್ನು ತಡೆಯಬೇಕೆಂದಿದ್ದಾನೆ.

ಮೊರೋಕೋದ ಅಬ್ದುಲ ಕರೀಮನಿಗೂ ಫ್ರಾನ್ಸ ಮತ್ತು ಸ್ಪೇನಕ್ಕೂ ಒಡಂಬಡಿಕೆಯ ಪ್ರಸ್ತಾಪ ನಡೆದಿದೆ. ಇವೆರಡೂ ದೇಶಗಳು ಆಫ್ರಿಕೆಯ ಒಂದು ಭಾಗವನ್ನು ನುಂಗಿದರೆ ಇಟಲಿಯು ಬಣಗುನಾರುತ್ತಾ ಕೂಡ್ರಬೇಕೇ? ಇದೆಂದೂ ಆಗದ ಮಾತು. ಅಲ್ಲಿಯೂ ಇಟಲಿಗೆ ರಾಜ್ಯಾಂಶ ದೊರೆಯಬೇಕೆಂದು ಮುಸಿಲೋನಿಯು ಹಂಬಲಿಸುತ್ತಿದ್ದಾನೆ. ಮೊರೋಕೋದಂತೆ ಟ್ಯಾಂಜೀರದಲ್ಲಿಯೂ ತನಗೆ ಭೂಮಿ ದೊರೆಯಬೇಕೆನ್ನುವನು. ಫ್ರಾನ್ಸವು ಈ ಕೆಲಸದಲ್ಲಿ ಇಟಲಿಯನ್ನು ಎಡಗಣ್ಣಿನಿಂದ ನೋಡುತ್ತಿದ್ದುದೇ ಇಟಲಿಯ ಅಸೂಯೆಕ್ಕೆ ಕಾರಣವಾಗಿರುತ್ತದೆ. ಆಫ್ರಿಕೆಯ ವಾಯವ್ಯ ಖಂಡದಲ್ಲಿ ಫ್ರಾನ್ಸಕ್ಕೆ ಶ್ರೇಷ್ಠತ್ವವೇಕೆಂದು ಈತನು ಧಾರಾಳವಾಗಿ ಪ್ರಶ್ನೆ ಮಾಡಿ, ವಿಲಾಯತಿಯನ್ನು ನಡುಗಿಸಿದ್ದಾನೆ. ಇಟಲಿಯು ಫ್ರಾನ್ಸವನ್ನು ಶತ್ರುವಿನಂತೆ ನೋಡುತ್ತಿರುವಾಗ, ಫ್ರಾನ್ಸವಾದರೂ ಇಟಲಿಯನ್ನು [illegible]. ಇಟಲಿಯು ಗ್ರೀಸವನ್ನು ಪೂರಾ ತನ್ನ ಹಿಡಿತದಲ್ಲಿ ತಕ್ಕೊಂಡು, ಭಾವೀ ಯುದ್ಧದಲ್ಲಿ ಅದರಿಂದ ತನಗೆ ಸಹಾಯ ದೊರೆಯಬೇಕೆಂದು, ಅದಕ್ಕೆ ಬೇಕಾದಷ್ಟು ಮದ್ದು ಗುಂಡಿನ ಸಹಾಯ ಮಾಡುತ್ತಿರುವದು. ಗ್ರೀಸಕ್ಕಾಗಿ ಇಟಲಿಯ ಮದ್ದುಗುಂಡಿನ ಕಾರಖಾನೆಗಳು ಹಗಲಿರುಳು ವಿರಾಮವಿಲ್ಲದೆ ದುಡಿಯುತ್ತಿರುವವು. ಮಹಾಯುದ್ಧದ ವೇಳೆಯಲ್ಲಿ ಕ್ರುಪ ಕಾರಖಾನೆಯಲ್ಲಿ ತೋರಿದಂಥ ಚಟುವಟಿಕೆಯೇ ಸದ್ಯದಲ್ಲಿ ಇಟಲಿಯ ಕಾರಖಾನೆಗಳಲ್ಲಿ ತೋರುತ್ತಿರುವದು.

ಇಟಲಿಯು ಸಹ್ಯಸಾಗರಯಂತೆ ಆಫ್ರಿಕೆಯ ವಾಯವ್ಯ ಮೇರೆಯಲ್ಲಿಯೂ, ಪೂರ್ವದಲ್ಲಿ ತುರ್ಕಸ್ಥಾನದ ಮೇರೆಯಲ್ಲಿಯೂ ಒಂದೇ ವೇಳೆಯಲ್ಲಿ ಉರಿ ಎಬ್ಬಿಸಬೇಕೆಂದಿರುತ್ತದೆ. ಮುಖ್ಯವಾಗಿ ಭೂಮಧ್ಯ ಸಮುದ್ರದಲ್ಲಿ ಫ್ರಾನ್ಸದ ಗೌರವ ಪ್ರತಿಷ್ಠೆ ನಡೆಯಬೇಕಾಗಿರುವದಿಲ್ಲ. ಫ್ರಾನ್ಸವನ್ನು ಹತ್ತಿಕ್ಕುವಂತೆ ತುರುಕರನ್ನೂ ಹತ್ತಿಕ್ಕಬೇಕೆಂದು ಎರಡನೆಯ ಕಾವಿಚಾರವು. ತುರುಕರ ಜನರಿಂದ ಹೊಸ್ತಿಯಲ್ಲಿ ಉರಿಯುತ್ತಿದ್ದ ಗ್ರೀಸವನ್ನು ಬೆನ್ನಿಗೆ ಹಾಕಿಕೊಂಡ ಕಾರಣವಾದರೂ ಇದೇ. ಸ್ಮರ್ನಾದ ಯುದ್ಧದಲ್ಲಿ ಗ್ರೀಸವನ್ನು ಸೋಲಿಸಿದ ತುರ್ಕಸ್ಥಾನಕ್ಕಿಂತ ಈಗಿನ ತುರ್ಕಸ್ಥಾನದ ಸೇನಾಸಾಮರ್ಥ್ಯವು ಹೆಚ್ಚಿರುವದು. ಆದುದರಿಂದ ಕೇವಲ ಕುರೀಮರೀ ಮುರಿದ ನ್ಯಾಯದಂತೆ ತಮ್ಮ ಕೂದಲು ಕೊಂಕದೆ ತುರುಕರ ಆಸೆಯು [illegible]. ರಾಜಕಾರಣವು ಹೀಗೇ ಏಳುವದೆಂಬ ನಿಯಮವಿಲ್ಲದ್ದರಿಂದ, ತುರುಕರು ದಂಡಿನ ಸಿದ್ಧತೆ ನಡಿಸಿ, ಹೊಸ ಸೈನ್ಯ ಭರತಿ ಮಾಡುತ್ತಿದ್ದಾರೆ. ಯುದ್ಧ ಪ್ರಾರಂಭವು ಹಳೇ ರಾಜಧಾನಿಯಾದ ಕಾನ್ಸಟಾಂಟಿನೋಪಲ್ಲಿನಲ್ಲಾಗುವದು. ಇಲ್ಲಿಯ ಸಮುದ್ರದಲ್ಲಿ ಸುರಂಗ ಹಾಕಿ, ಮಾರ್ಮರಾ ಸಮುದ್ರದ ಬಾಗಿಲ ಕಾಯಬೇಕೆಂಬದೇ ತುರುಕರ ವಿಚಾರವಿದೆ. ಒಟ್ಟಿನಿಂದ ತುರುಕರ ಸ್ಥಿತಿಯು ಬಿಕ್ಕಟ್ಟಿನದಾಗಿದೆ. ಖಲೀಫರನ್ನು ಕಿತ್ತು ಹಾಕಿದ್ದರಿಂದ, ಜಿಹಾದ ಸಾರಿ, ಧರ್ಮ ಯುದ್ಧದ ನಿಶಾನೆ ಹಚ್ಚುವಂತಿಲ್ಲ. ಮಹಾಯುದ್ಧದಲ್ಲಿ ಅರಬರು ಸ್ವತಂತ್ರರಾಗಿರುವದರಿಂದ, ಅವರ ನೆರವು ದೊರೆಯುವ ಲಕ್ಷಣವಿಲ್ಲ. ರಶಿಯಾದ ಸಹಾಯ ದೊರೆಯಬಹುದು. ಪ್ರಜಾಸತ್ತಾತ್ಮಕವನ್ನು ಹಾಳುಗೆಡವಿ, ಪುನಃ ಬಾದಶಹಿಯನ್ನು ನೆಲೆಗೊಳಿಸಿದ ಇರಾಣದಲ್ಲಿ [illegible] ಮಾಡಿದರೆ ತುರುಕರು [illegible] ಬ್ರಿಟಿಶರ ದಣಿಯು ಇವರಿಗೆ ಸಹಾಯ ಮಾಡುವದು. ಹೀಗೆ ಅಪಾಯಾಂಧವರಾಗಿ ಒದಗೂ ಸಹ. ರಶಿಯವು ಬಲೂಚಿಸ್ಥಾನದವರೆಗೆ ಹಾಯ್ದು ಬರುವದು. ಇದರಿಂದ ಭೀತಿ [illegible]! ಇಟಲಿಗೆ ವಿರುದ್ಧವಾಗಿ ಬಹುಮಾನಿಸಿದ್ದಾರೆ. ಜರ್ಮನ ಸರಕಾರನ್ನು ಸ್ಟ್ರೆಸಮನ ದರಿಂದ ಯುದ್ಧ ಸಾಧ್ಯವಿಲ್ಲ. [illegible] ನಿಪುಣರು ವ್ಯಕ್ತಿ ಪಾತ್ರವಾಗಿ [illegible] ಸೈನ್ಯದಲ್ಲಿ ಸೇರಿ, ಇಟಲಿಗೆ ಭುಜಬಲ ಪರಾಕ್ರಮ ತೋರಿಸಬಹುದಾಗಿರುತ್ತದೆ.

ಇಪ್ಪತ್ತು ಸಾವಿರ ಸ್ತ್ರೀಯರು ಪ್ರಚಂಡ ಮೆರವಣಿಗೆ.

ಇಂಗ್ಲಂಡದಲ್ಲಿರುವ ಕಲ್ಲಿದ್ದಲಿಯ ಖಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರು ದುಡಿತ ಕಡಿಮೆಯಾಗಿ, ಕೂಲಿ ಹೆಚ್ಚಾಗಬೇಕೆಂದು ಮೇಲಿಂದ ಮೇಲೆ ಬಗಳ ತೆಗೆಯುತ್ತಾ ಬಂದಿದ್ದಾರೆ. ಕೂಲಿಕಾರರ ದಿವಾನಗಿರಿಯಲ್ಲಿ ಬಗಳವು ಹಾಗೆಯೇ ಹೋಗದೆ ನಿಂತಿತು. ಅವರ ದಿವಾನಗಿರಿಯು ಹೋದ ಕೂಡಲೆ, ಬಗಳವು ಪುನಃ ಎದ್ದು, ಬಿಕ್ಕಟ್ಟಿನ ಸ್ಥಿತಿಯು ಸದ್ಯದಲ್ಲಿ ಸರಕಾರದ ಬೊಕ್ಕಸದಿಂದ ಕೂಲಿಗೆ ಭರತಿ ಹಾಕಿ, ಇದನ್ನು ಸಮಾಧಾನ ಪಡಿಸಿದ್ದಾರೆ. ಇದು ಕಡೆತನಕ ಸಾಗದ ಮಾತು. ಆದುದರಿಂದ ಖಣಿಗಳ ಒಡೆಯರಿಗೂ ಕೂಲಿಕಾರರಿಗೂ ಒಡಂಬಡಿಕೆ ಮಾಡಿಸಬೇಕೆಂದು ಮಂತ್ರಿಗಳು ಸದ್ಯದಲ್ಲಿ ತೊಡಗಿದ್ದಾರೆ. ಇಂಗ್ಲಂಡದ ಜನರಿಗೆ ಇದು ಹೊಸತು ಬೇರೆಯೆಂದು ವಿಷಯವೇ ಸೂಚಿಸಲೊಲ್ಲದು. ಕೂಲಿಕಾರರ ಬೇಡಿಕೆಯಂತೆ ಕರಾರುಗಳಾಗದಿದ್ದರೆ ಕೂಲಿಕಾರರು ಸಂಪು ಮತ್ತು ಹರತಾಳದ ಹಾದಿ ಹಿಡಿಯುವರು. ಇವರಿಗೆ ಅನುಕೂಲವಾಗಿ ಬೇರೆ ಬೇರೆ ಕಾರಖಾನೆಗಳಲ್ಲಿ ದುಡಿಯುವ ಕೂಲಿಕಾರರೂ ಸಂಪು ಮಾಡುವರು. ಇಷ್ಟೇ ಅಲ್ಲದೆ, ಯುರೋಪದ ಬೇರೆ ಬೇರೆ ದೇಶಗಳ ಕೂಲಿಕಾರರ ಸಂಘಗಳು ಇವರಿಗೆ ಅನುಕೂಲವಾಗಿ ಸ್ವಹಸ್ತ ಪರಹಸ್ತದಿಂದ ಸಹಾಯ ಮಾಡುವವು. ರಶಿಯವಂತೂ ವಿಶಪ್ತ ಹಾಕುತ್ತಲಿದೆ. ಈ ಸಂಪಿನ ಸಂಕ್ರಾಂತಿ ಎದ್ದರೆ ಇಂಗ್ಲಂಡದ ತುಂಬ ಭಯಂಕರ ಅನರ್ಥವೇಳುವದು. ರೇಲ್ವೆಗಳು ಬಂದಾಗಿ, ಊರಿಂದೂರಿಗೆ ಅನ್ನವಸ್ತ್ರಗಳು ಮುಟ್ಟುವದು ಕಠಿಣವಾಗುವದು. ಅಂಬಿಗರು ಹಡಗಗಳನ್ನು ನಡಿಸಲಾರರು. ಪರದೇಶಗಳ ಕೂಲಿಕಾರರೂ ಸಂಪಿನಲ್ಲಿ ಸೇರುವದರಿಂದ ಹೊರಗಿನಿಂದಲೂ ಆಹಾರಗಳು ಬರಲಾರವು. ಈ ಅನರ್ಥ ಪರಂಪರೆಯ ಪರಿಣಾಮವು ಅತ್ಯಂತ ಭಯಂಕರವಾಗಿ ಪರಿಣಮಿಸುವದು. ಯಾದವರಂತೆ ಹೊಡೆದಾಡುವದೂ ಸಂಭವನೀಯವಿದೆ. ಇಂಥ ಅನಿಷ್ಟ ಪ್ರಸಂಗ ಒದಗಬಾರದೆಂದೂ, ಕೂಲಿಕಾರರ ಸಂಪಿನ ವಿರುದ್ಧ ತಮ್ಮ ಮತಪ್ರದರ್ಶನವನ್ನು ಬಾಹೀರ ರೀತಿಯಾಗಿ ವ್ಯಕ್ತಪಡಿಸಲೋಸುಗ ಲಂಡನ ಪಟ್ಟಣದಲ್ಲಿ ೨೦ ಸಾವಿರ ಸ್ತ್ರೀಯರ ಪ್ರಚಂಡ ಮೆರವಣಿಗೆ ಹೊರಟಿತ್ತು. ಈ ಮೆರವಣಿಗೆಗಾಗಿ ದೂರದೂರಿನ ಪಟ್ಟಣಗಳ ವೃದ್ಧ ಸ್ತ್ರೀಯರು ಸಹ ಬಂದಿದ್ದರು. ಕೂಲಿಕಾರರ ಅಭಿಮಾನಿಗಳಾದ ಬೊಲ್ಸೆವಿಕ ಪಕ್ಷದವರು ಇವರನ್ನು ವಿರೋಧಿಸುವದಕ್ಕಾಗಿ ಗೊಂದಲವೆಬ್ಬಿಸಿದರು. ಇಟಲಿಯಂತೆ ಈ ದೇಶದಲ್ಲಿಯೂ ಫಾಸಿಸ್ಟ ಪಂಥವು ಪ್ರಬಲವಾಗುತ್ತಾ ನಡೆದಿದೆ. ಇವರು ಬೋಲ್ಸೆವಿಕರನ್ನು ತಡೆದು, ಹೊಡೆದಾಡಿ, ಅವರ ಸ್ವಾತಂತ್ರ್ಯದ್ಯೋತಕವಾದ ಎರಡು ನಿಶಾನೆಗಳನ್ನು ತಕ್ಕೊಂಡರು. ಈ ಬಗಳವನ್ನು ಹೊರ್ತುಪಡಿಸಿ, ಸ್ತ್ರೀಯರ ಮೆರವಣಿಗೆಯು ಯಶಸ್ವಿಕರವಾಯಿತು. ಕೂಲಿಕಾರರು ಸಂಪು ಮಾಡಿದರೆ ಸ್ತ್ರೀಯರಂತೆ ಫಾಸಿಸ್ಟರೂ ಅವರನ್ನು ವಿರೋಧಿಸುವರು. ಈ ವಿರೋಧವೇ ರಕ್ತಪಾತಕ್ಕೆ ಕಾರಣವಾಗುವದು. ಇಂಗ್ಲಿಷ ಜನರು ಹಿಂದುಸ್ಥಾನದಲ್ಲಿ ಮಹಾತ್ಮರ ಅಹಿಂಸೆಯ ಅನುಕರಣ ಸ್ತುತಿ ಮಾಡುತ್ತಾರೆ. ಇದೇ ಚಿಕಿತ್ಸೆಯದೇಶವನ್ನು ಇಂಗ್ಲಂಡದ ಜನರಿಗೇಕೆ ಮಾಡಬಾರದು?

ಮೈರಪೂರ ಸಂಸ್ಥಾನದ ಜೀವಚ್ಛವ ಸ್ಥಿತಿಯು.

ಮೈರಪೂರ ಸಂಸ್ಥಾನದಲ್ಲಿ ಅನಾಯಕತನ ಮಾಡಿದ್ದು, ಅಲ್ಲಿಯ ಒಡೇರಯಲ್ಲಿ ಇಲಿಯು [illegible] ತ್ತಿರುವದೆಂಬ ಸಮಾಚಾರವನ್ನು ಈ ಮೊದಲು ಬರೆದಿರುತ್ತೇವೆ. ಇದು ಸಣ್ಣಪುಟ್ಟ ಸಂಸ್ಥಾನವಲ್ಲ. [illegible] ಲಕ್ಷದ ಆದಾಯವು. ಹೋದ ವರ್ಷ ೩೦, ೩೩, ೯೯೯ ರೂಪಾಯಿ ಜಮೆ ಮತ್ತು [illegible] ರೂಪಾಯಿ ಖರ್ಚೆಂದು ತೋರಿಸಿದ್ದಾರೆ. ಲೆಕ್ಕದಲ್ಲಿ ನವಾಬರ ವೆಚ್ಚವನ್ನು ಬೇರೆ ತೋರಿಸಿದ್ದಾರೆ. ಅವುಗಳ ವಿವರ—

ರಾಜಮಹಿಯರ ಪೋಷಣ- ೯೦,೩೭೮

ದರಬಾರದ ಪ್ರತಿಷ್ಠೆಗಾಗಿ- ೫೦,೨೧೫

ನವಾಬರ ಸ್ವಂತ ವೆಚ್ಚ- ೩೭,೮೯೮

ಸಂಸ್ಥಾನದ ಕಾರಭಾರದ ವೆಚ್ಚವು ಹತ್ತು ಲಕ್ಷಕ್ಕಿಂತ ಹೆಚ್ಚಿರುವದಿಲ್ಲ. ವಾಸ್ತವಿಕವಾಗಿ ವೆಚ್ಚ ಹೋಗಿ ಇಪ್ಪತ್ತು ಲಕ್ಷದ ಉಳಿತಾಯವಾಗಬೇಕು. ಆದರೆ ಒಂದು ಕಾಸು ಕೂಡ ಇರುವದಿಲ್ಲ. ನವಾಬರು ನೋಡಲಿಕ್ಕೆ ಚಂದರಿದ್ದರೂ, ವಿಲಾಸದಲ್ಲಿಯೇ ಕಾಲ ಕಳೆಯುವರು. ಹೋದ ವರ್ಷ ಪುಣೆಗೆ ಬಂದಾಗ, ನಾಗಲಿಂಗಪ್ಪನಂತೆ ದುಷ್ಟ ಸೂಕೆ ಮಾಡಿದರು. ಅಗ್ಗೇ ಟೀಕೆಯಾಯಿತು. ಇವರಿಗೊಬ್ಬ ತಮ್ಮನಿದ್ದಾನೆ. ಈತನ ಹೆಸರು ಗುಲಾಮಲ್ಲಿಯು. ಈತನು ಸವಾಬಸಾಹೇಬರ ಪ್ರಾಯವ್ಹೇಟ ಮತ್ತು ಮಿಲಿಟರಿ ಸೇಕ್ರೆಟರಿಯಾಗಿದ್ದಾನೆ ಯುವರಾಜನೇ ಆಗಿದ್ದನು. ಇತ್ತಲಾಗಿ ನವಾಬರಿಗೆ ಮಗನು ಹುಟ್ಟಿದ್ದರಿಂದ ನವಾಬಗಿರಿಯು ತಪ್ಪಿದೆ. ಈತನು ಹೇಳಿದ್ದನ್ನು ನವಾಬರು ಕೇಳುವರು. ತಮ್ಮ, ಮೇಲಾಗಿ ಪ್ರಾಯವ್ಹೇಟ ಮತ್ತು ಮಿಲಿಟರಿ ಸೇಕ್ರೆಟರಿಯು ಇವನ ಅಪ್ಪಣೆಯಿಲ್ಲದೆ ಯಾವದೊಂದು ಪತ್ರವಾಗಲಿ, ಜನರು ನವಾಬರನ್ನು ಕಾಣುವದು ಕಠಿಣವಾಗಿದೆ. ಹೀಗಾಗಿ ನಿಜವಾದ ನವಾಬನು ತಮ್ಮನೇ ಆಗಿದ್ದಾನೆ. ಈತನ ವಿಚಾರ ಹೇಗಿದ್ದರೂ, ಸಂಸ್ಥಾನದ ಆಡಳಿತೆಯು ಸರಿಯಾಗಿ ನಡಿಯಬೇಕೆಂದು ಮುಂಬಯಿ ಸರಕಾರದವರು ಒರಿಯಂಟಲ ಟ್ರಾನ್ಸಲೇಟರರಾಗಿದ್ದ ಮಿ. ಶೇಖ ಯಾಕುಬ ಮಹೇರ ಮಹಮ್ಮದ ಸಾಹೇಬರನ್ನು ದಿವಾನರನ್ನಾಗಿ ಕಳಿಸಿದರು. ಎರಡನೆಯ ಬಾಜೀರಾಯನ ಕಾಲದಲ್ಲಿ ನಾನಾ ಫಡನವೀಸ ನಂಥ ಚತುರ ಮಂತ್ರಿ ಇದ್ದನಲ್ಲ? ಅದೇ ತರಹದ ದುರವಸ್ಥೆಯು ಈ ದಿವಾನರಿಗೆ ಪ್ರಾಪ್ತವಾಯಿತು. ಯಾವದೊಂದು ಸಂಸ್ಥಾನದ ಕಾರಭಾರದಲ್ಲಿ ಕೈ ಹಾಕಬಾರದೆಂದು ಹಿಂದೆ ಸ್ಥಾನ ಸರಕಾರದ ಪ್ರಸ್ತುತ ಮತವು. ಆ ಪ್ರಕಾರ ಅವರು ಅಲ್ಲಿ ನಡೆದ ದುಂದುಗಾರಿಕೆ ಮತ್ತು ಅನ್ಯಾಯಕತನದ ವರ್ತಮಾನ ಕೇಳುತ್ತಿದ್ದರೂ, ತಾಟಸ್ಥ್ಯಭಾವದಲ್ಲಿದ್ದರು. ಅನಾಯಕತನದ ಅತಿರೇಕವಾಗಿ ದಿವಾನರ ಜೀವದ ಮೇಲೆ ಸಂಕಟ ಬಂದ ವರ್ತಮಾನ ಕೇಳಿ, ಸರಕಾರದವರು ಎಚ್ಚತ್ತಿದ್ದಾರೆ. ಸಂಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಸರಿಪಡಿಸಲೋಸುಗ ಒಬ್ಬ ಯುರೋಪಿಯನ್ನ ಅಮಲದಾರನನ್ನು ನೇಮಿಸಿ, ದುಂದುಗಾರಿಕೆಯಿಂದ ದ್ರವ್ಯಹಾನಿ ಮಾಡುವ ನವಾಬ ಮತ್ತು ಅವರ ತಮ್ಮನ ಕೈ ಕಟ್ಟುವರು. ಸಾಹೇಬಬಹಾದ್ದೂರನು ಇದೇ ಅವಿವೇಕ ವಾತಾವರಣದಲ್ಲಿ ಬೆಳೆದರೆ ಕೆಟ್ಟು ಹೋಗುವನೆಂಬ ಹೆದರಿಕೆಯಿಂದ ಶಿಕ್ಷಣಕ್ಕಾಗಿ ಒಬ್ಬ ಸಾಹೇಬರನ್ನು ನೇಮಿಸಿ, ಇವನನ್ನು ವಿಲಾಯತಿಯ ಶುದ್ಧ ಹವೆಗೆ ಕಳಿಸುವರು.

ಕಾಂಗ್ರೆಸದ ಜಯಜಯಕಾರ.

ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ಒಪ್ಪಂದ.

ಮಹಾತ್ಮರ ಸನ್ನಿಧಾನದಲ್ಲಿ ಕೂಡಿದ ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ಪ್ರತಿನಿಧಿಗಳ ನಡುವೆ ಎರಡು ದಿವಸಗಳ ತನಕ ಪ್ರೇಮಪೂರ್ವಕವಾದ ವಾದವಿವಾದವಾದ ನಂತರ, ಉಭಯತರ ನಡುವೆ ರಾಜೀ ಆದಂತೆ ಚಾರ್ಟರ ಮಾಡಲ್ಪಟ್ಟಿತು. ವಾದದ ಮುಖ್ಯ ಪ್ರಶ್ನವು ದಿವಾನಗಿರಿಯನ್ನು ಅಂಗೀಕರಿಸಿ, ಸರಕಾರದ ಹೊಕ್ಕೆಯೊಳಗೆ ಹೊಕ್ಕು ಬೆನ್ನಲ್ಲಿ ಬರಿಯಬೇಕೆಂಬತ್ತು. ಯಾವದೊಂದು ಪಕ್ಷದ ಬಹುಮತವಾದರೆ ಅದಕ್ಕೆ ದಿವಾನಗಿರಿಯನ್ನು ಕೊಟ್ಟು ಹೊರ್ತು ಸರಕಾರದ ಆಟ ನಡಿಯಲಿಲ್ಲ. ಸ್ವರಾಜ್ಯ ಪಕ್ಷೀಯರ ಬಹುಮತವಿದ್ದರೂ, ಅವರು ದಿವಾನಗಿರಿಯನ್ನು ಅಂಗೀಕರಿಸಲಿಲ್ಲ. ಯಾಕಂದರೆ ದಿವಾನಗಿರಿಯು ಕುಂಬಕೋಣದ ಪಟ್ಟಣದ ದೊರೆತನದಂತಿರುವದು. ಅಧಿಕಾರ, ಜವಾಬದಾರಿ ಮತ್ತು ಕಾರ್ಯಕರ್ತೃತ್ವದ ಜವಾಬದಾರಿಯಿದ್ದರೇ ಮಂತ್ರಿಪದವನ್ನು ಅಂಗೀಕರಿಸತಕ್ಕದೆಂದು ಫರೀದಪೂರದಲ್ಲಿ ಸ್ವರ್ಗವಾಸಿ ದೇಶಬಂಧು ದಾಸರು ಜಾಹೀರ ರೀತಿಯಿಂದ ಸರಕಾರಕ್ಕೆ ತಿಳಿಸಿದ್ದಾರೆ. ಆ ಪ್ರಕಾರ ಸರಕಾರವು ವಚನ ಮತ್ತು ಅಧಿಕಾರ ಕೊಟ್ಟರೆ ಮಂತ್ರಿಗಳಾಗತಕ್ಕದ್ದೆಂದು ತಿಪ್ಪಾಣಿಯಲ್ಲಿ ಕರಾರಾಗಿ ಉಭಯ ಪಕ್ಷಗಳ ಐಕ್ಯವಾಯಿತು. ಇದೇ ಕಾಂಗ್ರೆಸದ ಜಯಜಯಕಾರವು. ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಜಯಭೇರಿ ಹೊಡೆಯುವದೆಂದು ಖಂಡಿತವಾಯಿತು.

ದಾಸ್ಯಕ್ಕೆ ಜ್ಞಾನಮಂಟಪ!!!

ಹಿಂದುಸ್ಥಾನ ಸರಕಾರದವರು ಸ್ಟೇಟ ಸೇಕ್ರೆಟರಿಯವರ ಮತ ತಕ್ಕೊಂಡು ನಾಗಪೂರ ಇಲಾಖೆಯ ದ್ವಿದಳ ದೊರೆತನದ ಕಾರಭಾರವನ್ನು ೧೯೨೭ನೆಯ ಇಸವಿಯ ಪ್ರಾರಂಭದ ತನಕ ನಿಲ್ಲಿಸಿದ್ದಾರೆ. ಸರಕಾರದ ಈ ಕೃತ್ಯವು ದಾಸ್ಯಕೀಲಿಯನ್ನು ಧ್ವಂಸ ಮಾಡಬೇಕೆಂಬ ಕಾಂಗ್ರೆಸದ ಪ್ರತಿಜ್ಞೆಯನ್ನು ಪೂರ್ಣ ಮಾಡಿದಂತಾಯಿತು. ಹೊಸ ಚುನಾವಣೆಯಲ್ಲಾದರೂ ಮೆಂಬರರು ಮಂತ್ರಿಪದವನ್ನು ಅಂಗೀಕರಿಸುವರೆಂದು ಸರಕಾರದ ಆಸೆ. ಆದರೆ ಕಾಂಗ್ರೆಸದ [illegible] ವರ್ತಮಾನ ಕೇಳಿ, ಸರಕಾರವು ನಿಟ್ಟುಸಿರು ಹಾಕಬೇಕಾದ ಪ್ರಸಂಗ ಬರಬಹುದು. [illegible] ದಿವಸದಲ್ಲಿ ಆ [illegible] ಜ್ಞಾನಮಂಟಪವಲ್ಲ!

ರಾಜಿಯ ಎರಡನೆಯ ಸಂಧಾನ.

ಕಾಂಗ್ರೆಸದ ಎರಡು ಅಂಗಗಳಾದ ಸ್ವರಾಜ್ಯ ಮತ್ತು ಪ್ರತಿಯೋಗಿ ಸಹಕಾರಿಗಳ ನಡುವೆ ರಾಜಿಯಾಯಿತಷ್ಟೇ; ಇಂಗ್ರೇಜಿ ಪತ್ರಕಾರರು ಈ ರಾಜಿಯ ಕುಚೇಷ್ಟೆ ಮಾಡುತ್ತಲಿದ್ದಾರೆ. ದೇಶದಲ್ಲಿ ಒಡಕು ಹುಟ್ಟಿದಷ್ಟು ಇವರಿಗೆ ಆನಂದ. ಒಕ್ಕಟ್ಟಾದರೆ ದುಃಖ. ಒಕ್ಕಟ್ಟಾದದ್ದನ್ನು ಕಂಡು, ಸಂತಾಪದಿಂದ ಹೀಯಾಳಿಕೆ ಟೀಕೆ ಮಾಡುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ಲಾಲಾ ಲಜಪತರಾಯರು ರಾಜಿಯು ಅಂತಃಕರಣಪೂರ್ವಕವಾಗಿ ಆದುವದಲ್ಲದೆ, ನಿಜವಾದದ್ದಿರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ರಾಜಿಯ ನಂತರ ಸಂಯುಕ್ತ ರಾಷ್ಟ್ರೀಯ ಸಂಘ ಮತ್ತು ಕಾಂಗ್ರೆಸದ ನಡುವೆ ರಾಜೀ ಮಾಡಿಸಬೇಕೆಂದು ದೇವೀ ಸರೋಜಿನಿಯವರು ವಿಚಾರ ಮಾಡಿ, ಆ ಪ್ರಕಾರ ಸಂಯುಕ್ತ ರಾಷ್ಟ್ರೀಯ ಮಂಡಲದ ಪ್ರಮುಖ ಗೃಹಸ್ಥರಿಗೆ, ಅಹಮದಾಬಾದಿನಲ್ಲಿ ಮೇ ತಿಂಗಳ ೫ ನೆಯ ತಾರೀಖಿನ ಭರವ ಕೂಡುವ ಆಲ ಇಂಡಿಯಾ ಕಾಂಗ್ರೆಸ ಕಮಿಟಿಗೆ ಬರಬೇಕೆಂದು ಆಮಂತ್ರಣ ಕಳಿಸಿದ್ದಾರೆ. ಈ ರಾಜಿಯಾದರಂತೂ ಇಂಗ್ರೇಜಿ ಪತ್ರಕಾರರು ಅಂಗಾಲಿನಿಂದ ನಡುನೆತ್ತಿಯ ತನಕ ಉರಿಯುವರು.

ಬೆಳಗಾವಿಯ ವಕೀಲರಾದ ಶ್ರೀ. ನರಸಿಂಗರಾವ ಬಾಳೆಕುಂದ್ರಿಯವರು ಸ್ವರ್ಗಸ್ಥರಾದರೆಂದು ಬಹು ದುಃಖದಿಂದ ಪ್ರಕಟಿಸುತ್ತೇವೆ.

ಸವದತ್ತಿಯ ಪತ್ರವು.

ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಎರಡು ಪಂಗಡಗಳಾಗಿರುತ್ತವೆಂಬುದು ವಿಜಯದಲ್ಲಿ ಈ ಮುಂದಾಗಿ ಪ್ರಸಿದ್ಧವಾಗಿದ್ದು ಒಪ್ಪೇ ಪ್ರಕರಣವು ವಿಕೋಪಕ್ಕೆ ಹೋಗಿರುತ್ತದೆ. ಆಗ ಚೇರಮನ ಪಕ್ಷ, ಪ್ರೆಸಿಡೆಂಟ ಪಕ್ಷವೆಂದಿದ್ದವು. ಈಗ ಬ್ರಾಹ್ಮಣ-ಬ್ರಾಹ್ಮಣೇತರ ಪಕ್ಷ ಸೇರಿ ಒಂದು, ಮತ್ತು ಬ್ರಾಹ್ಮಣೇತರರು ಮಾತ್ರ ಒಂದು ಈ ಪ್ರಕಾರ ಎರಡು ಪಕ್ಷಗಳಾಗಿರುತ್ತವೆ.

ತ್ರೈವಾರ್ಷಿಕ ಚುನಾವಣೆಯಾಗಿ ಒಂದೇ ವರ್ಷವಾದರೂ ಮೂರು ನಾಲ್ಕು ಉಪ ಚುನಾವಣೆಗಳಾದವು. ಚೇರಮನ್ನರಾಗಿದ್ದ ಮಿ. ಕೊಟ್ರಪ್ಪ ನುಮಿದಾರ್ಪೂರ ಇವರು ಸ್ವರ್ಗಸ್ಥರಾದ್ದರಿಂದ ಇವರ ಜಾಗೆಯ ಚುನಾವಣೆಯಲ್ಲಿ ಮೂವರು ಉಮೇದವಾರರಿದ್ದರು. ಪ್ರೆಸಿಡೆಂಟ ಸಾಹೇಬರು ಮಿ. ಮುರಿಗಯ್ಯಾ ಕೂಡ್ಲಿಮಠ ಇವರ ಅರ್ಜಿಯನ್ನು ರದ್ದು ಮಾಡಿದರು. ಇದರ ವಿರುದ್ಧ ಪ್ರಕರಣವು ಹಾಯಕೋರ್ಟಿಗೆ ಹೋಗಿದೆ.

ಉಳಿದ ಇಬ್ಬರಲ್ಲಿ ಮಿ. ಬಾಲಪ್ಪಾ ಎಂಬವರು ಪ್ರೆಸಿಡೆಂಟರ ಸಹಾಯದಿಂದ ಆರಿಸಲ್ಪಟ್ಟರು. ಈ ಚುನಾವಣೆಯಿಂದ ಪ್ರೆಸಿಡೆಂಟ ಪಕ್ಷದ ಬಲ ಹೆಚ್ಚಾಗಿರುತ್ತದೆ.

ಮಿ. ಬಸನಗೌಡ [illegible] ವಿರುದ್ಧ ಪಕ್ಷದ [illegible] ಯು ಕಲೆ ಸಟ್ಟಿಯ [illegible] ಬಂಗಾರಿರದ್ದಾರೆಂದೂ [illegible] ತಾಪ್ಪಕ್ಕೆಂದೂ ಹೇಳಿ, [illegible] ದ್ದು ಮಾಡಿ, [illegible] ಹೊಸ ಇಟ್ಟಿದ್ದೆಂದೂ, ಪ್ರಾಕ [illegible] ಳಿದರೂ, ಅಧ್ಯಕ್ಷರು [illegible] ವಿರುದ್ಧ ಮಿ. ಬಸನಗೌಡರು ವೆ. ಕಲೆಕ್ಟರ ಸಾಹೇಬರ ಕಡಿಗೆ ಅರ್ಜಿ ಮಾಡಿದ್ದಕ್ಕೆ ಪ್ರೆಸಿಡೆಂಟರಿಗೆ ಕೇಳಿಗೆ ಬರೆದ ಪ್ರಕಾರ [illegible] ದ್ದಾರೆ.—

"ನಾನು ಗ್ಯಾಜುಯೆಟ್ನ [illegible] ನನ್ನನ್ನು ಸ್ವತಂತ್ರವಾಗಿ [illegible] ಅಧಿಕಾರವಿಲ್ಲ. ನನ್ನ [illegible] ಇಲ್ಲವಾದರೆ ನಾಲ್ಕು [illegible] ನಹಾನಿಯ ಫಿರ್ಯಾದಿ ಮಾಡುವೆನು." [illegible] ಬಾಗುವದನ್ನು ಬರೆಯುವೆನು.

ಯಲ್ಲಪ್ಪನ ಗುಡ್ಡದಲ್ಲಿ ನೀರಿನ ಕಾರ್ಖಾನೆಯು ಬಹಳವಿದೆ. ಮುಳಗಡಲೆ ಬೆಳೆದು ಜಾತ್ರೆಕರಿಗೆ ಇಳಕೊಳ್ಳಲಿಕ್ಕೆ ಸ್ಥಳವಿಲ್ಲ. ಹಿಂದಿನ ಪ್ರೆಸಿಡೆಂಟರಾದ ಮಿ. ಹಂಪಣ್ಣನವರು ಸಳ ತರದ ವಿಚಾರ ಮಾಡಿ, ಸರಕಾರದ ಸಹಾಯ ಬೇಡಕ ಕೇಳಿದ್ದರು. ಪ್ರಸ್ತುತದ ಪ್ರೆಸಿಡೆಂಟರು ಅನಾಯಾಸವಾಗಿ ದೊರೆತ ಅಧಿಕಾರದ ಸದುಪಯೋಗ ಮಾಡಿ ಶ್ರೀ ಹಂಪಣ್ಣನವರ ಯೋಜನೆಯಂತೆ ಸಳ ತರಿ, ಮುಳಗಡಲೆಯನ್ನು ಆರಿಸಿ, ಜನರಿಗೆ ಅನುಕೂಲ ಮಾಡಿಕೊಡುವ [illegible] ಕರ್ತವ್ಯವಾಗುವದಿಲ್ಲವೇ! ಕಲೆ ಪಟ್ಟಿಯ, ಪಗಡಿಯು ಬೇಕಾದಷ್ಟು ಬರುತ್ತದೆ. ಆದರಿಂದ ಬೇಕಾದಷ್ಟು ಲೋಕೋಪಯೋಗಿ ಕೆಲಸಗಳನ್ನು ಮಾಡುವಂತಿದೆ ಆದರೆ ಅಂಥ ವಿಚಾರ ಮಾತ್ರ ಬೇಕು!!

ಸವದತ್ತಿಯಲ್ಲಿ ಆಶ್ಚರ್ಯಯು ಕುರುಡನಿಗ ಕಣ್ಣು ಬಂದವು.

—o—

ಸವದತ್ತಿಯಲ್ಲಿ ಬಬ್ಬ ಬಡಿಗರ ಹೆಣ್ಣುಮಗಳಿಗೆ ಎರಡು ಮೂರು ತಿಂಗಳ ಹಿಂದೆ ಒಂದು ಗಂಡು ಕೂಸು ಹುಟ್ಟಿತು. ಅದರ ಕಣ್ಣೇ ಕಾಣಿಸುತ್ತಿದ್ದಿಲ್ಲ. ಕಣ್ಣು ಹೋಗಿದ್ದವು. ತಾಯಿಯು ಆರೇಳು ದಿವಸಗಳ ಹಿಂದೆ ಮೃತಪಟ್ಟಳು. ತಾಯಿಯು ದೈವಾಧೀನವಾದನಂತರ ಅದಕೆ ಕಣ್ಣು ಬಂದಿರುತ್ತವೆ. [illegible] ದೈವದಾಟವು ವಿಚಿತ್ರವಾದದ್ದು.

ಸವದತ್ತಿ ತಾಲೂಕ ಬರೀಕಟ್ಟಿಯಲ್ಲಿ ಒಂದು ಆಕಳಿಗೆ ಒಂದು ಹೋರಿ ಹುಟ್ಟಿದೆ. ಅದಕ್ಕೆ ಮೂರು ಕಣ್ಣುಗಳಿರುವವು. ಮೂರೂ ಕಣ್ಣು ಕಾಣುತ್ತವೆ. ಅನೇಕ ಜನರು ಇದನ್ನು ನೋಡಲಿಕ್ಕೆ ಹೋಗುತ್ತಿದ್ದಾರೆ.

ಪಾನಗಲ್ಲಿನ ರಾಜರ ಪಾಂಡಿತ್ಯವು.

—o—

ಮಠದ ಕಡಿದು ಪ್ಪು ಮೇಲೆ ಬಾಚಿಕೊಂಡರು

—o—

ಮದ್ರಾಸದ ಮುಖ್ಯ ಮಂತ್ರಿಯಾದ ಪಾನಗಲ್ಲಿನ ರಾಜರು ಪಾಂಡಿತ್ಯದ ಪ್ರದರ್ಶನ ಮಾಡಿಕೊಂಡು ತಾವಾಗಿ ಜಗತ್ತಿನ ಕುಂಬ ಅಪಹಾಸ್ಯ ಮಾಡಿಕೊಂಡಿದ್ದಾರೆ. ಸಂದ್ರಸ ಪ್ರೈಸಿಗಾಲಿಟಿಯವರು ಮುನಸಿಪಲ್ ಸಭಾ ಮಂಗಲದಲ್ಲಿ ಮಹಾತ್ಮರ ಭವ್ಯವಾದ ಚಾಯಾಪಟವನ್ನಿಡಬೇಕೆಂಬ ಠರಾವು ಮಾಡಿದರು ಇದರ ನಿಷ್ಟವನ್ನು ಮಂಜೂರ ಮಾಡುವ ಅಧಿಕಾರವು ಪಾನಗಲ್ಲಿನ ರಾಜರದಾಗಿತ್ತು. ವಿಷಯ ಸ್ವಲ್ಪದೇಲ್ಲಿತ್ತು ಒಂದೇ ಸಹಿಯು ಬೀಳಬಾಯಿತು. ಆದರೆ ರಾಜರು ವಿಷಯುಕ್ತಿಂತ ಮಹಾತ್ಮರ ಅಪಹೇಳನೆ ಮಾಡುವದನ್ನು ಹೆಚ್ಚಾಗಿ ಎಣಿಸಿ, ಠರಾವು ಮಂಜೂರ ಮಾಡಲಿಲ್ಲ. ಇದೆಷ್ಟು ಘನವಂತಿಕೆಯ ಕೃತ್ಯವಾಗಲಿಲ್ಲ. ರಾಜರು ತಮ್ಮ ಮೂಗು ಕೊಯ್ದುಕೊಂಡು [illegible] ಅವಕಾಶ ಮಾಡಿಕೊಂಡಂತಾಯಿತು [illegible] ಗೃಹಸ್ಥರ [illegible]

[illegible] ಮಾತ್ರ [illegible] ಲೋಕಮಾನ್ಯ ತಿಲಕರನ್ನು [illegible] ಹೇಗೆ ಅಗಲಿ, ಮಹಾತ್ಮರ ಚಾಯಾಪಟವನ್ನು ಮ್ಯುನಿಸಿಪಾಲಿಟಿಯಲ್ಲಿ [illegible] ಹೊಂಬರು ಪಟ್ಟ ಕಟ್ಟಿ [illegible] ರಾಜರ ಅಧಿಕಾರವು ಸುರಕ್ಷಿತವೆಂದು [illegible]

ರಾಜರ ದೆಸೆಯಿಂದ ಸೈರಿದ ದಂಗ!

—o—

ಪೋಲಿಸ ನವ್ಪು ಇನ್ನ ಹಕ್ಕರಿಗೆ ಪ್ರಸರಿ ಹೊಡತ.

—o—

ಮದ್ರಾಸ ಇಲಾಖೆಗೆ ಸೇರಿದ ಸತ್ಯಮಂಗಳದ ಗ್ರಾಮದಲ್ಲಿ ಹೊಲದಲ್ಲಿ ಮಾಡಿದ ರಾಶಿಯ ದೆಸೆಯಿಂದ ಸ್ತ್ರೈವರೊಳಗೆ ಜಗಳ ಬಂತು. ಎರಡು ಪಂಗಡಗಳಾದವು, ದಂಗೆಯಾಗುವ ಸಂಭವ ದೇಶಿತು. ಸಬ್ಬ ಇನ್ಸಪೇಕ್ಟರರು ಶಸ್ತ್ರಧಾರಿಗಳಾದ ಸಿಪಾಯರನ್ನು ಕರಕೊಂಡು ಹೋದರು [illegible] ಕೂಡಿಕೊಂಡು, ಇನ್ಸಪೇಕ್ಟರನ್ನು ಸಿಪಾಯರನ್ನೂ ಪ್ರಸರಿ ಥಳಿಸಿದರು. ಈ ಪರ್ತಮಾನ ಕೇಳಿ, ಸಬ್ಬ ಡಿವಿಜನಲ ಮ್ಯಾಜಿಸ್ಟ್ರೇಟರು ನೋಟಾರದಲ್ಲಿ ಬಂದರು. ದಾರಿಯಲ್ಲಿಯೇ ಮೋಟಾರನ್ನು ಅಡ್ಡಗಟ್ಟಿದರು. ಮ್ಯಾಜಿಸ್ಟ್ರೇಟರು ಯುಕ್ತಿಯಿಂದ ಪಾರಾಗಿ, ಶಸ್ತ್ರಧಾರಿ ಪೋಲೀಸರ ಸಹಾಯದಿಂದ ಅನೇಕರನ್ನು ದಸ್ತಗಿರ ಮಾಡಿದರು. ಒಂದು ಸ್ಥಳದಲ್ಲಿ ನಾಲ್ವರಿಗಿಂತ ಹೆಚ್ಚು ಜನರು ನೆರೆಯಬಾರದೆಂದು ಊರೊಳಗೆ ಡಂಗುರ ಹೊಡಿಸಿ, ಪೋಲೀಸ ಕಾವಲಿಟ್ಟಿದ್ದಾರೆ.

ಕಾರವಾರ ಜಿಲ್ಹೆಯಲ್ಲಿ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಚುನಾವಣೆಯಲ್ಲಿ ಒಂಭತ್ತು ಜನ ಬ್ರಾಹ್ಮಣರು, ಇಬ್ಬರು ಲಿಂಗಾಯತರು ಮತ್ತು ಇಬ್ಬರು ಕೂಡಿ ಒಸರು ಆರಿಸಲ್ಪಟ್ಟಿದ್ದಾರೆ

ಬೆಳಗಾವಿಯಲ್ಲಿ ಕಟ್ಟುವ ಗಿಲಗಂಚಿ ಅರಟಾಳ ಹಾಯಸ್ಕೂಲಿಗಾಗಿ ವಂಟಮೂರಿಯ ಶ್ರೀಮಂತ ಸರದೇಸಾಯರು ೫೦ ಸಾವಿರ ಮತ್ತು ನಿಣದಿಯ ಶ್ರೀಮಂತ ದೇಸಾಯರು ೫ ಸಾವಿರ ರೂಪಾಯಿ ಕೊಟ್ಟಿರುತ್ತಾರೆ.

ಸರ ಪ್ರಾಂಕ ಹಿರ್ಸ ಪ್ರಿಂಗ್ಸ ಮುಂಬಯಿ ನಗರ ಸಭೆಯ ವಿಶೇಷ ಸಹಾಯಕರು ಮಾಡುವದು ಬಿಟ್ಟುಬಿಟ್ಟು ಬಂದಾಗಿ ಪರಲೋಕವಾಸಿಗಳಾದರು.

೧೭ ಚಿತ್ರಪಟಗಳುಳ್ಳದ್ದು (ಸಚಿತ್ರ ಶುಕ ಸಪ್ತತಿ ಕಥೆ) ೭೦ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀ ಪಾತಿವ್ರತ್ಯ, ಬ್ರಾಹ್ಮಣ, ಕ್ಷತ್ರಿ, ವೈಶ್ಯ, ಶೂದ್ರ ಈ ನಾಲ್ಕು ವರ್ಣದವರು ನಡೆಯತಕ್ಕ ಸದಾಚಾರವು ಧರ್ಮದ ಮುಂತಾದ ಸದ್ವಿಚಾರಗಳನ್ನು ಬೋಧಿಸುವದು.

೧ ಕಥಾ ರೂಪದಲ್ಲಿ ಚಿತ್ರಕಥಾ ಚಮತ್ಕಾರ ರೋಚಕವಾಗಿಯೂ, ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರೂ ಪುರುಷರೂ ಬಾಲಕರೂ ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕ ವ್ಯವಹಾರಕ್ಕೆ ಬೇಕಾದ ವಿಷಯಗಳು ಇದರಿಂದ ತಿಳಿದು ಬರುವವು. ೩. ಈ ಕಥೆಯನ್ನು ಓದುವದರಿಂದ ಮನಸ್ಸನ್ನು [illegible] ದಲ್ಲಿ ಬರವಂತೆ ಸದಾಚಾರದಲ್ಲಿಯೇ ನಡಿಯುವಂತೆ [illegible] ಉಂಟು ಮಾಡುವದು. ಬೇಕಾದವರು ವ್ಹಿ. ಪಿ. ಪೋಸ್ಟ ಮೂಲಕ [illegible]

ದಪ್ಪ ಕಾಗದ ಕ್ರಯ ಪ್ರತಿಯೊಂದಕ್ಕೆ ರೂಪಾಯಿ ಎರಡು, ಟಪಾಲ ಖರ್ಚು [illegible]

೧ ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಜನ ಕಥೆ. ಮೂರು ಭಾಗ ಸೇರಿದ್ದು ೬೧೩ ಪುಟಗಳು ಕ್ರಯ ೩-೪-೦ ೨ ಸಚಿತ್ರ ರಾಜಕುಂವರನ ಕಥೆ ४೮೦ ಪುಟಗಳು ಕ್ರಯ ೨-೨-೦

೩ ಸಚಿತ್ರ ಶ್ರೀರಾಮತತ್ವಸ್ತುತಿಯು ಸೀತಾರಾಮಾಂಜನೇಯ ಸಂವಾದ ೨೪೭ ಪುಟಗಳು ೧-೦-೦ ಇವುಗಳಿಗೆ ಟಪಾಲ ಖರ್ಚ ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ) ಗೆ ಬರೆದರೆ ಕಳಿಸಲಾಗುವದು.

ನಮ್ಮ ವಿಳಾಸ— ಎಸ್ಸ್. ಆರ್. ಕೃಷ್ಣಸ್ವಾಮಿ ಶೆಟ್ಟಿ, ಬುಕ್ಕಡಿಪೋ, ಚಿಕ್ಕಪೇಟೆ ಬೆಂಗಳೂರ ಸಿಟಿ.

ಮೂರನೇ ಕರ್ನಾಟಕ ಕೀರ್ತನ ಸಂಮೇಲನ

([illegible])

—o—

ಕೀರ್ತನ ಸಂಮೇಲನದ ಸಹಾಯಕ [illegible] [illegible] ದಯವಿಟ್ಟು [illegible] ಕಾಗಿಲ್ಲ

ಕನ್ನಡಿಗರ ಸೇವಕ

ರಂಗನಾಥ [illegible] ವಕೀಲ ಕೊಪ್ಪಳ,

ಸಹಾಯಕ [illegible] ಮೂರನೇ ಕರ್ನಾಟಕ ಕೀರ್ತನ ಸಮ್ಮೇಲನ,

ಮಹಾಶಯರೇ,

ನೀವು ನನ್ನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಬರೆದು ಕಳಿಸಿದ ಆಹ್ವಾನ ಪತ್ರಿಕೆಯು ಒಂದು ಮುಟ್ಟಿ [illegible] ಸಂತೋಷವನ್ನುಂಟು ಮಾಡಿತು ನೀವು ಕೈಕೊಂಡಿರುವ ಈ ಕರ್ನಾಟಕ ಕೀರ್ತನ ಸಮ್ಮೇಲನದ ಕಾರ್ಯವು ಅತಿ ಘನವಾದದರಿಂದ [illegible] ಕ್ಷರಿಂದ ಆಗತಕ್ಕದ್ದಲ್ಲ. ಪರಮ ಪವಿತ್ರವಾದ ನೀವು ಅತಿ ದೂರ ದೇಶದಲ್ಲಿರುವ ನನ್ನನ್ನು ಜ್ಞಾಪಕಕ್ಕೆ ತಂದುಕೊಂಡು ಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸಬೇಕೆಂದು ಉದ್ದೇಶಿಸಿರುವಲ್ಲಿ ಎಂಥ [illegible] ಮುಖ್ಯ [illegible] ದನೆಂಬ ಗಾದೆಯಂತೆ ಇಂಥ ಸಮಯವನ್ನು ಕಳೆದುಕೊಂಡರೆ ಆರಿಗೆ ನಷ್ಟವೆಂಬುದನ್ನು ನಾನು ತಿಳಿದಿರುವೆನಾದರಿಂದ ನಿಮ್ಮ ಸಂಮೇಲನವು ನಡೆಯುವ ಕಾಲದಲ್ಲಿ ಇಲ್ಲಿ ನನಗೆ ಅನೇಕ ಕೆಲಸಗಳಿದ್ದಾಗ್ಯೂ ಅವುಗಳನ್ನೆಲ್ಲ ದೂರೀಕರಿಸಿ ನಿಮ್ಮ ಕಾರ್ಯವೇ ಮುಖ್ಯವೆಂದು ತಿಳಿದು ಆಹ್ವಾನವನ್ನು ಮನಃಪೂರ್ವಕ ಅಂಗೀಕರಿಸಿರುವೆನು. ಸಂಮೇಲನಕ್ಕೆ ಸಂಬಂಧವಾದ ಹಿಂದಿನ ವರದಿಗಳಿದ್ದಲ್ಲಿ ಅವುಗಳನ್ನು ದಯವಿಟ್ಟು ಕಳುಹಿಸಿಕೊಡುವಿರೆಂದು ನಂಬುತ್ತೇನೆ.

४ ನೆಯ ಕರ್ನಾಟಕ ಪ್ರಾಂತೀಯ ಮಹಾಸಭೆಯ ಆಹ್ವಾನ ಮಂಡಳಿ, ಬಳ್ಳಾರಿ.

ಅಯ್ಯಾ,

ಬಳ್ಳಾರಿಯಲ್ಲಿ ಇದೇ ವರುಷ ಮೇ ತಿಂಗಳ ೨೯, ೩೦ ನೇ ತಾರೀಖುಗಳಲ್ಲಿ ನಾಲ್ಕನೆಯ ಕರ್ನಾಟಕ ಪ್ರಾಂತೀಯ ಮಹಾ ಸಭೆಯೂ ಕರ್ನಾಟಕ ಏಕೀಕರಣದ ಸಭೆಯೂ ಸಹಾ ಜರಗುವವು. ತಿಳಿಯುವದು.

ಕ. ಗುರುರಾಜಾಚಾರ್ಯ,

ಕ್ಯ. ತಿ. ಶ್ರೀನಿವಾಸಾಚಾರ್ಯರ,

ಡಿ. ಎಸ. ಹನುಮಂತರಾಯರು

ಕಾರ್ಯದರ್ಶಿಗಳು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಆಹ್ವಾನ ಮಂಡಳಿ, ಬಳ್ಳಾರಿ

ಅಯ್ಯಾ,

ಇದೇ ವರುಷ ಮೇ ತಿಂಗಳು ೨೭, ೨೮ ತಾರೀಖಿನಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಜರಗುವದು ತಿಳಿಯುವದು

ವೆಂಕಟೇಶ ಭೀಮರಾವ ಆಲೂರ,

ಶಿವರ ತಿಮ್ಮಯ್ಯ,

ಕಾರ್ಯದರ್ಶಿಗಳು.

ಪ್ರಕಟನೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ,

ಗದಗ.

—o—

ಬರುವ ಮೇ ತಿಂಗಳ ೭ ನೆಯ ತಾರೀಖು ಶುಕ್ರವಾರ ಅಪರಾಹ್ನ ४ ಘಂಟೆಗೆ ಹುಬ್ಬಳ್ಳಿಯಲ್ಲಿ ಶ್ರೀ ಸಿದ್ಧಾರೂಢರ ಜ್ಯೋತಿ ಇವರ ಮಂದಿರದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲದ ಸಾಧಾರಣ ಅಧಿವೇಶನವು ಜರಗುವದು. ಚರ್ಚಿಸತಕ್ಕ ವಿಷಯಗಳು ಮಹತ್ವವುಳ್ಳವುಗಳಾಗಿರುವದರಿಂದ ಯಾವತ್ತು ಸದಸ್ಯರು ದಯವಿಟ್ಟು ತಪ್ಪದೆ ಬರಬೇಕೆಂದು ಪ್ರಾರ್ಥನೆಯಿದೆ.

ಚರ್ಚಿಸತಕ್ಕ ವಿಷಯಗಳು.

(೧) ಶಾಸನ ಮಂಡಲಗಳಿಗೆ ಕಾಂಗ್ರೆಸ ಉಮೇದವಾರರನ್ನು ಆರಿಸುವದು.

(೨) ४೧ ನೆಯ ರಾಷ್ಟ್ರೀಯ ಮಹಾಸಭೆಯ ಸ್ವಾಗತ ಮಂಡಲದ ಲೆಕ್ಕ ತಪಾಸಿಗರು ಕಳಿಸಿದ ವರದಿಯ ವಿಚಾರ

(೩) ಕರ್ನಾಟಕದಲ್ಲಿ ಹಿಂದುಸ್ತಾನಿ ಸೇವಾದಲದ ಕಾರ್ಯವನ್ನು ಮುಂದುವರಿಸುವ ಕುರಿತು ಅ. ಭಾ. ರಾ. ಮಂಡಲದವರ ಠರಾವಿನಂತೆ ಪ್ರತಿನಿಧಿಗಳನ್ನು ನಿಯಮಿಸುವ ವಿಚಾರ.

(४) ಕಳೆದ ಸಭೆಗಳಲ್ಲಿ ಚರ್ಚಿಸದೆ ಉಳಿದ ವಿಷಯಗಳ ಚರ್ಚೆ.

(೫) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಅನ್ಯ ವಿಷಯಗಳು.

ಗಂಗಾಧರರಾವ ದೇಶಪಾಂಡೆ

ಕಾರ್ಯದರ್ಶಿ ಕ. ಪ್ರಾ. ಕಾ. ಕ

ಕುಲಕರ್ಣಿ ಸನ್ಸ ಕಂಪನಿ ಇವರ

೩, ४, ೭, ८, ಎತ್ತಿನ ४ ಪ್ರಕಾರದ

ವತನದಾರ ರೆಂಟೆಗಳು



ಹೆಚ್ಚಿನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ

ಕುಲಕರ್ಣಿ ಸನ್ಸ ಕಂಪನಿ

ಕೆಲೆ, ಧಾರವಾಡ

ವರ್ಗಣಿದಾರರಿಗೆ ಸೂಚನೆ.

ಏಪ್ರೀಲ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮುಂದಿನ ವರ್ಷದ ಪತ್ರಿಕೆಯ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯಾನೇಜರ ವಿಜಯ ಧಾರವಾಡ

ಆಶ್ಚರ್ಯಕರ! ಅಮೇರಿಕಾಖಂಡದ ಆಶ್ಚರ್ಯಕರ!!

ಪ್ರಸಿದ್ಧ ಡಾಕ್ಟರರೊಬ್ಬರು ಕಂಡು ಹಿಡಿದ ಸಿದ್ಧೌಷಧ

ಸರ್ವರಿಗೂ ಉಪಯೋಗವಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾಖಂಡದ ಪ್ರಖ್ಯಾತ ಡಾಕ್ಟರರೊಬ್ಬರು ಅನೇಕ ವರ್ಷಗಳಿಂದ ಬಹು ಧನ ವ್ಯಯಮಾಡಿಕೊಂಡು ಪರಿಶೋಧನೆಗಳನ್ನು ಮಾಡಿ ಕಂಡುಹಿಡಿದದ್ದು

ಎಲೆಕ್ಜಿರ್ ಆಫ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಉಪಯೋಗಿಸುವದರಿಂದ ... ಅನೇಕ ರೋಗಗಳಿಗೆ ... ಜೀವನಾಧಾರವನ್ನು ಕೊಟ್ಟು ಗುಣಪಡಿಸುತ್ತದೆ ...

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ... ಸೀಸೆ ಒಂದಕ್ಕೆ ೧-೮-೦ ಟಪಾಲು ಖರ್ಚು ಪ್ರತ್ಯೇಕ ...

ಜೀವನಾಧಾರ ಡಿಪೊ,
ಮೈಸೂರ.

ಬ್ರಾಂಚ— ಜೀವನಾಧಾರ ಡಿಪೊ,
ಹುಬ್ಬಳ್ಳಿ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರವರೆಗೆ ಶನಿವಾರ ೧೦ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲೂ ಖಾತೆಗಳು— ಪ್ರತ್ಯೇಕವಾಗಿ ತೆಗೆಯಲಾಗುವವು.

ಮುದ್ದತ ಠೇವುಗಳು— ಬಡ್ಡಿ ದರದಿಂದ ತೆಗೆದುಕೊಳ್ಳಲ್ಪಡುವವು.

ಸೇವಿಂಗ್ ಬ್ಯಾಂಕ— ...

ಸರಕಾರೀ ಹಾಗೂ ಇತರ ಕಾಗದಗಳು.

... ವ್ಯಾಪಾರೀ ಹುಂಡಿಗಳು ... ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಆರ್. ಎ. ...

ತಾ|| ... ಏಜಂಟ

ಆಯುರ್ವೇದಿ ಕಾರಖಾನಾ ಕಿತ್ತೂರ

ಮನ್ಮಥವಿಲಾಸ— ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ... ೩೦ ಗುಳಿಗೆಗಳಿಗೆ ೧ ರೂ.

ಹುರುಕಿನ ಔಷಧ— ...

ಕಣ್ಣಿನ ಔಷಧ— ...

ಹಲ್ಲಿನ ಔಷಧ— ...

ಜ್ವರದ ಗುಳಿಗೆ— ...

ಸೂಚನಾ— ... ಪುಸ್ತಕವನ್ನು ಪುಕ್ಕಟೆ ಕಳಿಸುವೆವು.

ಆಯುರ್ವೇದಿ ಕಾರಖಾನಾ, ಪೋ. ಕಿತ್ತೂರ ಜಿಲ್ಹಾ ಬೆಳಗಾವ

ಅಪೂರ್ವ ಗ್ರಂಥವು!!! ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ ಚಂದಾದಾರರಿಗೆ

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ... ವರೆಗೆ

ಅಕ್ಷರಶಃ ... ಪುಟ ಸಂಖ್ಯೆ ...

ಮುದ್ದಾದ ಮುದ್ರಣ ... ಅಪೂರ್ವವಾದ ಚಿತ್ರಗಳು.

ಬರಹಗಾರರು— ರಾಮಚಂದ್ರ ಹನುಮಂತ ದೇಶಪಾಂಡೆ ಎಮ್. ಎ.

... ಗ್ರಂಥವನ್ನು ... ವಿಮರ್ಶನ ... ಮುಂದಿನ ... ಸಿದ್ಧವಾಗುವದು. ಬೆಲೆಯು ವಿವರ—

	ರೂ. ಆ. ಪೈ
೧ ಶ್ರೀ. ವಿದ್ಯಾರಣ್ಯ ಪುಸ್ತಕ ಮಾಲೆಯ ಚಂದಾದಾರರಿಗೆ	೧—೪—೦
೨ ಮುಂಗಡವಾಗಿ ಹಣ ಕಳಿಸುವವರಿಗೆ	೧—೬—೦
೩ ಮೇಲ್ಕಂಡ ಅವಧಿಯಲ್ಲಿ ವ್ಹಿ. ಪಿ. ಯಿಂದ ಬೇಡುವವರಿಗೆ	೧—೭—೦

... ಗ್ರಾಹಕರು ... ಬರೆಯತಕ್ಕದ್ದು.

ಶ್ರೀ. ... ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ ... ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ, ಮಾಳಮಡ್ಡಿ ಧಾರವಾಡ. ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ. ಅಧಿಕಾರಿ

ಸರಕಾರದಲ್ಲಿ ರಿಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ರಕ್ತಶುದ್ಧಿ! ದ್ರಾಕ್ಷಾರ್ಕಮಧು ಧಾತುವರ್ಧಕ!

ಈ ಮಧುವು ... ಪ್ರಕೃತಿಗನುಸರಿಸಿ ... ಶರೀರ ... ರಕ್ತಶುದ್ಧಿ ... ಚಿಕ್ಕ ಬಾಟಲಿ ... ದೊಡ್ಡ ಬಾಟಲಿ ...

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ ಜಿ. ಬೆಳಗಾವ

ದಿ ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ

ಸರಕಾರ ಕಾಯ್ದೆಯ ಅಂದಾಜ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗುತ್ತದೆ. ಚಾಲೂ ಖಾತೆ, ಠೇವು, ... ಸಾಲ, ... ವ್ಯವಹಾರಗಳು ನಡೆಯುವವು. ...

ಈ ಬ್ಯಾಂಕಿನ ಕೆಲಸವು ಮುಂಜಾನೆ ... ನಡೆಯುವದು.

K. B. ANKALIGI.

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲವೇ? ... ಹಲ್ಲುಕಚ್ಚಿದೆಯೋ? ... ನೋಯುತ್ತದೆಯೇ? ...

ಅಪ್ಪನು— ಕಂದಾ— ಹೌದು ಮಯ್ಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ... ಒಂದೇ ಕ್ಷಣದಲ್ಲಿ ... ಮಾತಾಡುವಿ ...

ನಮ್ಮಲ್ಲಿ ದೊರಕುವ ... ಔಷಧವನ್ನು ... ಕೊಡುವೆವು.

ವಿಳಾಸ— ... ಹುಬ್ಬಳ್ಳಿ

ವ್ರಣಸಂಹಾರ

ಅಥವಾ

ಗಾಯದ ಮೇಲಿನ ಮುಲಾಮು



ಈ ಮುಲಾಮು ಮನುಷ್ಯ ಮತ್ತು ದನದ ಪ್ರತಿಯೊಂದು ಗಾಯದ ಮೇಲೆ ಉಪಯೋಗವಾಗುತ್ತದೆ. ... ಪ್ರತಿಯೊಬ್ಬರೂ ಸಂಗ್ರಹಿಸಿರಬೇಕೆಂದು ... ಬಹಳ ಸುಲಭ ಇಟ್ಟಿದೆ. ಒಂದು ಡಬ್ಬಿಗೆ ... ಆಣೆ. ...

ಹುಬ್ಬಳ್ಳಿಯ ಏಜಂಟರು— ... ಮೆಡಿಕಲ್ ಸ್ಟೋರ್ಸ್— ... ಹುಬ್ಬಳ್ಳಿ, ... ದೊರೆಯುವದು. } ಎಸ್. ಎಫ್. ... ಬೆಳಗಾವಿ

ಜಗತ್ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ... ಅತ್ತರ, ... ಸುಗಂಧ ದ್ರವ್ಯಗಳು ಸುಲಭ ... ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಬ್ರಾಂಡ ... ಸುಗಂಧಾಧಿಕಾರಿ ಮೈಸೂರ

ವಿಜಯದ ವರ್ಗಣೀ ದರ

ವಾರ್ಷಿಕಕ್ಕೆ

೧೨ ತಿಂಗಳಿಗೆ	೧೨—೦—೦ ರೂ
೬ ,,	೬—೦—೦ ರೂ
೩ ,,	೪—೦—೦ ರೂ

ವಾರಪತ್ರಕ್ಕೆ ೧ ವರ್ಷಕ್ಕೆ ೬—೧೨—೦ ರೂ

ಏಜೆಂಟ ಮಾಹಿತಿ ಕಳಿಸಿದ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ತಿಂಗಳು ಕಾಲದ ಮತ್ತು ವರ್ಷಗಳಿಗೆ ಒಂದು ... ಪ್ರತಿಯೊಂದು ಸಾಲಿಗೆ ... ಆಣೆ ... ಕಾಲದ ಜಾಹೀರಾತುಗಳನ್ನು ಕಳಿಸುವವರು ... ವ್ಯವಸ್ಥಾಪಕರಿಗೆ ಬರೆಯಬಹುದು.

ಮ್ಯಾನೇಜರ ವಿಜಯ ಧಾರವಾಡ

ಒಕ್ಕಲುತನ ಮತ್ತು ಮಹಾತ್ಮರು-

ಲಾರ್ಡ ಆಯರ್ವಿನಸಾಹೇಬರ ಪ್ರಭುತ್ವದಲ್ಲಿ ದೇಗುಲೆಗಳಾಗಕೂಡಿದ ಒಕ್ಕಲುತನದ ರಾಯಲ ಕಮೀಶನ ಮತ್ತು ಒಕ್ಕಲುತನದ ಬೆಳವಣಿಗೆಯನ್ನು ಕುರಿತು ಮಹಾತ್ಮರ ಕೂಡ ಆಲೋಚನೆ ಮಾಡಿ, ಅವರ ಸಹಾನುಭೂತಿಯನ್ನು ದೊರಕಿಸಬೇಕೆಂದು ಸರಕಾರದ ಮನಸ್ಸಿನಲ್ಲಿ ಬಂದಿದೆ. ಇದೇ ವಿಷಯವಾಗಿ ಪ್ರಸ್ತಾಪ ಮಾಡಲು ಮಹಾತ್ಮರಿಗೆ ಸಹಾಯ ಮಾಡಬೇಕೆಂದು ಮುಂಬಯಿಯ [illegible] ವ್ಹರ್ನರ ಸಾಹೇಬರು ಮಹಾತ್ಮರಿಗೆ ಆಮಂತ್ರಣ ಕಳಿಸಿದ್ದಾರೆ. ಪ್ರಸ್ತಾಪವು ಮೇ ತಿಂಗಳಲ್ಲಿ ನಡೆಯುವದು. [illegible]ವರದಲ್ಲಿ [illegible] ಮ್ಯಾನಸಾಹೇಬರು [illegible]ಕೆ ಹೋಗಿ, ಮಹಾತ್ಮರ ಕೂಡ ಪೂರ್ವಾಲೋಚನೆ ಮಾಡುವರು.

ರಡ್ಡೀ ಸಮಾಜದ ಮಹಾಸಭೆ-

ಮುಂಬಯಿ ಇಲಾಖೆಯ ರಡ್ಡೀ ಸಮಾಜದ [illegible]ನೆಯ ಮಹಾಸಭೆಯು ಬೆಳಗಾವ ಜಿಲ್ಹೆಗೆ ಸೇರಿದ ಯರಗಟ್ಟಿ ಗ್ರಾಮದಲ್ಲಿ ಮೇ ತಿಂಗಳ [illegible] ಶನಿವಾರ ಮತ್ತು ಆದಿತ್ಯವಾರ ಈ ಎರಡು ದಿವಸ ಕೂಡುವದು. [illegible] ಅಧ್ಯಕ್ಷಸ್ಥಾನವನ್ನು [illegible] ಇವರು ಮೈಸೂರ ರಡ್ಡೀ ಸಂಘದ [illegible] ಸಂಘದ ಮೆಂಬರರೂ ಅಲ್ಲಿಯ [illegible] ಕರ್ನಾಟಕ [illegible] ಸಮಯದಲ್ಲಿ ರಡ್ಡೀ ಸಮಾಜದ ದ್ವಿತೀಯ [illegible] ಪರಿಷತ್ತು ಕೂಡುವದು. [illegible] ಶಿಕ್ಷಕರಾದ [illegible] ಬಿ. ಎ ಇವರು ಅಧ್ಯಕ್ಷಸ್ಥಾನವನ್ನು [illegible] ಯರಗಟ್ಟಿಯು ಧಾರವಾಡ, ಬೆಳಗಾವಿ [illegible] ಸವದತ್ತಿ [illegible] ಯಿಂದ ನಿತ್ಯ ಮೋಟಾರ ಸರ್ವೀಸ ಇದೆ.

ಸಭೆಯು ಹೆದರಿಕೆ ಹೋಗಿಲ್ಲ-

ಲಾರ್ಡ ರೀಡಿಂಗಸಾಹೇಬರು ಕಾಶ್ಮೀರ [illegible]ದ ಕವನ್ನಾಕುಮಾರಿಯು [illegible] ಆಂದೋಲನವನ್ನು ಅರಗಿಸ [illegible] ಅವರ ಸ್ತುತಿಯು ನಡೆಯಿತು. ಆದರೂ [illegible] ಪೋಲೀಸರಿಗೆ ಇದರ ಹೆದರಿಕೆಯು ಇನ್ನೂ ಹೋಗಿಲ್ಲ. ಕಾಶ್ಮೀರಿ ಸಾಮ್ರಾಜ್ಯದಲ್ಲಿ ಸ್ವರಾಜ್ಯ ಪಕ್ಷದ ದೊಡ್ಡ ಸಭೆಯು [illegible] ಕೂಡುವಂತೆ ಜಾಹೀರ ಪತ್ರಿಕೆಗಳು [illegible] ಸಾವಿರಾರು ಜನರು ವೇಳೆಗೆ ಸರಿಯಾಗಿ [illegible] ಬಂದರು. [illegible] ಸಭೆಯು ಪ್ರಾರಂಭದ ಕಾಲ, ಆಗ ಪೋಲೀಸರು ಸಾರ್ವಜನಿಕ ಶಾಂತತೆಯು ಭಂಗವಾಗುತ್ತದೆಂದು [illegible] ಯಿಂದಲೇ ಹೇಳಿ, ಸಭೆಯನ್ನು ಮುರಿದರು!!

[illegible] ಪೋಲೀಸರಿಗೆ ಬರಕಪ್ಪ-

ಮುಂಬಯಿಯಲ್ಲಿ [illegible] ಕಿಟಕಿಗಳ ಕಬ್ಬಿಣದ ಸಳಿಗಳನ್ನು [illegible] ಆದರೊಳಗಿಂದ ಹಾದು, ಕಾರಿಗೆ ಬುದ್ಧೀ [illegible]ದಲ್ಲಿ ಈತವಲಗಾರರ ತಪ್ಪಿರುತ್ತದೆಂದು ಪೋಲೀಸ [illegible] ವಿಚಾರಣೆ ನಿರ್ಧರಿಸಿ, ಒಬ್ಬ ಹವಾಲದಾರ ಮತ್ತು ಮೂವರು ಸಿಪಾಯರಿಗೆ ಬರಕಪ್ಪ ಮಾಡಿದ್ದಾರೆ ಈ ಮೂವರೂ ಸಶಸ್ತ್ರ ಖಾತೆಗೆ ಸೇರಿದವರು

ಅಧ್ಯಕ್ಷರು ಎಚ್ಚರದಪ್ಪಿದರು-

ಬಂಗಾಲದಲ್ಲಿ ಮೈಮನಸಿಂಗ ಜಿಲ್ಹೆಗೆ ಸೇರಿದ ಟಾಂಗೇಲಮೆಂಬಲ್ಲಿ ಜಿಲ್ಹಾ ಸಭೆಯು ಕೂಡಿತ್ತು ಅಧ್ಯಕ್ಷರಾದ ಕುಮಾರ ವಿಶ್ವಾಸರ ಮೆರವಣಿಗೆಯು ಮೂರು ಮೈಲಿನ ತನಕ ಆಯಿತು. ಇದೇ ಸಮಯದಲ್ಲಿ ಇವರು ಅಧ್ಯಕ್ಷ ಪದಾರೂಢರಾಗಿ ಭಾಷಣವನ್ನು ಓದಲಾರಂಭಿಸಿದರು. [illegible] ಓದುವದರೊಳಗಾಗಿ ಎಚ್ಚರದಪ್ಪಿ ಬಿದ್ದರು. ಡಾಕ್ಟರರು ಕೂಡಲೆ ಉಪಚಾರ ಮಾಡಿದರು. [illegible] ತಾಸುಗಳ ನಂತರ ಎಚ್ಚರಿಕೆ ಬಂತು.

ಪೆಶಾವರದಲ್ಲಿ ಬೊಲ್ಶೆವಿಕರ ಸುಳಿದಾಟ.

ಅಧಿಕಾರ ಪಕ್ಷೀಯರು ಸ್ಥಾಪಿಸಿದ ಸಂಸ್ಥೆಯ ವಿರುದ್ಧ ಪಕ್ಷದ ದಿವಾನ[illegible] ಯು. ಪಿ- [illegible]

ಘನ ಸದ್ಯದಲ್ಲಿ ಪಟ್ಟಣದ ನಾಯಕನಾಗಿದ್ದಾರೆ. ಕಾಂಗ್ರೆಸಿಗೆ ಎತ್ತನೋಡಿದತ್ತ ಕೃಷ್ಣನೇ ಕಂಡಂತೆ, ಈತನಿಗೆ ಎತ್ತನೋಡಿದತ್ತ ಪಟ್ಟಣದ ತುಂಬ ಬೊಲ್ಶೆವಿಕ ಭೂತವು ಕಾಣುತ್ತಿರುವದು. ಬೊಲ್ಶೆವಿಕರ ಮೂಲೋತ್ಪಾಟನ ಮಾಡಿದ ಹೊರತು ಜೀವದ ಸ್ವಸ್ಥತೆಯಾಗದೆಂದು ಈತನು ಠರಾವು ಮಾಡಿದ್ದಾನೆ.

ಮಹಾತ್ಮರಿಗೆ ಫಿನಲಂಡಕ್ಕೆ ಆಮಂತ್ರಣ-

ಯುರೋಪಕ್ಕೆ ಸೇರಿದ ಫಿನಲಂಡದ ವಿದ್ಯಾರ್ಥಿಗಳ ಸರ್ವರಾಷ್ಟ್ರೀಯ ಪರಿಷತ್ತು ಕೂಡುವದಿದೆ ಇದಕ್ಕಾಗಿ ಮಹಾತ್ಮರಿಗೆ ಆಮಂತ್ರಣ ಬಂದಿದೆ. "ನಾನು ನನ್ನ ಲಂಗೋಟಿ ಮತ್ತು ಪಂಜೆ ಬಿಡತಕ್ಕವನಲ್ಲ. ಅದೇ ಪ್ರಕಾರ ನನ್ನ ಊಟದಲ್ಲಿಯೂ ಬದಲಾಗಬಾರದು. ಭಾಷಣ ಮಾಡುವೆನೆಂದು [illegible] ಕೇಳಬಾರದು" ಎಂಬುದಾಗಿ ಉತ್ತರ ಬರೆದಿದ್ದಾರೆ. ಅಲ್ಲಿಗೆ ಹೋಗುವ [illegible] ತಿಂಗಳಲ್ಲಿ ಮಾಡ[illegible]

[illegible]

[illegible]

[illegible]

[illegible] ವೈಸರಾಯ [illegible] ಕಾಲದಲ್ಲಿ ಮುಖ್ಯ [illegible] ಸಿಪಾಯರು ಪ್ರಮುಖರಾಗಿದ್ದಾರೆ.

[illegible] ಮ್ಯಾಜಿಸ್ಟ್ರೇಟರಿಗೂ ಸಂವಾದ.

— ೦—

ಒಡವೂದ ಮತ್ತು ಮುಂಬಯಿಯಲ್ಲಿರಲಿಕ್ಕೆ ಅಯೋಗ್ಯನೆಂದು ಒಬ್ಬನನ್ನು ಪೋಲೀಸ ಕಮೀಶನರ ಸಾಹೇಬರು ಕಾಯದೆಯ ಪ್ರಕಾರ ಮುಂಬಯಿ ಬಿಟ್ಟು ಹೊರಗೆ ಹಾಕಿದ್ದರು. ಆತನು [illegible] ದಿವಸದಿಂದ ಪುನಃ ಮುಂಬಯಿಗೆ ಬಂದನು. ಆತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. [illegible] ನಡೆದ ಪ್ರಶ್ನೋತ್ತರಗಳು—

ಆರೋಪಿ- ನಾನು ಮರಳಿ ಮುಂಬಯಿಗೆ ಏಕೆ ಬರಬಾರದು? ನನಗೆ ಹೊಟ್ಟೆ ಇಲ್ಲವೇ?

ಮ್ಯಾಜಿ- ನೀನು ಬರಬಾರದೆಂದು ಕಾಯದೆಯಲ್ಲಿಲ್ಲ? ನನ್ನ ಉತ್ತರವಿಲ್ಲ.

ಆ- ಅದು ನ್ಯಾಯವಾದ ಕಾಯದೆಯೋ?

ಮ್ಯಾ- ನ್ಯಾಯವಿರಲಿ; ಅನ್ಯಾಯವಿರಲಿ; ಹಾಗೆ ಮಾಡ್ಯ [illegible]

ಆ- [illegible] ಕಾಯದೆಯನ್ನು ನೀವೇಕೆ ತಿರಸ್ಕರಿಸಬಾರದು?

ಮ್ಯಾ- ಅದು ನನ್ನ ಕೆಲಸವಲ್ಲ.

ಆ- ನಾನು ಸಜ್ಜನನಾಗಿದ್ದೇನೆ. ಮತ್ತು ಸಂಭಾವಿತತನದಿಂದ ಮುಂಬಯಿಯಲ್ಲಿ ಜೀವಿಸಬೇಕೆಂದಿದ್ದೇನೆ.

ಪೋಲೀಸರು- ಈತನಿಗೆ ಇಪ್ಪತ್ತು ಸಾರೆ ಶಿಕ್ಷೆ ಆಗಿದೆ.

ಮ್ಯಾ- ಆರೋಪಿಗೆ ಇದು ನಿಜವೇ?

ಆ- ಹೌದು [illegible] ನಾನು ಕೆಟ್ಟ ಮನುಷ್ಯನಿದ್ದೆನು. [illegible] ಸಂಭಾವಿತನಾಗಿದ್ದೇನೆ

ಮ್ಯಾ- ಬಹಳ ಸಂತೋಷ. ಆದರೂ ಕಾಯದೆ ಪ್ರಕಾರ ಠರಾವು ಕೊಡಬೇಕಾಗಿದೆ. ಒಂದು ವರ್ಷದ ಕೈದು ಸಜೆ.

ಪೈ[illegible] ಎರಡು ತಾಸುಗಳ ವರೆಗೆ [illegible] ವೃಷ್ಟಿಯಾಗಿ, ಗಿಡಗಳು ಸಾವಿರಾರು ಫಲಕನಸುಳು [illegible] ಕಿಟಕಿಗಳ ಕನ್ನಡಿಗಳು ಒಡೆದು, [illegible] ಸುಮಾರು [illegible] ರೂಪಾಯಿಗಳ ನಷ್ಟವಾಗಿರುತ್ತದೆ.

ಬಾಣಂತೀ ಗುಳಿಗೆಗಳು.

ವಯೋವೃದ್ಧರೂ ಅನುಭವಶಾಲಿಗಳೂ ಆದ ಸುಪ್ರಸಿದ್ಧ ವಿದ್ವಾನ್ ವೈದ್ಯ ವೈ. ವಾ. ವೇ. ಮೂ. [illegible]ಚಾರ್ಯ [illegible]ಅವರು ನಮಗೆ ಅನುಗ್ರಹಿಸಿದ ಈ ಔಷಧ ಮಾಡುವ ಕ್ರಮವನ್ನು ಕಲಿಸಿರುವರು. ವೈದ್ಯ ವಿಷಯದಲ್ಲಿ ಮುಖ್ಯವಾಗಿ ಈ ಬಾಣಂತಿ ಗುಳಿಗೆಗಳ ಬಗ್ಗೆ ಆಚಾರ್ಯರ ಕೀರ್ತಿಯು ೩೦-೪೦ ವರ್ಷಗಳಿಂದ ಸವಿಾಪದಲ್ಲಿ ಎಲ್ಲ ಕಡೆಗೂ ಹಬ್ಬಿರುವದು ಸವಿಾಪದವರಿಗೆ ಈ ಔಷಧದ ಉಪಯೋಗವಾಗುತ್ತದೆ [illegible] ನಮ್ಮ ಬಾಂಧವರಿಗೂ ಇದರ ಪ್ರಯೋಜನವಾಗಬೇಕೆಂದು ನಾವು ಇದನ್ನು ಪ್ರಸಿದ್ಧ ಪಡಿಸುತ್ತೇವೆ. ಈ ಗುಳಿಗೆಗಳ ಸೇವನದಿಂದ ಜ್ವರ, ಅರುಚಿ, [illegible] ಹೊಟ್ಟೆಯುಬ್ಬಿಸು, ಅತಿಸಾರ, ಕಫ, ಮಸ್ತಕ ಶೂಲೆ ಮುಂತಾದ ಬಾಣಂತಿಯರ ಎಲ್ಲ ರೋಗಗಳು [illegible] ಕ್ಷಯದ ಲಕ್ಷಣಗಳಿದ್ದರೂ ತಪ್ಪದೇ ಗುಣವಾಗುವವು. [illegible] ಬಾಣಂತಿ ರೋಗದ ಭಯವೇ ಇಲ್ಲ [illegible] ಈ ಔಷಧವನ್ನು ಸ್ಥಿರಚಿತ್ತದಿಂದ ಸೇವಿಸಬೇಕು. [illegible] ಅವಶ್ಯವಾದ ಈ ಔಷಧವನ್ನು ಸಂಗ್ರಹದಲ್ಲಿಡಲು ಶಕ್ಯವಿದ್ದಾಗ್ಯೆ ಅನುಪಾನ [illegible] ಔಷಧದೊಂದಿಗೆ [illegible] ಗುಳಿಗೆಗಳ [illegible] ೦-೦ [illegible]

[illegible]

ಡಾ. ಎಸ್. ಆರ್. ಶಿರಸ್ತ್ರ

[illegible]

ಜಾಹೀರಾತು.

[illegible]

ಇಂಡಿಯನ್ [illegible]

ಸೇವ್ಹಿಂಗ್ಸ್ ಬ್ಯಾಂಕು.

[illegible]

[illegible]

ನಮ್ಮ [illegible] ಮಾರ್ಚ ತಿಂಗಳ [illegible] ಬ್ಯಾಂಕಿನ ಸೇವಿಂಗ್ಸ ಬ್ಯಾಂಕ ಆಕೌಂಟಿನ ಬಡ್ಡಿಯು [illegible] ವರ್ಷಕ್ಕೆ (೩॥) ಮೂರೂವರೆ [illegible] ಸೇವ್ಹಿಂಗ್ಸ ಬ್ಯಾಂಕ ಡಿಪಾಜಿಟ ಅಕೌಂಟಿನ ಬಡ್ಡಿಯ ದರವನ್ನು [illegible] ಮೇ ತಿಂಗಳ [illegible] ವರ್ಷಕ್ಕೆ (೩॥) ಮೂರೂವರೆ [illegible] ತಿಳಿಯುವದು. [illegible]

ಎನ್. ಎಸ್. ಮುಕಡೇ.

ಟಿ. ಎಸ. ಮಸ್ಕಿಹಳ್ಳಿಕರ

(ಆಫೀಸರು)

ಮ್ಯಾನೇಜಿಂಗ ಡೈರೆಕ್ಟರರು

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು [illegible] ತಿಂಗಳು, [illegible] ಬಡ್ಡಿಯ ದರ [illegible] ತಿಂಗಳಿಗೆ [illegible] ಮತ್ತು ವರ್ಷಕ್ಕೆ ಆರು [illegible] ದೊರೆಯುವದು [illegible] ಗೊತ್ತು ಮಾಡಿಕೊಳ್ಳ[illegible] ಇಟ್ಟುಕೊಳ್ಳಲ್ಪಡುವದು. [illegible] ವ್ಯವಹಾರವು ಮಾಡಲ್ಪಡುವದು.

ಹೆಚ್ಚು ಠೇವು ತಿಳಿ[illegible] [illegible] ಆಗ್ಯಾ ಬಾಯೋಕಟ್ಟು ಶೇರದಾರ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮುಂಗಡ [illegible] ಧಾರವಾಡ.

[illegible]

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ [illegible]

[illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮತ್ತು [illegible] ಠೇವುಗಳಿಗೆ [illegible] ಬಡ್ಡಿ ದೊರೆಯುವದು.

[illegible] ಸಂಗತಿಗಳನ್ನು [illegible] ಮಾಡಿ [illegible] ತಿಳಿಕೊಳ್ಳಬೇಕು.

ಸುಬ್ಬರಾವ ದಿ. ಕಲಾಕ್ಷಿ

ಮ್ಯಾನೇಜಿಂಗ ಡಾಯರೆಕ್ಟರ

ಧಗವಂಡೆ.

೦—

[illegible] ವಾರ್ಲಿ ಎರಡು ದಿವಸ ಗೊಡ್ಡ [illegible] ಶ ಹೊಕ, ಬಂತುರ ಹನಿಗಳು ಉದರಿದ [illegible] ಈಗ ಹವೆಯು ಸ್ವಚ್ಛವಾಗಿ ಕಾಲನಾನ [illegible] ಬಿಸಿಲಿನ ತಾಪವುಂಟಾಗಿರುತ್ತದೆ

ಮೊನ್ನಿನ ದಿವಸ ಕಾಂಗ್ರೆಸ ಕಮಿಟಿಯು ಸಭೆಯಾಗಿ, ಬಳ್ಳಾರಿಯಲ್ಲಿ ಕೂಡುವ ಕರ್ನಾಟಕ ಪ್ರಾಂತಿಕ ಸಭೆಯ ಅಧ್ಯಕ್ಷಪದಕ್ಕಾಗಿ ಮದ್ರಾಸದ ಶ್ರೀ ಶ್ರೀನಿವಾಸ ಅಯ್ಯಂಗಾರರ ಹೆಸರು ಸರ್ವಾನುಮತದಿಂದ ಸೂಚಿಸಲ್ಪಟ್ಟಿತು.

ಶ್ರೀ ರಾಮನವಮಿಯ ಶುಭ ಮುಹೂರ್ತದಲ್ಲಿ ಹಳೇಹುಬ್ಬಳ್ಳಿಯಲ್ಲಿ ಒಂದು ಧರ್ಮಾರ್ಥ [illegible] ಔಷಧಾಲಯವು ಸ್ಥಾಪಿಸಲ್ಪಟ್ಟಿತು

ಹೊಸಹುಬ್ಬಳ್ಳಿಯಲ್ಲಿ ಮಿ ಇಂಡಿಯವರ ಮನೆಯಲ್ಲಿ ಒಂದು ಆಕಳಿಗೆ ಮೂರು ಕರುಗಳು ಹುಟ್ಟಿದವು ಒಂದು ಸತ್ತಿತು. ಉಳಿದವು ಚನ್ನಾಗಿವೆಯೆಂದು ಲೋಕಮತದಲ್ಲಿ ಬರೆದಿದೆ

ಮೊನ್ನಿನ ದಿವಸ ಬ್ಯಾಡಗಿ ಮ್ಯುನಿಸಿಪಾಲಿಟಿಯ ಜನರಲ ಕಮಿಟಿಯಾಗಿ ಮಿ. ಜೀವಣರಾವ ಶಾನಭೋಗರು ವ್ಯಾನೇಜಿಂಗ ಮತ್ತು ಮಿ. ತಿಮ್ಮಣ್ಣಾ ಶೆಟ್ಟಿಯವರು ಸ್ಕೂಲಬೋರ್ಡಿನ ಚೇರಮನ್ನರಾಗಿ ಆರಿಸಲ್ಪಟ್ಟರು. ತಾಲೂಕ ಮಾಮಲೇದಾರರು ಕಮಿಟಿಗೆ ಬಂದಿದ್ದರೂ, ಯಾವ ಪಕ್ಷಕ್ಕೂ ಹೋಟ ಕೊಡಲಿಲ್ಲೆಂದು ಒಬ್ಬ ಸುದ್ದಿದಾರರು ಬರೆಯುತ್ತಾರೆ.

ಇತ್ತಾಚೆ [illegible] ಸ್ಕೂಲ ಪಾಯನಲ ಪರೀಕ್ಷೆಗಾಗಿ ೭೪೭ ಅರ್ಜಿಗಳು ಬಂದಿದ್ದು ೫೫೧ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದರು.

ಟ್ರೇನಿಂಗ ಕಾಲೇಜ ಸ್ಕೂಲ ಫಾಯನಲ ಪರೀಕ್ಷೆಯ ಪರಿಣಾಮವು ಮೇ ತಿಂಗಳ ೧೦ ನೆಯ ತಾರೀಖಿನ ದಿವಸ ಆಗುವನೆಂದು ತಿಳಿಯುತ್ತದೆ

ಇಲ್ಲಿಯ ಕರ್ನಾಟಕ ಹಾಯಸ್ಕೂಲಿನ ಮೇಲೆ ಬಂದಿದ್ದ ಗೃಹಪೀಡೆ ಗೃಹಪೀಡೆಗಳು ದೂರಾದವು. ಆರು ವರ್ಷ ವಿಟು ಇಂತೆತ್ತಗಳ್ನನ್ನುವ ದಕ್ಕೆ ಮೆ. ದಾಯಿಕೆರ ಸಾಹೇಬರು ಹುಕುಮು ಕಳಿಸಿದ್ದಾರೆ. ಕೋರ್ಟಿನಲ್ಲಿ ನಡೆದ ದಾವೆಯು ಖರ್ಚು ಸಹಿತ ರದ್ದಾಯಿತು. ರಾ. ಬ. ಗೋವಿಂದರಾಯರು ಈಗಿನ ಕಟ್ಟಡವನ್ನು ಶಾಲೆಗಾಗಿಯೇ ಒಂದರು ಶಾಲೆಯು ಊರ್ಜಿತಯನ್ನು ಹೊಂದಲೆಂದು ಹಾರೈಸುತ್ತೇವೆ.

ವಿನೋದ ಲಹರಿ.

ಸ್ತ್ರೀ- ನಾನು ಹತ್ತಗಿನ ಆಕಳು ನೋಡಲಿಲ್ಲ.

ಉ- ಎಂದೂ ನೋಡುವದು ತಕ್ಕದಲ್ಲ

